BROWN BOOK

TIGHT BINDING

UNIVERSAL
LIBRARY
OU_200076
UNIVERSAL
LIBRARY

**OSMANIA UNIVERSITY LIBRARY**

Call No. K83/K96K Accession No. K4319

Author ಕುಪ್ಪಾರ ವಂಕಣ್ಣ

Title ಕಲ್ಯಾಣಿ 1953

This book should be returned on or before the date last marked below.

# ಒಂದು ಮಾತು

ಕನ್ನಡ ಚಿತ್ರ ಪ್ರಪಂಚಕ್ಕೆ ಕಾಲಿಟ್ಟ ಕಲ್ಯಾಣಿಯ ಕಥೆ ಇದು. ಅವಳು ನಾಟ್ಯ ಸರಸ್ವತಿಯಾಗಿದ್ದ ಕಥೆ ಒಂದು ಬರೆದಿದ್ದೆ. ಅದು ಅವಳು ಕಲಾವಿದೆಯಾದ ವಿಚಾರ.

ಕಲಾರಂಗಕ್ಕೆ ಇಳಿದ ಅವಳು ಚಿತ್ರರಂಗದಲ್ಲಿ 'ಕಲಾವಂತೆ'ಯಾಗುವ ಕಥೆ ಇಲ್ಲಿದೆ.

ಇಲ್ಲಿ ಕನ್ನಡ ಚಿತ್ರರಂಗದ ವಿಚಾರವಿದೆ. ಚಿತ್ರ ತಯಾರಕರ ಅಶಕ್ತಿ ಚಿತ್ರಿತವಾಗಿದೆ. ನಮ್ಮ ಚಿತ್ರ ತಯಾರಕರು ಇಲ್ಲಿನ ತಯಾರಕರಲ್ಲಿ ಕಾಣುವ ಗುಣ ಪಡೆದಿರಬಾರದೆಂಬ ಬಯಕೆಯಿಂದ ಬರೆದಿದ್ದೇನೆ. ಹಾಗೆ ಬರೆಯುವಾಗ ಯಾವ ವ್ಯಕ್ತಿಯನ್ನು ಮುಂದಿರಿಸಿಕೊಂಡು ಬರೆದಿಲ್ಲ. ಆದರೂ ಆ ವ್ಯಕ್ತಿಯ ಚಿತ್ರಣ ನನ್ನನ್ನೇ ಹೋಲುತ್ತದೆ ಎಂದು ಯಾರಾದರೂ ಹೇಳಬಹುದು. ಹಾಗೆಂದುಕೊಂಡರೆ ಅದು ನನ್ನ ತಪ್ಪಲ್ಲ; ನನ್ನ ಕಾದಂಬರಿ ವಾಸ್ತವತೆಗೆ ಹತ್ತಿರವಾಗಿರುವದರ ಪ್ರತೀಕ.

ಒಂದು ವರ್ಷದಲ್ಲಿ ಇಷ್ಟೆಲ್ಲ ನಡೆದೀತೇ ಎಂದು ದಯವಿಟ್ಟು ಕೇಳಬೇಡಿರಿ. ಮೂರೇ ತಿಂಗಳಲ್ಲಿ ಹೀಗಾದ ಉದಾಹರಣೆ ಚಿತ್ರರಂಗದಲ್ಲಿ ಸಿಗುತ್ತದೆ. ಅದು ನಮ್ಮ "ದುರದೃಷ್ಟ"ವಿರಬಹುದೇನೊ? ಹೀಗಾಗಬಾರದು, ಹೀಗಾಗದಿರಲಿ ಎಂಬ ಬಯಕೆ ನನ್ನದು. ಚಿತ್ರರಂಗದಲ್ಲಿ ಹಗಲಿನಲ್ಲೇ ರಾತ್ರಿಯ ದೃಶ್ಯವೆತ್ತುವದಿದೆ. ಅದು ಪವಾಡದೆಡೆ; ವಿಚಿತ್ರ ವಿಶ್ವ. ಇಲ್ಲಿ ಕಾಮ ಪ್ರೇಮವಾಗುತ್ತದೆ; ಚಪಲ ಫ್ಯಾಶನ್ ಆಗುತ್ತದೆ. ಈ ಪರಿಸ್ಥಿತಿ ಎಲ್ಲೆಡೆಗೂ ಇದೆ. ಅದು ಅಳಿಯಲಿ; ಕಲಾಸೇವಾ ದೃಷ್ಟಿಯಿಂದ ದುಡಿಯಲೆಂದು ಬಂದ, ಇನ್ನೂ ಬರಲೆಳಸುವ ತಂಗಿಯರೆಲ್ಲ ನಾಡಿಗೆ ಕೀರ್ತಿ ತರುವಂತಾಗಲಿ ಎಂಬ ಬಯಕೆ ನನ್ನದು.

ಚಿತ್ರ ತಯಾರಿ, ಹಂಚಿಕೆ, ಪ್ರದರ್ಶನ – ಈ ಮೂರು ಹಂತಗಳ ಪರಿಪೂರ್ಣ ಪರಿಚಯ ಮಾಡಿಕೊಳ್ಳುವ ಅವಕಾಶ ನನಗಾಗಿದೆ. ೨೦ ವರ್ಷಗಳ

ಹಿಂದೆ ಹೇಗೆ ಚಿತ್ರ ತಯಾರಿಸುತ್ತಿದ್ದರು ಎಂಬುದನ್ನು ಇಂದಿನ ಚಿತ್ರವೆತ್ತ್ತವಿಕೆಯನ್ನು ನೋಡಿದ್ದೇನೆ. ಎಂತಲೇ ವಾಸ್ತವತೆಗೆ ಕಾದಂಬರಿ ಹತ್ತಿರವಿರಬಹುದು.

ಎಂದಿನಂತೆ ಗೆಳೆಯರೆಲ್ಲರ ಒತ್ತಾಯ, ಅಭಿಮಾನ, ಪ್ರೇಮ ಈ ಕೃತಿಯ ರಚನೆಗೆ ಕಾರಣವಾಗಿದೆ.

ಅವರೆಲ್ಲರಿಗೂ – ನನ್ನ ವಂದನೆ ಸಲ್ಲಬೇಕು.

೧೫, ಡಿಸೆಂಬರ್ ೧೯೫೩.
" ಅನ್ನಪೂರ್ಣ "
ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ.

**ಕುಮಾರ ವೆಂಕಣ್ಣ**

ಮಾವ ಸ. ನರ್ಸಪ್ಪಯ್ಯ

ಅತ್ತೆ – ' ಬಾಬಿ '

ಇವರ ಅಡಿಗಳಲ್ಲಿ

## ಲೇಖಕರ ಇತರ ಕೆಲ ಕೃತಿಗಳು

ಹರಿದ ಗೆಜ್ಜೆ.

ಬೀದಿಯ ದೀಪ.

ಮಾಯಾ.

ಧರ್ಮ ಚಕ್ರ.

ಭಾರತದ ಜಾನಪದ ನೃತ್ಯಗಳು.

ಹೃದಯ ಗೀತೆ.

# ಕಲ್ಯಾಣಿ

# ೧

"ಮಗೂ...."

ಎಂದೋ ಕೇಳಿದ ಕೂಗು ಇಂದು ಪುನಃ ಕಿವಿಗೆ ಬಿತ್ತು. ಯಾರು ಯಾಕೆ ಕೂಗಬೇಕು? ಇದಕ್ಕೆ ಇಲ್ಲಿ ಆಸ್ಪದವೆಲ್ಲಿ? ಆ ನಲ್ಮೆ ನೇಹದ ಸ್ವರ ಗುಂಗಾಡದ ಪ್ರಪಂಚವಿದು. ಆ ಕೂಗನ್ನು ಕೂಗಿ ನಲಿಯಬೇಕೆಂದು ಬಯಸುವ ಹೃದಯದ ಹೆಣ್ಣುಗಳಿಲ್ಲ. ಅಂತಹ ಬಯಕೆಯ ತಂದೆ ತಾಯಿಯರು ಕಾಲಿಡುವ ಎಡೆಯೂ ಇದಲ್ಲ. ಆ ಮಾತೃಹೃದಯ ವೀಣೆಯ ಪವಿತ್ರ ಗಾನವನ್ನು ಕೇಳದೆ ಎಷ್ಟೋ ಕಾಲ ಕಳೆದವರ ರಾಜ್ಯವಿದು. ಆದರಲ್ಲೂ ತಾನೆಂದೂ ಅಂತಹ ಭಾವನೆಯನ್ನು ಯಾರಲ್ಲೂ ಹುಟ್ಟಿಸಿದ ನೆನಪು ಅವಳಿಗಿಲ್ಲ; ಆ ಲೋಕದಲ್ಲಿ ಅದು ಸಾಧ್ಯವೂ ಇರಲಿಲ್ಲ. ಪ್ರತಿಯೊಂದು ನೋಟವೂ ಹಿರಿತನವೊಂದನ್ನುಳಿದು ಮತ್ತೆಲ್ಲ ತನ್ನತನಗಳನ್ನು ತೋರಿ ಅವಳೆಡೆ ಹಾದು ಬಂದಿದೆ, ಕಾದು ನೊಂದಿದೆ.

ಈ "ಮಗೂ" ಎಂಬ ಕೂಗು ಎಲ್ಲಿಂದ ಬಂತು?

ಪಕ್ಕದ ಮನೆಯಿಂದ ಬಂದ ಕೂಗಿದಲ್ಲ; ಅಷ್ಟು ಹತ್ತಿರದಲ್ಲಿ ಮತ್ತಾವ ಮನೆಯೂ ಇಲ್ಲ. ದೂರದ ಕೂಗೂ ಇದಲ್ಲ. ಹತ್ತಿರದಲ್ಲಿ, ತನ್ನ ಹಿಂದೆಯೇ ನಿಂತು, ಯಾರೋ ಬಿರಿದ ಹೃದಯದಿಂದ ತೆರೆದ ಮನದಿಂದ ಬಯಕೆಯ

ಬಾಯಿತೆರೆದು ಕೂಗಿದ ಕೂಗು. ಅಷ್ಟು ಸರಳವಾಗಿ ಸಪುರವಾಗಿ ತೀವ್ರ ವಾಗಿ ಅದು ಅವಳೆಡೆ ಸರಿದು ಬಂತು; ಹೃದಯುವನ್ನು ನಾಟಿತು.

ಭವ್ಯವಾದ ಈ ಪ್ರಪಂಚಕ್ಕೆ ಕಾಲಿಟ್ಟ ಕಲ್ಯಾಣಿ ತನ್ನ ಜೀವನದ ಅತ್ಯಂತ ವೈಭವದ ದಿನಗಳನ್ನು ಕಾಣುತಿದ್ದಾಳೆ. ಅವಳ ಇಂದಿನ ಜೀವನ ದಲ್ಲಿ ಅವಳನ್ನು 'ಮಗೂ' ಎಂದು ಕೂಗುವವರೂ, ಕೂಗಿಸಿಕೊಳ್ಳುವವರೂ ಅಡ್ಡಗಲ್ಲುಗಳೇ. ವಿಹಾರ ವಿನೋದಗಳ ಈ ಜೀವನದಲ್ಲಿ ಅವಳ ಮುಂದೆ ದಿನ ಬೆಳಗಾದರೆ ಜೀಯು, ಹಸಾದ, ಬಿನ್ನಪ ಎಂದು ಬಾಗಿ ನಿಲ್ಲುವವರೇ ಬಹಳ ಮಂದಿ. ಅವಳ ಸುಖ, ಆ ಮುಗುಳುನಗೆ, ಆನಂದಗಳೆಲ್ಲ ತಮ್ಮ ಜೀವನದ ತಿಂಗಳೆಂದು ತಿಳಿದವರಿರುವಾಗ ಅವಳೇಕೆ ಕರಗಬೇಕು–ಕೊರಗಬೇಕು.

ದಿನದ ಬೇಸರ, ಬೆವರಿಳಿಸಿದ ದುಡಿಮೆಯ ಆಯಾಸ ಪರಿಹರಿಸಲೆಂದು ದಾರಿ ಹುಡುಕುವ ಮಹಾಜನತೆ ಎರಡು ತಾಸುಗಳ ಕಾಲ ಯಾವುದೋ ಲೋಕದಲ್ಲಿ ವಿಹರಿಸಿ ತಮ್ಮನ್ನು ತಾವು ಮರೆಯಲು ಸಾಧನವಾದ ಚಿತ್ರ ರಂಗದ, ಅನಭಿಷಿಕ್ತ ಮಹಾರಾಣಿ ಆಕೆ! ದಿನಗಳನ್ನು ಹೇಗೆ ಕಳೆಯು ತಿದ್ದೇನೆ; ಅದೆಷ್ಟು ಬೇಗ ಅದು ಉರುಳುತ್ತಿದೆ ಎಂಬುದರ ಅರಿವೇ ಇಲ್ಲದೆ ಆಗಲೇ ವರ್ಷ ಕಳೆದಿದ್ದಾಳೆ ನೃತ್ಯದೇವತೆ ಕಲ್ಯಾಣಿ. ಇಂದು ಅವಳದು ಸ್ವರ್ಗಜೀವನ; ನಂದನವನದ ಪಾರಿಜಾತದಂತಹ ಪ್ರಭಾವ; ಪುರುಷ ದೆದುರು ತಾವು ಕಬ್ಬಿಣವೆಂದು ಭಾವಿಸಿ ನಿಂತವರ ನಡುವೆ ನಿಂತ ಚಕ್ರೇಶ್ವರಿ!

ಅವಳ ಬೆಳಗಿನ ಸೂರ್ಯ ಮಾನವ. ಮುಂಜಾವದ ಹುಂಜ, ಕಂಚುಕಿ, ಮಂತ್ರಿ, ದಾಸಿ, ತೊತ್ತು, ಎಲ್ಲರೂ ಅವಳಿಗಿಂತ ಅಧಿಕ ಸ್ಥಾನ ಮಾನಗಳನ್ನು ಗಳಿಸಿ ನಿಂದವರು. ಹೊನ್ನಿನ ದಾಸರಾಗಿ ಬಂದು ಹೆಣ್ಣಿನ ದಾಸರಾಗಿ ನಿಂದವರು. ತಾನು ಸಾಮಾನ್ಯಳಲ್ಲ, ತನ್ನ ಶಕ್ತಿ ಅಪಾರ, ಪ್ರಭಾವ ಅಸಮಾನ, ಸೌಂದರ್ಯ ಅಲೌಕಿಕವೆಂಬ ಭಾವ ಅವಳಲ್ಲಿ ಮೂಡಿತ್ತು. ತನ್ನನ್ನೇ ತಾನೆಷ್ಟು ಬಾರಿ ನೋಡಿಕೊಂಡರೂ ಕಲ್ಯಾಣಿಗೆ ಇಂದು ತೃಪ್ತಿ ಇಲ್ಲ. ಎಷ್ಟು ಸಿಂಗರಿಸಿಕೊಂಡರೂ ಸಾಲದು. ಎಷ್ಟು ಹರ್ಷಿತಳಾಗಿ ತೃಪ್ತಳಾಗಿ ನರ್ತಿಸಿದರೂ ಕಡಿಮೆಯೇ.

ಇನ್ನೂ ಕಲ್ಯಾಣಿಯ ದಿನದ ಉದಯವಾಗಿಲ್ಲ. ಎಂಟು ತಾಸಾಗಿತ್ತು ಅವಳು ಹಾಸಿಗೆ ಬಿಟ್ಟಿದ್ದಾಗ. ರಾತ್ರಿ ಅದೆಷ್ಟು ಹೊತ್ತು ತನ್ನ ಪ್ರಭಾವದ ಬಗೆಗೇ ಯೋಚಿಸುತ್ತ ಹಾಸಿಗೆ ಮೇಲೇ ಉರುಳಾಡುತಿದ್ದಳೋ? ಆ ಚಿತ್ರದ ಸಂಸ್ಥೆಯ ಪದ್ಮನಾಭ–ರಾತ್ರಿ ಎಷ್ಟು ಹೊತ್ತು ಅವಳ ಕೋಣೆಯಲ್ಲೇ ಕುಳಿತುಕೊಂಡು, ದೇಶಾವರದ ಮುಗುಳುನಗೆ ನಗುತ್ತ, ಅವಳನ್ನು ಹೊಗಳುತ್ತ, ಅವಳ ಅಂಗಾಂಗಳನ್ನು ನೋಡುವುದರಲ್ಲೇ ಕಾಲ ಕಳೆಯುತ್ತ ಇದ್ದನೋ ಅವಳಿಗೂ ತಿಳಿಯದು. ಎಂದಿನಂತೆ ಅಂದೂ ಕಲ್ಯಾಣಿಗೆ ನಿದ್ದೆ ಹತ್ತಿದ ಬಳಿಕ, ಅವಳ ಮಾತು, ಹ್ಞೂ....ಗುಟ್ಟುವಿಕೆ ಮಾಯವಾದ ನಂತರ ಅವನು ಹೋಗಿರಬಹುದು. ಬೀ೦, ಅದುವರೆಗೂ ಕಾದು ಕುಳಿತಿದ್ದು ಆತ ಹೊರಟುಹೋದ ಬಳಿಕ ಅಗಳಿ ಹಾಕಿ ಮಲಗಿರಬಹುದು.

ಕಾಫಿ ತೀರಿಸಿ, ತನ್ನ ಕೋಣೆಗೆ ಹಿಂತಿರುಗಿ ನಿಲುವುಗನ್ನಡಿಯ ಮುಂದೆ ನಿಂತುಕೊಂಡಳು ಕಲ್ಯಾಣಿ!

ಸಾವಿರಾರು ಕಣ್ಣುಗಳನ್ನು ತನ್ನೆಡೆ ಸೆಳೆದು, ನೂರಾರು ಹೃದಯಗಳಲ್ಲಿ ಅಸೂಯೆ, ಆಶೆ, ಆಗ್ರಹಗಳನ್ನು ಮೂಡಿಸಿದ ತನ್ನ ದೇಹದ ಮಾಟ, ಮುಖದ ಅಂದ, ಕಣ್ಣುಗಳ ಹೊಳಪನ್ನು ತಾನೇ ನೋಡಿಕೊಂಡು ಆತ್ಮಾನಂದದಿಂದ ಉಬ್ಬಿ ನಿಂತ ಕಲ್ಯಾಣಿಗೆ ಅಲಂಕಾರದ ನೆನಪೂ ದೂರವಾಯಿತು. ಬಿಡುವಿಲ್ಲದೆ ತಿರುಗುತಿದ್ದ, ಪಕ್ಕದಲ್ಲೇ ಇದ್ದ, ಫ್ಯಾನ್ ಅವಳ ಸೆರಗನ್ನು ಹಾರಿಸಿತು. ನೆರಿಯನ್ನು ಸರಿಸಿತು. ಸ್ವತಂತ್ರವಾಗಿ ಹಾರಾಡುತ್ತಿದ್ದ ಕೇಶರಾಶಿಯನ್ನು ಕುಣಿಸಿತು. ಉಬ್ಬಿದ ಎದೆ ಅವಳ ಹೆಮ್ಮೆ ಹೆಚ್ಚಿಸಿತು. ತುಂಬಿದ ಓರಣವಾದ ಸ್ತನಗಳು, ಚಿತ್ರಪ್ರಪಂಚದ ಬರಡೆದೆಯ ಸುಂದರಿಯರಿಗಿಂತ ನಾನೇ ಮೇಲು ಎಂಬ ಭಾವ ಅವಳಲ್ಲಿ ಮೂಡಿಸಿತು. ಕಲ್ಯಾಣಿ ಕನ್ನಡಿಯನ್ನೇ ನೋಡುತ್ತಿದ್ದಳು.

ತನ್ನನ್ನು ತಾನೇ ನೋಡದೆ ಬಹಳ ಕಾಲವಾಗಿದ್ದಂತೆ, ತನ್ನ ಸೌಂದರ್ಯಕ್ಕೆ ತಾನೇ ಶರಣಾದಂತೆ, ಅವಳು ಮೈಮರೆತು ನಿಂತಿದ್ದಳು. ಸಾವಿರ ಯೋಚನೆಗಳು ಅವಳ ಮನದಲ್ಲಿ ಮೂಡಿ ಮರೆಯಾದುವು. ತನ್ನ ಹಿಂದೆ ಸುಳಿವ ಮುಂದೆ ಸರಿವ ಅಸಂಖ್ಯಾತ ಪುರುಷರ ಹೃದಯ ಸೆಳೆದ ಸೂಜಿಕಲ್ಲನ್ನು ಅವಳು ಕಂಡುಕೊಂಡಳು. ತಾನೇ ತನ್ನನ್ನು ನೋಡಲಾರೆ;

ತನ್ನನ್ನು ನೋಡಿ ಬಯಕೆಯ ಬೇಡಿಗೆ ಬಲಿಯಾಗುವ ಸಾವಿರ ಕಣ್ಣು ಗಳಿವೇ ಪುಣ್ಯ. ಅಂಗೈ ನೋಡಿಕೊಳ್ಳುವಂತೆ ತನ್ನನ್ನೇ ತನ್ನ ಸೌಂದರ್ಯ ವನ್ನೇ ತಾನು ನೋಡಿಕೊಳ್ಳುವಂತಿದ್ದರೆ ಅದೆಷ್ಟು ಆನಂದವಾಗುತ್ತಿತ್ತೆಂದು ಅವಳು ಬಯಸಿದಳು.

ಕಲ್ಯಾಣಿ ಕನ್ನಡಿಯ ಮುಂದೆ ಮೈಮರೆತು ನಿಂತಿದ್ದಳು.

ಎಂಥ ಸುಂದರ ರೂಪ.

ಇದನ್ನು ಹೆತ್ತ ತಾಯಿ? ಅವಳ ಸೌಂದರ್ಯ? ಸೃಜಿಸಿದ ಬ್ರಹ್ಮ! ಕಾರಣರಾದ ತಂದೆ....!

ಇವರೆಲ್ಲರ ಪುಣ್ಯವಿಶೇಷದ ಪ್ರತೀಕ ಈ ಭವದ ರತಿ; ಎಲ್ಲರ ಸೌಂದ ರ್ಯದ ರಸಘಟ್ಟ; ಪುಣ್ಯದ ಕೃಷಿ!

ತಂದೆ........

ತಂದೆಯ ಕಡೆಗೆ ದೃಷ್ಟಿ ಹೊರಳಿಸಿ, ಅವನ ಕೈಯಲ್ಲಾಡಿ, ತೊಡೆಯ ಮೇಲೆ ಕುಳಿತು, ಮೂಗು ಮುಖ ಪರಚಿ, ಮೀಸೆ ಹಿಡಿದೆಳೆಯುವ ಭಾಗ್ಯವೂ ಕಲ್ಯಾಣಿಗೆ ದೊರೆಯಲಿಲ್ಲ. ಆ ಮೀಸೆಯ ಮುಖ, ಕುಡಿಗಡ್ಡದ ಗಲ್ಲ, ತನ್ನ ಹಾಲುಗಲ್ಲಕ್ಕೆ ತಗುಲಿದ ನೆನಪೇ ಅವಳಿಗಿಲ್ಲ. ಅಪ್ಪ........ ಅಪ್ಪ........ಎಂದು ತಾನು ಅಂಬೆಗಾಲಿಡುತ್ತ, ಏಳುತ್ತ-ಬೀಳುತ್ತ ನಡೆದ ಅರಿವೂ ಇಲ್ಲ. ಆ ಸುಖ ದೊರೆಯಲಿಲ್ಲ.

ಆದರೂ ಅದು ದೊರೆಯಿತು.

ಆಡಿದ ಆಟ, ಅತ್ತ ಅಳು, ಮಾಡಿದ ಗೊಂದಲಗಳ ನೆನಪೇ ಇರ ಲಾರದ ಎಳೆತನದಲ್ಲಲ್ಲ. ಅದನ್ನು ತಿಳಿದುಕೊಳ್ಳುವ ಕಾಲಕ್ಕೆ; ನೆನಪಿನ ಪಟಲದಿಂದ ಮರೆಯಾಗದ ಕಾಲಕ್ಕೆ ಆ ಸುಖ ಬಂತು. ತಂದೆಗಿಂತಲೂ ಹೆಚ್ಚಾಗಿ, ತನ್ನ ಜೀವನದ ಪ್ರತಿಬಿಂಬ, ಬಾಳಬೆಳಕು, ಕಣ್ಮಣಿ ಎಂದು ಸಾಕಿ ಸಲಹಿದ ತಂದೆ ಅವಳಿಗೆ ದೊರೆತ.

ತನ್ನ ಸರ್ವಸ್ವವೂ ಅವಳೇ ಎಂದು ನಂಬಿದ; ಸರ್ವಸ್ವವನ್ನೂ ಧಾರೆ ಎರೆದ.

ತಾನು ನಾಟ್ಯಾಚಾರ್ಯನಾದುದಕ್ಕೆ ಸಾರ್ಥಕವಾಯಿತು; ನಾಟ್ಯ ಸರಸ್ವತಿಯನ್ನೇ ನಾಡಿಗೆ ನೀಡಿದ್ದೇನೆ; ಇಂದಿಗೆ ನೃತ್ಯಕಲೆ ಪೂರ್ಣ ವೈ

ತಾಳಿ ನಾಡಿನ ರಂಗಭೂಮಿಯ ಮೇಲೆ ಶೋಭಿಸುವಂತಾಯಿತು-ಎಂದು ಆತ ತೃಪ್ತನಾದ; ಹರ್ಷಿತನಾದ!

ಗುರುದೇವ ತನಗೆ ತಂದೆಯಾದ, ತಾಯಿಯಾದ, ಅಣ್ಣ-ತಮ್ಮ-ಅಕ್ಕತಂಗಿಯಾದ. ಜೀವನದಲ್ಲಿ ಬೇಕಾದ ಎಲ್ಲ ಬೇಕುಗಳನ್ನೂ ನೀಡಿದ, ಸುಖವನ್ನಿತ್ತ, ಕೀರ್ತಿಯ ಕಿರೀಟವನ್ನು ಅರ್ಪಿಸಿದ. ಆದರೆ....

ಹೆಣ್ಣು ಬಯಸುವ ಒಂದು ಸುಖವನ್ನು ಕೊಡಲು ಮಾತ್ರ ಆ ತಂದೆ-ಆ ದೇವರು-ಆ ಗುರು ಅಸಮರ್ಥನಾದ.

ಭೂಮಿಯಲ್ಲಿ ಅವಳು ಕಾಣಬಹುದಾದ, ಹೆಣ್ತನ ಕಾಯ್ದುಕೊಳ್ಳ ಬಹುದಾದ, ತಾಯ್ತನ ಕಾಣುವ ಕನಸಲ್ಲಿ ವಿಹರಿಸಲು ಸಾಧನವಾದ, ಸುಖ ವನ್ನೀಯಲು ಅವನಿಗೆ ಶಕ್ತಿ ಇಲ್ಲ.

ಕಲ್ಯಾಣಿ ಆ ಸುಖದ ದಾರಿ ತುಳಿದಳು. ಅದನ್ನೀಯಲು ಬಂದವನ ಬೆನ್ನು ಹಿಡಿದು, ಹೊಸಲೋಕದ ಹರುಷ ಉಳಿಸಿಕೊಳ್ಳಲು, ಈ ನವೀನ ಪ್ರಪಂಚಕ್ಕೆ ಕಾಲಿಟ್ಟಳು. ಅವೆಲ್ಲ ಹಳೆಯ ಕತೆ....

ಆದರೂ....

ಎಷ್ಟು ಗಟ್ಟಿ ಮನಸು ಮಾಡಿಕೊಂಡರೂ ಕಲ್ಯಾಣಿಗೆ ಹಳೆಯ ನೆನ ಪನ್ನು ಮರೆತುಬಿಡುವುದು ಸಾಧ್ಯವಾಗುತ್ತಿರಲಿಲ್ಲ ಹಲವಾರು ದಿನಗಳ ಕಾಲ ಅದೆಲ್ಲವನ್ನು ಮರೆಯಲು ಅವಳು ಯತ್ನಿಸಿ ವಿಜಯಿಯಾಗಿದ್ದಾಳೆ. ಆದರೆ-ಆ ಬಳಿಕ ಆ ನೆನಪು ಮರುಕಳಿಸಿತೆಂದರೆ ಸಾವಿರ ಬಾಣಗಳು ಮೈ ಮೇಲೇರಿ ಬಂದಂತೆ ಹಿಂತಿರುಗಿ ಸೇಡು ತೀರಿಸಿಕೊಳ್ಳುತ್ತಿತ್ತು. ಹಳೆಯ ಬಾಳಿನ ನೆನಪನ್ನು ಮರೆಯಲೆಂದು ಸಾವಿರ ದಾರಿ ಹಿಡಿದಿದ್ದಾಳೆ; ಬಿಡು ವಿಲ್ಲದೆ ದುಡಿದಿದ್ದಾಳೆ; ಮೈ ಮರೆಯುವ ದಾರಿ ಹಿಡಿದಿದ್ದಾಳೆ. ಆದರೂ ಸೋತಿದ್ದಾಳೆ.

ತನ್ನ ಜೀವನದ ಸರ್ವಸ್ವವೆಂದು, ಬಾಳ ಉಸಿರೆಂದು ತನ್ನನ್ನು ತಿಳಿದ ಮಾಸ್ತರರ ನೆನಪು ಬೇಡ ಬೇಡವೆಂದರೂ ಬಂದು ಅವಳನ್ನು ಹಿಂಸಿಸುತ್ತಿತ್ತು.

ತನ್ನ ಸೌಂದರ್ಯದಲ್ಲೇ ಮೈ ಮರೆತಿದ್ದ ಅವಳಿಗೆ ಹಳೆಯ ಕತೆ ಹೊಸದಾಯಿತು.

ಅಲಂಕಾರ ಮಾಡಿಕೊಳ್ಳಬೇಕು, ಬೆಳಗಾಗಿ ಎಷ್ಟೋ ಕಾಲವಾಗಿದೆ, ತನ್ನ ಸಂತಸದಲ್ಲಿ ತಮ್ಮ ದುಃಖ ಮರೆಯುಲೆಳಸುವವರು ಬರುವ ವೇಳೆ ಯಾಯಿತು ಎಂಬುದೂ ಅವಳಿಗೆ ಅರಿವಾಗಲಿಲ್ಲ.

ಹಳೆಯ-ಹೊಸ ಬಾಳಿನ ತುಲನೆ ನಡೆಸುತ್ತಿದ್ದಂತೆ, ಆ ಎರಡು ಮುಖ, ಎರಡು ಸುಖ, ಎರಡು ಸೌಂದರ್ಯಗಳ ಚಿತ್ರ ಕಣ್ಣ ಮುಂದೆ ನಿಲ್ಲುತಿತ್ತು. ಎಂದೂ ಇಲ್ಲದ ಕಾಡುಚಿಂತೆ ಅವಳ ಮನಸ್ಸನ್ನು ಹಿಂಡಿತ್ತು. ಗುರುವಿನ ನೆನಪು-ಅಂದಿನ ಅರಿವು, ತಾಯಿಯ ಕತೆ, ನೃತ್ಯದೇವತೆಯಾಗಿ ಮೆರೆದ ಸುದಿನಗಳ ಚಿತ್ರ ಅವಳನ್ನು ಕೂಗಿ ಕರೆಯುತಿತ್ತು.

ಕಲ್ಯಾಣಿಯ ಹೃದಯ ಹರಿದಿತ್ತು, ಮನ ಮುದುಡಿತ್ತು, ಮೈ ಕಂಪಿಸುತ್ತಿತ್ತು. ಆಗ ಬಂತು ಈ ಕೂಗು....

"ಮಗೂ...."

ಕಲ್ಯಾಣಿ ಅವಾಕ್ಕಾಗಿ ಎಚ್ಚರಗೊಂಡಳು. ಯಾವುದೋ ಕನಸು ಕಾಣುತಿದ್ದ ಅವಳು ಜಾಗೃತಳಾಗಿ ತಾನು ನಿಂತಿರುವುದನ್ನು ಅರಿತಳು. ಆ ಕೂಗು ನಿಜವಿರಬಹುದೆಂಬ ಸಂದೇಹವೂ ಮೂಡಿತು. ಅದಾವುದೋ ಆಶೆ ಅಂಕುರಿಸಿತು.

ತನ್ನ ಹುಚ್ಚುತನಕ್ಕೆ ತಾನೇ ನಾಚಿದಳು ಕಲ್ಯಾಣಿ. ಆದರೆ ಆ ಕೂಗು ಅವಳ ಕಿವಿಯಲ್ಲಿ ಪ್ರತಿಧ್ವನಿಗೊಡುತ್ತಿತ್ತು.

"ಬೀರಿ...."

ಕಲ್ಯಾಣಿ ಗಟ್ಟಿಯಾಗಿ ಕೂಗಿ ಕರೆದಳು. ಉತ್ತರ ಬರಲಿಲ್ಲ. ಉಚ್ಛ ಸ್ವರದಲ್ಲಿ ಕರೆದಳು—

"ಬೀರಿ....ಎಲ್ಲಿ ಹಾಳಾದೆ."

ಕರೆದಾಗಲೆಲ್ಲ "ಹ್ಞೂ....ಬಂದೆ" ಎಂದು ಬೆನ್ನ ಹಿಂದೆಯೇ ಬಾಗಿ ನಿಂತಿರುತ್ತಿದ್ದ ಆಕೆ ಅದೇಕೆ ಉತ್ತರಿಸಲಿಲ್ಲವೋ. ಅವಳ ರೋಷ ಹೆಡೆ ಎತ್ತುತ್ತಿತ್ತು. ಇನ್ನೊಮ್ಮೆ ಕೂಗಿ ಕರೆದಳು.

"ಬಂದೆಮ್ಮಾ...."

"ಎಲ್ಲಿ ಹಾಳಾದೆಯೊ....ಎಷ್ಟು ಕೂಗಲಿ?"

"ಇಲ್ಲೇ ಇದ್ದೆ. ಬಂದೆ...."

ಕೈಕಯಿಯ ಅವತಾರವೆತ್ತಿದಂತಿದ್ದ ಕಲ್ಯಾಣಿ ಕೂಗಿದಾಗ ಅವಳು ಆ ಮಂಥರೆ ಮನೆಯ ಅಂಗಳದಲ್ಲೇ ಇದ್ದಳು. ಲಗುಬಗೆಯಿಂದ ಓಡಿ ಬಂದು ಒಡತಿಯ ಮುಂಪೆ ನಿಂತಳು.

"ಇಲ್ಲಿ....ಯಾರು ಬಂದಿದ್ದರು ?"

"ಯಾರೂ ಇಲ್ಲವಮ್ಮ...."

"ನೀನೆಲ್ಲಿ ಹೋಗಿದ್ದೆಯೋ....ಯಾರೋ ಕೂಗಿದಂತಾಯಿತು."

"ಅಂಗಳದಲ್ಲೇ ಇದ್ದೆ....ಹ್ಞೂ....ಯಾರೋ ಬಂದಿದ್ದರು."

"ಯಾರು ಎಂದು ಕೇಳಲಿಲ್ಲವೇ ?"

"ಇಲ್ಲಮ್ಮ. ಯಾರೋ ಹೊಸಬರು...."

"ಅಂದರೆ...."

"ಪ್ರಾಯ ಸಂದಹಾಗಿತ್ತು ಅವರ ಮುಖ ನೋಡಿದರೆ; ದೇಹ ಇನ್ನೂ ಯವ್ವನದಲ್ಲೇ ನಿಂತಿತ್ತು."

"ಸಾಕು ನಿನ್ನ ಕತೆ. ಹೇಗಿದ್ದರು....ಯಾರು....ಎತ್ತ ಹೋದರು ........"

"ಯಾರೋ ನಾಟಕ ಕಂಪೆನಿಯವರಿರಬಹುದು. ಉದ್ದ ಕೂದಲಿತ್ತು."

"........"

"ಪಂಚೆ ತೊಟ್ಟಿದ್ದರು. ಒಂದು ಖಾದಿ ಜುಬ್ಬ. ಮೈಮೇಲೆ ರೇಶ್ಮೆ ಶಲ್ಲೆ....

"ಸಾಕು ನಿನ್ನ ಪುರಾಣ....ಆ್ಞ....ಆಮೇಲೆ...."

"ನಾನು ಹಿತ್ತಿಲಲ್ಲಿ-ಗೇಟ್ ಬಳಿ ನಿಂತು...."

"ಗೊತ್ತಾಯಿತು....ಬೀದಿಯ ಕಡೆ ನೋಡುತ್ತಿದ್ದಿ. ಅದೇ ನಿನಗೆ ಕೆಲಸ...."

"ಅವರು ಬಾಗಿಲಿಗೆ ಬಂದರು. ನನ್ನ ಕಡೆಯೂ ನೋಡದೆ ಅಂಗಳ ದಾಟಿ ಮನೆಯ ಮುಂದೆ ನಿಂತರು."

"........"

" ನಾನು ತಿರುಗಿದೆ. 'ಮಗೂ....' ಎಂದು ಕೂಗಿ-ಅಲ್ಲೇ ಕೊಂಚ ಹೊತ್ತು....ಒಂದರೆ ನಿಮಿಷ ತಡೆದರು. ಮನೆಯೊಳಗೆ ಹಾಲಿನ ಕಡೆಗೇ.... ನಿಜ....ಗೋಡೆಯ ಮೇಲಿದ್ದ ಚಿತ್ರ-ಪಟಗಳ ಕಡೆಗೇ ನೋಡುತಿದ್ದರು."

" ಹ್ಞಾ....ಆಮೇಲೆ....? ಹೇಳು ಬೀರಿ....ಆಮೇಲೆ...."

" ನಾನು ಅವರೆಡೆ ಬಂದೆ. ಯಾರು ಬೇಕು ಎಂದು ಕೇಳೋಣ ಎಂದು ಬಾಯಿ ತೆರೆದೆ. ಅವರು ತಿರುಗಿ ನನ್ನನ್ನೇ ದಿಟ್ಟಿಸಿ ನೋಡಿ ವೇಗ ವಾಗಿ ನಡೆದುಹೋದರು."

" ಹ್ಞೂ...." ಎಂದು ನಿಟ್ಟುಸಿರಿಟ್ಟಳು ಕಲ್ಯಾಣಿ.

" ನನಗೂ ರೇಗಿತ್ತಮ್ಮ. ಯಾರೋ ಏನೋ, ಯಾವುದೋ ನಾಟಕ ಕಂಪೆನಿಯವನು....ನಮ್ಮ ಮನೆಗೆ ಬಂದು....ಮಗೂ ಎಂದು ಕರೆಯುತ್ತಾನೆ. ನನ್ನನ್ನು ನೋಡಿದರೂ ಮಾತನಾಡಿಸಲಿಲ್ಲ...."

" ಎತ್ತ ಹೋದರು...."

" ಅದೆಲ್ಲಿಗೆ ಹೋದರೋ. ದೆವ್ವದ ಹಾಗೆ ನಾನು ನಿಂತರೂ ಮಾತ ನಾಡಿಸದೆ ಹೊರಟುಹೋದರು. ನನಗೇನು? ನಾನು ಒಳಕ್ಕೆ ಬಂದೆ"

" ನೀನು ದೆವ್ವವೇ....ಮತ್ತೆ...."

" ಎತ್ತಲೋ ಹೋದರಮ್ಮ. ಹೋಗಲಿ ಅದಕ್ಕೇನು. ಬೇಕಾದರೆ– ಕೆಲಸವಿದ್ದರೆ ಅವರೇ ಬರುತ್ತಾರೆ. ಅರೆನಿಮಿಷದಲ್ಲಿ ಮರೆಯಾದರು."

ಕಲ್ಯಾಣಿಯು ಮಾತನಾಡಲಿಲ್ಲ. ಅವಳ ಮನಸ್ಸೆಲ್ಲೋ ಹಾರಾಡು ತ್ತಿತ್ತು. 'ಮಗೂ....' ಎಂಬ ಕೂಗು ಅವಳ ಕಿವಿಯಲ್ಲಿ ಗುಂಗಾಡುತಿತ್ತು. ಮಾಸ್ತರ್ ಬಂದಿರಬಹುದೇ? ಯಾಕೆ ಬಂದರು? ನಾನು ಅವರ ಹೃದಯ ಬಿರಿದಿದ್ದೇನೆ, ಅವರ ಬಯಕೆಯ ಗೋಪುರವನ್ನೆಲ್ಲ ಹುಡಿಗೂಡಿದ್ದೇನೆ, ಗುರುದ್ರೋಹ ಬಗೆದಿದ್ದೇನೆ. ಅವರ ಜೀವನದ ತಪಸ್ಸನ್ನೆಲ್ಲ ನಿಮಿಷಾರ್ಧ ದಲ್ಲಿ ತೊಳೆದೆ ನನ್ನ ಪಾಪದ ನೀರಿನಿಂದ. ಅವರಿಗೆ ನಾನು ತಂದುಕೊಟ್ಟ ನೋವು, ಉಂಟುಮಾಡಿದ ಗುಣವಾಗದ ಗಾಯ, ಒದಗಿಸಿದ ಚಿಂತೆ ಎಲ್ಲ ವನ್ನೂ ಮರೆತರೇ? ಕಲಾಮಂಡಲದ ದೀಪವಾರಿತು, ಗುರುವಿನ ಆಶಾ ಜ್ಯೋತಿ ಇಂಗಿತು, ಕನ್ನಡ ನಾಡಿಗೆ ಅಸಮಾನ ಅಪಚಾರವಾಯಿತು– ಆದರೂ ಇನ್ನೂ ಆ ಹೃದಯ ಈ ದ್ರೋಹಿಯನ್ನು ಅರಸುತ್ತಿದೆಯೇ?

ಹೀಗಿದ್ದೂ ತನ್ನ ಉತ್ಕರ್ಷೆಯ ಬಯಕೆಯೊಂದೇ ಅವರ ಬಾಳ ಗುರಿಯೇನು? ತಂದೆ-ತಾಯಿ, ಸಾವಿರ ಅನ್ಯಾಯ ಮಾಡಿದರೂ ಮಕ್ಕಳನ್ನು ಕ್ಷಮಿಸಿ ಅವರ ಹಿತವನ್ನೇ ಬಯಸುತ್ತಾ ತಮ್ಮ ಹಿತವನ್ನೆಲ್ಲ ಮರೆತು ವರ್ತಿಸುವರೇ? ಗುರುವಿಗೆ ಶಿಷ್ಯನ ಹಿತ, ಉತ್ಕರ್ಷೆ, ಭವಿತವ್ಯವೇ ಸರ್ವಸ್ವವೇ?

ಕಲ್ಯಾಣಿ ಈಗ ನಾಡಿನ ಖ್ಯಾತ ನಟಿಯಾಗಿದ್ದಾಳೆ. ಧನದ ರಾಶಿಯ ಮೇಲೆ, ಹಣವಂತರ ನಡುವೆ ಕುಳಿತಿದ್ದಾಳೆ. ಅವಳ ಹಿಂದೆ ದಿನಬೆಳಗಾದರೆ ಲಕ್ಷಾಧಿಪತಿಗಳು ಭಿಕ್ಷುಕರಂತೆ ಬಾಗಿ ನಿಂತು, ಕೈಕೈ ಹಿಸುಕಿ. ದೇಶಾವರದ ನಗೆ ನಕ್ಕು, ಸುತ್ತ ಸುಳಿಯುತಿದ್ದಾರೆ. ಈಗ ಅವಳಿಂದ ಸಹಾಯವಾಗಬಹುದು, ಆರ್ಥಿಕ ಬೆಂಬಲ ದೊರೆಯಬಹುದು—ಎಂದು ಮಾಸ್ತರ್ ಇತ್ತ ಬಂದರೇ? ಎಂದೂ ಹಣದ ದಾಸಿಯಾಗಿ ಕಾಮದ ಕಟ್ಟಾಣಿಯಾದ ಕಲ್ಯಾಣಿಯ ಒಳದನಿ ಅಪಸ್ವರ ನುಡಿಯುತ್ತಿತ್ತು.

ಹಿಂದೊಮ್ಮೆ ಬಂದಿದ್ದರಲ್ಲವೇ? ಆಗಲೂ ಹೀಗೇ ಆಯಿತು. ನನ್ನನ್ನು ಅವರು ನೋಡಲಿಲ್ಲ. ನಾನು ಅವರ ಮುಖ ನೋಡಲಿಲ್ಲ. ನನ್ನನ್ನವರು ಕೂಗಿದರು—ನಾನು ಮಾತ್ರ ಓಗೊಡಲಿಲ್ಲ. ಆ ಅಂದಿನ ನಲ್ಮೆ ನೇಹದ ಪ್ರತೀಕವಾಗಿ ಇಂದೂ ಬಂದಿರಬಹುದು. ಅಂಥ ಒಲುಮೆಯಲ್ಲದೆ—ಅಂದು ನಡೆದ ಘಟನೆಯಿಂದ ತಮಗೆ ಅಪಮಾನವಾಯಿತೆಂದೆಣಿಸಿ ಇಂದು ಬರುವ ಸಂಭವವಿರಲಿಲ್ಲ.

ಒಲುಮೆಗೆ ಬಲಿಯಾದವರು, ಪ್ರೇಮದ ಬಲೆಯಲ್ಲಿ ಸಿಲುಕಿದವರು ಮಾನ-ಅಪಮಾನಗಳ ಗೊಡವೆಗೆ ಹೋಗುವುದಿಲ್ಲ. ಭವಿತವ್ಯವನ್ನು ಲೆಕ್ಕಿಸುವುದಿಲ್ಲ. ಕಂಡ ಹಿಂದಿನದನ್ನು ಮರೆತು ಕಾಣದ ಭವಿಷ್ಯದ ಬೆನ್ನು ಹತ್ತುತ್ತಾರೆ—ನನ್ನ ಹಾಗೆ! ಮಾಸ್ತರ್ ಕೂಡಾ ಹಾಗೇ ಇರಬಹುದು.

ಸಾವಿರ ಯೋಚನೆಗಳು ಒಂದರ ಹಿಂದೊಂದಾಗಿ ಅಲೆ ಅಲೆಯಾಗಿ ಬಂದು ಅವಳ ಮನಸಿನ ಮೇಲೆ ದಾಳಿ ನಡೆಸುತಿದ್ದುವು.

ಆದರೂ ಒಳಗಿನ ಒಳಗಿನ ಒಳದನಿಯೊಂದು ಕೂಗಿ ಹೇಳುತ್ತಿತ್ತು. ಅದೇ ನಿನ್ನ ರಕ್ಷಾಕವಚ, ಅವರೇ ನಿನ್ನನ್ನು ಎಡೆಬಿಡದೆ ಕಾದು ಕಾಪಾಡುವ ದೇವರು ಎಂದು. ಅವಳಿಗೂ ಇದೆಲ್ಲವನ್ನೂ ಬಿಟ್ಟು ಹೋಗೋಣ, ಈ

ಜಂಜಡದ, ..ಡುವಿಲ್ಲದ ಬಾಳು ಸಾಕು; ಹಾಯಾಗಿ ಇದ್ದ ಹಣದಲ್ಲಿ ವಿಶ್ರಾಂತಿಯ ಜೀವನವನ್ನು ನಡೆಸೋಣ ಎಂಬ ಭಾವ ಮೂಡಿ ಬರುತಿತ್ತು.

"ಇನ್ನೂ ಹೆರಳೇ ಹಾಕಿಕೊಂಡಿಲ್ಲ....ಬಂದೆ...." ಎಂದುಕೊಂಡು ನಿಂತು ನಿಂತು ಸಾಕಾಗಿ, ಯೋಚನೆಯಲ್ಲೇ ನಿಮಗ್ನಳಾಗಿದ್ದ ಕಲ್ಯಾಣಿ ಯನ್ನು ನೋಡುತಿದ್ದ ಬೀರಿ ನುಡಿದು ಅಡುಗೆ ಮನೆಯೊಳಗೆ ನಡೆದಳು.

ವಿಚಾರದ ಬಿರುಗಾಳಿಗೆ ಸಿಲುಕಿ ಬಳಲಿದ ಕಲ್ಯಾಣಿ ಕೋಣೆಯೊಳಗೆ ನಡೆದು ಕನ್ನಡಿಯ ಮುಂದುಗಡೆ ಕುಳಿತುಕೊಂಡಳು.

ಬೀರಿ ಒಂದು ತಟ್ಟೆಯಲ್ಲಿ ಕಾಫಿ ತಂದು ಅವಳ ಮುಂದಿಟ್ಟು, ತಾನೇ ಹೆರಳು ಹಾಕಲು ಕುಳಿತಳು.

"ಬಂದವರು ಮತ್ತೇನೆಂದರು....ಬೀರಿ."

"ಏನೂ ಇಲ್ಲಮ್ಮ. ಅಲ್ಲಾಂದ್ರೆ ಅದನ್ನೆಲ್ಲ ಕಟ್ಟಿಕೊಂಡೇನು? ಯಾರೋ-ಏನೊ?' ತುಂಬ ಹೊಸ ಮುಖ; ಎಲ್ಲೂ ನೋಡಿದ ನೆನಪಿಲ್ಲ. ವಿಚಿತ್ರ ವ್ಯಕ್ತಿ...."

"ನಿಜ! ಅದಕ್ಕೇ ಕೇಳಿದೆ."

"ಹೊಸಬರನ್ನೆಲ್ಲ ವಿಚಾರಿಸಿದರೆ ಅದೇ ಕೆಲಸವಾದೀತು."

"ಹಾಗಲ್ಲ ಬೀರಿ. ನಿನಗೆ ಅರ್ಥವಾಗದು."

"ಸರಿ; ಸರಿ; ಅರ್ಥಮಾಡಿಕೊಂಡು ಸುಸ್ತಾಗಿ ಹಾರಾಡಿ ಬಳಲಿ, ಇದೀಗ ಈ ಮನೆ ಸೇರಿದ್ದೇನೆ. ಇನ್ನೇನು ಅರ್ಥ ಮಾಡಿಕೊಳ್ಳಲಿ."

"ಬೀರಿ....ಎಂದೂ ಕೇಳದ ಕೂಗನ್ನು ಇಂದು ಕೇಳಿದೆ."

"ಹ್ಞಾ...."

"ಆ ಮಮತೆಯ ಕೂಗು ಕೇಳಿ ಬಹಳ ಕಾಲವಾಗಿತ್ತು. ಅದನ್ನು ಕೇಳುವ ಭಾಗ್ಯವೇ ಇಲ್ಲ ಎಂದು ಅದನ್ನು ಮರೆತೇ ಬಿಟ್ಟಿದ್ದೆ. ಈಗ ಕೇಳಿದೆ....ಬೀರಿ."

"ಮಗೂ....ಎಂದೇ? ಬಹಳ ಮುದಿಯನ ಹಾಗೆ ಮಾತನಾಡಲು ಬಂದಿದ್ದಾನೆ. ನನಗಂತೂ ರೇಗಿಹೋಯಿತು. ಇನ್ನೊಮ್ಮೆ ಹಾಗೆಂದಿದ್ದರೆ ಹಲ್ಲು ಕಿತ್ತುಬಿಡುತಿದ್ದೆ...."

"ಹಾಗನ್ನಬಾರದು....ಬೀರಿ."

"ನಿಮ್ಮದೆಲ್ಲ ಹೀಗೇ. ಭಾವನಾಪ್ರಪಂಚ. ಉದ್ವೇಗದ ಮನಸ್ಸು ....ಇದೆಲ್ಲ ಈ ಪ್ರಪಂಚಕ್ಕೆ ಬೇಕಾಗಿಲ್ಲ"

"ನಿಜ....ಬೀರಿ....ಆದರೂ...."

"ಯಾವುದೋ ಮನೆ ಹುಡುಕುತ್ತ, ಯಾರೋ ಬಂದರೆ ಅದನ್ನೇ ತುಂಬ ಹಚ್ಚಿಕೊಳ್ಳುತ್ತೀರಮ್ಮ...."

"ನನ್ನ ಮನೆ ತಿಳಿಯದವರೇ ಇಲ್ಲವಲ್ಲ....ಬೀರಿ...."

"ಆದರೆ....ಇವನು ಊರಿಗೇ ಹೊಸಬ!"

"ಅದಕ್ಕೇ ಚಿಂತೆ....ಬೀರಿ...."

"ಏನಮ್ಮ...."

"ನಾನು ನಿನಗೆ ಒಂದು ಕತೆ ಹೇಳಿದ್ದೆ. ನೆನಪಿದೆಯೇ?"

"ಯಾವುದು? ನೀವು ಎಷ್ಟೋ ಕತೆ ಹೇಳಿದ್ದೀರಿ. ಹಲವಾರು ನನಗೂ ಗೊತ್ತು...."

"ನನ್ನ ಬಾಳಿನ ಹಳೆಯ ಕತೆ."

"ಹ್ಞೂ...."

"ಮಾಸ್ತರರ ಕತೆ...."

"ಅದೇ....ಹೌದು...."

"ಅವರೇ ಬಂದರೋ ಏನೋ ಎಂದು ಎದೆ ತವಕದಿಂದ ಬಡಿದು ಕೊಳ್ಳುತ್ತಿದೆ."

"ಸರಿ....ಅವರಿಲ್ಲಿ ಬರುತ್ತಾರೆ........ಆದರೂ ಡ್ಯಾನ್ಸರ್ ಹಾಗೆ ಕಾಣು ತ್ತಿದ್ದರು...."

"ನಮ್ಮ ಕಲಾಮಂಡಲದಲ್ಲಿ ಬಣ್ಣ ಬಳಿಯುವವರು 'ಸಿಂಹ' ಅಂತ ಒಬ್ಬ ಅಣ್ಣ ಇದ್ದರು."

"ಅದನ್ನೆಲ್ಲ ನೆನಸಿಕೊಂಡೇನು? ಇನ್ನು ಪುನಃ ಆ ರಾಜ್ಯಕ್ಕೆ ನೀವು ಹೋಗುತ್ತೀರೇನು?"

"ಹಾಗಲ್ಲ....ಬೀರಿ....ನಾನು ಹೊರಡುವಾಗ ಅವರೆಷ್ಟೋ ಹೇಳಿದರು. ಅನೇಕ ರೀತಿಯಿಂದ ಕೇಳಿಕೊಂಡರು."

"ಮರೆತುಬಿಡಮ್ಮ....ಅಂದ್ರೆ...."

" ಕೊನೆಯದಾಗಿ ' ಕಲ್ಯಾಣಿ, ನಿನ್ನ ಮಾಸ್ತರರ ಹೃದಯ ನಿಷ್ಕಲ್ಮಶ ವಾದುದು. ವಿಶ್ವದಷ್ಟು ವಿಶಾಲವಾದುದು. ನಿನ್ನ ಸಾವಿರ ತಪ್ಪುಗಳನ್ನು ಮನ್ನಿಸಿ ಸ್ವಾಗತಿಸುವಷ್ಟು ಪರಿಶುದ್ಧವಾದುದು ' ಎಂದು ಹೇಳಿದ್ದರು."

" ನನಗಂತೂ ಬೇಸರವಾಗುತ್ತಮ್ಮ. ಇದೆಲ್ಲ ಸರಿಯಲ್ಲ. ಚಿಂತಿಸಿ ದರೆ ಬೇಗನೇ ಮುಪ್ಪು ಬರುತ್ತೆ."

" ಅದು ನನಗೆ ಗೊತ್ತೇ ಇದೆಯಲ್ಲ ಬೀರಿ. ಆದರೂ.... ಆ ಕೂಗು ಕೇಳಿದಾಗಲೆಲ್ಲ ಹಿಂದೆ ಹೇಳಿದ ಮಾತು ನೆನಪಾಗುತ್ತದೆ. ನಾನು ತಪ್ಪು ಮಾಡಿದೆ, ಗುರುವಿಗೆ ದ್ರೋಹ ಬಗೆದೆ ಅನಿಸುತ್ತದೆ."

" ಹೊತ್ತಾಯಿತಮ್ಮ. ಬೇಗನೇ ಹೆರಳು ಹಾಕುತ್ತೇನೆ. ಯಾರಾ ದರೂ ಬರಬಹುದು."

ಕಲ್ಯಾಣಿಯು ಮನದ ಮುಗುಡ ಮರೆಯಲೆಂದು ಶತಪ್ರಯತ್ನ ಮಾಡುತಿದ್ದಳು. ಬೀರಿಯೂ ಯಾವುದೋ ವಿಚಾರಗಳನ್ನೆತ್ತಿ ಅವಳ ಮನ ಸ್ಸನ್ನು ಬೇರೆ ಕಡೆ ತಿರುಗಿಸಲು ಯತ್ನಿಸುತಿದ್ದಳು.

ಆದರೂ ಕಲ್ಯಾಣಿಗೆ ಆ ಯೋಚನೆಯನ್ನು ಬದಿಗೆ ಸರಿಸುವುದು ಸುಲಭವಾಗಲಿಲ್ಲ. ಮಾಸ್ತರ್–ಬಂದರೇ ? ಯಾಕೆ ಬಂದರು ? ಇನ್ನೊಂದು ಬಾರಿ ತನಗೆ ವಿವೇಕ ಹೇಳಿ ತನ್ನನ್ನು ಸ್ವಾಗತಿಸಲು ಬಂದರೇ ? ಯೋಚಿಸಿ ದಷ್ಟಕ್ಕೂ ಅವರ ಬಗೆಗೆ ಅವಳಲ್ಲಿನ ಅಭಿಮಾನ, ಭಕ್ತಿ ಅಧಿಕವಾಗುತ್ತಿತ್ತು. ಆದರೆ........ ಅವರ ಮುಂದೆ ನಿಂತು, ಸಲುಗೆಯಿಂದ ನಡೆದು, ಸರಲವಾಗಿ ಮಾತನಾಡುವ ಧೈರ್ಯ ಎಂದೋ ಅವಳನ್ನುಳಿದಿದೆ. ತನ್ನ ತಪ್ಪಿನ ಹೊರೆ ಅವಳನ್ನು ಅಶಕ್ತಳಾಗಿ ಮಾಡಿತ್ತು; ಅವಳ ಚೇತನವನ್ನೆಲ್ಲ ಹೀರಿತ್ತು. ಈ ಮುಖ ತೋರಿಸುವುದಾದರೂ ಹೇಗೆ ? ಎಂದು ಮನಸ್ಸು ಎಚ್ಚರಿಕೆ ನೀಡುತಿತ್ತು.

ಬೀರಿ ಹೆರಳು ಹಾಕುವುದನ್ನು ಪೂರೈಸಿ, ಕನ್ನಡಿಯ ಮಗ್ಗುಲಲ್ಲಿದ್ದ ಹೂವಿನ ಕುಚ್ಚನ್ನು ಮುಡಿಸಿದಳು. ಇನ್ನೂ ಕಲ್ಯಾಣಿಯ ಮನಸ್ಸು ಯಾವುದೋ ಲೋಕದಲ್ಲಿ ವಿಹರಿಸುತಿತ್ತು.

" ಯಾವ ಸೀರೆ ತರಲಿ........" ಬೀರಿ ಕಲ್ಯಾಣಿಯ ಗಮನವನ್ನು ಸೆಳೆ ಯಲು ಪ್ರಶ್ನಿಸಿದಳು.

"ಯಾವುದಾವರೇನಂತೆ...." ನಿರುತ್ಸಾಹದಿಂದ ಉತ್ತರವಿತ್ತ ಕಲ್ಯಾಣಿ, ಪೌಡರ್ ಡಬ್ಬದ ಕಡೆಗೆ ಕೈಚಾಚಿ ಕನ್ನಡಿಯನ್ನೊಮ್ಮೆ ನೋಡಿಕೊಂಡಳು. ತನ್ನ ಪಾಲಿನ ಕೆಲಸಕ್ಕೆ ಆರಂಭಿಸಿದಳು.

ಬೀರಿ ಗೋಡೆಯಲ್ಲಿದ್ದ ಕಪಾಟಿನ ಬಾಗಿಲು ತೆರೆದು, ಕಿತ್ತಳೆ ವರ್ಣದ ಜಾಕೀಟನ್ನೂ, ಹಳದಿ ಬಣ್ಣದ ಜಾರ್ಜೆಟ್ ಸೀರೆಯನ್ನೂ ಹೊರಕ್ಕೆ ತೆಗೆದಳು.

"ಇದು ನಿಮಗೊಪ್ಪಿದ ಹಾಗೆ ಬೇರಾವ ಸೀರೆಯೂ ಒಪ್ಪುವುದಿಲ್ಲ ..."

ಕಲ್ಯಾಣಿ ಕನ್ನಡಿ ನೋಡಿಕೊಂಡು ಪೌಡರ್....ಸ್ನೋಗಳಿಗೆ ತನ್ನ ಕೆನ್ನೆಯಲ್ಲಿ ಆಸರೆ ನೀಡುತಿದ್ದಾಗಲೇ ಅವಳ ನಿತ್ಯದ ಕಾರ್ಯಕ್ರಮದ ಮೊದಲ ಕೋಳಿ ಕೂಗಿತು.

"ಗುಡ್ ಮಾರ್ನಿಂಗ್ ಮ್ಯಾಡಮ್."

ಬೀರಿ ಹೊರಗಡೆ ತಿರುಗಿ ನೋಡಿದಳು. ಕಲ್ಯಾಣಿಗೆ ಅದು ಪರಿಚಯದ ಧ್ವನಿ. ಅದಾರೆಂಬುದು ಅವಳಿಗೆ ತಿಳಿದೇ ಇದೆ. ಅವಳ ಅಲಂಕಾರ ಸಾಗಿತ್ತು–ಚುರುಕಿನಿಂದ ಕೈಗಳು ಕೆಲಸವಾರಂಭಿಸಿದ್ದುವು.

ಕೋಣೆಯಿಂದ ಹೊರಬಂದು ಕೋಣೆಯ ಬಾಗಿಲು ಸರಿಸಿ ಬೀರಿ ಅಡುಗೆ ಮನೆಗೆ ತೆರಳಿದಳು.

೨

"ಕಲ್ಯಾಣಿ....ಈ ಕಲಾಕೇಂದ್ರದ ಬಾಗಿಲಿನಿಂದ ಹೊರಕ್ಕೆ ಹೊರಡಬೇಡ. ಅದು ನಿನ್ನ ಬಾಳಿನ ಕೊನೆಯ ಘಟ್ಟ. ಸಮಾಜದಿಂದಲೇ ನೀನು ಹೊರಟು ಹೋದಂತೆ."

"ಅದನ್ನು ನಾ ಅರಿತಿದ್ದೇನೆ ಸಿಂಹನವರೆ."

"ಈ ಮನೆಯ ಮೆಟ್ಟಲಿಳಿಯಬೇಡ. ಅದೂ ನಿನ್ನ ಜೀವನದ ಪತನದ ಮೊದಲ ಹೆಜ್ಜೆಯಾದೀತು."

"ಭವಿಷ್ಯ ನನ್ನದು...."

"ನಿನ್ನ ಮಾಸ್ತರರ ಹೃದಯ ನಿಷ್ಕಲ್ಮಶವಾದುದು. ವಿಶ್ವದಷ್ಟು ವಿಶಾಲವಾದುದು. ಸಾವಿರ ತಪ್ಪುಗಳನ್ನು ಮನ್ನಿಸಿ ಸ್ವಾಗತಿಸುವಷ್ಟು ಪರಿಶುದ್ಧವಾದುದು. ಈ ಹೃದಯಕ್ಕೆ ದ್ರೋಹ ಬಗೆಯಬೇಡ."

"ನಾನು ದ್ರೋಹ ಬಗೆಯುತ್ತಿಲ್ಲ ಸಿಂಹನವರೇ! ನನ್ನ ದೇವರಿಗೆ ಅನಂತವಾಗಿ ವಂದಿಸುತ್ತೇನೆ, ಅವರು ತೋರಿದ ಬೆಳಕಿನಲ್ಲಿ ನಡೆಯುತ್ತೇನೆ."

"ನಿಜ....ಕಲ್ಯಾಣಿ. ಎತ್ತಿದ ಕೈಯಲ್ಲಿ ಬೆಳಕನ್ನು ಅವರು ಹಿಡಿವಿದ್ದಾರೆ. ಆದರೆ ಮುಂದಿರುವುದು ಕವಲು ದಾರಿ. ಒಂದು ಕಾಡಿಗೆ–ಇನ್ನೊಂದು ನಾಡಿಗೆ; ಒಂದು ಸ್ವನಾಶದ ಸ್ಮಶಾನಕ್ಕೆ ಮತ್ತೊಂದು ಪೇಗುಲಕ್ಕೆ ಒಯ್ಯುತ್ತಿವೆ. ನಿನ್ನ ದಾರಿ ಕಾಡಿನ ದಾರಿ."

"ಹಾಗೆ ನಾನು ತಿಳಿದಿಲ್ಲ...."

"ಈಗ ತಿಳಿಯಲಾರೆ. ಕಾಡಿನ ದಾರಿ ಹಿಡಿದವರು ನಿನ್ನಂತಹ ಸಾವಿರ ಸಾವಿರ ಮಂದಿ. ನಾಡಿನ ದಾರಿ ಹಿಡಿದವರು ಕೆಲವರೇ. ಎಂತಲೇ ಕಾಡಿನ ದಾರಿ ಸುಗಮವಾಗಿ ಶುಚಿಯಾಗಿ ಸುಂದರವಾಗಿ ಕಾಣುತ್ತಿದೆ. ನಾಡಿನ ದಾರಿಯಲ್ಲಿ ಇನ್ನೂ ಸ್ವಲ್ಪ ಮುಳ್ಳುಗಳಿವೆ, ಗಿಡಬಳ್ಳಿಗಳು ಅಡ್ಡವಾಗಿವೆ."

"........"

"ಮಾತನಾಡು ಕಲ್ಯಾಣಿ...."

"ನನ್ನ ನಿರ್ಧಾರ ನಾನು ಮಾಡಿದ್ದೇನೆ. ನನ್ನ ಹೃದಯ ಇಬ್ಭಾಗವಾಗಿದೆ. ಒಂದು ನಿಲ್ಲು ಎಂದು ಹೇಳುತ್ತಿದೆ. ಇನ್ನೊಂದು ಹೊರಡು ಎಂದು ಎಚ್ಚರಿಸುತ್ತಿದೆ. ಈ ಎರಡು ಧ್ವನಿಗಳ ನಡುವೆ ನಿಂತು ದಾರಿಗಾಣದಾಗಿದ್ದೇನೆ. ಆದರೂ....ಹೊರಡು ಎನ್ನುವ ಧ್ವನಿಯೇ ಹೆಚ್ಚು ಪ್ರಭಾವಶಾಲಿಯಾಗಿದೆ."

"ನಿನ್ನನ್ನು ಬೆಳೆಸಿ, ನಿನ್ನ ಉತ್ಕರ್ಷೆಗೆ ಸಾಧಕವಾಗಿ, ನಿನ್ನನ್ನು ಇಂದಿನ ಸ್ಥಿತಿಗೇರಿಸಿದ ಕಲಾಮಂದಿರವನ್ನೇ ಬಿಟ್ಟು ಹೋಗಬೇಕೆ?"

"ಆ ದುಃಖ ನನ್ನನ್ನು ಹಿಂಡಿ ಒಮ್ಮೊಮ್ಮೆ ಅಧೀರಳನ್ನಾಗಿ ಮಾಡುತ್ತಿದೆ ಸಿಂಹರವರೇ. ನನಗೂ ಹೃದಯವಿದೆ; ವಿವೇಕವಿದೆ; ವಿಚಾರವಿದೆ. ಅದನ್ನರಿತೇ ಈ ದಾರಿ ಹಿಡಿದಿದ್ದೇನೆ. ಎಂತಲೇ ಉಪದೇಶದಿಂದೇನು?"

"ಉಪದೇಶ ಮಾಡಲು ನಾನೂ ನಿಂತಿಲ್ಲ ಕಲ್ಯಾಣಿ. ಆದರೆ ಗುರುಗಳು ಇಲ್ಲಿಲ್ಲ, ನಾನು ಮನೆಯವನಾಗಿದ್ದೇನೆ. ನನ್ನ ಪಾಲಿನ ಕರ್ತವ್ಯ ಮಾಡುತಿದ್ದೇನೆ."

"ನನ್ನ ಪ್ರಾರ್ಥನೆ ಇಷ್ಟೇ–ಸಿಂಹನವರೇ....ನಾನೂ ಅಳುತ್ತ, ನನ್ನ ದಾರಿ ಹಿಡಿಯುತಿದ್ದೇನೆ. ಅಷ್ಟು ನೀವು ತಿಳಿದರೆ ಸಾಕು."

"ಯಾವುದೋ ಹಗಲು ಕನಸಿಗೆ ತುತ್ತಾಗಿ."

"ಇರಬಹುದು."

"ಯಾರದೋ ಮಾಯಾಬಲೆಗೆ ಬಲಿಯಾಗಿ."

"ಅದು ನಾನು ಒಪ್ಪುವ ಮಾತಲ್ಲ. ತಮ್ಮ ಅಭಿಪ್ರಾಯ."

"ಒಪ್ಪದಿದ್ದರೂ ಚಿಂತೆಯಿಲ್ಲ ಕಲ್ಯಾಣಿ. ಈ ಕಲಾಮಂಡಲದಲ್ಲೊಬ್ಬ ಹಿರಿಯನಾಗಿ ನಿಂತು, ನನ್ನ ಬಾಳನ್ನು ಇಲ್ಲಿಗೇ ಅರ್ಪಿಸಿದ ಅಧಿಕಾರದಿಂದ ನಾನು ಹೇಳುತ್ತೇನೆ."

"ಇರಬಹುದು ಸಿಂಹನವರೇ. ನೀವು ನಮಗೆಲ್ಲ ಹಿರಿಯರು....ನಿಜ. ಆದರೆ ಈ ಅಡ್ಡಿಯೇಕೆ, ಆಶೀರ್ವಾದವಿರಲಿ."

"ಇದೆ ಕಲ್ಯಾಣಿ. ಈಗಲೂ ಹೇಳುತ್ತೇನೆ....ನಿನ್ನ ಸುಖಜೀವನಕ್ಕೆ ನಾವಾರೂ ಅಡ್ಡಿ ತರುವುದಿಲ್ಲ. ನೀನು ಒಲಿದವನೇ ನಿನ್ನವನಾಗಲಿ........ ಆದರೆ, ನಿನ್ನ ಈ ಕಲಾಮಂಡಲವನ್ನು ಬಿಡಬೇಡ; ನಿನ್ನ ಮಾಸ್ತರರ ಕೈ ಬಿಡಬೇಡ."

"ಹೆಣ್ಣಿಗೆ ಆ ಧೈರ್ಯ ಬರುವುದಿಲ್ಲ. ನನ್ನ ದಾರಿ ತಪ್ಪು........ ಎಂಬುದು ನಿಮಗೆಲ್ಲ ಅರಿವಾಗಿದೆ. ಅದು ಸರಿ....ಎಂದು ನನ್ನ ಮನ ಕೂಗಿ ಹೇಳುತ್ತಿವೆ. ಇಂಥ ಸಮಸ್ಯೆಯ ನಡುವೆ ಎಷ್ಟು ಬಾಳಿದರೂ, ಆ ಮುಗುಳು ನಗೆ ದುಃಖದ ಹೃದಯದ ನಗೆಯಾದೀತು. ಆ ಒಪ್ಪಿತ, ಒಲ್ಲದ ಮನಸ್ಸಿನ ದಾದೀತು. ಆ ಆಶೀರ್ವಾದ ತಳಮಳಿಸುವ ಹೃದಯದಿಂದ ಬಂದುದಾಗ ಬಹುದು."

"ಅದು ನಿನ್ನ ಕಲ್ಪನೆ."

"ಅಷ್ಟೇ ಅಲ್ಲ. ನನ್ನನ್ನು ಕೊನೆಯ ನಿರ್ಧಾರಕ್ಕೆ ದೂಡಿದ ಭೀತಿಯೂ ಅದೇ."

"ಅದು ನಿನ್ನ ಮಾಸ್ತರರನ್ನು ನನ್ನನ್ನು ನೀನಿನ್ನೂ ಅರ್ಥಮಾಡಿ ಕೊಂಡಿಲ್ಲವೆಂದು ಸಾರುವುದಿಲ್ಲವೇ ?"

"ಅರ್ಥಮಾಡಿಕೊಂಡಿದ್ದೇನೆ ಸ್ವಾಮಿ....ನನ್ನ ಹೃದಯವನ್ನೇ ಬಿರಿದರೂ ಅದೇ ನಂಬುಗೆ ಪ್ರಕಟವಾಗಬಹುದು. ಆದರೂ...."

" ಹೇಳು...."

" ಹೊಲದಲ್ಲಿ ಬೆಳೆದ ಬೆಳೆ ತೆನೆ ಬಂದು, ಭತ್ತ ಬಲಿತು, ಮಾಗಿದ ಬಳಿಕ ಅವನ್ನು ಅಲ್ಲೇ ಇರಗೊಡಿಸುವುದಿಲ್ಲ."

" ಅಂದರೆ...."

" ಸಾವದನ್ನು ಕೊಯ್ಯುತ್ತೇವೆ. ಮನೆಯಂಗಳಕ್ಕೆ ಒಯ್ಯುತ್ತೇವೆ. ಬಡಿದು ಭತ್ತವನ್ನು ಹುಲ್ಲಿನಿಂದ ಬೇರ್ಪಡಿಸುತ್ತೇವೆ."

" ಅದು ಪ್ರಕೃತಿ ನಿಯಮ."

" ಅವನ್ನರಿತೂ ಹಿರಿಯರಾದ ನೀವು ನನ್ನ ನಡೆಯನ್ನು ತಡೆಯುತ್ತೀರಿ. ಆ ಭತ್ತ....ಆ ಹುಲ್ಲು ಬೇರೆಯಾಗಲೇ ಬೇಕು. ಆಗಲೇ ಹೊಲ ಹೊಸ ಆರಂಭಕ್ಕೆ ಸಿದ್ಧವಾಗುತ್ತದೆ."

" ಹುಲ್ಲಿಗೆ ಭತ್ತವನ್ನು ಬಿಡುವ ಬಯಕೆಯಿಲ್ಲ."

" ಆದರೆ ಭತ್ತಕ್ಕೆ ಆ ಬಯಕೆ ಇದೆ. ಅದು ಹುಲ್ಲಿನಿಂದ ದೂರವಾಗುತ್ತದೆ. ಮತ್ತೆ ಹೊಲದಲ್ಲಿ ತಂಗುತ್ತದೆ; ತಾನೂ ಹುಲ್ಲಾಗುತ್ತದೆ."

"........"

" ಆ ಭತ್ತ ಅದೇ ಹೊಲದಲ್ಲೇ ಬೀಳಬಹುದು; ಬೇರೆ ಹೊಲವನ್ನು ಹುಡುಕಲೂ ಬಹುದು."

"........"

" ಭತ್ತವಿರುವಷ್ಟು ಕಾಲ ಹುಲ್ಲಿಗೆ ಗೌರವ ಸಲ್ಲಬಹುದು; ಅದು ಬೇರೆಯಾದೊಡನೆ ಹುಲ್ಲು ಹಸುವಿನ ಆಹಾರವಾಗಬಹುದು. ಆದರೂ ಕೂಡಾ, ದುಃಖದಿಂದ, ಮುಂದಿನ ಪರಿಣಾಮವನ್ನು ಲೆಕ್ಕಿಸದೆ, ಹಿಂದಿನ ಮೋಹಕ್ಕೆ ಬಲಿಯಾಗದೆ ಆ ಭತ್ತ, ಹುಲ್ಲಿನಿಂದ ಬೇರೆಯಾಗಲೇ ಬೇಕಾಗಿದೆ."

" ........"

" ಯಾಕೆ ಸ್ವಾಮಿ....ಮೌನ. ನನ್ನದು ತಪ್ಪಾದರೆ ಕ್ಷಮಿಸಿ. ನೀವೂ ನನ್ನನ್ನು ತಂದೆಗಿಂತ ಹೆಚ್ಚಾಗಿ ಸಾಕಿ ಸಲಹಿದ್ದೀರಿ. ಮಾಸ್ತರ್ ತಂದೆಯಾದರೆ–ನೀವು ತಾಯಿಯಾಗಿ ನನ್ನ ಬಾಳಿಗೆ ಬೆಳಕು ನೀಡಿದ್ದೀರಿ. ನನಗೆ ಅನುಮತಿ ನೀಡಿ; ಆಶೀರ್ವಾದ ಮಾಡಿ."

"ನಾನೇನೂ ಹೇಳಲಾರೆ ಕಲ್ಯಾಣಿ. ಹೇಳಬೇಕಾದುದನ್ನು ಹೇಳಿದ್ದೇನೆ. ಮಾಸ್ತರರನ್ನು ಉಳಿಸುವ ಅಥವಾ ಅಳಿಸುವ ಶಕ್ತಿ ನಿನ್ನಲ್ಲಿದೆ. ಕಲೆಯನ್ನು ಈ ಕನ್ನಡ ನಾಡಿನಲ್ಲಿ, ಕಲಾಮಂಡಲದಲ್ಲಿ, ಉಳಿಸುವ ಅಥವಾ ಅಳಿಸುವ ಭಾರವೂ ನಿನ್ನ ಹೆಗಲ ಮೇಲೆ ಇದೆ. ಮನ ಬಂದಂತೆ ಮಾಡು."

"ದೇವಾಲಯದ ದೀಪಕ್ಕೆ ನೂರಾರು ಜನ ಎಣ್ಣೆ ಎರೆಯುತ್ತಾರೆ ಸಿಂಹನವರೇ. ಈ ದೇವದಾಸಿಯೊಬ್ಬಳು ಮರೆಯಾದರೆ ಈ ದೀಪ ಆರುವುದಿಲ್ಲ. ಮಾಸ್ತರ್ ಕನ್ನಡನಾಡಿನ ಕಲಾಗುಡಿಯ ನಂದಾದೀಪ. ಅದರ ಹಿತಚಿಂತನೆಯ ಪೂರ್ಣಭಾರ ಹೊತ್ತ ಪೂಜಾರಿ ನೀವು. ನನಗಾಗಿ, ನಾಡಿಗಾಗಿ ಆ ದೀಪದ ಹಿತಚಿಂತನೆ ಮಾಡಬೇಕಾಗಿ ನಾನೂ ಬೇಡಿಕೊಳ್ಳುತ್ತೇನೆ. ಆದರೆ, ಕಲಾಮಂಡಲವಾಗಲೀ ಕಲೆಯಾಗಲೀ ನನ್ನಂತಹ ಒಬ್ಬರಿಂದ ಉಳಿಯುವುದೂ ಇಲ್ಲ, ಅಳಿಯುವುದೂ ಇಲ್ಲ. ಹಾಗೆ ನನ್ನಂತಹ ಅಲ್ಪಮತಿ ತಿಳಿದರೆ ಅದು ಅಹಂಕಾರವಾದೀತು. ನಾನು ಹೋದರೆ ಕಲಾಮಂಡಲ ಹೋಗುತ್ತೆ ಎನ್ನುವ ಮಾತು ನೀವು ಹೇಳಬಾರದು ಸ್ವಾಮಿ...."

ಸಿಂಹ ಹತ್ತಾರು ಬಗೆಯಿಂದ ಹೇಳಿಯಾಯಿತು. ವಿನಂತಿಸಿಯಾಯಿತು. ಬೆದರಿಸಿದ್ದೂ ಆಯಿತು. ಆದರೆ, ಕಲ್ಯಾಣಿ ತನ್ನ ನಿರ್ಧಾರ ಬದಲಿಸಲಿಲ್ಲ. ಕೃಷ್ಣರಾಯನನ್ನು ಕರೆಸಿ ಅಂತರಂಗದಲ್ಲಿ ಅವನೊಡನೆ ಮಾತನಾಡಿ ಪರಿಸ್ಥಿತಿಯನ್ನು ಸಿಂಹ ತಿಳಿಸಿದ. ಅವನನ್ನು ಕ್ಷಮಿಸುವ ಭರವಸೆ ನೀಡಿದ. ಅವನ ಮಾತನ್ನೂ ಕಲ್ಯಾಣಿ ಅಲ್ಲಗಳೆದಳು.

ಕಲ್ಯಾಣಿಯ ಮನೋಧರ್ಮವನ್ನು ಅರ್ಥಮಾಡಿಕೊಳ್ಳುವುದೂ ಸಿಂಹನಿಗೆ ಕಷ್ಟವಾಗಲಿಲ್ಲ. ಅವನದು ಎಲ್ಲರನ್ನೂ ಅರ್ಥಮಾಡಿಕೊಳ್ಳುವ ಬಾಳು. ಕಲಾಮಂಡಲದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆಲ್ಲ ಅವನೆಂದರೆ ತುಂಬ ಸಲುಗೆ; ಅವನೇ ಅವರೆಲ್ಲರ ರಕ್ಷಕ. ಅವನಿಂದ ಯಾವ ವಿಚಾರವನ್ನೂ ಬಚ್ಚಿಡುವುದು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಇಂದು ಕಲ್ಯಾಣಿ ತನ್ನ ಕಾಲ ಮೇಲೆ ನಿಲ್ಲಲು ನಿರ್ಧರಿಸಿದ್ದಾಳೆ. ತಾನು ಕಲಿತ ವಿದ್ಯೆ, ಗಳಿಸಿದ ಕೀರ್ತಿಯಿಂದ ಸಾಕಷ್ಟು ಸಂಪತ್ತು ಕೂಡಿಸಲೂ ನಿರ್ಧರಿಸಿದ್ದಾಳೆ. ಅವಳ ಹೃದಯದಲ್ಲಿ ಎಲ್ಲಕ್ಕೂ ಮೇಲಾಗಿ 'ಕಾಮು'ದ ಕಿಡಿ ಸಿಡಿದಿದೆ. ತಾನೂ ಆ ಬಾಳನ್ನು ಬಾಳಬೇಕು; ಆ ಒಂದು ಸುಖದ ಸವಿ ಸವಿಯಬೇಕು ಎಂದವಳು ನಿರ್ಧಾರಮಾಡಿದ್ದಾಳೆ.

ಕಲ್ಯಾರಂಗ ಮತ್ಸರದ ಮಹಾಮಂದಿರ. ಕಲಾದೇವಿ ತನ್ನ ಭಕ್ತರು ತನ್ನನ್ನೇ ಪೂರ್ಣವಾಗಿ ನಂಬಿರಬೇಕೆಂದು ಬಯಸುತ್ತಾಳೆ. ಯಾವುದೇ ಕಲಾವಿದ ತನ್ನ ದೃಷ್ಟಿ ಬೇರೆಡೆ ಸರಿಯುವ ಮೊದಲೇ ತನ್ನೆಡೆ ಬಂದಾಗಲೇ ಆಕೆ ಪೂರ್ಣವಾಗಿ ಒಲಿದು ಪ್ರತ್ಯಕ್ಷಳಾಗಿ ವರದಹಸ್ತವನ್ನಿಡುತ್ತಾಳೆ. ಕಲ್ಯಾಣಿ ಎಷ್ಟರ ತನಕ ರತಿಯೆಡೆ ತನ್ನ ಗಮನ ಹರಿಯಿಸಲಿಲ್ಲವೋ ಅಲ್ಲಿಯವರೆಗೆ ಸರಸ್ವತಿಯ–ಕಲಾದೇವಿಯ–ದಾಸಾನುದಾಸಳಾಗಿ ಬಾಳಿದಳು. ಇಂದು ಅವಳ ದೃಷ್ಟಿ ಬೇರೆ ಕಡೆ ನೆಟ್ಟಿದೆ. ಅಲ್ಲಿಂದ ಆ ದೃಷ್ಟಿಯನ್ನು ಕಲಾದೇವಿಯ ಕಡೆ ತಿರುಗಿಸಲು ಮಾಡುವ ಯತ್ನಗಳೆಲ್ಲ ತಾತ್ಕಾಲಿಕವೇ ಆಗಬಹುದು. ಸಿಂಹ ಇದನ್ನೆಲ್ಲ ಅರಿತಿದ್ದಾನೆ.

ನೃತ್ಯರಂಗಕ್ಕೆ ಪ್ರವೇಶಿಸಲೆಳಸುವ ಎಷ್ಟೋ ಮಕ್ಕಳಿಗೆ ಈ ದೃಷ್ಟಿಯಿಂದ ಆತ ವಿವೇಕ ಹೇಳಿದ್ದಾನೆ. ಹದಿನಾಲ್ಕು ವರ್ಷದೊಳಗಿನವರು ಮಾತ್ರ ಈ ಮಂದಿರಕ್ಕೆ ವಿದ್ಯಾಭ್ಯಾಸಕ್ಕೆ ಬರಬಹುದು. ಅದಕ್ಕೆ ಮೀರಿದ ತರುಣಿಯರು ನೃತ್ಯಕಲೆಯಲ್ಲಿ ಪೂರ್ಣ ಯಶಸ್ಸು ಗಳಿಸಬಲ್ಲರೆಂಬ ಬಗೆಗೆ ನನಗೆ ನಂಬುಗೆ ಇಲ್ಲ ಎಂದೂ ಅವನು ತಮ್ಮ ಮಕ್ಕಳನ್ನು ಕಲಾಮಂದಿರಕ್ಕೆ ಕರೆತಂದ ಹಿರಿಯರಿಗೆ ಎಚ್ಚರಿಕೆ ನೀಡಿದ್ದಾನೆ. ಆ ಮಾತು ಇಂದು ನಿಜವಾಗಿದೆ. ಒಂದು ಕಾಲದಲ್ಲಿ ತನ್ನ ಸರ್ವಸ್ವವನ್ನೂ ಕಲಾದೇವಿಗೆ ಅರ್ಪಿಸಿದ್ದ ಕಲ್ಯಾಣಿ ಇಂದು ಅದನ್ನೆಲ್ಲ ಮತ್ತೊಬ್ಬನ ಪಾದಗಳಲ್ಲಿ ಅರ್ಪಿಸಿದ್ದಾಳೆ. ಇನ್ನು ಅವಳಿಂದ ಕಲಾಪೂಜೆ ಪೂರ್ಣ ಮನಸ್ಸಿನಿಂದ ಸಾಗೀತೆಂಬ ಬಗೆಗೆ ಅವನಿಗೆ ನಂಬುಗೆ ಇರಲಿಲ್ಲ.

ಆದರೂ ಒಂದು ಆಶೆ ಅವನಲ್ಲಿತ್ತು. ಕಲ್ಯಾಣಿ ಕಲಾಮಂಡಲದಲ್ಲೇ ಇದ್ದರೆ, ಮಾಸ್ತರರ ಮೇಲಣ ಅಭಿಮಾನದಿಂದಲಾದರೂ, ಅವರ ಮೇಲಣ ಭಕ್ತಿಯಿಂದಲಾದರೂ ಕಲಾಸೇವೆ ಮುನ್ನಡೆಸಬಹುದು ಎಂಬುದು. ಅದಕ್ಕಾಗೇ ಅವಳಿಲ್ಲೇ ಇರುವಂತೆ ವಿನಂತಿಸಿದ, ಪ್ರಯತ್ನಿಸಿದ. ಈಗ ಅದೂ ಸಾಧಿತವಾಗಲಿಲ್ಲ.

ಸಿಂಹನ ಪರಿಸ್ಥಿತಿಯಂತೂ ಮುಳ್ಳಿನ ಹಾಸಿಗೆಯ ಮೇಲೆ ಕುಳಿತವನಂತಾಗಿತ್ತು. ಅವನ ಮನಸ್ಸಿನಲ್ಲಿ ಅಪೂರ್ವ ಯಾತನೆ ಮೂಡಿತ್ತು. ಕುಳಿತುಕೊಳ್ಳಲಾರ, ಏಳಲಾರ; ಸುಮ್ಮನಿರಲಾರ–ಮಾತಾಡದಿರಲಾರ;

ಶಾಂತನಾಗಿರಲಾರ–ರೇಗಾಡಲಾರ! ಅವನ ಮೈ ಬಿಸಿಯೇರಿ ಜ್ವರ ಪೀಡಿತ ಸಂತಾಗಿತ್ತು. ಮಂದಿರದ ನೃತ್ಯಶಾಲೆಯಲ್ಲಿ ಒಂದೇ ಸಮನೆ ಅತ್ತಿಂದಿತ್ತ ಇತ್ತಿಂದತ್ತ ಶತಪಥ ಸುತ್ತಾಡುತಿದ್ದ. ಅವನಿಗೆ ಅನ್ನ ರುಚಿಸದು, ನಿದ್ರೆ ಹತ್ತದು. ನಿರಾಶನಾಗಿ, ನಿರುಪಾಯನಾಗಿ, ಅಸಹಾಯಕನಂತೆ ಒದ್ದಾಡು ತಿದ್ದ. ಅವನ ಹೃದಯ ಉಕ್ಕಿಬಂದು, ರೋಷ ಚಿಮ್ಮಿ ಆರಿ, ಕಣ್ಣೀರು ಹರಿಯಿತು.

ಕಲ್ಯಾಣಿ ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರಳಾಗಿ ಬೆಳೆದ ಮಗು. ನಿಷ್ಕಲ್ಮಷ ಹೃದಯದ, ತೆರೆದ ಮನದ ಹಸುಳೆ. ತಾವೆಲ್ಲ ಎತ್ತಿ ಆಡಿಸಿ ಮುದ್ದಿಸಿ ಬೆಳೆಸಿದ ಕೈಗೂಸು ಅವಳು ಹೊರಟುಹೋಗುತ್ತಾಳೆ ಎಂದಾಗ ಅವನಿಗಾದ ಚಿಂತೆಯಿಂದ ಇದೀಗ ಚೇತರಿಸಿಕೊಂಡರೂ ಹೊಸ ಚಿಂತೆ ಅವನನ್ನು ಕಾಡುತಿತ್ತು.

ಎಲ್ಲರ ತೊಡೆಯ ಮೇಲೆ, ಮುಂದಿನ ಚಿಂತೆ ಇಲ್ಲದೆ ಬೆಳೆದ ಮಗು. ಇಂದು ತನ್ನ ಭವಿಷ್ಯವನ್ನೆಲ್ಲ ತಾನೇ ರೂಪಿಸಿ ರೂಢಿಸಿಕೊಳ್ಳಲು ಮುನ್ನಡೆಯು ತಿದ್ದಾಳೆ. ಆ ಮುಂದಿನ ದಾರಿ ಎಷ್ಟು ಕಠಿಣವಾಗಬಹುದೋ. ಅಲ್ಲಿನ ಕಲ್ಲು ಮುಳ್ಳುಗಳನ್ನು ಇದಿರಿಸಿ ಅಡೆತಡೆಗಳನ್ನು ಹಾದು ನಡೆಯುವ ಶಕ್ತಿ ಸಾಮರ್ಥ್ಯ ಅವಳಿಗಿದೆಯೇ? ತನಗರಿಯದ ಹೊಸ ದಾರಿಯಲ್ಲಿ ಹೊಸ ತೊಂದು ಬಿಸಿಲುಗುದುರೆಯನ್ನು ಬೆನ್ನಟ್ಟಿ ಸಾಗುತಿದ್ದಾಳೆ. ಒಮ್ಮೆ ದಾರಿ ತಪ್ಪಿದರೆ ಮುಂದೆ ಅದೇ ಬಾಳ ಬವಣೆಯಾದೀತು. ಇಂಥ ದುಃಖದ ಜೀವನದಲ್ಲಿ ತಾವೆಲ್ಲ ಸಲಹಿದ ಮಗು ಮುಳುಗಿದರೆ....ಎಂಬುದು ಅವನ ಚಿಂತೆ.

ಜತೆಗೆ ಗುರುವಿನ ಪಾಡು! ಕಲಾಮಂಡಲ ಕಲೆ ಎಲ್ಲವೂ ಅಮರ ವೆಂಬುದೇನೋ ನಿಜವಾಗಬಹುದು. ಆದರೆ ನಿಮಿಷ ನಿಮಿಷವೂ ಈ ಮಗು ವನ್ನಗಲಿ ಮಾಸ್ತರ್ ಇದ್ದವರಲ್ಲ. ಉಣ್ಣುವಾಗ, ಕುಳಿತಾಗ, ಪಾಠ ಹೇಳುವಾಗ, ನಿದ್ರಿಸುವಾಗ, ನಲಿಯುವಾಗ ಎಲ್ಲ ಕಾಲಗಳಲ್ಲೂ ಕಲ್ಯಾಣಿ ತನ್ನ ಜತೆಗೇ ಇರಬೇಕು. ಅವಳು ಬಂದು ಹಾಸಿಗೆಯ ಮೇಲೆ ಕುಳಿತು 'ಮಾವ....ನಿದ್ರಿಸಬಾರದೇ' ಎಂದಲ್ಲದೆ ಅವರಿಗೆ ನಿದ್ದೆಯೂ ಬಾರದು. ಪ್ರತಿ ನಿಮಿಷವೂ 'ಮಾವ' ಎಂಬ ಕೂಗು ಕೇಳುತಿದ್ದರೇ ಅವರ ಉತ್ಸಾಹ,

ಹುರುಪು. ಆ ಕೂಗು ಗುಂಗಾಡದೆ ಮನೋಸ್ಥೈರ್ಯವಿಲ್ಲ, ಮನಕ್ಕೆ ಶಾಂತಿಯಿಲ್ಲ, ಹೃದಯಕ್ಕೆ ಆನಂದವಿಲ್ಲ. ಇಂದು ಆ ಬಾಳು ಬರಡಾಗುವುದೇ. ಮಾಸ್ತರರನ್ನೂ ಜೀವಚ್ಛವವಾಗಿ ಮಾಡಿ, ಕಲಾಮಂಡಲದ ಬೆಳಕನ್ನು ಮಸಕಾಗಿಸಿ, ಎಲ್ಲರ ಹರುಷದ ಮೊಗದ ಮೇಲೆ ಬೇಸರದ ಬಲೆಬೀಸಿ ಮಾಯವಾಗುವಳೇ? ಯೋಚಿಸಿದಷ್ಟಕ್ಕೂ ಅವನ ದುಃಖ ಬೆಳೆಯಿತು; ಚಿಂತೆ ಹೆಚ್ಚಿತು. ಉದ್ವೇಗದಿಂದ ಮಾತನ್ನಾಡುತಿದ್ದಾಗ ಆ ಮಾತು ಪ್ರತಿಮಾತುಗಳ ಬಗೆಗೆ ಮಾತ್ರ ಯೋಚನೆ ಇರುತ್ತದೆ. ಮೌನ ತಳೆದಾಗ ಸಾವಿರ ಚಿಂತೆಗಳು ಮೂಡಿ ಮುಸುಕಿ ಪೀಡಿಸುತ್ತವೆ.

ಕಲ್ಯಾಣಿ ಹೊರಡಲು ನಿರ್ಧರಿಸಿದ್ದಳು; ಸಿದ್ಧತೆಯನ್ನು ನಡೆಸಿದ್ದಳು. ಆದರೆ ನಿನ್ನೆಯ ದಿನದ ಧೈರ್ಯ ನಿರ್ಧಾರಗಳು ಇಂದಿಲ್ಲ. ಅವಳ ನಿರ್ಧಾರ ತಾಸುಗಳು ಕಳೆದಂತೆಲ್ಲ ಸಡಿಲವಾಗುತ್ತಿರುವಂತೆ ಅವಳಿಗೇ ಭಾಸವಾಗುತಿತ್ತು. ಎಷ್ಟು ಮನಸ್ಸು ಗಟ್ಟಿಮಾಡಿದರೂ, ಮುಂದೇನು–ಈ ದಾರಿ ಸರಿಯೇ–ಇದು ಅಗತ್ಯವೇ ಎಂಬ ಪ್ರಶ್ನೆ ಅವಳ ಮನದಲ್ಲಿ ಮೂಡುತಿತ್ತು. ಮಾಸ್ತರರ ಪ್ರೀತಿ, ಸಿಂಹನ ವಿಶ್ವಾಸ, ಸಿಂಹನ ಮಡದಿಯ ಮಮತೆ ಅವಳ ಮುಂದೆ ನಿಂತು ಈ ತೋಳನ್ನು ತಳ್ಳಿ ಹೋಗಬೇಡ ಎಂದು ಕೂಗಿ ಹೇಳುತಿದ್ದುವು. ಇನ್ನೊಂದು ದಿನವೂ ಇಲ್ಲಿರಲಾಗದು; ನಿರ್ಧಾರವೆಲ್ಲ ಅಳಿದೀತು ಎಂಬ ಭೀತಿಯನ್ನು ಅವಳಲ್ಲಿ ಹುಟ್ಟಿಸುತಿದ್ದುವು.

ಕನ್ನಡನಾಡಿನ ನೃತ್ಯಕಲಾ ಲೋಕದ ಅನಭಿಷಿಕ್ತ ರಾಣಿ! ಎತ್ತ ನಡೆದರೂ ನನ್ನನ್ನು ಮೀರಿಸುವವರಿಲ್ಲ. ಚಿತ್ರರಂಗದಲ್ಲೂ ಇದೇ ಸ್ಥಾನ, ಮಾನ, ಕೀರ್ತಿ ದೊರೆಯಲಾರದೇ? ಸಾವಿರ ಸಾವಿರ ಗಳಿಸಿ ಬಾಳನ್ನು ಸುಖಮಯವಾಗಿ ಮಾಡಲು ಸಾಧ್ಯವಿಲ್ಲವೇ? ಅಲ್ಲಿ ದುಡಿದ ಹಣವನ್ನು ತಂದು ಇಲ್ಲಿ ಸುರಿದು ಕಲಾಮಂಡಲವನ್ನು ವಿಶ್ವವಿಖ್ಯಾತವಾಗಿ ಮಾಡಬಹುದು. ಇಂದು ಯವ್ವನವಿದೆ; ಕೀರ್ತಿಯ ಬೆಳಕು ಇನ್ನೂ ಇದೆ. ಈಗಲೇ ನಡೆಯದೆ ಮುಂದೆ ಯವ್ವನ ನಿಲ್ಲುವುದೇ? ತಾಯಿಯಾದ ಬಳಿಕ ಯಾವ ಸಾಹಸ ಸಾಧ್ಯ? ಯಾವ ಸೇವೆಗೆ ಎಡೆ ಇದೆ?

ಪ್ರತಿಯೊಂದು ಪ್ರಶ್ನೆಯೂ ಅವಳನ್ನು ಮುನ್ನಡೆಸಲು ಶಕ್ತವಾದ ಉತ್ತರವನ್ನೇ ನೀಡುತಿತ್ತು.

ಧೈರ್ಯ-ಅಧೈರ್ಯಗಳ ಹೋರಾಟಗಳು ತಡೆಯಿಲ್ಲದೆ ಅವಳ ಮನದಲ್ಲಿ ಸಾಗಿತ್ತು.

ತನ್ನ ಕೋಣೆಗೆ ನಡೆದು ಹಾಸಿಗೆಯ ಮೇಲೆ ಬಿದ್ದುಕೊಂಡಳು. ಯೋಚನೆಗಳ ಅಲೆಗಳು ಅಪ್ಪಳಿಸಿ ಅವಳನ್ನು ನಿಶ್ಶಕ್ತಳಾಗಿ ಮಾಡಿದ್ದುವು.

ಸಿಂಹ ಹಾಗೇ ಅತ್ತ ಕೋಣೆಯೊಳಕ್ಕೆ ಕಾಲಿಟ್ಟ. ತಲೆದಿಂಬಿನಲ್ಲಿ ತಲೆಯನ್ನು ಹುದುಗಿ ಮಲಗಿದ್ದ ಕಲ್ಯಾಣಿಯನ್ನು ಕಂಡು ಅವನ ರೋಷ ಆರಿತು, ಚಿಂತೆ ಅಳಿಯಿತು, ಕರುಣೆ ಮೂಡಿತು.

ಹತ್ತಿರ ಸರಿದು ಹಾಸಿಗೆಯ ಮೇಲೆ ಕುಳಿತುಕೊಂಡು ಸಿಂಹ ಅವಳ ತಲೆಯನ್ನು ನೇವರಿಸುತ್ತ ಹೇಳಿದ—

"ಮಗೂ...."

"ಸ್ವಾಮಿ...."

"ನಮ್ಮನ್ನೆಲ್ಲ ಬಿಟ್ಟು ಹೋಗುತ್ತೀಯಾ....?"

"........"

"ಮಾತನಾಡು ಮಗೂ....ಇನ್ನೆಂದಿಗೆ ನಿನ್ನನ್ನು ಕಾಣುತ್ತೇನೋ?"

"ಎಂದೆಂದಿಗೂ ಎಲ್ಲಿ ಹೋದರೂ ನಾನು ನಿಮ್ಮ ಕೈಗೂಸು ಸ್ವಾಮಿ."

"ಆ ನಂಬುಗೆ ನನಗಿದೆ ಕಲ್ಯಾಣಿ. ಆದರೆ, ಪ್ರೀತಿ ತುಂಬ ಕೆಟ್ಟುದು. ಅದಕ್ಕೆ ತನ್ನವರನ್ನು ದೂರ ಬಿಡುವ ಎದೆಗಾರಿಕೆಯೇ ಇಲ್ಲ."

"ನಿಜ ಸ್ವಾಮಿ. ಆದರೂ ನಾವು ದೂರವಾಗಲೇಬೇಕು."

"ಅಷ್ಟು ಆ ವಿರಹ ಅಗತ್ಯವಾಗಿದೆ ಎಂದರೆ ಈ ಮನಸ್ಸು ಒಪ್ಪುವುದಿಲ್ಲ...."

"ಸ್ವಾಮೀ....ನಿಮ್ಮ ಮಗಳು ಈಕೆ. ಗಂಡನ ಮನೆಗೆ ಹೊರಟಿದ್ದಾಳೆ ಎಂದು ತಿಳಿದು ಆಶೀರ್ವದಿಸಿ."

"ಹಾಗೇ ಆಗಲಿ ಮಗೂ. ನೀನು ಹೋಗುವ ಮನೆ ತುಂಬಲಿ; ನಿನ್ನ ಬಾಳು ಬೆಳಗಲಿ."

"ನಿಮ್ಮ ಆಶೀರ್ವಾದದ ಬೆಳಕಿನಲ್ಲಿ ನಾನು ಬದುಕುತ್ತೇನೆ ಸ್ವಾಮಿ."

"ಮಗೂ...."

"ಸ್ವಾಮಿ...."

"ಮಾಸ್ತರ್ ಬಂದ ಮೇಲೆ ಹೊರಡಬಹುದಲ್ಲ ಇಷ್ಟೇಕೆ ಅವಸರ? ಕಲ್ಯಾಣಿ....ಎಂದು ಅವರು ಕರೆದಾಗ ನಾನೇನೆನ್ನಲಿ. ಕಲ್ಯಾಣಿ ಎಲ್ಲಿ ಎಂದಾಗ ನಾನೇನು ಉತ್ತರವೀಯಲಿ? ನನ್ನ ಕಲ್ಯಾಣಿಯನ್ನು ಏಕೆ ಹೋಗಗೊಟ್ಟೆರಿ, ಏಕೆ ಕೈಬಿಟ್ಟೆರಿ, ಏಕೆ ತಬ್ಬಲಿಯಾಗಿ ಮಾಡಿದಿರಿ ಎಂದರೆ ನಾನು ಯಾವ ಉತ್ತರ ನೀಡಲಿ ..."

"........"

"ಮಾತನಾಡು....ಕಲ್ಯಾಣಿ....ನನಗೆ ಉತ್ತರ ಹೇಳು."

"........"

"ಯಾಕೆ ಮಾತನಾಡುವುದಿಲ್ಲ?"

ಕಲ್ಯಾಣಿ ತನ್ನ ಮುಖವನ್ನು ನಿಧಾನವಾಗಿ ತಿರುಗಿಸಿ ಸಿಂಹನ ಕಡೆಗೆ ನೋಡಿದಳು. ಅವಳ ಕಣ್ಣೀರು ಕೆನ್ನೆಗಳನ್ನು ತೊಯಿದಿತ್ತು.

"ಇದೇ ಉತ್ತರವೇ? ನಾನು ಬಲ್ಲೆ ಕಲ್ಯಾಣಿ. ನೀನೂ ಉತ್ತರ ವೀಯಲಾರೆ. ನೀನೂ ಅವರ ಮುಂದೆ ನಿಂತು ಮಾತನಾಡಲಾರೆ. ಅವರಿದ್ದಾಗ ಹೊರಟುಹೋಗಲಾರೆ. ಅವರು ನಿನ್ನನ್ನುಳಿದರೆ, ರಾಮನನ್ನುಳಿದ ದಶರಥನಂತಾಗಬಹುದು."

"ನಿಜ ಸ್ವಾಮಿ. ಅದಕ್ಕೆ ಈಗ ಹೊರಟಿದ್ದೇನೆ."

ಸಿಂಹನ ನೆನಕೆ ನಿಜವಾಗಿತ್ತು. ಮಾಸ್ತರ್ ಬಂದ ಬಳಿಕ ಹೊರಡುವುದು ಅವಳಿಂದ ಸಾಧ್ಯವಿರಲಿಲ್ಲ. ಅದಕ್ಕೆ ಅವರು ತಿರುವಾಂಕೂರಿಗೆ ಹೊರಟಿದ್ದ ಈ ಸಂದರ್ಭದಲ್ಲೇ ಕಲಾಮಂಡಲವನ್ನುಳಿದು ಹೊರಡಲು ಕಲ್ಯಾಣಿ ನಿರ್ಧರಿಸಿದ್ದಳು. ಸಿಂಹ ಕಲ್ಯಾಣಿಯ ಕಣ್ಣುಗಳನ್ನೊರಸುತ್ತ ತಲೆಯನ್ನು ನೇವರಿಸುತ್ತ ಉತ್ತರಿಸಿದ.

"ನಿನ್ನ ನಿರ್ಧಾರ ಬದಲಿಸಲಾರೆಯಾ?"

"ಅದು ಹೇಗೆ ಸಾಧ್ಯ ಸ್ವಾಮಿ?"

"ಆಗಲಿ....ನಾನು ಅಡ್ಡಿ ಬರುವುದಿಲ್ಲ."

ಕಲ್ಯಾಣಿಯ ಮುಖದಲ್ಲಿ ಮುಗುಳುನಗೆ ಕಾಣಿಸಿಕೊಂಡಿತು. ಅವಳು ಎದ್ದು ನಿಂತಳು; ಹರ್ಷದಿಂದ ಉಬ್ಬಿದಳು. 'ಸಿಂಹನ ಕಾಲಿಗೆ ಬಿದ್ದು ನಮಸ್ಕರಿಸಿ ಹೇಳಿದಳು—"ಆಶೀರ್ವದಿಸಿ ಸ್ವಾಮಿ."

ಅವಳಲ್ಲಿ ನವಚೇತನ ತುಂಬಿತು. ಉತ್ಸಾಹದಿಂದ ಎದ್ದು ಸಿಂಹನ ಬಳಿಯಲ್ಲೇ ಕುಳಿತಳು.

"ನನ್ನದೂ ಒಂದು ಬಯಕೆ ಇದೆ ಮಗೂ. ಅದನ್ನು ನೀನು ಈಡೇರಿಸಿ ಕೊಡಬೇಕು."

"ಈ ಬಾಳು ಮೀಸಲು ಸ್ವಾಮಿ."

"ನೃತ್ಯ ನಿನ್ನ ಸರ್ವಸ್ವ. ಅದು ನಿನ್ನನ್ನು ಇಂದಿನ ಸ್ಥಿತಿಗೆ ಮುಟ್ಟಿಸಿದ ಪುರುಷ. ನೀನಿಂದು ನೃತ್ಯರಾಜಿ."

"ನಿಜ ಸ್ವಾಮಿ."

"ಅದನ್ನು ಉಳಿಸಿಕೊಳ್ಳು. ಮರೆಯಬೇಡ. ಅದೇ ನಿನ್ನ ಸರ್ವಸ್ವ-ಜೀವನಾಧಾರ."

"ಆಗಲಿ ಸ್ವಾಮಿ."

"ಚಿತ್ರ ಪ್ರಪಂಚದಲ್ಲಿ ನೀನು ನರ್ತಕಿಯಾಗೇ ಇದ್ದಾಗ ಅದನ್ನೇನೂ ನೀನು ಬಿಡುವಂತಿಲ್ಲ. ಆದರೆ ಅಭಿನಯದೆಡೆ ನಡೆದು, ನಟಿಯಾದಾಗ, ನೃತ್ಯಕ್ಕೆ ಪ್ರಾಶಸ್ತ್ಯ ಕಡಿಮೆಯಾದಾಗ, ನಾನಾ ಕಾರಣಗಳಿಂದ ನೀನದನ್ನು ಬಿಡಬಹುದು."

"ಹಾಗೆ ಮಾಡುವುದಿಲ್ಲ ಸ್ವಾಮಿ."

"ಅಷ್ಟು ಸಾಕು ಈ ಭರವಸೆ ಮರೆಯಬೇಡ."

"ಮರೆಯುವುದಿಲ್ಲ ಸ್ವಾಮಿ."

ಅತೃಪ್ತಿಯಿಂದ ದುಃಖದಿಂದ ಬೇಯುತಿದ್ದ ಹೃದಯಕ್ಕೆ ತಾನಾಗಿಯೇ ತೃಪ್ತಿಯನ್ನೂ ನೆಮ್ಮದಿಯನ್ನೂ ಸಿಂಹ ತಂದುಕೊಂಡ.

ಕಲ್ಯಾಣಿಯು, ಪರಿಸ್ಥಿತಿ ಇಷ್ಟು ಸುಲಭವಾಗಿ ಬಗೆಹರಿಯುವುದು, ಸಿಂಹನವರನ್ನು ಒಪ್ಪಿಸಿ ಅವರಿಂದ ಆಶೀರ್ವಾದ ಪಡೆದು ತಾನು ಹೊರಡುತ್ತೇನೆ ಎಂದು ಕನಸಿನಲ್ಲೂ ನೆನೆಸಿರಲಿಲ್ಲ. ಅವರಲ್ಲಾದ ಈ ಬದಲಾವಣೆಯನ್ನು ನಂಬುವುದೇ ಅವಳಿಗೆ ಕಷ್ಟವಾಯಿತು. ಅವರ ಬಗೆಗೆ ತನ್ನಲ್ಲಿ ತುಂಬಿದ ಅಪಾರ ಅಭಿಮಾನ ತೋರ್ಪಡಿಸುವುದೇ ಹೇಗೆಂದು ಅವಳಿಗೆ ಅರ್ಥವಾಗಲಿಲ್ಲ. ಆನಂದದಿಂದ ಅವಳು ಉಬ್ಬಿಹೋದಳು. ನಲಿದಾಡಿದಳು. ನೇರಾಗಿ ಅಡುಗೆ ಮನೆಗೆ ಧಾವಿಸಿ, ಸಿಂಹನ ಮಡದಿಯ ಕಾಲು ಮುಟ್ಟಿ ನಮಸ್ಕರಿಸಿದಳು.

" ಅಕ್ಕ-ಅಣ್ಣನ ಅಪ್ಪಣೆಯಾಯಿತು."

" ದೇವರು ನಿನಗೆ ಒಳ್ಳೆಯದು ಮಾಡಲಿ ಕಲ್ಯಾಣಿ. ಎಂದೆಂದಿಗೂ ನಮ್ಮನ್ನು ಮರೆಯಬೇಡ; ನಿನ್ನ ಮಾಸ್ತರರನ್ನು ಮರೆಯಬೇಡ."

" ಇಲ್ಲ ಅಕ್ಕ."

" ಅದೇ ನಿನ್ನನ್ನು ಎಲ್ಲ ಸಂಕಟಗಳಿಂದಲೂ ಪಾರುಮಾಡುವ ರಕ್ಷಾ ಕವಚ."

" ನಿಜ....ಅಕ್ಕ."

" ಎಚ್ಚರಿಕೆಯಿಂದ ಜೀವನ ನಡೆಸು, ಯೋಚಿಸಿ ಹೆಜ್ಜೆ ಇಡು. ವಿಚಾರಮಾಡಿ ನಿರ್ಧರಿಸು."

" ಆಗಲಿ ತಾಯಿ...."

ಕಲ್ಯಾಣಿ ಮಾತನಾಡುತಿದ್ದಂತೆ ಹಾಲಿನ ಪಾತ್ರೆಯಿಂದ ಒಂದು ಲೋಟಾ ಹಾಲು ತುಂಬಿಕೊಂಡಳು. ಅವಳು ಹರ್ಷೋನ್ಮಾದದಿಂದ ಮೈ ಮರೆತಿದ್ದಳು; ನಲಿದಾಡುತಿದ್ದಳು.

ಅಡುಗೆ ಮನೆಯಿಂದ ನೇರಾಗಿ ತನ್ನ ಕೋಣೆಗೆ ಹಿಂತಿರುಗಿದಳು. ಸಿಂಹ ನಡೆದುಹೋದುದನ್ನು ಪುನಃ ಪುನಃ ಯೋಚಿಸುತ್ತ ಅಲ್ಲೇ ಕುಳಿತಿದ್ದ. ಕಲ್ಯಾಣಿ ಹಾಲಿನ ಬಟ್ಟಲನ್ನು ಅವನ ಕೈಗಿತ್ತಳು.

" ಕುಡಿಯಬೇಕು ಸ್ವಾಮಿ. ಇಂದಿಗೆ ನನ್ನ ಬಾಳು ಕೃತಾರ್ಥ ವಾಯಿತು. ನನ್ನ ಭವಿಷ್ಯದ ಸಾವಿರ ಮೋಡಗಳು ಮರೆಯಾದವು. ನಿಮ್ಮ ಪೂರ್ಣ ಆಶೀರ್ವಾದ ದೊರೆಯಿತು."

ಸಿಂಹ ಕಲ್ಯಾಣಿಯನ್ನು ಬರಸೆಳೆದು ಪಕ್ಕದಲ್ಲೇ ಕುಳ್ಳಿರಿಸಿಕೊಂಡು ಅವಳ ಬೆನ್ನ ಮೇಲೆ ಕೈಯಾಡಿಸುತ್ತಾ ಹಾಲನ್ನು ಕುಡಿದ. ಅವನು ಪೂರ್ಣ ಶಾಂತನಾಗಿದ್ದ.

" ಹೊರಡುವ ಸಿದ್ಧತೆ ನಡೆಸಿದ್ದೀಯಾ....? "

" ಹೌದು ಸ್ವಾಮಿ."

" ಕೃಷ್ಣನನ್ನು ಬರಹೇಳು."

" ಆಗಲಿ...."

"ಇಂದು ಸಂಜೆ ಕಲಾಮಂದಿರದಲ್ಲಿ ಪೂಜೆ ನಡೆಯಬೇಕು. ಅದು ನನ್ನ ಮಗುವಿನ ಭವಿಷ್ಯದ ಪುಣ್ಯಕ್ಕಾಗಿ. ಇಂದು ನೀನು ನರ್ತಿಸಬೇಕು–ಅದು ನಾಟ್ಯಸರಸ್ವತಿಯ ಆಶೀರ್ವಾದ ಪಡೆಯುವುದಕ್ಕಾಗಿ. ಇಂದು ಕೃಷ್ಣ ಹಾಡಬೇಕು–ಅದು ಅವನ ಮತ್ತು ನಿನ್ನ ಕಲ್ಯಾಣಕ್ಕಾಗಿ."

"ಆಗಲಿ ಸ್ವಾಮಿ."

"ನಿನ್ನ ತಾಯಿ, ವಾಗ್ದೇವಿ, ನಾಟ್ಯಸರಸ್ವತಿ, ನಿನ್ನ ಬೆಂಬಲಕ್ಕೆ ನಿಲ್ಲುತ್ತಾಳೆ ಮಗೂ. ಪೂರ್ಣ ಹೃದಯದಿಂದ ಅವಳನ್ನು ನಂಬು, ಬೇಡಿಕೊಳ್ಳು.

"ಆಗಲಿ ಸ್ವಾಮಿ, ಅವಳ ಕರುಣೆ, ತಮ್ಮ ಹರಕೆ."

"ನಮ್ಮ ಬಯಕೆ–ಮಗೂ."

೩

ಮಂಜುನಾಥ ಭಾಗವತರ ಹೆಸರು ಕೇಳದವರೇ ನಮ್ಮಲ್ಲಿಲ್ಲ. ಬಲಿಪ ಭಾಗವತರನ್ನು ಬಿಟ್ಟರೆ, ಇನ್ನೊಬ್ಬ ಯಕ್ಷಗಾನ ಭಾಗವತ ನಮ್ಮಲ್ಲಿ ಅವರೇ.

ಮಂಜುನಾಥ ಮೊದಲಿನಿಂದಲೂ ಹಟಮಾರಿ. ಯಾರಿಂದಲೂ ಸಾಧಿಸಲಾಗದುದನ್ನು ತಾನು ಸಾಧಿಸುತ್ತೇನೆ ಎಂದುಕೊಂಡು ಬಲಿಪ ಭಾಗವತರ ಹಾಡಿಗೆ ಸೋತು ಅವರ ಶಿಷ್ಯರಾದವರು. ವೀಳ್ಯದೆಲೆ ಅಡಿಕೆಯ ಪೆಟ್ಟಿಗೆ ಹೊತ್ತುಕೊಂಡು, ಗುರುವಿನ 'ಗಂಟೆಕೋಲು'ಗಳನ್ನು ಎತ್ತಿಕೊಂಡು, ಶಿಷ್ಯವೃತ್ತಿ ಮಾಡಿದರು. ಗುರು ಬಯಸಿದಾಗಲೆಲ್ಲ ವೀಳ್ಯದೆಲೆಗ ಸುಣ್ಣ ಹಚ್ಚಿ ಮಡಚಿಕೊಡುವ ಕೆಲಸ ಅವರದು. ಅವರೇನಾದರೂ ಹೇಳಿಕೊಟ್ಟರೆ ಕೇಳಿಕೊಂಡು ತಿದ್ದಿಕೊಳ್ಳುವುದು. ಅವರು ಪ್ರಸಂಗ ಹೇಳುತಿದ್ದರೆ ಬಾಯಿ ತೆರೆದು ಕಿವಿ ನಿಮಿರಿ ಕೇಳುತ್ತ ಕುಳಿತುಕೊಳ್ಳುವುದು. ಬಯಲಾಟದ ಮೇಳ ಹೋದಲ್ಲೆಲ್ಲ ಹೋಗಬೇಕು; ತಾಳಮದ್ದಳೆ ಕೂಟಗಳಾಗುವೆಡೆಗೂ ನಡೆಯಬೇಕು.

ಶಿಷ್ಯವೃತ್ತಿಯ ಜತೆಗೇ ಮಂಜುನಾಥ ಮದ್ದಳೆಯ ಮೇಲೂ ಕೈಯಾಡಿಸಿದರು. ಒಂದು ವರ್ಷದಲ್ಲೇ ಭಾಗವತರ ಜತೆಗೆ ಕುಳಿತುಕೊಳ್ಳುವಷ್ಟು ಪಾಂಡಿತ್ಯವೂ ಅವರದಾಯಿತು. ಇಡೀ ರಾತ್ರಿ ಮದ್ದಳೆಗ ಭಾಗವತರ

ಜತೆಗೇ ಇರಬೇಕಾಗುತ್ತದೆ. ಒಂಭತ್ತು ಘಂಟೆಗೆ ರಂಗಸ್ಥಳದ ಮೇಲೆ ಕಾಲಿಟ್ಟವರು ಬೆಳಗಿನ ತನಕ ಅಲ್ಲೇ ಇರಬೇಕಾಗುತ್ತದೆ. ಭಾಗವತರದೂ ಇದೇ ಪಾಡು. ಮಂಜುನಾಥ ಮದ್ದಳೆಯವನಿಗೆ ಸಹಾಯ ಮಾಡಿದರು. ತಾವೇ ಭಾಗವತರಿಗೂ ಬಿಡುವು ಮಾಡಿಕೊಟ್ಟರು ನಾಲ್ಕಾರು ವರ್ಷ ಗಳಲ್ಲೇ ಅವರ ಕೀರ್ತಿ ಹರಡಿತು.

ಹಗಲಿರುಳೂ ದುಡಿದು ಹತ್ತು ವರ್ಷಗಳ ಶಿಷ್ಯವೃತ್ತಿ ಮಾಡಿ, ಮಂಜು ನಾಥ ತಾನೇ ಭಾಗವತ ಅನ್ನಿಸಿಕೊಂಡರು.

ಅವರ ಸಂಸಾರ ರಥವೂ ಸಿದ್ಧವಾಗಿ ಹೊರಟಿತು. ಕಲಾರಂಗದ ಎಲ್ಲ ಪವಾಡಗಳನ್ನೂ ಎಲ್ಲರ ವಿಚಾರಗಳನ್ನೂ ಬಲ್ಲ ಮಂಜುನಾಥ ತನ್ನ ಜೀವನ ವನ್ನು ಶಿಸ್ತಿನ ಕಡಿವಾಣದಿಂದ ಬಿಗಿಯಲು ಮರೆಯಲಿಲ್ಲ. ತನ್ನ ಗುರು ಗಳಿಂದ ತೊಡಗಿ, ಚಿಕ್ಕಪುಟ್ಟ ಪಾತ್ರಧಾರಿಗಳವರೆಗೆ ಎಲ್ಲರ ಜೀವನವೂ ಅವರ ಕಣ್ಣು ಮುಂದೆ ಸುಳಿದಿತ್ತು.

ತಾನೂ ಭಾಗವತನಾಗಬೇಕು. ಬಲಿಪರಂತೆ ಕೀರ್ತಿಶಾಲಿಯಾಗ ಬೇಕು. ಎಲ್ಲೆಲ್ಲೂ ಮೆರೆಯಬೇಕು ಎಂಬ ಹುಚ್ಚು ಅವರನ್ನು ಈ ರಂಗಕ್ಕೆ ಸೆಳೆಯಿತು. ಇಲ್ಲಿ ದುಡಿದು ಹಣ್ಣಾಗಿ ಅನುಭವ ಬಂದಂತೆ, ಹೋದಲ್ಲಿ ಮನೆ, ತಿಂದುದೇ ಅನ್ನ, ಎಂಬಂತಾದಂತೆ ಈ ಹುಚ್ಚು ಕಡಿಮೆಯಾಗುತ್ತ ಬಂತು. ತನ್ನದಂತೂ ಇದೇ ದಾರಿ; ತನ್ನ ಮಕ್ಕಳಿಗೆ ಈ ನರಕ ಬೇಡ ಎಂದು ಅವರೇ ಅನ್ನತೊಡಗಿದರು.

ವರ್ಷದಲ್ಲಿ ಆರು ತಿಂಗಳು ಬಯಲಾಟ; ಮಳೆಗಾಲದ ನಾಲ್ಕು ತಿಂಗಳು ವಿರಾಮ. ಈ ನಡುವೆ ತಾಳಮದ್ದಳೆ. ಅಂತೂ ವರ್ಷದಲ್ಲಿ ಸುಮಾರು ನೂರು ದಿನಗಳ ದುಡಿಮೆ; ಇತರ ದಿನಗಳಲ್ಲಿ ವಿರಾಮ. ಆದರೂ, ಕೀರ್ತಿಗಳಿಸಿ, ರಸಭಾವ ಪ್ರತಿಯೊಬ್ಬ ಪ್ರೇಕ್ಷಕನಲ್ಲೂ ಪರಿಣಾಮವನ್ನುಂಟು ಮಾಡುವಂತೆ ಹಾಡುವ ಶಕ್ತಿ ದೊರಕಿಸಿಕೊಂಡಿದ್ದ ಮಂಜುನಾಥ ಭಾಗವತ ರಿಗೆ ಅಷ್ಟೇ ದುಡಿತ ಸಾಕಾಗಿತ್ತು. ವರುಷದ ಅನ್ನವನ್ನು ಅದು ಒದಗಿಸು ತ್ತಿತ್ತು. ಅವರ ಜೀವನ ಸುಖವಾಗಿ ಸಾಗಿತ್ತು.

ಹಿರಿಯರಿಂದ ಬಂದ ಕೊಂಚ ಹೊಲ, ನೆಲ, ಮನೆ, ಕಲಾಸೇವೆಯ ಪ್ರತಿಫಲ, ಶಿಸ್ತಿನ ನಿಯಮಬದ್ಧವಾದ ಜೀವನ–ಇವುಗಳಿಂದಾಗಿ ಮಂಜು ನಾಥ ಕೊರತೆಯನ್ನು ಕಾಣದೆ ತಾಪತ್ರಯಗಳಿಂದ ಬೇಯದೆ ಬಾಳಿದರು.

ಅವರ ಕೀರ್ತಿ ಎಲ್ಲೆಡೆಯೂ ಹರಡಿದ್ದಾಗ ಜನಿಸಿದವನು ಕೃಷ್ಣ. ತನ್ನ ದಾರಿಯನ್ನಾತ ಹಿಡಿಯಬಾರದೆಂದು ಅವನನ್ನು ಓದಿಸಿದರು. ಹಿರಿಯರಿಂದ ಬಂದ ಪದ್ಧತಿ–ಎಂದು ಅಮರಕೋಶ, ಪುರಾಣ, ಪೂಜೆ ಮಂತ್ರಗಳನ್ನೂ ತುಳು ಬರೆಹವನ್ನೂ ಕಲಿಸಿಕೊಟ್ಟರು. ತಾನು ಮುಳುಗಿನಿಂತ ಕಲೆಯಲ್ಲಿ ಅವನಿಗೂ ಪಾಲುಕೊಡದಿರಲು ಸಾಧ್ಯವಿಲ್ಲದಾಗಿ ಮೃದಂಗದ ಅಭ್ಯಾಸವನ್ನು ಮಾಡಿಸಿದರು.

ತಂದೆಯ ಒತ್ತಾಯಕ್ಕೆ ಶಾಲೆ ಸೇರಿ ಕಲಿಯುತ್ತಿದ್ದರೂ ಕೃಷ್ಣನ ಒಲವೆಲ್ಲ ಬಯಲಾಟದ ಕಡೆಗೇ ಹರಿದಿತ್ತು. ಯಕ್ಷಗಾನ ಹಾಡುಗಳು ಅವನಿಗೆ ಬಾಯಿಪಾಠ ಬಂದಷ್ಟು ಸುಲಭವಾಗಿ ಅಮರಕೋಶ ಒಲಿಯಲಿಲ್ಲ. ಜೈಮಿನಿ ಭಾರತದ ಹಾಡುಗಳು ಮೆಚ್ಚಿದಂತೆ ಮಂತ್ರ ಮೆಚ್ಚುಗೆಯಾಗಲಿಲ್ಲ.

ಮಗನನ್ನು ತಿದ್ದಲು ಯತ್ನಿಸಿ ಕೊನೆಗೆ ತನ್ನ ಹಿಂದಣ ಕಥೆಗಳನ್ನೇ ನೆನೆದುಕೊಂಡು ಅವರು ಸುಮ್ಮನಾದರು. ತನ್ನ ದಾರಿಯನ್ನೇ ಮಗನೂ ಹಿಡಿಯುತ್ತಾನೆ; ಹಿಡಿಯಬಾರದೆಂದು ನಾನು ಯತ್ನಿಸಿ ಫಲಿತವಿಲ್ಲ. ಅವನೇ ಅನುಭವಿಸಲಿ. ಆದರೂ ವಿದ್ಯೆ ಕಲಿಸಿ ಬೇರೆ ದಾರಿ ಹಿಡಿಯುವ ಶಕ್ತಿ ಅವನಿಗೆ ಒದಗಿಸುವುದು ತನ್ನ ಕರ್ತವ್ಯವೆಂದು ಅವನ ವಿದ್ಯಾಭ್ಯಾಸಕ್ಕೆ ತೊಡಕಾಗದಂತೆ ನೋಡಿಕೊಂಡರು.

ಮಂಜುನಾಥ ಕಲಿತುದು ಐದನೇ ದರ್ಜೆ. ಅವರ ಕಾಲಕ್ಕೆ ಅಷ್ಟೇ ಸಾಕಾಗಿತ್ತು. ಅವರು ತಿಳಿದಿದ್ದ ಭಾಷೆ–ಲಿಪಿ ಕನ್ನಡ ಮತ್ತು ತುಳು ಮಾತ್ರ. ಪುರಾಣಗಳನ್ನು ಅರ್ಥಮಾಡಿಕೊಳ್ಳಲು ಅಷ್ಟು ಸಾಕಾಗಿತ್ತು. ಓದಿಗೆ ಶರಣು ಹೊಡೆದು ಯಕ್ಷಗಾನದ ಮೇಳದ ಹಿಂದೆ ನಡೆಯಲು ಮೊದಲು ಮಾಡಿದಾಗ ತಾನು ಓದಿದುದು ಕಡಿಮೆಯಾಯಿತೆಂದು ಅವರಿಗೆ ತೋರಿಬರಲಿಲ್ಲ. ಇನ್ನೂ ಓದಬೇಕಾಗಿತ್ತು, ನಾಲ್ಕಕ್ಷರ ಇಂಗ್ಲೀಷು ತಿಳಿದಿದ್ದರೆ ಚೆನ್ನಾಗಿತ್ತು, ಸಂಸ್ಕೃತ ಓದಿದ್ದರೆ ಒಳ್ಳೆಯದಿತ್ತು ಎಂದು ಆಗಾಗ ಕೊರಗುತ್ತಲೂ ಇದ್ದರು. ಈ ಚಿಂತೆ ಅವರನ್ನು ನಿರಾಶೆಯೆಡೆ ತಳ್ಳದೆ ಆಶಾವಾದಿಯಾಗಿಸಿ ಹೆಚ್ಚು ವಿಚಾರಗಳನ್ನು ತಿಳಿಯುವಂತೆ ಮಾಡಿತು. ಪುನಃ ಶಾಲೆಗೆ ಹೋಗುವುದು ಸಾಧ್ಯವಿಲ್ಲದಾಗ ಮನೆಯೇ ಶಾಲೆ, ಓದಿದವರೆಲ್ಲ ಗುರುಗಳು ಎಂದು ತಿಳಿದು ದುಡಿದರು ಅವರು.

ಬಲಿಪ ಭಾಗವತರ ಜತೆ ಸೇರಿ ಅವರ ಶಿಷ್ಯರಾದಾಗ ಅವರಿಗಿನ್ನೂ ಹದಿನಾರು ವಯಸ್ಸು. ತುಂಟ ಹುಡುಗ, ಗೂಳಿಯ ಹಾಗೆ ಸುತ್ತಾಡಿ ಕೊಂಡಿರಬಹುದೆಂದು, ಈ ಮೇಳ ಸೇರಿದ್ದಾನೆ ಎಂದು ಮೇಳದವರಿಗೆಲ್ಲ ತೋರಿತ್ತು. ಬಯಲಾಟಗಳನ್ನ ವರುಷಗಟ್ಟಲೆ ನೋಡಿ, ಹಿಡಿದಿದ್ದ ಹುಚ್ಚು: ಬಲಿಪರ ಹಾಡುವಿಕೆಯನ್ನು ಹಾಗೇ ಕೇಳಿ ಹುಟ್ಟಿದ ಮೆಚ್ಚು: ಎಲ್ಲ ಸಂಕಟಗಳನ್ನು ಇದಿರಿಸಿ ಈ ದಾರಿ ತುಳಿಯಲು ಬೇಕಾದ ಹಟಮಾರಿ ತನವನ್ನು ಅವರಲ್ಲಿ ಬೆಳೆಸಿತ್ತು. ಗಂಜಿ ದೊರೆತರೆ ಸಾಕು ಮೇಳದಲ್ಲಿರು ತ್ತೇನೆ, ಕಲಿತುಕೊಳ್ಳುತ್ತೇನೆ ಎಂದು ಅವರು ನಿರ್ಧರಿಸಿದರು

ಗುರುಗಳ ಗಂಟೆ-ಕೋಲುಗಳನ್ನು ಹಿಡಿದುಕೊಂಡು ಅವರ ಹಿಂದೆಯೇ ನಡೆಯುತಿದ್ದ ಮಂಜುನಾಥ ತನ್ನ ವಿನಯ ಸೂಕ್ಷ್ಮಬುದ್ಧಿಗಳಿಂದ ಗುರು ಗಳನ್ನು ಸೆಳೆದುಕೊಂಡ. ಬಲಿಪರೂ 'ಮಾಣಿ', 'ಸಂಚಿಯವನ' ಸ್ಥಾನ ದಿಂದ ಅವರನ್ನು ಮೇಲಕ್ಕೆತ್ತಿದರು. ಯಾವ ಶಿಷ್ಯನೂ ಆಸಕ್ತಿ ವಹಿಸಿ ಕಲಿಯುವುದಿಲ್ಲ, ಇವರೆಲ್ಲ 'ಬಯಲಾಟ'ದ ಹುಚ್ಚು ಹಿಡಿದವರು ಎಂಬ ಅವರ ಅಭಿಪ್ರಾಯ ಬದಲಾಯಿತು. ಮಂಜುನಾಥ ಗುರುವಿನ ಆತ್ಮೀ ಯತೆಗೆ ಒಳಗಾಗಿ ತನ್ನ ಅನುಭವ ಬೆಳೆಸಿಕೊಂಡರು.

"ಹಿರಣ್ಯಾಕ್ಷನಿದ್ದನಲ್ಲ........ನೋಡು ಮಂಜೂ, ತನ್ನ ನಿರ್ಧಾರವ ನ್ನೆಂದೂ ಬದಲಿಸದ ಹಟಮಾರಿ ಅವನು. ಸ್ವಾಭಿಮಾನಿ, ಅಹಂಕಾರಿ, ಯಾರಿಗೂ ತಲೆಬಾಗದ ಮಹಾಪುರುಷ. ಮನುಷ್ಯನಿಂದ ಸಾಧ್ಯವಾಗದುದು ಯಾವುದೂ ಇಲ್ಲ; ನಾನಂತೂ ಸರ್ವಶಕ್ತ, ಎಲ್ಲೆಲ್ಲೂ ವಿಜಯಸಾಧಿಸಿ ದವನು, ಜಗತ್ತೇ ತನ್ನಿದಿರು ಮಣಿವಾಗ ಮನೆಯವರೂ ಮಣಿಯಲೇ ಬೇಕೆಂಬ ಹುಚ್ಚು ಅವನಿಗೆ. ಊರಿನ ಎಲ್ಲರನ್ನೂ ಬೆದರಿಸಿ ನಡುಗಿಸುತಿದ್ದ ಪೋಲೀಸ್ ಇನ್ಸ್‌ಪೆಕ್ಟರ್ ಆದರೂ ಹೆಂಡತಿಗೆ ತಾನೇ ಹೆದರುವುದಿಲ್ಲವೇ? ಅವನ ಮಕ್ಕಳೇ ಅವನ ಆಜ್ಞೆ ಉಲ್ಲಂಘಿಸುವುದಿಲ್ಲವೇ? ಇಷ್ಟು ಸತ್ಯ ತಿಳಿಯಲೂ ನಿರಾಕರಿಸಿತ್ತು, ಹಿರಣ್ಯಾಕ್ಷನ ಮನಸ್ಸು. ಅವನೆದುರು ತಲೆ ಎತ್ತಿ ನಿಂತವರೇ ಇರಲಿಲ್ಲ, ಇದಿರಾಗಿ ಗೆಲ್ಲುವ ವೀರರಿಲ್ಲ, ಅವನು ಗಂಡು ದೊರೆ. ಅಂಥವನ ಸರ್ವ ಅಹಂಭಾವಗಳನ್ನು ಮುರಿಯಲು ಅವನ ಮಗನೇ ಮುಂದಾದಾಗ ಅವನ ಸ್ಥಿತಿ ಹೇಗಾಗಿರಬಹುದು? ಇದಿರಿಸದಿದ್ದರೆ

ಸಾಧ್ಯವಿಲ್ಲ, ಅಂಥ ವಿರೋಧಿಯನ್ನು ಹುಡಿಗೊಡಲೇಬೇಕು. ಆದರೆ–ಆತ ತನ್ನ ಮಗ, ತಾನು ಮುದ್ದಿಸಿ ಸಲಹಿದ ಕೂಸು! ನೀನು ನನ್ನ ಶಿಷ್ಯ, ನೀನೇ ನನಗೆ ಇದಿರಾಡಿ ನಿಂತರೆ ನನ್ನ ಗತಿ ಹೇಗಾದೀತು?

“ ಇಷ್ಟು ವಿಚಾರ ಮಾಡಿದಾಗ ಹಿರಣ್ಯಾಕ್ಷನ ವ್ಯಕ್ತಿತ್ವ ನಿನಗೆ ತಿಳಿಯುತ್ತದೆ. ಅವನ ಸಂಕಟದ ಅರಿವಾಗುತ್ತದೆ. ಅವನ ಮಗನ ದಾರಿ ತಿಳಿಯುತ್ತದೆ–ಅಲ್ಲವೇ? ಈಗ ಅದೇ ಹಾಡನ್ನು ಹಾಡು....”

ಎಂದು ಬಲಿಪರು ಪುರಾಣದ ಪ್ರತಿಯೊಬ್ಬ ವ್ಯಕ್ತಿಯ ಬಗೆಗೂ ತಿಳಿಸಿ ಹೇಳಿ, ಮಂಜುನಾಥನನ್ನು ತಿದ್ದುತಿದ್ದರು.

ಬಯಲಾಟ ನಡೆಯುತಿದ್ದಾಗ ತಾನು ಹೊರಗಡೆ ಹೋಗಬೇಕಾದಾಗ ಬಲಿಪರು ಮಂಜುನಾಥನ ಕೈಗೆ ಗಂಟೆ-ಕೋಲು ಕೊಟ್ಟು ಹೋಗುತಿದ್ದರು. ಅವನೇ ಪ್ರಸಂಗ ಮುಂದುವರಿಸುತಿದ್ದ. ಜನ ಅವನ ಭಾವ-ರಸಪೂರ್ವಕವಾಗಿ ಹಾಡಿದ ಹಾಡುಗಳನ್ನು ಕೇಳಿ ತಲೆದೂಗಿದರು. ಬಲಿಪರಿಗೆ ತಕ್ಕ ಶಿಷ್ಯ ಎಂದು ಕೊಂಡಾಡಿದರು. ಮಂಜುನಾಥ ಭಾಗವತರಾಗಿ ಸ್ವಂತ ಕಾಲ ಮೇಲೆ ನಿಲ್ಲುವುದು ಕಷ್ಟವಾಗಿರಲಿಲ್ಲ.

ತಂದೆಯ ತೊಡೆಯ ಮೇಲೆ ಕುಳಿತು ಅವರು ಯಕ್ಷಗಾನದ ಹಾಡುಗಳನ್ನು ಹಾಡುತಿದ್ದುದನ್ನು ಕೇಳುತ್ತ ಬೆಳೆದ ಕೃಷ್ಣನ ಮನಸ್ಸು ಬೇಗನೇ ಆಕಡೆ ಹರಿಯಿತು. ಯಾವ ಪ್ರಸಂಗದಿಂದ ಬೇಕಾದರೂ ಹಾಡುಗಳನ್ನು ಉದ್ಧರಿಸುವುದು ಅವನಿಗೆ ಸುಲಭವಾಗಿತ್ತು. ಇನ್ನೂ ಐದನೇ ಕ್ಲಾಸು ಮುಗಿಸುವದರೊಳಗಾಗೇ ಅವನೇ ಯಕ್ಷಗಾನದ ಹಾಡುಗಳಂತೆ ಹಾಡುಗಳನ್ನು ಕಟ್ಟತೊಡಗಿದ್ದ. ಮಾತೆತ್ತಿದರೆ ಯಕ್ಷಗಾನದ ಹಾಡುಗಳ ಧಾಟಿಯಲ್ಲಿ ಹಾಡು; ಬಯಲಾಟದ ಕುಣಿತ; ತಾಳದ ಚಿಂತೆ.

ಕೃಷ್ಣ ಹುಟ್ಟುಕವಿ ಎನ್ನಿಸಿಕೊಂಡ–ಅವನ ಗೆಳೆಯರಿಂದ. ಭಾಗವತರ ಮಗ–ಭಾಗವತನೇ ಸರಿ ಎಂದರು ಎಲ್ಲರೂ.

ಮನೆಯಲ್ಲಿ ತಾಯಿ ಹಣ್ಣು-ತಿಂಡಿ ಕೊಡದಿದ್ದಾಗಲೂ ಹಾಡು. ಗೆಳೆಯರು ಕಾದಾಡಿದಾಗಲೂ ಪದ್ಯ. ಸಂತೋಷವಾದಾಗಲೂ ಕವಿತೆ. ಉತ್ಸಾಹ ಚಿಮ್ಮಿದಾಗಲೂ ಗೀತೆ.

ಸಾಕು ಸಾಕ್ಕೈ ನಿನ್ನ । ತಂತ್ರಗಳಿವು ಬೇಡ
ಏಕೆ ಈ ತುಂಡು ಪ್ರಸಾದ....
ಬೇಕೆನಗಿಡಿ ಹಣ್ಣು । ಬೆಳೆದ ಕಬ್ಬಿನ ಗಿಣ್ಣು
ಈ ಕೋರ್ತಿ ಸಂಧಾನ ಬೇಡ.

ಎಂದು ವೀರರಸ ಹರಿಯಿಸಿ ಹಾಡಿ, ಹೋರಾಡುತ್ತಿದ್ದ ತನ್ನ ತಾಯಿಯ ಒಳಿ.

ಜೀವನವನ್ನೆಲ್ಲ ಕೋರ್ಟು ಕಚೇರಿಯಲ್ಲೇ ಕಳೆಯುತ್ತಿದ್ದ ರಾಮಣ್ಣ ಭಟ್ಟರನ್ನು ಕಂಡಾಗಲೆಲ್ಲ ಕುಹಕದ ನಗೆ ಬೀರಿ ಅವರಿಗೆ ಕೇಳಿಸುವಂತೆ ನೆಲವನ್ನೋ ಮೋಜನ್ನೋ ಜಾಗಟೆಯಾಗಿ ಮಾಡಿ ಹಾಡುತ್ತಿದ್ದ.

ಆದರದಿ ರಾಮಣ್ಣ ಭಟ್ಟ ಕೈಮುಗಿದು
ಸಾದರದಿ ಅಡ್ವೊಕೇಟರಿಗೆ ತಾ ಮಣಿದು
ತಂದ ದಾಖಲೆಯೆಲ್ಲ ಅವರ ಮುಂದಿರಿಸಿ
ಒಂದೊಂದ ತೆಗೆದು ದಾವೆಯನು ತಾ ಬರಸಿ
ಗೇಣಿ ಕೊಡಲಿಲ್ಲೆಂದು ವಿವರದಿಂ ತಿಳಿಸಿ
ಗೇಣುದ್ದ ನೆಲವನಾಕ್ರಮಿಸಿದನು ಎನಿಸಿ....

ಭಟ್ಟರಂತೂ ರೇಗಾಡಿ 'ಇದೊಂದು ಕಪಿ', ಭಾಗವತ ಪುತ್ರ ಎಂದು ಮೂದಲಿಸುತ್ತಿದ್ದರು. ಮಂಜುನಾಥನಿಗೆ ದೂರುಕೊಟ್ಟರು. ಅಂತೂ ಅವರ ಮನೆಯ ಇದಿರಾಗಿ ಅತ್ತಿತ್ತ ಹೋಗುವುದನ್ನೇ ನಿಲ್ಲಿಸಿದರು.

ಕಂಡುದನ್ನೆಲ್ಲ ಇದ್ದಂತೆ ಹೇಳಿ, ಹಾಡು ರಚಿಸಿ ಹಾಡಿ, ತನ್ನ ಪಾಡಿಗೆ ತಾನಿರುತ್ತಿದ್ದ ಕೃಷ್ಣ ಇನ್ನೂ ಹನ್ನೆರಡರ ಮೆಟ್ಟಿಲಲ್ಲಿರುವಾಗಲೇ ಕವಿಯೆನಿಸಿಕೊಂಡ. ಮಂಜುನಾಥ ತನ್ನ ಮಗನ ಜಾಣ್ಮೆಗೆ ತಲೆದೂಗಿದರೂ, ಈ ಹುಡುಗ ಚುರುಕಾಗಿಲ್ಲ–ಎಲ್ಲೋ ಮೂಲೆಯಲ್ಲಿ ಕುಳಿತಿರುತ್ತಾನೆ ಎಂದು ಹೇಳದಿರಲಿಲ್ಲ. ಅವನದು ಹುಚ್ಚು ಕುಣಿತ, ಆಟ ಓಟ ಪುಂಡಾಟಗಳಾಗಿರಲಿಲ್ಲ. ಸದಾ ಅಭ್ಯಾಸ, ಯೋಚನೆ, ಚಿಂತೆ.

ಹುಟ್ಟುಕವಿ–ಭಾಗವತಿಗೆ ಅರಿತ.

ಮದ್ದಳೆಗನಾದ.

ಮುಂಜುನಾಥ ಅವನಿಗೆ ಸಂಗೀತ ಕಲಿಸಲು ಮರೆಯಲಿಲ್ಲ.

"ನಮ್ಮದೆಲ್ಲ ಯಕ್ಷಗಾನ. ನಾವೆಲ್ಲ ಎಕ್ಕಣಗಾನದವರು. ಮಗನಿಗಾದರೂ ಗಂಧರ್ವಗಾನದ ಪರಿಚಯವಾಗಲಿ. ಅವನ ಅದೃಷ್ಟ ಚೆನ್ನಾಗಿದ್ದರೆ ಸಂಗೀತಗಾರನಾಗಿ ಕೀರ್ತಿ ಗಳಿಸಲಿ" ಎಂದು ಮಂಜುನಾಥ ಬಂಧುಗಳಿಗೆ ಉತ್ತರವಿತ್ತರು. ಎಲ್ಲವನ್ನೂ ಕಲಿಯುತ್ತೇನೆ ಎಂದು ಬಯಸುತ್ತಿದ್ದ ಕೃಷ್ಣನಿಗೆ ಎಲ್ಲವನ್ನೂ ಕಲಿಸುವುದೇ ಅವರಿಗೆ ಸಮಸ್ಯೆಯಾಗಿತ್ತು. ಈ ಎಲ್ಲ ಅಭ್ಯಾಸಗಳನ್ನು ಬೆನ್ನುಹತ್ತಿ ವಿದ್ಯೆಯನ್ನೇ ಮರೆತುಬಿಡುತ್ತಾನೋ ಎಂಬ ಭೀತಿಯೂ ಇತ್ತು. ಆದರೆ, ಕೃಷ್ಣ ಎಂದೂ ಸ್ಕೂಲಿಗೆ ತಪ್ಪಿಸಿಕೊಂಡಿರಲಿಲ್ಲ ಬಯಲಾಟ ನೋಡಿ ಇಡೀ ರಾತ್ರೆ ನಿದ್ದೆಗೆಟ್ಟಿದ್ದರೂ ಕೂಡಾ, ಶಾಲೆಗೆ ತಪ್ಪದೆ ಹಾಜರಾಗುತಿದ್ದ.

ಅವನ ಗೆಳೆಯರ ತಾಳಮದ್ದಳೆ ಕೂಟವೂ ಹುಡುಗಾಟವಾಡಿ ನಲಿಯುತಿತ್ತು. ರಜಾ ದಿನಗಳಲ್ಲೆಲ್ಲ ಅವನ ಕೂಟದ ಕಿರಿಯರ ತಾಳಮದ್ದಳೆ: ಕೃಷ್ಣನ ಸಂಗೀತ ಕಾರ್ಯಕ್ರಮ. ಅವರು ಅಭ್ಯಸಿಸುತಿದ್ದುದು ಕೃಷ್ಣನೇ ಬರೆದ 'ಕೋಟಿರ್ಗ ಕಾಳಗ', 'ರಾವಣ್ಣ ಗರ್ವಭಂಗ', 'ಪದ್ಮಿನೀ ಹರಣ' ಇತ್ಯಾದಿಗಳು. ಮೊದಲು ಇವುಗಳನ್ನೆಲ್ಲ ವಿರೋಧಿಸಿ ಛೀಮಾರಿ ಹಾಕುತಿದ್ದ ಮಂಜುನಾಥ ಮುಂದೆ ತಾವೂ ಅವರ ಜತೆ ಸೇರಿ ಅವರ ತಪ್ಪು ತಿದ್ದುವದಕ್ಕಾರಂಭಿಸಿದರು.

ಮಂಜುನಾಥ ತನ್ನ ಜೀವನದಲ್ಲಿ ಬಯಲಾಟ ಅತ್ಯಂತ ಉನ್ನತ ಮಟ್ಟದಲ್ಲಿದ್ದುದನ್ನು ನೋಡಿದವರು. ಬಿಡುವಿಲ್ಲದೆ ದುಡಿದವರು. ದಿನ ಕಳೆದಂತೆ ಜನತೆಯ ಜೀವನವನ್ನು ರೂಪಿಸಿ ರೂಢಿಸುವ ಬಯಲು ನಾಟಕಗಳ ಪ್ರಭಾವ ಇಳಿಮುಖವಾಗುತ್ತ ಬಂತು. ಕೆಲವು 'ಮೇಳ'ಗಳು ಮೂಲೆ ಸೇರಿದುವು. ಹಳ್ಳಿಯ ಜನ ಮೇಳಗಳನ್ನು ಕರೆಸಿಕೊಂಡು, 'ಆಟ' ಮಾಡಿಸಿ ಹರ್ಷಿಸುವ ರೂಢಿ ಬದಲಾಯಿತು. ದೇವರಿಗೆ 'ಆಟ ಆಡಿಸುತ್ತೇನೆ,' ಎಂದು ಹರಕೆ ಹೊರುವ ಪದ್ಧತಿ ತಪ್ಪಿತು.

ತನ್ನ ಕಾಲದಲ್ಲೇ ಹೀಗೆ; ತನ್ನ ಮಗನ ಕಾಲಕ್ಕೆ ಬಯಲಾಟ ನೋಡಸಿಗುವುದೂ ಅಪರೂಪವಾದೀತು ಎಂದು ಅವರಿಗೆ ತೋರಿತು.

ನರ್ತಕರ ಅಭ್ಯಾಸ, ಕಲಾಪ್ರೇಮ, ತಾವಭಿನಯಿಸುವ ಪುರಾಣ ಪುರುಷರ ಬಗೆಗೆ ಇದ್ದ ಅಭಿಮಾನಗಳು ಕಡಿಮೆಯಾಗಿ ಕಳಪೆ ನೃತ್ಯಗಳು

ಹೆಚ್ಚಿದುವು. ಮಾತು ಬಂದರೆ ಸಾಕು ಆತ ಪಾತ್ರವಹಿಸಬಹುದೆಂಬ ಭಾವನೆ ಹರಡತೊಡಗಿತು.

ಈ ರಂಗಸ್ಥಳ ಸಾಕು; ಹಾಯಾಗಿ ಮೂಲೆ ಸೇರಿ ಇರೋಣ ಎಂದು ಅವರು ಬಯಸಿದರು.

ಇಪ್ಪತ್ತು ಮೂವತ್ತು ವರ್ಷಗಳ ಬಿಡುವಿಲ್ಲದ ದುಡಿಮೆ ಅವರ ದೇಹ ವನ್ನು ಹಣ್ಣುಮಾಡಿತ್ತು; ಯಕ್ಷಗಾನದ ಅವನತಿ ಅವರ ಮನ ಹುಣ್ಣು ಮಾಡಿತ್ತು.

ಕೃಷ್ಣ ಮ್ಯಾಟ್ರಿಕ್ ಪಾಸು ಮಾಡಿದಾಗ ತನ್ನ ತಲೆಯಮೇಲಿದ್ದ ಮಹಾಮೇರು ಕೆಳಗಿಳಿದಷ್ಟು ಹಗುರವಾಯಿತು ಭಾಗವತರಿಗೆ. ಅವರು ಒಂದು ಯುಗದಾಟ ನಿಂತಷ್ಟು ತೃಪ್ತರಾದರು. ಕೃಷ್ಣನ ಸಂಗೀತವೂ ಒಂದು ಮಟ್ಟ ಮುಟ್ಟಿತ್ತು. ನೃತ್ಯವನ್ನು ಅವನು ತಂದೆಗೂ ತಿಳಿಯದಂತೆ ಗುಂಡನಿಂದ ಕಲಿತಿದ್ದ. ಇನ್ನು ಮುಂದೆ ಕಲಿತುದು ಸಾಕು; ಎಲ್ಲಾದರೂ ಕೆಲಸಕ್ಕೆ ಸೇರಲಿ ಎಂದು ಅವರು ಸುಮ್ಮನಿದ್ದರು.

ಕನ್ನಡ ಕಲಾಮಂಡಲದ ಕೀರ್ತಿ ಹರಡಿ ಅದು ಸ್ಥಿರವಾಗಿ ನೆಲೆ ನಿಂತಾಗ ಹಿಂದಿನ ಸಂಗೀತಗಾರರೂ ಹಿನ್ನಡೆದರು. ವಿಜಯ ಬೇರೆಯವ ರನ್ನು ಹುಡುಕುತಿದ್ದ. ಅದನ್ನರಿತು ಕೃಷ್ಣ ಕಲಾಮಂಡಲಕ್ಕೆ ಕಾಲಿಟ್ಟ.

ತಾನೇ ಈ ರಂಗಕ್ಕೆ ಇಳಿಯಲು ಕಾರಣವಾದ ಯಕ್ಷಗಾನದ ನೃತ್ಯದ ಅರಿವಿತ್ತು. ತನ್ನ ಅಭಿಮಾನಕ್ಕೆ ಪಾತ್ರರಾದ ಮಂಜುನಾಥ ಭಾಗವತರ ಮಗ. ಸಂಗೀತ ಅರಿತಿದ್ದಾನೆ; ಮದ್ದಳೆಗ. ಇನ್ನೂ ಚಿಕ್ಕವಯಸ್ಸು, ಸಾಕಷ್ಟು ಓದೂ ಇದೆ. ಇದೆಲ್ಲವನ್ನೂ ತಿಳಿದ ವಿಜಯ, ಕೃಷ್ಣನನ್ನು ಕಲಾ ಮಂಡಲದಲ್ಲಿ ಇರಿಸಿಕೊಂಡ.

ಭಾಗವತರ ಮಗ ಕೃಷ್ಣ, ಗಾಯನಾಚಾರ್ಯ ಕೃಷ್ಣರಾವ್ ಆದ. ಕಲಾಮಂಡಲದ ಸಂಗೀತ ನಿರ್ದೇಶಕ, ಅಲ್ಲಿನ ಹಿಮ್ಮೇಳದ ನಿರ್ದೇಶಕ.

ತನ್ನ ಪಾಲಿನ ಕೆಲಸವನ್ನು ಆತಂಕವಿಲ್ಲದೆ ನಿರ್ವಹಿಸುತ್ತ ಅಭ್ಯಾಸ ದಲ್ಲೇ ಕಾಲ ಕಳೆಯುತಿದ್ದ ಕೃಷ್ಣನ ಬಗೆಗೆ ಕಲಾಮಂಡಲದ ಎಲ್ಲರಿಗೂ ಪ್ರೀತಿ ಬೆಳೆಯಿತು. ವಿಜಯ, ಸಿಂಹ, ಕಲ್ಪನಾ ಇವರೆಲ್ಲರ ಬಗೆಗೆ ಅವನಿ ಗಿದ್ದ ಅಪೂರ್ವ ಅಭಿಮಾನ ಅವನನ್ನು ಮನೆಯವನಾಗೇ ಮಾರ್ಪಡಿಸಿತು.

ಕಲ್ಯಾಣಿ ಆಗ ತಾನೇ ಕೇರಳದಿಂದ ಬಂದಿದ್ದಳು. ಮಾಸ್ತರರ ನಚ್ಚಿನ ಮಗಳು; ಕಲಾಮಂಡಲದ ಎಲ್ಲರ ಕೈಗೂಸು. ಕೃಷ್ಣನೆಂದರೆ ಅವಳಿಗೂ ಸಲುಗೆ; ಅವನಿಗೂ ಆ ಮುದ್ದು ಮಗುವನ್ನು ಕಂಡರೆ, ಅಪೂರ್ವ ನರ್ತಕಿಯಾಗಿ ಆಗಲೇ ಮೆರೆಯುತಿದ್ದವಳನ್ನು ಕಂಡರೆ ಮಮತೆ.

ನೃತ್ಯ, ಶಾಲೆ, ಇವುಗಳ ಜತೆಗೆ ಸಂಗೀತದ ಅಭ್ಯಾಸವೂ ಸಾಗಿತು. ಕೃಷ್ಣನೇ ಅವಳ ಗುರು. ಅವಳ ಆಟ, ಪಾಟ, ವಿನೋದಗಳೆಲ್ಲ ಅವನ ಕೂಡೆ. ಎತ್ತ ಹೋಗಬೇಕೆಂದರೂ ಕಲ್ಪನಾ, ಸಿಂಹ ಹೊರಡದಿದ್ದಾಗ ಕೃಷ್ಣನೇ ಅವಳನ್ನು ಕರೆದೊಯ್ಯಬೇಕು.

ಮಾತುಮಾತಿಗೂ ಚುಟುಕ ಹಾಡುಗಳನ್ನು ಹಾಡುತ್ತಿದ್ದ ಕೃಷ್ಣನೆಂದರೆ ಕಲ್ಯಾಣಿಗೆ ತುಂಬ ಮೆಚ್ಚು. ನಿಮಿಷವೂ ಸಂಗೀತವನ್ನಾತ ಮರೆತವನಲ್ಲ; ಕವಿತಾರಚನೆಯನ್ನು ಬಿಟ್ಟವನಲ್ಲ. ಯಕ್ಷಗಾನ ಹಾಡುಗಬ್ಬವನ್ನು ಮಾತುಮಾತಿಗೂ ಉದಹರಿಸಬಲ್ಲವನು.

ಸಾರಿ ಕೊಂದರೆ ಪಾಪವಿಲ್ಲ–ಮನ
ವಾರಯ್ಯದಿರುವುದು ನಡವಳಿಯಲ್ಲ.

ಎಂದು ಎಚ್ಚರಿಕೆ ನೀಡಿ ಅವಳ ತುಂಟಾಟ ಅಡಗಿಸುತಿದ್ದ. ಕೃಷ್ಣನ ಜೀವನದಲ್ಲಿ ಇಂಥ ಹಲವಾರು ಗೀತೆಗಳು ಕೈದೀವಿಗೆಯಾದುವು.

ಬಾಲ್ಯಜೀವನ ಕಳೆದಂತೆಲ್ಲ ಅವರ ನಲ್ಮೆ ಬೆಳೆಯುತ್ತಲೇ ಬಂತು. ಕಲಾವಿದರಲ್ಲಿನ ದೃಷ್ಟಿ ಎರಡು ವಿಧವಾಗಿರುತ್ತದೆ; ಭಕ್ತಪರಂಪರೆಯಂತೆ. ಒಂದು ಒಳದೃಷ್ಟಿ; ಒಂದು ಹೊರಮುಖ.

ಅಂತರ್ಮುಖಿಯಾದವನು ಇಡಿಯ ಜಗತ್ತಿನ ಸುಖ ದುಃಖಗಳನ್ನು ತಾನು ಅನುಭವಿಸಿ ನೊಂದು ಅಥವಾ ತೃಪ್ತನಾಗಿ ಒಂದು ಮಹಾಕಾವ್ಯವನ್ನೋ ಚಿತ್ರವನ್ನೋ ಶಿಲಾಮೂರ್ತಿಯನ್ನೋ ಕಡೆಯುತ್ತಾನೆ; ಹಾಡುತ್ತಾನೆ, ನರ್ತಿಸುತ್ತಾನೆ, ಅಭಿನಯಿಸುತ್ತಾನೆ. ಸಮಾಜದ ಅನೀತಿಯಿಂದ ತಾನೇ ನೊಂದಂತೆ ನೋಯುತ್ತಾನೆ; ಆ ಹಿಂಸೆಯನ್ನು ಕಂಡು ಹೇಸಿಕೊಳ್ಳುತ್ತಾನೆ. ಬಂದುದೆಲ್ಲವನ್ನು ತನ್ನ ಮೇಲೇ ಎರಗಿಸಿಕೊಂಡು, ಎಲ್ಲಕ್ಕೂ ತನ್ನನ್ನೇ ತಾನು ಬಲಿಯಾಗಿ ನೀಡಿ ದುಡಿಯುತ್ತಾನೆ.

ಉಪವಾಸವಿರಬಲ್ಲ–ಕದಿಯಲಾರ. ತಾನೇ ಕೊರಗಿ ಕರಗಬಹುದು; ಹೆಣ್ಣನ್ನು ಸೂಳೆಯಾಗಿಸಲಾರ. ತಾನು, ತನ್ನತನು, ತನ್ನತನ, ತನ್ನ ದೇಹವನ್ನು ಸಮಾಜದ ಮೂಸೆಯಲ್ಲಿ ಬೇಯಿಸುತ್ತಾನೆ. ತಾನೊಲಿದವಳು ತನ್ನನ್ನೊಲಿಯದಿದ್ದಾಗ ಅವಳ ನಾಶ ಬಯಸುವುದಿಲ್ಲ; ತನ್ನ ನಾಶವನ್ನು ಲೆಕ್ಕಿಸುವುದಿಲ್ಲ. ಸಮಾಜ ತನ್ನನ್ನು ತುಳಿದಾಗ ಹೆಡೆ ತೆರೆದ ಹಾವಾಗುವುದಿಲ್ಲ; ಮೌನಿಯಾಗಿ ಮರುಗುತ್ತಾನೆ. ತಪಸ್ವಿಯಾಗುತ್ತಾನೆ. ಅವನು ಕಲಾದೇವಿಯನ್ನು ಒಲಿಸಿಕೊಳ್ಳುತ್ತಾನೆ.

ಬಹಿರ್ಮುಖಿಯಾದವನು ಸಂತೆಯ ವ್ಯಾಪಾರಿ. ಹೋಟೆಲಿನ ಮಾಲಿಕ. ಅವನ ಕಲಾಸೇವೆ ವ್ಯವಹಾರ ದೃಷ್ಟಿಯದು; ಹತ್ತು ಮಂದಿ ಮೆಚ್ಚಬೇಕು, ಹೊಗಳಬೇಕು, ಬೆಲೆಯೀಯಬೇಕು ಅವನಿಗೆ. ತನ್ನ ತಪಸ್ಸು ಅವನಿಗೆ ಬೇಡ. ಇಂದು ಬೀಜ ಹಾಕಿ, ನಾಳೆ ಮಣ್ಣಗೆದು ಆ ಬೀಜ ಮೊಳಕೆಯೊಡೆದಿದೆಯೇ ಎಂದು ನೋಡುವ ಮಗುವಿನ ಮನೋಭಾವಿ ಆತ. ಮೂರು ತಿಂಗಳು ಕಲಿತೊಡನೇ ತಾನು ಮಹಾನರ್ತಕಿ, ಮಹಾಸಂಗೀತಗಾರ, ಕಲಾವಿದ ಎಂದು ಯಾರಾದರೂ ಹೊಗಳಬೇಕೆಂದು ಬಯಸುತ್ತಾನೆ. ಸಿಕ್ಕಸಿಕ್ಕಲ್ಲಿ ಅಲೆದು ನೂರಾರು ಮಂದಿಯ ಬಾಲ ಹಿಡಿದು, ಅವರ ಮೈಮೇಲೆ ಬಿದ್ದು, ತನ್ನ ಸಾಹಸ ಕೊಚ್ಚಿಕೊಂಡು ತನ್ನ ಬಗೆಗೆ ಹೊಗಳಿಕೆ ಪಡೆಯಲು ಯತ್ನಿಸುತ್ತಾನೆ. ಟೀಕೆ ಬಂದಾಗ ಕೊರಗುತ್ತಾನೆ, ನರಳುತ್ತಾನೆ, ರೇಗಾಡುತ್ತಾನೆ; ತನ್ನ ಅಪಕ್ವತೆಯ ಅರ್ಥಮಾಡದೆ. ಎಲ್ಲರನ್ನೂ ಟೀಕಿಸುತ್ತ ಸಾಗುತ್ತಾನೆ, ತನ್ನ ಅಪಕ್ವತೆಯನ್ನು ಮರೆಯಿಸಲು. "ಕಲಾವಂತೆ"ಯಂತೆ ಬಾಳುತ್ತಾನೆ ಈ ಬಹಿರ್ಮುಖಿಯಾದ ಕಲಾವಿದ.

ಕೃಷ್ಣ ಅಂತರ್ಮುಖಿ. ಅವನ ಮಾಸ್ತರ್ ಅಂತರ್ಮುಖಿಯಾದ ಮಹಾತಪಸ್ವಿ. ಆದರೆ ಕಲ್ಯಾಣಿ ಬಹಿರ್ಮುಖಿ.

ಬಾಲ್ಯದಿಂದಲೂ ಎಲ್ಲರೂ ಬೆನ್ನುತಟ್ಟಿ ಹೊಗಳಿ ಅವಳನ್ನು ಹೊನ್ನಶಿಲುಬೆಗೇರಿಸಿದ್ದರು. ಆ ಹೊಗಳಿಕೆ ಅವಳಿಗೆ ಬೇಕು; ತೆಗಳಿಕೆ ಬೇಡ. ಅಂತಹ ಮನೋಭಾವ ಅಹಂಕಾರವನ್ನು ಬೆಳೆಸಿತು, ದುರಭಿಮಾನವನ್ನು ಪ್ರಕಟಿಸಿತು.

ಅಂತರ್ಮುಖಿಯಾದ ಕೃಷ್ಣ ತನ್ನ ಕರ್ತವ್ಯ ನಿರ್ವಹಣೆ ಮಾತ್ರ ಅರಿತಿದ್ದ. ಅದರ ಬೆಲೆ ಕಟ್ಟುವವರು ಮಹಾಜನತೆ. ಅದೆಷ್ಟು ಇದೆ ಎಂಬ ಗೋಜಿಗೂ ಅವನು ಹೋಗುತ್ತಿರಲಿಲ್ಲ.

ಕಲ್ಯಾಣಿ-ಕೃಷ್ಣರಾಯ ಇವರ ಒಡನಾಟ ಬಳೆದಂತೆ ಪ್ರೇಮದ ಅಂಕುರವೂ ಆಯಿತು. ಬಾಹ್ಯ ಜಗತ್ತಿನಲ್ಲಿ ಹೊಳೆಯುವುದೆಲ್ಲ ಹೊನ್ನೆಂದರಿತು, ಒಳಿತನ್ನೇ ಕಂಡು ಕೆಡುಕನ್ನೆಲ್ಲ ನುಂಗಲೆಳಸುವ ನೀಲಕಂಠನಾದ ಅಂತರ್ಮುಖಿ ಕಲಾವಿದರ ವರ್ಗಕ್ಕೆ ಸೇರಿದ ಕೃಷ್ಣ ಅದರ ಅರ್ಥ ಮಾಡಿಕೊಳ್ಳಲಿಲ್ಲ.

ಆಕೆ ಹೆಣ್ಣಾದಳು !

ಸುಂದರಿ, ಸುಖಜೀವನ ಸಾಗಿಸಿದವಳು, ಚೆನ್ನಾಗಿ ಬೆಳೆದ ದೇಹ. ಹುರುಪಿನ ಹುಡುಗಿ. ಅವಳ ಮನ ಏನನ್ನೋ ಬಯಸಿತು.

ಆಕೆ ರಾಧೆಯಾಗಿದ್ದಾಳೆ; ಪಾರ್ವತಿಯಾಗಿದ್ದಾಳೆ; ರತಿಯಾಗಿದ್ದಾಳೆ-ರಂಗಭೂಮಿಯ ಮೇಲೆ.

ಅವಳು ಬಯಸಿದುದೇನೆಂದು ಅವಳಿಗೇ ತಿಳಿಯದಾದರೂ, ಕೃಷ್ಣ ಬಳಿಯಲ್ಲಿದ್ದಾಗ ಮನದ ಬಯಕೆ ಅಳಿದು, ದುಗುಡ ಮಾಯವಾಗುತ್ತಿತ್ತು. ಅವನ ಬಳಿ ಇದ್ದಾಗ ಅದೇನೋ ಒಂದು ಬಗೆಯ ತೃಪ್ತಿ; ಇಲ್ಲದಾಗ ಅದೇಕೊ ಎಲ್ಲವೂ ಬರಿದು.

ಕೃಷ್ಣ ಅವಳ ಸಂಕಟವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಅವನಿಗೂ ಅವಳ ಬಗೆಗೆ ಪ್ರೇಮವಿದೆ; ಪ್ರೀತಿಯಿದೆ. ಗುರುವಿನ ಅಪ್ಪಣೆಯಾದರೆ ಆತ ಅವಳನ್ನು ಹೃದಯೇಶ್ವರಿಯಾಗಿ ಮಾಡಿಕೊಳ್ಳಬಲ್ಲ. ಕಲ್ಯಾಣಿ ಅವನನ್ನು ಪೂರ್ಣ ಅರ್ಥ ಮಾಡಿಕೊಂಡಿದ್ದಾಳೆ; ಅವನೂ ಅವಳನ್ನೂ ತಿಳಿದಿದ್ದಾನೆ. ಅವನ ಕವಿತೆ, ಸಂಗೀತ, ಕಲಾಪ್ರೇಮ ಎಲ್ಲವುಗಳ ಬಗೆಗೂ ಅವಳಿಗೆ ಆದರವಿತ್ತು. ಕಲಾವಿದ ತನ್ನ ಕಲೆಯ ಬಗೆಗೆ ಅಭಿಮಾನವುಳ್ಳವರನ್ನು ಬಯಸುತ್ತಾನೆ; ತನ್ನ ಬಗೆಗೆ ಅವರಿಗೆ ಅಭಿಮಾನವಿಲ್ಲವಾದರೂ ಆತ ಅದನ್ನು ಗಣಿಸುವುದಿಲ್ಲ. ಆದರೆ ಕಲ್ಯಾಣಿಗೆ ಅವನ ಬಗೆಗೆ ಆದರವಿದೆ; ಅವನ ಕಲೆಯ ಬಗೆಗೆ ಅಭಿಮಾನವಿದೆ.

ಹಾಗೆಂದು ತನ್ನ ಬಗೆಗೆ ತಾನೇ ಹೇಳಿಕೊಂಡು, ತವುಟೆ ಬಾರಿಸಿ, ಉಡಿಗೆ ತೊಡಿಗೆಗಳನ್ನು ಧರಿಸಿ, ಸೂಳೆಯಂತೆ ಅಭಿನಯಿಸಿ ಆಡಿ ನಲಿದು ಯಾರನ್ನೂ ಸೆಳೆಯುವ ವಿಟನವನಲ್ಲ. ಒಲಿದು ಬಂದ ಹೆಣ್ಣು ಬಯಸಿದ; ಅವನ ಕಲೆಯೂ ಹಾಗೇ–ಅವನು ಒಲಿದು ಅದರೆಡೆ ನಡೆದಿದ್ದ.

ಕನ್ನಡ ಕಲಾಮಂಡಲದಲ್ಲೇ ತನ್ನ ಪೂರ್ಣ ಭವಿಷ್ಯ–ಇಲ್ಲೇ ತನ್ನ ಬಾಳು-ಬದುಕು-ಉತ್ಕರ್ಷೆ ಎಂದವನು ದುಡಿದವನು. ಈ ಕಲಾಗುಡಿಯು ನ್ನುಳಿದು ಹೋಗಲು ಆತ ಸಿದ್ಧನಾಗಿರಲಿಲ್ಲ. ವಿಜಯಸಂತಹರ ನೆರವು, ಜತೆ, ದೇವರ ಸಾನ್ನಿಧ್ಯವೆಂದೂ ಆತ ನಂಬಿದವನು.

ಕಲ್ಯಾಣಿಯು ಕುದಿವ ಮನ, ಬಯಕೆಯ ಲಾವಾರಸವನ್ನು ಹುದುಗಿಸಿ ಕೊಂಡಿರಲು ಅಸಮರ್ಥವಾಯಿತು. ಅವಳು ಪೂರ್ಣವಾಗಿ ಕೃಷ್ಣನ ಮನ ಸೆಳೆದಿದ್ದಳು. ಆತನೂ ಅವಳಿಗೆ ಸೋತಿದ್ದಾನೆ. ಕಲ್ಯಾಣಿ ತನ್ನ ಬಯಕೆ ಯನ್ನು ನಾನಾರೀತಿಯಿಂದ ವ್ಯಕ್ತಪಡಿಸಿದಳು. ಕೃಷ್ಣನನ್ನು ಟೀಕಿಸಿದಳು, ಮೂದಲಿಸಿದಳು. ಕೊನೆಗೆ ಅತ್ತುಕೊಂಡಳು. ಯಾವುದೋ ವಿಷಗಳಿಗೆ ಯಲ್ಲಿ ಅವನೂ ಅಶಕ್ತಿಗೆ ಬಲಿಯಾದ. ಅವರ ಪ್ರೇಮ ಅವರನ್ನು ಬಂಧಿಸಿತು.

ಕೃಷ್ಣನು ತನ್ನನ್ನೇ ತನ್ನ ನೀತಿಗಾಗಿ ಹಳಿದುಕೊಂಡ. ಆದರೂ, ತಾನು ಎಲ್ಲಕ್ಕೂ ಸಿದ್ಧನಾಗೇ ನಿಂತಿದ್ದೇನೆ, ಅನ್ಯಾಯವೆಸಗುವುದಿಲ್ಲ ಎಂಬ ನುಡಿ ಅವನಿಗೆ ಧೈರ್ಯ ಹೇಳುತಿತ್ತು. ಕಲ್ಯಾಣಿಯೂ ಬಯಕೆ ತೀರಿ ತೆಂದು ಹಿಗ್ಗಿದರೂ–ಮಾಸ್ತರರಿಗೆ ಗೊತ್ತಾದರೆ–ಎಂದು ಕುಗ್ಗದಿರಲಿಲ್ಲ.

ಇನ್ನು ಎಚ್ಚರಿಕೆಯಿಂದಿರೋಣ. ಅದೇನು ಸುಖ ಎಂಬುದನ್ನು ತಿಳಿದಾಯಿತು ಎಂದು ಇಬ್ಬರೂ ನಿರ್ಧರಿಸುತಿದ್ದರು. ಪುನಃ ಮತ್ತೊಮ್ಮೆ ನಿರ್ಧಾರವನ್ನು ಬದಿಗೆ ಸರಿಸಿ ಇದೇ ಕೊನೆಯ ಕಳ್ಳತನ ಎಂದು ಕೊಳ್ಳುತಿದ್ದರು.

ಕಾಮನ ಕಣೆ ಜೀವನದ ಸಾವಿರ ಸಂಕಲ್ಪಗಳನ್ನು ಮುರಿದಿದೆ; ಮುರಿಯಿತು.

ಕಾಮ ಕಣೆಯನೆಸೆದಾಗ ಕಲ್ಲು ಅಲರಾಗಿ
ಅರಳಬಹುದು

ಶಿಲೆಯ ಮೇಲೆ ಕುಳಿತಿದ್ದ ಯೋಗಿ ಭೋಗವನು
ಬಯಸಬಹುದು........

ಇಬ್ಬರೂ ಹೊಸ ಉತ್ಸಾಹದಿಂದ ಆನಂದದಿಂದ ನಲಿದರು; ದುಡಿದರು; ಅಭ್ಯಾಸ ನಡೆಸಿದರು. ಅವರಲ್ಲಾದ ಬದಲಾವಣೆ ಕಂಡು ಸಿಂಹನಿಗೆ ಅಚ್ಚರಿಯಾಯಿತು. ಅವನೂ "ಕಲ್ಯಾಣಿ ಮದುಮಗಳಂತೆ ನಲಿಯುತ್ತಾಳೆ" ಎಂದು ಪರಿಹಾಸ್ಯ ಮಾಡದಿರಲಿಲ್ಲ. ಆ ಮಾತು ಕೇಳಿ ತನ್ನ ಕಳ್ಳತನ ಬಯಲಾಯಿತೋ ಎಂದು ಕಲ್ಯಾಣಿ ಭೀತಳಾಗದೆಯೂ ಇಲ್ಲ.

ತಮ್ಮ ಅಶಕ್ತಿಯಿಂದ ಇಬ್ಬರೂ ತಬ್ಬಿಬ್ಬಾದರು. ಕೃಷ್ಣ–ಈ ದಾರಿ ಸರಿಯಲ್ಲ, ಕಲಾಮಂಡಲದಲ್ಲಿ ಇದ್ದಷ್ಟು ಕಾಲ ತನ್ನ ನಿರ್ಧಾರ ಸಡಿಲವಾಗಿ ತಾನು ಈ ಪಾಪಕೃತ್ಯವೆಸಗುತ್ತೇನೆ. ಎಲ್ಲಾದರೂ ಹೊರಟು ಹೋಗುವುದೇ ಉಚಿತವೆಂದು ಮನಸ್ಸು ಗಟ್ಟಿಮಾಡಿಕೊಳ್ಳುತಿದ್ದ. ಆದರೆ ತನ್ನ ಕಲಾಮಂಡಲ, ತನ್ನ ಮಾಸ್ತರ್ ಎಂಬ ಯೋಚನೆ ಮಾಡಿದಾಗ "ಈಸಬೇಕು, ಇದ್ದು ಜೈಸಬೇಕು" ಎಂದು ಹಾಡಿ ಧೈರ್ಯ ತಂದುಕೊಂಡು ಮರುದಿನ ಮುರಿಯಲೆಂದೇ ಆ ದಿನ ಆಣೆಮಾಡುತಿದ್ದ.

ಕಲ್ಯಾಣಿಗೆ ಎಲ್ಲಿಲ್ಲದ ಭೀತಿ ಮೂಡಿತ್ತು. ಈ ಸುಖ ಬೇಕು. ತಾನೂ ಹೆಣ್ಣು. ತನಗೂ ವಿವಾಹ, ವಿನೋದ, ವಿಹಾರ ಬೇಕು ಎಂದು ಅವಳ ಮನ ಕೂಗುತಿತ್ತು, ನಿಜ! ಮಾಸ್ತರ್‌ಗೆ ತಿಳಿದರೆ? ಅವರು ತನ್ನ ಆಶಯಕ್ಕೆ ಅಡ್ಡಿಯಾದರೆ? ಅಥವಾ ಬೇರೆ ಯಾರನ್ನೋ ಕಟ್ಟಿಕೊಳ್ಳೆಂದರೆ? ಅವರು ಎಷ್ಟೋ ಕಾಲ ವಿವಾಹ ಬಂಧನಕ್ಕೆ ಸಿಕ್ಕು ಬೀಳದೆ ನಿಂತಿದ್ದ ಜಿತೇಂದ್ರಿಯರು. ನಾನೂ ಹಾಗೇ ಆಗಬೇಕೆಂದು ಅವರು ಬಯಸಬಹುದು. ಆದರೆ ನನ್ನಿಂದ ಸಾಧ್ಯವಿಲ್ಲ–ಇನ್ನು ಸಾಧ್ಯವೇ ಇಲ್ಲ. ಈಗ ವಿವಾಹ ಬೇಡ ಎನ್ನಬಹುದು. ವಿವಾಹದ ಸುಖ ಅನುಭವಿಸುತ್ತಿರುವ ನನ್ನ ಬಗೆಗೆ ಸಂಶಯಪಡಬಹುದು. ಅವರು ನಮ್ಮ ವಿಚಾರ ತಿಳಿದರೆ–ಮುಂದೆ ನಿಮಿಷವೂ ಇಲ್ಲಿ ಇರುವುದು ಸಾಧ್ಯವಿಲ್ಲ.

ಯಾಕೆ ಇಲ್ಲಿರಬೇಕು?

ನಾನು ನರ್ತಕಿ. ಕೃಷ್ಣ ಸಂಗೀತಗಾರ. ಎತ್ತ ನಡೆದರೂ ಬದುಕಬಲ್ಲೆವು. ಎಲ್ಲಾದರೂ ಹೊರಟುಬಿಡೋಣ!

ಹಾಗೆ ಯೋಚಿಸಿ ನಿರ್ಧಾರಕ್ಕೆ ಮುಟ್ಟಲಾಗಲಿಲ್ಲ ಪುನಃ ಅಧೈರ್ಯ ಸೋಕುತಿತ್ತು. ಎಲ್ಲಿಗೆ ಹೋಗಲಿ? ಎಂದೂ ಇವರಿಂದ ದೂರವಾಗಿದ್ದವಳಲ್ಲ. ಇಂದು ದೂರ ಹೋಗುವುದು ಹೇಗೆ? ಗೊತ್ತಾದರೆ ಮಾಸ್ತರ್ ಬಿಡಲಾರರು; ಕಲ್ಪನಾತಾಯಿ ಅಡ್ಡಿಯಾದಾರು; ಸಿಂಹ ವಿರೋಧಿಸಬಹುದು. ನಿಜ! ಇಲ್ಲೇ ಇದ್ದರೆ–ನಮ್ಮ ಸುಖಕ್ಕೆ ಅಡ್ಡಿಯಾಗದಿರದು.... ಕೃಷ್ಣ ಹಾಡುತ್ತಿರುವಂತೆ—

ಜವ್ವನವು ಮನುಜ ಬಾಳಿನಲೊಮ್ಮೆಗೆ ಬಹುದು
ಬಂದಾಗ ಸುಖವನನುಭವಿಸದಿರಬೇಡ—
ಮುಪ್ಪು ಬಾಳಿನಲೊಮ್ಮೆ ಬಹದು ಸಖಿ ನೆನಪಿರಲಿ
ಬಂದಾಗ ಜವ್ವನವ ನೆನೆಯಬೇಡ—

ಇಂದು ಉಪವಾಸಬಿದ್ದು ಕಾಲಸಂದ ಬಳಿಕ ಉಂಡು ತೇಗೋಣವೆಂದರೆ ಸಾಧ್ಯವೇ?........

ಅವಳು ಯೋಚಿಸಿದಷ್ಟಕ್ಕೂ ತನ್ನ ದಾರಿ ಸರಿ; ತಾನಿಲ್ಲಿಂದ ದೂರವಾಗಲೇಬೇಕು–ಎಂಬ ನಿರ್ಧಾರಕ್ಕೆ ಮುಟ್ಟುತಿದ್ದಳು.

ನನ್ನ ಕೀರ್ತಿ ನನ್ನದು, ನನ್ನ ಕೈಲೇ ಇದೆ. ಇಂದಿನ ಕೀರ್ತಿ ಉಳಿಸುವುದು ಅಥವಾ ಅಳಿಸುವುದು ನಮ್ಮ ಕೈಯಲ್ಲೇ ಇದೆ. ಅದಕ್ಕೆ ಹೆದರಿ ಮೂಲೆ ಸೇರಿ ಹೆಣ್ಣು ಜನ್ಮವನ್ನೇ ನಿರರ್ಥಕಗೊಳಿಸಲೇ?

ಸುಖದುಃಖವೆಂಬುದೇ ಜೀವನದಿ ಈ ವಿಶ್ವ—
ನಿಯಮವಿರೆ ಬಯಸೋಣ ಬೆಲ್ಲ-ಬೇವು.

ಕೃಷ್ಣ ನಿರ್ಧಾರಕ್ಕೆ ಬಂದೇ ಇರಲಿಲ್ಲ. ಅವನದು ಈ ದಾರಿ ಬಿಡುವ ನಿರ್ಧಾರ. ಮಾಸ್ತರ್‌ರಿಗೆ, ಕಲಾಮಂಡಲಕ್ಕೆ, ಕಲೆಗೆ ಅನ್ಯಾಯವಾಗಬಾರದೆಂಬ ಚಿಂತೆ. ತಾನು ತುಳಿಯುವ ದಾರಿ ಗುರುದ್ರೋಹ ಎಂಬ ದುಃಖ.

ಕಲ್ಯಾಣಿ ಅವನನ್ನು ತನ್ನ ನಿರ್ಧಾರಕ್ಕೆ ಸೆಳೆದುಕೊಂಡು ಒಪ್ಪಿಸಿದಳು. ಆದರೂ ಅವನದು ಉಭಯ ಸಂಕಟ; ಧರ್ಮ ಸಂಕಟ. ಗುರುದ್ರೋಹ ಮಾಡಲಾರ, ನಂಬಿದವಳಿಗೆ ದ್ರೋಹ ಬಗೆಯಲಾರ. ಈ ತೂರಾಡುವ ಸ್ಥಿತಿಯಲ್ಲೂ ಅವನ ಒಲವು ಕಲ್ಯಾಣಿಯ ಕಡೆಗೇ ವಾಲುತಿತ್ತು.

ನನ್ನಿಂದಾಗಿ ಅವಳು ಕೆಟ್ಟಳು. ಅವಳ ಬಯಕೆ ನಿರಾಕರಿಸಲಾರದೆ ನಾನು ಅವಳು ಕೆಡಲು ಕಾರಣನಾದೆ. ನಾನೇ ಈ ಮಂದಿರದಲ್ಲಿ ಇಲ್ಲವಾಗಿದ್ದರೆ ಇಂಥ ಸ್ಥಿತಿ ಒದಗುತ್ತಿರಲಿಲ್ಲ. ಇಂದು ಅವಳನ್ನು ರಕ್ಷಿಸುವುದು ನನ್ನ ಧರ್ಮ. ಅವಳಂದಂತೆ ನಡೆಯುತ್ತೇನೆ; ಅವಳು ದಾರಿ ತಪ್ಪದಂತೆ ಮಾಡಿಯುತ್ತೇನೆ. ಅವಳೇ ನನ್ನ ಪತ್ನಿ; ನಾನೇ ಅವಳ ಪತಿ ಎಂದು ಅವನು ನಿರ್ಧರಿಸುತಿದ್ದ.

ದಿನಗಳೆದಂತೆ ಇವರ ನಡೆನುಡಿಗಳ ಬಗೆಗೆ ಸಿಂಹನಿಗೆ ಸಂದೇಹ ಮೂಡಿತು.

ಮಾಸ್ತರ್‌ರಿಗೂ ತಿಳಿದು ಬಂತು.

ಕಲಾಮಂಡಲದಲ್ಲಿ ವಿಚಿತ್ರ ವಾತಾವರಣವುಂಟಾಯಿತು, ಬಿರುಗಾಳಿ ಹರಡಿತು.

ಮಾಸ್ತರ್ ಮಾತನ್ನು ಕಲ್ಯಾಣಿ ವಿರೋಧಿಸಿದಳು.

ಸಿಂಹನ ಬುದ್ಧಿವಾದಕ್ಕೂ ಬೆಲೆ ಕೊಡಲಿಲ್ಲ.

ಕೃಷ್ಣ ಮೂಕನಾಗಿ ಎಲ್ಲರ ನಿಂದೆಯನ್ನೂ ಸಹಿಸಿದ, ತನ್ನಲ್ಲೇ ಕೊರಗಿ ಕರಗಿದ.

ಕಲ್ಯಾಣಿ ಬಾಗಲಿಲ್ಲ–ತಲೆ ಎತ್ತಿ ನಿಂತಳು. ಸಂಧಾನದ ಬದಲು ಸಂಗ್ರಾಮವನ್ನೇ ಕರೆದಳು. ಕಲಾಮಂಡಲವನ್ನೇ ತೊರೆದುಹೋಗಲು ನಿರ್ಧರಿಸಿದಳು.

ನನ್ನ ಹೃದಯದ ಅಳಲು ಅರ್ಥ ಮಾಡಿಕೊಳ್ಳದ ಎಡೆ ನಮಗೆ ಬೇಕಾಗಿಲ್ಲ.

ನನ್ನ ಸುಖ ಬಯಸದವರ ಬುದ್ಧಿವಾದ ನನಗೇಕೆ!

ನನ್ನ ಬಾಳು ನನ್ನದು–ಎಂದಿತು ಅವಳ ಮನ.

ಅವಳ ಬಾಳು ಉಳಿಸಲು; ತಾನು ಪಾಪಿ ಎನ್ನಿಸದೆ ಬಾಳಲು, ನಿರ್ಧರಿಸಿದ ಕೃಷ್ಣ ಅವಳ ಹಿಂದೆ ನಡೆಯಲು ಒಪ್ಪಿದ.

ಅವರ ನಿರ್ಧಾರ ಬಲವಾಯಿತು.

ಸ್ವತಂತ್ರವಾಗಿ ಸುಖವಾಗಿ ವಿಹರಿಸುವ ಬಯಕೆ ಬೆಳೆದು ನಿಂತಿತು.

೬

ಸಿಂಹ ಹೊರಗೆ ಹೊರಟುಹೋದವನು ಕಲಾಮಂಡಲದ ಛಾತ್ರಗಳನ್ನೆಲ್ಲ ಸಂಜೆಯ ಪೂಜೆಗೆ ಆಹ್ವಾನಿಸಿದ. ಕೊನೆಯ ಬಾರಿಗೆ ಎಲ್ಲರೂ ಕಲ್ಯಾಣಿಯ ನೃತ್ಯ ನೋಡಲಿ; ಇಷ್ಟು ಕಲಾಪ್ರೇಮಿಗಳು, ಕಲಾಮಂಡಲವನ್ನು ಬೆಳೆಸಿದ ಪೋಷಕರುಗಳನ್ನು ಕಂಡಾದರೂ ಅವಳ ಮನ ಬದಲಾಗುವದಾದರೆ ಆಗಲಿ, ಎಂದವನ ಬಯಕೆ.

ಮಾರುಕಟ್ಟೆಗೆ ತೆರಳಿ ಬೇಕುಬೇಕಾದ ಹಣ್ಣುಗಳನ್ನೂ ಹೂವನ್ನೂ ತಂದ. ಸಂಜೆ ಬರುವ ಅತಿಥಿಗಳಿಗೆ ಉಪಾಹಾರ ನೀಡಬೇಕು; ನಾಟ್ಯ ಸರಸ್ವತಿಗೆ ಹೂವು ಹೊದಿಸಬೇಕು ಎಂದು ಮನಬಂದಂತೆ ಹರಿಯುತ್ತಿರುವ ತನ್ನ ಉತ್ಸಾಹದ ಪರಿಣಾಮವಾಗಿ ಕೈಗೆಟಕಿದುದೆಲ್ಲವನ್ನೂ ಹೊರಿಸಿಕೊಂಡು ಬಂದ.

ಕಲಾಮಂಡಲ ಅಲಂಕೃತವಾಗಲಿ. ನಾಟ್ಯಸರಸ್ವತಿಯ ಚಿತ್ರವನ್ನು ಮಂದಿರದ ನೃತ್ಯಶಿಕ್ಷಣಶಾಲೆಯಲ್ಲಿ ಒಂದು ಮೂಲೆಯಲ್ಲಿ ಎತ್ತರವಾದ ಪೀಠದ ಮೇಲೆ ನಿಲ್ಲಿಸಿ, ಅಲಂ..ಂಸಿ. ಇಕ್ಕಡೆಗೂ ಎರಡು ಕಾಲು ದೀಪಗಳು ಬೆಳಗುತ್ತಿರಲಿ. ಊದುಬತ್ತಿಯ ಸುಗಂಧ ಮಂದಿರವನ್ನೆಲ್ಲ ತುಂಬಬೇಕು. ಇಂದು ಮಹಾಪೂಜೆ; ಮಂಗಳೋತ್ಸವ; ಶುಭದಿನ ಎಂದು ಸಿಂಹ ವಿದ್ಯಾರ್ಥಿಗಳಿಗೂ ವಾದ್ಯಗಾರರಿಗೂ ಆಜ್ಞೆ ಮಾಡಿದ.

ಕೃಷ್ಣ ವಿನೀತನಾಗಿ ವಾದ್ಯಮೇಳವನ್ನು ಸಜ್ಜುಗೊಳಿಸಿದ. ಕಲ್ಯಾಣಿ ಉತ್ಸಾಹದಿಂದ ಪೂಜೆಗೆ ಅಣಿಮಾಡಿದಳು. ಸಿಂಹನ ಮಡದಿ ಪ್ರಸಾದ ವಿನಿಯೋಗದ ಕಡೆ ಗಮನ ಹರಿಯಿಸಿದಳು. ಈ ಎಲ್ಲ ಉತ್ಸಾಹವೇಕೆ? ಮಾಸ್ತರರು ಊರಲ್ಲಿಲ್ಲ; ಕಲ್ಯಾಣಿಯ ತಾಯಿಯ ಅನಾರೋಗ್ಯದ ಕರೆ ಕೇಳಿ ತಿರುವಾಂಕೂರಿಗೆ ತೆರಳಿದ್ದಾರೆ. ಕಲ್ಪನಾ ಕೂಡಾ ಇಲ್ಲ. ಮಾಸ್ತರರ ಜತೆಗಾತಿ ಅವರೊಡನೆಯೇ ಹೊರಟಿದ್ದಾಳೆ. ಇದೇಕೆ ಇಂಥ ಸಮಯದಲ್ಲಿ ಈ ಸಂಭ್ರಮ ಎಂಬುದು ಯಾರಿಗೂ ತಿಳಿಯದಾಗಿತ್ತು. ಕಲ್ಯಾಣಿ, ಕೃಷ್ಣರಾಯ, ಸಿಂಹ, ಅವನ ಮಡದಿ ಮಾತ್ರ ಇದನ್ನು ಬಲ್ಲವರು. ಆದರೆ, ಅದನ್ನು ಯಾರಿಗೂ ತಿಳಿಸಲು ಅವರು ಸಿದ್ಧವಾಗಿರಲಿಲ್ಲ.

" ಈ ದಿನವನ್ನು ನೀವೆಲ್ಲ ನೆನಪಿಡಬೇಕು. ಕಲಾಮಂಡಲದ ಬಾಳಿನಲ್ಲೇ ಇದೊಂದು ಮುಖ್ಯ ದಿನ. ಎಂತಲೇ ಈ ಆಚರಣೆ, ಪೂಜೆ, ಉತ್ಸವ" ಎಂದು ಸಿಂಹ ಅಲ್ಲಿ ಸೇರಿದ್ದ ಕಲಾಪ್ರೇಮಿಗಳಿಗೆಲ್ಲ ತಿಳಿಸಿದ. ಅವನು ಉತ್ಸಾಹದಿಂದ ಚಿಗಿಯುತ್ತಿದ್ದ. ತನ್ನ ಮನಸ್ಸಿನಲ್ಲಿ ತುಂಬಿ ತುಳುಕಳಿಸುತ್ತಿದ್ದ ದುಃಖವನ್ನು ಮರೆಸಲು, ಆಗೊಮ್ಮೆ ಈಗೊಮ್ಮೆ ಮೂಡಿ ಮರೆಯಾಗುತ್ತಿದ್ದ ರೋಷ ಮರೆಸಲು ಬುಗರಿಯಂತೆ ತಿರುಗುತ್ತಿದ್ದ. ಅವನ ಬಾಳಿನ ಪರ್ವಕಾಲ! ಕಲಾಮಂಡಲದ ಬಾಳಿನಲ್ಲೂ ಪರ್ವಕಾಲ!!

ಯುದ್ಧದ ಮಾತು ಖಚಿತವಾಯಿತು. ತಾನು ದ್ರೌಪದಿಗೆ ಕೊಟ್ಟ ವಚನ, ಹೇಳಿದ್ದ ಸಮಾಧಾನ ಫಲಿತವಾಯಿತು. ಒಂದೆಡೆ ಪಾಂಡವರ ಸೇನೆ; ಇನ್ನೊಂದೆಡೆ ಕೌರವಾದಿಗಳ ಮಹಾಸೇನೆ ಸಜ್ಜಾಗಿ ನಿಂತಿವೆ. ಸಮರಾರಂಭದ ಶುಭ ಮುಹೂರ್ತಕ್ಕಾಗಿ ಇಕ್ಕಡೆಯುವರೂ ನಿಂತಿದ್ದಾರೆ. ಶ್ರೀಕೃಷ್ಣ ತನ್ನ ಕೊನೆಯ ಕರ್ತವ್ಯವಾಗಿ ಪಾರ್ಥನ ಸಾರಥಿಯೂ ಆಗಿ ನಿಂತಿದ್ದಾನೆ. ಸಮರ ಸನ್ನದ್ಧನಾಗಿ ನಿಂತ ಪಾರ್ಥನ ರಥವನ್ನು ಕುರುಕ್ಷೇತ್ರಕ್ಕೆ ನಡೆಸಿ ಎರಡು ಮಹಾಸೇನೆಗಳ ನಡುವೆ ನಿಲ್ಲಿಸಿ ಇಕ್ಕಡೆಯ ವೀರಾಧಿವೀರರ ಪರಿಚಯುವನ್ನು ಅವನು ಮಾಡಿಕೊಡುತ್ತಿದ್ದ; ಪಾರ್ಥ ನಿರ್ಭರಮನಸ್ಕನಾಗಿ ವೀರನಾಗಿ ಹೋರಾಡಲೆಂಬ ಬಯಕೆಯಿಂದ.

ಆಗ ಅನಿರೀಕ್ಷಿತವಾಗಿ ಅರ್ಜುನ ನರನಂತೆ ನಡುಗಿ ಕ್ಲೈಬ್ಯತೆಯನ್ನಾಂತು ಸಮರ ಬೇಡ, ರಾಜ್ಯ ಬೇಡ, ಕೀರ್ತಿ ಬೇಡ ಎಂದು ಶಸ್ತ್ರ ಸನ್ಯಾಸಮಾಡಿದ.

ಇಂಥ ಪರಿಸ್ಥಿತಿಯಲ್ಲಿ ಕೃಷ್ಣನ ಮನಸ್ಸಿನ ಭಾವೋದ್ರೇಕಗಳು ಯಾವ ಹಂತದಲ್ಲಿದ್ದಿರಬಹುದು?

ಅಂಥ ಸ್ಥಿತಿಗಿಳಿದಿದ್ದ ಸಿಂಹ!

ಅವನಿಗೆ ಸಮರ ಬೇಡ–ಕಲ್ಯಾಣಿಯ ಪ್ರಯಾಣ ಸಲ್ಲದು. ಆದರೆ ಅದು ಅನಿವಾರ್ಯ. ಆಗಬೇಕಾದ್ದು ಆಗಲಿ ಎಂಬ ಧೈರ್ಯ ತಳೆದಿದ್ದಾನೆ ಆತ.

ಕೃಷ್ಣ ತಂಬೂರಿಯನ್ನು ಕೈಗೆತ್ತಿಕೊಂಡು ಹಾಡಲಾರಂಭಿಸಿದ. ತನ್ನದು ತಪ್ಪಾಯಿತು, ಏನೋ ದಾರಿ ತಪ್ಪಿದೆ, ಈಗ ನಂಬಿದವಳನ್ನು ಕೈ

ಬಿಟ್ಟರೆ ದ್ರೋಹಿಯಾಗುತ್ತೇನೆ. ನನ್ನನ್ನು ತಪ್ಪು ತಿಳಿದುಕೊಳ್ಳಬೇಡಿ; ಕ್ಷಮಿಸಿ–ಎಂದಾತ ಮೊರೆಯಿಡುವಂತೆ ತೋರುತಿತ್ತು. ಅಲ್ಲಿ ನೆರೆದಿದ್ದವ ರೆಲ್ಲರ ಕಣ್ಣೂ ಒದ್ದೆಯಾಗಿತ್ತು. ಅವನು ಮೈಮರೆತು ಹಾಡುತಿದ್ದ. ಕೇಳುತಿದ್ದವರೂ ಭಾವಪರವಶರಾಗಿದ್ದರು ಏನೋ ಅಚಾತುರ್ಯ ನಡೆ ದಿದೆ; ಯಾಕೋ ದುಃಖದ ಕಡಲಲ್ಲಿ ಈತ ಈಸಾಡುತಿದ್ದಾನೆ ಎಂದು ಅವರಿಗೆ ತೋರದಿರಲಿಲ್ಲ.

ಹಾಡು ಮುಗಿಸಿ ಕೃಷ್ಣ ತಂಬೂರಿಯನ್ನು ಕೆಳಕ್ಕಿರಿಸಿದ. ಸಭೆಗೂ ನಾಟ್ಯಸರಸ್ವತಿಗೂ ವಂದಿಸಿದ.

ಜನ ಜಾಗೃತರಾದರು.

ಆದರೆ ಮೂಲೆಯಲ್ಲಿ ಕುಳಿತಿದ್ದ ಸಿಂಹ ಇನ್ನೂ ಆ ಗುಂಗಿನಲ್ಲೇ ಲೀನ ವಾಗಿದ್ದ. ಅವನ ಕಣ್ಣುಗಳಿಂದ ಹನಿ ಉದುರುತಿತ್ತು.

ಕಲ್ಯಾಣಿ ಸಭೆಗೆ ಬಂದು ಸಿಂಹನ ಕಾಲು ಮುಟ್ಟಿ ನಮಸ್ಕರಿಸಿದಳು.

ಸಿಂಹ ಕಣ್ಣು ತೆರೆದು ನೋಡಿ, ಆಶೀರ್ವದಿಸಿದ.

“ಯಾವ ನೃತ್ಯವಾಡುತ್ತೀ ಮಗೂ....”

“ವರ್ಣ....”

“ಕೂಸನು ಕಂಡಿರಾ....ಗೀತೆಯನ್ನು ಅಭಿನಯಿಸು ಮಗೂ....”

ಕಲ್ಯಾಣಿಗೆ ಆ ಬೇಡಿಕೆಯ ಅರ್ಥವಾದರೂ ಅವಳು ಸುಮ್ಮನೆ ನಿಂತಿದ್ದಳು. ಸಿಂಹ ಅವನ ಕಡೆಗೆ ನೋಡಿದ.

“ಅದೇಕೆ ಈಗ ?”

“ಆ ದಾರಿ ನಡೆಯುವ ಜೀವ ಒಂದಿದೆ ಇಲ್ಲಿ ಮಗೂ. ಇನ್ನೆರಡು ದೂರ ಹೋಗಿವೆ.”

ಕಲ್ಯಾಣಿಯ ಬಾಯಿಂದ ಮಾತು ಹೊರಡಲಿಲ್ಲ. ಕಣ್ಣು ಒದ್ದೆ ಯಾಯಿತು.

“ಕೃಷ್ಣಾ....”

“ಸ್ವಾಮಿ....”

“ಆ ಹಾಡು ಹಾಡು.”

ಕಲ್ಯಾಣಿ ನಾಟ್ಯಸರಸ್ವತಿಗೆ ವಂದಿಸಿ, ಸಭೆಗೆ ನಮಸ್ಕರಿಸಿ ಪೀಠಕದಲ್ಲಿ ನಿಂತಳು. ಮದ್ದಳೆಗ ಮದ್ದಳೆ ಭಾರಿಸಿದ. ನಾಟ್ಯದ ದ್ವಾದಶಾಂಗಗಳು ಮುಗಿದುವು.

ಮೊದಲೇ ಭಾವಪರವಶನಾಗಿದ್ದ ಕೃಷ್ಣ ತಾನೇ ಮಾಸ್ತರ್ ಆಗಿ, ಕಲ್ಯಾಣಿಯನ್ನು ಹುಡುಕುತ್ತ ಹೊರಟಿರುವಂತೆ ಅನುಭವಿಸಿ ಹಾಡಿದ. ಕಲ್ಯಾಣಿ ಮೈ ಮರೆತು ತನ್ನ ಬಾಲ್ಯದ ನೆನಪನ್ನು ತಂದುಕೊಂಡು ಅಭಿನಯಿಸಿದಳು, ನರ್ತಿಸಿದಳು....ಕೂಸನು ಕಂಡಿರಾ....? ಅಮ್ಮಾ....ನಿಮ್ಮಾ ....ಮನೆಗಳಲ್ಲಿ....

ಮೈಮರೆತು ಹಾಡುವ ಕೃಷ್ಣ, ತನ್ನನ್ನೇ ತಾನು ಮರೆತ ಕಲ್ಯಾಣಿ, ಮೆಚ್ಚಿ ಒಲಿದ ಕಲಾಪ್ರೇಮಿಗಳು. ಪ್ರತಿ ಚರಣವನ್ನೂ ಹತ್ತಾರು ಬಾರಿ ಕೃಷ್ಣ ಹಾಡಿದ, ಕಲ್ಯಾಣಿ ನಾನಾರೀತಿಯಾಗಿ ಅಭಿನಯಿಸಿದಳು. ತನ್ನ ಸಾಮರ್ಥ್ಯವೆಲ್ಲವನ್ನೂ ಆಕೆ ಪ್ರದರ್ಶಿಸಿದಳು.

ಹಾಡು ಮುಗಿಯಿತು; ಕಲ್ಯಾಣಿ ಮುಂದೇನು ನರ್ತಿಸಲಿ–ಎಂದು ಅನುಮತಿ ಕೇಳುವವಳಂತೆ ಕೈಮುಗಿದು ನಿಂತು ಸಿಂಹನ ಕಡೆಗೆ ನೋಡಿದಳು. ಅವಳ ಬಲಭಾಗಕ್ಕೆ ಆತ ಗೋಡೆಗೆ ಒರಗಿ ಕುಳಿತಿದ್ದ. ಅವನ ಮುಚ್ಚಿದ ರೆಪ್ಪೆಗಳೆಡೆಯಿಂದ ಕಣ್ಣೀರು ಧಾರಾಕಾರವಾಗಿ ಹರಿಯುತಿತ್ತು.

ಸಭೆಯಲ್ಲಿ ಯಾರಿಗೂ ಏನೂ ತಿಳಿಯದು ಎಂದೂ ಇಲ್ಲದ ಭಾವಪರವಶತೆ ಇಂದೇಕೆ ಎಂಬುದೇ ಎಲ್ಲರ ಅಚ್ಚರಿ. ಇಂದಿನ ನಾಟ್ಯ, ಉತ್ಸವ, ಪೂಜಾದಿಗಳ ಬಗೆಗೆ ಇನ್ನೂ ತೃಪ್ತಿಕರವಾದ ಉತ್ತರ ಅವರಾರಿಗೂ ದೊರೆತಿರಲಿಲ್ಲ. ಜತೆಗೆ ಸಿಂಹನ ರೀತಿಯೂ ಅವರಲ್ಲಿ ಸಂದೇಹ ಮೂಡಿಸುತಿತ್ತು; ಏನೋ ಹಿನ್ನೆಲೆಯಿದೆ ಈ ಪೂಜೆಗೆ ಎಂದು ಸಾರುತಿತ್ತು.

ಶಂಕರಭಟ್ಟರು ಮೆಲ್ಲನೆ ಎದ್ದು ಸಿಂಹನ ಬಳಿಗೆ ಬಂದರು. ಕನ್ನಡ-ಸಂಸ್ಕೃತ ಎರಡು ಭಾಷೆಗಳಲ್ಲೂ ಪಂಡಿತರಾದ ಆ ಹಿರಿಯರ ಬಗೆಗೆ ಕಲಾಮಂಡಲದ ಎಲ್ಲರಿಗೂ ಅಭಿಮಾನ, ಭಕ್ತಿ. ನಾಟ್ಯಶಾಸ್ತ್ರ, ಅಭಿನಯದರ್ಪಣ ಮೊದಲ್ಗೊಂಡು ಶಿಲಪ್ಪಧಿಕಾರಂವರೆಗೆ ಕಲೆಗೆ ಸಂಬಂಧಿಸಿದ ಗ್ರಂಥಗಳ ಪರಿಚಯ ಮಾಡಿಕೊಟ್ಟು, ವಿವಿಧ ಅಭಿನಯಗಳ ಬಗೆಗೆ ತಿಳಿಯ ಹೇಳಿ

ಅವರು ಕಲಾಮಂಡಲದ ವಿದ್ಯಾರ್ಥಿಗಳಿಗೆ ತಾವೂ ಒಬ್ಬ ಗುರುಗಳಾಗಿದ್ದರು. ಭಟ್ಟರು ಸಿಂಹನ ಬಳಿಯಲ್ಲಿ ಕುಳಿತರು. ಸಭೆಯಲ್ಲಿ ಮೌನ ಆವರಿಸಿತ್ತು. ಸಿಂಹನಿಗೆ ಎಚ್ಚರವಿಲ್ಲ. ತಂಬೂರಿ ಮಾತ್ರ ಮಿಡಿಯುತಿತ್ತು.

"ಗೀತ ಗೋವಿಂದದಿಂದ ಒಂದೆರಡು ಶ್ಲೋಕ ಅಭಿನಯಿಸು."

ಭಟ್ಟರೇ ಆಜ್ಞೆಯಿತ್ತರು. ಅದೇ ಸರಿ ಎಂದು ಇತರರೂ ಅನುಮೋದನೆಯ ಭಾವ ಪ್ರಕಟಿಸಿದರು. ಕೃಷ್ಣ ಶ್ಲೋಕವನ್ನು ಎತ್ತಿಕೊಂಡ. ಭಟ್ಟರು ಸಿಂಹನ ಬೆನ್ನು ತಡವಿದರು. ಆತ ಮೆಲ್ಲನೆ ತಿರುಗಿನೋಡಿದ. ದುಃಖ ಉಕ್ಕಿಬಂತು; ಹೊದ್ದ ಶಲ್ಲೆಯಿಂದ ಮುಖ ಮುಚ್ಚಿಕೊಂಡು, ದುಃಖ ಅಡಗಿಸಿ, ಕಣ್ಣುಗಳನ್ನೊರಸಿ ಕುಳಿತ. ಭಟ್ಟರು ತನ್ನ ಮೌನದಿಂದಲೇ ಧೈರ್ಯ ಹೇಳಿ ಸಮಾಧಾನಪಡಿಸುವಂತೆ ಅಲ್ಲೇ ಸನಿಹದಲ್ಲೇ ಕುಳಿತರು.

ಶ್ಲೋಕಗಳು ಮುಗಿದು, ಕಲ್ಯಾಣಿ ವಾಗ್ದೇವಿಯನ್ನು ನುತಿಸುವ ಹಾಡಿಗೆ ನರ್ತಿಸಿದಳು. 'ನಾಟ್ಯಸರಸ್ವತಿ' ನೃತ್ಯ ಆರಂಭಿಸಲು ಸಿದ್ಧಳಾದಳು. ಇನ್ನೊಮ್ಮೆ ದೇವರಿಗೂ, ಹಿರಿಯರಿಗೂ, ಸಭೆಗೂ ವಂದಿಸಿ ನಿಂತಳು.

'ನಾಟ್ಯಸರಸ್ವತಿ' ನೃತ್ಯ ಅತ್ಯಮೋಘವಾಗಿ ಅಭಿನಯಿಸಲ್ಪಟ್ಟಿತು. ತನ್ನನ್ನೇ ತಾನು ನಂಬಿದ ಮಹಾತಾಯಿಗೆ ಬಲಿಕೊಡಲು ನಿಂತ ಭಕ್ತನಂತೆ ಕಲ್ಯಾಣಿ ಈ ನೃತ್ಯವನ್ನಭಿನಯಿಸಿದಳು. ವಿವಿಧ ಬಗೆಯಾಗಿ ತಾಯಿಯನ್ನು ನುತಿಸಿ, ಪೂಜಿಸಿ, ಅವಳ ಆಶೀರ್ವಾದ ಪಡೆಯಲು ನಲಿದಳು. ಹೂವಿನಂತೆ ಸರಿದು, ಗಾಳಿಯಂತೆ ತೇಲಿ, ಮಿಂಚಿನಂತೆ ಚಲಿಸಿ, ಸಿಡಿಲಿನಂತೆ ಎರಗಿದಳು. ಮಂದಮಾರುತ ಬಿರುಗಾಳಿಯಾದ; ವಿನಯ ವೈರಾಗ್ಯವಾಯಿತು; ಬೇಡಿಕೆ ಬಲಿದಾನದ ಹಂತವೇರಿತು; ಇಡೀ ಸಭೆ ಈ ನವರಸಾಭಿನಯವನ್ನು ಕಂಡು ಬೆರಗಾಗಿ ಕಣ್ಣರಳಿಸಿ ಬಾಯಿತೆರೆದು ಕುಳಿತು ನೋಡಿತು.

ಮೈಮೇಲೆ ನಾಟ್ಯದೇವತೆಯೇ ಬಂದಂತೆ ನರ್ತಿಸುತಿದ್ದ ಕಲ್ಯಾಣಿ ತನ್ನ ಕಲಾಪ್ರೌಢಿಮೆಯನ್ನೆಲ್ಲ ತೋರಿ ನರ್ತಿಸಿ, ದೇವರ ಮುಂದೆ ನೆಲದ ಮೇಲೆ ವಂದಿಸಿ–ಮೈಮರೆತಳು.

ಆವಳಿನ್ನೂ ಎಚ್ಚರವಾಗಿರಲಿಲ್ಲ.

ಕೃಷ್ಣ ಮಹಾಮಂಗಳಾರತಿ ಮುಗಿಸಿದ.

ಆರತಿಯನ್ನೆಲ್ಲರಿಗೂ ಕೊಟ್ಟು ಕೊನೆಯದಾಗಿ ಅವಳಿದ್ದಲ್ಲಿಗೆ ತಂದು ದೇವರ ಕಾಲ ಬಳಿ, ಕಲ್ಯಾಣಿಯ ತಲೆಯ ಬಳಿ, ಇರಿಸಿದ. ಅವಳೂ ತಲೆ ಎತ್ತಿ ಆರತಿ ತೆಗೆದುಕೊಂಡಳು.

ಸಿಂಹ ಅವಳೆಡೆ ಬಂದು, ಅವಳನ್ನು ಮೇಲಕ್ಕೆತ್ತಿ, ವೈದಡವಿ ಕರೆದೊಯ್ದು, ತಾನು ಕುಳಿತಲ್ಲೇ ಕುಳ್ಳಿರಿಸಿದ. ಇತರ ವಿದ್ಯಾರ್ಥಿಗಳು ಪಾನಕ, ಹಣ್ಣು-ಹಂಪಲುಗಳನ್ನು ಎಲ್ಲರಿಗೂ ಹಂಚಿದರು.

"ಇಂದು ತುಂಬ ಅದ್ಭುತವಾಗಿ ನರ್ತಿಸಿದೆ ಮಗೂ. ಆದಿಶಕ್ತಿ ಒಮ್ಮೆ ತಾನೇ ಅಸಮಾನ ನರ್ತಕನೆನ್ನುತಿದ್ದ ಪರಶಿವನ ಮುಂದೆ ನಿಂತಳಂತೆ. ನಿನ್ನಂತೆ ನಾನೂ ನರ್ತಿಸಬಲ್ಲೆ; ನಿನ್ನ ಅರ್ಧಾಂಗಿ ನಾನು; ನೀನು ಪುರುಷ–ನಾನು ಪ್ರಕೃತಿ; ನೀನು ಶಿವ–ನಾನು ಶಕ್ತಿ ಎಂದಳಂತೆ. ಮಾತು ಮುಂದುವರಿದು ಸ್ಪರ್ಧೆ ಆರಂಭವಾಯಿತು. ಹದಿನಾಲ್ಕು ಲೋಕಗಳೂ ತಲ್ಲಣಿಸಿದುವು, ದೇವಾದಿದೇವತೆಗಳೆಲ್ಲ ಆ ನೃತ್ಯ ನೋಡಲು ನೆರೆದರು. ಮಹಾತಾಯಿ, ಮಹಾದೇವ ಇವರೊಳಗೆ ಸ್ಪರ್ಧೆ; ನೃತ್ಯದ್ವಂದ್ವ. ಶಿವನ ಎಲ್ಲ ಬಗೆಯ ನೃತ್ಯಗಳನ್ನೂ ನಿಲುವುಗಳನ್ನೂ ಕರಣಗಳನ್ನೂ ಶಕ್ತಿ ಅಭಿನಯಿಸಿ ತೋರಿಸಿದಳು. ಇಬ್ಬರೂ ಸಮರು; ಇವರಲ್ಲಿ ಅಂತರವಿಲ್ಲ; ಪುರುಷ ಪ್ರಕೃತಿಯರಲ್ಲಿ ಭಿನ್ನವಿಲ್ಲ ಎಂದು ಎಲ್ಲರೂ ವಾದಿಸಲು ಆರಂಭಿಸಿದ್ದರು. ಶಿವನ ನೂರ ಏಳು ಕರಣಗಳನ್ನೂ ಶಕ್ತಿ ತೋರಿದಳು. ಕೊನೆಯದಾಗಿ ಆತ ಲಲಾಟತಿಲಕ ಕರಣದಲ್ಲಿ ನಿಂತುಕೊಂಡ. ಶಕ್ತಿ ಇದನ್ನಭಿನಯಿಸಲಾರದೆ ನಾಚುಗೆಯಿಂದ ತಲೆ ತಗ್ಗಿಸಿ ಸೋಲನ್ನೊಪ್ಪಿಕೊಂಡಳಂತೆ.

"ಅಂದಿನ ಶಕ್ತಿಯಂತೆ ಇಂದು ನೀನು ನಾಟ್ಯಸರಸ್ವತಿಯ ಮುಂದೆ ನಿಂತು ಸ್ಪರ್ಧೆ ಹೂಡಿದಂತಿತ್ತು ಮಗೂ–ನಿನ್ನ ನೃತ್ಯ. ನೃತ್ಯಲೋಕದ ರಾಣಿಯಾಗು, ಅಹಂಕಾರವನ್ನು ಮಾತ್ರ ತುಳಿದಿಡಲು ಮರೆಯಬೇಡ. ನಿನಗೆ ಮಂಗಳವಾಗಲಿ.

"ಇಂದಿನ ಪೂಜೆಯಲ್ಲಿ ಕಲ್ಯಾಣಿಯೂ, ಕೃಷ್ಣರಾಯನೂ ಇಬ್ಬರೂ ವಾಗ್ದೇವಿಗೆ ತಮ್ಮನ್ನು ತಾವು ಅರ್ಪಿಸಿಕೊಂಡರು. ಅವರ ಜೀವನ ಈ ದಾರಿಯಲ್ಲಿ ನಡೆಯಲಿ, ಬಾಳು ಹಸನಾಗಲಿ. ಕಲಾದೇವಿಯ ಸೇವೆಯ

ನ್ನವರು ಮಾಡುವವರೆಗೆ, ಆಕೆಯ ಪೂರ್ಣ ಅನುಗ್ರಹ ಅವರಿಗಿದೆ" ಎಂದು ಶಂಕರಭಟ್ಟರು ತನ್ನ ಹಾಗೂ ಸಭೆಯ ಪರವಾಗಿ ಮಾತನಾಡಿದರು.

"ಪತಿಯ ಮನೆಗೆ ತೆರಳುವ ಮಗಳು ತನ್ನ ಹೃದಯದ ಅಳಲನ್ನೆಲ್ಲ ತೋಡಿಕೊಳ್ಳುವಂತೆ ಮಗೂ-ಈ ದಿನ ನರ್ತಿಸಿದ್ದಾಳೆ. ಮಾತೃಮಂದಿರ ಬಿಡಲಾರೆ, ಪತಿಗೃಹ ಸೇರುವುದು ಧರ್ಮ ಎಂಬ ಧರ್ಮ ಸಂಕಟಕ್ಕೆ ಸಿಲುಕಿದ ವಧುವಿನಂತೆ ಅವಳು ಅನುಭಾವ ವ್ಯಕ್ತಪಡಿಸಿದ್ದಾಳೆ. ಅವಳಿಗೆ ನಿಮ್ಮ ಆಶೀರ್ವಾದವಿರಲಿ" ಎಂದು ಸಿಂಹ ಮಾತು ಮುಗಿಸಿದ. ತನ್ನ ಮಾತಿನಲ್ಲಿ ಇದೇ ಅವಳ ಕೊನೆಯ ನೃತ್ಯ ಎಂದು ಸೂಚಿಸಿದರೂ, ಖಚಿತವಾಗಿ ಹೇಳಲಿಲ್ಲ.

ಆದರೂ, ಕಲ್ಯಾಣಿ ತಿರುವನಂತಪುರಕ್ಕೆ ತನ್ನ ತಾಯಿಯನ್ನು ಸೇರಲು ಹೋಗುತ್ತಾಳೋ ಏನೋ. ಅಥವಾ ಕಲಾಮಂಡಲವನ್ನು ಬಿಡಬಹುದೇ? ವಿವಾಹವಾಗುವ ಸಂಭವವಿದೆಯೇ? ಎಂದು ನಾನಾವಿಧವಾಗಿ ತಮ್ಮಲ್ಲೇ ಪ್ರಶ್ನಿಸಿಕೊಂಡು ಶಂಕಿಸಿಕೊಂಡು ಕಲಾಪ್ರೇಮಿಗಳೆಲ್ಲ ತಮ್ಮ ಮನೆಗಳಿಗೆ ಹೊರಟರು. ಸಿಂಹ ಅವರನ್ನೆಲ್ಲ ಹೊರಬಾಗಿಲವರೆಗೂ ನಡೆದು ಬೀಳ್ಕೊಟ್ಟ. ಶಂಕರಭಟ್ಟರೂ ಕಲ್ಯಾಣಿಯನ್ನು ಆಶೀರ್ವದಿಸಿ, ಕೃಷ್ಣರಾಯನ ಬೆನ್ನು ತಟ್ಟಿ ಹೊರಟರು.

ಕೃಷ್ಣ ಬಸ್ ನಿಲ್ದಾಣಕ್ಕೆ ತಾನು ಮುಂಜಾನೆ ೪ ಘಂಟೆಗೆ ಸರಿಯಾಗಿ ಬರುವದಾಗಿ ತಿಳಿಸಿ ಟಿಕೆಟ್ ಕೊಂಡಿದ್ದ. ಅಂದು ಕಲಾಮಂಡಲದಲ್ಲೇ ಅವನ ಬಿಡಾರವಾಯಿತು. ಮಾತುಕತೆಗಳಲ್ಲಿ ಎಲ್ಲರೂ ಸ್ವಲ್ಪ ಹೊತ್ತು ಕಳೆದರು.

"ಯಾವ ದಾರಿ ತುಳಿಯುವುದಿದ್ದರೂ ಎರಡು ಬಾರಿ ಯೋಚಿಸಿ ನಿರ್ಧಾರ ಮಾಡು ಮಗೂ."

"ಆಗಲಿ ಸ್ವಾಮಿ."

"ಹೊಸ ಬಾಳು ಬಾಳಲು ಹೊಸ ಪ್ರಪಂಚಕ್ಕೆ ಕಾಲಿಡುತ್ತಿದ್ದೀಯಾ. ನೀನು ಎಂದಿನವರೆಗೆ ಎದೆಗೆಡದೆ ಮುನ್ನಡೆಯುತ್ತೀಯಾ ಅದುವರೆಗೂ ನಿನಗೆ ತೊಂದರೆಯಾಗಲಾರದು. ನೀನು ಎದೆಗೆಟ್ಟಾಗಲೇ ಒಂದರ ಹಿಂದೊಂದರಂತೆ ತೊಡಕುಗಳು ಮೂಡಿ ನಿನ್ನ ಹೃದಯವನ್ನು ನಡುಗಿಸಿ ವಿವೇಚನೆ ಕೆಡಿಸಿ ದಾರಿ ತಪ್ಪಿಸುತ್ತವೆ. ಇದು ನೆನಪಿರಲಿ."

"ತಮ್ಮ ಆಶೀರ್ವಾದ ಬಲದಿಂದ ಧೈರ್ಯವಾಗಿ ಮುನ್ನಡೆಯುತ್ತೇನೆ."

"ಇವಳು ಇಂದಿನಿಂದ ನಿನ್ನವಳು–ಕೃಷ್ಣ. ನಿನ್ನ ತಂದೆ ತುಂಬ ತುಂಬಿದ ಬಾಳು ಬಾಳಿದವರು. ಕಲೆಗಾಗಿ ತನ್ನ ಬಾಳನ್ನು ಬವಣಿಸಿದವರು. ಇಂದಿಗೂ ಅದೇ ತನ್ನ ಜೀವನದ ಉಸಿರೆಂದು ನಂಬಿದವರು. ಅವರ ಆದರ್ಶದ ಬೆಳಕಿನಲ್ಲಿ ಮುನ್ನಡೆ. ನಂಬಿದವರಿಗೆ ದ್ರೋಹ ಬಗೆಯಬೇಡ. ಎಂದೆಂದಿಗೂ ಇವಳು ನಿನ್ನವಳು."

"ಆಗಲಿ ಸ್ವಾಮಿ. ಈ ದಾರಿ ತುಳಿಯಬಾರದಿತ್ತು; ಯಾವುದೋ ವಿಧಿ ನಮ್ಮನ್ನು ಒಂದುಗೂಡಿಸಿತು. ನನ್ನಿಂದ ಕ್ಷಮಿಸಲಾಗದ ತಪ್ಪು ನಡೆದಿದೆ. ಕಲಾಮಂಡಲಕ್ಕೆ ಅಪಚಾರವಾಯಿತು. ತಮಗೆಲ್ಲ ಅನ್ಯಾಯ ವಾಯಿತು, ನೋವಾಯಿತು, ದುಃಖವಾಯಿತು. ನನ್ನನ್ನು ಕ್ಷಮಿಸಿ...."

"ನಿನ್ನ ಬಗೆಗೆ ನಿನಗೇ ಅರಿವಾದ ಬಳಿಕ ಆ ಪಾಪ ನಿನ್ನನ್ನು ಕಾಡ ಲಾರದು. ಧೈರ್ಯದಿಂದ ಮುನ್ನಡೆ."

"ಕಲೆಗಾಗಿ ನನ್ನೀ ಬಾಳು ಮೀಸಲುಮಾಡಲು ನಾನೂ ನಿರ್ಧರಿಸಿ ಕಲಾದೇವಿಯ ಪೂಜೆ ಆರಂಭಿಸಿದೆ. ಕಲಾಮಂಡಲದಲ್ಲಿ ಆಶ್ರಯ ದೊರೆ ಯಿತು; ನೀವೂ ಮಾಸ್ತರರೂ ಆದರಿಸಿ ಎತ್ತಿ ನಿಲ್ಲಿಸಿ ಸಲಹಿದಿರಿ. ಅದನ್ನು ನಾನೆಂದೂ ಮರೆಯಲಾರೆ. ನನ್ನನ್ನು ಕ್ಷಮಿಸಿದ್ದೇನೆ ಎಂದು ಆಶೀರ್ವದಿಸಿ. ಇಂದು ದಾರಿ ತಪ್ಪಿದ್ದೇನೆ; ಆದರೂ ಕಲಾದೇವಿಯನ್ನು ಮರೆಯುವುದಿಲ್ಲ ವೆಂದು ಆಣೆ ಮಾಡುತ್ತೇನೆ."

"ಸಾಕ್ಷಾತ್ಕಾರಕ್ಕೆ ಮುಂದಾಗಿ ತಪಸ್ಸಿಗೆ ನಿಂತ ಅನುಭಾವಿಗಳಿಗೆಲ್ಲ ಇಂಥ ಎಡರು ವಾಸ್ತವ ಕೃಷ್ಣ. ದೇವರನ್ನು ಕಾಣಬೇಕೆಂದು ಬಗೆದು ತಪಸ್ಸುಮಾಡಲು ಕುಳಿತವರಿಗೆ ನಾನಾಮುಖವಾದ ತಡೆಗಳು ಬಂದಿವೆ. ಅಂತಹವುಗಳಲ್ಲಿ ಹೆಣ್ಣು ಮುಖ್ಯ. ಅದು ಕೊನೆಯ ಅಸ್ತ್ರ. ಆ ಬಾಣಕ್ಕೆ ಬಲಿಯಾಗದವನಿಗೆ ದೇವರು ಒಲಿಯುತ್ತಾನೆ. ಇದನ್ನು ತಿಳಿದು ವರ್ತಿಸು. ಇಂದು ನೀವಿಬ್ಬರೂ ಅಂಥ ಸತ್ವಪರೀಕ್ಷೆಗೆ ಒಳಗಾಗಿದ್ದೀರಿ. ಸೋತು ವಿಲಾಸದಲ್ಲಿ ಕಾಲ ಕಳೆದು ಕಲೆಯನ್ನು ಮರೆತರೆ ನಿಮ್ಮ ಗುರಿ ದೂರವಾಗು ತ್ತದೆ. ಅಜೇಯರಾಗಿ ಮುನ್ನಡೆದರೆ ಗುರಿ ಮುಟ್ಟುತ್ತೀರಿ."

"ಆಗಲಿ ಸ್ವಾಮಿ."

" ಕಲಾವಿದನ ಸ್ಥಿತಿಯೂ ಅದೇ. ಆತನನ್ನು ಒಲಿಸಿಕೊಂಡು, ಅವನ ಗುರಿ ತಪ್ಪಿಸಿ, ಧ್ಯೇಯ ಮರೆಸಲು ವಿವಿಧ ರೀತಿಯಿಂದ ಹೆಣ್ಣು ಬರುತ್ತದೆ. ಮಾಸ್ತರರ ಜೀವನದಲ್ಲಿ ಅಂಥ ಎಡರುಗಳು ನೂರಾರು ಬಂದಿವೆ. ಅವೆಲ್ಲವು ಗಳನ್ನು ಇದಿರಿಸಿ ನಿಂತು ಅವರು ತಮ್ಮ ಗುರಿ ಮುಟ್ಟಿದರು. ಅಂಥ ಮೊದಲ ತಡೆ ನಿಮಗಿಬ್ಬರಿಗೂ ಇಂದು ಬಂದಿದೆ. ಇಂದು ನೀವು ವಿಲಾಸಿಗಳಲ್ಲ; ಪತಿ ಪತ್ನಿಯರು, ಜತೆಗೂಡಿ ಪರಸ್ಪರ ಸಹಕಾರ ನೀಡಿ ಮುನ್ನಡೆಯುವ ಕಲೋ ಪಾಸಕರು. ಹೆಣ್ಣಿನ ಬಗೆಗೆ ಹಿರಿಯರು ತಾಯಿ, ವೇಶ್ಯೆ, ಬಂಧು, ಬಳಗ ಎಂದೆಲ್ಲ ವಿವರಿಸಿ ಹೇಳಿದ್ದಾರೆ.

" ಪರಶಿವನು ಕೂಡಾ ಆದಿಶಕ್ತಿಯನ್ನು ಆದರಿಸಿ, ಉನ್ನತ ಪೀಠದ ಮೇಲೆ ಕುಳ್ಳಿರಿಸಿ, ಜಗನ್ಮಾತೆ, ಮಹಾತಾಯಿ ಎಂದು ಪೂಜಿಸಿ ಅವಳ ಮುಂದೆ ಸಂಧ್ಯಾನೃತ್ಯವನ್ನು ಅಭಿನಯಿಸಿದ್ದಾನೆ."

" ತಮ್ಮ ಮಾತು ಮರೆಯುವುದಿಲ್ಲ ಸ್ವಾಮಿ."

" ನಿಮಗೆ ಒಳಿತಾಗಲಿ. ಈಕೆ ನಿನ್ನವಳು, ಇವಳ ಕೈಬಿಡಬೇಡ. ಇವನು ನಿನ್ನವನು ಕಲ್ಯಾಣಿ, ನೆರಳಿನಂತೆ ಹಿಂಬಾಲಿಸಿ ಇವನನ್ನೇ ನಂಬಿ ಬಾಳು-ಬದುಕು."

ಇಬ್ಬರೂ ಕಣ್ಣಿನಲ್ಲಿ ನೀರು ತಂದುಕೊಂಡು ಸಿಂಹನಿಗೂ ಅವನ ಪತ್ನಿಗೂ ವಂದಿಸಿದರು. ಇಬ್ಬರೂ ಆಶೀರ್ವದಿಸಿದರು.

" ರಾತ್ರಿ ಬಹಳ ಹೊತ್ತಾಯಿತು. ಮಲಗಿಕೊಳ್ಳಿ. ಬೆಳಿಗ್ಗೆ ಬೇಗನೇ ಎಚ್ಚರಿಸುತ್ತೇನೆ."

ತನ್ನ ಕೋಣೆಗೆ ತೆರಳಿ ನಿದ್ರಿಸಿದ ಕಲ್ಯಾಣಿಗೆ ಏನೇನೋ ಯೋಚನೆ ಗಳು. ಇಂಥ ಪವಿತ್ರ ಮನೋಭಾವದ-ಸಿಂಹ, ದೇವರಂತೆ ಪರಿಶುದ್ಧರಾದ ಮಾಸ್ತರ್-ಇವರಿಬ್ಬರನ್ನು ಅಗಲಿಹೋಗುವುದು ಸರಿಯೇ? ಇಲ್ಲೇ ಇದ್ದು ಬಿಡಲೇ ಎಂದು ಅವಳ ಹೃದಯ ಧ್ವನಿ-ಮರುದನಿ ನೀಡುತಿತ್ತು. ಮುಂದಿನ ಜೀವನ ನೆನೆದಂತೆಲ್ಲ-ಅದು ಹೇಗಿರುತ್ತದೋ, ಅಲ್ಲಿ ಎಷ್ಟು ಕಷ್ಟಗಳು ಕಾದಿರು ವವೋ ಎಂಬ ಭೀತಿಯ ಮಿಂಚು ಮಿಂಚುತಿತ್ತು.

ಹೇಗೋ ನಿದ್ದೆ ಹತ್ತಿತೆನ್ನುವಷ್ಟರಲ್ಲಿ ವಿಚಿತ್ರವಾದ ಕನಸುಗಳು; ಅರ್ಥವಾಗದ ದೃಶ್ಯಗಳು.

"ಯಾವುದೋ ಕಾಡಿನ ನಡುವೆ ಕಲ್ಯಾಣಿ ಸಿಕ್ಕಿಕೊಂಡಿದ್ದಳು. ಅವಳ ಜತೆಗೇ ಕೃಷ್ಣ ನಡೆಯುತ್ತಿದ್ದ. ಎತ್ತ ತಿರುಗಿದರೂ ದಾರಿಯಿಲ್ಲ. ಎಲ್ಲೆಲ್ಲೂ ಮುಳ್ಳು, ಹುಲ್ಲು, ಪೊದೆಗಳು. ಸರಕ್ಕನೆ ಅಲ್ಲೊಂದು ಹಾವು, ಇಲ್ಲೊಂದು ಹಕ್ಕಿ ನುಸುಳಿ ಮುನ್ನಡೆಯುತ್ತಿವೆ. ಎಲ್ಲೋ ದೀಪಗಳಂತೆ ಎರಡು ಕಣ್ಣು ಗಳು. ನಿಟ್ಟಿಸಿ ದಿಟ್ಟಿಸಿ ನೋಡಿದಾಗ ಹುಲಿಯಂತೆ ಕಂಡು ಬರುತ್ತಿದೆ. ಕಾಲಿಗೆ ಮುಳ್ಳು ಚುಚ್ಚಿತೆಂದು ಕಾಲೆತ್ತಿ ಬಾಗಿದಾಗ ವಾಲಿದಳು, ಹತ್ತಿರದ ಬೀಳಲನ್ನು ಹಿಡಿದಳು. ಅದು ಶೀತಳ, ರಬ್ಬರ್‌ನಂತಿದೆ, ಭೀತಿಯಿಂದ ಮೇಲೆ ನೋಡಿದರೆ ಹೆಬ್ಬಾವಿನ ತಲೆ. ಮುಂದೆ ಇಬ್ಬರೂ ಧಾವಿಸಿದರು. ಹೇಗಾದರೂ ಬದುಕೋಣವೆಂದು ಆಕೆ ಓಡಿದಳು; ಬಟ್ಟೆ ಹರಿದಿತ್ತು, ಕೈಗೆ ಮುಳ್ಳು ಗೀರಿ ರಕ್ತ ಸೋರುತ್ತಿತ್ತು. ಕಾಲಿಗೆ ಒಂದೋ ಎರಡೋ ಮುಳ್ಳು ನಾಟಿದೆ. ಏನೋ ಕಿರಿಚಿದ ಸದ್ದು, ಕಲ್ಯಾಣಿ ಬಿಸಿಯುಸಿರೆಳೆಯುತ್ತ ತಿರುಗಿ ನೋಡಿದಳು, ಭೀತಿಯಿಂದ ಬೆವರು ಸುರಿಯುತ್ತಿತ್ತು, ಕೃಷ್ಣನೇ ಅವಳನ್ನು ಹಿಂಬಾಲಿಸುತ್ತಿಲ್ಲ....ಎಲ್ಲಿ ಹೋದ, ಏನಾಯಿತು, ದಾರಿ ತಪ್ಪಿತೇ?.... ಯೋಚನೆ, ಭೀತಿ, ನಡುಕ, ಅಳು....ಕಣ್ಣು ಕತ್ತಲೆ ಬಂದು ಅವಳು ಉರುಳಿ ಬಿದ್ದಳು.

ಯಾರದೋ ಕೈ ಅವಳನ್ನೆತ್ತಿತ್ತು. ಆಕೆ ತಿರುಗಿ ನೋಡಿದಳು. ಅಪ ರಿಚಿತ ವ್ಯಕ್ತಿ. ಕಲ್ಯಾಣಿ ಎದ್ದಳು. ರಂಗಮಂಟಪ ಸಿದ್ಧವಾಗಿದೆ. ನರ್ತ ನಕ್ಕೆ ಅಣಿಯಾಗಿದೆ. ಕೈ ಹಿಡಿದೆತ್ತಿದವನು ಬಾ ನರ್ತಿಸೋಣ ಎಂದು ಕರೆ ಯುತಿದ್ದಾನೆ. ಯಾರೋ ಬಂದು ಗಲ್ಲ ಹಿಡಿದು ಹತ್ತಿರದಿಂದ ಮುಖ ನೋಡಿ, ನರ್ತಿಸಮ್ಮ, ನಾನೇ ತಬಲಾ ಬಾರಿಸುತ್ತೇನೆ ಎಂದು ಅಲ್ಲಿಂದ ನಡೆದ. ಮತ್ತೊಬ್ಬ ಬಂದು ಕೊಂಚ ನಿಲ್ಲು, ಎಂದು ಬಾಗಿ ಅವಳ ಕಾಲಿಗೆ ಗೆಜ್ಜೆ ಕಟ್ಟಿದ. ಇನ್ನೊಬ್ಬ ತೆಗೆದುಕೋ ಈ ಪಾನಕ, ತುಂಬ ಬಳಲಿದ್ದೀಯ ಎಂದ. ಎಲ್ಲೆಲ್ಲೂ ಆದರ, ಸ್ವಾಗತ. ಅವಳ ಬೆನ್ನು ತಟ್ಟಿ, ಮೈ ಮುಟ್ಟಿ ಕೈ ಕುಲುಕುವಂಥ ಬೇಡವಾದ ಆದರದ ಸಲಿಗೆ. ಕಲ್ಯಾಣಿ ಉಬ್ಬಿದಳು; ಹಾಗೇ ಸಂದೇಹ ಪಟ್ಟಳು. ಉತ್ಸಾಹ ಅವಳನ್ನು ನರ್ತಿಸುವಂತೆ ಮಾಡಿತು; ಅವಳು ತುಂಬ ನರ್ತಿಸಿದಳು. ಯಾರೋ ಅವಳನ್ನು ಬರಸೆಳೆದಪ್ಪಿದರು; ಅವಳು ಭೀತಿಯಿಂದ ನಡುಗಿ ತಿರುಗಿದಳು–ಕೃಷ್ಣನು ಅಲ್ಲೂ ಇಲ್ಲ. ಅಪ್ಪಿ

ಕೊಂಡವರು ಯಾರು ?....ಆಕೆಗೆ ಎಚ್ಚರವಾಯಿತು.

ಕನಸಿನ ಬಗೆಗೇ ಯೋಚಿಸುತ್ತ, ಮತ್ತೆ ಅಂಥ ಕನಸು ಬೀಳಬಹುದು ಎಂಬ ಭೀತಿಯಿಂದ ನಿದ್ದೆಯನ್ನೂ ದೂರ ಮಾಡುತ್ತ ಕಲ್ಯಾಣಿ ಮಲಗಿ ಕೊಂಡಳು. ಅವಳ ಮೈ ಬೆವರಿತ್ತು.

ಹಾಗೇ ಎದ್ದು ಮುಖ, ಮೈ ಒರಸಿಕೊಂಡು, ನೀರು ಕುಡಿದು, ಹಾಸಿ ಗೆಯ ಮೇಲೆ ಒರಗಿಕೊಂಡಳು.

ಮುಂಜಾವದ ಕೋಳಿ ಕೂಗಿತು.

ಹೊರಡುವ ಹೊತ್ತಾಯಿತು ; ತನ್ನ ನವಜೀವನದ ಅರುಣೋದಯ ಹತ್ತಿರವಾಯಿತು ; ಎಂದು ಕಲ್ಯಾಣಿ ಧೈರ್ಯ ತಂದುಕೊಂಡಳು. ಕನಸಿನ ಪರಿಣಾಮವಾಗಿ ಮೂಡಿದ ಭೀತಿಯನ್ನು ಮರೆಯಲು ಯತ್ನಿಸಿದಳು. ತಾನೇನು ಸಿದ್ಧತೆ ಮಾಡಬೇಕು, ತನ್ನ ಬಟ್ಟೆಬರೆಗಳನ್ನೆಲ್ಲ ತುಂಬಿದ್ದೇನೆಯೋ ಎಂದು ಎಲ್ಲವನ್ನು ಒಂದೊಂದಾಗಿ ಎಣಿಕೆ ಹಾಕಲು ಆರಂಭಿಸಿದಳು ; ಕನ ಸನ್ನು ಮರೆಯಲೆಂದು.

ಆದರೂ, ಮರೆಯಲೆತ್ನಿಸಿದಷ್ಟಕ್ಕೂ ಅದರ ನೆನಪು ಅಧಿಕವಾಗಿ ಬಂದು ಅವಳನ್ನು ಕಾಡುತಿದ್ದುವು.

ಸಿಂಹ ಎಚ್ಚರವಾಗಿ ದೀಪದ ಬೆಳಕಿನಲ್ಲಿ ಗಡಿಯಾರ ನೋಡಿದ. ಆಗಲೇ ಮೂರುವರೆ ಗಂಟೆ. ಹೊತ್ತಾಯಿತು ಎಂದು ಮೇಲೆದ್ದು ಕಲ್ಯಾಣಿ ಯ ಕೋಣೆಯ ಕದ ತಟ್ಟಿದ. ಎಚ್ಚರವಾಗೇ ಇದ್ದ ಆಕೆ ಬಾಗಿಲು ತೆರೆ ದಳು.

" ಹೊರಡುವ ಉತ್ಸಾಹದಲ್ಲಿ ನಿದ್ದೆಯೇ ಬಂದಿಲ್ಲವೇನು ಮಗೂ.... ಮಕ್ಕಳ ಅವಸ್ಥೆಯೇ ಹೀಗೆ. ಹ್ಞೂ....ಏಳು."

" ರಾತ್ರಿಯೆಲ್ಲ ಏನೇನೋ ಹಾಳು ಕನಸು ಸ್ವಾಮಿ. ಅದಕ್ಕೇ ನಿದ್ರೆ ಯಿರಲಿಲ್ಲ."

" ಅದೆಲ್ಲ ಮುಂದಿನ ಜೀವನದ ಸಂಕೇತವಿರಬಹುದು ಮಗು. ಅದಕ್ಕೆ ಹೆದರಬಾರದು ; ಧೈರ್ಯ ಮುಖ್ಯ."

ಕಲ್ಯಾಣಿಗೆ ಮುಂದೆ ಮಾತು ಬರಲಿಲ್ಲ. ಭವಿಷ್ಯದ ಸಂಕೇತವಾದರೆ.... ಇದೇ ಕನಸಿನ ಅರ್ಥವಾದರೆ....ಹೀಗೇ....ಆದರೆ....ಎಂಬ ಭೀತಿ ಅವಳಲ್ಲಿ

ಮೂಡಿತು. ಆದರೂ ಧೈರ್ಯ ತಂದುಕೊಂಡಳು. ಅಶುಭ ಕನಸುಗಳೆಲ್ಲ ಶುಭ ಸೂಚನೆಯ ಚಿಹ್ನೆಗಳೆಂದು ಹಿಂದೊಮ್ಮೆ ಸಿಂಹ ಹೇಳಿದುದನ್ನು ನೆನಸಿಕೊಂಡು ಧೈರ್ಯತಂದುಕೊಂಡಳು.

ಕೃಷ್ಣನೂ ಎದ್ದು, ಸಿದ್ಧತೆ ಮಾಡಿಕೊಂಡ.

ಇಬ್ಬರೂ ಹೊರಟು ನಿಂತರು.

" ಏನು ತೊಂದರೆ ಬಂದರೂ ಕಾಗದ ಬರೆಯಲು ಮರೆಯಬೇಡಿರಿ."

" ಆಗಲಿ ಸ್ವಾಮಿ "

" ಯಾವಾಗ ಬೇಕಾದರೂ ಬರಬಹುದು, ಈ ಕಲಾಮಂಡಲದ ಬಾಗಿಲು, ನಮ್ಮ ಹೃದಯ, ಮಾಸ್ತರರ ತೋಳು ತೆರೆದೇ ಇರುತ್ತದೆ. ಇದು ನಿಮ್ಮ ಮನೆ–ಈ ಮಂದಿರ ನಿಮ್ಮದು."

" ಆಗಲಿ ಸ್ವಾಮಿ "

" ದೇವರು ನಿಮಗೆ ಒಳಿತು ಮಾಡಲಿ ; ಒಂದಾಗಿರಿಸಲಿ "

ಇಬ್ಬರೂ ನಮಸ್ಕರಿಸಿ ಬೀಳ್ಕೊಟ್ಟರು.

ಹಿತ್ತಿಲಿನ ಬಾಗಿಲಿನವರೆಗೂ ಎಲ್ಲರೂ ಬಂದು ಅವರನ್ನು ಕಳುಹಿಸಿಕೊಟ್ಟರು.

ಮನೆಗೆ ಹಿಂತಿರುಗಿ ಸಿಂಹ ಕುಸಿದು ಕುಳಿತ !

## ೫

ಜನರನ್ನು ಮೆಟ್ಟಿ ತುಳಿದು ಅರಮನೆಗಳನ್ನು ರಾಣೀವಾಸಗಳನ್ನೂ ಕಟ್ಟಿ ಅಧಿಕಾರ ದರ್ಪಗಳ ವ್ಯಭಿಚಾರದಲ್ಲಿ ತಲ್ಲೀನರಾಗಿದ್ದ ಅಸಂಖ್ಯಾತ ಅರಸರ ಶಿರಗಳನ್ನು ಉರುಳಿಸಿದ ಪರಶುರಾಮ.

ತಾಯಿ ದೇವರೆಂದು ತಿಳಿದು ಅವಳೇ ಸರ್ವಾಧಿಕಾರಿ ಎಂದು ನಂಬಿ ಅವಳ ಅಂಕೆಗೆ ನಿಂತು ನಡೆದು ಬಾಳಿ ಬದುಕುವ ಗಣರಾಜ್ಯವಿತ್ತು ಈ ಭಾರತದಲ್ಲಿ. ಭಗವತಿಯ ಅಧಿಕಾರವೇ ಅತ್ಯುಚ್ಚ ; ಅವಳನ್ನಿದಿರಿಸುವ ಕೆಚ್ಚು ಯಾರಿಗೂ ಇರಲಿಲ್ಲ. ಗಣದ ಸಕಲರೂ ಸಮಾನರು ; ತಾಯಿಯ ಮಕ್ಕಳು ಅವಳ ಆಣತಿಯಂತೆ ನಡೆಯುವವರು. ಜತೆಯಾಗಿ ದುಡಿದು, ಜತೆಯಾಗಿ ಉಂಡು ತಿಂದು ನಲಿದು ವಿರಮಿಸುತಿದ್ದರು. ಬೇಟೆಯಾಡಿ, ಆಹಾರ ಸಂಗ್ರ

ಹಿಸಿ ಅನುಭೋಗಿಸಿ ಬಾಳುತ್ತಿದ್ದರು. ಅದೊಂದು ಕಾಲ.

ಗಂಡಸಿನ ಸಹಾಯವಿಲ್ಲದೆ ಹೆಣ್ಣು ತಾಯಿಯಾಗಲಾರಳು—ಎಂಬ ಭಾವ ಮೂಡಿತು. ತನಗೆ ಬೇಕಾದವರನ್ನು ತನ್ನವಳಾಗಿ ಮಾಡಿಕೊಂಡು ಅವರಿಂದ ಗಣದ ಉತ್ಕರ್ಷೆಗೆ ಸಹಾಯಕವಾಗಿ ಮಕ್ಕಳನ್ನು ಪಡೆದು ತಾಯಿಯಾಗುತ್ತಿದ್ದವಳನ್ನು, ಅವಳು ಒಲ್ಲದಿದ್ದರೂ ಬಯಸಿದವರಿದ್ದರು. ಅವರ ಬಯಕೆಯ ಸ್ವಾರ್ಥ ಅವರನ್ನು ಹೊಸದಾರಿಗೆ ತಿರುಗಿಸಿತು. ತಂದೆಯೇ ಮೇಲು ಎಂಬ ಪ್ರಚಾರವನ್ನು ಅವರು ಆರಂಭಿಸಿದರು. ಗೋತ್ರದ ಯುಗ ಪಿತೃಯುಗವಾಯಿತು. ಪಿತೃದೇವೋ ಭವ ಎಂದು ಸಾರಿ ಗಣದ ಜನ ಅವನನ್ನು ಭಗವಂತ ಎಂದು ಕರೆದು, ತಾಯಿ ಅವನ ಅಂಕೆಯವಳು ಎಂದು ಸಾರಿದರು. ಕಾಲ ಕಳೆದಂತೆ ಹಟ್ಟಿ ಉಳಿಸಿ, ಹಸುಗಳನ್ನು ಸಲಹಿ, ಅವುಗಳಿಗಾಗಿ ಅವುಗಳಿಂದಾಗಿ ಸಾವಿರಾರು ಜನರನ್ನು ಕೂಡಿದ ಗಣಗಳನ್ನು ಉಳಿಸಿಕೊಂಡು ಬಂದ ಗಣಪತಿಗಳಿಗೆ, ತಮ್ಮ ನೆಲೆಯಲ್ಲಿ ಆಹಾರ ಸಾಲದಾಯಿತು. ಹಸುಗಳಿಗೆ ಹುಲ್ಲು ಸಾಲದು; ಜನಕ್ಕೆ ಬೇಟೆಯೂ ಇಲ್ಲ.

ಅಧಿಕಾರವನ್ನು ಹೆಚ್ಚು ಹೆಚ್ಚಾಗಿ ತನ್ನ ಅಂಕೆಗೆ ಒಳಗಾಗಿಸಿ, ಗಣದ ಸರ್ವಾಧಿಕಾರಿಯಾಗುತ್ತಿದ್ದ ಗಂಡಸು ಇತರರ ಹೊಲ–ನೆಲೆಗಳ ಮೇಲೆ ಆಕ್ರಮಣ ಹೂಡಿದ ಅಥವಾ ಆ ಆಕ್ರಮಣ ತಡೆದ. ಸೇನೆ, ಹೋರಾಟ, ಅಧಿಕಾರ ಬೆಳೆದು ರಾಜ್ಯಗಳ ಉದಯವಾಯಿತು. ಸಮರ ಸಾಹಸ ಬಲ್ಲವರ ಅಧಿಕಾರ ಪ್ರಭಾವ ಬೆಳೆದು ಅವರು ಕ್ಷತ್ರಿಯರಾದರು; ಆಳುವ ಅಧಿಕಾರ ತಮ್ಮದೆಂದರು. ವೇದಾಧ್ಯಯನ, ವಿವೇಕ, ನೀತಿ ಸಾರಗಳಲ್ಲಿ ಕಾಲ ಕಳೆದವರು—ಬರೆಸಿದಂತೆ ಬರೆವ, ಹೇಳಿಸಿದಂತೆ ಹೇಳುವ ನಿಕೃಷ್ಟ ತಳವನ್ನು ಮುಟ್ಟಲು ಹಿಂದಾಗದ ಬ್ರಾಹ್ಮಣರಾದರು. ಹೀಗೆ ನಡೆಯಿತು ವರ್ಣ....

೫೬ ರಾಜ್ಯಗಳಿದ್ದುವಂತೆ ಭಾರತದಲ್ಲಿ. ಅಧಿಕಾರವನ್ನು ತಮ್ಮದಾಗಿ ಮಾಡಿಕೊಂಡ ಕ್ಷತ್ರಿಯರು ತಮ್ಮ ಬಂಧುಗಳನ್ನು ಮರೆತರು. ತಾಯಿ, ತಂದೆ ದೇವರಾಗಿದ್ದ ಕಾಲ ಮರೆತರು. ಮಣ್ಣು ಇವರದಾಯಿತು; ಹೆಣ್ಣು ಇವರ ಕಾಲ ಕಸವಾಯಿತು; ವಿಲಾಸದ ಸಾಧನವಾಯಿತು, ಭೋಗದ ಪೂರಕವಾಯಿತು.

ತಾಯಿ ದೇವರಾಗಿದ್ದ ಕಾಲ, ಎಲ್ಲರೂ ಸಮನಾಗಿ ಬಾಳಿ ಬದುಕಿ ಸ್ವಾರ್ಥ ಬಯಸದ ಕಾಲ ಬೇಕೆಂದ ಕ್ರಾಂತಿಕಾರಿ ಪರಶುರಾಮ ಈ ದಾರಿ ಸಹಿಸಲಿಲ್ಲ. ಅರಸರೆನ್ನುವವರ ಅನೀತಿ ಅತ್ಯಂತ ಹೇಯವಾಯಿತು. ಜನ ಬದುಕುವುದು ಕಷ್ಟವಾಯಿತು. ಅಸಮಾನ ಪ್ರಭಾವಶಾಲಿಯೆನಿಸಿದ್ದ ಅವನ ತಂದೆಗೇ ಸಾವಾಯಿತು; ತಾಯಿಗೆ ಅಪಮಾನವಾಯಿತು; ಬಂಧುಗಳು ಅಳಿದರು. ಪರಶುರಾಮ ಕ್ರಾಂತಿಕಾರಿಯಾದ !

ಅವನದು ಕ್ಷತ್ರಿಯರ–ಅರಸರ–ನಾಶದ ನಿರ್ಧಾರ. ಅನಂತರ ಇನ್ನೇನು ....ಎಂಬುದು ಅವನಿಗರಿತಿರಲಿಲ್ಲ. ಅರಸರ ನಾಶವಾಯಿತು, ಆದರೆ ಮತ್ತೆ ಅಂಥ ಸಾವಿರ ಅನೀತಿವಂತರು ತಲೆ ಎತ್ತಿದರು. ಕೊನೆಯವರೆಗೂ ಅರಸರನ್ನು ಅಳಿಸುವುದೇ ಅವನ ಕೆಲಸವಾಯಿತು. ಎಂದೆಂದೂ ಅಂಥ ಸ್ವಾರ್ಥಿಗಳು ತಲೆ ಎತ್ತದಂತೆ ಮಾಡುವ ದಾರಿ ಅವನಿಗೆ ತಿಳಿಯದಾಯಿತು. ನಾಶದ ಯೋಚನೆ, ನೀತಿ, ಅವನದು.

ಆಗ ಶ್ರೀರಾಮಚಂದ್ರ ಅವನ ಮುಂದೆ ನಿಂತ. ಈ ಕೊನೆಯಿಲ್ಲದ ನಾಶದ ದಾರಿಯಿಂದ ನಿನ್ನ ಬಯಕೆ ಸಾಧಿತವಾಗುವುದಿಲ್ಲ; ಆಶೆ ಈಡೇರುವುದಿಲ್ಲ. ನಾನು ಅಂಥ ರಾಜ್ಯ ನಿರ್ಮಾಣಮಾಡುತ್ತೇನೆ; ಅರಸೊತ್ತಿಗೆಗಳಿಗೆಲ್ಲ ಆದರ್ಶವಾಗುವ ರಾಜ್ಯ ನಡೆಸುತ್ತೇನೆ. ಅರಸರನ್ನೂ ಅವರು ತುಳಿದು ನಿಂತ ಪ್ರಜೆಗಳನ್ನೂ ಒಂದೆಡೆ ಸೇರಿಸಿ, ಇಬ್ಬರಲ್ಲೂ ಸೌಹಾರ್ದ ಬೆಳೆಸಿ, ಹೊಸ ಯುಗವನ್ನು ಆರಂಭಿಸುತ್ತೇನೆ. ನಿನ್ನ ಗುರಿಯೇನು ? ನಿನ್ನ ಕನಸಿನ ರಾಜ್ಯವೇನು? ಅದನ್ನೇ ನಾನು ಆಗ ಮಾಡುತ್ತೇನೆ ಎಂದ.

ತನ್ನ ಕನಸಿನ ರಾಜ್ಯ ಹೇಗಿರಬೇಕೆಂಬುದು ತಿಳಿಯದ ಈ ಕ್ರಾಂತಿಕಾರಿ ಅವನ ವಾದಕ್ಕೆ ಮಣಿದು ತಾನು ಗೆದ್ದ ನೆಲವನ್ನೆಲ್ಲ ಅವನಿಗೆ ದಾನ ಮಾಡಿ ದಕ್ಷಿಣಕ್ಕೆ ತಿರುಗಿದ. ಆ ದಾನಕ್ಕೆ ಒಳಗಾಗದ ಪಶ್ಚಿಮ ಘಟ್ಟಗಳನ್ನು ಹಾದು ಬಂದ–ಕ್ರಾಂತಿಕಾರಿ ಪರಶುರಾಮ !

ಮಾತೃಯುಗದ ಗಣರಾಜ್ಯ ಸ್ಥಾಪಿಸಬೇಕು. ಎಲ್ಲರೂ ಜತೆಯಾಗಿ ದುಡಿದು ಬಾಳುವ ರಾಜ್ಯ ಬೇಕು. ಹೆಣ್ಣು ಎಲ್ಲರ ಮೇಲೆ ಪ್ರಭಾವ ಮೂಡಿಸುವ ನಾಡು ಕಟ್ಟಿ ನೆಲೆ ನಿಲ್ಲಿಸಬೇಕು ! ಅವನ ಈ ಬಯಕೆಯ ಪ್ರತೀಕ ಪರಶು[illegible] ಕ್ಷೇತ್ರ–ಕೇರಳ ಖಂಡ; ತುಳುವ ಖಂಡಗಳು.

ಇಂಥ ನಾಡಿಂದ, ಸ್ವಾತಂತ್ರ್ಯ ಬಯಸಿದ ಹೆಣ್ಣು-ಗಂಡುಗಳು ಇಂದು ಹೊರಟಿವೆ!

ತನ್ನ ನಾಡಿನ ಬಗೆಗೆ ನೆನೆದಷ್ಟು ಕಲ್ಯಾಣಿಗೆ ದುಃಖ ಉಕ್ಕಿಬಂತು. ಹುಟ್ಟಿದುದು ಕೇರಳ ಖಂಡದಲ್ಲಿ, ಬೆಳೆದುದು ತುಳುನಾಡಿನಲ್ಲಿ. ಈಗ ಪರಶುರಾಮ ಕ್ಷೇತ್ರದಿಂದ ಇಬ್ಬರೂ ಹೊರಡುತಿದ್ದೇವೆ-ಬೇರೊಂದೆಡೆ ಬಾಳಿ ಬದುಕಲು. ಹೆಣ್ಣಿಗೆ 'ಪೂರ್ಣ ಸ್ವಾತಂತ್ರ್ಯ ನೀಡುವ ರಾಜ್ಯ ರಚಿಸಿದ ಪರಶುರಾಮ. ಅಂಥ ರಾಜ್ಯದಲ್ಲೇ ತನಗೆ ಮಾತ್ರ ಇಂದು ಸ್ವಾತಂತ್ರ್ಯ ಇಲ್ಲವಾಗಿದೆ.

ಅದು ನಿಜವೇ? ಅದೇಕೆ ಹೀಗೆ? ತಾನು ಬಯಸಿದ ಸ್ವಾತಂತ್ರ್ಯ ಪರಶುರಾಮನ ಕಲ್ಪನೆಯ ಸ್ವಾತಂತ್ರ್ಯದಿಂದ ಬೇರೆಯಾದುದೇ? ತನಗೂ ಮೊದಲು ಸ್ವಾತಂತ್ರ್ಯವೀಯದಿದ್ದರೂ, ಆ ಬಳಿಕ ಸಿಂಹನವರು ಪೂರ್ಣ ಒಪ್ಪಿಗೆ ನೀಡಿದರಲ್ಲ! ಆ ಸ್ವಾತಂತ್ರ್ಯ ಸಾಲದೇ? ಪರಶುರಾಮ ತಾಯಿಗೆ ಸ್ವಾತಂತ್ರ್ಯಬೇಕು, ಆಕೆ ಎಲ್ಲರ ಮೇಲೂ ಪ್ರಭಾವ ಬೀರುವ ಉನ್ನತ ಪೀಠದಲ್ಲಿರಬೇಕು ಎಂದು ಬಯಸಿದ. ಆತ ತಾಯಿಯಾಗುವ ಸ್ವಾತಂತ್ರ್ಯ ನೀಡಲಿಲ್ಲವೇ?

ಇದೇನು ಪರಸ್ಪರ ವಿರೋಧಾಭಾಸ!

ಎಷ್ಟೇ ಯೋಚಿಸಿದರೂ ಅವಳಿಗೆ ತೃಪ್ತಿ ಇಲ್ಲ. ಯೋಚನೆ ಬೇಡವೆಂದಣಿಸಿದಷ್ಟಕ್ಕೂ ಅದು ಬಲವಾಗಿ ಧಾಳಿ ನಡೆಸುತಿತ್ತು. ಬಸ್ ಮಂಗಳೂರನ್ನು ಬಿಟ್ಟು ಹೊರಟಿತು. ಇನ್ನೂ ತನ್ನ ನೀತಿಯ ವಿವೇಕ ಅವಿವೇಕಗಳ ಬಗೆಗೆ ಕಲ್ಯಾಣಿ ಯೋಚಿಸುತಿದ್ದಂತೆ; ಪರಶುರಾಮನ ನಾಡಿನ ಬಗೆಗೆ ಅವನ ಸಾಹಸದ ಬಗೆಗೆ ಯೋಚಿಸುತಿದ್ದಂತೆ ಬೆಳಗಾಯಿತು. ಬಸ್ ಪುತ್ತೂರನ್ನು ತಲುಪಿತು. ಕೃಷ್ಣ ಕಾಫಿ ಕುಡಿಯೋಣವೆಂದು ಕರೆದಾಗ ಪಕ್ಕನೆ ಅವಳಿಗೆ ಎಚ್ಚರವಾಯಿತು.

"ಏನು ಇನ್ನೂ ನಿದ್ದೆಯ ಗುಂಗಿನಲ್ಲೇ ಇರುವಂತಿದೆ"

"ಇಲ್ಲ-ಕೊಂಚ ಚಳಿ. ಮತ್ತೇನೋ ಯೋಚನೆ" ಅವಳು ಬಸ್ಸಿನಿಂದ ಕೆಳಕ್ಕಿಳಿದಳು. ಹತ್ತಾರು ಕಣ್ಣುಗಳು ಅವಳೆಡೆ ಸರಿದವು. ಕೃಷ್ಣ ನಗುತ್ತ ಮಾತನಾಡಿದ....

"ಈಗಾಗಲೇ ಚಳಿಯೆಲ್ಲ ಬಿಟ್ಟು ಹೋಗಿರಬೇಕು. ಇಂದು ಪೂರ್ಣ ಸ್ವತಂತ್ರವಾಗಿ ನಾವು ನಡೆಯುತ್ತಿದ್ದೇವೆ. ಯಾರ ಅಂಕೆಯೂ ಇಲ್ಲ; ಆತಂಕವೂ ಇಲ್ಲ. ಅದಕ್ಕೇ ಕೊಂಚ ಹೆಚ್ಚಾಗಿ ಉಸಿರು ಬಿಡು...."

"ಹಾರುವ ಧೂಳು ಸೇರಲಿ ಎದೆಯೊಳಗೆ ಅಂತ. ಅಲ್ಲವೇ? ಏನೂ ಇಲ್ಲವಾದರೂ ಈ ನಾಡಿನ ಧೂಳನ್ನಾದರೂ ಒಯ್ಯೋಣ."

"ಅದು ರಕ್ತಗತವಾಗಿದೆ; ಉಪ್ಪುನೀರು, ಕೆಂಪು ಧೂಳು."

ಇಬ್ಬರೂ ಹತ್ತಿರದ ಹೋಟೇಲಿಗೆ ನಡೆದು ಕಾಫಿ ತಿಂಡಿ ಮುಗಿಸ ತೊಡಗಿದರು.

ಎತ್ತ ತಿರುಗಿದರೂ ಕಲ್ಯಾಣಿಯ ಕಡೆಗೇ ಯಾರಾದರೊಬ್ಬರು ನೋಡುತ್ತಿರುವುದು ಅವಳ ಕಣ್ಣಿಗೆ ಬೀಳುತಿತ್ತು.

ನೃತ್ಯದೇವತೆಯೆಂದು ಹೊಗಳಿಸಿಕೊಂಡು ಮೆರೆದವಳಲ್ಲವೇ ಅವಳು? ಕನ್ನಡ ಕಲಾಮಂಡಲದ ನರ್ತಕಿಯಲ್ಲವೇ? ಎತ್ತ ಹೊರಟಿದ್ದಾಳೆ? ಎಲ್ಲಿ ನೃತ್ಯ ಪ್ರದರ್ಶನವಿದೆ? ಇದೇ ಎಲ್ಲರ ನೋಟದ ಹಿಂದೆಯೂ ಅತಕವಾಗಿದ್ದ ಪ್ರಶ್ನೆ.

ಎಂಥ ಸುಂದರ ರೂಪ!

ಕಲ್ಯಾಣಿ ಇಪ್ಪತ್ತು ದಾಟಿ ನಿಂತವಳು. ಅವಳ ಮೈಕಟ್ಟು ಶಿಲಾ ಮೂರ್ತಿಯನ್ನು ನಾಚಿಸುತ್ತಿದೆ. ನೃತ್ಯ ಅವಳ ದೇಹದ ಮಾಟವನ್ನು ಬೆಳೆಸಿದೆ, ಅಂಗಾಂಗಗಳಲ್ಲೂ ನವಜೀವ ತುಂಬಿದೆ, ಮುಖದಲ್ಲಿ ತೇಜಸ್ಸು ಉಕ್ಕಿಸಿದೆ. ಆ ಎದೆ, ತೊಡೆ, ನಡು, ಬಳುಕು, ಹೆಜ್ಜೆ ಹೆಜ್ಜೆಗೂ ಅವಳು ನರ್ತಿಸುವಂತೆ ಕಾಣುತಿತ್ತು. ನೃತ್ಯ ದೇವತೆಯೇ ಭೂಮಿಗಿಳಿದು ಬಂದಳೇ?

ಪ್ರತಿಯೊಬ್ಬರಿಗೂ ಅವಳೆಡೆಯಿಂದ ದೃಷ್ಟಿಯನ್ನು ಬೇರೆಡೆ ತಿರುಗಿಸಲು ಕಷ್ಟವಾಗುತಿತ್ತು. ಇನ್ನೊಮ್ಮೆ ನೋಡೋಣ, ಮತ್ತೊಮ್ಮೆ ಆ ಸೌಂದರ್ಯವನ್ನು ಸವಿಯೋಣ ಎಂಬ ಆತುರ ಅವರದು. ಅವಳ ಬಳಿ ಬಂದು, ಅವರ ಬಗೆಗೆ ಪರಿಚಯ ಮಾಡಿಕೊಂಡು, ಮಾತನಾಡಬೇಕೆಂದು ಹತ್ತಾರು ಮಂದಿ ಹಂಬಲಿಸುವುದು ಕಾಣುತಿತ್ತು. ಕೃಷ್ಣ ಅತ್ತಿತ್ತ ನೋಡಿದಾಗಲೆಲ್ಲ ಅವನನ್ನು ನೋಡಿ ಸೌಹಾರ್ದದ ಮುಗುಳುನಗೆ ನಗುವವರನ್ನೆ ಕಾಣುತಿದ್ದ.

ಇದೇಕೆ ಹೀಗೆ....?

ಕಲಾಮಂಡಲದಲ್ಲಿ ಬೆಳೆದು ಬಾಳಿದ ಕಲ್ಯಾಣಿ, ಕನ್ನಡನಾಡನ್ನು ಹತ್ತಾರು ಬಾರಿ ಸುತ್ತಾಡಿ, ನೂರಾರು ಕಡೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದಾಳೆ. ಎಲ್ಲೆಲ್ಲೂ ಸಾವಿರಾರು ಕಣ್ಣುಗಳು ಅವಳೆಡೆ ತಿರುಗಿವೆ, ಅವಳ ಸೌಂದರ್ಯವನ್ನು ಕಲಾಪ್ರೌಢಿಮೆಯನ್ನು ಕಂಡು ಆನಂದಿಸಿವೆ. ರಂಗಭೂಮಿಯ ಮೇಲೆ ಆಕೆ ನಿಂತಾಗ ಪ್ರೇಕ್ಷಕರು ನೆಟ್ಟ ನೋಟದಿಂದ ಅವಳೆಡೆ ನೋಡಿ, ಮೈ ಮರೆತಿದ್ದಾರೆ. ಆದರೆ....ತಾನು ಅಭಿನಯಿಸಬೇಕಾದ ನೃತ್ಯ, ಹಿನ್ನಲೆಯ ಸಂಗೀತ ತಾಳಗಳ ಯೋಚನೆ, ಗುರುವಿನ ಬಗೆಗೆ ಇದ್ದ ಅಭಿಮಾನ, ಭೀತಿ ಅವಳಿಗೆ ಇದಾವುದರ ಪರವೆಯನ್ನು ಉಂಟುಮಾಡಿಲ್ಲ. ರಂಗಮಂದಿರ ಮತ್ತು ಪ್ರೇಕ್ಷಕರ ಮೇಲೆ ಉರಿಯುತ್ತಿರುವ ಬೆಳಕು ಅವಳ ಕಣ್ಣು ಕೋರೈಸಿತ್ತು ; ಅವಳೆಡೆ ನೋಡುತ್ತಿರುವ ಸಾವಿರಾರು ಕಣ್ಣುಗಳು ಅವಳಿಗೆ ಕಾಣದಂತೆ ಅಡ್ಡಿಯಾಗಿದ್ದುವು. ಅಲ್ಲಿ ಅವಳ ಒಳಗಿನ ಕಣ್ಣು ಎತ್ತಲೋ ಸರಿದು ಮುಂದೆ ನಿಂತಿದ್ದ ಎಲ್ಲವನ್ನು ಮರೆಸಿದ್ದವು.

ನೃತ್ಯ ಮುಗಿಯಿತೆಂದರೆ ತಮ್ಮ ನಿವಾಸ. ಅಲ್ಲಿ ನಿತ್ಯದ ಪರಿಪಾಟ. ಮಾಸ್ತರರೊಡನೆ ಮಾತುಕತೆ, ಸಿಂಹನೊಡನೆ ಹಾಸ್ಯ, ಇತರರೊಡನೆ ನಗೆಮಾತು. ಅಭ್ಯಾಸ, ವಿಶ್ರಾಂತಿ. ಅದಾಯಿತೆಂದರೆ ಪುನಃ ಮರುದಿನದ ಪ್ರದರ್ಶನದ ಸಿದ್ಧತೆ. ಅಥವಾ ಮುಂದಿನ ಊರಿನ ಪ್ರಯಾಣದ ಯೋಚನೆ. ಹೀಗೆ ಬಿಡುವಿಲ್ಲದ ಜೀವನದಲ್ಲಿ ಅವಳಿಗೆ ಯಾವಕಡೆ ದೃಷ್ಟಿ ಹರಿಯಿಸಲೂ ಎಡೆಯಿರಲಿಲ್ಲ. ತಾನು ನೋಡಿದ ಸಾವಿರ ಸಾವಿರ ಚಿತ್ರಗಳನ್ನು ಮನದಲ್ಲಿ ಮೂಡಿಸಿಕೊಳ್ಳಲು ಆಸ್ಪದವಿರಲಿಲ್ಲ. ಎಷ್ಟೋ ಚಿತ್ರಗಳು ಅವಳ ಕಣ್ಣ ಮುಂದೆ ಸರಿದಿವೆ, ನೂರಾರು ಯೋಚನೆಗಳು ಮನದಲ್ಲಿ ಮಿಂಚಿ ಮರೆಯಾಗಿವೆ ; ಆದರೆ, ಯಾವುದೂ ನಿಂತು ಮುಂದೆ ಸಾಗಲಿಲ್ಲ ; ಮೂಡಿ ನಿಲ್ಲಲಿಲ್ಲ, ಪ್ರತಿಬಿಂಬಿತವಾಗಿ ತನ್ನ ಅಚ್ಚು ಒತ್ತಿಲ್ಲ.

ಸಿಂಹ ಹೇಳುತಿದ್ದ ಮಾತು ಅವಳಿಗೆ ನೆನಪಾಯಿತು. ಈ ಬಣ್ಣ ಹಾಕುವ ಕೈ ಲೆಕ್ಕವಿಲ್ಲದಷ್ಟು ಮುಖಗಳನ್ನು ನೋಡಿದೆ. ಅವರ ಗಲ್ಲ, ಹಣೆ, ಮೂಗು, ಕಣ್ಣುಗಳನ್ನು ನೋಡಿ, ಅವುಗಳನ್ನು ತಿದ್ದಿ ತೀಡಿ, ಬಣ್ಣ ಬಳಿದು ಸುಂದರವಾಗಿಸಿದೆ. ಮುಖಗಳನ್ನು ತಿರುಗಿಸಿ ಅವುಗಳನ್ನು ಸೂಕ್ಷ್ಮ

ವಾಗಿ ಪರಿಶೀಲಿಸಿ ಯಾವುದು ಹೇಗಿರಬೇಕೆಂದು ನಿರ್ಧರಿಸಿ ಅವುಗಳಿಗೆಲ್ಲ ರೂಪಕೊಡುವಂತೆ ಈ ಕಣ್ಣುಗಳು ಹೇಳಿವೆ. ಕೈಗಳು ಹಣೆ ತಟ್ಟಿವೆ, ಗಲ್ಲ ಹಿಡಿದಿವೆ, ಕೆನ್ನೆಗೆ ಕೆಂಪು ಹಚ್ಚಿವೆ, ತುಟ್ಟಿಗೆ ರಂಗು ಬಳಿದಿವೆ. ಆದರೂ ಅಂಥ ನೂರಾರು ಮುಖಗಳಲ್ಲಿ ಯಾವುದು ಪರಿಪೂರ್ಣ, ಯಾವುದು ಸುಂದರ, ಯಾವುದರಲ್ಲಿ ಯಾವ ಅಂಗಊನ, ಎಲ್ಲಕ್ಕೂ ಮೇಲಾಗಿ ಯಾವುದು ಸುಂದರ ಎಂಬ ಬಗೆಗೆ ಹೇಳಲು ಸಾಧ್ಯವಿಲ್ಲ. ಇದು ಮ್ಯಾಕ್‌ಅಪ್ ಮಾಡುವ ಈ ಕಲಾವಿದನ ಕಣ್ಣು–ಎಂದು ಸಿಂಹ ಹೇಳುತಿದ್ದ. ಆ ಮುಖಗಳು ನನ್ನ ಮುಂದಿದ್ದಾಗ ಅವುಗಳ ಅಲಂಕಾರವೇ ಚಿಂತೆ. ಇದ್ದ ಸ್ಥಿತಿಯನ್ನು ಬದಲಾಯಿಸುವುದೇ ಯೋಚನೆ. ಪರಿಣಾಮವಾಗಿ ಹಿಂದೆ ಆ ಸುಂದರವದನ ಹೇಗಿತ್ತು ಬಳಿಕ ಆದ ಮಾರ್ಪಾಟು ಯಾವುದು ಎಂಬುದೇ ಮರೆತು ಹೋಗುತ್ತಿತ್ತು–ಎನ್ನುತ್ತಾನೆ ಆತ.

ಈ ಮಾತು ನಿಜ–ಅನ್ನಿಸಿತು ಕಲ್ಯಾಣಿಗೆ. ತನಗೂ ಹಾಗೆ ಆಗಿದೆ. ಯಾರು ಅವಳೆಡೆ ನೋಡುತಿದ್ದರು, ಹೇಗೆ ನೋಡುತಿದ್ದರು, ಅವರ ನಗೆ ನೋಟಗಳಲ್ಲಿ ಅಡಕವಾಗಿದ್ದ ಭಾವವೇನು ಎಂಬುದಾವುದೂ ಅವಳಿಗೆ ಇದುವರೆಗೂ ಅರಿವಾಗಿರಲಿಲ್ಲ. ಆದರೆ–ಈಗ ಅವಳೆಡೆ ನೋಡುತ್ತಿರುವವರ ದೃಷ್ಟಿಯಲ್ಲಿ ನಗುತ್ತಿರುವವರ ನಗೆಯಲ್ಲಿ ಏನೋ ವಿಚಿತ್ರಭಾವನೆ ಅಡಗಿದೆ ಎಂಬುದನ್ನವಳು ತಿಳಿಯಲು ಕಷ್ಟವಾಗಲಿಲ್ಲ.

ಇದೇಕೆ ಹೀಗೆ ನೋಡುತಿದ್ದಾರೆ? ಹೀಗೆ ನಗುತಿದ್ದಾರೆ!

ತಾನು ಕಲಾಮಂಡಲವನ್ನು ಬಿಟ್ಟು ಕೃಷ್ಣನ ಜತೆಗೆ ಹೊರಟುದು ಇವರಿಗೆ ತಿಳಿಯಿತೆ? ಅಥವಾ ಮಾಸ್ತರ್ ಇಲ್ಲ–ಎಂಬ ಕಾರಣದಿಂದ ಇವರೆಲ್ಲ ತಮ್ಮಿಬ್ಬರ ಜತೆಗೆ ಅಂಥ ಅರ್ಥ ಕಲ್ಪಿಸಿದರೇ? ಇಂಥ ನಗೆ ನೋಟಗಳನ್ನು ತಾನೆಂದೂ ನೋಡಿದ ನೆನಪಿಲ್ಲವಲ್ಲ. ಇದೇಕೆ ಹೀಗೆ ಎಂದು ಅವಳ ಮನ ಸಮಸ್ಯೆಯ ಸಂಕಲೆಯಲ್ಲಿ ಸಿಲುಕಿ ತಳಮಳಿಸಿತು. ಕಳ್ಳನು ತನ್ನ ನೀತಿಯ ಪ್ರತೀಕವಾಗಿ ಕೇಳಿದ ಸದ್ದಿಗೆಲ್ಲ ಬೆದರಿ ಸುತ್ತ ನೋಡುವಂತೆ ಅವಳ ಪರಿಸ್ಥಿತಿಯಾಗಿತ್ತು. ತನ್ನ ಭೀತಿ, ವಿಚಿತ್ರಕಲ್ಪನೆ, ವಿಪರೀತ ಅರ್ಥಗಳಿಗೆ ಅವಳಿಗೇ ನಾಚುಗೆಯಾಗುತಿತ್ತು. ಎಂಥ ಹುಚ್ಚು ಯೋಚನೆ; ತಮ್ಮ ಈ ಪ್ರಯಾಣ ಪ್ರಣಯ ಯಾರಿಗೆ ತಾನೆ ಗೊತ್ತಿದೆ. ಅದಿನ್ನೂ ರಹಸ್ಯವಾಗೇ ಇದೆ. ಹೇಳಿ

ದರೂ ಕೊಡಾ ಅದಕ್ಕೆ ಪವಿತ್ರವಾದ ಅರ್ಥಕೊಡುವ ಹೃದಯಗಳೇ ತನ್ನ ಪಾಲಿಗೆ ಇವೆ.' ಹೇಳುವ ಹೊತ್ತಿಗೆ, ವಿಚಾರ ಈ ಜನರಿಗೆ ತಿಳಿದ ಕಾಲಕ್ಕೆ ನಾವಿಬ್ಬರೂ ಬಹಳ ದೂರ ಹೋಗಿರುತ್ತೇವೆ. ಎಂದು ಕಲ್ಯಾಣಿಯ ಒಳಗಿನ ದನಿ ಹೊರಗಿನ ದನಿಗೆ ಉತ್ತರ ನೀಡುತ್ತಿತ್ತು. ಧೈರ್ಯ ಹೇಳುತ್ತಿತ್ತು.

ಬಸ್‌ನ ಹಾರನ್ ಸದ್ದು ಅವಳನ್ನು ಎಚ್ಚರಿಸಿತು. ಕೈಲಿ ಹಿಡಿದಿದ್ದ ಗ್ಲಾಸ್‌ನಲ್ಲಿ ಉಳಿದು ತಣ್ಣಗಾಗಿದ್ದ ಕಾಫಿಯನ್ನು ಕುಡಿದು ಎದ್ದು, ಹೊರಟಳು. ಕಲ್ಯಾಣಿ ಹೋಟಲಿನಿಂದ ಅಂಗಳಕ್ಕಿಳಿದಳು. ಕೃಷ್ಣರಾಯ ಬಿಲ್ ಹಣ ಕೊಡಲು ನಿಂತಿದ್ದಾಗ, ಹಣವನ್ನು ತೆಗೆದುಕೊಂಡು, ಬಿಲ್ ತೆಗೆದು ಮೇಜಿನ ಮೇಲಿದ್ದ ಕಬ್ಬಿಣದ ಕಂಬಿಗೆ ಚುಚ್ಚಿ, ಹೋಟಲ್ ಮಾಲಿಕ ಚಿಲ್ಲರೆ ಎಣಿಸಿದ. ಚಿಲ್ಲರೆ ಕೊಡುತ್ತಿದ್ದಂತೆ ಕೇಳಿದ.

"ಅವರು ಡ್ಯಾನ್ಸರ್ ಅಲ್ಲವೇ ?"

"ಹೌದು...."

"ಕಲ್ಯಾಣಿ ಅಲ್ಲವೇ?"

"ಹ್ಞೂ...."

"ದೂರ ಹೊರಟಿದ್ದೀರಿ...."

"ಮೈಸೂರಿಗೆ...." ಎಂದು ಕೃಷ್ಣ ಚಿಲ್ಲರೆಯನ್ನು ಬೇಗನೆ ಎತ್ತಿ ಜೇಬಿಗೆ ಸೇರಿಸಿಕೊಂಡ. ಬರುತ್ತೇನೆ ಎಂದು ಯಜಮಾನನ ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಸಲ್ಲಿಸಿ ಒಮ್ಮೆ ಸುತ್ತ ತಿರುಗಿ ಅಂಗಳಕ್ಕಿಳಿದ. ಹೋಟಲಿನಲ್ಲಿದ್ದವರ ದೃಷ್ಟಿಯೆಲ್ಲ ಅವನೆಡೆ, ಕಲ್ಯಾಣಿಯೆಡೆ, ನೆಟ್ಟಿತ್ತು. ಅವರು ಬಸ್ ಕಡೆ ಹೋಗುತಿದ್ದಂತೆ ಕೆಲವರು ಹೋಟಲಿನ ಬಾಗಿಲಲ್ಲಿ ನಿಂತು ಅವರೆಡೆ ನೋಡುತಿದ್ದರು. ಸಪ್ಲೈ ಮಾಡಲೆಂದು ಕಾಫಿ ತಿಂಡಿ ಹಿಡಿದು ಬಂದಿದ್ದ ಮಾಣಿಗಳೂ ಒಮ್ಮೆ ಬಸ್ ಕಡೆಗೆ ಇಣಿಕಿ ಮುಂದೆ ಗಿರಾಕಿಗಳ ಕಡೆಗೆ ನಡೆದರು.

ಯಾವುದೋ ಭೀತಿಗೆ ಒಳಗಾಗಿದ್ದಂತೆ ಕಲ್ಯಾಣಿ ಬಸ್ ಕಡೆಗೆ ಧಾವಿಸಿ, ಬಸ್ಸನ್ನೇರಿದಳು. ಕೃಷ್ಣನೂ ಹೊತ್ತಾಯಿತೆಂದು ಅವಳನ್ನೇ ಹಿಂಬಾಲಿಸಿದ.

ಡ್ರೈವರ್ ಇನ್ನೆರಡು ಬಾರಿ ಹಾರನ್ ಬಾರಿಸಿದ. ಕಂಡಕ್ಟರ್ ಬಸ್

ನೊಳಗೊಮ್ಮೆ ಇಣಿಕಿ, ಕಲ್ಯಾಣಿಯ ಕಡೆಗೂ ನೋಡಿ, ರೈಟ್ ಅಂದ. ಬಸ್ ಮುನ್ನಡೆಯಿತು.

ಅದೇಕೆ ಹಾಗೆ ನೋಡುತ್ತಾರೆ...

ಸರಿ ಏನೋ ನೋಡುತ್ತಾರೆ. ಗಂಡಸರಿಗೆ ಹೆಂಗಸರನ್ನು ನೋಡುವುದೇ ಕೆಲಸ. ಏನೋ ಮಕ್ಕಳು ಹುಲಿ ಮರಿ, ಆನೆ, ಕರಡಿಗಳನ್ನು ನೋಡುವಷ್ಟು ತವಕದಿಂದ ನೋಡುತ್ತಾರೆ.

ಇದುವರೆಗೆ ತನಗೆ ಕಂಡುಬಂದಿರದ ನೋಟ ಈಗೇಕೆ?

ನಾನೇ ನೋಡಿರಲಿಲ್ಲವೋ ಏನೋ-ಯಾರಿಗೆ ಗೊತ್ತು?

ಏನಿದೆ ನನ್ನಲ್ಲಿ ಹಾಗೆ ನೋಡುವುದಕ್ಕೆ?

ಕಲ್ಯಾಣಿ....ಆಗಲೇ ಕೀರ್ತಿಗಳಿಸಿದ ಅಸಮಾನ ನರ್ತಕಿಯಲ್ಲವೇ? ಹೌದು-ನನ್ನ ಹೆಸರು ಕೀರ್ತಿ ಎಲ್ಲೆಲ್ಲೂ ಹರಡಿದೆ. ಅಸಮಾನ ನರ್ತಕಿ ಎಂದು ಹೆಸರು ಗಳಿಸಿದ್ದೇನೆ. ಅದಕ್ಕೆ ನೋಡುತಿದ್ದಾರೆ. ಚಲನಚಿತ್ರ ತಾರೆಯರಂತೆ ನಾನೂ ಜನಾದರ ಗಳಿಸಿದ್ದೇನೆ....ಸುಂದರಿಯೂ ಹೌದು.... ನಾನು ಸುಂದರಿ....

ಕಲ್ಯಾಣಿ ತನ್ನ ಮನದಲ್ಲಿ ಮೂಡುತ್ತಿದ್ದ ಪ್ರಶ್ನೆಗಳಿಗೆ ತಾನೇ ಉತ್ತರವಿತ್ತು ಸಮಾಧಾನ ತಂದುಕೊಂಡು ಅವೆಲ್ಲವನ್ನೂ :ಮರೆತುಬಿಡಲು ಯತ್ನಿಸುತಿದ್ದಳು. ತನ್ನ ಕಲೆ, ಕೀರ್ತಿ, ಸೌಂದರ್ಯಗಳನ್ನೇ ಮೇಲಿಟ್ಟು ಅವುಗಳ ಬಗೆಗೆ ಹೆಮ್ಮೆಪಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದಳು. ಆದರೂ-ಅವಳ ಮನಸ್ಸಿನಲ್ಲಿ ತನ್ನ ನೀತಿಯಿಂದಾಗಿ ಹುಟ್ಟಿದ ಭೀತಿ ಬೆಳೆಯುತ್ತಲೇ ಇತ್ತು. ತನ್ನ ಬೆಳವಣಿಗೆಗೆ ಅಗತ್ಯವಾದ ಸಂಶಯದ ಗೊಬ್ಬರವನ್ನು ಅದು ಕೂಡಿಸಿಕೊಳ್ಳುತ್ತಿತ್ತು.

ನಾನು ಕಲಾವಿದೆ....

ನನ್ನ ಕೀರ್ತಿ ಎಲ್ಲೆಲ್ಲೂ ಹರಡಿದೆ. ನನ್ನ ಕಲಾಪ್ರೌಢಿಮೆಯಿಂದ ನಾನು ನಾಡನ್ನು ಬೆಳಗಬಲ್ಲೆ. ಬಾಳು ಹಸನಾಗಿಸಬಲ್ಲೆ. ಸಾವಿರ ಹಣ ಕೂಡಿಸಿ, ಸುಖಜೀವನ ನಡೆಸಬಲ್ಲೆ. ಎಲ್ಲೆಲ್ಲೂ ಜನ ನನ್ನನ್ನು ಆದರಿಸುತ್ತಾರೆ, ಸ್ವಾಗತಿಸುತಿದ್ದಾರೆ, ಅಭಿವಂದಿಸುತಿದ್ದಾರೆ. ನಾನು ನೃತ್ಯರಾಣಿ!

ನನ್ನ ಸೌಂದರ್ಯ....ಸಾವಿರ ಸಾವಿರ ಹೃದಯಗಳನ್ನು ನನ್ನೆಡೆ ಸೆಳೆದಿದೆ. ಅವರೆಲ್ಲ ನನಗಾಗಿ ಏನು ಬೇಕಾದರೂ ಮಾಡಬಲ್ಲರು....

ಆದರೆ....

ಸೌಂದರ್ಯ ಬಯಸುವವರು ಕಲೆಯನ್ನು ಬಯಸುತ್ತಾರೆಯೇ? ಕಲೆಯನ್ನು ಬಯಸುವವರು ಸೌಂದರ್ಯ ಬಯಸುತ್ತಾರೆ. ಕುರೂಪಿಯಾದ ಹೆಣ್ಣಿನ ನೃತ್ಯಕಲೆ ಜನಮನ ಸೆಳೆಯಲಾರದು. ಆದರೆ ಸುಂದರಿಯ ಕಲಾ ಪ್ರೌಢಿಮೆ ಅಲ್ಪವಾದರೂ ಆಕೆ ಶ್ಲಾಘನೆಗೆ ಪಾತ್ರವಾಗ ಬಲ್ಲಳು. ನನ್ನಲ್ಲಿ ಕಲೆ ಇದೆ-ಕೀರ್ತಿ ಇದೆ-ಸೌಂದರ್ಯವಿದೆ....

ಬಸ್ ಪಂಜವನ್ನೂ ಥಾದು ಮುನ್ನಡೆಯಿತು.

ಬಯಲನ್ನಳಿದು ಬೆಟ್ಟವನ್ನು ಮೆಟ್ಟಿತು. ಪಶ್ಚಿಮ ಘಟ್ಟವನ್ನೇರಲು ತೊಡಗಿತು.

ನಿಮಗಿಂತ ನಾವೇ ಎತ್ತರ, ನಮ್ಮ ತಲೆ ಮೋಡಗಳನ್ನು ಮುಟ್ಟಿ ಚುಂಬಿಸುತ್ತಿವೆ. ಆಗಸದಲ್ಲಿ ಸ್ವತಂತ್ರರಾಗಿ ಕೈಯಾಡಿಸುತಿದ್ದೇವೆ-ಎಂದು ಹೆಮ್ಮೆಯಿಂದ ತಲೆ ಎತ್ತಿ ನಿಂತ ಬೆಟ್ಟಗಳು, ಮರಗಳು ಒಂದೊಂದಾಗಿ ಕೆಳಗಿಳಿಯುತಿದ್ದುವು. ಬಸ್ ಮೇಲಕ್ಕೇರುತಿತ್ತು.

ಆದರೂ–ಮತ್ತೂ ಮರಗಳಿವೆ. ಅವು ಆ ಬಸ್‌ಗಿಂತ ಮೇಲೆ ನಿಂತಿವೆ. ಬೆಟ್ಟಗಳಿವೆ, ಇನ್ನೂ ಎತ್ತರಕ್ಕೆ ತಲೆ ಎತ್ತಿ ನಿಂತಿವೆ.

ಸುತ್ತ ಮರಗಿಡಗಳು, ಏರುತಗ್ಗುಗಳು ತೇಲುತ್ತಿವೆ; ತೇಲಿ ತೇಲಿ ಕೆಳಗಿಳಿಯುತ್ತಿವೆ, ಗಾಳಿಗೆ ಪ್ರಕೃತಿಯ ಚಿತ್ರ ಚಿತ್ರಿತವಾದ ಹಾಸು ಹಾರಿ ಹಾರಿ ಕೆಳಗಿಳಿಯುವಂತೆ.

ನಾನು ಮೇಲಕ್ಕೇರುತಿದ್ದೇನೆ. ಕೇವಲ ನರ್ತಕಿಯಾಗಿದ್ದವಳು, ಇನ್ನೂ ವಿಶಾಲವಾದ ಕಲಾರಂಗಕ್ಕೆ ಕಾಲಿಟ್ಟು ಚಲನ ಚಿತ್ರ ರಂಗವನ್ನು ಪ್ರವೇಶಿಸಿ ನಟಿಯಾಗುತಿದ್ದೇನೆ. ಖ್ಯಾತ ನರ್ತಕಿ, ಖ್ಯಾತ ನಟಿ; ಸಂಗೀತ, ನೃತ್ಯ, ಅಭಿನಯಗಳಲ್ಲಿ ಅಸಮಾನಳೆನಿಸಿ ಮೆರೆಯುವ ಯೋಗ! ಇಂಥವರು ಬೇರೆ ಇಲ್ಲ–ಎಂಬ ಗೌರವ! ಅವಳಿಗೆ ತನ್ನಲ್ಲೇ ಧೈರ್ಯ ತುಂಬಿತು; ಹೆಮ್ಮೆ ಮೂಡಿತು; ಚಿಂತೆ ಅಳಿಯಿತು.

ಒಂದು ಮೋಡ ಮರೆಯಾಯಿತೆಂದರೆ ಬಾನೆಲ್ಲ ಶುಭ್ರವಾಗಲಾರದು. ಮತ್ತೊಂದು ಮೋಡ ಅದರ ಹಿಂದೆ ಓಡಿಯೋಡಿ ಬರುತ್ತಿದೆ. ಮೋಡಗಳ ಮರೆಯಿಂದ ಪಾರಾಗಿ ಇಣಿಕಿ ಕಣ್ಣು ಮಿಟುಕಿಸುವಷ್ಟರಲ್ಲಿ ಇನ್ನೊಂದು ಮೋಡ ಸೂರ್ಯನಿಗೆ ಅಡ್ಡವಾಗುತ್ತದೆ.

ಆದರೂ ಅದೊಂದು ಭೀತಿ. ಈ ಮರಗಳಂತೆ, ಈ ಬೆಟ್ಟಗಳಂತೆ, ಎಷ್ಟು ಮೇಲೇರಿದರೂ ಮತ್ತೂ ನಮ್ಮನ್ನು ನಾಚಿಸುವಂತಹ ಕಲಾವಿದರು ಇರಲಾರರೇ ? ನೂರಾರು ಮರಗಳ ಎತ್ತರವನ್ನು ಮೀರಿಸುವಷ್ಟು ಮೇಲೆ ನಡೆದಿದೆ ಈ ಬಸ್. ಹತ್ತಾರು ಬೆಟ್ಟಗಳ ಒಟ್ಟು ಎತ್ತರವನ್ನು ಮೆಟ್ಟಿ ನಿಂತಿದೆ ಇದು. ಆದರೂ, ಇಲ್ಲೂ ಮರಗಳಿವೆ; ಬಸ್ ಕಡೆಗೆ ಕೆಳದೃಷ್ಟಿ, ಬೀರಿ ನಗುತ್ತಿವೆ. ಅವುಗಳ ತುದಿ ನೋಡ ಬೇಕಾದರೆ ಬಸ್‌ನಲ್ಲಿ ಕುಳಿತಿದ್ದರೂ ಕತ್ತು ಉಳುಕಿಸಿಕೊಳ್ಳಬೇಕು, ಆಗಸದೆಡೆ ನೋಡಬೇಕು. ಹಾಗೇ ಮುಂದೆ, ಎಡಕ್ಕೆ ಬಲಕ್ಕೆ ಬೆಟ್ಟಗಳ ಸಾಲು. ಬಸ್ ಒಂದು ಕಣಿವೆಯಲ್ಲಿದೆಯೇ ಎಂಬ ಭೀತಿ ಒಮ್ಮೆ! ಬೆಟ್ಟದ ಮಗ್ಗುಲಲ್ಲಿ ನಿಂತಿದೆ ಎಂಬ ಸತ್ಯ ಒಮ್ಮೆ.

ಹಿಂದೆ ಸರಿದರೆ, ಎಡಕ್ಕೆ ಬಲಕ್ಕೆ ವಾಲಿದರೆ, ಸಾವಿರ ಸಾವಿರ ಅಡಿ ಕೆಳಕ್ಕೆ ಉರುಳಿ ರಸಾತಳ ಸೇರೀತು ಈ ಬಸ್ ; ಈ ಜೀವ!

ಒಮ್ಮೆ ಜಾರಿದರೆ ಮತ್ತೆ ತಡೆಯಿಲ್ಲದೆ, ತಡೆಸಿಗದೆ, ಜಾರುತ್ತ ಪಾತಾಳ ಸೇರಬೇಕಾದೀತು.

ಇದು ನಮ್ಮ ಬಾಳಿದ ಚಿತ್ರವೇ ?

ಎಲ್ಲಿ ನಡೆದರೂ ನಮ್ಮನ್ನು ಮೀರಿಸುವವರೇ ಇರಬಹುದು; ಇದ್ದಾರೆ ನಾನೇ ಮೇಲು ಎಂದರೆ ಹೌದೆಂಬ ಉತ್ತರ ಬರುವ ಸಂಭವವಿಲ್ಲ.

ನಾವು ನಡೆದ ದಾರಿ, ಹಿಡಿದ ದಾರಿ, ಕತ್ತಿಯ ಅಲಗಿನ ಮೇಲಿನ ನಡೆ. ಕೊಂಚವಾಲಿದರೆ, ದಾರಿ ತಪ್ಪಿದರೆ, ಮತ್ತೆ ಮೇಲೇರುವ ಧೈರ್ಯ, ಶಕ್ತಿ, ನಂಬುಗೆ ಇಲ್ಲದ ದಾರಿ.

ನಿಂತಲ್ಲಿ ನಿಂತಾಗ ಎಲ್ಲವೂ ಚೆಂದ-ಎಂದು ಬೆಟ್ಟಗಳೂ ಮರಗಿಡಗಳೂ ಸಾರಿ ಹೇಳುತ್ತಿವೆ.

ದೂರದಿಂದ ನುಣ್ಣನೆಯಾಗಿವೆ; ಹತ್ತಿರ ಸರಿದರೆ ಕಲ್ಲು ಮುಳ್ಳು,

ಗಿಡ ಮರ, ಕೊರಕಲು ಏರು, ಹಳ್ಳತಿಟ್ಟ ಎಂದು ತೋರಿಕೊಡುತ್ತಿವೆ ಈ ಬೆಟ್ಟಗಳು.

ಬಸ್ ಮುನ್ನಡೆಯುತ್ತಿತ್ತು. ಮೇಲಕ್ಕೇರಲಾರದೆ ಬುಸುಗುಟ್ಟುತ್ತ, ಬಿಸಿಯುಸಿರು ಬಿಡುತ್ತ, ಸ್ವಲ್ಪ ತಡೆದರೆ ಎಲ್ಲಿ ಹಿನ್ನಡೆದು ಹಿನ್ನುರುಳಿ ಬಿಡುತ್ತೇನೋ ಎಂಬ ಭೀತಿಯಿಂದ ಮುನ್ನಡೆಯುತಿತ್ತು. ಹೆಜ್ಜೆ ಹೆಜ್ಜೆಗೂ ಹಿನ್ನಡೆಯ ಭೀತಿ; ತಿರುವು ತಿರುವಿಗೂ ರಸಾತಳದ ನೆನಕೆ. ಬಸ್‌ನ ಯಂತ್ರ ಬಿಸಿಯೇರಿ ಹೊಗೆ ಕಾರುತ್ತಿತ್ತು, ಪ್ರಯಾಣಿಕರು ಮೇಲೇರಿದಂತೆ ಮೈ ತಣ್ಣಗಾದರೂ ಹಗುರವಾದ ಅನುಭವ ಪಡೆಯುತಿದ್ದರು. ಬಸ್ ಏರುತ್ತ ಏದುತ್ತ ಸಾಗಿಹೋಗುತಿತ್ತು.

ಸುತ್ತ ಮರಗಿಡಗಳು. ಆಕಾಶವನ್ನು ಮುಟ್ಟಿ ನೋಡದೊಡನೆ ಮಾತನಾಡ ಬಯಸುವ ಮರಗಳು. ತಮ್ಮ ಮಗ್ಗುಲಿಗಿರುವ ಬೆಟ್ಟಗಳನ್ನು ವಿಚಾರಿಸಬೇಕೆಂದು ಬೆಳೆದಿವೆ.

ಮಾರ್ಗದ ಮಗ್ಗುಲಿಗೆ ಒಂದೆಡೆ ರಸಾತಳವಾದರೆ ಜುಳು ಜುಳು ನಿನಾದದಿಂದ ಹರಿವಜರಿ, ಪಕ್ಕನೆ ಹಾರಿ ಕುಳಿತು ಕುಪ್ಪಳಿಸಿ ಕೂಗುವ ಹಕ್ಕಿಗಳಾದರೆ, ಮತ್ತೊಂದು ಮಗ್ಗುಲಿಗೆ–ರಬ್ಬರ್ ಮರದ ತೋಟ.

ಪ್ರತಿ ಮರದ ಮೇಲೂ ಬಳ್ಳಿಯಂತೆ ಹಾವಿನಂತೆ ಕಾಣುವ ಗಾಯ; ಅದರಿಂದಿಳಿದ ಹಾಲು; ಅದನ್ನು ಹಿಡಿದಿಕ್ಕಲು ಮರದ ಬುಡದಲ್ಲಿ ಕಟ್ಟಿದ ಚಿಪ್ಪು. ಕೆಲವು ಚಿಪ್ಪುಗಳಲ್ಲಿ ಹಾಲು ತುಂಬಿದೆ, ಇನ್ನು ಕೆಲವು ಅರ್ಧವಾಗಿವೆ, ಮತ್ತೆ ಕೆಲವು ಖಾಲಿ. ಹೀಗೇ ಹಾಲು ಆ ಗಾಯದಿಂದ ಇಳಿಯುತ್ತ ಸಾಗುವುದೇ? ಎಷ್ಟುಕಾಲ? ತನ್ನ ರಕ್ತವನ್ನು ಬಸಿದು ಬಾಳುವ ಈ ಮರ; ತನ್ನ ಹೃದಯದ ಪ್ರೇಮದ ಹಾಲನ್ನು ಸುರಿದು ನಿಂತ ಈ ಮರ ....ಮಾಸ್ತರರ ಹಾಗೆ! ಹೌದು....ಅವರ ಹೃದಯದಲ್ಲಿ ತುಂಬಿದ ಅಪಾರ ಪ್ರೇಮ, ಅಮಿತ ನೇಹಗಳನ್ನು ಹಿಂಡಿ ಹಲವರು ಹಲವೆಡೆ ನಿಂತಿದ್ದಾರೆ. ಕೆಲವರು ಅವರನ್ನುಳಿದರು, ಮತ್ತೆ ಕೆಲವರು ಈಗ ಉಳಿಯುತಿದ್ದಾರೆ. ಆದರೂ, ಹಾಲು ಹರಿಯುವವರೆಗೆ ಮತ್ತಾರಾದರೂ ಬರಬಹುದು. ಚಿಪ್ಪು ಹಿಡಿಯಬಹುದು. ತನ್ನ ಲಾಭ ಸಾಧಿಸಿಕೊಳ್ಳಬಹುದು. ಈ ರಸದಿಂದ ತಯಾರಿಸಿದ ರಬ್ಬರ್ ಆ ಮರಕ್ಕೆ ಬೇಕೇನು? ಅದಕ್ಕೆ ಅದರಿಂದಾವ ಉಪ

ಯೋಗವೂ ಇಲ್ಲ. ತಾನು ಹಾಲು ಸಂಗ್ರಹಿಸಿಕೊಳ್ಳುತ್ತಿದೆ, ಅಗಸದೇರಿಗೆ ಬೆಳೆದು ಬಾಳುತ್ತೇನೆ ಎಂದು. ಅದರ ರಸವನ್ನು ಯಾರೋ ಬಂದು ಹಿಂಡುತ್ತಾರೆ, ಹೀರುತ್ತಾರೆ. ಅದು ಬೆಳೆಯುದಂತೆ ತಡೆದು ಅಳಿಯದಂತೆ ಹಿಡಿದು. ಈ ಮರಗಳ ತೋಟದ ಒಡೆಯ ಹಿಂದೆ ಯಾರೋ? ಈಗ ಇನ್ನಾರೊ; ಮುಂದೆ ಮತ್ತಾರೊ? ಆದರೂ ಆ ಮರಗಳು ಇಲ್ಲೇ ನಿಂತಿವೆ! ಜಗತ್ತಿನ ಜನಕೋಟಿಗೆ ಮಹೋಪಕಾರವಾಗಲೆಂದು. ತನ್ನ ಮೈಯ ನೆತ್ತರು ಹಾಲಿನಂತೆ ಹರಿದು ಮಾನವ ಹಾರಲು ಸಹಕಾರಿಯಾಗಲೆಂದು.

ಮಾಸ್ತರರ ಬಗೆಗೆ ಯೋಚಿಸುತ್ತಿದ್ದಂತೆ ಕಲ್ಯಾಣಿಯ ಕಣ್ಣಲ್ಲಿ ನೀರೂರಿತು. ತಾನೇ ಮೇಲು, ಇನ್ನೂ ಮೇಲಾಗುತಿದ್ದೇನೆ ಎಂಬ ಭಾವ ಅಳಿಯಿತು. ಮುಂದಿನ ಸೀಟಿನ ಒರಗಿನ ಮೇಲೆ ತಲೆಯನ್ನೂ ಕೈಗಳನ್ನೂ ಇರಿಸಿಕೊಂಡು ಬಾಗಿ ಕುಳಿತಳು.

ಆ ಮರ ಹಾಲು ನೀಡಬೇಕು. ಈ ಜನ ಅದನ್ನು ಹಿಂಡಿ ತಮ್ಮ ಹಿತಕ್ಕೆ ಬಳಸಬೇಕು. ನದಿಯ ನೀರು ಒಯ್ಯುವವರ ಬಳಿಯ ಕುಂಭಕ್ಕೆ ಅನುಗುಣವಾಗಿ, ಒಯ್ಯುವವರ ಉಪಯೋಗದ ದೃಷ್ಟಿಗೆ ಅನುಗುಣವಾಗಿ ಉಪಯೋಗಿತವಾಗುತ್ತದೆ. ಎಮ್ಮೆಯೂ ಆ ನದಿಯಲ್ಲಿ ಮೀಯುತ್ತವೆ; ಪ್ರವಾಸಿ ಅದನ್ನೇ ಕುಡಿಯುತ್ತಾನೆ; ಅಗಸ ಬಟ್ಟೆ ಬೆಳಗುತ್ತಾನೆ. ಮತ್ತೊಬ್ಬ ಕಾಲು ತೊಳೆದುಕೊಳ್ಳಬಹುದು, ಇನ್ನೊಬ್ಬ ಬೆಳೆ ಬೆಳೆದುಕೊಳ್ಳಬಹುದು. ಆದರೆ ನದಿಗೆ ನೀರಿನ ಉಪಯೋಗಕ್ಕೆ ಅನುಗುಣವಾಗಿ ಮಾನ ಸ್ಥಾನಗಳಲ್ಲಿ ಏರು ಪೇರುಗಳಿಲ್ಲ. ಆ ಬಗೆಗೆ ಅದು ಚಿಂತಿಸುವುದೂ ಇಲ್ಲ.

ಮರಗಳ ಬಗೆಗೆ ಯೋಚಿಸಿದಂತೆ ತನ್ನ ಹೃದಯವನ್ನೇ ಹಿಂಡಿದಂತಾಯಿತು ಕಲ್ಯಾಣಿಗೆ.

ತನ್ನಂತೆ ಈ ಮರವೂ ಹೆಣ್ಣು. ತಾನೂ ತಾಯಿಯಾಗುತ್ತೇನೆ, ಹಾಲು ನೀಡುತ್ತೇನೆ. ಅದನ್ನು ಮಗು ಕುಡಿದು ಬೆಳೆದು ಬಲವಾಗುತ್ತದೆ. ಆ ಮಗು ನನ್ನಂತೆ, ತಾಯಿಯನ್ನುಳಿದು ಆಕೆ ಸಾಯುವ ವೇಳೆಯಲ್ಲೂ ಬಳಿಸಾರದೆ ದೂರ ಉಳಿಯ ಬಹುದು. ಹೆಣ್ಣಾಗಿ ಬೆಳೆದು 'ಹೆಣ್ಣಾಗಿ' ಮುಂದೆ ತಾಯಿಯಾಗಲೆಂದು ಮತ್ತೆಲ್ಲೋ ಹೋಗಬಹುದು. ಅಥವಾ ಗಂಡಾಗಿ ತಾಯಿಯನ್ನು ಸಲಹಬಹುದು; ಶಿಕ್ಷಿಸಲೂ ಬಹುದು. ಆದರೂ

ತಾಯಿ ಒಳತನ್ನೆ ಬಯಸಿ, ಸುಖವನ್ನೇ ನೆನಸಿ, ಹೃದಯ ಹಿಂಡಿ ಮಗು ವನ್ನು ಬೆಳೆಸುತ್ತಾಳೆ. ಲಾಲಿಸಿ ಪಾಲಿಸುತ್ತಾಳೆ. ಭವಿಷ್ಯದ ಬಗೆಗೆ ಸಂದೇಹ ಗೊಳ್ಳುವುದಿಲ್ಲ; ಭೀತಳಾಗುವುದಿಲ್ಲ.

ಆ ಮರ....ತಲೆ ಎತ್ತಿ ನಿಂತು ಇದೇ ಸಂದೇಶ ಸಾರುತ್ತದೆ. ಮಾಸ್ತರ್ ಅದೇ ಬಾಳು ಬಾಳುತಿದ್ದಾರೆ. ಈ ಬೆಟ್ಟ ಏರಿದಷ್ಟೂ ನನ್ನ ಮುಂದೆ ನಿಂತು ನಿನಗಿಂತಲೂ ನಾ ಮೇಲು ಎಂದು ಅಣಕಿಸುತ್ತಿದೆ. ದೂರದಿಂದ ಉದ್ಯಾನ ವಾಗಿ ಕಾಣುತ್ತಿದ್ದುದು ಹತ್ತಿರ ಬಂದಂತೆ ಘೋರ ಕಾನನವಾಗುತ್ತಿದೆ.

ಇಂಥ ಹತ್ತಾರು ಸಮಸ್ಯೆಗಳಲ್ಲಿ ಸಿಲುಕಿ ಕಲ್ಯಾಣಿ ತಲ್ಲಣಿಸುತಿದ್ದಳು.

ಕೃಷ್ಣ ಸುತ್ತಲ ಪ್ರಕೃತಿ ಸೌಂದರ್ಯವನ್ನೀಕ್ಷಿಸುತ್ತ ಯಾವುದೋ ರಾಗವನ್ನು ಒಳದನಿಯಲ್ಲೇ ಹಾಡುತ್ತಲಿದ್ದ.

ಬಸ್ ಮಡಿಕೇರಿಯನ್ನು ತಲುಪಿತು. ಮೈಸೂರು ಟಿಕೆಟ್, ಮಡಿ ಕೇರಿ ಟಿಕೆಟ್ ಎಂದು ಕಂಡಕ್ಟರ್ ಕೂಗಾಡಿದ.

ಪೆಟ್ರೋಲ್ ಬಂಕ್ ಬಳಿ ಸ್ವಲ್ಪ ಹೊತ್ತು ನಿಂತು, ಬಸ್ ಕೆಳಕ್ಕಿಳಿ ಯಿತು–ಬಸ್ ಸ್ಟ್ಯಾಂಡಿಗೆ.

ಕಲ್ಯಾಣಿ ತಲೆ ಎತ್ತಿ ಮುಖ–ಕಣ್ಣುಗಳನ್ನು ಒರಸಿಕೊಂಡು ಕುಳಿತು ಕೊಂಡಳು.

ಬೆಟ್ಟ ಒಂದೆಡೆ. ಇನ್ನೊಂದೆಡೆ–ಕೆಳಗೆ ಮನೆಗಳು; ಮಡಿಕೇರಿಯ ಮನೆಗಳೆಲ್ಲ ಅಲ್ಲೇ ಗುಂಪಾಗಿ ಕೂಡಿದಂತಿದೆ. ಅಲ್ಲೂ ಜನರಿದ್ದಾರೆ, ಸಂಸಾರ ವಿದೆ. ಇಲ್ಲೂ ಹಾಗೇ. ಮೇಲಕ್ಕೆ ಕೋಟೆಯ ಮೇಲೆ, ಊರಿನ ನೆತ್ತಿಯ ಮೇಲೆ ಅಧಿಕಾರ ಸ್ಥಾನ ನಿಂತಿದೆ. ನೆತ್ತಿ ಆಳುತ್ತಿದೆ; ಮನುಷ್ಯನನ್ನು ಅವನ ಬುದ್ಧಿ ಬದುಕಿಸುವಂತೆ, ಬಸ್-ಗ್ಯಾರೇಜ್‌ಗೆ ಹೋಯಿತು.

ಕೃಷ್ಣರಾವ್ ಹತ್ತಿರದ ಹೋಟಲಿಗೆ ಹೋಗಿ ಊಟ ಮಾಡಿದ. ಕಲ್ಯಾಣಿಗೆ ಏನೂ ಬೇಕಾಗಿರಲಿಲ್ಲ. ಅವಳಿಗೆ ಯಾವುದೂ ರುಚಿಸುವಂತಿರ ಲಿಲ್ಲ. ಅಂತೂ ಅವನ ಒತ್ತಾಸೆಗೆ ಕಾಫಿ ಕುಡಿದಳು.

ಬಸ್ ಮೈಸೂರಿಗೆ ಹೊರಟಿತು.

೭

ಏರಿದವನಿಳಿಯಬೇಕಂತೆ.

ಮಡಿಕೇರಿಯ ಬೆಟ್ಟದಿಂದ ಬಸ್ ಮೈಸೂರಿನ ಕಡೆಗೆ ಇಳಿಯಿತು.

ಹುಟ್ಟಿದ ಬೆಳೆದ ಊರನ್ನು ಬಿಟ್ಟೊಡನೆ ಅದೇಕೋ ಕೃಷ್ಣನ ಮೌನದ ಕಟ್ಟೊಡೆಯಿತು. ಇದುವರೆಗೂ ಸುಪ್ತವಾಗಿದ್ದ ಅವನ ಚೇತನ ಗರಿಗೆದರಿ ಹಾರಲು ಬಯಸಿತು. ಈಗ ನಾನು ಸ್ವತಂತ್ರ-ಇನ್ನು ನನ್ನ ಬಾಳು ನನ್ನದು ಎಂದು ಅವನ ಹೃದಯ ಗುಂಗಾಡಲು ತೊಡಗಿತು.

ಯಾವುದೋ ನಾಡಿಂದ ಹಾರಿಬಂದಿಹ ಹಕ್ಕಿ
  ಬಳಲಿಕೆಯನಾರಿಸಲು ತಾಣಬಯಸಿ;
ಬಿಸಿಲ ತಾಪಕೆ ಬಳಲಿ ತಡಸಲನು ಅರಸುತ್ತೆ
  ಬೆನ್ನ ಬೆಂಬಲವೀವ ಸಖಿಯ ಬಯಸಿ
ಗಾವುದಗಳೆಷ್ಟೋ ಸರಿದಿವೆ ಗಾಳಿಯಲಿ ಕೆಳಗೆ
  ದಾರಿಗಳದೆಷ್ಟೋ ಕೊನೆ ಮುಟ್ಟಿ ನಿಂದು;
ಆದರೂ ನೀರ ಪುಟಿಸುವ ಗಿರಿಯ ಬಸಿರಲ್ಲಿ
  ಬೆಳೆದ ಮರ, ಹರಿವ ನದಿ, ಕಾಣದಿಂದು.

ಹರ್ಷದಿಂದ ಉತ್ಸಾಹದಿಂದ ಕೃಷ್ಣ ಒಳದನಿಯಲ್ಲಿ ಹಾಡುತಿದ್ದ. ಕಲ್ಯಾಣಿ ಅವನ ಕಡೆಗೇ ಗಮನ ಹರಿಯಿಸಿದಳು. ದೂರದ ನದಿಯ ಪ್ರವಾಹದ ಸದ್ದನ್ನು ಮಂದಮಾರುತ ಹೊತ್ತು ತಂದಂತೆ ಅವಳಿಗೆ ಅನುಭವವಾಗಿತ್ತು. ಬಸ್ ಕೂಡಾ ಕೆಳಕ್ಕಿಳಿಯುತ್ತಿದೆ: ಜೀವನದ ಹೋರಾಟವನ್ನು ಪ್ರತಿಬಿಂಬಿಸುವ ಘರ್ಜನೆಯಿಲ್ಲ, ಸದ್ದಿಲ್ಲ. ಸದ್ದುಮಾಡದೆ, ಮಾಡಿದರೂ ಮಧುರವಾದ ಶಾಂತವಾದ ಸದ್ದು ಸರಿಸಿ ಬಸ್ ಸಾಗುತಿತ್ತು. ಕಲ್ಯಾಣಿ ಪ್ರಕೃತಿ ಸೌಂದರ್ಯವನ್ನು ಸವಿಯುತ್ತ ಕೃಷ್ಣನ ಹಾಡನ್ನು ಆಲಿಸುತ್ತ ಹರ್ಷಿತಳಾಗಿದ್ದಳು. ಚಿಂತೆಯನ್ನೆಲ್ಲ ಮರೆತಿದ್ದಾನೆ, ಯೋಚನೆಗಳನ್ನೆಲ್ಲ ಮನೆಯಲ್ಲೇ ಬಿಟ್ಟು, ಭೀತಿಯನ್ನು ತುಳಿದು, ಭವಿಷ್ಯವನ್ನು ಅಂಗೈಯಲ್ಲಿ ಇರಿಸಿಕೊಂಡವನಂತೆ ತೃಪ್ತನಾಗಿದ್ದಾನೆ ಈತ. ನನ್ನಂತೆ ಹುಚ್ಚು ಕಲ್ಪ

ನೆಯ ಅನಗತ್ಯವಾದ ಯೋಚನೆಯ ಸುಳಿಯಲ್ಲಿ ಸಿಲುಕಿ ತತ್ತರಿಸುತ್ತಿಲ್ಲ ಎಂದು ಕಲ್ಯಾಣಿಗೆ ಅನಿಸಿತು.

"ಕಾಫಿ ಗಿಡಗಳನ್ನು ನೋಡಿದಿರಾ?" ಅವನ ಗಮನವನ್ನು ಸೆಳೆಯ ಲೆಂದೇ ಕಲ್ಯಾಣಿ ಮಾತು ತೆಗೆದಳು.

ಹಾಡನ್ನು ಗೊಣಗುತಿದ್ದಂತೆ ಮುಗುಳುನಗೆ ತಂದುಕೊಂಡು ಕೃಷ್ಣ ಪಕ್ಕಕ್ಕೆ ತಿರುಗಿ ಹೊರಗಡೆ ಕಣ್ಣು ಹರಿಯಿಸಿದ.

"ಇದನ್ನು ನೋಡಿಯೇ ಕಾಫಿಯ ಬಯಕೆ ತೀರಿಸಿಕೊಳ್ಳಲೇ"

"ಅದು ಸಾಧ್ಯವಾಗಿದ್ದರೆ ಎಷ್ಟೋ ಚೆನ್ನಾಗಿತ್ತು."

"ಯಾವುದೋ ನಾಡಿಂದ ಹಾರಿ ಬಂದಿದೆ ಹಕ್ಕಿ...."

"ನಿಜ! ಹಕ್ಕಿಗಳು ಒಂದಾಗ ಬೇಕು. ಹಾಡುತ್ತಲಿವೆ. ಏರಿದ ಬಸ್ ಇಳಿಯಿತು."

"ಏರಿದವರೂ ಇಳಿಯ ಬಹುದು ಎಂಬ ಎಚ್ಚರಿಕೆ ನೀಡುತ್ತಿವೆ ಕಲ್ಯಾಣಿ. ಬೆಟ್ಟದ ತುದಿಗೇರಿದೆವು; ಮೈಸೂರಿನ ಬಯಲಿಗೆ ಇಳಿಯುತಿ ದ್ದೇವೆ."

"ಏರಿದಾಗ ಏನು ಗದ್ದಲ, ಏನು ಸದ್ದು ಮಾಡಿತು ಈ ಬಸ್. ಇಳಿ ವಾಗ ತನಗೆ ತಾನೇ ತನ್ನೆಲ್ಲ ದುಃಖವನ್ನು ಅಡಗಿಸಿಕೊಂಡಂತೆ, ಮನದೊಳಗೇ ಮರುಗುವಂತೆ ಮುನ್ನಡೆಯುತ್ತಿದೆ."

"ನಿಜ! ನೀನು ನರ್ತಕಿಯಷ್ಟೇ ಎಂದಿದ್ದೆ; ಕವಿಯೂ ಸಹ!"

"ಆಗದೇ ಉಂಟೇ? ಕವಿಗಳ ಸಹವಾಸ ಲಾಭ"

"ಆದರೆ ಅದೇ ದಾರಿ ಮಾತ್ರ ಬೇಡ."

"ಯಾಕೆ?"

" ಲಾವಿದನೇ ಭಿಕ್ಷು; ಇನ್ನು ಕವಿಯೂ ಆಗಿಬಿಟ್ಟರೆ ಡಬ್ಬಲ್ ಭಿಕ್ಷುಕರಾಗುತ್ತೇವೆ. ಆಮೇಲೆ ಮಂತ್ರೋಪದೇಶ ಮಾಡಬೇಕಾಗುತ್ತದೆ ನಿನಗೆ"

"ಅದಾವ ಮಂತ್ರ?"

"ಭವತೀ ಭಿಕ್ಷಾಂದೇಹಿ ಅನ್ನುವ ಸಪ್ತಾಕ್ಷರಿ ಮಂತ್ರ"

"ಸಧ್ಯ ಆ ಮಂತ್ರಸಿದ್ಧಿ ಮಾತ್ರ ಬೇಡ."

" ಆದರೂ ಆ ದಾರಿಯಲ್ಲಿ ನಾವಿನ್ನು ನಡೆಯಬೇಕಾಗಿದೆ ಕಲ್ಯಾಣಿ. ಈಗ ಹೊಸಲೋಕಕ್ಕೆ ಇಳಿಯುತ್ತಿದ್ದೇವೆ. ಅಲ್ಲಿ ಎಲ್ಲವೂ ಹೊಸದು. ಉದ್ಯೋಗ ದೊರಕಿಸದೆ ಬಾಳು ಹಸನಾಗಲಾರದು; ಉದ್ಯೋಗಕ್ಕಾದರೂ ಈ ಮಂತ್ರ ಜಪಿಸಬೇಕಾದೀತು."

" ನಿಜ ! ಆದರೆ–ಈ ಹಕ್ಕಿಗಳು ಹಾರಿ ಬಂದಿವೆ. ಮರ ಸಿಗಬಹುದು ಎಂದು ನಂಬಿ ಹಾರಾಟ ಆರಂಭಿಸಿವೆ. ನೋಡೋಣ....ಯಾವುದೋ ಮರ "

" ಎಚ್ಚರಿಕೆಯಿಂದಿದ್ದರೆ ಸರಿ. ಇಲ್ಲವಾದರೆ ಆ ಮರದಲ್ಲೂ ಹಾವು ಮನೆ ಮಾಡಿಕೊಂಡಿರಬಹುದು."

" ಆಪತ್ತು ಬಂದಾಗ ಆ ಬಗೆಗೆ ಚಿಂತೆ ಮಾಡೋಣ. ಈಗ ಕೊಂಚ ನೆಮ್ಮದಿ, ಒಂದು ಪ್ರಕರಣ ಮುಗಿಯಿತೆಂದು. ಒಂದು ನೃತ್ಯ ಮುಗಿಯುವ ವರೆಗೆ ಅದೇ ಚಿಂತೆ. ಅದು ಮುಗಿದೊಡನೆ ಒಮ್ಮೆ ಉಸಿರು ಬಿಡುತ್ತೇವೆ; ಸಾಕಪ್ಪ ಅನ್ನುತ್ತೇವೆ. ಕೂಡಲೇ ಎರಡನೆಯ ಪ್ರದರ್ಶನಕ್ಕೆ ಅಣಿಮಾಡಿ ಕೊಂಡು ಆ ಬಗೆಗೆ ಯೋಚಿಸುತ್ತೇವೆ. ಈಗ ಎರಡು ಪ್ರದರ್ಶನಗಳ ಅಂತ ರದ ಬಿಡುವು ದೊರೆತಿದೆ."

" ಅದಕ್ಕೆ ಹಾಡುತಿದ್ದೇನೆ."

" ಆನಂದದಿಂದ ತಾನೇ ? "

" ಅದೂ ಇದೆ ; ಮುಂದಿನ ಕನಸೂ ಇದೆ."

ಬಸ್ ಮುನ್ನಡೆಯಿತು. ಹುಣಸೂರು ಬಂತು. ಇಬ್ಬರೂ ಕಾಫಿ ಕುಡಿದು ಬಂದು ಬಸ್ ಏರಿದರು.

ಕಲ್ಯಾಣಿ ಮುಗುಳುನಗೆ ನಗುತಿದ್ದಳು.

" ಏನು....ಕಾಫಿ ಚೆನ್ನಾಗಿತ್ತೇ? "

" ಚೆನ್ನಾಗಿತ್ತು. ಜತೆಗೆ ಇನ್ನೊಂದು ಯೋಚನೆ ಬಂತು."

" ಹೊಸ ಭಾವ....ಹೊಸ ಚಿಂತೆ...."

" ಅಲ್ಲ. ಪುತ್ತೂರಿನಲ್ಲಿ ನಾವು ಕಾಫಿ ಕುಡಿದೆವು."

" ಹೌದು. ಇಡ್ಲಿಕೂಡಾ ತಿಂದೆವು. ಒಂದು ವಡೆಯೂ ಇತ್ತು. ಸಾಂಬಾರ್ ಚೆನ್ನಾಗಿತ್ತು...."

" ಸಾಕು ನಿಮ್ಮ ಮಾಣಿಪುಂತ್ರ. ಅದಲ್ಲ ನಾನು ಹೇಳಿದ್ದು. ಅಲ್ಲಿ ನಾವು ಕಾಫಿ ಕುಡಿಯುತ್ತಿರುವಾಗ ಹತ್ತಾರು ಕಣ್ಣುಗಳು ನಮ್ಮನ್ನೇ ನೋಡು ತಿದ್ದುವು."

" ನೀನು ಹುಡುಗಿ–ಹೆಣ್ಣು–ಸುಂದರಿ.... ಇತ್ಯಾದಿ ಎಂದುಕೊಂಡು."

" ನಿಜ! ಇತ್ಯಾದಿ ಅಂದಿರಲ್ಲ ಹಾಗೆಂದುಕೊಂಡು. ಅದನ್ನು ನೋಡಿ ನನಗೆ ಸಂದೇಹವಾಯಿತು, ಭೀತಿ ಮೂಡಿತು, ಜುಗುಪ್ಸೆ ಉಂಟಾಯಿತು."

" ಯಾರ ಬಗೆಗೆ "

" ಆ ಕಣ್ಣುಗಳ ಬಗೆಗೆ. ನೋಡುತ್ತಿದ್ದವರ ಬಗೆಗೆ."

" ಸುಂದರವಾದ ವಸ್ತುವನ್ನು ಎಲ್ಲರೂ ನೋಡುತ್ತಾರೆ. ನೀನೂ.... ನಾನೂ ಸಹ."

" ಇರಬಹುದು. ಆದರೆ ಅವರ ನೋಟ ಬೇರೆಯಾಗಿತ್ತು ಇಲ್ಲಿ.... ಯಾರೂ ನಮ್ಮನ್ನು ಗಮನಿಸಲಿಲ್ಲ."

" ಹಾಗೇನು ? ನಿನಗೆ ತುಂಬ ಹಸಿವೆಯಾಗಿತ್ತೇ ? "

" ಯಾಕೆ ? "

" ಒಳಹೊಕ್ಕವಳೇ ತಿಂಡಿ ತಿಂದು, ಕಾಫಿ ಮುಗಿಸಲು ತೊಡಗಿದೆ ಯೆಂದು ತೋರುತ್ತೆ. ಆ ಅವಸರದಲ್ಲಿ ಯಾರು ನೋಡುತ್ತಾರೆ, ಯಾರು ಇಲ್ಲ ಎಂಬುದನ್ನೇ ನೀನು ನೋಡಿರಲಾರೆ."

" ಸಾಕು ನಿಮ್ಮ ಪರಿಹಾಸ. ಇಲ್ಲಿನವರ ನೋಟದಲ್ಲಿ ಅಚ್ಚರಿಯಿರ ಲಿಲ್ಲ."

" ನೀನಾರೆಂಬುದೂ ಅವರಿಗೆ ತಿಳಿದಿಲ್ಲ."

" ಅದೇ ವಿಚಾರ ನಾ ಹೇಳುತಿದ್ದೇನೆ. ಆ ಗುರುತಿರುವವರ ನೋಟ ಗಳ ತೀಕ್ಷ್ಣತೆ ತುಂಬ ಭೀಕರ. ಇಲ್ಲಿ ಸಂದೇಹದ ದೃಷ್ಟಿಯಿಲ್ಲ. ನಾವಿಬ್ಬರೂ ಎಲ್ಲರಂತೆ; ಇತರ ಪ್ರಯಾಣಿಕರಂತೆ. ವಿಚಿತ್ರ ಜೋಡಿಯಲ್ಲ."

" ವಿಚಿತ್ರವೋ ಏನೋ ಅದನ್ನು ಅವರು ಹೇಗೆ ಬಲ್ಲರು; ನಾವೇ ಅನುಭವದಿಂದ ಅರಿತುಕೊಳ್ಳಬೇಕು."

" ಸಾಕು ನಿಮ್ಮ ಅಣಕ. ಅದನ್ನು ಪರೀಕ್ಷಿಸೋಣ—ಬಸ್‌ನಲ್ಲಿ ಬೇಕಾಗಿಲ್ಲ. ಇಲ್ಲಿಯ ವಾಸ್ತವಿಕ ಪರಿಸ್ಥಿತಿಗಳಿಂದ ನನಗೆ ಧೈರ್ಯ ಬಂತು."

" ಅಂದರೆ...."

" ದೂರ ಹೋದಷ್ಟು ನಮ್ಮ ಬಗೆಗೆ ಕಲ್ಪನೆಯ ಸಾವಿರ ಕೃತಿಗಳನ್ನು ರಚಿಸಿ ಆಡುವವರ ಕಾಟ ತಪ್ಪುತ್ತದೆ. ನಾವು ದಂಪತಿಗಳಾಗೇ ಬಾಳುತ್ತೇವೆ"

" ಏ....ದಂ...."

" ಏನದು....? "

" ನೀನು ದಂ....ನಾನು ಪತಿ. ಸುಮ್ಮನಿರು."

ಇಬ್ಬರೂ ನಕ್ಕರು. ಬಸ್ ಮೈಸೂರು ತಲುಪಿತು.

ಬಸ್ ಮಾಡರ್ನ್ ಹೋಟೆಲ್ ಮುಂದೆ ನಿಂತಿತು. ಇಬ್ಬರೂ ಕೆಳಕ್ಕಿಳಿದರು. ಸೆರೆಮನೆಯಿಂದ ಹೊರಬಿದ್ದವನು ಹೊರಗಡೆಗೊಮ್ಮೆ ಸುತ್ತ ನೋಡಿ, ಹೊಸ ಗಾಳಿಯನ್ನು ಸೇವಿಸುವಂತೆ ಕಲ್ಯಾಣಿ ತಲೆ ಎತ್ತಿ ಸುತ್ತಲೂ ನೋಡಿ, ಸೆರಗಿನಿಂದ ಗಾಳಿ ಬೀಸಿಕೊಂಡಳು. ಅವರ ಹಾಲ್ಡ್ ಆಲ್, ಪೆಟ್ಟಿಗೆಗಳೂ ಬಸ್‌ನ ಅಟ್ಟದಿಂದ ಕೆಳಕ್ಕಿಳಿದುವು. ಹೋಟೆಲ್ ಒಳಗಡೆ ನಡೆದು ಕೃಷ್ಣರಾವ್ ಆಫೀಸಿಗೆ ನಡೆದ.

" ರೂಮ್....ಸಿಂಗಲೇ....ಡಬ್ಬಲೇ ? "

" ಡಬ್ಬಲ್ ರೂಮ್."

" ಸರಿ. ಹೆಸರು ಹೇಳಿ."

" ಕೃಷ್ಣರಾವ್ ಮತ್ತು ಮಿಸೆಸ್ ಕೃಷ್ಣರಾವ್."

ಮ್ಯಾನೇಜರ್ ಹೆಸರು ಬರೆದುಕೊಂಡು ತಿರುಗಿ ಗೋಡೆಯ ಮೇಲಿದ್ದ ಹಲಿಗೆ ನೋಡಿದ. ವಿವಿಧ ಕೋಣೆಗಳ ನಂಬರ್ ಬರೆದು ಕೀಲಿ ಕೈಗಳನ್ನೂ ಅಲ್ಲೇ ಸಿಕ್ಕಿಸಿದ ಬೋರ್ಡಿನಲ್ಲಿ ತೆರವಾದ ರೂಂಗಳ ಕೀಲಿ ಕೈ ತೂಗಾಡುತಿತ್ತು.

"೯ನೇ ನಂಬ್ರದ ರೂಮು ಕೊಡುತ್ತೇನೆ. ಮಹಡಿಯ ಮೇಲಿದೆ. ಬಾಲಪ್ಪ....ಇವರಿಗೆ ರೂಮು ತೋರಿಸು. ಅವರಿಗೆ, ಬೇಕಾದ ವ್ಯವಸ್ಥೆ ಮಾಡಿಕೊಡು" ಎಂದು ಮ್ಯಾನೇಜರ್ ಅಪ್ಪಣೆ ಮಾಡಿದ.

ಕೃಷ್ಣರಾವ್ ೨೫ ರೂಪಾಯಿ ಅಡ್ವಾನ್ಸು ಕೊಟ್ಟು ಪುಸ್ತಕದಲ್ಲಿ ಸಹಿ ಮಾಡಿದ. ಮ್ಯಾನೇಜರ್ ಕೊಟ್ಟ ರಶೀದಿಯನ್ನು ತೆಗೆದುಕೊಂಡು ಬಾಲಪ್ಪನನ್ನು ಹಿಂಬಾಲಿಸಿದ. ಕಲ್ಯಾಣಿ ಮಹಡಿಯನ್ನೇರಿದಳು.

ಅವರ ಹಿಂದೆಯೇ ಅವರ ಸಾಮಗ್ರಿಗಳೂ ಬಂದುವು. ಕ್ಲೀನರ್ ಬಂದು ಕೋಣೆಯನ್ನು ಗುಡಿಸಿ, ಹಾಸಿಗೆಯ ಮೇಲೆ ಹೊಸ ಹಾಸುಗಳನ್ನು ಹರವಿದ.

" ಬಿಸಿಲಿಗೆ ಬೆಂದುಹೋಗಿದ್ದೇವೆ. ಮೊದಲು ಎರಡು ಕಾಫಿ ತಂದು ಕೊಡು. ಹಾಗೆ ಸ್ನಾನಕ್ಕೆ ನೀರು ಸಿದ್ಧಪಡಿಸಿಕೊಡು."

ಬಾಲಪ್ಪ ತಲೆದೂಗಿ ಹೊರಟುಹೋದ.

" ಈಗ ಪೂರ್ಣ ಸ್ವತಂತ್ರರಾದೆವು ಕಲ್ಯಾಣಿ....ಇದುವರೆಗೆ ಕಟ್ಟಿದ್ದ ಕಟ್ಟೆ ಒಡೆಯುತ್ತದೆ; ಉಸಿರು ಹೊರ ಹರಿಯುತ್ತಿದೆ "

ಉಸ್ಸೆಂದು ಕಲ್ಯಾಣಿ ಮಂಚದ ಮೇಲೆ ಕುಳಿತಳು. ಕೃಷ್ಣ ಅವಳೆಡೆ ಧಾವಿಸಿ ಪಕ್ಕದಲ್ಲೇ ಕುಳಿತು ಒಮ್ಮೆ ಆಲಿಂಗಿಸಿ ಅವಳನ್ನು ಎದೆಗೊತ್ತಿ ಕೊಂಡ.

" ಸುಮ್ಮನಿರೀಂದ್ರೆ. ಮಾಣಿ ಬಂದಾನು...."

" ಬರಲಿ ಕಲ್ಯಾಣಿ, ಯಾರೇ ಬರಲಿ....ನಾನು ಅಳುಕುವುದಿಲ್ಲ. ನೀನು ನನ್ನವಳು, ನನ್ನ ರಾಣಿ. ಆದರೆ...."

" ಅದೇನು...."

" ಮಾಸ್ತರ್ ಮತ್ತು ಸಿಂಹನವರ ಮುಂದೆ ಮಾತ್ರ ನನ್ನ ಸಕಲ ಉತ್ಸಾಹ ಹಿಂಗುತ್ತದೆ, ಕೈಕಾಲು ಮುದುಡುತ್ತದೆ. ಆಗ ನಾನು ನಾಚುಗೆ ಅಪ್ಪಿದ ಹೆಣ್ಣು."

" ಈಗ ನಾಚುಗೆಯಿಲ್ಲದ ಗಂಡು "

ಕೃಷ್ಣ ಅವಳ ಮುಖವನ್ನೇ ದಿಟ್ಟಿಸಿ ನೋಡಿದ. ಒಮ್ಮೆ ಕೋಣೆಯ ಬಾಗಿಲ ಕಡೆ ತಿರುಗಿದ. ಪಕ್ಕನೆ ಅವಳ ಕೆನ್ನೆಗೆ ಮುತ್ತಿಟ್ಟು—ಅವಳಿದಿರು ನಿಂತು.... " ನಿನ್ನ ಮಾತು ನಿಜ " ಎಂದು ಅಣಕಿಸಿದ.

" ತುಟಿ ಒರಸಿಕೊಳ್ಳಿ. "

" ಯಾಕೆ...."

" ಈಗ ನೀವು ಮುತ್ತಿಕ್ಕಿದಿರಲ್ಲ....ಆಗ ಕೆನ್ನೆಯ ಮೇಲೆ ತುಂಬಿದ ಕೆಂಪು ಧೂಳು ತುಟಿಗೆ ಅಂಟಿರಬಹುದು."

"....ಹಾಗೇನು" ಎಂದು ಕೃಷ್ಣ ನಕ್ಕ "ಆದರೂ ಆ ಕೆನ್ನೆಗೆ ಒಂದು ಶಕ್ತಿಯಿದೆ, ಗೊತ್ತೇ? ಧೂಳೂ ಅಲ್ಲಿ ಕುಂಕುಮವಾಗುತ್ತೆ-ಅರಸಿನ ವಾಗುತ್ತೆ."

"ತುಂಬ ಸ್ವಾತಂತ್ರ್ಯ ಬಂತು ನಿಮಗೆ. ನಿಮ್ಮನ್ನು ಸೆರೆಯಲ್ಲಿಡಲೇ ಬೇಕು."

"ಆಗಲೇ ಇಟ್ಟಿದ್ದೀಯ. ಇನ್ನು ನನ್ನ ಬಿಡುಗಡೆ ಅನಿಶ್ಚಿತ. ನೀನೇ ಆ ಜೇಲರ್."

"ಹಾಗೇನು? ಹಾಗಾದರೆ ಅಪ್ಪಣೆ ಕೊಡುತ್ತೇನೆ. ಕುಳಿತು ಕೊಳ್ಳಿ...."

ಕೃಷ್ಣ ಅವಳ ಮಗ್ಗುಲಲ್ಲಿ ಕುಳಿತುಕೊಳ್ಳಲೆತ್ನಿಸಿದ. "ಇಲ್ಲಲ್ಲ. ಇದು ಡಬ್ಬಲ್ ರೂಮ್. ಆ ಮಂಚದ ಮೇಲೆ" ಎಂದು ಅವಳು ಇನ್ನೊಂದು ಮಂಚದ ಕಡೆಗೆ ಬೆರಳು ತೋರಿದಳು.

ಮಾಣಿ ಕಾಫಿ ತಂದಿಟ್ಟ.

"ಮಹಡಿಯ ಮೇಲೇ ಬಚ್ಚಲಿದೆ. ಇಲ್ಲೇ ನೀರಿನ ವ್ಯವಸ್ಥೆ ಮಾಡು ತ್ತೇನೆ." ಎಂದು ಹೊರಟುಹೋದ.

ಇಬ್ಬರೂ ಪರಸ್ಪರ ನೋಡಿಕೊಂಡು ಮುಗುಳುನಗೆ ನಗುತ್ತ ಕಾಫಿ ಮುಗಿಸಿದರು. ಈಗ ಇವನನ್ನು ಕತ್ತೆತ್ತಿ, ಇದಿರಿದಿರಾಗಿ ನಿಂತು, ಕಣ್ತುಂಬ ನೋಡಬಹುದು ಎಂಬ ಹರುಷ ಕಲ್ಯಾಣಿಗೆ. ಈಕೆ ನನ್ನವಳು, ಪೂರ್ಣ ವಾಗಿ ನನ್ನವಳು, ಅವಳ ಅಂಗಾಂಗವೂ ನನ್ನದು, ಎಂದು ಹಿಗ್ಗಿ ಅವಳ ಮುಖ ಎದೆ, ಕೆನ್ನೆ, ತೋಳು, ಕಟಿ, ತೊಡೆಗಳ ಕಡೆಗೆ ಹಸಿದ ನೋಟದಿಂದ ಕೃಷ್ಣ ನೋಡುತಿದ್ದ. ತಮ್ಮ ಮನದ ಭಾವನೆಗೆ ಅವರಿಗೇ ನಗು ಬಂತು.

ಇದುವರೆಗೆ ಅದೆಷ್ಟೋ ಬಾರಿ ಅವಳನ್ನು ನೋಡಿದ್ದೇನೆ. ವರುಷ ಗಟ್ಟಲೆಯಾಗಿ ಜತೆಯಾಗೇ ಇದ್ದೆವು. ಇಬ್ಬರೂ ಜತೆಗೂಡಿದ್ದೆವು. ಆದರೂ ಯಾವುದೋ ಆತಂಕ, ಯಾವುದೋ ಭೀತಿಯ ಪರದೆ ಅಡ್ಡವಾಗಿತ್ತು. ನೇರಾಗಿ ನೋಡಿದರೆ, ಯಾರ ದೃಷ್ಟಿಗೆ ಬೀಳುತ್ತೇನೋ ಎಂಬ ಭೀತಿ ಅಡ್ಡ ಬರುತಿತ್ತು. ಕಳ್ಳ ನೋಟ, ಕಳ್ಳಮಾತು, ಕಳ್ಳ ಕೂಟ-ಎಲ್ಲವೂ ಕಳ್ಳತನ ದಿಂದ ಸಾಗಬೇಕಾಗಿತ್ತು. ಎಂಥ ಬಾಳು! ಈಗ ಅದೆಲ್ಲ ಮಾಯವಾಗಿದೆ

ನಮ್ಮ ಸರಸವನ್ನು ವಿಲಾಸವನ್ನು ವಿನೋದವನ್ನು ತಡೆಯುವ ಕೈ ಯಾವುದೂ ಇಲ್ಲ. ಅಲ್ಲೇ ಇದ್ದರೆ....ಅದೆಂಥ ಸ್ವತಂತ್ರವಾದರೂ....ಆತಂಕದ ಭೀತಿ ಇದ್ದೇ ಇತ್ತು. ಅಂಗಡಿಯ ಬಟ್ಟೆಯಂತೆ. ಅದನ್ನು ನಾವೇ ಕೊಳ್ಳುವ ದಾದರೂ ಎತ್ತಿ ಎದೆಗೆ ಅಪ್ಪಿಕೊಂಡು ಮನ ಬಂದಂತೆ ಬಿಡಿಸಿ ನೋಡುವ ಹಾಗಿರಲಿಲ್ಲ. ಆ ಸೀರೆ ಮನೆಗೆ ತಂದಾಗ, ಆಕೆ ಅದನ್ನು ಉಡಲಿ, ಮುದ್ದೆ ಮಾಡಲಿ, ಹುಡಿಹುಡಿಯಾಗುವಂತೆ ಮುದುಡಿ ಎದೆಗೊತ್ತಿಕೊಳ್ಳಲಿ ಯಾರದೂ ಅಡ್ಡಿಯಿಲ್ಲ. ಕೃಷ್ಣನಿಗೆ ಯೋಚಿಸಿದಷ್ಟುಕ್ಕೂ ನಾನಿಂದು ಸ್ವತಂತ್ರನಾದೆ, ಹೃದಯ ತುಂಬಿ ಉಕ್ಕುವಂತೆ ಅವಳನ್ನು ಆಲಿಂಗಿಸ ಬೇಕು, ಚುಂಬಿಸಬೇಕು, ಎತ್ತಿ ಕುಣಿದಾಡಬೇಕು ಎನ್ನಿಸಿತು ಅವನಿಗೆ.

ಕಲ್ಯಾಣಿಯ ಮನದಲ್ಲೂ ಇಂತಹ ಭಾವನೆಗಳೇ ತುಂಬಿದ್ದುವು. ಪೂರ್ಣ ತೃಪ್ತಿಯಾಗುವವರೆಗೂ ವಿಹರಿಸಬೇಕು, ಸುಖಿಸಬೇಕು ಎಂದವಳ ಮನ ಹಾತೊರೆಯುತಿತ್ತು. ಆತುರದಿಂದ ಅವಳ ಎದೆ ಮಿಡಿಯುತಿತ್ತು. ಕಣ್ಣುಗಳು ಕೃಷ್ಣನನ್ನೇ ನುಂಗಲೆಳಸುವಂತೆ ನೋಡುತಿದ್ದುವು.

ಆ ಗುಂಗಿನಲ್ಲಿ ಇಬ್ಬರಿಗೂ ಮಾತೇ ತೋಚಲಿಲ್ಲ. ಅವರು ಮುಂದಿನ ಸುಖದ ಕನಸಿನಲ್ಲಿ ಮೈ ಮರೆತಿದ್ದರು. ಉಕ್ಕಿದ ಸಂತೋಷದಿಂದ ಕಲ್ಯಾ ಣಿಯ ಕಾಲುಗಳು ನೆಲದ ಮೇಲೆ ಹೆಜ್ಜೆ ಹಾಕುತ್ತಿದ್ದುವು. ಯಾವುದೋ ತಾಳಬದ್ಧ ಹೆಜ್ಜೆ. ಹಾಗೇ ಮಂಚದ ಮೇಲೆ ಒರಗಿ, ತನ್ನ ಕೈಗಳನ್ನು ಮೇಲಕ್ಕೆ ನೀಡಿ ದಿಂಬಿನ ಮೇಲೆ ಇಳಿಬಿಟ್ಟು ಮಲಗಿದಳು. ಅವಳ ಎದೆ ಉಬ್ಬಿ ಉಕ್ಕಿ ಮೇಲೇರುತ್ತಿರುವಂತೆ ಕೃಷ್ಣನಿಗೆ ಅನಿಸಿತು.

ಬಾ ಸಖಿ....ಯಾವುದೋ ಪುಣ್ಯಕಾಲದ ಪುಣ್ಯ
  ನೀನಾಗಿ ಬಂದಿರುವೆ ಈ ಬಾಳಿನಲ್ಲಿ.
ಜೀವನದ ಜೀವನಿಧಿ ನನ್ನ ಬಾಳಿನ ಪುಣ್ಯ
  ನಿನ್ನ ಬಾಳನು ಬೆಳಗೆ-ಬೆಳಗಿಸಿಲ್ಲಿ

ಕೃಷ್ಣರಾವ್ ಹಾಸಿಗೆಯಿಂದೆದ್ದು ಕೋಣೆಯ ಬಾಗಿಲು ಮುಚ್ಚಿ, ಕಲ್ಯಾಣಿಯ ಮಂಚದ ಬಳಿ ಬಂದು ನಿಂತ. ಅವಳ ಪಕ್ಕದಲ್ಲೇ ಕುಳಿತು ಎದೆಯ ಮೇಲೆ ಬಾಗಿ ಮುಖದ ಮೇಲೆ ಮುಖವಿಟ್ಟು ಹಾಡನ್ನು ಒಳದನಿ ಯಲ್ಲೇ ಹಾಡುತ್ತ ಮೈ ಮರೆತ.

ಹಾಗೇ ಇಬ್ಬರೂ ಮೈಮರೆತು ಒರಗಿದ್ದರು. ಅವನ ಹಾಡು ಕಲ್ಯಾಣಿಯ ಹೃದಯವನ್ನು ತುಂಬಿತು. ಆ ಕೋಣೆಯಲ್ಲೆಲ್ಲ ಹರಡಿತ್ತು.

"ಸಾರ್...." ಮಾಣಿ ಬಾಗಿಲು ತಟ್ಟಿದ.

"ಹ್ಞಾ...."

"ಬಿಸಿನೀರು ಸಿದ್ಧವಾಗಿದೆ."

ಇಬ್ಬರೂ ಸ್ನಾನದ ಸಿದ್ಧತೆ ಮಾಡಿದರು. ಇಬ್ಬರ ಮೈಯೂ ಬೆವರಿನಿಂದ ಒದ್ದೆಯಾಗಿತ್ತು.

"ಜ್ವರ ಬಂದು ಬಿಟ್ಟಹಾಗಾಗಿದೆ, ಮೈ ಬೆವರಿನಿಂದ."

"ಹೌದು. ಚಳಿಜ್ವರ ಬಿಟ್ಟಿತು. ಭೀತಿ ಆತಂಕಗಳ ಜ್ವರ ಬಿಟ್ಟಿತು."

"ಪೂರ್ಣ ಸ್ವಾತಂತ್ರ್ಯ ಒದಗಿತು."

"ನಿಜ ಕಲ್ಯಾಣಿ. ಈಗ ಪೂರ್ಣ ಜೀವ ಬಂದಿದೆ. ನಮ್ಮ ಬಾಳಿನ ಬಗೆಗೆ ಅಡ್ಡಿಯಾಗಿದ್ದುದೆಲ್ಲ ಅಳಿದು ಹೋಗಿದೆ. ಈ ಕಾರಂಜಿ ಪುಟಿಯುತ್ತಿದೆ. ಹಾರುತ್ತಿದೆ....ಬೇಗ ಸ್ನಾನ ಮುಗಿಸು."

"ಹಾಗೇ ಅಡ್ಡಾಡಿಕೊಂಡು ಬರೋಣ."

"ಆಗಲಿ...."

ಸ್ನಾನ ಮುಗಿಸಿಕೊಂಡು ಅಲಂಕರಿಸಿಕೊಂಡು ಇಬ್ಬರೂ ಹೊರಟರು. ಮೈಸೂರಿಗೆ ಕಲಾಮಂಡಲದ ಮೇಳ ಬಂದಿತ್ತು. ಕಲ್ಯಾಣಿ ಇಲ್ಲಿಯ ಕಲಾಪ್ರೇಮಿಗಳನ್ನು ತನ್ನೆಡೆ ಸೆಳೆದುಕೊಂಡಿದ್ದಳು. ಮೈಸೂರು ಪತ್ರಿಕೆ ಅವಳ ನೃತ್ಯದ ಬಗೆಗೆ ತುಂಬ ಹೊಗಳಿ ಬರೆದಿತ್ತು. ಅದರ ಸಂಪಾದಕರೂ ಕೂಡಾ ಮಾಡರ್ನ್ ಹೋಟಿಲಿಗೆ ಬಂದು, ಕಲಾವಿದರನ್ನೆಲ್ಲ ಕಂಡು, ಕಲ್ಯಾಣಿಯನ್ನು ಆಶೀರ್ವದಿಸಿ, ಬೆನ್ನು ತಟ್ಟಿ, ಹುರಿದುಂಬಿಸಿದ್ದರು. ಮಾಸ್ತರ್ ಬಗೆಗೆ ಬರೆಯುತ್ತ "ತಮಿಳು ನಾಡಿನವರ ಮನೆ ಸೇರಿದ ಕನ್ನಡಿಗರದಾದ ಭರತನಾಟ್ಯ ಹಿಂತಿರುಗುವ ಶುಭಸೂಚನೆ ಕಂಡು ಬಂದಿದೆ. ನಾಟ್ಯಾಚಾರ್ಯ ವಿಜಯಕುಮಾರರು ಈ ದಾರಿಯಲ್ಲಿ ದುಡಿಯುತ್ತಿದ್ದಾರೆ. ಇಂದು ನಾಡಿಗರಿಗೆಲ್ಲ ಶುಭದಿನ. ನಾಡ ನಾಟ್ಯ ಹಿಂತಿರುಗಿದ ದಿನ; ಅತ್ಯುನ್ನತ ಪೀಠದಲ್ಲಿ ನಿಂತ ದಿನ." ಎಂದು ಶ್ಲಾಘಿಸಿದ್ದರು.

ಆದರೆ ಅವರನ್ನೆಲ್ಲ ನೋಡುವ ಮಾತನಾಡಿಸುವ ಧೈರ್ಯ ಕಲ್ಯಾಣಿಗೆ ಇಲ್ಲ. ಬಂದ ಕಾರಣ ವಿಚಾರಿಸಿದರೆ, ಮಾಸ್ತರ್ ಏಕೆ ಬರಲಿಲ್ಲವೆಂದು ಪ್ರಶ್ನಿಸಿದರೆ ಏನು ಉತ್ತರ ಕೊಡಲಿ? ಇಲ್ಲೊಂದು ಪ್ರದರ್ಶನದ ವ್ಯವಸ್ಥೆ ಮಾಡೋಣ ಎಂದರೆ ಏನೆನ್ನಲಿ? ಮೇಳವಿಲ್ಲ, ಸಹಾಯಕ ನಟನಟಿಯರಿಲ್ಲ. ಎಲ್ಲವನ್ನು ವ್ಯವಸ್ಥೆಗೊಳಿಸುವಷ್ಟು ಆರ್ಥಿಕ ಅನುಕೂಲಗಳೂ ಇಲ್ಲ. ಎಲ್ಲಕ್ಕೂ ಮೇಲಾಗಿ "ಮಾಸ್ತರ್‌ರಿಗೆ ಬರೆಯಿರಿ· ಅವರೂ ಬರಲಿ." ಎಂದರೆ ಯಾವ ಮರುತ್ತರ ಕೊಡಲಿ? ಎಂತಲೇ ಕಲ್ಯಾಣಿ ಗೆಯಾರನ್ನೂ ನೋಡುವ ಧೈರ್ಯವೂ ಇಲ್ಲ.

ಇಬ್ಬರೂ ಸುಮ್ಮನೆ ಗುರಿಯಿಲ್ಲದೆ ಸುತ್ತಾಡಿದರು. ಲಾಲ್‌ಬಾಗ್ ಕಡೆ ನಡೆದು ಅಲ್ಲಿ ಕೊಂಚ ಹೊತ್ತು ಕುಳಿತರು. ಶಾಂತಿಯಿದೆ, ಸ್ವಾತಂತ್ರ್ಯವಿದೆ, ಯಾರ ಆತಂಕವೂ ಇಲ್ಲ. ಆದರೂ ಒಳಗೊಳಗೇ ಏನೋ ಅಶಾಂತಿ ಅವರನ್ನು ಕಾಡುತ್ತಿತ್ತು. ಅದೇನೆಂದು ಅವರಿಗೂ ತಿಳಿಯದು.

ವಿದ್ಯುದ್ದೀಪಗಳ ಬೆಳಕಿನಲ್ಲಿ ಬೆಳಗುತ್ತಿರುವ ಸುಂದರ ನಗರವನ್ನು ನೋಡಿ ಇಬ್ಬರೂ ಹೋಟೆಲಿಗೆ ಹಿಂತಿರುಗಿದರು.

ಊಟವೂ ಮುಗಿದು ಕೋಣೆ ಸೇರಿದರು.

ಒಂದು ಘಟ್ಟ ಮುಗಿಯಿತು.

ಸ್ವಾತಂತ್ರ್ಯದ ಆನಂದ ಉತ್ಸಾಹಗಳು ಮೆಲ್ಲನೆ ಇಳಿಮುಖವಾಗುತ್ತಿದ್ದವು.

ಮುಂದೇನು....ಎಂಬ ಪ್ರಶ್ನೆ ಅವರಿಬ್ಬರನ್ನೂ ಕೆಣಕುತ್ತಿತ್ತು.

ಅದನ್ನು ಮರೆಯಲೆಂದೇ ಹಾಸಿಗೆಯಲ್ಲಿ ಉರುಳಿದರು.

ಆಯಾಸದಿಂದ ನಿದ್ರೆಯೂ ಹತ್ತಿರ ಬಾರದೆ ಸುತ್ತ ಸುತ್ತ ಸುಳಿಯುತ್ತಿತ್ತು.

" ಕಲ್ಯಾಣಿ...."

ಅವಳ ಪಕ್ಕದಲ್ಲಿ ಒರಗಿಕೊಂಡು ಕೃಷ್ಣರಾಯ ಅವಳ ಎದೆಯ ಮೇಲೆ ತಲೆ ಇರಿಸಿಕೊಂಡು ಹೇಳಿದ.

" ಎಲ್ಲ ಬಗೆಯಿಂದಲೂ ನಾವು ಹರ್ಷಚಿತ್ತರಾಗಿದ್ದೇವೆ. ಉತ್ಸಾಹ ತುಂಬಿ ತುಳುಕುತ್ತಿದೆ. ನಲಿಯೋಣ ನರ್ತಿಸೋಣ ಅನ್ನುವಂತಾಗಿದೆ.

ಆದರೂ ಯಾಕೋ ಒಂದು ತರಹೆ. "

"ನನಗೂ ಹಾಗೇ ಆಗಿದೆ. ಅದೇನೆಂದು ತಿಳಿಯಲು ಪ್ರಯತ್ನಿಸಿದಷ್ಟೂ ಸೋಲುತ್ತಿದ್ದೇನೆ. "

"ಅದಕ್ಕೇ ಅದನ್ನು ಮರೆತುಬಿಡೋಣ" ಎಂದು ಮರೆಯಲಾಗದೆ ಪರಿತಪಿಸುತ್ತಿದ್ದ ಕೃಷ್ಣ ಉತ್ತರವಿತ್ತ.

"ಹಾಗೇನು? ಅದಕ್ಕೇ ಉಷ್ಟ್ರಪಕ್ಷಿಯಾಗುತ್ತಿದ್ದೀರಿ. ಅಲ್ಲವೇ?

"ಅಂದರೆ— "

"ನನ್ನ ಎದೆಯೊಳಗೆ ತಲೆ ಹುದುಗಿಸುವ ಪ್ರಯತ್ನ ಮಾಡುತ್ತಿದ್ದೀರಿ" ಎಂದು ನಗುತ್ತ ಅವನ ತಲೆಯನ್ನೂ ಗಲ್ಲವನ್ನೂ ನೇವರಿಸಿದಳು.

"ಹಾಗಲ್ಲ....ನಿನ್ನ ಹೃದಯ ಏನು ಉತ್ತರ ಹೇಳುತ್ತೋ ನೋಡೋಣ ಅಂತ....ಅಲ್ಲಿ ಕಿವಿ ಇರಿಸಿದ್ದೇನೆ."

"ಹೋ....ಹಾಗೇನು? ಅದು ತಬಲಾ ಬಾರಿಸುತ್ತಿದೆ. ನಿಮ್ಮ ಸಂಗೀತವಾಗಲಿ. "

ಕೃಷ್ಣ ನಗುತ್ತ ಚಿಗಿದು ಎದ್ದು ಕುಳಿತು ಅವಳ ಮುಖವನ್ನು ತನ್ನ ಮುಖದಿಂದ ಮುಚ್ಚಿದ.

ನಿನ್ನ ಮೊಗ ನನ್ನೆಡೆಗೆ ತಿರುಗಿದರೆ ಸಾಕು ಸಖಿ
ನೂರು ಸಾವಿರ ಕತೆಯು ನೆನೆವೆ ಹಿಗ್ಗಿ.
ನಿನ ಕಣ್ಣು ನನ ಕಣ್ಣು ಮುಟ್ಟಿತೆಂದರೆ ಸಖಿ–
ಭಾವನೆಯು ಆಗಸದಿ ನಲಿವೆ ಹಿಗ್ಗಿ!
ಬಾ ಸಖೀ ನನ್ನ ಜೀವನಸಾರ ಸರ್ವಸ್ವ
ಅರಳಿರಲಿ ನಮ್ಮ ಈ ಬಾಳ ಹೂವು.
ಸುಖ ದುಃಖ ಜೀವನದ ಉಸಿರೆಂಬುದೇ ವಿಶ್ವ
ನಿಯಮವಿರೆ ಬಯಸೋಣ–ಬೆಲ್ಲ–ಬೇವು.

ಅದೆಷ್ಟು ಹೊತ್ತು ಆ ಮಧುರ ಕಂಠದಿಂದ, ತುಂಬಿದ ಹೃದಯದಿಂದ ಈ ನಾದಲಹರಿ ಹರಿಯಿತೋ! ಹನ್ನೆರಡು ಗಂಟೆ ಬಾರಿಸಿದುದು ಅವರಿಗೆ ಕೇಳಿಸಿತು. ಇಬ್ಬರೂ ಜಾಗ್ರತರಾಗಿ ಹಾಸಿಗೆ ಹಿಡಿದರು.

೭

ಕೊಳದ ಕಟ್ಟೆಯ ಕೆಳಗಡೆಗೆ ಜವುಗಾಗಿ ನೀರು ಜಿನುಗಿ ನೆಲ ಕೆಸರಾದ ಪ್ರದೇಶ. ಮಾವಿನ ಮರಗಳು, ಮುಳ್ಳು ಪೊದೆಗಳು ತುಂಬಿವೆ. ಅಲ್ಲೊಂದು ಇಲ್ಲೊಂದು ತೆಂಗಿನ ಮರ. ಆ ತೋಟದ ನಡುವೆ ಹಾದು ಹೋಗುವ ಅಗಲ ಕಿರಿದಾದ ಹಳ್ಳ. ಒಂದೆಡೆ ಗಟ್ಟಿ ನೆಲವಾದರೆ, ಹತ್ತಿರದಲ್ಲೆ ಜವುಗು, ಒಂದೆಡೆ ಏರಿ, ತೆಂಗಿನ ಮರದ ಬುಡ; ಇನ್ನೊಂದೆಡೆ ಕುಳಿ, ನೀರ ಕೆಸರ ನಿಧಿ. ಕಾಲಿಡಲೂ ಭೀತಿಯಾಗುವಷ್ಟು ಎತ್ತರವಾಗಿ ಹುಲ್ಲು ಬೆಳೆದಿದೆ. ಅದರ ನಡುವೆ, ಕಂಡೂ ಕಾಣಿಸದಂತೆ ಅಲ್ಲಲ್ಲಿ ಹುದುಗಿದ ಹುತ್ತುಗಳು.

ಈ ತೋಟದಲ್ಲೇ ಚಿತ್ರ ತಯಾರಿಕಾ ಕೇಂದ್ರ ರಚಿಸಬೇಕೆಂದು ನಿರ್ಧರವಾಯಿತು.

ನೆಲವೆಂದು ಕಾಲಿಟ್ಟರೆ ಕಾಲು ನೆಲಕ್ಕಿಂತ ಅರ್ಧ ಅಡಿ ಆಳಕ್ಕೆ ಇಳಿಯುವ ಇಲ್ಲಿ ಕಟ್ಟಿದ ಗೋಡೆಯೂ ಪಾತಾಳ ಕಾಣ ಬಯಸೀತೆಂಬ ಭೀತಿ ಆಗ ಅವರಿಗಾಗಲಿಲ್ಲ. ನೆಲವನ್ನು ಹದಮಾಡಿ, ತಟ್ಟಾಗಿ ಮಾರ್ಪಡಿಸುವಲ್ಲಿಗೇ ಸ್ಟುಡಿಯೋ ರಚನೆಯ ಬಯಕೆ ಅರ್ಧ ಇಳಿಯಿತು. ಹಾವುಗಳು ಹರಿದಾಡುವದನ್ನು ನೋಡಿ ನೋಡಿ ಬೇಸತ್ತ ಕೂಲಿಗಳೂ ಭೀತಿಯಿಂದ " ಬದುಕಿದರೆ ಎಲ್ಲಾದರೂ ದುಡಿದೇವೆಂದು " ಕೆಲಸಕ್ಕೆ ತಪ್ಪಿಸಿಕೊಳ್ಳ ತೊಡಗಿದರು. ಅಂತೂ ಕಪ್ಪೆಗಳಂತೆ ಸಂಗ್ರಹಿಸಿದಷ್ಟಕ್ಕೂ ಕಡಿಮೆಯಾಗುತ್ತಿರುವ ಕೂಲಿಗಳನ್ನು ಕೂಡಿಸಿ ಸ್ಟೂಡಿಯೋ ರಚಿಸಲು ಆ ಉತ್ಸಾಹಿ ಆರಂಭಿಸಿದರು.

ಕನ್ನಡ ನಾಡಿನಲ್ಲಿ ಸ್ಟುಡಿಯೋ ಬೇಕು. ಕನ್ನಡ ಚಿತ್ರ ತಯಾರಿಕರು ಮದ್ರಾಸಿಗೆ ಹೋಗಿ ಅಲ್ಲಿ ಸಾವಿರಾರು ರೂಪಾಯಿಗಳನ್ನು ವ್ಯಯಿಸುತಿದ್ದಾರೆ. ಆ ಹಣವೆಲ್ಲ ನಮ್ಮ ನಾಡಿಗರಿಗೇ ದೊರೆಯಬೇಕು. ಎಂಬ ಉತ್ಸಾಹದಿಂದ ರಾಮಯ್ಯನವರು ಸ್ಟುಡಿಯೋ ರಚನೆಗೆ ಮುಂದಾದರು. ಅವರ ನಾಡುನುಡಿಯ ಅಭಿಮಾನ, ವ್ಯವಹಾರ ಜ್ಞಾನ, ಸ್ಟೂಡಿಯೋ ರಚಿಸುತ್ತೇನೆ ಎಂಬ ಹಟ ಫಲಿತವಾಯಿತು. ಆ ಜವುಗು ನೆಲದಲ್ಲಿ, ಬೆಳೆ ಬೆಳೆ

ಯದ ಮರ ಸೊಕ್ಕುವ ತೋಟದಲ್ಲಿ ಕಟ್ಟಡಗಳು ತಲೆ ಎತ್ತಿದುವು. ಚಿತ್ರ ರಚನೆಗಾಗಿ ಎರಡು ವಿಶಾಲ ರಂಗಮಂದಿರಗಳು ನಿರ್ಮಾಣವಾದುವು. ಬೇಕಾದ ಸಾಮಗ್ರಿಗಳನ್ನು ಸಿದ್ಧಗೊಳಿಸಲು ಬೇರೆ ಬೇರೆ ಕಟ್ಟಡಗಳೂ ರಚಿತ ವಾದುವು.

ತಮಿಳುನಾಡಿನ ಯಾವುದೋ ಸ್ಟುಡಿಯೋ ಒಂದರ ಸಾಮಗ್ರಿಗಳು ಅವರಿಗೆ ದೊರೆತುವು. ಅವುಗಳನ್ನು ಅನುಗೊಳಿಸಿ, ಬೇಕಾದ ದೀಪ, ಕನ್ನಡಿ, ಬಲ್ಬುಗಳನ್ನು ತರಿಸಿ, ನಾಡಿನ ಮೊದಲನೆಯ ಸ್ಟುಡಿಯೋವನ್ನು ಅವರು ಸಿದ್ಧಗೊಳಿಸಿದರು.

ಮದ್ರಾಸಿಗೆ ಹೋದರೆ ಒಂದು ಚಿತ್ರ ತಯಾರಿಗೆ ಒಂದೂವರೆ ಲಕ್ಷ ಅಥವಾ ಎರಡು ಲಕ್ಷ ಖರ್ಚಾಗುತ್ತದೆ. ನಮ್ಮಲ್ಲೇ ಚಿತ್ರ ತಯಾರಿ ಆರಂಭಿಸಿ ದರೆ ಒಂದು ಲಕ್ಷ ಖರ್ಚಿನಲ್ಲಿ ಉತ್ತಮ ಕನ್ನಡ ಚಿತ್ರ ತಯಾರಿಸ ಬಹು ದೆಂದು ಚಿತ್ರ ನಿರ್ಮಾಪಕರೂ ಮನಗಂಡರು. ಕ್ಯಾಮರಾಮೇನ್ ಮಾಣಿಕ್ಯಂ ಕೋಯಂಬತ್ತೂರು ಸೆಂಟ್ರಲ್ ಸ್ಟುಡಿಯೋದಿಂದ ಬಂದ. ಸೌಂಡ್ ರಿಕಾರ್ಡಿಸ್ಟ್ ಚಂದ್ರಶೇಖರ್ ಆರ್ಟ್ ಡೈರೆಕ್ಟರ್ ಮೊದಲಿಯಾರ್ ಮದ್ರಾಸಿ ನಿಂದ ಮೈಸೂರಿಗೆ ಬಂದರು. ಮದ್ರಾಸಿನ ಸ್ಟುಡಿಯೋದಲ್ಲಿದ್ದು ಮ್ಯಾಕ್ ಅಪ್ ಅಸಿಸ್ಟೆಂಟ್ ಆಗಿ ಕೆಲಸಮಾಡುತ್ತಿದ್ದ ಕನ್ನಡಿಗನೇ ಆದ ಸತ್ಯನಾರಾ ಯಣ ಕನ್ನಡ ಚಿತ್ರರಂಗಕ್ಕೆ ಸೇವೆ ಸಲ್ಲಿಸುತ್ತೇನೆಂದು ಹೊರಟುಬಂದ. ಈ ಎಲ್ಲ ಕಲಾವಿದರ ಸಂಯೋಜನೆಯಿಂದ "ಉದಯ ಸ್ಟುಡಿಯೊ" ತಲೆ ಎತ್ತಿತ್ತು.

ಸ್ಟುಡಿಯೋ ಸೆಟಿಂಗ್ಸ್‌ಗೆ ಬೇಕಾದ ಮರ ಮುಟ್ಟುಗಳನ್ನೂ ಬಟ್ಟೆ, ಬಣ್ಣಗಳನ್ನೂ ತಂದು ಹಾಕಲಾಯಿತು. ರಂಗಸಜ್ಜಿಕೆಗೆ ಅಗತ್ಯವಾದ ಬಣ್ಣ ಗಳನ್ನೂ, ಟೋಫನ್ ಮತ್ತಿತರ ಸಾಮಗ್ರಿಗಳನ್ನು ಬೊಂಬಾಯಿಂದ ತರಿಸಿ ದರು. ಕಚೇರಿ ವ್ಯವಸ್ಥಿತವಾಯಿತು; ಸ್ಟುಡಿಯೋ ಕಾರ್ಯಾರಂಭಕ್ಕೆ ಸಿದ್ಧವಾಯಿತು.

ಚಿತ್ರ ತಯಾರಿಸುವ ಹುಚ್ಚನ್ನು ಅದುವರೆಗೂ ಹುದುಗಿಸಿರಿಸಿಕೊಂಡಿದ್ದ ಕೆಲ ವ್ಯಾಪಾರಿಗಳು ಈಗ ಧೈರ್ಯ ತಾಳಿದರು. ನಾವು ಚಿತ್ರ ತಯಾರಿ ಸೋಣ, ಲಕ್ಷಾಂತರ ಸಂಪಾದಿಸೋಣ ಎಂಬ ಭಾವನೆ ಅವರಲ್ಲಿ ಮೂಡಿತು. ಯುದ್ಧಕಾಲದ ವ್ಯಾಪಾರದಿಂದ ವ್ಯಾಪಾರಿಗಳಿಗೆಲ್ಲ ಹೇಗೆ ಹೇಗೋ ಧನ ಕೂಡಿತ್ತು. ಅವರಿಗರಿವಾಗದಂತೆ ಅವರೆಲ್ಲ ಹಣವಂತರಾಗಿದ್ದರು. ಕೊಂಡು

ವಿಕ್ರಯಿಸುವ ಬೆಲೆಗೆ ಹತೋಟಿಯೂ ಇರಲಿಲ್ಲ, ಅಂಕೆಯೂ ಇರಲಿಲ್ಲ, ಮಿತಿಯೂ ಇರಲಿಲ್ಲ. ತೆಂಗಿನಕಾಯಿ ಮುತ್ತಾಯಿತು; ಕಬ್ಬಿಣ ಬಂಗಾರವಾಯಿತು; ಸಿಮೆಂಟ್ ಗೋಧಿ ಹಿಟ್ಟಿಗೂ ಹೆಚ್ಚು ಬೆಲೆ ತಂದುಕೊಟ್ಟಿತು. ಕಾಗದಕ್ಕೆ ನೋಟಿನ ಬೆಲೆ ಬಂತು.

ಜಮೀನುದಾರನಾದ ನಾರಾಯಣಪ್ಪ ಚಿತ್ರ ಪ್ರಪಂಚಕ್ಕೆ ಕಾಲಿಟ್ಟ. ಅವನ ಜತೆಗೆ ಗಿರವಿ ಅಂಗಡಿಯ ಬಬೂತ್‌ಮಲ್, ಮೋಟರ್ ಸರ್ವಿಸ್ ಮಾಲೀಕ ರುದ್ರಪ್ಪ ಸೇರಿಕೊಂಡರು. ಒಂದು ಲಕ್ಷವಲ್ಲದಿದ್ದರೆ ಎರಡಾಗಲಿ, ಅಂತೂ ಅತ್ಯುತ್ತಮ ಚಿತ್ರ ತಯಾರಿಸೋಣ ಎಂದವರು ನಿರ್ಧರಿಸಿದರು.

ತನ್ನ ಜಮೀನಿನಿಂದ ವರ್ಷಕ್ಕೊಮ್ಮೆ ಬರುವ ಉತ್ಪತ್ತಿಯನ್ನು ಮನೆಯ ಕಬ್ಬಿಣದ ಪೆಟ್ಟಿಗೆಯಲ್ಲಿ ತುಂಬಿ, ಅಲ್ಲೂ ಹೆಚ್ಚಾದುದನ್ನು ಬ್ಯಾಂಕಿನಲ್ಲಿಡಿಸಿ ಜೀವನ ನಡೆಸುತಿದ್ದವನು ನಾರಾಯಣಪ್ಪ. ಅವನ ದಾನ ಧರ್ಮಗಳೆಲ್ಲ ಅಕ್ಕಿ ರಾಗಿಗಳ ರೂಪದಲ್ಲಿ. ಅವನ ಕ್ಯಾಲೆಂಡರ್‌ನಲ್ಲಿ ಒಂದೇ ಹಾಳೆ; ಅದು ವರ್ಷದ ಹಾಳೆ. ಅವಸರ, ಜಾಗ್ರತೆ, ಶೀಘ್ರ ಎಂಬ ಯಾವ ಪದವನ್ನೂ ಅವನು ಅರಿತೂ ಇಲ್ಲ; ಬಳಸಿಯೂ ಇಲ್ಲ. ವರ್ಷಕ್ಕೊಮ್ಮೆ ಬೆಳೆ ಬರುತ್ತದೆ; ಹಾಗೇ ವರ್ಷಕ್ಕೊಮ್ಮೆ ಒಂದು ಚಿತ್ರ ತಯಾರಿಸಿದರೆ ಸಾಕು. ಎಂಬುದು ಅವನ ಎಣಿಕೆಯಾಗಿತ್ತು.

ಬಬೂತ್‌ಮಲ್ ತಂದೆ ಹರ್ಕುಮಲ್ ನೂರು ರೂಪಾಯಿ ಹಿಡಿದುಕೊಂಡು ಮೈಸೂರಿಗೆ ಬಂದವನು. ಅದೇ ಮೂಲಧನ ಮಾಡಿಕೊಂಡು ತಂಬಿಗೆ, ತಟ್ಟೆ, ಕೊಡ, ಬಟ್ಟೆ, ಕೋಟುಗಳನ್ನು ಗಿರವಿ ಇಟ್ಟುಕೊಂಡು ಹಣ ಸಾಲಕೊಡಲು ಆರಂಭಿಸಿದ. ಹಾಗೇ ಒಂದು ಹೆಜ್ಜೆ ಮುನ್ನಡೆದು ಬಂಗಾರದ ನಗಗಳನ್ನೂ ಗಿರವಿಗೆ ತೆಗೆದುಕೊಂಡ. ರೂಪಾಯಿಗೆ ತಿಂಗಳಿಗೆ ಮೂರು ಕಾಸು, ಆರು ಕಾಸು, ಒಂದಾಣೆ ಬಡ್ಡಿ ವಸೂಲಿ ಮಾಡಿಕೊಂಡು ತನ್ನ ಅಂಗಡಿ ಬಡಾಯಿಸಿದ. ಅವನು ಸಾಯುವಾಗ ಆಗಲೇ ಆತ ಬ್ಯಾಂಕರ್ ಆಗಿದ್ದ. ಅವನ ಸಂಪತ್ತು ಒಂದು ಲಕ್ಷಕ್ಕೆ ಮುಟ್ಟಿತ್ತು. ಈ ಸಂಪತ್ತಿನ ಉತ್ತರಾಧಿಕಾರಿಯಾಗಿ ಬಬೂತ್‌ಮಲ್ ವ್ಯವಹಾರ ಆರಂಭಿಸಿದ.

ಐದು ಸಾವಿರ ರೂಪಾಯಿಯ ಮನೆಯನ್ನು ಗಿರವಿ ಇಡುತ್ತೇನೆ, ಒಂದು ಸಾವಿರ ಕೊಡಿ. ನನ್ನ ಹೆಂಡತಿ ಮಕ್ಕಳು ಸಾಯುವ ಸ್ಥಿತಿಯಲ್ಲಿ

ದ್ದಾರೆ. ತಂದೆ ತೀರಿಕೊಂಡ; ಮಗಳ ಮದುವೆಯಾಗಬೇಕು. ಎಂದು ಬಂದವರನ್ನು ಕುಳ್ಳಿರಿಸಿ, ಸಮಾಧಾನಪಡಿಸಿ, ಕಾಫಿ ತರಿಸಿಕೊಟ್ಟು, ನಾಲ್ಕು ಸಹಾನುಭೂತಿಯ ಮಾತುಗಳನ್ನಾಡಿ ಇನ್ನು ಎಂಟು ದಿನಗಳಲ್ಲಿ ಬನ್ನಿ ಎಂದು ಕಳುಹಿಸಿಕೊಡುವುದರಲ್ಲಿ ಚತುರ ಈತ. ಬಂದಿರುವ ಗಿರಾಕಿಗೆ ಹಣ ಅಗತ್ಯ ವಾದಷ್ಟು, ಆತನ ಸಂಸಾರಿಕ ತಾಪತ್ರಯ ಚಿಂತಾಜನಕವಾಗಿರುವಷ್ಟು ಅವಧಿ ಕೇಳುವುದು ಅವನ ರೂಢಿ. ಅಂತೂ ಕೊನೆಗೆ ಆತ್ಮಹತ್ಯೆ ಅಥವಾ ದೊರೆತಷ್ಟಕ್ಕೆ ಮನೆಯನ್ನು ಗಿರವಿ ಇಡುವುದು ಎಂಬ ಮನೋಭಾವ ಗಿರಾಕಿ ಯಲ್ಲಿ ತುಂಬಿ ಆತ ೫೦೦ ಆದರೂ ಕೊಡಿ ಎಂದು ಕೇಳಬೇಕು. ಬಬೂತ್ ಮಲ್ ಉದಾರತೆ ವ್ಯಕ್ತ ಪಡಿಸಿ ಹಣ ಸಹಾಯಮಾಡಿ, ನಾಲ್ಕಾರು ಪತ್ರ ಗಳಿಗೆ ಸಹಿ ಹಾಕಿಸಿ, ಆ ಮತಿಕೆಟ್ಟವನನ್ನು ಕಳುಹಿಸಿಕೊಡಬೇಕು. ಇದು ಅವನ ನೀತಿ, ವ್ಯವಹಾರದ ರೀತಿ.

ಹೀಗೆ ದುಡಿದ ಬಬೂತಮಲ್ ಮೈಸೂರಲ್ಲಿ ಹತ್ತಾರು ಮನೆಗಳ ಮಾಲಿಕನಾದ. ಅನೇಕ ಅಂಗಡಿಗಳವರು ಅವನಿಗೆ ಬಡ್ಡಿ ತೆತ್ತು ದಿವಾಳಿ ಯಾದರು ನಾಲ್ಕಾಣೆಗೆ ಕೊಂಡು ಕೊಂಡ ಜಸ್ತುವನ್ನು ನಾಲ್ಕು ರೂಪಾ ಯಿಗೆ ವಿಕ್ರಯಿಸಿ ಅವನು ನಾಲ್ಕು ಲಕ್ಷದ ಧನಿಕನಾದ. ನಿಧಾನವಾದಷ್ಟೂ ಲಾಭ ಹೆಚ್ಚು, ಎಂಬುದು ಅವನ ಬಾಳಿನಲ್ಲಿ ಅವನು ಕಂಡ ಸತ್ಯ. ನಿಧಾ ನಿಸಿ ನಿಧಾನಿಸಿ ಗಿರಾಕಿಗೆ ಹಣ ಕೊಟ್ಟರೆ ಹತ್ತು ಸಾವಿರದ ಜಮೀನು, ಮನೆ, ಒಂದೆರಡು ಸಾವಿರಕ್ಕೆ ಕೈಗೆ ಬರುತ್ತದೆ. ಗಿರಾಕಿಯೂ ನಿಧಾನಿಸಿ ಹಣವನ್ನು ಹಿಂತಿರುಗಿಸಿದರೆ ಅಸಲಿನಷ್ಟೇ ಬಡ್ಡಿಯೂ ಬರುತ್ತದೆ. ಎಂತಲೇ ಹಾಲಿ ನವನ ಹಣವಾದರೂ ಕೂಡಾ ನಾಳೆ ಕೊಡೋಣ ಎಂದು ಇರಿಸಿಕೊಳ್ಳು ತ್ತಾನೆ. ಅಕ್ಕಿ ತರಬೇಕಾದರೂ ಅಕ್ಕಿ ತಂದು ನಾಲ್ಕು ದಿನಗಳ ನಂತರ ಅಂಗಡಿಯವನಿಗೆ ಹಣ ಸಲ್ಲಿಸುತ್ತಾನೆ, 'ಆ ನಾಲ್ಕು ದಿನಗಳಾದರೂ ಹಣ ತನ್ನಲ್ಲಿ ಉಳಿಯಿತು, ಅಷ್ಟಾದರೂ ಬಡ್ಡಿ ತನ್ನದಾಯಿತು ಎಂಬ ಭ್ರಮೆ ಅವನಿಗೆ.

ಬಸ್ ಸರ್ವಿಸ್‌ನ ರುದ್ರಪ್ಪನಿಗೆ ಮೊದಲಿನಿಂದಲೂ ಚಿತ್ರದ ಮೇಲೆ ಆಶೆ. ಈ ವ್ಯಾಪಾರವೂ ತನ್ನ ವ್ಯವಹಾರದಂತೇ ಲಾಭದಾಯಕವಾಗಿದ್ದೆ.

ಎಂದು ಅವನು ಮನಗಂಡಿದ್ದ. ಒಮ್ಮೆ ಒಂದು ಬಸ್ ಕೊಂಡು ಕೊಂಡರೆ ಸರಿ. ಅದು ಮುಂದೆ ಪ್ರತಿದಿನವೂ ಲಾಭ ಕೊಡುತ್ತ ಹೋಗುತ್ತದೆ. ದಿನವೂ ಕೈಗೆ ಹಣ ಬರುತ್ತಲೇ ಇರುತ್ತದೆ. ಈ ಫಿಲಂ ವ್ಯಾಪಾರವೂ ಹಾಗೇ. ಒಮ್ಮೆ ಚಿತ್ರ ತಯಾರಿಗೆಂದು ಸ್ವಲ್ಪ ಹಣ ಹಾಕಿದರಾಯಿತು. ತಯಾರಾದ ಚಿತ್ರ ಪ್ರದರ್ಶನವಾಗುತ್ತಲೇ ಇರುತ್ತದೆ. ಪ್ರದರ್ಶನವಾದಾಗಲೆಲ್ಲ ಹಣ ಕೂಡಿಸುತ್ತಲೇ ಇರುತ್ತದೆ. ಆದುದರಿಂದ ಇದಕ್ಕಿಂತ ಉತ್ತಮ ವ್ಯಾಪಾರ ವಿಲ್ಲ ಎಂದವನ ವಿಶ್ವಾಸ. ಹಾಗೇ ಬಸ್ ತಂದುಕೊಂಡು, ಅದಕ್ಕೊಂದು ಬಾಡಿ ಕಟ್ಟಿಸಿ, ಸರ್ವಿಸ್ ಬಸ್ ಆಗಿ ಮಾರ್ಪಡಿಸಲು ಬೇಕಾದ ಕಾಲ ಮೂರು ನಾಲ್ಕು ತಿಂಗಳು. ಅಷ್ಟೇ ಶೀಘ್ರವಾಗಿ ಈ ಚಿತ್ರವೂ ತಯಾರಾಗ ಬೇಕು. ಆಗಲೇ ಲಾಭ. ಇಲ್ಲವಾದರೆ, ಖರ್ಚಾದ ಹಣದ ಬಡ್ಡಿಯೂ ಹುಟ್ಟಲಾರದು ಎಂದವನ ಮತ.

ವ್ಯವಹಾರದಲ್ಲಿ ಈ ರೀತಿಯ ಮನೋಭಾವವಿದ್ದ ಮೂವರೂ ಜತೆ ಸೇರಿ ಚಿತ್ರ ತಯಾರಿಕೆಗೆ ಇಳಿದರು. ಸ್ಟುಡಿಯೋ ರಚನೆಯಾಗುತ್ತಿದ್ದಾಗ ಅಲ್ಲಿಗೆ ಹೋಗಿಬರುತ್ತ, ಅಲ್ಲಿನ ವ್ಯವಹಾರವನ್ನು ನೋಡುತ್ತ, ಅದರ ಮಾಲಿ ಕರಿಗೂ ಅವರಿಗೂ ಪರಿಚಯವಾಯಿತು. ಮಾಲಿಕರು ಸ್ಟುಡಿಯೋ ಮಾತು ಹೇಳುತ್ತ ಚಿತ್ರದಿಂದ ಗಳಿಸಬಹುದಾದ ಲಾಭವನ್ನು ವಿವರಿಸಿ ಅವರ ಬಾಯಲ್ಲಿ ನೀರೂರುವಂತೆ ಮಾಡಿದರು. ಶೇಕಡಾ ೫೦ರಷ್ಟು ಲಾಭ ಬರುತ್ತೆ ಎಂದು ಕೇಳಿ ಈ ವ್ಯಾಪಾರಗಳು ಉಬ್ಬಿಹೋದರು. ನಾರಾಯಣಪ್ಪ ಸ್ಟುಡಿಯೋ ಮಾಲಿಕರ ಸ್ನೇಹ ಹೆಚ್ಚಿಗೆ ಮಾಡಿಕೊಂಡ. ಅವನದು ವಿರಾಮ ಜೀವನ. ಅವನ ಅಶಕ್ತಿಯನ್ನು ಚಪಲವನ್ನೂ ಕಂಡ ಮಾಲಿಕರೂ ಅವನಿಂದ ಕೊಂಚ ಹಣ ಸಾಲ ಪಡೆದರು. ನಾರಾಯಣಪ್ಪನಿಗೆ ಸ್ಟುಡಿಯೋವೇ ತನ್ನದಾಯಿತು ಎಂಬಷ್ಟು ಸಂತೋಷವಾಯಿತು.

ಚಿತ್ರ ಸಂಸ್ಥೆಗೆ ಯಾವ ಹೆಸರಿಡಬೇಕೆಂದು ಮೂವರೂ ಚರ್ಚಿಸ ಲಾರಂಭಿಸಿದರು. ಇಂದ್ರಾ ಪಿಕ್ಚರ್ಸ್ ಎಂದು ಹೆಸರಿಡೋಣವೆಂದು ಜಿನೇಂದ್ರ ನನ್ನು ನೆನೆದು ಬಬೂತಮಲ್ ಸೂಚಿಸಿದ. ಕೈಲಾಸ ಪಿಕ್ಚರ್ಸ್ ಎನ್ನೋಣ ಎಂದು ರುದ್ರಪ್ಪ ವಾದಿಸಿದ. ಅಂತೂ ಕೊನೆಗೆ ಯಾವ ಸಲಹೆಯನ್ನೂ ಮುಂದುವರಿಸದ ನಾರಾಯಣಪ್ಪನೇ ಹೆಸರು ಸೂಚಿಸಬೇಕಾಯಿತು.

ತ್ರಿಪುರ ಪಿಕ್ಚರ್ಸ್ ಎಂದು ಹೆಸರಿಡಬೇಕೆಂದು ಸೂಚಿಸಿ, ಇದು ಮೂವರು ಪಾಲುದಾರರನ್ನು ಸೂಚಿಸುತ್ತದೆ ಎಂದ. ಅವನ ಸಲಹೆಗೆ ಮನ್ನಣೆ ದೊರೆಯಿತು. ಚಿತ್ರ ಯಾವುದಾಗಬೇಕೆಂಬ ಬಗೆಗೆ ಬಬೂತಮಲ್ ವಾದಿಸಲಿಲ್ಲ. ನಿಮಗೆ ಒಳ್ಳೆಯದೆಂದು ಕಂಡು ಬಂದುದನ್ನೇ ಮಾಡಿ-ಎಂದು ಸುಮ್ಮನಾದ.

ಮೂವರೂ ಸ್ಟುಡಿಯೋ ಮಾಲಿಕನ ಸಲಹೆ ಕೇಳಿದರು. ಯಾವ ಪುರಾಣ ಹುಡುಕಿದರೂ ಚಿತ್ರಿತವಾಗದ ವ್ಯಕ್ತಿ ಅವರ ಕಣ್ಣಿಗೆ ಬೀಳಲಿಲ್ಲ. ತಮಿಳರು ಪ್ರತಿಯೊಬ್ಬ ದೇವರನ್ನೂ ಪುರಾಣ ಪುರುಷನನ್ನೂ ಹೊರಗೆಳೆದು ತಂದಿದ್ದರು. ಯಾವ ವ್ಯಕ್ತಿಯೂ ಅವರ ಹದ್ದಿನ ಕಣ್ಣನ್ನು ತಪ್ಪಿಸಿರಲಿಲ್ಲ. ಅಂತೂ ಕೊನೆಗೆ ಬಬ್ರುವಾಹನನ ನೆನಪು ಅವರಿಗಾಯಿತು. "ವೀರ ಬಬ್ರುವಾಹನ" ಚಿತ್ರ ತಯಾರಿಸಲು ಎಲ್ಲರೂ ಒಪ್ಪಿಕೊಂಡರು.

ನಾರಾಯಣಪ್ಪ ಸ್ಟುಡಿಯೋ ಬಾಡಿಗೆ ಕೊಡಲು ಒಪ್ಪಿಕೊಂಡ. ಬಬೂತ್‌ಮಲ್ ಡ್ರೆಸ್, ಫಿಲಂ, ಇತ್ಯಾದಿಗಳ ಖರ್ಚು ನಿರ್ವಹಿಸಲು ಮುಂದೆ ಬಂದ. ರುದ್ರಪ್ಪ ನಟನಟಿಯರ ನಿರ್ದೇಶಕರ ಮತ್ತಿತರ ಖರ್ಚು ವಹಿಸಿಕೊಂಡ. ಮೂವರೂ ಜತೆಗೂಡಿ ಖರ್ಚು ನಿರ್ವಹಿಸಬೇಕು, ಮೂವರೂ ಸಮಾನ ಅಧಿಕಾರಿಗಳು ಎಂದೂ ತೀರ್ಮಾನವಾಯಿತು. ಸಲಹೆ ನೀಡುವ ಹೊಣೆಯನ್ನು ರಾಮಯ್ಯ ತಾನೇ ಹೊತ್ತುಕೊಂಡರು. ಅವರಿಗಂತೂ ಸ್ವಲಾಭದ ಸಲಹೆ ಅದು.

ಮದ್ರಾಸಿನಿಂದ ಸ್ಟುಡಿಯೋ ನೋಡಲೆಂದು ಬಂದಿದ್ದ ಸಾಮಿ ತಾನು ತುಂಬ ಅನುಭವವಿರುವ ನಿರ್ದೇಶಕನೆಂದು ಹೇಳಿಕೊಂಡ. ಹದಿನಾರು ವರ್ಷ ನಿರ್ದೇಶಕರ ಅಸಿಸ್ಟೆಂಟ್ ಆಗಿ ಕೆಲಸ ಮಾಡಿದ್ದೇನೆ. ಎಡಿಟಿಂಗ್‌ನಲ್ಲಿ ತುಂಬ ಅನುಭವವಿದೆ. ತಮಿಳು ಚಿತ್ರಗಳಲ್ಲಿ ನಾನೇ ಹಲವಕ್ಕೆ ಮಾತುಗಳನ್ನೂ ಬರೆದಿದ್ದೇನೆ. ಎಂದು ತನ್ನ ಬಗೆಗೆ ತಾನೇ ಪರಿಚಯಮಾಡಿಕೊಡುತ್ತ ತಾನು ಕೆಲಸಮಾಡಿರುವ ಹತ್ತಾರು ಚಿತ್ರಗಳ ಹೆಸರನ್ನೂ ಹೇಳಿದ. ಹಲವಾರು ನಿರ್ದೇಶಕರ, ಚಿತ್ರಸಂಸ್ಥೆಗಳ ಬಗೆಗೆ ಕತೆ ಹೇಳಿದ. ಈ ಕನ್ನಡ ನಾಡಿನಲ್ಲಿ ಒಂದು ಚಿತ್ರ ತಯಾರಿಸಿ, ನನ್ನ ಯೋಗ್ಯತೆಯನ್ನು ತೋರಿಕೊಡಬೇಕೆಂದು ನಿರ್ಧರಿಸಿದ್ದೇನೆ. ಆಗಲೇ ಮದ್ರಾಸಿನಲ್ಲಿನ ತಯಾರಕರಿಗೂ ವಿವೇಕ ಮೂಡುತ್ತದೆ. ಅಲ್ಲಿನ ಸ್ಟುಡಿಯೋಗಳವರೂ ಬೆರಗಾಗುವಂತೆ

ಮಾಡುತ್ತೇನೆ. ಎಂದು ರಾಮಯ್ಯನವರನ್ನು ಹೊಗಳಿ ಅವರ ಸ್ಟುಡಿಯೋದ ಕೀರ್ತಿ ಹರಡಿಸುವ ಭರವಸೆ ನೀಡಿದ. ಮದ್ರಾಸಿನಲ್ಲಿ ಒಂದು ಚಿತ್ರ ತಯಾರಿಸಿದರೆ, ನಿರ್ದೇಶಕನಿಗೆ ೨೦-೩೦ ಸಾವಿರ ಕೊಡುತ್ತಾರೆ. ಜತೆಗೆ ಅವನಿಗೆ ಲಾಭದಲ್ಲಿ ಪಾಲಿರುತ್ತದೆ. ನಿಮಗಾಗಿ ನಾನು ೫ ಸಾವಿರ ತೆಗೆದುಕೊಳ್ಳಲು ಸಿದ್ಧವಾಗಿದ್ದೇನೆ. ನನ್ನ ಕೆಲಸ ನಿಮಗೆಲ್ಲ ತೃಪ್ತಿಯಾಗಿ ಚಿತ್ರದಿಂದ ಲಾಭ ಬಂದರೆ ನಿಮಗೆ ತೋಚಿದ ಸಂಭಾವನೆ ಕೊಡಿ, ಎಂದು ಹೇಳಿದ ಮೇಲೆ ಚಿತ್ರತಯಾರಕರೂ ಒಪ್ಪಿಕೊಂಡರು. ಅಂತೂ ಸ್ವಪ್ರಚಾರದಿಂದಲೇ ಎಂ. ಕೆ. ಸಾಮಿ—" ಬಬ್ರುವಾಹನ " ಚಿತ್ರದ ನಿರ್ದೇಶಕನಾದ.

ತ್ರಿಪುರ ಪಿಕ್ಚರ್ಸ್ ಸಂಸ್ಥೆಗಾಗಿ ಚಾಮುಂಡೀಪುರದಲ್ಲಿ ಒಂದು ಬಂಗಲೆಯನ್ನು ಬಾಡಿಗೆಗೆ ತೆಗೆದುಕೊಂಡರು. ಹೆಚ್ಚು ಬಿಡುವಿರುವ ನಾರಣಪ್ಪನೇ ಕಂಪೆನಿಯ ಹೆಚ್ಚಿನ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕೆಂದು ತೀರ್ಮಾನವಾಯಿತು. ಸದಾ ಮೈಸೂರಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದ ನಾರಣಪ್ಪ ತನಗಾಗಿ ಅದೇ ಬಂಗಲೆಯಲ್ಲಿ ಪ್ರತ್ಯೇಕ ರೂಮ್ ಮಾಡಿಕೊಂಡ.

ಕಚೇರಿಗೆ ಬೇಕಾದ ಮೇಜು, ಕುರ್ಚಿ, ಕಪಾಟುಗಳು, ಒಂದು ಟೈಪ್ರೈಟರ್, ಫೈಲುಗಳು ಎಲ್ಲವನ್ನೂ ಸಾಮಿ ಸಂಗ್ರಹಿಸಿದ. ಕಂಪೆನಿಯ ಅಡುಗೆಗೆ ಬೇಕಾದ ಪಾತ್ರೆಗಳನ್ನು ಕೊಳ್ಳಲಾಯಿತು. ಚಾಪೆ ಹಾಸುಗಳೂ ಬಂದುವು. ಅಡುಗೆಗೆ ಒಬ್ಬನನ್ನು ನೇಮಿಸಲಾಯಿತು. ಅಡುಗೆ, ಊಟಗಳ ವ್ಯವಸ್ಥೆಯೂ ಆಯಿತು. ನಾರಣಪ್ಪ ತನ್ನ ಕೋಣೆಯನ್ನು ಮಂಚ, ಹಾಸಿಗೆ, ಕುರ್ಚಿ, ಮೇಜುಗಳಿಂದ ಸಜ್ಜುಗೊಳಿಸಿದ. ಮೂರು ಸಾವಿರ ರೂಪಾಯಿ ಮುಗಿದೂ ಹೋಯಿತು.

ತನ್ನ ಊರು, ಮನೆ, ಹೆಂಡತಿ, ಮಕ್ಕಳ ಕತೆ ಹೇಳಿ ಅವರಿಗಾಗಿ ಡೈರೆಕ್ಟರ್ ಎರಡು ಸಾವಿರವನ್ನು ಮುಂಗಡ ಪಡೆದ. ಶುಭಮುಹೂರ್ತದಲ್ಲಿ ಕಂಪೆನಿಯ ಬೋರ್ಡ್ ಬಂಗಲೆಯ ಮುಂದೆ ತೂಗಾಡಿತು. ಮೈಸೂರಿನ ಗಣ್ಯ ಮಹನೀಯರೂ, ವ್ಯಾಪಾರಿಗಳೂ ಬಂದು ಉಪಾಹಾರ ಸ್ವೀಕರಿಸಿ ಒಳ್ಳೆಯ ಮಾತುಗಳನ್ನಾಡಿ ಹೊರಟುಹೋದರು.

" ನಟನಟಿಯರು ಬೇಕು " ಎಂಬ ಜಾಹೀರಾತು ಪತ್ರಿಕೆಗಳಲ್ಲಿ ಪ್ರಕಟವಾದುವು. ಹತ್ತು ಹದಿನೈದು ದಿನಗಳಲ್ಲಿ ನಾಲ್ಕು ನೂರಕ್ಕೂ ಹೆಚ್ಚು ಅರ್ಜಿ

ಗಳು ಫೋಟೋ ಸಹಿತ ಡೈರೆಕ್ಟರರ ಕೈ ಸೇರಿದುವು. ಹೆಚ್ಚಿನವುಗಳು ಕಲಾಸೇವಾಕಾಂಕ್ಷಿಗಳ ಗೋಳನ್ನು ತುಂಬಿ ಅವರ ಬಯಕೆಯನ್ನು ವಿವರಿಸಿದ್ದುವು. ನಾಲ್ಕಾರು ಸ್ತ್ರೀಯರನ್ನು ಬಿಟ್ಟರೆ ಮಿಕ್ಕವರೆಲ್ಲ ಗಂಡಸರು. ಅವರಲ್ಲಿ ಹೆಚ್ಚಿನವರು ಹೋಟೆಲ್ ಮಾಣಿಗಳು. ವಿದ್ಯಾರ್ಥಿಗಳು, ಪ್ರೈಮರಿ ಸ್ಕೂಲ್ ಮೇಸ್ಟ್ರು, ತಾಲೂಕು ಕಚೇರಿ ಗುಮಾಸ್ತೆಗಳು. ಹಿಂದಿನ ಅನುಭವವಿದ್ದವರು ಇಬ್ಬರೋ ಮೂವರೊ. ರಂಗಭೂಮಿಯ ಪರಿಚಯದವರು ಹತ್ತಾರು ಮಂದಿ. ಆದರೆ, ಚಿತ್ರರಂಗಕ್ಕೆ ಬೇಕಾದ ಸೌಂದರ್ಯ, ಅಚ್ಚುಕಟ್ಟಾದ ಮುಖ, ದೇಹದಾರ್ಢ್ಯತೆ ಇದ್ದವರು ಮಾತ್ರ ಒಬ್ಬರೂ ಸಿಗಲಿಲ್ಲ. ನಿರ್ದೇಶಕ ನಿರಾಶನಾಗಿ ಬೇರೆ ದಾರಿ ಹಿಡಿಯಬೇಕಾಯಿತು. ನಾಟಕ ಕಂಪೆನಿಗಳ ಕಡೆ ಗಮನ ಹರಿಯಿಸಬೇಕಾಯಿತು. ಅರ್ಜಿ ಹಾಕಿಕೊಳ್ಳದೆ ಕಂಪೆನಿಯ ಮನೆಯ ಕಡೆ ಸಳಿದವರೆಲ್ಲ ನಾಟಕ ಕಂಪೆನಿಯವರೇ. ಅವರ ದೇಹದಾರ್ಢ್ಯಕ್ಕೆ ಅನುಗುಣವಾಗಿ ಈ ನಟರನ್ನು ನಿರ್ದೇಶಕ ಆರಿಸಿಕೊಂಡ. ಕಂಪೆನಿಯವರಿಗೆ ನಾಟಕ ಬರೆದುಕೊಟ್ಟು ತರಬೇತೂ ಮಾಡಿಸಿ, ತುಂಡು ಪಾತ್ರಗಳನ್ನು ಅಭಿನಯಿಸುತ್ತಿದ್ದ ಶ್ರೀಕಂಠಪ್ಪ ತಾನೇ ಕತೆ ಬರೆಯಲು ಮುಂದೆ ಬಂದ. ಅವನ ಜತೆಗೆ ಇವರೂ ಇದ್ದರೆ ಕತೆ ತುಂಬ ಚೆನ್ನಾಗಿ ಬರುತ್ತದ ಎಂದು ನಾರಣಪ್ಪ – ಹರಿಕತೆಯ ದಾಸರಾದ ರಾಮಸ್ವಾಮಿಯವರನ್ನು ಕತೆ ಬರೆಯಲು ಗೊತ್ತುಮಾಡಿದ. ಶ್ರೀಕಂಠಪ್ಪನೂ ರಾಮಸ್ವಾಮಿಯೂ ಕತೆ ಬರೆಯುವ ಕೆಲಸವನ್ನಾರಂಭಿಸಿದರು. ಹಾಡುಗಳನ್ನು ಬರೆದರು. ತಮಿಳು ಬಲ್ಲ ರಾಮಸ್ವಾಮಿಯವರು ಕತೆಯನ್ನು ನಿರ್ದೇಶಕರಿಗೆ ವಿವರಿಸಿ, ಬೇಕಾದ ಸಲಹೆ ಸೂಚನೆ ಪಡೆದು, ಅದನ್ನು ಚಿತ್ರಕ್ಕೆ ಅಳವಡಿಸುವುದರಲ್ಲಿ ಮಗ್ನರಾದರು.

ನಾಟಕ ಕಂಪೆನಿಯವರನ್ನು ಒಬ್ಬೊಬ್ಬರನ್ನಾಗಿ ಬರಮಾಡಿಕೊಂಡು, ಅವರ ಯೋಗ್ಯತೆಯನ್ನು ವಿಚಾರಿಸಿ, ಸಾಮಿ ಪಾತ್ರಧಾರಿಗಳನ್ನು ಗೊತ್ತುಮಾಡಿಕೊಂಡ. ಸ್ತ್ರೀಪಾತ್ರಧಾರಿಗಳ ಬಗೆಗೆ ಮಾತ್ರ ಕೊರತೆಯಾಗಿತ್ತು. ಅದನ್ನು ತುಂಬುವ ವಿಚಾರದಲ್ಲಿ ಸಾಮಿ ನಿರಾಶನಾದಾಗ ನಾರಾಯಣಪ್ಪ ಸಹಾಯಕ್ಕೆ ಬಂದ. ನಾಟಕ ಕಂಪೆನಿಯಲ್ಲಿದ್ದ ಸ್ತ್ರೀಯರ ಬಗೆಗೆ ಮಾತ್ರವೇ ಅಲ್ಲದೆ, ಕಲೆಯ ಬಗೆಗೆ ಅನುಭವವಿದ್ದ ಕಲಾವಂತರ ಪರಿಚಯವೂ ಇದ

ನಾರಣಪ್ಪ ತನ್ನ ಆಶ್ರಯಕ್ಕೆ ಒಳಗಾದವರನ್ನು ಕಂಪೆನಿಗೆ ಬರಮಾಡಿಕೊಂಡ. ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದ ನಾಲ್ಕಾರು ಮಂದಿ ಡೈರೆಕ್ಟರರನ್ನು ನೋಡಲು ಬಂದರು. ತುಮಕೂರಿನಿಂದ ಸುಬ್ಬಮ್ಮ, ಬೆಂಗಳೂರು ಬಳೇ ಪೇಟೆ ಶಾರದ, ಬಸವನಗುಡಿಯ ನಾಗರತ್ನ, ಮಲ್ಲೇಶ್ವರದ ಶಾಂತಾ ಮೈಸೂರಿಗೆ ತಮ್ಮ ಪರಿವಾರದೊಂದಿಗೆ ಬಂದರು. ಉಡುಪಿಯಿಂದ ಮೋಹಿನಿ, ಸರೋಜ ಎಂಬ ಇಬ್ಬರು ತರುಣಿಯರು ಸಿನೆಮಾ ನಟಿಯರಾಗಲು ಬಂದರು. ಸಾಗರದಿಂದ ಯಾರೋ ಇಬ್ಬರು ಹೆಂಗುಸರನ್ನು ಕರೆದುಕೊಂಡು ಒಬ್ಬ ಬಂದ. ಹೀಗೆ ಒಬ್ಬರು ಆ ಕಡೆ ಇಳಿಯುವುದೇ ತಡ; ಹತ್ತಾರು ಸ್ತ್ರೀಯರು ಕಂಪೆನಿಯ ಮನೆಗೆ ಕಾಲಿಟ್ಟು ನಿರ್ದೇಶಕರನ್ನು ನೋಡಿದರು. ತಮ್ಮ ಅನುಭವ ಹೇಳಿದರು. ಚಿತ್ರದಲ್ಲಿ ಅಭಿನಯಿಸಲು ತಮಗೆ ಎಡೆ ದೊರೆಯುವಂತಾಗಲೆಂದು ಕೇಳಿಕೊಂಡರು.

ನಾರಾಯಣಪ್ಪನೇ ಆಸಕ್ತಿವಹಿಸಿ, ಎಲ್ಲರನ್ನೂ ಪ್ರತ್ಯೇಕವಾಗಿ ವಿಚಾರಿಸಿ, ತನಗೆ ಒಪ್ಪಿಗೆಯಾದವರನ್ನು ನಿರ್ದೇಶಕರ ಕಡೆ ಕಳುಹಿಸಿದರು. ಬಂದವರೆಲ್ಲ ಇಲ್ಲೇ ಇರಲಿ, ಕಂಪೆನಿಯ ಮನೆ ತುಂಬಿದಹಾಗಿರುತ್ತದೆ. ಎಂಬುದು ನಾರಣಪ್ಪನ ಬಯಕೆ. ಆದರೆ, ಪ್ರತಿಯೊಂದು ಹೆಣ್ಣಿನ ಹಿಂದೆ ಒಬ್ಬ ಗಂಡಸು ಅವಳ ನೆರಳಾಗಿ ಹಿಂಬಾಲಿಸಿದ್ದ. ಯಾರೋ ಇನ್ನೊಬ್ಬಳು "ಅವಳ ಅಕ್ಕ, ಅವಳ ತಾಯಿ" ಎಂದು ರಕ್ಷಕರ ವೇಷ ಧರಿಸಿ ಬಂದಿದ್ದಳು. ಈ ಎಲ್ಲರನ್ನೂ ಸಲಹುವ ಭಾರ ಹೊರಲು ನಾರಣಪ್ಪನಿಗೆ ಇಷ್ಟವಿರಲಿಲ್ಲ. ಈ ರಕ್ಷಕರು ಇದ್ದರೆ ಅವರ ಕಲಾಸೇವೆಗೂ ಅಡ್ಡಿಯಾದೀತೆಂಬ ಭೀತಿಯೂ ಅವನಲ್ಲಿತ್ತು. ಅಂತೂ, ಉಪಪಾತ್ರವಹಿಸಲು ಯೋಗ್ಯತೆವುಳ್ಳವರು ಒಬ್ಬರಾಗಿ ಕಂಪೆನಿ ಮನೆಯಲ್ಲಿರುವುದು ಸಾಧ್ಯವಾದರೆ ಇರಬಹುದೆಂದು ನಿರ್ದೇಶಕ ಸೂಚಿಸಿದ. ಮುಖ್ಯಪಾತ್ರಕ್ಕೆ ಯೋಗ್ಯಳೆಂದು ಕಂಡುಬಂದ ನಾಗರತ್ನ ಪ್ರತ್ಯೇಕವಾದ ಮನೆ ಮಾಡಿಕೊಂಡಿರಬಹುದೆಂದು ತೀರ್ಮಾನವಾಯಿತು. ದಾಸಿಯರೋ ನರ್ತಕಿಯರೋ ಆಗಿ ಅಭಿನಯಿಸಬೇಕಾದ ಇತರ ನಟಿಯರಿಗೆ ತಿಂಗಳಿಗೆ ನೂರು ರೂಪಾಯಿಯಂತೆ ವೇತನ ಗೊತ್ತು ಮಾಡಲಾಯಿತು.

ಕಂಪೆನಿಯ ಬಂಗಲೆಯ ಮೇಲೆ ಬೋರ್ಡು ತೂಗಾಡಲು ತೊಡಗಿ ಮೂರು ತಿಂಗಳಾದ ಬಳಿಕ ಚಿತ್ರ ತಯಾರಿಯ ಕೆಲಸ ಆರಂಭವಾಯಿತು. ಮದ್ರಾಸಿನಿಂದ ಸಾಂಬಸಿವ ಅಯ್ಯರ್ ಬಂದು ಚಿತ್ರದ ಸಂಗೀತ ನಿರ್ದೇಶನದ ಭಾರ ಹೊತ್ತುಕೊಂಡರು. ಆಕಾಶವಾಣಿಯ ಕಲಾವಿದರು ಸಂಗೀತ ನಿರ್ದೇಶಕರಿಗೆ ಬೆಂಬಲವಾಗಿ ಗೀತಮೇಳದ ರಚನೆಗೆ ಸಹಾಯಕರಾದರು. ನಟ ನಟಿಯರು, ಸಂಗೀತ ನಿರ್ದೇಶಕರು, ವಾದ್ಯ ಮೇಳದವರು, ಮತ್ತಿತರರಿಗೆ ಅಡ್ವಾನ್ಸು, ಕಂಪೆನಿ ಖರ್ಚು ಎಲ್ಲವೂ ಹತ್ತು ಸಾವಿರಕ್ಕೆ ತಲುಪಿತು. ಆದರೂ ಚಿತ್ರದ ತಯಾರಿಯ ಕಾರ್ಯ ಮೊದಲಾಗಲಿಲ್ಲ.

ರುದ್ರಪ್ಪ ಚಿತ್ರ ತಯಾರಿಯು ಭರದಿಂದ ಸಾಗಬೇಕೆಂದು ಹೇಳುತ್ತಲೇ ಇದ್ದ. ಅವನಿಗೆ ವ್ಯವಧಾನ ಸಹಿಸದು. ಹೀಗಾದರೆ ಹಣದ ಬಡ್ಡಿಯೂ ಬರುವುದಿಲ್ಲ ಎಂದವನ ವಾದ. ಕಂಪೆನಿಯ ಬಾಡಿಗೆ ಅದು ಇದೆಂದು ಖರ್ಚಾದ ಹಣದ ಬಗೆಗೇ ಅವನ ಚಿಂತೆಯಾಯಿತು. ಏನಿಲ್ಲೆಂದರೂ ಇನ್ನೂ ಮೂವತ್ತು ಸಾವಿರ ಖರ್ಚು ತನ್ನ ಪಾಲಿಗೆ ಬೀಳುತ್ತದೆ. ಚಿತ್ರದ ಸಿದ್ಧತೆಯಲ್ಲೇ ಮೂರು ತಿಂಗಳು ಕಳೆಯಿತು. ಇನ್ನು ತಯಾರಿ ಮುಗಿದು ಪ್ರದರ್ಶನ ಆರಂಭವಾಗುವಾಗ ೯ ತಿಂಗಳಾದರೂ ಕಳೆಯಬಹುದು. ಇಷ್ಟು ನಿಧಾನವಾದರೆ ಹೇಗೆ ಎಂಬ ಭೀತಿ ಅವನಲ್ಲಿ ಉಂಟಾಯಿತು. ಚಿತ್ರ ರಚನೆ ಶೀಘ್ರ ನಡೆಯುವಂತೆ ಪ್ರೇರೇಪಿಸುವದಕ್ಕಾಗಿ ರುದ್ರಪ್ಪ ಪ್ರತಿ ದಿನ ಕಂಪೆನಿ ಮನೆಗೆ ಹೋಗುತ್ತಿದ್ದ. ಅಲ್ಲಿ ತಿಂದು ತೇಗಿ ಕಾಲ ಕಳೆಯುವವರನ್ನು ಕಂಡು ಅವನಿಗೆ ಬೇಸರವಾದರೂ, ಅವರೆಲ್ಲ ಇವನನ್ನು ಕಂಡೊಡನೆಯೇ 'ನಮಸ್ಕಾರ ಸಾರ್' ಎಂದು ಗೌರವಿಸುವ ರೀತಿ, ಆದರಿಸುವ ಬಗೆ ಕಂಡು ಅವನ ರೋಷವೆಲ್ಲೋ ಮಾಯವಾಗುತಿತ್ತು. ಹಾಗೇ ದಿನಗಳೆದಂತೆ ನಟಿಯರ ಸ್ನೇಹವೂ ಬೆಳೆಯಿತು. ಅವರನ್ನು ಕಂಡು, ಅವರೊಡನೆ ಮಾತನಾಡದಿದ್ದರೆ ನಿದ್ದೆಯೇ ಬಾರದು ಎಂಬಂತಾಯಿತು ಅವನಿಗೆ. ಹೇಗೂ ತನ್ನ ಹಣದಿಂದ ಇವರೆಲ್ಲ ಬಾಳುತಿದ್ದಾರೆ. ಚಿತ್ರದ ಕೆಲಸವಿಲ್ಲದಿದ್ದರೂ ಇವರನ್ನು ಸಲಹುತಿದ್ದೇನೆ. ಇವರೆಲ್ಲ ನನ್ನವರು ಎಂಬ 'ಆತ್ಮೀಯತೆ' ರುದ್ರಪ್ಪನಲ್ಲಿ ಬೆಳೆಯಿತು.

ಮಲ್ಲೇಶ್ವರದ ಶಾಂತಾ ಇನ್ನೂ ಹದಿನೆಂಟರ ತರುಣಿ. ನೋಡುವುದಕ್ಕೆ ಸುಂದರವಾಗಿದ್ದಾಳೆ, ಕೊಂಚ ವಿದ್ಯಾಭ್ಯಾಸವೂ ಆಗಿತ್ತು. ಅವಳ ನಿಲುವು,

ನಡು, ನಿತಂಬ, ಎದೆ ಕಂಡಾಗಲೆಲ್ಲ ನಾರಣಪ್ಪ ಬಾಯಿಬಿಡುತ್ತಿದ್ದ. ಅವಳಲ್ಲಿ ಅಭಿನಯ ನೈಪುಣ್ಯತೆ ಇದೆಯೋ ಇಲ್ಲವೋ; ಅಂತೂ ಅಭಿನಯ ಬಲ್ಲಳೆಂಬುದನ್ನು ಕಂಪೆನಿಯವರಿಗೆಲ್ಲ ತೋರಿಕೊಡುತಿದ್ದಳು. ದೇಹ ಕೊಂಚ ಸ್ಥೂಲವಾಗಿ, ಚಿತ್ರಕ್ಕೆ ಹೊಂದಿಕೊಳ್ಳುವಂತೆ ಕಾಣದಿದ್ದರೂ, ಅವಳ ಮೈ ಮುಖ ಕಂಡರೆ ಬಯಕೆ ಮೂಡುತಿತ್ತು. ಯಾವುದೋ ಯೋಗ್ಯತೆ ಇವಳಿಗಿದೆ ಎಂದು ಅವಳನ್ನು ಮೊದಲು ಕಂಡಾಗಲೇ ನಾರಣಪ್ಪ ನಿರ್ಧರಿಸಿದ್ದ. ಹುಡುಗಿ ದಷ್ಟಪುಷ್ಟವಾಗಿದ್ದಾಳೆ. ಕಷ್ಟಿಯಾಗಿರುವವರನ್ನು ತಂದು ಏನು ಮಾಡೋಣ. ಎಂದು ರುದ್ರಪ್ಪ ತನ್ನ ಉಬ್ಬಿದ ಹೊಟ್ಟೆಯ ಮೇಲೆ ಕೈ ಯಾಡಿಸುತ್ತ ದನಿಗೂಡಿಸಿದ್ದ. ಚಿತ್ರವಲ್ಲಿ ದಾಸಿಪಾರ್ಟು ಕೊಡಬಹುದು ನೃತ್ಯ ಅವಳಿಂದಾಗದು, ಅಭಿನಯ ಕಷ್ಟ—ಎಂದು ಡೈರೆಕ್ಟರ್ ಸೂಚಿಸಿದ. ಅಂತೂ ಕಣ್ಣು ತುಂಬುವಂತಹ ಅವಳ ಕಡೆಗೆ ಇಬ್ಬರು ಪಾಲುಗಾರರೂ ಕಣ್ಣು ಬಿಟ್ಟುದರಿಂದ ಅವಳಿಗೆ ಕಂಪೆನಿಯಲ್ಲಿ ಪ್ರವೇಶ ದೊರೆಯಿತು. ರಕ್ಷಕರನ್ನೆಲ್ಲ ಸಲಹುವುದು ಕಂಪೆನಿಯಿಂದ ಸಾಧ್ಯವಿಲ್ಲ ಎಂಬ ಮಾತು ಬಂದಾಗ ಅವಳ ತಾಯಿ ಊರಿಗೆ ಹೊರಡಬೇಕಾಯಿತು. ತಾಯಿ ಊರಿಗೆ ಹೋದವಳೇ ರಾಜುವನ್ನು ಮೈಸೂರಿಗೆ ಕಳುಹಿಸಿದಳು. ಶಾಂತಾ ರಾಜುವನ್ನು ನಾರಣಪ್ಪನ ಬಳಿ ಒಯ್ದು ಏನೇನೋ ಹೇಳಿದಳು. ನಾರಣಪ್ಪನ ಮುಂದೆ ತುಂಬ ಅಭಿನಯಿಸಿದಳು. ಅವನಿಗೆ ವಿಧೇಯಳಾಗಿ ಇಬ್ಬರೂ ನಡೆದುಕೊಳ್ಳುವ ಭರವಸೆ ನೀಡಿದಳು. ಅಂತೂ ರಾಜು ಕಂಪೆನಿಯಲ್ಲಿ ಸೇರಿಕೊಂಡ. ಚಿತ್ರಕ್ಕೆ ಬೇಕಾದ ಡ್ಯಾನ್ಸ್ ಅಳವಡಿಸುವುದು ಅವನ ಹೊಣೆಯಾಗಿ ಆತ ಡ್ಯಾನ್ಸ್ ಡೈರೆಕ್ಟರ್‌ನಾದ. ಹಾಗೇ ನಾರಣಪ್ಪನ ಬಗೆಗೆ ಶಾಂತಳ ಅಭಿಮಾನವೂ ಅವಳ ಬಗೆಗೆ ಆತನ ವಿಶ್ವಾಸವೂ ಬೆಳೆದು ಬಂತು. ಸುದ್ದಿ ಕಂಪೆನಿಯ ಮನೆಯ ಇತರ ನಟಿಯರಿಗೂ ಮುಟ್ಟಿತು. ಅವರೂ ತಮ್ಮ ಕರ್ತವ್ಯದ ಬಗೆಗೆ ಯೋಚಿಸಲು ಎಡೆಯಾಯಿತು.

ದಿನಗಳೆದಂತೆ ಕಂಪೆನಿಯ ಕಾರ್ಯಕ್ರಮ ಬೆಳೆಯುತ್ತ ಸಾಗಿತು. ಒಂದೆಡೆ-ಸಂಗೀತ ನಿರ್ದೇಶನ, ಮತ್ತೊಂದೆಡೆ ನೃತ್ಯಗಳು, ಇನ್ನೊಂದೆಡೆ ಕಥಾರಚನೆ. ನಿರ್ದೇಶಕನು ಸ್ಟುಡಿಯೋದಲ್ಲೇ ಇದ್ದು ಬೇಕಾದ ಸೆಟ್ಟಿಂಗ್‌ಗಳ ರಚನೆಗೆ ಅನುವಾದ. ತಮಿಳು ಚಿತ್ರರಂಗದಲ್ಲಿ ದುಡಿದು ಅನೇಕ

ಪೌರಾಣಿಕ ಚಿತ್ರಗಳಿಗೆ ಸೆಟ್ಟಿಂಗ್ಸ್ ತಯಾರಿಸಿ ಅನುಭವವಿದ್ದ ಮುದಲಿಯಾರ್ ಉದಯ ಸ್ಟುಡಿಯೋ ಸೇರಿದ್ದ. ಅದರಿಂದಾಗಿ ಕಲೆಗೆ ಬಹಳ ದೂರವಿದ್ದ ಸೆಟ್ಟಿಂಗ್ಸ್‌ಗಳು ದೊರೆತುವಾದರೂ, ಅವು ವೈಭವ ಪೂರಿತ, ಅದ್ಭುತ, ಮೋಹಕ ಎಂಬೆಲ್ಲ ಗುಣವಾಚಕಗಳನ್ನು ಪಡೆಯಲು ಅರ್ಹವಾಗೇ ಇದ್ದುವು. ಬಭ್ರುವಾಹನನ ಅರಮನೆಯ ಸಭಾಮಂದಿರದ ಸೆಟ್ಟಿಂಗ್ ಸಿದ್ಧವಾಗತೊಡಗಿತು. ಸ್ಟುಡಿಯೋದಲ್ಲಿ ಚಿತ್ರಕಾರರಿಗೆ ಬೇಕಾದ ಸೂಚನೆ ಕೊಡಬೇಕು. ಬಬೂತ್‌ಮಲ್‌ನಿಗೆ ಫಿಲಂ ತರಿಸಲು ಒತ್ತಾಯ ಪಡಿಸಬೇಕು. ನೃತ್ಯ, ಹಾಡುಗಳು ಸಿದ್ಧವಾಗುವಂತೆ ಸೂಚನೆ ಕೊಡಬೇಕು. ಉಡಿಗೆತೊಡಿಗೆಗಳನ್ನು ಅಳವಡಿಸಬೇಕು. ಈ ಎಲ್ಲ ಕಾರ್ಯಗಳಿಂದ ಸ್ವಾಮಿಗೆ ನಿಮಿಷವೂ ಬಿಡುವಿಲ್ಲವಾಗಿತ್ತು. ಸ್ಟುಡಿಯೋದಲ್ಲೂ ಕೆಲಸ ಅತ್ಯಂತ ನಿಧಾನ. ಸ್ಟುಡಿಯೋ ರಚನೆಯೇ ಇನ್ನೂ ಪೂರ್ಣವಾಗಿರಲಿಲ್ಲ. ಜತೆಗೆ ಹೊಸ ಕೆಲಸಗಾರರಿಂದ ಕಲಾನಿರ್ದೇಶಕ ಕೆಲಸ ಮಾಡಿಸಬೇಕಾಗಿತ್ತು. ಆಗಲೇ ನಿವೃತ್ತಿಯಾಗುವ ಪ್ರಾಯವನ್ನು ದಾಟಿ ಮೈಸೂರಿಗೆ ಬಂದಿದ್ದ ಕಲಾನಿರ್ದೇಶಕನಿಗೆ ನಿವೃತ್ತಿಯ ಯೋಚನೆಯೇ ಅಧಿಕವಾಗಿ ಅವನ ಕೆಲಸ ಯೋಚನೆ ಎಲ್ಲವೂ ಅತಿ ನಿಧಾನವಾಗಿತ್ತು. ಬಬೂತಮಲ್ ನಿಧಾನವಾದಷ್ಟು ಲಾಭ ಎಂದು ತಿಳಿದ ವ್ಯಕ್ತಿ; ಹತ್ತು ಬಾರಿ ಒತ್ತಾಯಪಡಿಸಿದ ಮೇಲೇ ಆತ ಕಾಡಕ್ ಕಂಪೆನಿಗೆ ಕಚ್ಚಾ ಫಿಲಂಗಾಗಿ ಕಾಗದ ಬರೆದ. ಅವರು ಕಳುಹಿಸಿದ್ದ ನಾಲ್ಕು ರೋಲ್ ನೆಗೆಟಿವ್, ನಾಲ್ಕು ರೋಲ್ ಸೌಂಡ್, ನಾಲ್ಕು ರೋಲ್ ಪಾಸಿಟಿವ್ ಫಿಲಮ್ಸ್‌ನ ಪಾರ್ಸೆಲ್ ಬ್ಯಾಂಕಿನಲ್ಲೇ ಎರಡು ವಾರ ಕೊಳೆಯಿತು. ಬ್ಯಾಂಕಿನವರು ಅದನ್ನು ಹಿಂದಕ್ಕೆ ಕಳುಹಿಸುವುದಾಗಿ ಎಚ್ಚರಿಕೆ ನೀಡಿದ ಬಳಿಕವೇ ಅದನ್ನಾತ ಬಿಡಿಸಿಕೊಂಡ. ನಾರಣಪ್ಪನದು ವಿರಾಮ ಜೀವನ. ಯಾವುದಕ್ಕೂ ಅವಸರವಿಲ್ಲ. ಸ್ಟುಡಿಯೋ ಮಾಲಿಕರಿಗೆ ಕೊಟ್ಟಿದ್ದ ಸಾಲ, ಚಿತ್ರತಯಾರಿಯ ಲೆಕ್ಕಕ್ಕೆ ಬೀಳುವುದೆಂಬ ಧೈರ್ಯ ಅವನಿಗಾಗಿತ್ತು; ಸೆಟಿಂಗ್‌ಗಳಿಗಾಗಿ ಅವನು ಇನ್ನೂ ೫ ಸಾವಿರ ತೆತ್ತ; ಅಲ್ಲಿ ಸೆಟ್ಟಿಂಗ್ಸ್ ಸಿದ್ಧವಾಗುತ್ತಿದ್ದುದನ್ನು ಕಂಡು ಅವನು ತೃಪ್ತನಾದ.

ರುದ್ರಪ್ಪನ ತಮ್ಮನ ಅಂಗಡಿಯಿಂದಲೇ ಕಂಪೆನಿಯವರ ಊಟಕ್ಕೆ ಬೇಕಾದ ಸಾಮಗ್ರಿಗಳೆಲ್ಲ ಬರುತ್ತಿದ್ದುವು. ಇತರ ಖರ್ಚಿನ ಹೊರೆ, ಮೇಲ್ವಿಚಾರ ನಿರ್ವಹಿಸಲು ಅವನ ದೂರದ ಸಂಬಂಧಿಕನೊಬ್ಬ ಕಂಪೆನಿಯಲ್ಲಿ ಸೇರಿಕೊಂಡ. ಅವನು ಲೆಕ್ಕಪತ್ರಗಳನ್ನಿಟ್ಟು, ಬೇಕಾದಂತೆ ರುದ್ರಪ್ಪನಿಂದ ಹಣ ಪಡೆದು, ಹಂಚುವ, ಖರ್ಚುಮಾಡುವ ಹೊಣೆಗಾರಿಕೆ ಹೊತ್ತಿದ್ದ. ತನ್ನ ಹಣದ ಬಡ್ಡಿಯನ್ನು ಹೇಗಾದರೂ ಸಂಪಾದಿಸಬೇಕೆಂದು ಅವನು ತವಕಗೊಳ್ಳುತ್ತಿದ್ದ. ಅದಕ್ಕೆ ಸಹಾಯಕವಾಗಿ ಅವನ ಸಂಬಂಧಿಕ ಪರಮಶಿವ ದುಡಿಯುತ್ತಲೂ ಇದ್ದ. ಅವನೂ ಡಾನ್ಸಿನ ಡೈರೆಕ್ಟರ್ ರಾಜೂ ಜೊತೆಗೂಡಿ, ತಮ್ಮ ವಿರಾಮಕಾಲವನ್ನು ಕಳೆಯುತ್ತಿದ್ದರು. ಕಂಪೆನಿಯ ಪಾಲುಗಾರ ಬಂಧುವಾಗಿರುವದರಿಂದ, ಅವನು ಗೆಳೆಯನಾಗಿರುವ ವರೆಗೆ ಯಾರ ಸ್ಪರ್ಧೆಯೂ ಸಾಗದೆಂದು ತಿಳಿದ ರಾಜು, ಪರಮಶಿವನ ಪಟ್ಟಶಿಷ್ಯನಾದ.

ಒಂದೆಡೆ ರುದ್ರಪ್ಪ, ರಾಜು, ಪರಮಶಿವ; ಇನ್ನೊಂದೆಡೆ ನಾರಣಪ್ಪ ಶಾಂತಾ ವ್ಯವಹಾರ ಇವೆಲ್ಲವುಗಳೂ ಒಂದೇ ಸಂಕಲೆಯ ಕೊಣಿಕೆಗಳಾಗಿ ಕಂಪೆನಿಯ ಕೆಲಸ ಕಾರ್ಯ ಸಾಗುತ್ತ ಬಂದಿತ್ತು.

ಚಿತ್ರತಯಾರಿ ಆರಂಭವಾಯಿತು. ಮೊದಲು ನಾಲ್ಕು ಹಾಡುಗಳನ್ನಾದರೂ ರಿಕಾರ್ಡ್ ಮಾಡೋಣ, ಅಷ್ಟರಲ್ಲಿ ಸೆಟ್ಟಿಂಗ್, ಉಡಿಗೆತೊಡಿಗೆಗಳೆಲ್ಲ ಸಿದ್ಧವಾಗುತ್ತವೆ ಎಂದು ಡೈರೆಕ್ಟರ್ ಸೂಚಿಸಿದ. ಹಿನ್ನೆಲೆಯ ಹಾಡು ಹಾಡುವವರಾರು ಎಂಬ ಪ್ರಶ್ನೆ ಬಂತು. ಶಾಂತಾ ತನ್ನ ಶಾರೀರ ಚೆನ್ನಾಗಿದೆ, ತನ್ನ ಹಾಡು ತಾನೇ ಹಾಡಬಾರದೇಕೆ ಎಂದು ಪ್ರಶ್ನಿಸಿದಳು. ಕಂಪೆನಿಯ ಆಂತರಿಕ ವಿಚಾರಗಳ ಅರಿವಿಲ್ಲದ ಸಾಂಬಸಿವ ಅಯ್ಯರ್ ಈ ಹಾಡಿಕೆ ಚಿತ್ರಕ್ಕೆ ಒಪ್ಪದೆಂದು ವಾದಿಸಿದ. ಪಾಲುಗಾರರೊಳಗೇ ಸ್ಪರ್ಧೆ ನಡೆದು, ಚರ್ಚೆ ಮುಗಿದು, ಹೊರಗಿನಿಂದಲೇ ಸಂಗೀತಗಾರರನ್ನು ಕರೆಯುವ ನಿರ್ಧಾರವಾಯಿತು. ನಂಜನಗೂಡು ನಾಗರತ್ನಮ್ಮ ನಾಯಕಿಯ ನಾಲ್ಕು ಹಾಡುಗಳನ್ನು ಹಾಡಿದರು. ಅದು ಶುಭ ಮುಹೂರ್ತದಂದು ರೆಕಾರ್ಡು ಆಯಿತು.

ಬಭ್ರುವಾಹನನ ಅರಮನೆಯ ಸೆಟ್ಟಿಂಗ್ಸ್ ಸಿದ್ಧವಾಯಿತು. ಸಿಂಹಾಸನಗಳನ್ನು ಜೋಡಿಸಿದರು. ಈ ಸಭಾಂಗಣದಲ್ಲಿ ಅರಸ ಒಡ್ಡೋಲಗ

ಗೊಂಡಿದ್ದಾಗ, ನರ್ತನ ಸಾಗುತ್ತಿರುತ್ತದೆ. ಅಷ್ಟರಲ್ಲಿ ಅಶ್ವಮೇಧದ ಯಾಜಿ ಬಂದಿದೆ ಎಂದು ದೂತ ಬಂದು ಅರುಹುತ್ತಾನೆ. ಅರಸನು ಆ ಯಾಜಿಯನ್ನು ಕಟ್ಟಿಹಾಕಲು ಆಜ್ಞೆಯಿಾಯುತ್ತಾನೆ.

ಅರ್ಜುನನು ಆ ಅಶ್ವದ ಹಿಂದೆ ಸೇನಾಸಹಿತನಾಗಿ ಬಂದಿದ್ದಾನೆ; ಅದು ಧರ್ಮಜನ ಯಾಗಾಶ್ವವೆಂದು ತಿಳಿದುಬರುತ್ತದೆ.

ಹೆಮ್ಮೆಯಿಂದ ಪಾಂಡವರ ಅಶ್ವ ಬಂದಿದೆ ಎಂದು ತಿಳಿಸಲು ವೀರ ಬಭ್ರುವಾಹನ ತಾಯಿ ಚಿತ್ರಾಂಗದೆಯ ಅಂತಃಪುರಕ್ಕೆ ನಡೆಯುತ್ತಾನೆ.

ಒಂದೇ ಒಂದು ಸೆಟ್ಟಿಂಗ್ಸ್‌ನಲ್ಲಿ ಚಿತ್ರದ ಅರ್ಧಕ್ಕೂ ಹೆಚ್ಚು ಭಾಗ ಪೂರ್ಣವಾಗುತ್ತದೆ. ಒಂದು ತಿಂಗಳ ಕಾಲ ಚಿತ್ರವೆತ್ತುವ ಕೆಲಸ ಮುಗಿಸಬಹುದು. ಎಂದು ಡೈರೆಕ್ಟರ್ ಅರಮನೆಯ ವಿವಿಧ ಭಾಗಗಳನ್ನು ಅದೇ ಸೆಟ್ಟಿಂಗ್‌ನ ವಿವಿಧ ಮೂಲೆಗಳಲ್ಲಿ ಚಿತ್ರವೆತ್ತಲು ನಿರ್ಧರಿಸಿದ.

ಬಬೂತಮಲ್‌ನ ಬೆನ್ನು ಹತ್ತಿ, ದಿನನಿತ್ಯ ಕೇಳಿಕೊಂಡರೂ ಉಡಿಗೆ ಪೂರ್ಣ ಸಿದ್ಧವಾಗಲಿಲ್ಲ. ರಾಜುವನ್ನು ತನ್ನವನಾಗಿ ಮಾಡಿಕೊಂಡು, ಅವನಿಗೆ ಒಂದಿನ್ನೂರು ರೂಪಾಯಿ ಕೊಟ್ಟು, ತನ್ನಲ್ಲಿ ಗಿರವಿ ಇಡಲಾಗಿದ್ದ ಜರಿ ಪಂಚೆ, ಶಲ್ಲೆ, ನಿಲುವಂಗಿಗಳನ್ನೆಲ್ಲ ಬಬೂತಮಹಲ್ ಕಂಪೆನಿಯ ತಲೆಯ ಮೇಲೆ ಹಾಕಿದ. ಆಭರಣಗಳು, ಕಿರೀಟಗಳು, ಕತ್ತಿಗಳನ್ನು ನಾಟಕಕಂಪೆನಿಯ ಚಿನ್ನಪ್ಪನಿಂದ ಬಾಡಿಗೆಗೆ ತರಲಾಯಿತು. ಬಾಡಿಗೆ ಹಣವನ್ನು ಅರ್ಧಕ್ಕೆ ಇಳಿಸುವ ಕರಾರಿನ ಮೇಲೆ ಅವನಿಗೆ ಬಭ್ರುವಾಹನನ ಮಂತ್ರಿಯ ಪಾತ್ರವನ್ನು ಕೊಡಲು ನಿರ್ಧರಿಸಲಾಯಿತು. ಸೆಟ್ಟಿಂಗ್ ಸಿದ್ಧವಾಗಿ ಒಂದು ವಾರದಲ್ಲಿ ಉಡಿಗೆತೊಡಿಗೆಗಳು ಒದಗಿದುವು. ಕಚ್ಚಾ ಫಿಲಂ ನಾಲ್ಕು ದಿನಗಳ ಶೂಟಿಂಗೆ ಬೇಕಾದಷ್ಟು ದೊರೆಯಿತು.

ಶೂಟಿಂಗ್ ಆರಂಭವಾಯಿತು.

## ೮

"ನಾಗರತ್ನಮ್ಮನಿಗೆ ಆ ಪಾತ್ರ ಒಪ್ಪುವುದಿಲ್ಲ."

"ಅಲ್ಲಾಂದ್ರೆ, ಅಷ್ಟು ವಯಸ್ಸಿನವಳಿಗೆ ಅಷ್ಟು ದೊಡ್ಡ ಮಗನಿರುತ್ತಾನೆಯೇ?

"ಅದೇನು ವಿಶೇಷವಲ್ಲ. ಅವಳು ಎನ್ಮ್ಮೆಹಾಗಿದ್ದಾಳೆ. ವಯಸ್ಸು ಮೂವತ್ತೈದು ದಾಟಿದ ಹಾಗೆ ಕಾಣುತ್ತದೆ. ಆದರೆ, ಅಭಿನಯವೇ ತಿಳಿಯದು."

"ಅವಳು ಅಳುವಾಗ ನಗು ಬರುತ್ತದೆ."

"ಮುಖ ಜಪಾನೀ ಬೊಂಬೆಯ ಮುಖದ ಹಾಗಿದೆ."

"ಏನೋ ನಾರಣಪ್ಪನವರ ಕೃಪೆ."

"ಹಾಗೇನು?"

"ನೀನೊಂದು ಗೂಬೆ. ಕಂಪೆನಿಯ ಮನೆಯಲ್ಲಿದ್ದೂ ನಿನಗೆ ಏನೂ ತಿಳಿಯದು."

"ಶಾಂತಾ...."

"ಅವಳಿದ್ದರೇನಾಯಿತು? ನಾರಣಪ್ಪಾಂದ್ರೆ ಆಡು ಇದ್ದ ಹಾಗೆ. ಆಡು ಮುಟ್ಟದ ಸೊಪ್ಪಿಲ್ಲ; ಅವನು ಕೈಹಾಕದ ಹೆಣ್ಣಿಲ್ಲ."

"ಅದಕ್ಕೇ ಮನೆ, ಹೆಂಡತಿ ಮಕ್ಕಳು, ಎಲ್ಲರನ್ನೂ ಮರೆತು ಇಲ್ಲೇ ಬಿದ್ದಿದ್ದಾನೆ."

"ಎಲ್ಲಕ್ಕೂ ಅನುಕೂಲವಿರುವಾಗ ಮನೆ ಏಕೆ?"

"ಪರವಾ ಇಲ್ಲ. ಖಾಯಂ ನಟಿಯಾಗಿ ಇರುವ ಯತ್ನವನ್ನೇ ಮಾಡಿದ್ದಾಳೆ ರತ್ನ"

"ಶಾಂತಮ್ಮ ಕೂಡಾ. ಆ ರಾಜು ಗೊತ್ತೆ?"

"ಡ್ಯಾನ್ಸ್ ಮಾಸ್ಟರ್...."

"ಹ್ಞೂ....ಅವನು ಕೆಲವರನ್ನು ತಂದು ತಂಬಿದ್ದಾನೆ. ಡ್ಯಾನ್ಸ್ ಹುಡುಗಿಯರೂಂತ"

"ಪಾಪ! ಅವುಗಳೆಲ್ಲ ಬೇರೆ ಬೇರೆ ಕಡೆಗಳಿಂದ ಬರುತ್ತವೆ."

"ನಿಜ! ಆದರೂ ಅವನು ಡ್ಯಾನ್ಸ್ ಕಲಿಸುವದಕ್ಕಿಂತ ಹೆಚ್ಚಾಗಿ ಹರಟುತ್ತಿರುತ್ತಾನೆ"

"ಜತೆಗೆ ಪರಮಶಿವ ಬೇರೆ, ಅವನಿಗೆ ಈ ಹುಡುಗಿಯರು ಗಂಟು"

"ಅವರಿಬ್ಬರು ಹೇಳಿದಂತೆ ರುದ್ರಪ್ಪನವರು ಕುಣಿಯುತ್ತಾರೆ. ಅಂದರೆ ....ನಾರಣಪ್ಪನ ವಿಚಾರ ಅವರಿಗೆ ಗೊತ್ತಿಲ್ಲವೇ?"

" ಗೊತ್ತಿಲ್ಲದೆ ಏನು? ಅದು ವಿರಸಕ್ಕೆ ಎಡೆಗೊಡದ ಹಾಗೆ ಕೆಲಸ ಮಾಡಲು ಶಾಂತ, ರಾಜುವನ್ನು ನೇಮಿಸಿಕೊಂಡಿದ್ದಾಳೆ."

" ಸರಿ.... ಸರಿ.... ರಾಜು–ಪರಮಶಿವನನ್ನು ಹಿಡಿದಿದ್ದಾಳೆ."

" ಅದಕ್ಕೂ ಹೆಚ್ಚು ವಿಚಾರವಿದೆ."

" ಅದೇನಪ್ಪ...."

" ಶಾರದ.... ಗೊತ್ತು ತಾನೆ?"

" ಏನು ವಿಚಾರ?"

" ಅವಳು ಆಗಾಗ ಬಂಧುಗಳ ಮನೆಗೆ ಹೋಗುತ್ತೇನೆ ಅಂತಿರುತ್ತಾಳಲ್ಲ; ಅವಳ ಜತೆಗೆ ಯಾರಾದರೂ ಹೋಗಿ ಆ ಮನೆ ನೋಡಿದ್ದಾರೆಯೋ?"

" ಇಲ್ಲ.... ಆದರೆ.... ಆ ಡಾನ್ಸಿಗೆ ಬರುತ್ತಾರಲ್ಲ ಲಕ್ಷ್ಮಿ, ಉಷಾ ಅಂತ.... ಅವರಿಗೆ ಅವಳ ಮನೆ ಗೊತ್ತಿರಬೇಕು."

" ನಿಜ. ಅವರ ಮನೆಗೇ ಅವಳು ಹೋಗುತ್ತಾಳೆ. ಅಲ್ಲಿಗೇ ರುದ್ರಪ್ಪನವರೂ ಬರುತ್ತಾರೆ."

" ಹಾಗೇನು?"

" ಅವರಿಗೆ ಈ ವಿಚಾರ ಗುಪ್ತವಾಗಿರಬೇಕೂಂತ ಯೋಚನೆ. ಅದಕ್ಕೆ ಈ ವ್ಯವಸ್ಥೆ. ಆ ಹುಡುಗಿಯರ ಮನೆ ಅಂತಹದೇ ಅಂತೆ."

" ಅವಳಿಗೆ ಮುಖ್ಯಪಾತ್ರ ಬೇಕೂಂತ ರುದ್ರಪ್ಪನವರೇಕೆ ಪ್ರಯತ್ನಿಸಿಲ್ಲ?"

" ಯತ್ನಿಸಿದ್ದಾರೆ. ಆದರೆ ಹೆಚ್ಚು ವಹಿಸಿಕೊಂಡು ಮಾತನಾಡಿಲ್ಲ. ಗುಟ್ಟು ರಟ್ಟಾಗುತ್ತೇಂತ ಹೆದರಿ ಸುಮ್ಮನಾದರು. ತಾವೇ ಅವಳಿಗೆ ನಾಲ್ಕು ಕಾಸು, ಸೀರೆ ಕೊಡುತ್ತಿದ್ದಾರೆ."

" ನಾಗರತ್ನನಿಗೂ ಕಾಸು...."

" ಅದೇನೂ ಇಲ್ಲ. ಅಕ್ಕಿ ರಾಗಿ ಕೊಟ್ಟು ಹಳ್ಳಿ ಹೆಣ್ಣುಗಳನ್ನೆಲ್ಲ ಕೆಡಿಸುವುದೇ ಕೆಲಸಮಾಡಿಕೊಂಡವನು ಹಾಗೆಲ್ಲ ಕೊಡುತ್ತಾನೆಯೋ. ಕಂಪೆನಿಯ ಸಂಬಳ, ಕಂಪೆನಿಊಟ, ಕಂಪೆನಿ ಲೆಕ್ಕಕ್ಕೆ ಸೀರೆ–ತನಗೆ ಮಾತ್ರ ಎಲ್ಲ ದೊರೆಯಬೇಕು. ಇದು ನಾರಣಪ್ಪನ ರಾಜಕೀಯ."

ಡಾನ್ಸಿಗೆ ಸೇರಿದ್ದ ಹುಡುಗಿಯರಲ್ಲಿ ಕೆಲವರು ಗುಂಪುಕಟ್ಟಿಕೊಂಡು ಮಾತನಾಡುತ್ತಲೇ ಇದ್ದರು. ಅಷ್ಟರಲ್ಲಿ ರಾಜು ಕಂಪೆನಿಯ ಮನೆಯೊಳಕ್ಕೆ ಕಾಲಿಟ್ಟ. "ಮೇಸ್ಟ್ರು ಬಂದ್ರು...."ಎಂದುಕೊಂಡು "ಅವರೆಲ್ಲ ಮಾತು ನಿಲ್ಲಿಸಿ, ಎದ್ದು ನಿಂತರು.

ರಾಜು ಹತ್ತಿರ ಬಂದು ಅವರ ಬೆನ್ನು ತಟ್ಟಿ–"ಎಲ್ಲರೂ ಬಂದಿದ್ದೀರಾ" ಎಂದು ಪ್ರಶ್ನಿಸಿದ.

"ಲಕ್ಷ್ಮಿ ಮತ್ತು ಉಮಾ ಬಂದಿಲ್ಲ ಸಾರ್."

"ಈಗ ಬರುತ್ತಾರೆ."

"ನೀವು ಅವರ ಮನೆಗೆ ಹೋಗಿದ್ದೀರಾ ಸಾರ್" ಎಂದು ಕುಹಕ ನೋಟ ಬೀರಿ ನಗುತ್ತ ಒಬ್ಬಳು ಪ್ರಶ್ನಿಸಿದಳು.

"ಇಲ್ಲ"

"ದಾರೀಲಿ ಅವರೇ ಸಿಕ್ಕಿದರೇ ಸಾರ್" ಇನ್ನೊಬ್ಬಳು ಪ್ರಶ್ನಿಸಿದಳು.

"ಪೇಟೆಯಿಂದ ಬರುವಾಗ ಅವರ ಮನೆ ಮುಂದೇನೇ ಬರಬೇಕಾಯಿತು. ಕರೆದು ಮಾತನಾಡಿಸಿದರು."

"ಬೇಗನೇ ಬರುತ್ತಾರೇನು ಸಾರ್"

"ಕೂಡಲೇ ಬರಲು ಹೇಳಿದ್ದೇನೆ. ಎಲ್ಲಿ ತಬಲಾ ರಂಗಪ್ಪ ಬಂದಿಲ್ಲವೇ ?"

"ಬಂದಿದ್ದಾರೆ ಸಾರ್, ಪಕ್ಕದ ಕೋಣೆಯಲ್ಲಿದ್ದಾರೆ."

ಹುಡುಗಿಯರೆಲ್ಲ ಚದರಿ ಗೆಜ್ಜೆಯನ್ನು ಅನುಗೊಳಿಸಿದರು. ಒಬ್ಬಳು ಹೋಗಿ ತಬಲಾಜಿಯವನ್ನು ಕರೆದಳು. ಮತ್ತೊಬ್ಬಳು ಮೇಸ್ಟ್ರಿಗಾಗಿ ಒಂದು ಕುರ್ಚಿ ತಂದಿಟ್ಟಳು. ಎಲ್ಲರೂ ಕಂಪೆನಿಯ ಮನೆಯ ಹಾಲಿನಲ್ಲಿ ಸೇರುವ ಹೊತ್ತಿಗೆ ಹೊರಗಡೆ ಜಟಕಾ ನಿಂತಿತು.

ಉಮಾ, ಲಕ್ಷ್ಮಿ ಇಬ್ಬರೂ ಗಾಡಿಯಿಂದಿಳಿದು ಬಂದರು.

ಹುಡುಗಿಯರೆಲ್ಲ ಸಾಲಾಗಿ ನಿಂತರು, ನೃತ್ಯಾಭ್ಯಾಸ ಆರಂಭವಾಯಿತು.

ಮೇಸ್ಟ್ರು ಒಂದು–ಎರಡು–ಮೂರು–ನಾಲ್ಕು ಎಂದು ತಾಳಹಾಕುತ್ತ ಅವರನ್ನು ಕುಣಿಸತೊಡಗಿದ. ಆಗಾಗ ಅವರ ಬಳಿ ನಡೆದು ಪ್ರತಿಯೊಬ್ಬರನ್ನೂ ಮುಟ್ಟಿ ಅವರ ಮೈ ಕೈಗಳು ಹೇಗಿರಬೇಕು, ಹೇಗೆ ಬಾಗಬೇಕೆಂದು ತಿದ್ದುತ್ತಿದ್ದ

ರಾಜುಗೆ ಹೆಣ್ಣುಗಳ ಮೈಮುಟ್ಟುವುದೆಂದರೆ ಮೊದಲಿನಿಂದಲೂ ಅಭ್ಯಾಸ, ಆನಂದ. ಅವರ ಮೈಮುಟ್ಟದೆ ಕಲಿಸುವುದೇ ಅವನಿಗೆ ಸಾಧ್ಯವಿಲ್ಲವೆಂಬಂತಾಗಿತ್ತು. ದೂರ ನಿಂತು ಹೇಳಿಕೊಡುತ್ತ ಸಾಗಿದರೆ, ಅವರ ಅಂಗಾಂಗಗಳೇ ಬಳುಕಿ ಬಾಗುವುದಿಲ್ಲವೆಂಬುದವನ ಸಿದ್ಧಾಂತ. ನೃತ್ಯ ಕಲಿಸುವ ಮಾಸ್ತರ್ ಪ್ರತಿಯೊಬ್ಬ ವಿದ್ಯಾರ್ಥಿಯ ವಿಚಾರದಲ್ಲಿ ವೈಯಕ್ತಿಕವಾಗಿ ಗಮನವೀಯಬೇಕು; ತನಗೆ ಕಷ್ಟವಾದರೂ ಕೂಡಾ ಅವರನ್ನು ತಿದ್ದಿ ಕಲಿಸಬೇಕು ಎಂಬುದವನ ವಾದ. ಮಾಸ್ತರರನ್ನು ವಿದ್ಯಾರ್ಥಿಗಳೂ ಅವರ ಹಿರಿಯರೂ ನಂಬಬೇಕು; ಅವರ ಬಗೆಗೆ ವಿಶ್ವಾಸವಿಡಬೇಕು. ಇಲ್ಲವಾದರೆ ಶಿಕ್ಷಣ ಫಲಕಾರಿಯಾಗಲಾರದು ಎಂಬುದು ಅವನ ಮತ.

ಮಲ್ಲೇಶ್ವರದಲ್ಲಿದ್ದಾಗ ಅವನು ಪ್ರತಿ ದಿನ ಈಜುವ ಕೊಳಕ್ಕೆ ಸ್ನಾನಕ್ಕಾಗಿ ಹೋಗುತ್ತಿದ್ದ. ಒಂದು ದಿನ ಅಲ್ಲೇ ಪಕ್ಕದ ಮನೆಯಿಂದ ಗೆಜ್ಜೆಯ ಸದ್ದು ಕೇಳಿಸಿತು. ವಾಸ್ತವವಾಗಿ ಕುತೂಹಲಿಯಾದ ಅವನು ಇಣಿಕಿದ. ಹಾಗೇ ಧೈರ್ಯ ತಂದುಕೊಂಡು ಒಳಗಡೆ ನಡೆದ. ಅದು ನೃತ್ಯಶಾಲೆಯೆಂದೂ ಅವನಿಗೆ ತಿಳಿಯಿತು. ಪರಿಣಾಮವಾಗಿ ನಾನೂ ಏಕೆ ನರ್ತಕನಾಗಬಾರದು–ಎಂಬುದನ್ನವನು ಮೆಲುಕುಹಾಕತೊಡಗಿದ. ಏಕೆ ನರ್ತಕನಾಗಬೇಕು–ಎಂಬ ವಾದವೂ ಅವನ ಮುಂದೆ ನಿಂತಿತು. ಮಾಸ್ತರ್ ಕಲಿಸುವ ರೀತಿ, ಅಲ್ಲಿ ತುಂಬಿದ್ದ ಹುಡುಗ-ಹುಡುಗಿಯರು, ಇವೆಲ್ಲವುಗಳೂ ಅವನ ಪ್ರಶ್ನೆಗೆ ಉತ್ತರವಿತ್ತುವು. ಅವನೂ ಶಾಲೆ ಸೇರಿದ, ಅಭ್ಯಾಸ ನಡೆಸಿದ.

ಮೂರು ತಿಂಗಳಲ್ಲೇ ಮಾಸ್ತರರು ನಗರದ ಟೌನ್ ಹಾಲಿನಲ್ಲಿ ಪ್ರದರ್ಶನವೇರ್ಪಡಿಸಿದರು. ರಾಜು ಹಳ್ಳಿಯ ನೃತ್ಯ ಕುಣಿದ. ಬೇಟೆಗಾರ ಎಂಬ ನೃತ್ಯದಲ್ಲಿ ಬೇಡನೂ ಆದ. ಅಲ್ಲಿಂದ ಮುಂದೆ ಮೂರು ತಿಂಗಳ ಕಾಲ ಹೇಗೂ ಕುಂಟುತ್ತ ಅವನು ಅಭ್ಯಾಸ ನಡೆಸಿದ. ತಾನು ನರ್ತಕನಾಗ ಬಲ್ಲೆ, ನೃತ್ಯ ಕಲಿತಿದ್ದೇನೆ ಎಂಬ ಭಾವನೆ ಅವನಲ್ಲಿ ಬೆಳೆದಂತೆಲ್ಲ

ಅಭ್ಯಾಸದಲ್ಲಿ ಹಿಂದುಳಿದ. ಅವನ ನೃತ್ಯ ಹಳ್ಳಿಯ ನೃತ್ಯವಾಯಿತು ; ಜೀವನ ಬೇಟೆಗಾರನದಾಯಿತು.

ಹಾಗೆ ಡಾನ್ಸ್ ಮಾಸ್ಟರ್ ಆಗಿ ಬದಲಾದ ಅವನಿಗೆ ಮೊದಲು ಭೇಟಿಯಾದ ಬೇಟೆ ಶಾಂತಾ. ಯಾರನ್ನು ಬೇಕಾದರೂ ತಡೆದು ನಿಲ್ಲಿಸಿ ತಾನಾರೆಂದು ಪರಿಚಯಮಾಡಿಕೊಟ್ಟು, ಮಾತನಾಡಬಲ್ಲ ಸಾಹಸಿಯಾದ ರಾಜುವಿಗೆ ಅವಳನ್ನು ಮಾತನಾಡಿಸುವುದು ಕಷ್ಟವಾಗಲಿಲ್ಲ. ತನ್ನ ಬಳಿ ಹತ್ತಾರು ತರುಣಿಯರು ನೃತ್ಯ ಕಲಿಯುತ್ತಿದ್ದಾರೆ. ಬಳೇಪೇಟೆಯಲ್ಲಿ ಇಬ್ಬರು ನನ್ನಿಂದ ಕಲಿಯುತ್ತಿದ್ದಾರೆ. ಬಸವನಗುಡಿಯಲ್ಲಿ ಲಾಯರ್ ಮನೆಯಲ್ಲಿ ಪಾಟ ಹೇಳುತ್ತೇನೆ. ಇದೀಗ ಡಿ. ಎಸ್. ಪಿ. ಯವರ ಮನೆಯಲ್ಲಿ ಪಾಟ ಮುಗಿಸಿ ಬಂದೆ. ನಾಳೆ ಚೀಫ್ ಸೆಕ್ರೆಟರಿಯವರನ್ನು ಕಾಣಬೇಕಾಗಿದೆ. ಎಂದೇ ಅವನು ಮಾತು ಆರಂಭಿಸುತ್ತಾನೆ. ಇಂತಹ ಮಾತಿಗೆ ಮರುಳಾದ ಶಾಂತಾ ತಾನೂ ಡಾನ್ಸ್ ಕಲಿಯಲು ಆರಂಭಿಸಿದಳು. ಮಾಸ್ತರ್ ಹಣ ಕೇಳಲಿಲ್ಲ, ಅವಳು ಏನು ಕೊಡಬೇಕೆಂದು ಕೇಳಲೂ ಇಲ್ಲ.

ಹೀಗೆ ಡಾನ್ಸ್ ಮಾಸ್ಟರ್ ಆದ ರಾಜು ಹತ್ತಾರು ಮಂದಿ ತರುಣಿಯರಿಗೆ ಮಾಸ್ಟರ್ ಆದ. ಬೆಂಗಳೂರಿನಲ್ಲಿ ಅವನದೊಂದು ಸ್ಕೂಲೂ ಆರಂಭವಾಯಿತು. ಅವನ ಹಿಂದೆ ತಿರುಗಾಡುವ ತರುಣರ ಸಂಖ್ಯೆಯೂ ಬೆಳೆಯಿತು. ಇವನ ಶಿಷ್ಯೆಯರನ್ನು ಕಂಡ ಕೆಲವು ಅಧಿಕಾರಿಗಳೂ, ವ್ಯಾಪಾರಿಗಳೂ ಬೆಂಬಲಕ್ಕೆ ನಿಂತರು. ಅವನ ಶಿಕ್ಷಣವಿಧಾನವನ್ನು ಬಲ್ಲ ಕೆಲವರು ದೂರ ಸರಿದರು. ಮತ್ತೆ ಕೆಲವರು ಅವನ ಸಹಾಯವಿಲ್ಲದೇ ಗುರು ಹೇಳಿಕೊಟ್ಟ ವಿದ್ಯೆಯನ್ನು ಮನೆಯವರಿಗೂ ತಿಳಿಯದಂತೆ ನಡೆಸಿಕೊಂಡು ಬಂದರು. ಅನೇಕರಿಗೆ ತಮ್ಮ ದಾರಿ ತುಳಿಯಲು ಮನೆಯಿಂದ ಹೊರಬರಲು ಮಾಸ್ಟರ್‌ರ ಸ್ಕೂಲು ಒಂದು ಸಾಧನವೂ ಆಯಿತು.

"ನೋಡಿ ಸಾರ್. ಮುಂದಿನ ತಿಂಗಳು ಪ್ರದರ್ಶನ ಏರ್ಪಡಿಸಬೇಕೆಂದಿದ್ದೇನೆ. ಇಲ್ಲೇ ಚಿಕ್ಕಪೇಟೆಯಲ್ಲಿ ನಾಲ್ಕು ಹುಡುಗಿಯರಿಗೆ ಪಾಟ ಹೇಳುತ್ತಿದ್ದೇನೆ. ಹೇಗಿದ್ದಾರೆ ಅಂತೀರಿ–ಕೈ ತೊಳೆದು ಮುಟ್ಟಬೇಕು. ನೀವೊಮ್ಮೆ ಬನ್ನಿ.... ಅವರನ್ನು ತೋರಿಸುತ್ತೇನೆ."

"ಮೊನ್ನೆ ಒಂದು ವಿಚಾರ ನಡೆಯಿತು ಸಾರ್. ಕಲೆ ಕಲಿಸುವುದೂ ತಪ್ಪೇನು ಸಾರ್. ಮಲ್ಲೇಶ್ವರದಲ್ಲಿ ಇಬ್ಬರಿಗೆ ಪಾಟ ಹೇಳುತ್ತೇನೆ. ಅವರ ಅಕ್ಕಪಕ್ಕದ ಮನೆಯುವರು ನನ್ನನ್ನು ಹೊಡೆಸಲು ಕಾದಿದ್ದಾರಂತೆ. ನನ ಗೇನು ಗೊತ್ತು ಅವರ ವಿಚಾರ. ಅವರು ಹಾಗೆ–ಹೀಗೆ–ಅಂತಾರೆ, ಅದರ ಲ್ಲೇನು. ನೀವೊಮ್ಮೆ ಬರಬೇಕು ಸಾರ್—ಅವರನ್ನು ನೋಡಿ. ನಮ್ಮಂತಹ ರಿಗೆ ಕೊಂಚ ಧೈರ್ಯ ಕೊಟ್ಟಹಾಗಾಗುತ್ತದೆ."

ಇಂಥ ಅವನ ಮಾತಿನಲ್ಲಿ ಅಡಕವಾದ ಗೂಢವನ್ನು ಬಲ್ಲವರೆಲ್ಲ ಅವನ ಬೆಂಬಲಕ್ಕೆ ನಿಂತರು. ಅವನಿಗೆ ಸಹಾಯ ನೀಡಿದರು. ಶಿಕ್ಷಣವನ್ನು ಮುಗಿಸಿ, ಶಿಕ್ಷಕನಾದ ಆರು ತಿಂಗಳಲ್ಲೇ ಅವನು ನೃತ್ಯಪ್ರದರ್ಶನವನ್ನೇರ್ಪ ಡಿಸಿದ. ಮಂತ್ರಿಗಳೇ ಆ ದಿನ ಅಧ್ಯಕ್ಷತೆ ವಹಿಸಿ, ನರ್ತಕಿಯರನ್ನು ತಬ್ಬಿ ಕೊಂಡು, ಪ್ರೋತ್ಸಾಹದ ಮಾತನ್ನಾಡಿ ಹೊಗಳಿದರು. ಕೆಲ ಕಲಾವಿಮರ್ಶ ಕರು ಇದೆಲ್ಲ ದೊಂಬರ ಕುಣಿತವೆಂದು ಕೂಗೆಬ್ಬಿಸಿದರು. ಕೆಲವರನ್ನು ತನ್ನ ಸ್ಕೂಲಿಗೆ ಆಹ್ವಾನಿಸಿ, ನರ್ತಕಿಯರಂತೆ ಕಾಣುವವರನ್ನೆಲ್ಲ ಪರಿಚಯ ಮಾಡಿಸಿದ. ಅವರೆಲ್ಲ ಈ ಪತ್ರಿಕಾವ್ಯವಸಾಯಿಗಳನ್ನು ಮಾತನಾಡಿಸಿ, ಅವರ ಪತ್ರಿಕೆಗಳ ಬಗೆಗೆ ಹೊಗಳಿ, ತಮ್ಮ ಮನೆಗಳಿಗೆ ಆಹ್ವಾನಿಸಿ, ತಮ್ಮ ಬಗೆಗೆ ಶ್ಲಾಘನೆ ಪ್ರಕಟವಾಗುವಂತೆ ಮಾಡಿಕೊಂಡರು. ಅಂಥ ಕಲಾವಿಮ ರ್ಶಕರಲ್ಲಿ ಒಂದಿಬ್ಬರು, ರಾಜುವಿನ ಶಿಷ್ಯರನ್ನು ಟೀಕಿಸಿದ ಟೀಕಾಕಾರರನ್ನೇ ಹಳಿದರು.

ರಾಜುವಿನ ಕೀರ್ತಿ ಅಂದಿನಿಂದ ಬೆಳೆಯಿತು. ಅವನ ಶಿಷ್ಯೆಯರ ಪ್ರಭಾವಕ್ಕೆ ಸೋತವರೂ ಅವನಿಗೆ ಬೆಂಬಲ ನೀಡಿದರು. ದಿನೇ ದಿನೇ ಅವನ ಕಾರ್ಯಕ್ರಮಗಳು ಬೆಳೆಯುತ್ತ ಬಂದು, ಶಿಕ್ಷಣವಾವುದಕ್ಕೂ ಅವ ಕಾಶವಿಲ್ಲವಾಯಿತು. ಆದರೂ, ಶಿಕ್ಷಣದ ಹೋರಾಟಕ್ಕಿಂತ ಅಧಿಕ ಸಂಪಾ ದನೆ ಅವನಿಗೆ ಶಿಷ್ಯರ ಮೂಲಕ ಆಗುತ್ತಿದ್ದುದರಿಂದ, ತನ್ನ ಶಿಷ್ಯರ ಕಲಾ ಪ್ರೌಢಿಮೆಯ ಬದಲು ಅವರನ್ನೇ ತೋರಿಸುವ ಸಾಹಸ ಬೆಳೆಸಿಕೊಂಡ. ಅವನಿಂದ ನೃತ್ಯವನ್ನು ಕಲಿತು ಕಲಾವಿದೆಯೂ ಕಲಾವಂತಳೂ ಆಗಿ ಸುಗಮ ಜೀವನವನ್ನು ನಡೆಸುತ್ತಿದ್ದವಳು ಶಾಂತಾ.

ಯಾವ ಹಳ್ಳಿಯಲ್ಲಿ ನಾಟಕವಾಗಲಿ, ಮದುವೆಯಾಗಲಿ ಅವಳ ನೃತ್ಯ ಏರ್ಪಡುತ್ತಿತ್ತು. ಪೇಟೆಯಲ್ಲೂ ನಾಟಕಗಳಲ್ಲೆಲ್ಲ ಅವಳು ನರ್ತಿಸುತ್ತಿದ್ದಳು. ನೃತ್ಯದ ಜತೆಗೆ ಅವಳು ಬೇರೆ ವರಮಾನವನ್ನು ಗಳಿಸುವುದು ಸುಲಭವೂ ಆಯಿತು. ಬೆಂಗಳೂರಲ್ಲೂ ಅವಳದೇ ಒಂದು ಸ್ಕೂಲು ಆರಂಭವಾಯಿತು. ಕಂಟ್ರ್ಯಾಕ್ಟರ್ ಒಬ್ಬ ೬೦ ರೂ. ಸಹಾಯಮಾಡಿದ. ಒಂದಿಬ್ಬರು ಶಿಷ್ಯರು ಬೆಂಬಲ ನೀಡಿದರು. ಅವಳ ಕಲೆಗೆ ಸೋತು ಅವಳನ್ನೊಂದೆರಡು ಬಾರಿ ಭೇಟಿಮಾಡಿದ್ದ ವಿಮಾನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀಧರ ಅವಳನ್ನೇ ತನ್ನ ಕುಲದೇವರಾಗಿ ಮಾಡಿಕೊಂಡ.

ಚಿತ್ರ ಪ್ರಪಂಚಕ್ಕೆ ಕಾಲಿಟ್ಟ ಶಾಂತಾ, ತನ್ನ ಸಹಾಯಕನಾದ ಮಾಸ್ಟರ್ ಬಳಿಯಲ್ಲಿಲ್ಲವೆ ಕೆಲ ದಿನ ಸುಮ್ಮನಿರಬೇಕಾಯಿತು. ಮಾಸ್ಟರ್ ಬಂದೊಡನೆಯೇ ಅವಳಿಗೆ ನಾಲ್ಕು ಭುಜಗಳು ದೊರೆತಂತಾಗಿ, ಮೊದಲ ಅಂಥ ಭುಜ ನಾರಾಯಣಪ್ಪನದೇ ಆಯಿತು. ಹಾಗೇ ದಿನಗಳೆದಂತೆ ಅವಳು ತನ್ನ ಪ್ರಭಾವ ಬೆಳೆಸಿಕೊಂಡಳು.

ರಾಜುವಿಗೂ ನೀರಿಗಿಳಿದ ಮೀನಿನಂತೆ ಆನಂದವಾಯಿತು. ಸರ್ವ ಸಾಹಸಗಳಿಗೆ ಚಿತ್ರಪ್ರಪಂಚ ಯುಕ್ತ ಹೊಲವಾಗಿದೆ ಎಂದವನಿಗೆ ಅರಿವಾಯಿತು. ಎಲ್ಲ ನಟನಟಿಯರ ಸ್ನೇಹ, ವಿಶ್ವಾಸ ದೊರೆಯಿತು. ಎಲ್ಲರಿಗೂ ಅವನೇ ರಕ್ಷಕನೂ ಸಹಾಯಕನೂ ಆದ. ಅವನ ಬೆಂಬಲವಿಲ್ಲದೆ ಇದ್ದರೆ ತಮ್ಮ ಸ್ಥಾನ ಭದ್ರವಲ್ಲ ಎಂಬ ತನಕವೂ ಇತರ ನಟಿಯರಿಗೆ ಭೀತಿ ಬೆಳೆಯಿತು. ರುದ್ರಪ್ಪ ಅವನ ಆಪ್ತನಾದ. ನಾರಾಯಣಪ್ಪನಿಗೆ ರಾಜು ಮಂತ್ರಿಯೂ ಮಾಂಡಲಿಕನೂ ಆದ. ಪರಮಶಿವನಿಗೆ ಹೊಸ ಲೋಕ ತೋರಿಸಿದ ಗುರುವಾದ.

ಚಿತ್ರಾಂಗದೆಯ ಅಂತಃಪುರ, ಅವಳ ದಾಸಿಯರು, ಅಲ್ಲಿಗೆ ಬಭ್ರುವಾಹನನ ಆಗಮನ. ತಾಯಿಗೆ ವಂದಿಸಿ ಅವನು ಯಾಗಾಶ್ವದ ವಿಚಾರ ಹೇಳುತ್ತಾನೆ, ತಾನು ಮಹಾ ಸಾಹಸಮಾಡಿದೆನೆಂದು. ತಾಯಿ ಆ ಸಾಹಸ ಮೆಚ್ಚುವುದಿಲ್ಲ. ಅವಳು ಅರ್ಜುನನ ಬಗೆಗೆ ಹೇಳುತ್ತಾಳೆ. ಬಭ್ರುವಾಹನ ತನಗಿಂತ ವೀರರಿಲ್ಲ ಎಂದುಕೊಳ್ಳುತ್ತಾನೆ. ಕೊನೆಗೆ ಚಿತ್ರಾಂಗದ ಪೂರ್ವ

ಕತೆಯನ್ನು ಹೇಳಬೇಕಾಗುತ್ತದೆ. ಅರ್ಜುನನೇ ತನ್ನ ತಂದೆಯೆಂದು ತಿಳಿದು ಬಬ್ರುವಾಹನ ಹರ್ಷಿತನಾಗುತ್ತಾನೆ. ಅಶ್ವವನ್ನು ಹಿಂತಿರುಗಿಸಿ, ಕಪ್ಪ ಕಾಣಿಕೆ ಅರ್ಪಿಸಲು ಅವನು ಒಪ್ಪುತ್ತಾನೆ.

ಇಷ್ಟು ಚಿತ್ರವೆತ್ತಿ ಮುಗಿಸುವಲ್ಲಿಗೆ ಕಚ್ಚಾ ಫಿಲಂ ಮುಗಿದು ಹೋಯಿತು. ಬಬೂತ್‌ಮಲ್ ಫಿಲಂ ತರಿಸಿಕೊಡುತ್ತೇನೆಂದೇ ಮೂರು ದಿನ ನಿಧಾನಿಸಿದ. ನೀವು ಕೂಡಲೇ ಶೂಟಿಂಗ್ ಆರಂಭಿಸದಿದ್ದರೆ ಸೆಟ್ ಕಳಚಿಬಿಡುತ್ತೇನೆಂದು ಸ್ಟುಡಿಯೋ ಮಾಲೀಕರು ಬೆದರಿಕೆ ಹಾಕಿದರು. ಹತ್ತಿಪ್ಪತ್ತು ಹೆಚ್ಚು ಖರ್ಚಾದರೂ ಚಿಂತಿಲ್ಲ, ಇಲ್ಲೇ ಫಿಲಂ ತೆಗೆದುಕೊಳ್ಳುತ್ತೇನೆ ಅಥವಾ ಯಾರನ್ನಾದರೂ ಮದ್ರಾಸಿಗೆ ಅಟ್ಟುತ್ತೇನೆ ಎಂದು ರುದ್ರಪ್ಪ ತಿಳಿಸಿದ. ಅಂತೂ ಒಲ್ಲದ ಮನಸ್ಸಿನಿಂದ ಈ ಅವಸರವನ್ನು ಶಪಿಸುತ್ತ ಬಬೂತಮಲ್ ತಂತಿಕೊಟ್ಟು ಫಿಲಂ ತರಿಸಿದ. ಎಂಟು ದಿನಗಳ ನಂತರ ಅದೇ ಸೆಟ್‌ನಲ್ಲಿ ಮುಂದಿನ ದೃಶ್ಯಗಳ ಶೂಟಿಂಗ್ ಆರಂಭವಾಯಿತು.

ಈ ದೃಶ್ಯಗಳ ಚಿತ್ರಣ ಮುಗಿದೊಡನೆಯೇ ಬಬ್ರುವಾಹನನ 'ದರ್ಬಾರ್' ದೃಶ್ಯವಾಗಬೇಕು. ಅಲ್ಲಿ ನೃತ್ಯ ನಡೆಯಬೇಕು. ಎಂದು ಡೈರೆಕ್ಟರ್ ರಾಜುವಿಗೆ ತಿಳಿಸಿದ. ಅದುವರೆಗೂ ಡ್ಯಾನ್ಸ್ ಹೆಸರಲ್ಲಿ ಹುಡುಗಿಯರನ್ನು ಕುಣಿಸುತ್ತ ದಿನ ದೂಡುತ್ತಿದ್ದ ರಾಜು ಈಗ ಎಚ್ಚರಗೊಂಡ. ಅವನ ಕೂಟ ನೃತ್ಯ ಹೇಗೆ ಹೇಗೋ ಸಿದ್ಧವಾಯಿತು. ಎಂಟು ಮಂದಿ ಹುಡುಗಿಯರು ಸಾಲಾಗಿ ನಿಂತು ನರ್ತಿಸಬೇಕು. ಅವರು ಹಿಂದಕ್ಕೂ ಮುಂದಕ್ಕೂ ಎಡಕ್ಕೂ ಬಲಕ್ಕೂ ಚಲಿಸುತ್ತ, ಗೋಲಾಕಾರವಾಗಿ ನಿಂತು ನಡೆಯುತ್ತ ಅಭಿನಯಿಸುವ ನೃತ್ಯವನ್ನು ಸಭಾ ನೃತ್ಯವೆಂದಾತ ಹೆಸರಿಸಿದ. ಬಬ್ರುವಾಹನನ ಸಭೆಯಲ್ಲಿ ಈ ನೃತ್ಯವಾಗಬೇಕೆಂದು ನಿರ್ಧಾರವಾಯಿತು.

ಪೌರಾಣಿಕ ಕಥಾ ಕಾಲಕ್ಷೇಪಗಳ ಹೆಸರಲ್ಲಿ ಭಾರತೀಯ ಪುರಾಣ ಪುಣ್ಯಕತೆಗಳನ್ನು ಅರ್ಥಮಾಡಿಕೊಂಡ ರಾಮುಸ್ವಾಮಿಯವರು ಈ ಕಥಕ್ ನೃತ್ಯವನ್ನು ಒಪ್ಪಲಿಲ್ಲ. ಹೊಳೇನರಸೀಪುರದಲ್ಲಿ ಹಳ್ಳಿಗರು ಕುಣಿಯುವ ಸುಗ್ಗಿ ಕುಣಿತದ ಹಾಗಿದೆ ಇದು. ಚಿತ್ರದುರ್ಗದ ಕೋಲಾಟ, ಹಾಸನದ ಜಾನಪದ ನೃತ್ಯಗಳು ಇದಕ್ಕಿಂತ ಚೆನ್ನಾಗಿವೆ. ಇದೆಲ್ಲ ನೃತ್ಯವೇನು? ಶುದ್ಧ ಭರತನಾಟ್ಯವೇ ಆಗಬೇಕು. ಈ ಡೊಂಬರ ಕುಣಿತ ಆ ಕಾಲದಲ್ಲಿ

ಇರಲಿಲ್ಲ. ನಮ್ಮ ದೇಶಕ್ಕೇ ಇದು ಅಪಮಾನ ಎಂದು ರೇಗಾಡಿದರು. ಕೀಚಕನಂತಹ ಮಹಾರಾಜರು, ಅರ್ಜುನ ನಂತಹ ವೀರಾಧಿವೀರರು ನಾಟ್ಯಾಚಾರ್ಯರಾಗಿದ್ದ ಆ ಕಾಲ. ಅರ್ಜುನನ ಮಗ ಬಭ್ರುವಾಹನನ ಆಸ್ಥಾನ. ನೃತ್ಯಕಲೆ ಮನೆ ಮನೆಗಳಲ್ಲೂ ನಲಿಯುತ್ತಿದ್ದ ಮಣಿಪುರದೇಶ. ಅಂಥ ಕಡೆ ಈ ಕೋಲಾಟದ ನೃತ್ಯ ಇರುವುದು ಸಾಧ್ಯವೇ ಎಂದು ವಾದಿಸಿದರು.

ರುದ್ರಪ್ಪನಿಗೆ ಈ ವಾದ ಸರಿಯೆಂದು ತೋರಿತು. ಭರತನಾಟ್ಯದ ನಡುವೆ ಬೆಳೆದ ಡೈರೆಕ್ಟರ್ ಅವರ ಮಾತನ್ನು ಅನುಮೋದಿಸಿದರು. ಶ್ರೀಕಂಠಪ್ಪನೂ ಶಾಸ್ತ್ರಿಗಳ ಮಾತನ್ನೇ ಒಪ್ಪಿಕೊಂಡು ಅದೇ ಸರಿ. ಈ ನಾಟ್ಯವನ್ನು ಬೇರೆ ಎಲ್ಲಾದರೂ ಸೇರಿಸೋಣ ಎಂದು ಸೂಚಿಸಿದ. ಆದರೆ, ಭರತನಾಟ್ಯ ಬಲ್ಲವರು ಯಾರಿದ್ದಾರೆ? ಅವರನ್ನು ಎಲ್ಲಿಂದ ತರಲಿ ? ಹುಡುಗಿಯರು ದೊರೆತರೆ ಈ ಡಾನ್ಸ್ ಮೇಸ್ಟ್ರೇ ತರಬೇತುಗೊಳಿಸಲೂ ಬಹುದು ಎಂಬ ಯೋಚನೆ ಅವರನ್ನು ಕಾಡಿತು.

ಭರತನಾಟ್ಯದ ಹೆಸರು ಕೇಳಿದೊಡನೆ ರಾಜುವಿನ ಉತ್ಸಾಹ ಅರ್ಧಕ್ಕೆ ಇಳಿಯಿತು. ಅದೇನೆಂಬುದೇ ಅವನಿಗೆ ಅರ್ಥವಾಗಲಿಲ್ಲ. ಕಥಕ್ ನೃತ್ಯವೇ ಅತ್ಯಂತ ಸುಂದರವಾದುದೆಂದು ಮುಖಾಭಿನಯದ ಅರಿವೇ ಇಲ್ಲದ ಅವನ ಮಾಸ್ತರರೂ ಆಗಾಗ ಹೇಳುತ್ತಿದ್ದರು. ರಾಜುವಿಗೂ ಹಾಗೇ ಅನಿಸಿತ್ತು. ಕಥಕ್ ಕಲಿತು ಇದೇ ಕಥಕ್ಕಳಿ' ಇದೇ ಭರತನಾಟ್ಯ, ಇದೇ ಮಣಿಪುರಿ ಎಂದವನು ಹೇಳಿಕೊಂಡು ತಿರುಗಾಡುತ್ತಿದ್ದ. ಅವನ ಶಿಷ್ಯೆಯರನ್ನು ನೋಡಲು ಬಂದವರು ಅವನ ಮಾತುಗಳನ್ನು ನಂಬಿ ಭೇಷ್-ಶಹಭಾಷ್ ಎಂದುಕೊಂಡು ಹೋಗುತ್ತಿದ್ದರು. ಆ ಆಟ ಬೆಂಗಳೂರಲ್ಲೆಲ್ಲ ಸುಸೂತ್ರವಾಗಿ ಸಾಗಿತು. ಆದರೆ ಈಗ ಮೈಸೂರಲ್ಲಿ ತನ್ನ ವಿದ್ಯೆಯನ್ನೇ ಒರೆಹಚ್ಚುವ ಸ್ಥಿತಿ ಒದಗಿದೆ ಎಂದು ಅವನು ಭೀತನಾದ. ರಾಮಸ್ವಾಮಿಗಳು ಭರತನಾಟ್ಯದ ಸೂಚನೆ ಕೊಟ್ಟರೆಂದು ತಿಳಿದ ಮೇಲಂತೂ ಅವನ ಜಂಘಾಬಲವೇ ಉಡುಗಿತು. ಈ ಶಾಸ್ತ್ರಿಗಳು ಸಂಸ್ಕೃತ ಪಂಡಿತರು, ಮೇಲಾಗಿ ರಸಿಕರಾದ ಹರಿದಾಸರು. ಎಷ್ಟೋ ನೃತ್ಯ ನೋಡಿರಬಹುದು. ಭರತನಾಟ್ಯದ ಬಗೆಗೆ ತಿಳಿದಿರಬಹುದು. ಇವರನ್ನು ಮೋಸಗೊಳಿಸುವುದು ಅವನಿಗೆ ಕಷ್ಟವೆಂದು

ತೋರಿತು. ರುದ್ರಪ್ಪ, ನಾರಾಯಣಪ್ಪ, ಪರಮಶಿವ ಇವರನ್ನೆಲ್ಲ ಒಪ್ಪಿಸುವುದು ಕಷ್ಟದ ಮಾತಲ್ಲ. ಅವರಿಗೆ ಕುಣಿತಗಳೆಲ್ಲ ಒಂದೇ ಜಾತಿಗೆ ಸೇರಿದವು. ಮಾತ್ರವಲ್ಲ-ಅವರು ರಾಜುವಿನ ಸಲಹೆ ಹೇಳಿಕೆಗಳನ್ನು ಅಲ್ಲಗಳೆಯುವವರೂ ಅಲ್ಲ.

ಈಗ ಅವನ ಮುನ್ನಡೆಗೆ ಕೊಂಚ ತಡೆ ತಂದವರು ಹರಿದಾಸರು ಮತ್ತು ಡೈರೆಕ್ಟರ್ ಸ್ವಾಮಿ. ಇಬ್ಬರೂ ಭರತನಾಟ್ಯ ನೋಡಿ, ಅದರ ಬಗೆಗೆ ತಿಳಿದವರು. ಇವರ ಆತಂಕವನ್ನು ಮುರಿಯುವುದೇ ರಾಜುವಿಗೊಂದು ಸಮಸ್ಯೆಯಾಯಿತು. ತನಗೆ ಭರತನಾಟ್ಯ ತಿಳಿದಿಲ್ಲ ಎಂದರೆ ಅದು ಶುದ್ಧ ಅಪಮಾನ. ತಾನೇ ತನಗೆ ಸಕಲ ನಾಟ್ಯಗಳೂ ಸಿದ್ಧಿಸಿವೆ, ಎಂದಾತ ಹೇಳಿದ್ದ. ದೇಶದ ಎಲ್ಲ ನರ್ತಕರನ್ನೂ ಟೀಕಿಸಿ ಅವರಿಗೇನು ತಿಳಿದಿದೆ, ಇವರಿಗೇನು ತಿಳಿದಿದೆ ಎಂದು ಮೂದಲಿಸಿ, ತಾನು ಎಲ್ಲರಿಗಿಂತಲೂ ಮೇಲು ಎಂದು ಹೇಳಿಕೊಂಡು ಕಂಪೆನಿಯ ಮುಖ್ಯ ಪಾಲುಗಾರರನ್ನೂ ಅವರ ಸ್ನೇಹಿತರನ್ನೂ ತನ್ನವರನ್ನಾಗಿ ಮಾಡಿಕೊಂಡಿದ್ದ. ಆದರೆ, ಈಗ ಯಾಕೋ ಗಂಡಾಂತರ ಒದಗಿದಂತಿತ್ತು.

ರುದ್ರಪ್ಪನವರ ಮುಂದೆಯೇ ರಾಮಸ್ವಾಮಿಯವರೂ, ಸಾಮಿ ಮತ್ತು ಶ್ರೀಕಂಠಪ್ಪ ಈ ಬಗೆಗೆ ಚರ್ಚಿಸಿದರು.

"ಅದಕ್ಕೇನು ಸಾರ್. ಅದ್ಭುತವಾದ ನೃತ್ಯ ಕಲಿಸಿಬಿಡುತ್ತೇನೆ."

"ಭರತನಾಟ್ಯವೇ ಆಗಬೇಕು."

"ಅದೇ ಆಗಲಿ ಸಾರ್."

"ಅದು ಚೆನ್ನಾಗಿರುತ್ತದೆ" ಎಂದು ಮುಳುಗುವವನು ಕೊನೆ ಗಳಿಗೆಯಲ್ಲಿ ಧೈರ್ಯ ತಂದುಕೊಂಡವನಂತೆ; ಹೆಂಗಸರು ನೋಡುತ್ತಿದ್ದಂತೆ ಜಾರಿಬಿದ್ದವನು ತನ್ನ ನೋವನ್ನು ತೋರಗೊಡದೆ ಏನೂ ಆಗಿಲ್ಲ—ಎಂದು ಅಳು ಬರುತ್ತಿದ್ದರೂ ನಗುವಂತೆ ರಾಜು ಮಾತನಾಡುತ್ತಿದ್ದ.

"ಮೂರು ದಿನದೊಳಗಾಗಿ ಸಾಧ್ಯವೇ? ಇದೇ ಸೆಟ್‌ನಲ್ಲಿ ಆ ನೃತ್ಯ ನಡೆಯಬೇಕು." ಎಂದು ಡೈರೆಕ್ಟರ್ ಸಾಮಿ ಸೂಚಿಸಿದ. ರಾಜುವಿಗೆ ಏನೋ ಯೋಚನೆ ಬಂತು; ಧೈರ್ಯ ಮೂಡಿತು.

“ ಅದು ಹೇಗೆ ಸಾಧ್ಯ ಸಾರ್ ? ದಿನಕ್ಕೆ ನಾಲ್ಕು ಗಂಟೆ ತರಬೇತು ಕೊಟ್ಟರೂ ಒಂದು ವಾರ ಹಿಡಿದೀತು. ನೃತ್ಯದಲ್ಲಿ ಊನ ಬರಬಾರದು, ಅದು ಅತ್ಯುತ್ತಮವಾಗಬೇಕು. ”

“ ಅದು ತುಂಬ ದೀರ್ಘಕಾಲವಾಯಿತು. ಈಗ ನಾಲ್ಕು ದಿನ ಔಟ್ ಡೋರ್ ತೆಗೆದುಬಿಡುತ್ತೇನೆ. ಅಷ್ಟರಲ್ಲಿ ನೃತ್ಯ ಸಿದ್ಧವಾಗಬೇಕು. ”

“ ಅಂದರೆ ನರ್ತಕಿ ಯಾರು.... ? ”

“ ಈಗ ಇರುವವರಲ್ಲೇ ಯಾರನ್ನಾದರೂ ಆರಿಸಿ.”

“ ನನಗೇನೋ ಅವರಲ್ಲಿ ಯಾರೂ ಆ ಮಟ್ಟಕ್ಕೆ ಬರುವ ಧೈರ್ಯವಿಲ್ಲ” ರಾಜು ಒಳದನಿಯಲ್ಲೇ ಹೇಳಿದ. ಆ ಮಾತು ನಟಿಯರಿಗೆ ಕೇಳಿಸಿದರೆ ಅವರು ಸಿಟ್ಟಾದಾರೆಂಬ ಭೀತಿ ಅವನಿಗೆ.

“ ಹೊಸಬರನ್ನು ಯಾರನ್ನು ಕರೆಯೋಣ....ಯಾರೂ ಕಾಣಿಸುವುದಿಲ್ಲ ....ನೀವೇ ವ್ಯವಸ್ಥೆ ಮಾಡಬೇಕು.”

ಹಣದ ಮಾತು ಅಂದರೆ ಈ ಯೋಚನೆಯೇ ಅಳಿಯಬಹುದೇನೋ ಎಂದು ರಾಜು ಹೊಸ ವರಸೆ ತೆಗೆದ. ಅವನ ತರಬೇತು ಕಾಲ, ನಟಿಯರಿಲ್ಲ– ಎಂಬ ವಾದ ಈಗ ಅಪ್ರಯೋಜಕವಾಗಿತ್ತು.

“ ೫೦೦ ರೂಪಾಯಿಯಾದರೂ ಕೊಡದೆ ಯಾರು ಬರುತ್ತಾರೆ ಸಾರ್?”

“ ಒಂದು ನೃತ್ಯಕ್ಕೆ ? ” ಎಂದ ರುದ್ರಪ್ಪ.

“ ಒಂದಾದರೂ ಸರಿಯೆ. ಹತ್ತಾದರೂ ಸರಿಯೆ. ಒಂದೇ ವಾರ ಕಲಿತು ಪ್ರದರ್ಶಿಸಿ ಹೊರಟು ಹೋದರೂ ಸರಿಯೆ ”

“ ಭರತನಾಟ್ಯ ಅಂದರೆ ಹಾಗೇ ಸ್ವಾಮಿ. ಅಷ್ಟು ಸುಂದರ ದೇಹ ಇರಬೇಕು, ಎಷ್ಟು ಅದ್ಭುತ ಅನುಭವವಿರಬೇಕು–ಆ ನಟಿಗೆ.”

“ ಸರಿ. ಆಗಲಿ. ಅಂತೂ ಚಿತ್ರ ಉತ್ತಮವಾಗಬೇಕು.” ಎಂದ ರುದ್ರಪ್ಪ.

“ ಪುರಾಣಕ್ಕೆ ಪುಣ್ಯಪುರುಷರಿಗೆ ಅನ್ಯಾಯವಾಗಬಾರದು ” ಎಂದು ಧ್ವನಿ ಕೂಡಿಸಿದರು ಶಾಸ್ತ್ರಿಗಳು.

"ಸರಿ, ಬೇರೆ ನರ್ತಕಿಯರನ್ನು ಹುಡುಕುತ್ತೇನೆ. ಸಿಗದಿದ್ದರೆ ಇದ್ದವರಲ್ಲೇ ಯಾರನ್ನಾದರೂ ಸಿದ್ಧಗೊಳಿಸುತ್ತೇನೆ" ಎಂದು ತನ್ನ ಎಲ್ಲ ಯತ್ನಗಳೂ ವಿಫಲವಾಗಿ ನಿರಾಶನಾದ ರಾಜು ಉತ್ತರವಿತ್ತ.

"ನಾಳೆ ಆ ಶ್ಲೋಕ ಕೊಡುತ್ತೇನೆ" ಎಂದು ಶಾಸ್ತ್ರಿಗಳು ಅವನ ಧೈರ್ಯವನ್ನು ಕುಂದಿಸಿದರು.

ಆದರೂ, ಹೇಗಾದರೂ ಮಾಡಿ ಈ ಯೋಜನೆಯನ್ನು ತಳ್ಳಿಹಾಕಲು ಪ್ರಯತ್ನಿಸುವ ಧೈರ್ಯದಿಂದ ರಾಜು ಒಪ್ಪಿಕೊಂಡ. ಶಾಂತಮ್ಮನನ್ನು ಎತ್ತಿ ಕಟ್ಟಿ ತಾನೇ ನೃತ್ಯನಡೆಸುತ್ತೇನೆ ಎಂದು ಅವಳೂ, ಅವಳ ದೇಹ ತುಂಬ ಸ್ಥೂಲವೆಂದು ತಾನೂ ವಾದಿಸಿ ಹೋರಾಡಿ ಈ ನೃತ್ಯವೇ ಬೇಡವೆಂದು ನಾರಣಪ್ಪನಿಂದ ಹೇಳಿಸಬಹುದೆಂದು ರಾಜು ಯೋಚಿಸಿದ. ಅಲ್ಲೂ ಸೋಲಾದರೆ ಬೇರೆ ದಾರಿ ಇದ್ದೇ ಇದೆ. ನಟಿಯರ ನೆರವು ಇರುವಾಗ ಅವನಿಗೇನು ಭೀತಿ?

೬

ಹಾಸಿಗೆ ಬಿಟ್ಟೆದ್ದಾಗ ಬಿಸಿಲು ಕೋಣೆಯೊಳಗೆ ಕಾಲಿಟ್ಟಿತ್ತು. ಸುತ್ತಲೂ ಚೆಲ್ಲಿದ್ದ ಬೆಳಕು, ಗಂಟೆ ಹತ್ತಾಯಿತೇನೋ ಎಂಬ ಶಂಕೆ ಮೂಡಿಸಿ ಫಕ್ಕನೆ ಹಾಸಿಗೆ ಬಿಟ್ಟೇಳುವಂತೆ ಮಾಡಿತು. ಎದ್ದು ಮೇಜಿನ ಮೇಲಿದ್ದ ಕೃಷ್ಣನ ಕೈಗಡಿಯಾರ ನೋಡಿದಳು ಕಲ್ಯಾಣಿ. ಗಂಟೆ ಇನ್ನೂ ಏಳು.

ಅವಳಿಗೆ ನಗು ಬಂತು.

ಯಾಕೆ ಈ ಭೀತಿ. ಈಗ ಎಷ್ಟು ಹೊತ್ತು ನಿದ್ರಿಸಿದರೇನು? ಎಷ್ಟು ಹೊತ್ತಿಗೆ ಎಚ್ಚರವಾದರೇನು? ಯಾರೂ ಕೇಳುವವರಿಲ್ಲ. ತಾನು ಸ್ವತಂತ್ರವಾಗಿದ್ದೇನೆ ಎಂಬುದೇ ಅವಳಿಗೆ ಮರೆತುಹೋಗಿತ್ತು. ಇನ್ನೂ ಕಲಾಮಂಡಲದಲ್ಲೇ ಇದ್ದೇನೆ—ಎಂಬ ಭಾವನೆಯಿಂದ ಅವಳು ಹಾಗೆ ಹಾಸಗೆಯಿಂದ ನೆಗೆದು ನಿಂತಳು.

ಕೃಷ್ಣನಿಗೆ ಇನ್ನೂ ಎಚ್ಚರವಿರಲಿಲ್ಲ. ಏನೋ ಹಗಲುಕನಸು ಕಾಣುತ್ತಿರುವವನಂತೆ ಅವನ ಮುಖದ ಭಾವನೆ ಬದಲಾಗುತ್ತಿತ್ತು; ಅವನ

ಮಂಚದ ಬಳಿ ಬಂದು, ಎಚ್ಚರಿಸೋಣ ಎಂದಂದುಕೊಂಡ ಕಲ್ಯಾಣಿ, ಹಿಂತೆಗೆದಳು. ನಿದ್ರಿಸಲಿ, ರಾತ್ರಿ ತುಂಬ ಹೊತ್ತಾಗಿತ್ತು—ಎಂದವಳ ಮನಸ್ಸೇ ಸಮಾಧಾನ ಹೇಳಿತು.

ಒಮ್ಮೆ ಮೈಮುರಿದು ನಿಂತು, ಕತ್ತು ಬಳುಕಿಸಿ, ಕೈನೀಡಿ, ಆಕೆ ಟವಲ್ ತೆಗೆದುಕೊಂಡು ಬಚ್ಚಲಿಗೆ ತೆರಳಿದಳು. ಹಾಗೇ ಕಾಫಿ ತರುವಂತೆ ಮಾಣಿಗೆ ತಿಳಿಸಿ, ಮುಖ ತೊಳೆದುಕೊಂಡು, ಕೋಣೆಗೆ ಹಿಂತಿರುಗಿದಳು. ಮುಖ ಒರಸಿಕೊಂಡು, ಕನ್ನಡಿ ನೋಡುತ್ತ ಹಣೆಗೆ ಬೊಟ್ಟು ಇಟ್ಟು, ಮೆಲ್ಲ ಕೃಷ್ಣನೆಡೆ ಬಂದಳು.

ಯಾಕೋ ಏನೋ ಎಂತೊ ಯಾವುದೋ ರಾಜ್ಯದಲಿ
ನಾ ವಿಹರಿಸುವೆ ನಿನ್ನ ಕಂಡಾಗಲೆಲ್ಲ
ಸುಪ್ತ ಜೀವಕೆ, ಭಾವ ಹೀನಭಾವಕೆ, ಹಾವ
ಭಾವದಿಂ ಜೀವ ಚಿಮುಕಿಸಿದೆಯಲ್ಲ....?

ಕೃಷ್ಣನ ತಲೆಯನ್ನು ನೇವರಿಸುತ್ತ ಕಲ್ಯಾಣಿ ಒಳದನಿಯಲ್ಲೇ ಹಾಡನ್ನು ಗೊಣಗುತ್ತಿದ್ದಳು. ಆ ಅಲೆ ಅಲೆಯಾಗಿ ಬರುತ್ತಿದ್ದ ಮೃದುವಾದ ಮಧುರವಾದ ಹಾಡಿನ ಸ್ವರ ಅವನನ್ನು ಭವಲೋಕಕ್ಕೆ ಎಳೆಯಿತು. ಕಣ್ಣರಳಿಸಿ ಮುಗುಳು ನಗೆ ಬೀರಿದ.

ಬಾಗಿ ಅವನ ಮುಖದ ಮೇಲೆ ಮುಖವಿಟ್ಟು "ಹ್ಞೂ—ಏಳಿ. ಕಾಫಿ ಹೇಳಿದ್ದೇನೆ." ಎಂದು ಹುಲ್ಲೆಯಂತೆ ಚಿಗಿದು ನಿಂತುಕೊಂಡಳು. ಅವನೂ ನೆಗೆದು ಅವಳನ್ನು ಬರಸೆಳೆದು ಮಂಚದ ಮೇಲೆ ಕುಳ್ಳಿರಿಸಿಕೊಂಡ.

"ಇನ್ನೂ ನಿದ್ದೆ ಮುಗಿದಿಲ್ಲೇನು?"

"ಆಗಲೇ ಎಚ್ಚರವಾಗಿತ್ತು. ಆದರೂ ಜೊಂಪು ಹತ್ತಿತು. ಎದ್ದೇಳಲು ಮನಸ್ಸೇ ಇಲ್ಲ."

"ಅಂಕೆಯೂ ಇಲ್ಲ...."

"ಯಾರ ಅಂಕೆ? ನಿನ್ನದು...."

"ನಾನೂ ಅಡ್ಡಿ ಬರುವುದಿಲ್ಲ-ಹ್ಞೂ ಮಲಗಿ" ಎಂದು ಕಲ್ಯಾಣಿ ಅವನನ್ನು ಹಾಸಿಗೆಯ ಮೇಲೆ ದೂಡಿದಳು. ಅವನು ಬಿದ್ದು ಎದ್ದು ಕುಳಿತ.

" ಇನ್ನೂ ನಿದ್ರಿಸಿದರೆ ನಕ್ಕಾರು...."

" ಯಾರೋ ? "

" ಯಾರಾದರೂ...."

ಮಾಣಿ ಕಾಫಿ ತಂದು ಮೇಜಿನ ಮೇಲಿರಿಸಿದ.

" ಬಿಸಿಯಾಗಿದೆಯೇನಪ್ಪ ? "

" ಹೌದು ಸಾರ್...."

" ನೋಡಿದಿರಾ ? ನೀವು ಮೇಸ್ಟ್ರು ಅನ್ನುವುದು ಅವನಿಗೂ ಗೊತ್ತಾಯಿತು."

" ಯಾವ ಶಾಲೆ ಸಾರ್ "

" ಅಲ್ಲಯ್ಯ.... ಸಾರ್.... ಸಾರ್.... ಅಂತೀಯಲ್ಲ ಅದಕ್ಕೆ ಹೇಳಿದೆ."

" ಇಲ್ಲಿ ಹಾಗೇ ಕೂಗುತ್ತಾರೆ...."

" ಕೂಗೋದೇ ? ಯಾಕೆ ? ಯಾರು ಸತ್ತರು ? "

" ಅಲ್ಲಮ್ಮ. ಕರೆಯುವುದಕ್ಕೆ ಕೂಗು ಅನ್ನುತ್ತಾರೆ. ನಮ್ಮಲ್ಲಿ ಸ್ವಾಮಿ ಅನ್ನುವ ಬದಲು ಇಲ್ಲಿ ಸಾರ್ ಅನ್ನುತ್ತಾರೆ "

" ಹಾಗೇನು...." ಎಲ್ಲರೂ ನಕ್ಕರು.

ಹುಡುಗ ಅವರನ್ನೇ ನೋಡುತ್ತ ನಿಂತಿದ್ದ. ಕಲ್ಯಾಣಿ ತಾನೇ ಕಾಫಿ ಎತ್ತಿಕೊಂಡು, ಒಂದು ಲೋಟ ಕೃಷ್ಣನಿಗೆ ಕೊಟ್ಟು ಇನ್ನೊಂದನ್ನು ತಾನು ಕುಡಿದಳು.

" ನೀವೂ ಮಂಗಳೂರಿನವರೇ...."

" ಹ್ಞೂ....ನಿನ್ನ ಊರು....? "

" ಮೂಡಬಿದಿರೆ."

" ಇಲ್ಲಿಗೆ ಬಂದು ಎಷ್ಟು ವರ್ಷವಾಯಿತು. ? "

" ಆಗಲೇ ಮೂರು ವರ್ಷಗಳಾದುವು....ನೀವು ಅಲ್ಲಿ ಮೇಸ್ಟ್ರೇನು ಸಾರ್ ? "

" ಹ್ಞೂ....ಅಂದ್ರೆ ಸ್ಕೂಲಿನಲ್ಲಲ್ಲ "

" ಮತ್ತೆ....? "

" ಅವರು ಸಂಗೀತ ಮೇಸ್ಟ್ರು...."

" ಇವರು ಡ್ಯಾನ್ಸ್ ಮೇಸ್ಟ್ರು " ಎಂದು ಕಲ್ಯಾಣಿಯ ಕಡೆಗೆ ಕೈ ತೋರಿಸಿ ಕೃಷ್ಣರಾವ್ ಉತ್ತರಿಸಿದ.

ಆಶ್ಚರ್ಯದಿಂದ ಹುಡುಗ ಕಣ್ಣರಳಿಸಿ ಸಂತೋಷದಿಂದ ನಕ್ಕ. ಬಾಯಿಂದ ಗಾಳಿ ಒಳಗೆಳೆದುಕೊಳ್ಳುವವನಂತೆ ಅವನ ಬಾಯಿ ತೆರೆದಿತ್ತು; ಎದೆ ಉಬ್ಬಿತು.

" ಏನು ಬಂದಿರಿ ಸಾರ್ "

" ಮೈಸೂರು ನೋಡೋಣಾಂತ."

" ಇಲ್ಲೇನು ಡ್ಯಾನ್ಸು...."

" ಇಲ್ಲಪ್ಪ. ಹಾಗೇನು ಇಲ್ಲ. ನೋಡು....ಬಿಸಿ ನೀರು ಸಿದ್ಧಪಡಿಸಲು ಹೇಳು–ಸ್ನಾನಕ್ಕೆ " ಎಂದು ಅವನ ಗಮನವನ್ನು ಕೃಷ್ಣ ಬೇರೆ ಕಡೆಗೆ ತಿರುಗಿಸಿದ. ಹುಡುಗ ಗ್ಲಾಸುಗಳನ್ನು ಎತ್ತಿಕೊಂಡು ಹೊರಟುಹೋದ.

ಮಾಣಿ ನೀರಿನ ವ್ಯವಸ್ಥೆಯಾಗಿಯೆಂದು ತಿಳಿಸಲು ಬಂದ. ಅವನಿಗೆ ಈ ಕಲಾವಿದರ ಪರಿಚಯಮಾಡಿಕೊಳ್ಳಬೇಕೆಂಬ ಕುತೂಹಲ ಬೆಳೆದಿತ್ತು. ತಾನೇ ಅವನಿಗೆ ಬೇಕಾದುದನ್ನೆಲ್ಲ ಒದಗಿಸಲು ಮುಂದಾಗಿದ್ದ. ಯಾವುದೋ ನೆಪಹೇಳಿ ಮಹಡಿಯನ್ನೇರಿ ಬರುತಿದ್ದ. ಬಿಸಿನೀರು ವ್ಯವಸ್ಥೆಗೊಳಿಸುವ ಬಾಲಪ್ಪ ಅದೆಲ್ಲವನ್ನೂ ಮಾಡುತ್ತಾನೆ. ಮಾಣಿ ಆ ಕೆಲಸಕ್ಕೆ ಹೋಗಬೇಕಾಗಿರಲಿಲ್ಲ, ಆದರೂ ಅವನ ಉತ್ಸಾಹ ಅವನನ್ನು ಮಹಡಿ ಏರುವಂತೆ ಮಾಡುತಿತ್ತು.

ಕಲ್ಯಾಣಿ ಸ್ನಾನ ಪೂರೈಸಿಕೊಂಡು ಬಂದಳು. ಕೃಷ್ಣರಾಯ ಸ್ನಾನಕ್ಕೆ ಎದ್ದೊಡನೆಯೇ ಕೋಣೆಯ ಬಾಗಿಲು ಮುಚ್ಚಿ ಅಲಂಕಾರ ಮಾಡಿಕೊಳ್ಳಲು ಉಡುಗೆ ಬದಲಿಸಲು ಮೊದಲು ಮಾಡಿದಳು.

ಕೃಷ್ಣ ಸ್ನಾನ ಮುಗಿಸಿ, ಮಾಣಿಗೆ ತಿಂಡಿ, ಕಾಫಿ ತರುವಂತೆ ತಿಳಿಸಿ, ಕೋಣೆಯ ಕಡೆಗೆ ಬಂದ. ಇನ್ನೂ ಬಾಗಿಲು ಮುಚ್ಚಿಯೇ ಇತ್ತು. ಕದವನ್ನು ತಟ್ಟಿದ.

ಕಲ್ಯಾಣಿ ಬಾಗಿಲು ತೆಗೆದು ನಗುತ್ತ, ನಿಂತುಕೊಂಡಳು.

" ಇನ್ನೂ ಸಿದ್ಧವಾಗಿಲ್ಲವೇನು ? "

" ಆಗುತ್ತಿದ್ದೇನೆ. ಬಟ್ಟೆ ಬದಲಿಸಿ ಕನ್ನಡಿ ನೋಡುತ್ತ ಏನೋ ನೆನೆ

ಪಾಯಿತು. ಹಾಗೇ ಎಲ್ಲವನ್ನೂ ಮರೆತುಬಿಟ್ಟೆ."

"ಸರಿ....ಸರಿ.... ಮೈಮರೆಯುವುದೇ ನಿನ್ನ ಪರಿಪಾಟ. ಹೆರಳು ಹಾಕು. ಕಾಫಿ ತರಲು ಹೇಳಿದ್ದೇನೆ. ತಿಂಡಿ ತಿಂದು ಎಲ್ಲಾದರೂ ಸುತ್ತಾಡಿಕೊಂಡು ಬರೋಣ.

ಬಿಸಿಲುಗುದುರೆಯ ಕಂಡು ಕಣ್ಣು ಸೋತವರಿಂದು
ಕಂಡ ಕನಸನೆಲ್ಲ ನಂಬಿದವರುಂಟು....
ಇಂಥ ಕನಸಿನ ರಾಜ್ಯ-ಕರ್ಮ ಜೀವನದಲ್ಲಿ
ನೆನಸಾದುದಿಲ್ಲ ಬರಿ ಕನಸಾದುದುಂಟು....

"ಮಾತೆತ್ತಿದರೆ ಹಾಡು ಸಂಗೀತ....ಸರಿ....ಇನ್ನೊಮ್ಮೆ ಹಾಡಿ...." ಎಂದು ಕಲ್ಯಾಣಿ ಹೆರಳುಹಾಕಿಕೊಳ್ಳಲಾರಂಭಿಸಿದಳು. ಕೃಷ್ಣ ಅದೇ ಹಾಡನ್ನು ಹಾಡುತ್ತ ಬಟ್ಟೆ ಬದಲಾಯಿಸಿ, ಕ್ರಾಪ್ ಬಾಚುತ್ತಿದ್ದ. ಕಲ್ಯಾಣಿ ಹಾಡನ್ನು ತಾನೂ ಪ್ರತಿಧ್ವನಿಸುತ್ತಿದ್ದಳು.

ಮಾಣಿ ಇಡ್ಲಿ, ಬೆಣ್ಣೆ, ಒಡೆ, ಕಾಫಿ ನೀರುಗಳನ್ನೆಲ್ಲ ಟ್ರೇಯಲ್ಲಿ ತಂದು ಮೇಜಿನ ಮೇಲಿಟ್ಟು ಹೊರಟುಹೋದ. ಕೃಷ್ಣ ಬಾಗಿಲನ್ನು ಸರಿಸಿ ಬಂದು, ಮಂಚದ ಮೇಲೆ ಕುಳಿತುಕೊಂಡ.

"ಕಾಫಿ ಬಂದಿದೆ. ಬೇಗ....ತಣ್ಣಗಾಗುತ್ತೆ......"

ತನ್ನ ರೂಪ, ಮೈಕಟ್ಟಿಗೆ ಒಪ್ಪುವ ಸೀರೆ. ಅದಕ್ಕೆ ಕಳೆಯೇರಿಸುವ ಕುಪ್ಪಸ. ಹಣೆಗೆ, ಕುಂಕುಮದ ಬೊಟ್ಟು. ಹಿಂದಿನ ದಿನ ಪೇಟೆಯಿಂದ ತಂದಿದ್ದ ಹೂವನ್ನು ಮುಡಿಯಲ್ಲಿ ಮುಡಿದುಕೊಂಡು, ತನ್ನ ಸೌಂದರ್ಯವನ್ನು ತಾನೇ ಕನ್ನಡಿಯಲ್ಲಿ ನೋಡಿಕೊಂಡು ಕಲ್ಯಾಣಿ ಕೃಷ್ಣನೆಡೆ ತಿರುಗಿ ಓರೆ ನೋಟ ಬೀರಿದಳು.

ಕೈಯಲ್ಲಿದ್ದ ಒಡೆಯನ್ನು ಹಾಗೇ ಹಿಡಿದುಕೊಂಡು ಎದ್ದು ನಿಂತ ಕೃಷ್ಣ ಅವಳನ್ನು ಬರಸೆಳೆದು ಅಪ್ಪಿಕೊಂಡ. ಹಾಗೇ ಅವಳನ್ನೆತ್ತಿಕೊಂಡು ತನ್ನ ಮಂಚದ ಮೇಲೆ ಕುಳ್ಳಿರಿಸಿಕೊಂಡ. ಅವನ ಹೃದಯ ಹರ್ಷೋನ್ಮಾದದಿಂದ ನರ್ತಿಸುತ್ತಿತ್ತು.

ಎಲ್ಲ ಸವಿಗಳ ಮೀರಿಸುವ ನಿನ್ನ ಅಧರ ಸವಿ
ಎಷ್ಟೊ ಹೃದಯುವ ಬಿರಿದ ನಿನ್ನ ಕಣ್ಣು,

ನನ್ನೆಡೆಗೆ ಸರಿದು ನನ ಮೊಗದ ಮೇಲಕೆ ಮೂಡಿ
ಕಾಮನನು ಎಚ್ಚರಿಸಿತಲ್ಲೆ ಹೆಣ್ಣು !

ಅವನ ಮುಖದ ಮೇಲೆ ಮುಖವಿಟ್ಟು, ಪ್ರತಿ ಅಪ್ಪುಗೆಯಿಂದ ಕಲ್ಯಾಣಿ ತನ್ನ ಹರ್ಷವನ್ನು ವ್ಯಕ್ತಪಡಿಸಿದಳು.

ಉಪಾಹಾರ ಮುಗಿಯುವ ವೇಳೆಗೆ ಮಾಣಿ ಬಂದು ಬಾಗಿಲಲ್ಲಿ ನಿಂತ.

"ನೀವು ಸಿನಿಮಾ ಸೇರಲು ಬಂದಿದ್ದೀರೋ ಅಂತ ಯೋಚಿಸುತ್ತಿದ್ದೆ. ಅಷ್ಟೆ...." ಎಂದು ಮಾಣಿ ತಾನಾಗಿಯೇ ಮಾತು ಆರಂಭಿಸಿದ.

"ಸಿನಿಮಾ ಕಂಪೆನಿ ಇದೆಯೋ ಇಲ್ಲಿ." ಏನೂ ತಿಳಿಯದವನಂತೆ ಕೃಷ್ಣ ಪ್ರಶ್ನಿಸಿದ.

"ಹೌದು. ತ್ರಿಪುರ ಪಿಕ್ಚರ್ಸ್ ಅಂತ. ಅವರು ವೀರ ಬಭ್ರುವಾಹನ ಚಿತ್ರ ತೆಗೆಯುತ್ತಿದ್ದಾರೆ."

"ಎಷ್ಟು ದೂರವಿದೆ ಅವರ ಕಚೇರಿ."

"ಇಲ್ಲಿಂದ ಒಂದು ಮೈಲಾಗಬಹುದು."

"ನೀನು ಅಲ್ಲಿಗೆ ಹೋಗಿದ್ದೆಯಾ."

"ಹ್ಞಾ....ಒಮ್ಮೆ ಹೋಗಿದ್ದೆ. ನನಗೂ ಪಾರ್ಟುಮಾಡಬೇಕೆಂತ ಆಶೆ. ಹಾಗೇ ಹೋದೆ."

"ಏನು ಪಾರ್ಟು"

"ಏನಾದರೂ...."

"ಹಾಡು ಬರುತ್ತೆಯೋ—ಹಾಡು ನೋಡೋಣ."

"ಇಲ್ಲ...."

"ಡಾನ್ಸ್ ಕಲಿಯುತ್ತಿದ್ದೀಯಾ."

"ಇಲ್ಲ. ಎಲ್ಲ ಆಮೇಲೆ ಕಲಿಯುತ್ತೇನೆ. ಈಗ ಕಲಿಸುವವರೂ ಇಲ್ಲ. ಕಲಿಯಲು ಅವಕಾಶವೂ ಇಲ್ಲ."

"ಒಂದು ಉಪಕಾರ ಮಾಡುತ್ತೀಯಾ?"

"ಹೇಳಿ ಸಾರ್."

"ಒಂದು ಗಾಡಿ ಬರಹೇಳು."

"ಇಲ್ಲೇ ನಮ್ಮ ಹಿತ್ತಲಲ್ಲೆ ಇದೇ ಸಾರ್."

" ಸರಿ."

ಹುಡುಗ ಗಾಡಿ ಇದೆಯೋ ನೋಡಿ ಖಚಿತಮಾಡಿಕೊಳ್ಳಲು ರೂಮಿನಿಂದ ಹೊರಗೆ ನಡೆದ.

ಬಿಸಿಲುಗುದುರೆಯ ಕಂಡು ಕಣ್ಣು ಸೋತವರುಂಟು.

ಕಂಡ ಕನಸನ್ನೆಲ್ಲ ನಂಬಿದವರುಂಟು....

" ನಮ್ಮದೂ ಅದೇ ಬಾಳು. ಆದರೂ ನಂಬೋಣ–ಮುನ್ನಡೆಯೋಣ" ಎಂದು ಕಲ್ಯಾಣಿ ದನಿಗೂಡಿಸಿದಳು.

" ಇದು ಒಂದು ಒಳ್ಳೆಯದೇ ಆಯಿತು "

" ಏನು....ಕೆಟ್ಟದೇನೂ ಆಗಿಲ್ಲವಲ್ಲ...."

" ಕಂಪೆನಿಯ ವಿಚಾರ ತಿಳಿದುದು. ಈಗಲೇ ಆ ಕಡೆ ಹೋಗಿ ಬರೋಣ "

" ನಾವು ಕಂಪೆನಿಗೆ ಸೇರಲೆಂದೇ ಬಂದಿದ್ದೇವೆ ಅಂದರೆ ಎಡೆಯೇ ಇಲ್ಲ ಅಂದಾರು ಅಲ್ಲವೇ ?"

" ಅದಕ್ಕೆ ನೋಡಿ ಹೋಗೋಣಾಂತ ಬಂದಿದ್ದೇವೆ. ಮೈಸೂರು ನೋಡಿ ಕೆಲದಿನ ವಿಶ್ರಾಂತಿ ತೆಗೆದುಕೊಳ್ಳಲು ಬಂದವರು....ನಾವು " ಅಂತ ಅವರಿಗೆ ಖಚಿತ ಪಡಿಸಬೇಕು."

" ಅದೂ ಸರಿಯೆ...."

ಗಂಟೆ ಒಂಭತ್ತು ಕಳೆಯಿತು. ಹತ್ತು ಗಂಟೆಯ ವೇಳೆಗೆ ಅಲ್ಲಿಗೆ ತಲುಪಿದರೆ ಸಾಕೆಂದು ಇಬ್ಬರೂ ತಮ್ಮ ಬಟ್ಟೆ ಬರೆಗಳನ್ನು ಸರಿಪಡಿಸ ತೊಡಗಿದರು. ಅವಸರದಲ್ಲಿ ಎಲ್ಲವನ್ನೂ ಪೆಟ್ಟಿಗೆಯಲ್ಲಿ ತುರುಕಿದ್ದಾರೆ. ಈಗ ಅವುಗಳನ್ನು ವ್ಯವಸ್ಥಿತವಾಗಿ ಇರಿಸಬೇಕು ; ಮುಂದಿನ ಜೀವನದಲ್ಲಿ ಪುನಃ ಅಂಥ ಬಟ್ಟೆ ಬರೆ ಕೊಳ್ಳುವುದು ಸಾಧ್ಯವಾಗುತ್ತದೋ ಇಲ್ಲವೊ ಯಾರು ಬಲ್ಲರು ? ಅಥವಾ ಅದಕ್ಕೂ ಅಮೂಲ್ಯ ಬಟ್ಟೆಗಳನ್ನು ಕೊಳ್ಳುವುದು ಸಾಧ್ಯವಾದರೂ ಆಗಬಹುದು.

ಚಿತ್ರಲೋಕವನ್ನು ಪ್ರವೇಶಿಸಬೇಕು, ಅಲ್ಲಿನ ವಾತಾವರಣ ತಿಳಿಯಬೇಕು ಎಂದು ಆತುರಳಾದ ಕಲ್ಯಾಣಿ–ತಾನೇ–ಹೊತ್ತಾಯಿತೆಂದು ಎಚ್ಚರಿಕೆ ನೀಡಿದಳು. ಇಬ್ಬರೂ ಗಾಡಿ ಹತ್ತಿ ಚಾಮುಂಡಿಪುರಕ್ಕೆ ಹೊರಟರು.

ಕಲ್ಯಾಣಿಯ ಸುದ್ದಿ ಆಗಲೇ ಹೋಟಲಿನಲ್ಲೆಲ್ಲ ಹರಡಿತು, ಯಾರೋ ಡ್ಯಾನ್ಸರ್ ಬಂದಿದ್ದಾರೆ, ಗವಾಯಿ ಅವರ ಜತೆಗಿದ್ದಾರೆ, ಎಂಬ ವಾರ್ತೆ ಎಲ್ಲರ ಕಿವಿಯನ್ನೂ ಸೇರಿತ್ತು. ಅವರು ಮಹಡಿಯಿಂದಿಳಿದು ಕೆಳಗೆ ಬರುವಾಗ ಹೋಟಲಿನ ಕೆಲಸಗಾರರೆಲ್ಲರ ದೃಷ್ಟಿ ಅವರೆಡೆ ಹರಿದಿತ್ತು. ಅಂಗಳಕ್ಕಿಳಿದು, ಗಾಡಿ ಹತ್ತಿ ಹೊರಡುವಾಗ, ಆಗಲೇ ನಾಲ್ಕಾರು ಮಂದಿ ಮಾಣಿಗಳು ಹೋಟಲಿನ ಜಗಲಿ ಮೇಲೆ ನಿಂತು ಅವರನ್ನೇ ನೋಡುತಿದ್ದರು. ಕುತೂಹಲದಿಂದ ತೆರೆದ ಬಾಯಿ, ಕಣ್ಣುಗಳ ಜತೆಗೆ ಹರ್ಷದ ಛಾಯೆ ಅವರ ಮೊಗದಲ್ಲಿ ಮೂಡಿತ್ತು.

ನಾನು ಅತ್ಯಂತ ಸುಂದರಿಯಾಗಿದ್ದೇನೆ.

ಈ ಉಡುಗೆ ನನಗೆ ತುಂಬ ಒಪ್ಪುತ್ತೆ.

ನಾನು ಖ್ಯಾತ ನರ್ತಕಿ–ನನ್ನ ಕೀರ್ತಿ ನಾಡಿನ ಎಲ್ಲೆಡೆಗೂ ಹರಡಿದೆ.

ಎಲ್ಲೆಲ್ಲೂ ಜನ ನನ್ನನ್ನೇ ನೋಡುತ್ತಾರೆ, ಆದರಿಸುತ್ತಾರೆ, ಸ್ವಾಗತಿಸುತ್ತಾರೆ.

ಕಲ್ಯಾಣಿಯ ಬಗೆಗೆ ಜನ ಬೀರುತ್ತಿದ್ದ ದೃಷ್ಟಿ ಅವಳಲ್ಲಿ ವಿಚಿತ್ರ ಬದಲಾವಣೆಗಳನ್ನು ತರುತ್ತಿತ್ತು. ಹೀಗೆ ಜನರು ತನ್ನನ್ನೇ ನೋಡುತ್ತಿದ್ದಾರೆ– ಎಂಬ ಭೀತಿಯು ಮೋಡ ಸುಳಿದು ಅಳಿದೊಡನೆಯೇ ತಾನು.....ತನ್ನ ರೂಪ– ತನ್ನ ಸೌಂದರ್ಯ....ತನ್ನ ಕಲೆ....ಎಂಬ ಅಹಂ....ಗಳು ಅವಳನ್ನು ಕಾಡುತಿದ್ದವು. ತನ್ನ ಬಾಳು ಹಸನಾಗುವುದು, ತಾನು ಎಲ್ಲರ ಆದರ್ಶ ನಟಿಯಾಗುತ್ತೇನೆ ಎಂದವಳ ಮನ ಉಬ್ಬುತ್ತಿತ್ತು. ಇದುವರೆಗೂ ಜನತೆಯ ನೋಟದ ಕಡೆಗೆ ಗಮನವೀಯುದಿದ್ದ ಅವಳಿಗೆ ಈಗ ಅದೇ ಯೋಚನೆಯಾಯಿತು. ವಿಚಿತ್ರಾನುಭವವಾಯಿತು.

ಕೃಷ್ಣರಾಯನ ಮುಂದಿದ್ದ ಪ್ರಶ್ನೆ—ಜೀವನ ಸುಗಮವಾಗಿಸುವುದು. ಕೀರ್ತಿಯ ಕೈಲಾಸವನ್ನು ಅವನು ಕಲ್ಯಾಣಿಯ ಮುಂದಿರಿಸಿದ್ದ. ಭವಿಷ್ಯದ ಸುಖದ ಕನಸನ್ನು ಅವಳಿಗೆ ತೋರಿದ್ದ. ಅವೆಲ್ಲ ಅವಳಿಗೆ ಧೈರ್ಯವಿತ್ತು ಅವಳ ಮನಸ್ಸಿನಲ್ಲಿ ನಿರಾಶೆ ಮೂಡದಂತೆ ತಡೆಯುವುದಕ್ಕಾಗಿ. ಆದರೆ, ಇರುಳಳಿದು ಬೆಳಗಾಗುವುದರೊಳಗಾಗಿ ನಾವು ಕುಬೇರರಾಗುತ್ತೇವೆ, ಎಲ್ಲ ದುಃಖ ನೀಗಿ ಅನಂತ ಸುಖಿಗಳಾಗುತ್ತೇವೆ ಎಂಬ ನಂಬುಗೆ ಅವನಿಗೂ ಇರ

ಲಿಲ್ಲ. ಚಿತ್ರದಲ್ಲಿ ಕೆಲಸ ಸಿಗಲಿ ಇಲ್ಲದಿರಲಿ, ಎಲ್ಲಾದರೂ ಹೋಗಿ ಸುಖ ದಲ್ಲಿ ಬಾಳೋಣ. ಸ್ವತಂತ್ರ ವಾತಾವರಣದಲ್ಲಿ ನಲಿಯೋಣ ಎಂಬುದೇ ಅವನ ಗುರಿ. ತಾನು ಸಂಗೀತಪಾಠ ಹೇಳಿ ಸುಖಜೀವನ ನಿರ್ವಹಿಸಬಲ್ಲೆ. ಕಲ್ಯಾಣಿ ನೃತ್ಯ ಹೇಳಿಕೊಡುತ್ತಾಳೆ ಎಂದರೆ ಎಲ್ಲೂ ವಿದ್ಯಾರ್ಥಿಗಳಿಗೆ ಕೊರತೆ ಬರಲಾರದು. ಇಬ್ಬರೂ ಸುಖವಾಗಿ ತೃಪ್ತಜೀವನ ನಡೆಸಿ ಸಂಸಾರ ಸಾಗಿ ಸಲು ಕಷ್ಟವಾಗಲಾರದು ಎಂದವನು ತನ್ನ ಬಯಕೆಗೆ ಒಂದು ಮಿತಿಯನ್ನು ಇರಿಸಿಕೊಂಡಿದ್ದ. ನಾಲ್ಕು ದಿನ ಹೋಟೇಲಿನಲ್ಲಿದ್ದು, ಮನದ ಬೇಗುದಿ ಯನ್ನು ಮರೆತು, ಎಲ್ಲಾದರೂ ಮನೆ ಹುಡುಕಿ, ಸಂಸಾರಹೂಡುವುದು ಅವನ ಮುಂದಿನ ಯೋಚನೆ. ಅನಂತರದ ಜೀವನ ಹೇಗೋ ಸಾಗುತ್ತದೆ.

ಗಾಡಿ ತ್ರಿಪುರ ಪಿಕ್ಚರ್ಸ್ ಸಂಸ್ಥೆಯ ಕಚೇರಿಯ ಮುಂದೆ ನಿಂತಿತು. ಇಬ್ಬರೂ ಕೆಳಗಿಳಿದರು.

ಕಚೇರಿಯ ಬಾಗಿಲಲ್ಲಿ ಕಾವಲಿದ್ದ ಹುಡುಗ ಅವರೆಡೆ ಬಂದು ವಿಚಾರಿ ಸಿದ. ಕೃಷ್ಣರಾಯ ತನ್ನ ಗುರುತು-ಚೀಟಿಯ ಅಡಿಯಲ್ಲಿ ಕಲ್ಯಾಣಿಯ ಹೆಸರನ್ನು ಬರೆದು ಹುಡುಗನ ಕೈಗಿತ್ತ.

" ಗಾಯನಾಚಾರ್ಯ ಕೃಷ್ಣರಾವ್ "

" ನಾಟ್ಯಸರಸ್ವತಿ ಕಲ್ಯಾಣಿ "

ಗುರುತು ಚೀಟಿಯನ್ನೆತ್ತಿ, ಒಳಗೆ ಆಫೀಸಿಗೆ ತಿಳಿಸಿದ್ದ ಹುಡುಗ ಕೂಡಲೇ ಬಂದು ಅವರನ್ನು ಕರೆದೊಯ್ದ.

ಕಚೇರಿಯಲ್ಲಿ ನಾರಾಯಣಪ್ಪನೂ ನಿರ್ದೇಶಕ ಸ್ವಾಮಿಯೂ ಕುಳಿ ತಿದ್ದರು. ಪರಮಶಿವ ಅವರಿಗೆ ಏನೇನೋ ವಿವರಣೆ ಕೊಡುತ್ತಿದ್ದ. ಇಬ್ಬರೂ ಒಳನಡೆದು ನಮಸ್ಕರಿಸಿದರು ಕುಳಿತುಕೊಳ್ಳುವಂತೆ ನಾರಾಯ ಣಪ್ಪ ಹೇಳುತ್ತ, ಕಲ್ಯಾಣಿಯನ್ನೇ ನೋಡತೊಡಗಿದ. ಒಮ್ಮೆ ತಾನೆಲ್ಲಿ ದ್ದೇನೆ ಎಂಬುದನ್ನೇ ಅವನು ಮರೆತಂತಿತ್ತು. ಫಕ್ಕನೆ ಜಾಗ್ರತನಾಗಿ ಹುಡು ಗನನ್ನು ಕರೆದು ಕಾಫಿ ತರುವಂತೆ ಆಜ್ಞೆ ಇತ್ತ.

ನಾರಾಯಣಪ್ಪ ಹಸನ್ಮುಖದಿಂದ ಅವನನ್ನೇ ನೋಡುತ್ತಲಿದ್ದ. ಅವನಿ ಗೇಕೋ ಮಾತೇ ಹೊರಡಲಿಲ್ಲ. ಡೈರೆಕ್ಟರ್ ಸ್ವಾಮಿಯೇ ಮಾತನಾಡ ಬೇಕಾಯಿತು.

" ಏನು ಬಂದಿರಿ.... ಏನಾಗಬೇಕಿತ್ತು ? "

" ಮೈಸೂರಿಗೆ ಬಂದಿದ್ದೇವೆ. ತಮ್ಮ ಸಂಸ್ಥೆಯ ವಿಚಾರ ತಿಳಿಯಿತು. ಹಾಗೇ ನೋಡಿಹೋಗೋಣವೆಂದು ಬಂದೆವು. ಸ್ಟುಡಿಯೋ ಕೂಡಾ ನೋಡಬೇಕೆಂಬ ಬಯಕೆ. "

" ಅಂದರೆ.... ತಮ್ಮ ಊರು...."

" ಮಂಗಳೂರು.... ಕನ್ನಡ ಕಲಾಮಂಡಲದ ಕಲಾವಿದರು. ಈಕೆ ನಾಟ್ಯಸರಸ್ವತಿ ಕಲ್ಯಾಣಿ. ನಾನು ಆ ನೃತ್ಯಮೇಳದ ಸಂಗೀತ ನಿರ್ದೇಶಕ."

" ತುಂಬ ಸಂತೋಷ. "

" ತಮ್ಮ ಹೆಸರು ಎಲ್ಲೋ ಕೇಳಿದ ಹಾಗಿದೆ. ನಿಮ್ಮ ನೃತ್ಯಮೇಳ ಇಲ್ಲಿಗೂ ಬಂದಿತ್ತು. ನಾನೂ ನೋಡಿದ್ದೆ. ವಿಜಯಕುಮಾರ್ ಅಂತ...." ಎಂದು ಪರಮಶಿವ ಮಾತೆತ್ತಿದ.

" ಹೌದು. ಅವರು ಕಲಾಮಂಡಲದಲ್ಲಿ ಗುರುಗಳು. ಅದರ ಒಡೆಯರು. "

" ತುಂಬ ಅದ್ಭುತವಾಗಿತ್ತು ಅವರ ನೃತ್ಯ. "

" ತಾವು ಯಾವ ನೃತ್ಯಮಾರ್ಗ ಬಲ್ಲಿರಿ...." ಸಾಮಿ ಕುತೂಹಲಿಯಾಗಿ ಪ್ರಶ್ನಿಸಿದ.

" ಮುಖ್ಯವಾಗಿ ಭರತನಾಟ್ಯ. ಜತೆಗೆ ಕಥಕ್, ಮಣಿಪುರಿ, ಮೋಹಿನಿ ಆಟಗಳನ್ನು ಕಲಿತಿದ್ದೇನೆ. " ಎಂದು ಕಲ್ಯಾಣಿ ಅವನ ಸಂದೇಹವನ್ನು ಬಗೆಹರಿಸಿದಳು.

" ತಮ್ಮ ಚಿತ್ರದ ಆರಂಭವಾಗಿದೆಯೋ "

" ಆಗಿದೆ. ಆಗಲೇ ಬಹಳವಾಯಿತು. ನೀವೂ ಬನ್ನಿ.... ಚಿತ್ರವೆತ್ತುವದನ್ನು ನೋಡಲು. " ಎಂದು ನಾರಾಯಣಪ್ಪ ತಾನೇ ಆಮಂತ್ರಣವಿತ್ತ. ಅವರಿಬ್ಬರ ಕಡೆಗೂ ಅವನ ಮುಖ ತಿರುಗಿತ್ತಾದರೂ, ಕಣ್ಣುಗಳು ಮಾತ್ರ ಕಲ್ಯಾಣಿಯ ಸೌಂದರ್ಯ ಸವಿಯುವುದರಲ್ಲೇ ನಿರತವಾಗಿದ್ದುವು.

ಹುಡುಗ ಕಾಫಿ ತಂದಿರಿಸಿದ. ನಾರಾಯಣಪ್ಪ ತಾನೇ ಒಂದು ಕಪ್ ತೆಗೆದು ಕಲ್ಯಾಣಿಯ ಮುಂದಿಟ್ಟ. ಸಾಮಿ ಇನ್ನೊಂದನ್ನು ಕೃಷ್ಣರಾಯನ ಮುಂದಿಟ್ಟು, ತನ್ನ ಪಾಲಿನ ಕಾಫಿಯನ್ನೆತ್ತಿಕೊಂಡ.

"ಇವರು ಕಂಪೆನಿಯ ಪಾಲುಗಾರರಲ್ಲಿ ಒಬ್ಬರು....ನಾರಾಯಣಪ್ಪ ಅಂತ. ದೊಡ್ಡ ಜಮೀನುದಾರರು, ಕಲಾಪ್ರೇಮಿಗಳು. ಅವರು ನಮ್ಮ ಸಂಸ್ಥೆಯ ಮ್ಯಾನೇಜರ್ ಪರಮಶಿವ." ಸ್ವಾಮಿಯ ಮಾತು ಮುಗಿಯು ವದರೊಳಗಾಗಿಯೇ ಪರಮಶಿವ ಹೇಳಿದ—"ಇವರು ನಮ್ಮ ಚಿತ್ರದ ಡೈರೆಕ್ಟರ್ ಸಾಮಿ."

ಪರಸ್ಪರ ಪರಿಚಯದೊಡನೆ ಕಾಫಿ ತಟ್ಟೆಗಳೂ ಖಾಲಿಯಾದುವು.

ರಾಮಸ್ವಾಮಿಗಳು ಬಂದಿರುವ ವಿಚಾರವನ್ನು ಹುಡುಗ ತಿಳಿಸುತ್ತ, ಕಾಫಿ ತಟ್ಟೆಗಳನ್ನು ಎತ್ತಿದ.

"ಅವರನ್ನು ಬರ ಹೇಳು. ಅವರು ನಮ್ಮ ಚಿತ್ರದ ಹಾಡುಗಳನ್ನು ಬರೆಯುತ್ತಾರೆ. ತುಂಬ ಹೆಸರಾಂತ ಹರಿದಾಸರು, ಸಂಸ್ಕೃತ ಪಂಡಿತರು. ಕಥೆ ಬರೆಯಲು ಅವರ ಸಹಾಯವಿದೆ. ಭರತನಾಟ್ಯದಲ್ಲಿ ತುಂಬ ಆಸಕ್ತಿ"

ರಾಮಸ್ವಾಮಿಗಳು ಕಚೇರಿಯೊಳಕ್ಕೆ ಬಂದರು. ನಾರಣಪ್ಪ ತಾನೇ ಎದ್ದು ಅಥಿತಿಗಳನ್ನು ಪರಿಚಯಮಾಡಿ ಕೊಡಿಸಿದ. ಇಬ್ಬರೂ ಎದ್ದು ನಿಂತು ನಮಸ್ಕರಿಸಿ ಕುಳಿತುಕೊಂಡರು. ಅವರನ್ನು ಕುಳ್ಳಿರಹೇಳಿ ಶಾಸ್ತ್ರಿಗಳೂ ಕುಳಿತುಕೊಂಡರು.

"ತಾವಿಲ್ಲೇ ಕೆಲವು ದಿನ ಇರುತ್ತೀರಾ ? ನಿಮ್ಮ ಮಾಸ್ಟರ್ ಬಗೆಗೆ ತುಂಬ ಕೇಳಿದ್ದೇನೆ. ಅವರು ಹುಟ್ಟು ಕಲಾವಿದ. ಕಲೆಗಾಗಿ ಸರ್ವಸ್ವವನ್ನೂ ತ್ಯಜಿಸಿದ ತಪಸ್ವಿ. ನೀವೂ, ಅವರು ಹಿಂದೆ ಇತ್ತ ಬಂದಾಗ...."

"ಬಂದಿದ್ದೆ ಸ್ವಾಮಿ"

"ಹ್ಞಾ....ಈಗ ತಿಳಿಯಿತು....ನೀವು...ಯಾವುದೋ ಪುರಂದರರ ಕೀರ್ತನೆಗೆ ಅಭಿನಯ ಹಿಡಿದಿರಿ....ಮುದುಕ....ಮರವೆ ಹೆಚ್ಚು....ಕ್ಷಮಿಸಿ....ಹ್ಞಾ ....ಈಗ ತಿಳಿಯಿತು....ಕೂಸನು ಕಂಡಿರಾ....ಅಲ್ಲವೇ ? ಈಗಲೂ ಆ ನೃತ್ಯ ಕಣ್ಣಿಗೆ ಕಟ್ಟಿದಂತೆ ಇದೆ. ಆಗಲೇ...."

"ಮೂರು ವರ್ಷವಾಯಿತು ನಾವು ಇತ್ತ ಬಂದು."

"ಹೌದು....ಒಳ್ಳೆಯದಮ್ಮ...."

"ಎಷ್ಟು ದಿನವಿರುತ್ತೀರಿ ?" ಎಂದು ಪರಮಶಿವ ಪ್ರಶ್ನಿಸಿದ.

"ಇನ್ನೂ ಹದಿನೈದು ದಿನ ಇರಬೇಕೆಂಬ ಯೋಚನೆ."

ಪರಮಶಿವ ನಾರಣಪ್ಪನ ಕಡೆ ನೋಡಿದ. ನಾರಣಪ್ಪ ಸ್ವಾಮಿಯನ್ನು ನೋಡಿದ. ಸ್ವಾಮಿ ಶಾಸ್ತ್ರಿಗಳನ್ನು ನೋಡುತ್ತಿದ್ದ.

"ಶಾಸ್ತ್ರಿಗಳೇನೋ ಸೂಚನೆ ಇತ್ತಿದ್ದರು." ಎಂದ ಸ್ವಾಮಿ.

"ಹೌದು....ಅದು ಸುಲಭವಾಯಿತು. ಅವರು ಒಪ್ಪಿದರೆ ಚಿತ್ರದ ಕಳೆ ಕಟ್ಟುತ್ತೆ. ಕಲೆಗೂ ಮಾನ ಬರುತ್ತೆ."

ಕೃಷ್ಣ ಮಾತಿನ ಅರ್ಥಮಾಡಿಕೊಂಡ.

"ನೀವು ನಮ್ಮ ಚಿತ್ರದಲ್ಲಿ ಒಂದು ಡ್ಯಾನ್ಸ್ ಮಾಡುತ್ತೀರಾ ಅಂತ ಕೇಳೋಣಂತ...." ಎಂದ ನಾರಣಪ್ಪ.

"ಚಿತ್ರ ಯಾವುದು...."

"ವೀರ ಬಬ್ರುವಾಹನ. ಅವನ ಆಸ್ಥಾನದ ಸೆಟ್ಟಿಂಗ್ಸ್ ಹಾಕಿದ್ದೇವೆ. ಅದ್ಭುತವಾಗಿದೆ ಆ ಅರಮನೆ. ಅಲ್ಲಿ, ಬಬ್ರುವಾಹನನ ಆಸ್ಥಾನದಲ್ಲಿ ಒಂದು ನೃತ್ಯ."

"ಅದು ಕಲಾಪೂರ್ಣವಾಗಿರಬೇಕು–ಪೂರ್ಣ ಭರತನಾಟ್ಯವಾಗಿರ ಬೇಕೂಂತ ಶಾಸ್ತ್ರಿಗಳು ಹಟ ಹಿಡಿದಿದ್ದಾರೆ" ಎಂದು ಪರಮಶಿವ ನಕ್ಕ.

"ನಮಗೆ ಈ ಚಿತ್ರ ಪ್ರಪಂಚ ಹೊಸದು. ಅನುಭವವಿಲ್ಲ."

"ಅದೇನೂ ದೊಡ್ಡದಲ್ಲ. ನಮಗೆ ಮೂರು ನಿಮಿಷ ಅಥವಾ ಆರು ನಿಮಿಷದ ನೃತ್ಯ ಸಾಕು."

"ಹಿನ್ನೆಲೆ...."

"ಅದಕ್ಕಾಗಿ ಶಾಸ್ತ್ರಿಗಳೇ ಯಾವುದೋ ಶ್ಲೋಕ ಎತ್ತಿಕೊಡುತ್ತಾರೆ. ಅದಕ್ಕೆ ಸರಿಯಾಗಿ ಅಭಿನಯ, ನೃತ್ಯ ಇರಬೇಕು"

"ಯೋಚಿಸಿ ಹೇಳುತ್ತೇನೆ."

"ನಮಗೆ ನಾಲ್ಕು ದಿನಗಳೊಳಗಾಗಿ ಆ ನೃತ್ಯ ಸಿದ್ಧವಾಗಬೇಕು. ಅದಕ್ಕಾಗಿ ಒತ್ತಾಯ."

"ಒಪ್ಪಿಬಿಡಿ. ನಾಳೆಯಿಂದಲೇ ಅಭ್ಯಾಸ ಆರಂಭಿಸಿ. ಇಲ್ಲೇ ಕಂಪೆನಿ ಮನೆಯಲ್ಲಿ ಬೇಕಾದರೂ ಇರಬಹುದು. ಎಲ್ಲಾ ವ್ಯವಸ್ಥೆ ಮಾಡಿಕೊಡು ತ್ತೇನೆ." ಎಂದು ಮುಗುಳುನಗೆ ನಗುತ್ತ ಉತ್ಸಾಹದಿಂದ ನಾರಣಪ್ಪ

ಒತ್ತಾಯ ಪಡಿಸಿದ. ಹೇಗಾದರೂ ಮಾಡಿ ಅವಳನ್ನು ಕಂಪೆನಿಗೆ ಸೇರಿಸಿ ಕೊಳ್ಳಬೇಕೆಂಬ ಆಗ್ರಹ ಅವನದು.

ಸಾಮಿ ಮೆಲ್ಲನೆ ಎದ್ದು, ನಾರಣಪ್ಪನಿಗೂ ಸನ್ನೆಮಾಡಿ, "ಬಂದೆ" ಎಂದು ಹೇಳಿ ಹೊರಗಡೆ ನಡೆದ. ಇಬ್ಬರೂ ಏನೋ ಮಾತನಾಡಿಕೊಂಡರು. 'ಚಿತ್ರಕ್ಕೆ ಕಳೆ ಕಟ್ಟುತ್ತೆ. ಅವಳ ಹೆಸರನ್ನು ಜಾಹೀರಾತಿನಲ್ಲಿ ಸೇರಿಸಿದರೆ ಬೆಲೆ ಬರುತ್ತೆ' ಎಂದುದಷ್ಟು ಮಾತ್ರ ಕೇಳಿಸಿತು.

ಇಬ್ಬರೂ ಒಳಗಡೆ ಬಂದರು.

"ಶಾಸ್ತ್ರಿಗಳೇ.... ಶ್ಲೋಕ ಸಿದ್ಧವಿದೆಯೇ?"

ಶಾಸ್ತ್ರಿಗಳು ಶ್ಲೋಕವನ್ನು ನಾರಣಪ್ಪನ ಕೈಗಿತ್ತರು. ಆತ ಅದನ್ನು ಕೃಷ್ಣರಾಯನ ಕೈಗಿತ್ತ. ಅವನು ಅದನ್ನು ಓದಿದ. ಕಲ್ಯಾಣಿ ಏನೋ ಅನ್ನಬೇಕೆಂದು ಬಾಯಿತೆರೆದಾಗ ಆತ ತಡೆದ.

"ಆಗಲಿ ಶಾಸ್ತ್ರಿಗಳೇ. ಇದೇನೂ ದೊಡ್ಡದಲ್ಲ."

"ಅಂದರೆ ವ್ಯವಹಾರದ ವಿಚಾರ ಮಾತನಾಡೋಣವೇ? ಕನ್ನಡ ಚಿತ್ರರಂಗದ ಕತೆ ನಿಮಗೆ ತಿಳಿದೇ ಇದೆ. ಎಲ್ಲವೂ ಅಲ್ಪ ಖರ್ಚಿನಲ್ಲಿ ಮುಗಿಯಬೇಕು."

"ನೀವು ಕನ್ನಡನಾಡಿನಲ್ಲೆಲ್ಲ ಕೀರ್ತಿಗಳಿಸಿದ ನರ್ತಕಿ. ತುಂಬ ಕಲಿತಿದ್ದೀರಿ. ತಮ್ಮ ಸ್ಥಾನಕ್ಕೆ ತಕ್ಕಂತೆ...."

"ನಿಜ.... ಪ್ರತಿಫಲ ಕೊಡುವುದು ಕಷ್ಟ...."

"ನಾವು ಈ ರಂಗಕ್ಕೆ ಅಪರಿಚಿತರು. ಮೊದಲಾಗಿ ಚಿತ್ರರಂಗಕ್ಕೆ ಕಾಲಿಡುವುದೇ ನಮಗೆ ಮನಸ್ಸಿಲ್ಲ. ಆದರೂ ತಮ್ಮ ವಿಶ್ವಾಸಕ್ಕೆ ಪಾತ್ರರಾಗಿ ಹಾಗೆ ಈ ರಂಗವನ್ನು ಪ್ರವೇಶಿಸಬೇಕಾದಲ್ಲಿ ಹಾಗೂ ಆಗಲಿ—ಅಷ್ಟೆ."

"ಅದೂ ನಿಜ. ನಮ್ಮಿಂದಾದ ಸಹಾಯ ಮಾಡೋಣ. ಕನ್ನಡ ಚಿತ್ರಕಲಾಪ್ರಪಂಚ ಮುನ್ನಡೆಯುವದಾದಲ್ಲಿ ನಮ್ಮ ಬೆಂಬಲವಿಲ್ಲ ಎಂಬ ಮಾತೇಕೆ ಬರಬೇಕು. ಎಂತಲೇ ನಾರಾಯಣಪ್ಪನವರೂ ರುದ್ರಪ್ಪನವರೂ ಅಂದ ಮಾತಿಗೆ ಒಪ್ಪಿ ನಾನೂ ಬಂದಿದ್ದೇನೆ. ಎಲ್ಲರೂ ಸಹಕರಿಸಿದರೇನೇ ಈ ಕೈಗಾರಿಕೆ ತಾನೆ" ಎಂದರು ಶಾಸ್ತ್ರಿಗಳು.

"ಒಂದೇ ನೃತ್ಯ ಸಾಕು. ತಮ್ಮ ಅಭಿಪ್ರಾಯ ತಿಳಿದರೆ."

" ಆ ಬಗೆಗೆ ನಾನೇನೂ ಹೇಳಲಾರೆ. ನೀವು ಅಭಿಪ್ರಾಯ ತಿಳಿಸಿರಿ. ಹಿರಿಯರಾದ ಶಾಸ್ತ್ರಿಗಳಿದ್ದಾರೆ. "

ಕೃಷ್ಣ ಶಾಸ್ತ್ರಿಗಳ ಕಡೆ ನೋಡಿದ. ಕಲ್ಯಾಣಿಯೂ ಅವರ ಕಡೆ ನೋಡಿ ಮುಗುಳುನಗೆಯಿಂದ ತನ್ನ ಒಪ್ಪಿಗೆ ಸೂಚಿಸಿದಳು.

" ನಾಲ್ಕು ದಿನಗಳಲ್ಲಿ ಸಿದ್ಧವಾಗಬೇಕಾಗಿದೆ. " ಎಂದ ಸ್ವಾಮಿ. " ಸೆಟ್ಟಿಂಗ್ ಸಿದ್ಧವಾಗಿ ಕಾದಿದೆ. ನಾವು ತಡಮಾಡಿದರೆ ಸ್ಟುಡಿಯೋದವರಿಗೆ ತೊಂದರೆಯಾಗುತ್ತದೆ. ಆಗಲೇ ಬೇರೆ ಚಿತ್ರ ತಯಾರಕರೂ ಈ ರಂಗಕ್ಕೆ ಕಾಲಿಡಲು ಹೊರಟಿದ್ದಾರೆ. ಅದನ್ನು ನೋಡಿ ಸ್ಟುಡಿಯೋ ಮಾಲಿಕರೂ ಧೈರ್ಯ ತಂದುಕೊಂಡು ನಮ್ಮನ್ನು ಎಚ್ಚರಿಸುತಿದ್ದಾರೆ "

" ಅದಕ್ಕೇನೂ ಅಭ್ಯಂತರವಿಲ್ಲ. ನಾಳೆನಿಂದಲೇ ಪ್ರಾಕ್ಟೀಸ್ ಆರಂಭಿಸೋಣ. " ಎಂದು ಅದುವರೆಗೂ ಸುಮ್ಮನಿದ್ದ ಕಲ್ಯಾಣಿ ಭರವಸೆ ನೀಡಿದಳು.

" ಸರಿ. ಹೆಚ್ಚು ಮಾತು ಬೇಡ. ಸಾವಿರ ರೂಪಾಯಿ ಕೊಡುತ್ತೇವೆ. ನೀವು ಒಪ್ಪಬೇಕು. ಅತ್ಯಂತ ಸುಂದರವಾದ ನೃತ್ಯ ಕೊಡಿ. ಮುಂದೆ ಆಗತ್ಯವಾದಲ್ಲಿ ಇನ್ನೊಂದು ನೃತ್ಯ ಕೊಡಬೇಕಾಗಬಹುದು."

" ನಾವು ಇಲ್ಲೇ ಇದ್ದರೆ...." ಎಂದ ಕೃಷ್ಣ

" ಊರಿಗೆ ಹೋದಲ್ಲಿ ತಾವು ಬಂದು ಹಿಂತಿರುಗುವ ಖರ್ಚು ಕೊಡುತ್ತೇವೆ. "

" ಆಗಲಿ—ಒಪ್ಪಿಕೊಂಡುಬಿಡಿ " ಎಂದರು ಶಾಸ್ತ್ರಿಗಳು.

" ಶಾಸ್ತ್ರಿಗಳ ಮಾತು ಮೀರುವದಿಲ್ಲ. "

ಪರಮಶಿವ ಕಂಟ್ರಾಕ್ಟ್ ಫಾರಮ್ ತೆಗೆದು ಕೃಷ್ಣರಾಯನ ಮುಂದಿಟ್ಟ. ಅವನು ಅದನ್ನು ತುಂಬುತ್ತ ಒಂದು ನೃತ್ಯದ ಬಗೆಗೆ ಎಂದು ಬರೆದು, ಕಲ್ಯಾಣಿಯ ಸಹಿಮಾಡಿಸಿ ತಾನು ಸಾಕ್ಷಿ ಹಾಕಿದ.

" ತಮ್ಮ ವಿಳಾಸ ಬರೆದುಬಿಡಿ. "

" ಈಗ ಮಾಡರ್ನ್ ಹೋಟೆಲೇ ವಿಳಾಸವಾಗಿದೆ. ಮುಂದೆ ನೋಡೋಣ. ಈಗ ಅದನ್ನೇ ಬರೆಯುತ್ತೇನೆ. " ಎಂದು ಕೃಷ್ಣ ಹೋಟೆಲಿನ ವಿಳಾಸ ಬರೆದ.

ನಾರಣಪ್ಪನ ಅಪ್ಪಣೆಯಂತೆ ಪರಮಶಿವ ಇನ್ನೂರು ರೂಪಾಯಿ ಗಳಿಗೆ ಚೆಕ್ ಬರೆದ. ನಾರಣಪ್ಪ ಸಹಿಮಾಡಿ ಅದನ್ನು ಕಲ್ಯಾಣಿಯ ಕೈಗಿತ್ತ.

" ಈಗ ತೆಗೆದುಕೊಳ್ಳಿ. ನಮ್ಮ ಇನ್ನೊಬ್ಬರು ಪಾಲುಗಾರರ ಪರಿ ಚಯ ನಾಳೆ ಮಾಡಿಕೊಳ್ಳಿರಿ. ಇನ್ನೂ ಹಣ ಬೇಕಾದರೆ ನಾಳೆ ನಾಡಿದ್ದ ರಲ್ಲಿ ಸ್ವಲ್ಪ ತೆಗೆದುಕೊಳ್ಳುವಿರಂತೆ. "

ಹೊರಗಿನಿಂದ ಹಾಲಿನಲ್ಲಿ ಗೆಜ್ಜೆ ಸದ್ದಾದುದು ಕೇಳಿಸಿತು.

" ರಾಜು ಬಂದಿರಬೇಕು. ಅವನನ್ನು ಕರೆಯಿರಿ. ಈ ವರಮಾನದ ವಿಚಾರ ಅವನಿಗೆ ತಿಳಿಸಬೇಡಿ. " ಎಂದು ಪರಮಶಿವನಿಗೆ ಸೂಚಿಸಿ, ಕೃಷ್ಣ ರಾಯನ ಕಡೆಗೆ ತಿರುಗಿ, " ನಮ್ಮ ಚಿತ್ರದ ಡಾನ್ಸ್ ಡೈರೆಕ್ಟರ್ ರಾಜ ಕುಮಾರ್ ಬಂದಿದ್ದಾರೆ. ಅವರನ್ನು ಕರೆಸುತ್ತೇನೆ. ಪರಿಚಯಮಾಡಿಕೊಳ್ಳಿ ಎಂದ ನಾರಣಪ್ಪ.

ಪರಮಶಿವ ರಾಜುವನ್ನು ಕರೆತಂದ.

" ಇವರೇ.... ಡ್ಯಾನ್ಸರ್ ಕಲ್ಯಾಣಿ ಮತ್ತು ಸಂಗೀತಗಾರ ಕೃಷ್ಣ ರಾವ್. " ಎಂದು ಪರಮಶಿವ ಪರಿಚಯಮಾಡಿಸಿದ. ಪರಸ್ಪರ ವಂದನೆ ಗಳಾದುವು. ರಾಜು ಮಾತ್ರ ಮನಸ್ಸಿನಲ್ಲಿ ಅಷ್ಟು ಉತ್ಸಾಹಿತನಾಗಲಿಲ್ಲ. ಅವನ ನಗೆ, ನಮಸ್ಕಾರಗಳಲ್ಲಿ ನೈಜತೆಯ ಕೊರತೆ ಕಾಣುತಿತ್ತು.

" ರಿಹರ್ಸಲ್ ನಡೆದಿದೆ " ಎಂದು ಹೊರಡಲು ಅವನು ಸಿದ್ಧನಾದ.

" ನಾವೂ ನೋಡಬಹುದೆ? " ಎಂದು ಕಲ್ಯಾಣಿ ಅವನನ್ನು ಪ್ರಶ್ನಿಸಿ ದಳು.

" ಆಗಲಿ " ಎಂದಾತ ಒಲ್ಲದ ಮನದಿಂದ ಒಪ್ಪಿಕೊಂಡು ಅವರನ್ನು ಡಾನ್ಸ್ ಹಾಲಿಗೆ ಕರೆದೊಯ್ದ.

ಇತರ ನಟಿಯರೆಲ್ಲ ಕಲ್ಯಾಣಿಯನ್ನು ನೋಡಲು ಗುಂಪುಕೂಡಿದರು.

## ೧೦

ಫಿಲಂ ಕಂಪೆನಿಯ ಕಂಟ್ರಾಕ್ಟು ಕಲ್ಯಾಣಿಯನ್ನು ಆಕಾಶಕ್ಕೇರಿಸಿತು. ಅಲ್ಲಿ ಹಾರೋಣ, ಕೈಕಾಲು ಸೋಲುವವರೆಗೆ, ಎಲ್ಲರ ನೆತ್ತಿಯನ್ನೂ ಕುಕ್ಕಿ

ಹಾರೋಣ ಎಂದು ಅವಳ ಮನಸ್ಸು ಉಬ್ಬಿ ಮಿಡಿಯುತ್ತಿತ್ತು. ಶುಭಗಳಿಗೆ ಯಲ್ಲೇ ಹೊರಟಿದ್ದೇವೆ, ನಮ್ಮ ಜೀವನ ಸುಗಮವಾಗುತ್ತದೆ, ಸುಖಮಯ ವಾಗುತ್ತದೆ ಎಂದವಳು ಹಿಗ್ಗಿ ನಲಿದಳು. ಗಾಡಿಯಲ್ಲಿ ಬರುತ್ತಿದ್ದಂತೆ ಎಷ್ಟೋ ಯೋಚನೆಗಳು ಅವಳ ತಲೆಯಲ್ಲಿ ಸುಳಿದುವು. ನಾನು ನೃತ್ಯ ಸಾಮ್ರಾಜ್ಯದ ಸಾಮ್ರಾಜ್ಞಿಯಾಗುತ್ತೇನೆ ಕನ್ನಡ ನಾಡಿನ ರಜತಪರದೆಯ ಮೇಲೂ ರಾರಾಜಿಸುತ್ತೇನೆ. ಅಮರ ಕೀರ್ತಿ, ಅಪಾರ ಹಣ ಸಂಪಾ ದಿಸುತ್ತೇನೆ.

ಆಮೇಲೆ.... ಬೇಕುಬೇಕಾದ ಸೀರೆಗಳು, ವಸ್ತ್ರಗಳು; ಕೈಗೊಬ್ಬ-ಕಾಲಿ ಗೊಬ್ಬ ಆಳು; ದೊಡ್ಡ ಬಂಗಲೆ, ಬಂಗಲೆಯ ಮುಂದೆ ಕಾರು, ಅದನ್ನು ತಾನೇ ನಡೆಸಿಕೊಂಡು ಬೇಕಾದಲ್ಲಿ ಹೋಗುತ್ತೇನೆ. ಕನ್ನಂಬಾಡಿ, ಚಾಮುಂಡಿಬೆಟ್ಟ, ಬೆಂಗಳೂರು.... ಎಲ್ಲ ಕಡೆಗೂ.... ಮನೆಯಲ್ಲಿ ಒಂದು ನೃತ್ಯ ಮೇಳಕ್ಕೆ ಬೇಕಾದ ಸಾಮಾಗ್ರಿಗಳು, ಸಂಗೀತ ವಾದ್ಯಗಳು, ವಾದನ ಗಳು, ಉಡಿಗೆತೊಡಿಗೆಗಳು. ಮತ್ತೊಂದರಲ್ಲಿ ಮಂಚ, ಸೊಳ್ಳೆಪರದೆ, ಟೀಪಾಯಿ, ಕನ್ನಡಿ, ಸೋಫಾ.... ಇನ್ನೊಂದರಲ್ಲಿ ಬೀರು, ನಿಲುವುಗನ್ನಡಿ. ಬೀರು ತುಂಬ ಬಟ್ಟೆಬರೆಗಳು, ಸೀರೆಕುಪ್ಪಸಗಳು, ಅಲಂಕಾರ ಸಾಮಗ್ರಿ ಗಳು.... ವಜ್ರದ ಹಾರ, ಮುತ್ತಿನ ಬೆಂಡೋಲೆ, ಕೈಗೆ ಉಂಗುರ, ಮಾವಿನ ಸರ.... ಅವಲಕ್ಕಿ ಸರ.... ಕೈಗೆ ಬಳೆಗಳು.... ಮತ್ತೆ..... ಮತ್ತೆ..... ಏನೇನು ಬೇಕೆಂಬುದೇ ಮನಸ್ಸಿಗೆ ನಿಲುಕದೆ ಆ ಪಟ್ಟಿಯಲ್ಲಿ ಇನ್ನೂ ಎಡೆ ಉಳಿಯಿತು. ಇನ್ನೂ ಏನೋ ಇದೆ.... ಎಲ್ಲವೂ ಬೇಕು.... ಎಲ್ಲವೂ ಇರಬೇಕು.... ತಲೆ ಎತ್ತಿ ಮೆರೆಯಬೇಕು.... ಓ ಮರೆತೆ.... ಬಗೆ ಬಗೆಯ ಚಪ್ಪಲಿಗಳು.... ತಟ್ಟೆ ಬಟ್ಟಲು ಮನೆಗೆ ಬೇಕಾದ ಎಲ್ಲಾ ಸಾಮಾಗ್ರಿಗಳು.... ಆ ಮೇಲೆ.... ಆ ಮೇಲೆ.... ಹ್ಞಾ ಫ್ಯಾನು.... ಹಾಲಿನಲ್ಲಿ ಸುತ್ತಲೂ ಸೋಫಾಗಳು, ಅವುಗಳ ಮುಂದೆ ಟೀಪಾಯಿ.... ಒಂದು ಒದಿಗೆ.... ಬಾಗಿಲಿನಿಂದ ಒಳಕ್ಕೆ ಬರುತ್ತಿರುವ ಹಾಗೇ ನಟರಾಜನ ವಿಗ್ರಹ.... ಗೋಡೆಗೆ.... ಚಿತ್ರಗಳು.... ನನ್ನ ಚಿತ್ರ ವಿವಿಧ ನೃತ್ಯ ಭಂಗಿಗಳಲ್ಲಿ.... ಕೃಷ್ಣನ ಚಿತ್ರ.... ಗುರು ದೇವನ ಚಿತ್ರ.... ಹೌದು.... ಮಾಸ್ತರ್ ಚಿತ್ರ—ಅದಕ್ಕೊಂದು ಹೂವಿನ ಹಾರ....

ಗಾಡಿ ಬ್ಯಾಂಕಿನ ಮುಂದೆ ನಿಂತಿತು. ಕೃಷ್ಣ ಕೆಳಗಿಳಿದು ಬ್ಯಾಂಕಿನ ಕಡೆಗೆ ಹೋದ.

ಕಲ್ಯಾಣಿ ಎಚ್ಚರವಾಗಿದ್ದಾಳೆ. ಆದರೆ ಮನಸ್ಸು ಮಾತ್ರ ಏನನ್ನೋ ಯೋಚಿಸುತಿತ್ತು. ಅವಳಾಗಿಯೇ ಯೋಚಿಸುತ್ತಿದ್ದಂತೆ ಚೆಕ್ ಕ್ಯಾಶ್ ಮಾಡಲು ಹೇಳಿದ್ದಾಳೆ. ಈಗಲೇ ಹಣ ಪಡೆಯೋಣವೆಂದು ಕೃಷ್ಣ ಹೇಳಿದಾಗ ಹ್ಞೂ-ಎಂದು ನುಡಿದು ಸಂತೋಷ ವ್ಯಕ್ತಪಡಿಸಿದ್ದಾಳೆ.

ಆದರೆ ಅದು ಹಕ್ಕಿ. ಗೂಡಿನ ಹಕ್ಕಿ ಎಂಟು ವರ್ಷಗಳ ಕಾಲ ತಾಯಿಯ ಅಂಕೆಯಲ್ಲಿ ಬಾಳಿ, ಅವಳ ಕಾಟಕ್ಕೆ ದಿನ ನಿತ್ಯವೂ ಆಯಾಸವಾದರೂ ಕುಣಿದು ಒಗ್ಗದಿದ್ದರೂ ಕುಣಿದು, ಮುಂದೆ ನೃತ್ಯವೆಂಗರೆ ಮೈಮರೆತು ಕುಣಿವ ಸ್ಥಿತಿಗೆ ಮುಟ್ಟಿದ್ದಳು ಕಲ್ಯಾಣಿ. ಅವಳದು ಹುಚ್ಚು ಬಾಳಲ್ಲ. ಮನ ಬಂದಂತೆ ಚಿಗಿದು ನೆಗೆದು ಹಾರಿ ಓಡಾಡುವ ಹುಚ್ಚು ಹುಡುಗಿಯ ಜೀವನವಲ್ಲ. ಮನೋಭಾವವೂ ಅಲ್ಲ. ಹಾಗಾಗುತಿದ್ದಳೋ ಏನೋ ? ಆದರೆ, ಕೊರಗುತ್ತಿದ್ದ ತಾಯಿಯ ಜತೆಗೇ ನಿಂತು ಅವಳ ಜತೆಗೇ ಬಾಳಿ ಬೆಳೆದು ಅವಳ ಭಾವ, ಜೀವ, ಉತ್ಸಾಹ ಎಲ್ಲವೂ ಒಳಮುಖವಾಗಿದ್ದವು. ಆಕೆ....ತುಂಬಿದ ಕೊಡ....ಒಳಗೇನಿದೆ ? ಯಾವುದಿದೆ ? ಎಷ್ಟಿದೆ ? ಅಥವಾ ಏನೂ ಇಲ್ಲವೇ ? ಯಾವುದೂ ತಿಳಿಯದು. ಇಣಿಕಿದಾಗ ಕೆಣಕಿದಾಗ ಅದರ ಒಳಗೇನಿದೆ ಎಂಬುದು ತಿಳಿದೀತು.

ಮಾಸ್ತರ್ ಅಂಕೆಯಲ್ಲಿ ಅವಳು ಬೆಳೆದಾಗಲೂ ಅಷ್ಟೆ. ಮಾಸ್ತರ್, ಸಿಂಹ, ಅವನ ಮಡದಿ....ಈ ಸಂಸಾರ. ಬಿಡುವಿದ್ದಾಗಲೆಲ್ಲ ನೃತ್ಯಾಭ್ಯಾಸ. ಸ್ಕೂಲು ಬೇರೆ. ರಜೆ ಬಂತೆಂದರೆ ಪ್ರದರ್ಶನ, ಪ್ರಯಾಣ. ಮನೆಯವರಲ್ಲದೆ ಬೇರೆಯವರನ್ನೂ ನೋಡೋಣವೆಂದರೆ ಇತರ ಜತೆಗಾರ ನೃತ್ಯಗಾತಿಯರು, ಹಿಮ್ಮೇಳದ ಕಲಾವಿದರು. ಹಿಮ್ಮೇಳದ ಕಲಾವಿದರು ಸಲಿಗೆ ತೋರಿಸುವಂತಿಲ್ಲ. ಮಾಸ್ತರ್ ಅಂದರೆ ಎಲ್ಲರಿಗೂ ಭೀತಿ. ಅವರ ಶಿಸ್ತಿನ ಜೀವನ, ಕಠೋರವೂ ನಿರ್ದಾಕ್ಷಿಣ್ಯವೂ ಆದ ವ್ಯವಸ್ಥೆ, ಅಸಮಾನ ನೈತಿಕ ಶಕ್ತಿ ಎಲ್ಲರನ್ನೂ ಅವರೆದುರು ನಿಲ್ಲಲೂ ಅಶಕ್ತರನ್ನಾಗಿ ಮಾಡಿತ್ತು. ಆಗ.... ಯಾರು ಬರಬೇಕು ಕಲ್ಯಾಣಿಯ ಹೃದಯವನ್ನು ಉಕ್ಕಿಸಿ, ಬಾಲ್ಯದ ಹುಚ್ಚಾಟದ ಕಾರಂಜಿ ಪುಟಿಸಿ, ತಂಟೆಯ ಗಂಟೆ ಬಾರಿಸಿ, ಜಿಂಕೆಯಂತೆ ಅವ

ಳನ್ನು ನೆಗೆಸಲು? ಅವಳ ಬಾಳು ಸೈನಿಕನ ಬಾಳಾಯಿತು. ಉತ್ಸಾಹ, ಹುಚ್ಚು ಹುಮ್ಮಸು, ತುಂಟತನ ಎಲ್ಲವನ್ನೂ ಹುದುಗಿಸಿಟ್ಟು ಶಿಸ್ತಿನ ಕಡಿವಾಣಕ್ಕೆ ಸಿಲುಕಿ, ಭೀತಿಯ ಮೋಡಕ್ಕೆ ಬಾಗಿ, ಅವಳ ಜೀವನವೆಲ್ಲ ಒಳಮುಖವಾಯಿತು. ಮುದುಡಿ ಮೂಲೆಯಲ್ಲಿ ಕುಳಿತ ವೀಣೆಯಾದಳು ಅವಳು. ಸೆರೆಸಿಕ್ಕಿದ ಮಿಂಚಾದಳು, ಗೂಡಿನಲ್ಲಿ ಬಿದ್ದ ಹುಲ್ಲೆಯಾದಳು, ಹಾವಾಡಿಗನ ಅಂಕೆಗೆ ಸಿಕ್ಕು ಹಗ್ಗವಾದ ಹಾವಾದಳು!

ಇಂದು ಹಾರಬೇಕೆಂದರೆ?

ಪಂಜರಗಟ್ಟಲೆಯಾಗಿ, ಮೊಟ್ಟೆಯೊಡೆದು ಹೊರ ಬಂದಾಗಿನಿಂದ ತಾಯಿಯಾಗುವ ದಿನದ ವರೆಗೂ ಗೂಡಲ್ಲೇ ಇದ್ದು ಹೊರಬಂದ ಹಕ್ಕಿಯಂತಾಗಿದ್ದಾಳೆ ಕಲ್ಯಾಣಿ.

ಗರಿಯಿದೆ, ಹಾರಬಲ್ಲೆನೆಂಬ ನಂಬಿಕೆಯಿದೆ, ಹಾರುವ ಬಯಕೆ ಇದೆ ಆದರೂ ಎಷ್ಟು ಯತ್ನಿಸಿದರೂ ಪೂರ್ಣ ಧೈರ್ಯ ಬರಲಾರದು.

ಒಂದು ನಿಮಿಷ ಚೆಂಗನೆ ನೆಗೆಯುತ್ತಾಳೆ, ಮತ್ತೆ ಹಿಂದಿನ ಮೌನ, ಶಾಂತ, ಸಭ್ಯ, ಶಿಸ್ತಿನ ಮನೋಭಾವ.

ಒಮ್ಮೆ ಏನೇನೋ ಮಾತನಾಡುತ್ತಾಳೆ, ಕಟ್ಟೆಯೊಡೆದು ನೀರು ಹರಿದಂತೆ, ಮಾತು ಮೊದಲುಮಾಡಿದರೆ ತುಂಬ ಮಾತನಾಡುತ್ತಾಳೆ. ಮತ್ತೆ ಮಾತು ಮುಗಿಯಿತೆಂದರೆ ಮೌನ, ಮುಗುಳು ನಗೆ, ಹ್ಞೂಗಳು....ಅಷ್ಟೆ!

ಒಮ್ಮೆ ಕಾರಂಜಿಪುಟಿಯಿತೆಂದರೆ ತಡೆಯಿಲ್ಲದೆ ನೀರು ಹಾರುತ್ತದೆ. ಅದಕ್ಕೇನಾದರೂ ಅಡ್ಡವಾದರೂ, ನೀರು ಮುಗಿದರೂ ಮತ್ತೆ ಒಳಗೇ ಹಾರಿ ಅಲ್ಲೇ ಇಂಗುತ್ತದೆ.

ಹೊರಟುಬಿಡುತ್ತೇನೆ, ಎಲ್ಲಾದರೂ ಹೋಗಿ ಸುಖವಾಗಿ ಸ್ವತಂತ್ರವಾಗಿ ಬಾಳುತ್ತೇನೆ, ಸಾಕು ಈ ಪಂಜರದ ಬಾಳು ಎಂದು ಪುಟಿದಳು ಕಲ್ಯಾಣಿ.

ಹಾಗೇ ತನ್ನ ದುಡುಕಿಗೆ ನಾಚಿದಳು. ತಾನು ಮಾಡುವುದು ಸರಿಯೆ ಎಂದು ಯೋಚಿಸಿದಳು. ತನಗೆ ಈ ಧೈರ್ಯ, ಶಕ್ತಿ ಇದೆಯೇ? ಇಲ್ಲ.... ಬೇಡ....ಎಂದು ತಿಳಿದು ಅಧೀರಳಾದಳು.

ಕೃಷ್ಣ ಜತೆಗಿದ್ದಾಗ ಪುನಃ ಎಲ್ಲಿಲ್ಲದ ಧೈರ್ಯ ಬಂದು ಈ ಹಕ್ಕಿ ಹಾರ ಬಯಸುತಿತ್ತು. ಅವನಿಲ್ಲದಾಗ ತನಗೆ ತಾನೇ ಯೋಚಿಸಿ ನಿರ್ಧಾರವನ್ನೇ ಬದಲಿಸುವ ಹಂತಕ್ಕಿಳಿದು, ತಬ್ಬಿಬ್ಬಾಗುತಿತ್ತು.

ಈ ಪರಿಸ್ಥಿತಿ ಬೆಳೆದಷ್ಟೂ ಅವಳ ಭೀತಿ ಬಲವಾಯಿತು. ನಿಧಾನಿಸಿದರೆ ತಾನೇ ತನ್ನ ನಿರ್ಧಾರ ಬದಲಿಸಬಹುದು, ಎಂದೆಂದೂ ಹಾರುವ ಧೈರ್ಯವಿಲ್ಲದೆ ಗೂಡಿನಲ್ಲೇ ಬಿದ್ದಿರಬಹುದು. ತನ್ನ ಉತ್ಸಾಹವೆಲ್ಲ ಉಡುಗೀತು. ಮಾತು ಉಡುಗಿ ವಿಚಾರವಾದವಾಯಿತು. ಸಾಹಸಿಯಾಗುವ ಬದಲು ಸಾಧಕಳಾಗಿದ್ದೇನೆ. ಸಂಸಾರಿಯಾಗುವ ಬದಲು ಸನ್ಯಾಸಿಯಾಗುತಿದ್ದೇನೆ. ಹೀಗೇ....ಆದರೆ....ಅದು ಸಾಧ್ಯವಿಲ್ಲ....ಹಾರಲೇ ಬೇಕು.... ಎಂದು ಅವಳು ಧುಮುಕಿದಳು. ನೀರಿಗಿಳಿಯುವ ವರೆಗೆ ಚಳಿ. ಮುಳುಗುವ ವರೆಗೆ ಚಳಿ. ಆ ಬಳಿಕ....ಚಳಿಯಿಲ್ಲ. ನೀರಲ್ಲಿ ನಿಂತವನಿಗೆ ಅದೇ ಚೆನ್ನ ಅನ್ನಿಸುತ್ತದೆ. ಈಜಾಡುವವನಿಗೂ ಹಾಗೇ? ಈಜಾಟ ಮರೆತುಹೋಗಲಾರದು; ಆದರೆ ಕೈಕಾಲು ಸೋಲುವ ಮೊದಲೇ ಈಜಾಡಬೇಕು. ನೀರಿಗಿಳಿದ ಮೇಲೆ ಹೇಗಾದರೂ ಈಜಾಡುತ್ತಾನೆ, ದಡ ಸೇರುತ್ತಾನೆ. ಅದಿಲ್ಲದೆ ಈಜು ಬರುತ್ತೆ ಎಂದು ತಿಳಿದು, ಬಾಲ್ಯದಲ್ಲಿ ಕಲಿತುದನ್ನು ವೃದ್ಧಾಪ್ಯದಲ್ಲಿ ಅನುಷ್ಠಾನಕ್ಕೆ ತರಲೆಳಸಿದರೆ ಕೈಕಾಲು ಸೋತು ಮುಳುಗಬಹುದು.

ಈಗ ಕಲ್ಯಾಣಿ ಈ ದಾರಿ ಹಿಡಿದು ನೀರಿಗಿಳಿದಿದ್ದಾಳೆ. ಕೃಷ್ಣ ಜತೆಗಿದ್ದಾನೆ ಎಂಬ ಧೈರ್ಯದಿಂದ ತೆಂಗಿನಕಾಯಿಯನ್ನು ನೆಚ್ಚಿ ಈಜಾಡುವವಳಂತೆ ಈಜು ಆರಂಭಿಸಿದ್ದಾಳೆ. ದೂರ, ಬಹಳ ದೂರ ಬಂದಿದ್ದಾಳೆ.

ಬಂದುದು ಒಳಿತೇ ಆಯಿತು. ದಡ ಸೇರಿದ್ದಾಳೆ ಎನ್ನುವ ಎಲ್ಲ ಸ್ಥಿತಿಗಳೂ ಒಂದೊಂದಾಗಿ ಒದಗುತ್ತಿವೆ. ಬಂದ ಮರುದಿನವೇ ನಿಲ್ಲುವ ನೆಲೆ ಕಂಡಿದೆ. ಆಸರೆಯ ಬೆಳಕು ತೋರಿದೆ. ಆಲದ ಮರ ದೊರೆತಿದೆ. ಈ ಪ್ರಪಂಚದ ಆಲದ ಮರದಡಿಯಲ್ಲಿ ಎಷ್ಟೋ ಜನರು ತಂಗಬಹುದು. ಅಷ್ಟು ವಿಶಾಲವಿದೆ ತಡಿ—ನೆರಳು. ತೂಗಾಡಲು ಎಷ್ಟೋ ಜಂತಿಗಳಿವೆ. ನಕ್ಕು ನಲಿದು ತೂಗಿ ಬಾಗಿ ಬಳುಕಿ ತಂಗಿ ಓಡಿ ಆಡಬಹುದು.

ನಿಜ! ಆದರೆ ಆಲದ ಮರದಡಿಯಲ್ಲಿ ಬೇರಾವ ಮರವೂ ಹುಟ್ಟಿ ಬೆಳೆಯುವುದಿಲ್ಲ ಎಂದಿದ್ದಾರೆ ಹಿರಿಯರು. ಕಲೆಗಳ ಬಗೆಗೆ ವಿವೇಚಿಸಿದಾಗ—

ಕಲೆಗಳು ಮರಗಳು ಎಂದು ಹೋಲಿಸಿದಾಗ, ಹತ್ತು ಮರಗಳನ್ನು ಒಂದೆಡೆ ಸೇರಿಸದಷ್ಟು ದೊಡ್ಡದಾದ, ಆಲದ ಮರವಿದು. ಹತ್ತಾರು ಕಲೆಗಳ ಸಮ್ಮಿಳನ. ಮರವೇ ಜಂತಿ ಬಿಟ್ಟು ಅದು ನಿನ್ನೆಯ ವರೆಗೂ ತೂಗುತ್ತಿದ್ದರೆ ನಾಳೆ ನೆಲ ಮುಟ್ಟಿ ಬೇರುಬಿಟ್ಟು ಮರಕ್ಕೆ ಆಧಾರವೂ ಆಗುತ್ತದೆ, ಮತ್ತೊಂದು ಮರದಂತೆ ಕಾಣುತ್ತದೆ. ಹಾಗೇ ಎಲ್ಲ ಲಲಿತ ಕಲೆಗಳೂ ಇಲ್ಲಿವೆ. ಅವೆಲ್ಲವುಗಳ ರಸಪಾಕವಿದು. ಚಿತ್ರಪ್ರಂಪಂಚಕ್ಕೆ ಇವೆಲ್ಲ ಬೇಕು; ಚಿತ್ರಪ್ರಪಂಚದಿಂದ ಬೀಳಲಿನಂತೆ ಕೆಳಗಿಳಿದು ತೂಗಿ ನೆಲಮುಟ್ಟಿ ಅವುಗಳೇ ಆಧಾರವಾಗಿ ಕಾಣುವಂತೆ ಬೆಳೆಯುವುದೂ ಇದೆ. ಕೆಲವಕ್ಕೆ ಸಂಗೀತ ಜೀವಾಳ. ಕೆಲವಕ್ಕೆ ಅಭಿನಯ. ಒಟ್ಟಿನಲ್ಲಿ ನೃತ್ಯ, ಸಂಗೀತ, ಚಿತ್ರಕಲೆ, ಕಾವ್ಯ, ಎಲ್ಲ ಅಂಗಗಳೂ ಬೇಕು, ಪರಿಪೂರ್ಣವಲ್ಲದಿದ್ದರೂ ಅವು ಅಪೂರ್ಣವಾಗಿರಲಾಗದು. ನವರಸವೂ ಬೇಕು. ಆದರೂ.... ಈ ಕಲೆಗಳು ಪ್ರತ್ಯೇಕವಾಗಿ ಈ ಕಲಾಗುಚ್ಛದಂತಿರುವ ಚಿತ್ರವೃಕ್ಷದಡಿಯಲ್ಲಿ ಬಾಳುವುದು ಸಾಧ್ಯವೇ? ಅದು....ಸಂದೇಹಾತ್ಮಕ! ನಾನು....ನೃತ್ಯವೃಕ್ಷ. ಕೃಷ್ಣ ಸಂಗೀತವೃಕ್ಷ. ....ಶಾಸ್ತ್ರಿಗಳು....ಕಾವ್ಯವೃಕ್ಷ....ಈ ಎಲ್ಲ ವೃಕ್ಷಗಳೂ ಅಲ್ಲಿಗೆ ಬೇಕು....ಆದರೆ....

ಛೆ! ಇದು ಬೀಜವೃಕ್ಷನ್ಯಾಯ. ಇದನ್ನು ನೆನೆದರೆ....ನನ್ನ ಬುದ್ಧಿಗೆ ನಿಲುಕುವ ಉತ್ತರವೇ ಬರಲಾರದು. ಆದರೂ ಈ ನೃತ್ಯವೃಕ್ಷ ಬದುಕುವುದೇ ನೋಡೋಣವೆಂದು ಹೊರಟಿದ್ದೇನೆ .... ಆಗಲಿ .... ನೋಡೋಣ. ಸಮಸ್ಯೆಗಳೆಲ್ಲ ಒಂದರ ಹಿಂದೊಂದಾಗಿ ಬಂದು ಅವಳ ಮುಂದೆ ನಿಂತು ಕಣ್ಣು ಮಿಟುಕಿಸಿ, ಆ ಸಮಸ್ಯೆಗಳ ಪೂರ್ಣ ಚಿತ್ರ ಅವಳ ಹೃದಯದ ಮೇಲೆ ಮೂಡುವ ಮೊದಲೇ ಮರೆಯಾಗುತಿದ್ದವು.

ಕೃಷ್ಣ ಹಣ ಪಡೆದು ಬ್ಯಾಂಕಿನಿಂದ ಬಂದು ಗಾಡಿ ಹತ್ತಿದ.

ಅವನು ಜಗತ್ತಿನ ಅರಿವನ್ನು ಇನ್ನೂ ಮಾಡಿಕೊಳ್ಳದ ಹುಚ್ಚು ಹುಡುಗ. ಒಂದೇ ಮನ–ಎರಡು ತನು ಎಂದು ಕಲ್ಯಾಣಿಯ ಬಗೆಗೆ ತಿಳಿದು ಅವಳಿಗಾಗಿ ಎಲ್ಲ ತ್ಯಾಗಗಳಿಗೂ ಸಿದ್ಧವಾಗಿ ಬಂದವನು. ಅವಳ ಉತ್ಕರ್ಷೆ ತನ್ನದು, ಅವಳ ಲಾಭ ತನ್ನ ಲಾಭ ಎಂದು ತಿಳಿದವನು. ಕೈಗೆ ಹಣ ಬಂದುದು ಅವನಿಗೇ ದೊರೆತಾಗ ಅವನಿಗಾಗುವ ಆನಂದಕ್ಕಿಂತಲೂ

ಅಧಿಕ ಹರ್ಷ ತಂದಿತು. ಬ್ಯಾಂಕಿನಿಂದ ಅವನು ಚಿಗಿಯುತ್ತ ಬಂದ. ಇಂದು ತಮ್ಮ ಬಾಳಿನ ಉದಯವಾಯಿತೆಂದು ಅವನು ಉಬ್ಬಿದ್ದ. ಅಂದು ಮಂಗಳವಾಕ್ಯ ಸಿಂಹನ ಬಾಯಿಂದ ಬಂತು. ಈಗ ದೇವರು ಪ್ರಸಾದ ನೀಡಿ ಹರಸಿದ್ದಾನೆ ಎಂದವನ ಮನ ಸಾರಿತು; ಧೈರ್ಯ ಹೇಳಿತು. ಬುತ್ತಿ ಕೊಟ್ಟಿದ್ದೇನೆ, ಮುನ್ನಡೆ. ನನ್ನ ರಕ್ಷೆ ಹಿನ್ನೆಡೆಗೆ ನಿಂತಿದೆ–ಎಂದು ಯಾವುದೋ ಶಕ್ತಿ ಅವನ ಬೆನ್ನು ತಟ್ಟುತಿತ್ತು.

ಕಲ್ಯಾಣಿ ಯಾವುದೋ ಯೋಚನೆಯಲ್ಲಿ ಮುಳುಗಿದ್ದರೂ ಅವನನ್ನು ಸ್ವಾಗತಿಸಿದಳು.

ಶಾಪಸಂದಿನಲ್ಲಿ ಅವನು ಅವಳ ಮಗ್ಗುಲಿಗೇ ಕುಳಿತ. ಗಾಡಿಯವನಿಗೆ ಹೋಟೆಲಿಗೆ ಹೋಗುವಂತೆ ತಿಳಿಸಿ, ಕಲ್ಯಾಣಿಯ ಬೆನ್ನು ತಟ್ಟಿದ.

ಸಂತೋಷ ಅವನನ್ನು ಎತ್ತಲೋ ಹಾರಿಸಿ ಒಯ್ಯುತಿತ್ತು. ಹೃದಯ ಉಬ್ಬಿ ಉತ್ಸಾಹದಿಂದ ಕಾರಂಜಿ ಚಿಮ್ಮುತಿತ್ತು. ತಾನೇ ತಾನಾಗಿ ಹಾಡು ಹರಿಯಿತು. ಅವಳ ಕಿವಿಗಷ್ಟೆ ಕೇಳುವಂತೆ ತನ್ನ ಹೃದಯದಲ್ಲಿ ತುಂಬಿ ನಿಂತ ಭಾವವನ್ನು ಪ್ರಕಟಿಸುವಂತೆ ಆತ ಹಾಡಿದ.

ಬಾರೆ ಸಖೀ ನೀ ಬಂದು ನನ್ನ ಬಳಿ ಕುಳಿತಾಗ
ಬೇಡ ಮಧುಪಾನಗಳು ಗೀತ–ತಿನಿಸು.
ಏಕೆ ಸಖಿ ಮೌನಮುದ್ರೆಯನಾಂತು ಕುಳಿತಿರುವೆ
ನುಡಿಯುಬಾರದೆ ನುಡಿಯೆ, ಬೇಡ ಮುನಿಸು !

ಗಾಡಿ ಹೋಟೆಲ್ ಮುಂದೆ ನಿಂತಿತು. ಇಬ್ಬರೂ ಕೆಳಗಿಳಿದರು, ತಮ್ಮ ಕೋಣೆಗೆ ತೆರಳಿದರು. ಮಾಣಿ ಅವರ ಬೆನ್ನ ಹಿಂದೆಯೇ ಮಹಡಿಯನ್ನೇರಿ ಬಂದ.

"ಸಿನಿಮಾ ಕಂಪೆನಿಗೆ ಹೋಗಿದ್ದೀರಾ ಸಾರ್"

"ಯಾಕೋ ಇವನಿಗೂ ಕಂಪೆನಿ ಹುಚ್ಚು ಹಿಡಿದಂತಿದೆ" ಎಂದು ನಕ್ಕಳು ಕಲ್ಯಾಣಿ.

"ಏನೋ ಆಶೆ. ಹೌದಪ್ಪ ಹೋಗಿದ್ದೆವು"

"ಏನಾಯಿತು ಸಾರ್....?"

"ಏನಾಗಬೇಕು...."

" ಅಲ್ಲಾ ಸಾರ್....ಕೆಲಸ ಸಿಕ್ಕಿತೇ ? "

" ಹಾಗೇನು ? ಹೇಳುತ್ತೇನೆ. ಮೊದಲು ಎರಡು ಕಾಫಿ ತಾ. "

ಮಾಣಿ ವಾಯುವೇಗದಿಂದ ಅಲ್ಲಿಂದೋಡಿದ. ಕೃಷ್ಣ ತನ್ನ ಶೆರ್ವಾನಿ ಬಿಚ್ಚಿ ಗಾಳಿ ಬೀಸಿಕೊಳ್ಳುತ್ತ ಮಂಚದ ಮೇಲೆ ಕುಳಿತುಕೊಂಡ. ಕಲ್ಯಾಣಿ ಕನ್ನಡಿ ನೋಡಿಕೊಂಡು, ತನ್ನನ್ನು ತಾನೇ ಕಂಡು, ಹರ್ಷಿತಳಾಗಿ, ತಿರುಗಿ ಬಂದಳು.

" ಈಗ ಮಾತನಾಡುತ್ತೇನೆ. ನುಡಿಯಬಾರದೆ....ನುಡಿಯೆ ? ಬೇಡ ಮುನಿಸು....ಎಂದಿರಲ್ಲ. "

" ತುಂಬ ಇರಬೇಕು ನಿನ್ನ ಮಾತು. ಕಾಫಿ ಬರಲಿ. ಹೃದಯದಲ್ಲೇ ಉಡುಗಿ ನಿಂತು ಹೊರಗೆ ಚಿಮ್ಮಿ ಹರಿಯಲು ಎಷ್ಟು ತವಕಿಸುತ್ತದೆಯೋ ?" ಕೃಷ್ಣ ನಗುತ್ತ ನೋಟುಗಳನ್ನೆಣಿಸಲಾರಂಭಿಸಿದ.

" ಇಂದು ಮಂಗಳ ದಿನ, ಶುಭದಿನ. ನಮ್ಮ ಗುರಿ ನಿರ್ದಿಷ್ಟವಾದ ದಿನ."

" ನಿಜ. ಮರ ದೊರೆಯಿತು. ಅಲ್ಲೇ ಕಾರಂಜಿಯೂ ಇದೆ. ದಣಿವಾರಿಸಿಕೊಳ್ಳಲು ಆಸರೆಯೂ ಇದೆ. "

" ಹೌದು ಕವಿಗಳೇ ? ಆದರೆ ನಿಮ್ಮ ನುಡಿಯಂತೆ ಇದು ಕನಸಿನ ಗಂಟಾಗಲಿಲ್ಲ. "

" ಗಂಟೆನ ಕನಸಾಯಿತು ಬಿಡು. ಹ್ಹಾ....ಮರೆತಿದ್ದೆ. ನನ್ನ ನಾಟ್ಯಸರಸ್ವತಿಗೆ ಕಾಣಿಕೆ " ಎಂದು ಕೃಷ್ಣ ಕಲ್ಯಾಣಿಯನ್ನು ಬರಸೆಳೆದು ಅವಳ ಕೈಯಲ್ಲಿ ನೋಟಿನ ಕಂತೆಯನ್ನಿರಿಸಿ ಅವಳನ್ನು ಮಂಚದ ಮೇಲೆ ಕುಳ್ಳಿರಿಸಿಕೊಂಡ. ಅವಳದನ್ನು ಅವನ ಕೈಗಿತ್ತು " ನನ್ನ ಗಾಯನಾಚಾರ್ಯನಿಗೆ ಕಪ್ಪ " ಎಂದು ಮುಗುಳುನಗೆ ನಕ್ಕಳು. ಅವಳ ಹೃದಯದ ಭಾವ ಕಣ್ಣಲ್ಲಿ ಮಿಂಚಿ ಮೂಡಿತ್ತು. ಕೃಷ್ಣ ಅವಳನ್ನು ಮೈಗೊತ್ತಿಕೊಂಡುಹೇಳಿದ–

ಆತ್ಮಕ್ಕೆ ಆತ್ಮದಾ ಬೆಸುಗೆ ಬೇಕಾದಾಗ
ಚಿನ್ನವನು ಪುತ್ಥಳಿಗೆ ಬೆರೆಸಬೇಕು.
ಹೃದಯಗಳು ಎರಡು ಒಂದಾಗಿ ಕಲೆತಿರುವಾಗ
ಬಾಳ ಚಿಂತೆಯು ಭೀತಿ ಏಕೆ ಬೇಕು ?

ನೀನೆನ್ನ ಬಳಿಯಿರಲು ದಿನ ನಿಮಿಷವಾಗಿಹುದು
ದಿನ ರಾತ್ರಿ ಹಾರುವೆವು ಮುಗಿಲಿನಲ್ಲಿ.
ಪ್ರೇಮರಾಜ್ಯದಿ ಯಾವ ಆತಂಕ ನಮಗಿಹುದು
ಸಕಲ ಸ್ವಾತಂತ್ರ್ಯವೂ ದೊರೆಯಿತಿಲ್ಲಿ.

ಕಲ್ಯಾಣಿ ತನ್ನ ತಲೆಯನ್ನು ಕೃಷ್ಣನ ಎದೆಯ ಮೇಲಿರಿಸಿ ಮೈಮರೆತಿದ್ದಳು. ಅವಳ ಅಪ್ಪುಗೆಗೆ ಪ್ರತಿಯಪ್ಪುಗೆ ನೀಡಿ ಅವನು ಮೈಮರೆತು ಹಾಡುತಿದ್ದ—ತಿಳುವಾದ, ಕೇಳಿಯೂ ಕೇಳಿಸದ ಹಾಡು ಕೋಣೆಯನ್ನಾವರಿಸಿತ್ತು, ಗಂಧದ ಸುಗಂಧದಂತೆ, ಜಾಜಿಯ ಸುವಾಸನೆಯಂತೆ, ಮಲ್ಲಿಗೆಯ ಪರಿಮಳದಂತೆ.

ಮಾಣಿ ಕಾಫಿಯನ್ನು ತಂದಿರಿಸಿದರೂ ಅವಳಿಗೆ ಎಚ್ಚರವಿಲ್ಲ. ಕೃಷ್ಣನ ಕಣ್ಣಮುಂದೆ ಸುಳಿದ ಮಾಣಿಯ ರೂಪ, ಮನದಲ್ಲಿ ಮೂಡಿ, ಮಿದುಳನ್ನು ತೀಡಿ, ಭಾವನೆಯನ್ನು ಬದಲಿಸಲು ಕೆಲ ಸಮಯ ಬೇಕಾಯಿತು.

"ಇಲ್ಲಿ ಬಾ ತಮ್ಮ...."

"ಹಾಡಿ ಸಾರ್. ನೀವು ತುಂಬ ಚೆನ್ನಾಗಿ ಹಾಡುತ್ತೀರಿ, ಹಾಡಿ. ನಾನು ಹೊರಗಡೆ ನಿಲ್ಲುತ್ತೇನೆ."

"ಇಲ್ಲಿ ಬಾ. ನಾನು ಹಾಡುತ್ತೇನೆ....ನೀನೂ ಹಾಡುವೆಯಂತೆ."

ಯಾರು ತನಗೆ ಕಲಿಸುತ್ತಾರೆ ಎಂದು ಕೇಳೋಣ ಅನಿಸಿತು ಅವನಿಗೆ. ಆದರೂ ಅದೇಕೋ ಬಾಯಿ ಬರಲಿಲ್ಲ. ಹುಡುಗ ಅವರೆಡೆಗೆ ಬಂದ. ಕಲ್ಯಾಣಿ ಕಣ್ಣು ತೆರೆದು ಎದ್ದು ಕುಳಿತಳು. ಅವನು ಬಂದವನೆ ಕಾಫಿ ಕಪ್ ತೆಗೆದು ಅವನ ಕೈಗಿತ್ತ. ಕೃಷ್ಣ ಅದನ್ನು ಕಲ್ಯಾಣಿಯ ಕೈಗಿತ್ತು ಇನ್ನೊಂದು ಕಪ್ ಎತ್ತಿಕೊಂಡ.

"ನಿನಗೆ ಎಷ್ಟು ಸಂಬಳ ?"

"ಐದು ರೂಪಾಯಿ ಸಾರ್...."

"ನಾನು ಅಷ್ಟು ಕೊಟ್ಟರೆ ನನ್ನ ಜತೆಗೇ ಇರುತ್ತೀಯಾ ?'

"..............."

"ಹೇಳು...."

" ನಿಜವಾಗಿಯೂ ಸಾರ್...." ಹುಡುಗನ ಮುಖವೆಲ್ಲ ನಗೆಯ ಮುದ್ದೆ ಯಾಯಿತು.

" ನಿಜಕ್ಕೂ...."

" ಖಂಡಿತ ಬರುತ್ತೇನೆ ಸಾರ್."

" ನಾನು ನಿನಗೆ ಹಾಡುಕಲಿಸುತ್ತೇನೆ, ಕಲ್ಯಾಣಿ ನೃತ್ಯ ಕಲಿಸುತ್ತಾಳೆ."

" ತಮ್ಮ ಆಶೀರ್ವಾದ ಸಾರ್. ನೀವೇ ನನ್ನ ದೇವರು."

ಕೃಷ್ಣ ಅವನನ್ನು ತನ್ನ ಮಗ್ಗುಲಿಗೆ ಸೆಳೆದು ನಿಲ್ಲಿಸಿಕೊಂಡ. ಜೇಬಿನಿಂದ ಎರಡು ರೂಪಾಯಿ ತೆಗೆದು ಅವನ ಜೇಬಿನಲ್ಲಿಟ್ಟ.

" ಇದು ನಿನಗೆ. ಬೇಕಾದ ತಿಂಡಿ ತಿನ್ನು. ಬೇಕಾದ ಹಾಗೆ ಖರ್ಚು ಮಾಡು."

" ಸಂಬಳ ಬರುತ್ತಲ್ಲ–ಅದನ್ನು ಏನು ಮಾಡುತ್ತೀ?" ಎಂದು ಕಲ್ಯಾಣಿ ಪ್ರಶ್ನಿಸಿದಳು.

" ಅದು ನನ್ನ ಕೈಗೇ ಬರುವುದಿಲ್ಲ. ಯಜಮಾನರೇ ಅದನ್ನು ನನ್ನ ತಂದೆಗೆ ಕಳುಹಿಸುತ್ತಾರಂತೆ. ನನಗೆ ಮೂರು ತಿಂಗಳಿಗೊಮ್ಮೆ ಅಂಗಿ, ಚಡ್ಡಿ ಹೊಲಿಸಿಕೊಡುತ್ತಾರೆ."

ಅವನ ಮಾತು ಅವರಿಬ್ಬರ ಹೃದಯವನ್ನು ನೀರಾಗಿಸಿತು. ಇನ್ನೂ ಹತ್ತು ಹನ್ನೆರಡರ ಹುಡುಗ. ಜೀತದ ಜೀವವಾಗಿದ್ದಾನೆ. ದುಡಿಯುತ್ತಾನೆ, ಆದರೆ ಫಲ ಕಂಡಿಲ್ಲ. ಯಾರಿಗಾಗಿ ದುಡಿಯುತ್ತೇನೆ ಎಂದೇ ತಿಳಿದಿಲ್ಲ. ಶಾಲೆಯಲ್ಲಿರ ಬೇಕಾದವನು ಹೋಟೆಲಿನ ಕೆಲಸಕ್ಕೆ ಬಿದ್ದಿದ್ದಾನೆ. ಕಲಿಸುವ ಯೋಗ್ಯತೆ ತಂದೆಗೆ ಇದ್ದಿದ್ದರೆ, ಕಲಿಯುವ ಆಸ್ಪದ ಬಾಲಕನಿಗಿದ್ದಿದ್ದರೆ, ಇವನೇ ಮುಂದೆ ಏನೋ ಆಗುತ್ತಿದ್ದ. ಕಲಾವಿದನೋ ಶಿಲ್ಪಿಯೋ ಎಂಜಿನಿಯರೋ ಮಾಸ್ತರನೋ...... ಆದರೆ ಭಾರತದಲ್ಲಿ ಅಂಥ ಆಸ್ಪದವಿಲ್ಲ. ಅವನ ಸುಂದರ ಮುಖ, ಹಸುಳೆಯ ಕಣ್ಣು, ಹುಚ್ಚು ಹುಡುಗುತನವನ್ನೆಲ್ಲ ತುಂಬಿ ನಿಂತ ಗಲ್ಲ....ಇಬ್ಬರನ್ನೂ ಇನ್ನು ಹತ್ತಿರ ಸೆಳೆದು ಇವನು ನಿಮ್ಮ ಬಾಳ ನಡುಪಿನ ಸೇತುವೆಯಾಗಲಿ ಎಂದು ಸಾರುತಿದ್ದುವು.

" ಆಗಲಿ ಮಗೂ....ನಿನ್ನ ಹೆಸರು...."

" ಸುಂದರ...."

" ಸುಂದರ...."

" ಸಾರ್...."

" ನಾಳೆಯಿಂದ ಬೇರೆ ಎಲ್ಲಾದರೂ ಒಂದು ಮನೆ ಸಿಗುತ್ತೊ ನೋಡುತ್ತೇವೆ. ನೀನೂ ನೋಡು. ನಾವು ಬೇರೆ ಬಿಡಾರ ಮಾಡುತ್ತೇವೆ. ನೀನೂ ಬಾ. ಜತೆಯಾಗಿರೋಣ."

" ಆಗಲಿ ಸಾರ್."

" ಈ ನಿನ್ನ ಅಕ್ಕನಿಗೆ ಸಿನಿಮಾ ಕಂಪೆನಿಯಲ್ಲಿ ಚಿಕ್ಕ ಕೆಲಸ ದೊರೆತಿದೆ. ಆದಕ್ಕೇ ಈ ಉಡುಗೊರೆ ನಿನಗೆ "

" ನೀನು ವಿಚಾರ ತಿಳಿಸಿದೆ. ನಾವು ಹೋದ ಕೆಲಸವಾಯಿತು." ಎಂದಳು ಕಲ್ಯಾಣಿ.

" ಲಕ್ಷಣದ ಬೆಕ್ಕು ನಮ್ಮ ಸುಂದರ...." ಎಂದು ಇಬ್ಬರೂ ನಕ್ಕರು. ಸುಂದರನೂ ನಕ್ಕುಬಿಟ್ಟ.

" ಹೋಗಪ್ಪ ಹೋಗು....ಇಲ್ಲೇ ಕಾಲ ಕಳೆದರೆ ಯಜಮಾನರೂ ನಿನ್ನ ಮೇಲೆ ರೇಗಬಹುದು...."

" ನಿಜ ಸಾರ್ " ಎಂದು ಗ್ಲಾಸ್ ಎತ್ತಿಕೊಂಡು ಮಾಣಿ ಕೆಳಗೆ ನಡೆದ.

" ನನ್ನನ್ನೂ ಮಾಸ್ತರ್ ಹೀಗೇ ಎತ್ತಿಕೊಂಡರು. ನನ್ನ ಬಾಳು ಬೆಳೆಸಿದರು."

" ನಿಜ ಕಲ್ಯಾಣಿ. ನಮ್ಮ ಬಾಳಿಗೆ ಅದೊಂದು ದಿವ್ಯ ಸೂತ್ರ. ಅವರು ನಮ್ಮನ್ನು ಆದರಿಸಿ ಎತ್ತಿ ಹಿಡಿದು ಮುನ್ನಡೆಸಿದರು. ನಾವೂ ಆ ಕೆಲಸ ಮಾಡಿ ಅವರ ಋಣ ತೀರಿಸೋಣ."

" ಅದೂ ನಿಜ. ಹೊಸ ಬಾಳಿನ ಮೊದಲ ನಿರ್ಧಾರವಿದು."

" ನಿರ್ಧಾರ ನೂರಾರು ಮಾಡಬಹುದು. ಗುರಿ ಒಂದೇ ಆಗಿರಬೇಕು ಕಲ್ಯಾಣಿ. ಇಂದು ದಾರಿ ಸುಗಮವೆಂದು ಕಂಡು ಬಂದಿದೆ. ಇದರಲ್ಲಿ ಇನ್ನೆಷ್ಟು ಅಡೆತಡೆಗಳಿವೆಯೋ ನೋಡಬೇಕಾಗಿದೆ. ನಮ್ಮ ಜೀವನದಲ್ಲಿ ಹೋರಾಟ ಆರಂಭವಾಗಿಲ್ಲ. ಇದು ವರೆವಿಗೂ ಯಾರೋ ನಮಗಾಗಿ

ಹೋರಾಡುತಿದ್ದರು. ಇನ್ನು ಅದು ನಮ್ಮ ಪಾತು. ನಾವೇ ಹೋರಾಡ ಬೇಕು. ನಾವೇ ತಡೆಗಳನ್ನು ಹಾದು ವಿರೋಧಗಳನ್ನು ಇದಿರಿಸಿ ಮುನ್ನಡೆಯ ಬೇಕು."

"ಈಗ ಅಂಥ ಪರಿಸ್ಥಿತಿ ಬಂದಿಲ್ಲ."

"ಅದು ನಿನ್ನ ಅಭಿಪ್ರಾಯ. ನಾವು ಪ್ರವೇಶಿಸಿರುವ ರಂಗದಲ್ಲಿ ಇರುವವರೆಲ್ಲ ಯೋಧರೇ. ಅವರು ಹೋರಾಡವೆ ತಮ್ಮ ಸ್ಥಾನ ಭದ್ರವಾಗ ದೆಂದು ಅರಿತವರು. ಶಸ್ತ್ರಸನ್ನದ್ಧರಾಗಿ ನಿಂತವರು. ಆಗಲೇ ಅಲ್ಲಿರುವವ ರನ್ನು ನೀನು ನೋಡಿದ್ದಿ."

"ಸರಿ....ಚೆನ್ನಾಗಿದೆ ಅನ್ನುವ ಮುಖ ಒಂದೂ ಇಲ್ಲ."

"ಅದು ಹೆಣ್ಣಿನ ಕಣ್ಣು. ನನಗೆ ನೀನೇ ಸುರ ಸುಂದರಿ. ಆದರೆ ಅಲ್ಲಿರುವ ಇತರರಿಗೆ ಚಿತ್ರತಯಾರಕರಿಗೆ ಅವರ ಸೌಂದರ್ಯ ಹಿಡಿಸಿದೆ, ಒಪ್ಪಿಗೆಯಾಗಿದೆ. ಅವರು ನಟಿಯರಾಗಬಹುದೆಂದು ಕಂಡುಬಂದಿದೆ. ಚಿತ್ರಾಂಗದೆಯ ಪಾತ್ರವಹಿಸಿದವಳನ್ನು ನೀನೂ ನೋಡಿದೆ. ಸ್ಥೂಲ ದೇಹ· ಗುಂಡಗಾದ ಮುಖವಿದೆ. ಆ ಮುಖದಲ್ಲಿ ಯಾವ ಭಾವನೆ–ರಸ–ಹೇಗೆ ಪ್ರಕಟವಾಗುವುದೋ ದೇವರೇ ಬಲ್ಲ. ಆ ಮುಖದ ಯಾವ ಭಾಗವೂ ಚಲಿಸುವಂತೆ ಕಂಡು ಬರುವುದಿಲ್ಲ."

"ಮಾಸ್ತರ್ ಅನ್ನುತಿದ್ದರಲ್ಲ–ಕಾಷ್ಟವದನ ಅಂತ. ಹಾಗೆ ಇದೆ"

"ನಿಜ. ಬಾಯಿಬಿಟ್ಟರೇನೆ ನಕ್ಕಳೆಂದು ಗೊತ್ತಾದೀತು; ಅಥವಾ ಹಲ್ಲು ತೋರಿಸಬೇಕಾಗಬಹುದು. ಕಣ್ಣು ತೆರೆದು ಸಾಧ್ಯವಾದಷ್ಟು ಬಾಯಿ ಬಿಟ್ಟು ಕ್ರೋಧ ವ್ಯಕ್ತಪಡಿಸಬೇಕಾಗಬಹುದು. ಹೇಗಿದ್ದರೂ ಅವಳು ಪ್ರಮುಖನಟಿ."

"ತಾಯಿ ಪಾತ್ರ ತಾನೆ?"

"ಮಗಳ ಪಾತ್ರವಾದರೂ ಅಷ್ಟೇ. ಆಗಲೇ ನಿನ್ನನ್ನು ಕಂಡು ಅವ ರೆಲ್ಲ ಭೀತರಾಗಿರಬಹುದು. ಈಕೆ ನಮ್ಮ ಮುನ್ನಡೆಗೆ ಅಡ್ಡಿಯಾಗ ಬಹು ದೆಂದು ತಿಳಿದು ಕತ್ತಿ ಮಸೆಯಬಹುದು."

"ನಮಗೇಕೆ ಅವರ ಗೋಜಿ. ನೃತ್ಯ ಪ್ರದರ್ಶನ. ಅದನ್ನಷ್ಟು ಮಾಡಿದರೆ ಸರಿ. ಅವರೇನುಬೇಕಾದರೂ ಮಾಡಲಿ, ಚಿತ್ರ ಹೇಗೆ ಬೇಕಾದರೂ ತಯಾರಾಗಲಿ."

"ಅದು ನಿನ್ನ–ನನ್ನ ಅಭಿಪ್ರಾಯ. ಆದರೆ–ಹೆಣ್ಣು ದೂರ ದೃಷ್ಟಿಯುಳ್ಳವಳು. ಕರುಬು ಅವಳ ಸೊತ್ತು. ನೀನು ಈ ತತ್ವಕ್ಕೆ ಹೊರಗಾಗಿರಬಹುದು. ಆದರೆ ಹೆಣ್ಣು ಅನಿಸಿಕೊಳ್ಳಬೇಕಾದರೆ ನೀನೂ ಈ ದಾರಿ ತುಳಿಯಬೇಕಾದೀತು. ನಿನ್ನಲ್ಲಿನ ಇಂದಿನ 'ಬಾಲ' ಬುದ್ಧಿ ಅಳಿದು 'ಹೆಣ್ಣು' ತನ ಬೆಳೆದಾಗ ನಿನಗೇ ತಿಳಿಯುತ್ತೆ."

"ಹೋ–ಹಾಗಿದ್ದರೆ ನಾನಿನ್ನೂ ಮಗು....ಅಂದರೆ ಒಂದು ಮಗುವಿನ ತಾಯಿಯಾಗುವವರೆಗೆ ಹೆಣ್ಣು ಕೂಡಾ ಮಗುವೇ ಅನ್ನಿ"

"ಆ ಮಾತು ಬೇರೆ ಕಲ್ಯಾಣಿ. ನರ್ತಕಿ ತನ್ನ ಮಕ್ಕಳನ್ನೇ ತಿಂದು ಬಾಳುತ್ತಾಳೆ ಎಂಬ ಗಾದೆಯಿದೆ. ಅಂದರೆ ಆ ಕುಣಿತದಿಂದಾಗಿ ಅವಳಿಗೆ ಮಕ್ಕಳೇ ಆಗುವುದಿಲ್ಲ–ಅಂತ. ನಿನಗೂ ಹಾಗೇ ಆದರೂ ಆಗಬಹುದು. ಆದರೆ ಸಿನಿಮಾ ಸೇರಿದರೆ ನರ್ತಕಿಯರಲ್ಲದವರೂ ಆ ಗಾದೆಗೆ ಕಾರಣರಾಗುತ್ತಾರೆ" ಎಂದು ಕೃಷ್ಣ ನಕ್ಕ. ಅವನ ಮಾತಿನಲ್ಲಿ ತುಂಬ ಅರ್ಥವಿತ್ತು. ಮುಂದಿನ ಜೀವನದ ಬಗೆಗೆ ತಿಳಿಯು ಹೇಳುವ ಧ್ವನಿ ಅಡಗಿತ್ತು. ಕಲ್ಯಾಣಿ ಕುತೂಹಲದಿಂದ ಅವನನ್ನೇ ನೋಡುತ್ತ ಅವನ ಮಾತು ಕೇಳುತಿದ್ದಳು.

"ಅಂತೂ ಎಚ್ಚರಿಕೆಯಿಂದಿರಬೇಕು."

"ಹೌದು ಕಲ್ಯಾಣಿ. ನೀನೇ ಹೇಳಿದ್ದೆ–ನಿನಗೆ ಆಗಿದ್ದ ಕನಸಿನ ವಿಚಾರ"

"ಹ್ಞೂ....ಹೌದು...."

"ಅದನ್ನೇ ನೆನೆದುಕೊಳ್ಳು. ಆ ಕಾಡು, ಹಾವು, ಹುಲಿಗಳೆಲ್ಲ ಇಲ್ಲಿ ಇವೆ–ಎಂದು ತಿಳಿದುಕೊಂಡೇ ಮುನ್ನಡೆ."

ಕೃಷ್ಣರಾವ್ ಮತ್ತು ಕಲ್ಯಾಣಿ ತಮ್ಮ ಭಾವೀ ಜೀವನದ ಬಗೆಗೆ ಬಹಳವಾಗಿ ಚರ್ಚಿಸಿದರು, ವಿಚಾರ ಮಾಡಿದರು. ನೆನಪಾದಾಗಲೆಲ್ಲ ಯಾವುದಾದರೊಂದು ವಿಚಾರವನ್ನೆತ್ತಿ ಸಮಸ್ಯೆ ಬಗೆಹರಿಸಿಕೊಳ್ಳುತಿದ್ದರು. ತಮ್ಮ ಜೀವನ ಸುಗಮವಾದ ಬಗೆಗೆ ಆನಂದವಾಗಿದ್ದಷ್ಟೆ, ಮುಂದಿನ ದಾರಿಯ

ಬಗೆಗೆ ಅವರಲ್ಲಿ ವಿಚಾರ ಮೂಡಿತ್ತು. ಬೇರೆ ಮನೆ ಮಾಡಿಕೊಂಡು ಬಾಳಬೇಕು. ಈ ಚಿತ್ರದಿಂದ ಬರುವ ಹಣದಿಂದ ಆರು ತಿಂಗಳು ಸುಖವಾಗಿ ಕಾಲ ಕಳೆಯಬಹುದು. ಮುಂದಿನ ದಾರಿ? ಬೇರೆ ಚಿತ್ರದ ಯೋಚನೆ ಮಾಡಬೇಕು. ಹಾಗೇ ದಾರಿ ಸುಲಭವಾಗಿ ಚಿತ್ರದಲ್ಲಿ ಕೆಲಸ ಸಿಗುತ್ತ ಸಾಗಿದರೆ ಆರ್ಥಿಕ ಸಮಸ್ಯೆ ಬಗೆ ಹರಿದೀತು. ಆ ದಾರಿ ಕಠಿಣವಾದರೆ? ಮುಂದಿನ ಉಪಾಯ?

ನಾಲ್ಕು ಸಂಗೀತ ಪಾಠ ಸಿಗಬಹುದು, ಅದರಿಂದ ಹೇಗಾದರೂ ತನ್ನ ಖರ್ಚು ಹುಟ್ಟಿಸಿಕೊಳ್ಳಬಹುದೆಂದು ಕೃಷ್ಣರಾಯನಿಗೆ ಭರವಸೆ ಇತ್ತು. ಹಾಗೇ ನಾಲ್ಕು ಡ್ಯಾನ್ಸ್ ಪಾಠ ಹಿಡಿದುಕೊಳ್ಳುತ್ತೇನೆ ಎಂದು ಕಲ್ಯಾಣಿ ತನ್ನ ಯೋಜನೆಯನ್ನೂ ಮುಂದಿಟ್ಟಳು.

ಬಂದುದನ್ನೆಲ್ಲ ಇದಿರಿಸಿ ಮುನ್ನಡೆಯೋಣ. ನಾವು ವಿಜಯಶಾಲಿಗಳಾಗುತ್ತೇವೆ ಎಂದು ಅವರು ನಿರ್ಧರಿಸಿದರು. ಯಾವ ಅಭಿಪ್ರಾಯ ತೋಚಿದರೂ, ಪರಸ್ಪರ ಚರ್ಚಿಸಿ, ಸೌಹಾರ್ದ ಬೆಳೆಸಿಕೊಳ್ಳಬೇಕೆಂದೂ ತೀರ್ಮಾನಿಸಿದರು.

ಮರು ದಿನದಿಂದಲೇ ನೃತ್ಯದ ಅಭ್ಯಾಸಸಾಗಲು ವ್ಯವಸ್ಥೆಯಾಯಿತು. ಕಂಪೆನಿ ಮನೆಗೆ ತೆರಳಿ, ಅಲ್ಲೀ ಚಿತ್ರಕ್ಕೆ ಅಳವಡಿಸಬೇಕಾದ ನೃತ್ಯವನ್ನು ಇಬ್ಬರೂ ಹೊಂದಿಸಿದರು. ಕೃಷ್ಣ ಶ್ಲೋಕವನ್ನು ಹಾಡಬೇಕೆಂದೂ ತಿರ್ಮಾನವಾಯಿತು. ಡೈರೆಕ್ಟರ್ ಸಾಮಿ, ಶಾಸ್ತ್ರಿಗಳು ಇಬ್ಬರೂ ಹೆಚ್ಚು ಆಸಕ್ತಿ ವಹಿಸಿದರು.

ಅಂದೇ ಕಲ್ಯಾಣಿಯನ್ನು ಒಂದೆರಡು ನೃತ್ಯ ತೋರಿಸಬೇಕೆಂದು ಶಾಸ್ತ್ರಿಗಳು ಕೇಳಿಕೊಂಡರು. ಅವಳ ನೃತ್ಯ, ಅಭಿನಯ, ತಾಳಜ್ಞಾನ ಅಂಗಾಭಿನಯ, ಮುಖಾಭಿನಯ, ಕರಣಗಳನ್ನು ಕಂಡು ಶಾಸ್ತ್ರಿಗಳಿಗೆ ಪರಮಾನಂದವಾಯಿತು. ತುಂಬಿದ ಮನದಿಂದ ಆಶೀರ್ವದಿಸಿದರು. ಇತರ ಕಲಾವಿದರೂ ಕಲಾವಿದೆಯರೂ ಅವಳ ನೃತ್ಯಕ್ಕೆ ಸೋತು ಶರಣಾದರು. ಕಂಪೆನಿಯ ಎಲ್ಲರಿಗೂ ಅವಳ ಬಗೆಗೆ ವಿಶ್ವಾಸ ಅಭಿಮಾನ ಮೂಡಿತು. ಜತೆಗೆ ಭೀತಿಯೂ ಹುಟ್ಟಿಕೊಂಡಿತು.

ಕಲ್ಯಾಣಿ ಎಲ್ಲರ ಸೌಹಾರ್ದವನ್ನೂ ಗಳಿಸಿ, ಅವರ ನೆಚ್ಚಿನ ಮೆಚ್ಚಿನ ಗೆಳತಿಯಾದಳು. ಕಂಪೆನಿಯ ನಟಿಯರೂ ನರ್ತಕಿಯರೂ ಅವಳನ್ನು ಹೊಗಳಿ ಉಬ್ಬಿಸಿದರು. ಪ್ರತಿಯೊಬ್ಬರೂ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಮುಂದೆ ನಡೆದರು.

ಕಲ್ಯಾಣಿಯನ್ನು ಕಂಡಾಗಿನಿಂದ ತಲೆಕೆಡಿಸಿಕೊಳ್ಳಲು ಮೊದಲುಮಾಡಿದ್ದ ನಾರಣಪ್ಪನಿಗೆ ಪೂರ್ಣವಾಗಿ ಹುಚ್ಚು ಹಿಡಿಯಿತು. ರುದ್ರಪ್ಪನಂತೂ ಅವಳ ನರ್ತನ ಕಂಡು ಬಾಯಿನೀರು ಸುರಿಸಿದ. ಇವಳು ಮುಖ್ಯಪಾತ್ರ ವಹಿಸಿದ್ದರೆ, ನನ್ನ ಪಾಲಿನ ಪಂಚಾಮೃತವಾಗಿದ್ದರೆ....ಎಂದೇನೋ ಅವನ ಮನ ಕೂಗಾಡಿತು. ಅವಳೆಡೆ ಬೀರಿದ ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸುವುದು ಕಷ್ಟವಾದರೂ, ತಪ್ಪು ಕಲ್ಪನೆ ಮೊಳೆಯಬಹುದೆಂದು ಇಬ್ಬರೂ ಎಚ್ಚರಿಕೆ ವಹಿಸಿದ್ದರು.

ಇವರನ್ನು ಅರ್ಥಮಾಡಿಕೊಂಡವರು ಶಾಂತಾ ಮತ್ತು ನಾಗರತ್ನ.

ಇವಳ ಸ್ನೇಹಗಳಿಸಿ ಹೇಗಾದರೂಮಾಡಿ ತನ್ನ ಸ್ಥಾನ ಉಳಿಸಿಕೊಳ್ಳದಿದ್ದರೆ ಉಳಿಗಾಲವಿಲ್ಲವೆಂದು ತಿಳಿದವನು ರಾಜು.

ಕಲ್ಯಾಣಿ ತನ್ನ ನೃತ್ಯಗಳಿಂದ ಎಲ್ಲರ ಹೃದಯವನ್ನೂ ಕಲಕಿಬಿಟ್ಟಳು. ಎಂತಲೇ ನೀರ ಅಡಿಯಲ್ಲಿ ಅಡಗಿದ್ದುದೆಲ್ಲ ಕಾಣಲು ಸುಲಭವೂ ಆಯಿತು.

## ೧೧

"ಬಹಳ ಚೆನ್ನಾಗಿ ನರ್ತಿಸುತ್ತಾಳೆ."

"ಅಭಿನಯದಲ್ಲಿ ಅವಳನ್ನು ಮೀರಿಸುವವರೇ ಇಲ್ಲ."

"ಆ ಹಾಡು ಹಾಡುವಾಗ ಕೃಷ್ಣ ಎಲ್ಲೋ ಇದ್ದಾನೆ, ಹೋಗುತ್ತಾ ಇದ್ದಾನೆ ಅನ್ನಿಸಿತು; ಕೆಲವರೆಲ್ಲ ಅವಳು .ನೋಡಿದತ್ತ ನೋಡಿ ಹುಡುಕಾಡುತ್ತಿದ್ದರು."

"ಪೋಗದಿರೆಲವೊ ರಂಗ....ಹಾಡೆ ?"

"ಹ್ಞೂ....ನನಗೆ ಎಲ್ಲವೂ ಮರೆತುಹೋಯಿತು."

" ಆ ಕಣ್ಣು; ಆ ಮುಖ ಭಾವ, ಆ ಕೈಯ ಅಭಿನಯ, ಕಾಲು ಹೆಜ್ಜೆ ಅಬ್ಬ ಎಂಥ ಅಭ್ಯಾಸ...."

" ಅಷ್ಟಲ್ಲದೆ ನಾಟ್ಯ ಸರಸ್ವತಿ ಅಂತ ಬಿರುದು ಕೊಡುತ್ತಾರೇನು ? "

" ಇಷ್ಟು ಎಳೆಯ ಪ್ರಾಯದಲ್ಲೆ ಈ ಜಾಣ್ಮೆ ಆಶ್ಚರ್ಯ."

" ಹತ್ತು ವರ್ಷ ಅಭ್ಯಾಸ ಮಾಡಿದ್ದಾಳಂತೆ."

" ಅದಕ್ಕೆ, ಅಷ್ಟು ಅದ್ಭುತ ಪಾಂಡಿತ್ಯ. ಆ ಮೈ....ನಾನೇನೋ ಅಂತಿದ್ದೆ....ಬಳ್ಳಿಯ ಹಾಗೆ ಬಳುಕುತ್ತಿದೆ....ಮಿಂಚಿನಂತೆ ಚಲಿಸುತ್ತಾಳೆ.... ಹೂವಿನಂತೆ ಹಾರುತ್ತಾಳೆ...."

" ಕಲಿತರೆ ಹಾಗೆ ಕಲಿಯಬೇಕು...."

" ಅಂಥವರಿಂದ ಕಲಿಯಬೇಕು...."

" ನಮ್ಮ ಮೇಸ್ಟ್ರು....ಆನೆ ಕುಣಿದ ಹಾಗೆ ಕುಣಿಯುತ್ತಾರೆ...."

ಎಲ್ಲರೂ ನಕ್ಕರು.

ಕಲ್ಯಾಣಿಯನ್ನು ನೋಡಿದಾಗಿನಿಂದ ಕಂಪೆನಿಯ ವಾತಾವರಣವೇ ಬದಲಾಯಿತು. ನೃತ್ಯಕ್ಕೆಂದು ಬರುತಿದ್ದ ಹುಡುಗಿಯರಿಗೆಲ್ಲ ಇಂಥ ರೂಪ ತಮಗಿಲ್ಲವಲ್ಲ ಎಂದು ದುಃಖವಾಯಿತು.

ಶಾಂತಾನಿಗೆ ಈಕೆ ಎಲ್ಲಿ ತನ್ನ ಸ್ಥಾನವನ್ನೇ ಅಪಹರಿಸುವಳೋ ಎಂಬ ಭೀತಿ ಹುಟ್ಟಿತು. ಹೇಗಾದರೂ ಮಾಡಿ ಇವಳು ಕಂಪೆನಿ ಮನೆಗೆ ಬಾರದಂತೆ ತಡೆಯಬೇಕು. ಪಾಲುಗಾರರ ಸ್ನೇಹ ಸಂಪಾದಿಸದಂತೆ ನೋಡಿಕೊಳ್ಳಬೇಕು. ಚಿತ್ರದಲ್ಲಿ ಕೇವಲ ನೃತ್ಯ ಮಾತ್ರ ಅಭಿನಯಿಸಿ ಹೊರಟುಹೋಗುವಂತೆ ಮಾಡಬೇಕೆಂದು ನಿರ್ಧರಿಸಿದಳು. ಅವಳು ಕಂಪೆನಿ ಮನೆಗೆ ಕಾಲಿಟ್ಟರೆ ಮತ್ತಾರೂ ಅಲ್ಲಿ ಸುಖವಾಗಿರುವುದು ಸಾಧ್ಯವಿಲ್ಲವೆಂದು ಅವಳನ್ನು ಕಂಡೊಡನೆಯೇ ಶಾಂತನಿಗೆ ಮನದಟ್ಟಾಯಿತು.

ನಾಲ್ಕು ದಿನದ ಶೂಟಿಂಗ್ ನಡೆದಿದೆ, ತಾನು ಅದರಲ್ಲಿ ಅಭಿನಯಿಸಿದ್ದೇನೆ. ಈಕೆಯ ಕಡೆಗೆ ಮಾಲಿಕರ ದೃಷ್ಟಿ ಹರಿದರೆ ಆ ಚಿತ್ರವನ್ನೇ ಸುಟ್ಟು ಹಾಕಿ ಇವಳೇ ಅಭಿನಯಿಸುವಂತೆ ಮಾಡಬಹುದು. ಆದರಿಂದ ತನ್ನ ಭವಿಷ್ಯವೇ ಮುಗಿದಂತಾಗುತ್ತದೆ. ಗಂಡಿಗೆ ಕೃತಜ್ಞತೆಯಿಲ್ಲ. ಹೂವಿಂದ ಹೂವಿಗೆ ಹಾರುವ ತುಂಬಿಯ ಬಳಗದವರು ಅವರು. ನಾನೇ ಸುಂದರಿ

ಎಂದುಕೊಂಡು ಹೊಗಳಿದ ರುದ್ರಪ್ಪನವರೇ ಈಗ ಕಲ್ಯಾಣಿಯ ಸೌಂದರ್ಯಕ್ಕೆ ಸೋತು ಅವಳಿಗೆ ಅಂಟಿಕೊಳ್ಳಬಹುದು. ಅವಳೇ ಚಿತ್ರಾಂಗದೆಯಾದರೂ ಹೆಚ್ಚಲ್ಲ ಎಂದು ನಾಗರತ್ನ ಚಿಂತಿಸಿದಳು.

ಇಬ್ಬರು ಪಾಲುಗಾರರ ಮನೋಭಾವವನ್ನು ಅರ್ಥ ಮಾಡಿಕೊಂಡು ಅವರ ಅಶಕ್ತಿಯನ್ನು ಸದುಪಯೋಗ ಪಡಿಸಿಕೊಂಡಿದ್ದ ಕಲಾವಿದೆಯರಿಗೆಲ್ಲ ಈಗ ಭೀತಿ ಆರಂಭವಾಯಿತು. ನಾಗರತ್ನ ತನ್ನ ಮಾನ ಕಾಪಾಡೆಂದು ಶಾಂತನ ಸಹಾಯ ಬೇಡಿದಳು. ಶಾಂತಾ ಕೂಡಾ ಈ ಬಗೆಗೆ ವಿಚಾರ ಮಾಡುತ್ತಿರುವುದು ತಿಳಿದು ಬಂದು ಅವಳು ಧೈರ್ಯ ತಳೆದಳು.

"ನಾವೀಗ ತಲೆ ಕೆಡಿಸಿಕೊಂಡರೆ ಕೆಲಸ ಕೆಟ್ಟು ಹೋಗುತ್ತೆ," ಎಂದಳು ಶಾಂತಮ್ಮ.

"ಮತ್ತೇನು ಮಾಡು ಅಂತೀಯೆ? ಆಗಲೇ ನಮ್ಮ ಕಂಪೆನಿಯ ಯಜಮಾನರು ಅವಳ ಹೆಸರು ಹೇಳಿ ಬಾಯಿ ನೀರುಸುರಿಸುತಿದ್ದಾರೆ."

"ನಿಜ! ಹೊಗಳುತ್ತಾರೆ; ಸಿಕ್ಕಿದರೆ ತಲೆಯ ಮೇಲೆ ಹೊತ್ತು ಕೊಂಡು ಬೀದಿ ತಿರುಗಲೂ ಸಿದ್ಧವಾಗಿದ್ದಾರೆ."

"ಸಿಗದೆ ಏನು ಮಹಾ? ಇಂದಲ್ಲ ನಾಳೆ ಸಿಗುತ್ತಾಳೆ. ನಮ್ಮ ಬಾಳು...."

"ಅದೂ ಯೋಚಿಸಬೇಕಾದ್ದೆ"

"ಹೌದು. ಅದಕ್ಕೇ ನನಗೆ ತಲೆ ಕೆಟ್ಟಿರುವುದು."

"ನಿಜ ನಾಗರತ್ನ. ಆದರೆ ಉಪಾಯದಿಂದ ಕೆಲಸವಾಗಬೇಕು. ನಾವೀಗ ರೇಗಾಡಿ ಹೆಂಗುಸರ ಹಾಗೆ ಆಡಿದರೆ...."

"ನೀನೊಬ್ಬಳು ಮಹಾ ಗಂಡಸು...."

"ನಿಜ ಹೇಳಿದೆ. ಈಗ ಗಂಡುಸರ ಹಾಗೇ ಕೆಲಸಮಾಡಬೇಕು. ನಮ್ಮ ಆಳ ಅವರಿಗೆ ತಿಳಿಯಬಾರದು."

"ಅಂದರೆ....ಅದೇನೋ ನನಗೆ ಅರ್ಥವಾಗೊಲ್ಲಮ್ಮ."

"ನಾವೂ ಅವಳನ್ನು ಹೊಗಳಬೇಕು."

"ಅವರ ಕಣ್ಣು ಬೇಗನೇ ಅವಳ ಕಡೆಗೆ ತಿರುಗುವಂತೆ ಮಾಡಬೇಕು. ನಮ್ಮ ಬಾಯಲ್ಲಿ ಮಣ್ಣು ಹಾಕಿಕೊಳ್ಳಬೇಕು. ಅಲ್ಲವೆ...."

"ಸ್ವಲ್ಪ....ಕೇಳು....ನಾವು ಹೊಗಳಿದರೆ....ನಾವೂ ಅವರ ಕಡೆಗೇ ಇದ್ದೇವೆ ಅಂತ ತಿಳಿಯುತ್ತಾರೆ."

"ತಿಳಿಯದಿದ್ದರೆ ಹಾಳಾಗಲಿ...."

"ಹಾಗೇ ಕಲ್ಯಾಣಿಯ ಸ್ನೇಹವನ್ನು ಮಾಡಿಕೊಳ್ಳಬೇಕು."

"ಆ ಮೇಲೆ ಅವಳಿಗೆ ಪಟ್ಟಕಟ್ಟಿ ನಾವು ವನವಾಸ ಸೇರಬೇಕು."

"ಹಾಗಲ್ಲಮ್ಮ....ಸ್ನೇಹವೇ ನಮ್ಮ ಜಾತಿಗೆ ಅವಳನ್ನು ಸೇರಿಸುವ ದಾರಿ. ವಿರೋಧಮಾಡಿದರೆ ಎರಡು ಪಂಗಡವಾಗುತ್ತೆ. ಅವಳ ಕಡೆಗೂ ಕೆಲವರು ಸೇರುತ್ತಾರೆ. ಪರಸ್ಪರ ಬೈದುಕೊಂಡು ನಾವು ಜಗಳವಾಡಿದರೆ ಯಾರಿಗೆ ಲಾಭ?"

"ಈಗ ಸದ್ಯಕ್ಕೆ ಅವಳಿಗೇ ಲಾಭ."

"ಗೊತ್ತಾಯಿತೇ? ತಾನು ಮಹಾ ಪತಿವ್ರತೆ ಅಂತ ಇರುವವರ ನಡುವೆ ನಮ್ಮಂತಹ ಮಾನವಂತರಿಗೆ ಎಡೆ ಇರುವದಿಲ್ಲ."

"ಅವರ ಸೊಕ್ಕು ಮುರಿಯಬೇಕು...."

"ಹೇಗೆ....ಜಗಳವಾಡಿದರಾಯಿತೇ? ಅವಳನ್ನು ಮೊದಲು ನಮ್ಮ ದಾರಿಗೇ ಎಳೆಯಬೇಕು. ಆಗ ಆ ಅಹಂಕಾರ ಅಳಿಯುತ್ತೆ. ಅವಳ ಗುಟ್ಟು ನಮ್ಮ ಕೈಯಲ್ಲಿರುತ್ತೆ; ಜುಟ್ಟೂ ಇರುತ್ತದೆ."

"ಸರಿ ಸರಿ....ಇವಳನ್ನು ನಾರಣಪ್ಪನಿಗೆ ಒಪ್ಪಿಸುವ ದಾರಿ ನಿನ್ನದು."

ಎಂದು ನಾಗರತ್ನ ಬುಸುಗುಟ್ಟುತ್ತ ಸಿಟಿದು ನಿಂತಳು. ಶಾಂತಾ ನಗುತ್ತ ಹೇಳಿದಳು—

"ಕುಳಿತುಕೊಳ್ಳಮ್ಮ. ಯೋಚನೆಮಾಡುವ ಮೊದಲೇ ಹಾರಾಡಿದರೆ ಏನು ಬಂತು? ನಾವಿಬ್ಬರೂ ಜಗಳವಾಡಿಕೊಂಡರೆ ಎಲ್ಲಾ ಮುಗಿದಹಾಗೆ."

"ನಾನೇನು ಜಗಳ ತೆಗೆದೆನೇ."

"ಅಲ್ಲವೇ? ರೇಗಾಡುತ್ತಿ. ಹೊರಟುಹೋಗುತ್ತಿ."

"ಇಲ್ಲಮ್ಮ. ಏನು ಹೇಳುತ್ತೀಯೋ ಎಲ್ಲ ಹೇಳು. ನನಗಂತೂ ಪ್ಲೇನ್' ಮಾಡಲು ಬುದ್ಧಿ ಸಾಲದು."

" ಅವಳ ಸ್ನೇಹ ಸಂಪಾದಿಸಿ ಬುಟ್ಟಿಯಲ್ಲಿ ಹಾಕಿಕೊಳ್ಳೋಣ. ಗೊತ್ತಾಯಿತೇ ? ಆಗ ಅವಳು ನಮ್ಮ ರಾಜುವಿನ ಕೆಲಸಕ್ಕೆ ಕಲ್ಲುಹಾಕು ವುದು ತಪ್ಪುತ್ತೆ. "

" ಅದು ನಿಜ. ರಾಜು ಇದ್ದರೆ ಪರಮಶಿವ. "

" ಆ ಬಳಿಕ ಇಲ್ಲಿನ ಕತೆ ಹೇಳಿದರೆ ಸರಿ. ಯಜಮಾನರ ಬಗ್ಗೆ ಬಣ್ಣ ಬಳಿದು ಹೇಳೋಣ. ಅವಳೇ ಹೆದರಿ ಅವರ ಕಡೆಗೂ ನೋಡುವುದಿಲ್ಲ. "

" ಹ್ಞೂ...."

" ಕಲ್ಯಾಣಿ ಅಂದರೆ ರಿವಾಲ್ವರ್ ಇದ್ದ ಹಾಗೆ. ಅದು ನಮ್ಮ ಮೇಲೆ ತಿರುಗದ ಹಾಗೆ ಮೊದಲು ನೋಡಬೇಕು. ಆ ನಂತರ ಯಾರು ನಮಗೆ ಅಡ್ಡ ಬಂದರೂ ಅವರನ್ನು ಉಡಾಯಿಸಬಹುದು. "

" ಅಂದರೆ.... ಅದೇನಮ್ಮ...."

" ನಾರಣಪ್ಪ ಅವಳ ಕಡೆ ಕಣ್ಣು ತಿರುಗಿಸಿ ನಮಗೆ ಕೈಕೊಟ್ಟರೆ ರುದ್ರ ಪ್ಪನವರಿಗೆ ನಾರಣಪ್ಪ ಅವಳ ಕಡೆ ತಿರುಗಿದ್ದಾರೆ ಎಂದರೆ ಸರಿ. ರುದ್ರಪ್ಪ ನವರಿಗೂ ಅದೇ ಅಸ್ತ್ರ. ಪರಮಶಿವ ನಮಗೆ ಅಡ್ಡ ಕಾಲಿಟ್ಟರೂ ಹಾಗೇ, ಅವನಿಗೂ ಅವಳಿಗೂ ಗಂಟುಹಾಕಿಸಿದರೆ ಯಜಮಾನರಿಬ್ಬರೂ ಸೇರಿ ಅವ ನನ್ನು ಒದ್ದು ಓಡಿಸುತ್ತಾರೆ. ಈ ಅಸ್ತ್ರವನ್ನು ಯಾರ ಮೇಲೆ ಬೇಕಾದರೂ ಉಪಯೋಗಿಸಬಹುದು. "

" ನಿಜ. ಎಲ್ಲರಿಗೂ ಅವಳ ಮೇಲೇ ಕಣ್ಣಿದೆ. "

" ಆದರೆ.... ನಮ್ಮ ಜಾತಿಗೆ ಸೇರುವ ವಿಚಾರ, "

" ಅದು ನಿಧಾನವಾಗಿ ಆಗುತ್ತೆ. ಹಣ ಯಾರ ಹತ್ತಿರ ಬರುತ್ತೆ ಗೊತ್ತೇ ? "

" ಅನ್ಯಾಯ ಮಾಡಿದವರ, ಚಾಂಡಾಲಬುದ್ಧಿಯ ನೀಚರ ಹತ್ತಿರ. ಅಥವಾ ನಮ್ಮಂಥವರ ಹತ್ತಿರ " ಎಂದು ನಕ್ಕಳು ನಾಗರತ್ನ.

" ನಿಜ. ಹೆಣ್ಣು ಹೊನ್ನು ಮಣ್ಣು ಇವೆಲ್ಲ ಒಂದೇ ಜಾತಿಯವು. ರಾಕ್ಷಸಬುದ್ಧಿಯವರ ಹತ್ತಿರವೇ ಹೋಗುತ್ತವೆ. "

" ಇವಳೂ...."

" ಇವಳೂ ಹೋಗಬೇಕು, ಇವಳ ತಾಯಿಯೂ ಹೋಗಬೇಕು, ಅದ್ಯಾಕೆ ಚಿಂತೆ. ಪತಿವ್ರತೆಯರೆಲ್ಲ ವ್ಯಭಿಚಾರಿಗಳನ್ನೇ ಹಿಡಿಯುತ್ತಾರೆ. ಬ್ರಹ್ಮಚಾರಿಗಳನ್ನಲ್ಲ–ತಿಳಿಯಿತೇ ? "

" ಯಾರಾದರೇನು ? "

" ಹಾಗಲ್ಲ. ಬ್ರಹ್ಮಚಾರಿಯಾದರೆ ವಿವಾಹವಾದರೂ ಆಗಬಹುದು. ಮುಂದೆ ಗರತಿ ಬಾಳಾದರೂ ದೊರೆಯುಬಹುದು. ಅಥವಾ ಆತ ವಿಶ್ವಾಸ ವಿರಿಸಿ ಅಂಥಹಳನ್ನು ನೆನೆದು ಸಹಾಯಮಾಡಲೂ ಬಹುದು. ಆದರೆ– ವ್ಯಭಿಚಾರಿಗೆ ಸಾವಿರದೊಡನೆ ಈ ಸಾವಿರದ ಒಂದು. ಯಾರೂ ಅವನಿಗೆ ನೆನಪಿರುವುದಿಲ್ಲ. ಯಾರಿಗೂ ಅವನಿಂದ ಉಪಕಾರವಿಲ್ಲ. ಅದಕ್ಕೇ ಆತ ಕೈಗೆ ಸಿಕ್ಕಾಗಲೇ ಸುಲಿಗೆಮಾಡಬೇಕು. "

" ಸರಿಯಮ್ಮ. ನಿನ್ನ ಪ್ರಾಯಕ್ಕೆ ಹೆಚ್ಚಿದ ಅನುಭವ ನಿನ್ನದು. "

" ಅಷ್ಟಿಲ್ಲವಾಗಿದ್ದರೆ ಯಾವಾಗಲೋ ನಾನಿಲ್ಲಿಂದ ಹೊರಟುಹೋಗಬೇಕಾಗಿತ್ತು. "

" ಅದೂ ನಿಜ. ಇಲ್ಲವಾದರೆ–ರಾಜು ಬರುತಿದ್ದನೇ ? "

" ಅವನು ಬಂದುದರಿಂದ ಪರಮಶಿವನೂ ನಮ್ಮವನಾದ. ಈ ಪತಿವ್ರತೆಯರನ್ನೆಲ್ಲ ನಮ್ಮ ದಾರಿಗೆ ತಿರುಗಿಸಲು ಸಾಧ್ಯವಾಯಿತು. "

" ಸುಬ್ಬಮ್ಮ ಬರುತಿದ್ದಾಳೆ. ಅವಳು ತುಂಬ ಹೊಗಳಿದಳು—ಕಲ್ಯಾಣಿಯನ್ನು. "

ಸುಬ್ಬಮ್ಮ ನಾಟಕ ಕಂಪೆನಿಯಲ್ಲಿ ಚಿಕ್ಕ ಪುಟ್ಟ ಪಾರ್ಟು ಮಾಡಿಕೊಂಡಿದ್ದವಳು. ಅವಳಿಗೆ ಮೊದಲಿನಿಂದಲೂ ನಾಟಕದ ಹುಚ್ಚು. ಬಯಲು ನಾಟಕದಿಂದ ಮೊದಲಾದ ಈ ಅಭಿರುಚಿ ಕಂಪೆನಿಯ ನಾಟಕಗಳವರೆಗೂ ಬೆಳೆದು ನಿಂತಿತು. ಹಾಗೇ ಹಳ್ಳಿನಾಟಕಗಳಲ್ಲಿ ಪಾರ್ಟುಮಾಡಲು ಮುಂದಾದಳು. ಹಳ್ಳಿಯ ಹತ್ತಾರು ಮಂದಿ ರೈತರೂ ಇತರರೂ ಸೇರಿ ಲಂಕಾದಹನ, ರಾಮಪಾದುಕಾ ಪಟ್ಟಾಭಿಷೇಕ ಮುಂತಾದ ಪೌರಾಣಿಕ ನಾಟಕಗಳನ್ನಾಡುವಾಗ ಅವರಿಗೆ ಅತೀ ಅಗತ್ಯವಾದ ವಸ್ತು "ಇಸ್ತ್ರಿಪಾಲ್ಟು." ಇಸ್ತ್ರಿಪಾಲ್ಟಿನವಳು ನೋಡುವುದಕ್ಕೆ ಚೆನ್ನಾಗಿದ್ದರಂತೂ ನಾಟಕ ಖಂಡಿತ ಯಶಸ್ವಿಯಾಗುತ್ತದೆ ಎನ್ನುವ ಧೈರ್ಯ. ಪಾಲ್ಟುದಾರ ಗಂಡಸರೂ

ಪ್ರಾಕ್ಟೀಸಿಗೆ ತಪ್ಪದೆ ಬರುತ್ತಾರೆ; ನಾಟಕ ನೋಡಲು ಸುತ್ತುಮುತ್ತಲಿನ ಹಳ್ಳಿಗಳಿಂದಲೂ ಜನ ಬರುತ್ತಾರೆ. ಹೀಗಾಗಿ ಸುಬ್ಬಮ್ಮನಿಗೆ ಛಾನ್ಸು ಬೇಗನೆ ದೊರೆಯಿತು, ಅವಳ ಹೆಸರೂ ಹರಡಿ ಕೀರ್ತಿ ಬೆಳೆದು ಅವಳು ನಾಟಕದ ಸುಬ್ಬಲಕ್ಷ್ಮಿಯಾದಳು.

ಸುಬ್ಬುಲಕ್ಷ್ಮಿ ನೋಡುವುದಕ್ಕೆ ಸುಂದರವಾಗೇ ಕಾಣುತ್ತಾಳೆ. ಮುಖ್ಯವಾಗಿ ಬೆಳ್ಳಗಿನ ಚರ್ಮವಿದೆ. ಕರಿ ಚರ್ಮವನ್ನೇ ದಿನನಿತ್ಯ ನೋಡುವ ಜನರಿಗೆ ಅವಳು ಮೇನಕೆ. ದೇಹವೂ ಅವಳ ಅನುಭವ, ಕಳೆದ ಜೀವನಗಳನ್ನು ಹೊತ್ತು ಸ್ಥೂಲವಾಗಿತ್ತು. ಅಷ್ಟು ಎತ್ತರವೂ ಅಲ್ಲ, ಕುಳ್ಳೂ ಅಲ್ಲದ ದೇಹ· ತುಂಬಿದ ಎದೆ, ಮೈ. ಆನೆಯಂತಹ ನಡೆ. ಅವಳನ್ನು ಕಂಡು ಅಭಿನಯಿಸದಿದ್ದರೂ ಚಿಂತೆಯಿಲ್ಲ, ನೋಡಲು ಚೆನ್ನಾಗಿದ್ದಾಳೆ; ರಂಗಭೂಮಿಯ ಮೇಲೆ ಬಂದರೆ ಪ್ರೇಕ್ಷಕರ ಗಮನ ಸೆಳೆಯುವ ಯೋಗ್ಯತೆ ಇದೆ–ಎಂದು ಎಲ್ಲರಿಂದಲೂ ಹೊಗಳಿಸಿಕೊಂಡಿದ್ದಳು. ಹಾಗೂ ಹೀಗೂ ಅವಳಿಗೆ· ಚನ್ನಕೇಶವ ನಾಟಕಮಂಡಳಿಯಲ್ಲಿ ಕೆಲಸ ದೊರೆಯಿತು; ಅವಳ ಪ್ರಭಾವವೂ ಬೆಳೆಯಿತು. ಅವಳ ಮದುವೆಯಾದ ಗಂಡ ನಾಟಕಕಂಪೆನಿಯ ಸಹವಾಸಕ್ಕೆ ಅಡ್ಡಿ ಬಂದಾಗ ಅವನ ಸಹವಾಸವೇ ಬೇಡವೆಂದು ಹೊರಟುಹೋದ ಸ್ವತಂತ್ರ ಜೀವಿ ಸುಬ್ಬಮ್ಮ. ಆದರೂ, ಅವಳ ಕೀರ್ತಿ ಬೆಳೆದ ಮೇಲೆ ಅವನೂ ರಾಜಿಮಾಡಿಕೊಂಡ. ಸುಬ್ಬಮ್ಮನೂ ತಮುಕೂರಿನಲ್ಲೇ ಒಂದು ಪುಟ್ಟ ಮನೆಮಾಡಿಕೊಂಡು ಸಂಸಾರ ಸಾಗಿಸುವಷ್ಟು ಸ್ಥಿತಿಯನ್ನೂ ಮಾಡಿಕೊಂಡಳು. ಅವಳನ್ನು ಆ ಸ್ಥಿತಿಗೆ ತಂದವರು ಕೊನೆಯವರೆಗೂ ಸಹಾಯ ಮಾಡದಿದ್ದರೂ, ಸುಬ್ಬಮ್ಮ ಮಾತ್ರ ಕೊನೆಯವರೆಗೂ ಹಿಡಿದುಕೊಂಡಿದ್ದುದು ಹಣ್ಣಿನ ಅಂಗಡಿಯ ಸತ್ತಾರ್ ಸಾಹೇಬನನ್ನು. ಅವನು ಸುಬ್ಬಮ್ಮನ ಅಚ್ಚುಮೆಚ್ಚಿನವನಾಗೇ ಉಳಿದ. ಗಂಡನು ಅವಳ ನಾಲ್ಕು ಮಕ್ಕಳಿಂದ ಅಪ್ಪ–ಎಂದು ಕರೆಯಿಸಿಕೊಂಡು ಅದರಿಂದಲೇ ಸಂತೋಷಪಟ್ಟುಕೊಂಡು ಜೀವನ ನಡೆಸುತ್ತಲೂ ಇದ್ದ.

ಮೈಸೂರಿನ ಸಿನಿಮಾ ಕಂಪೆನಿಯ ಜಾಹೀರಾತು ನೋಡಿ ಅವಳ ಆಶೆ ಆಕಾಶಕ್ಕೆ ಹಾರಿತು. ಹತ್ತು ವರುಷ ನಾಟಕದಸೇವೆಮಾಡಿದ್ದೇನೆ. ಈಗ ಸಿನಿಮಾದಲ್ಲಿ ಪಾರ್ಟುಮಾಡಿ ಆ ಒಂದು ಬಯಕೆ ತೀರಿಸಿಕೊಳ್ಳಬೇಕು.

ಎಂದವಳು ನಿರ್ಧರಿಸಿದಳು. ಸಾಯುವ ಮೊದಲು ಒಂದು ಬಾರಿಯಾದರೂ ಸಿನಿಮಾ ಕಂಪೆನಿಗೆ ಸೇರಿ ಸಿನಿಮಾದಲ್ಲಿ ಪಾರ್ಟುಮಾಡಬೇಕೆಂಬುದು ಅವಳ ಬಹುದಿನಗಳ ಬಯಕೆ. ಈ ಬಯಕೆ ಕೈಗೂಡುವ ಸಂದರ್ಭವಿರುವ ವಿಚಾರ ಸತ್ತಾರ್ ಸಾಬಿಗೆ ತಿಳಿಸಿದಾಗ ಅವನು ಅನುಮತಿಕೊಟ್ಟ. ಸುಬ್ಬಮ್ಮ ಮೈಸೂರಿಗೆ ಪ್ರಯಾಣ ಬೆಳೆಸಿದಳು. ಕಂಪೆನಿಯಲ್ಲಿ ಪಾರ್ಟು ದೊರೆಯದಿದ್ದರೆ ದೊರಕಿಸಿಕೊಂಡೇನು ಎಂದು ಧೈರ್ಯ ಹೇಳಿ ಊರಿನಿಂದ ಬಂದಿದ್ದ ಸುಬ್ಬಮ್ಮ ತನ್ನ ಹಟ ಸಾಧಿಸಿದಳು. ನಾಟಕದಲ್ಲಿನ ಅಭಿನಯ ಅವಳ ರಕ್ತಗತವಾದಂತೆ, ಅದನ್ನು ಜೀವನದಲ್ಲೂ ಬಳಸುತ್ತಿದ್ದ ಅವಳನ್ನು ಕಂಡು ನಾರಣಪ್ಪ—"ಇರಲಿ, ಚೆನ್ನಾಗಿದ್ದಾಳೆ, ವೈಯಾರಿ. ಮುದುಕಿಯಾಗುವ ದಿನ ಹತ್ತಿರವಾಗಿದ್ದರೂ ಹುಡುಗಿಗಿಂತಲೂ ಚುರುಕಾಗಿದ್ದಾಳೆ," ಎಂದು ಅಭಿಪ್ರಾಯವಿತ್ತ. ನೀವು ಕೊಟ್ಟುದು ಸಾಕು. ಸಂಬಳದ ವಿಚಾರ ನನ್ನದು ಚರ್ಚೆಯೇ ಇಲ್ಲ ಎಂದವಳು ಹೇಳಿದ ಮೇಲಂತೂ ರುದ್ರಪ್ಪ ಪೂರ್ಣಒಪ್ಪಿಗೆ ನೀಡಿದ. ಸುಬ್ಬಮ್ಮ ಸಿನಿಮಾ ನಟಿಯಾಗಲು ನಿಂತಳು.

ಸ್ವತಃ ಕಲಾವಿದೆಯಾದ ಸುಬ್ಬಮ್ಮನಿಗೆ ತನಗೆ ಸ್ಥಾನ ದೊರೆಯಬೇಕು ಎಂಬುದಷ್ಟೆ ಬಯಕೆಯಾಗಿತ್ತು. ಅವಳಿಗೆ ಮಾಲಿಕರನ್ನು ಸೆಳೆಯುವುದು ಒಂದು ಕಾಲಕ್ಕೆ ಅಗತ್ಯವಿತ್ತು. ಈಗ ಅದೆಲ್ಲ ಯಾಕೆ ಎಂಬಷ್ಟು ತ್ಯಾಜ್ಯ ಮನೋಭಾವ ಬೆಳೆದಿತ್ತು. ಆದರೂ ಅಂಥ ಅಗತ್ಯವಿದ್ದರೆ ಅವಳು ನಾಚುವವಳಲ್ಲ. ನಾಟಕ ಕಂಪೆನಿಯ ಜೀವನದಲ್ಲಿ ತಾನು ಕಲಿತ ರಾಜಕೀಯವನ್ನೆಲ್ಲ ಉಪಯೋಗಿಸಲೂ ಹಿಂಜರಿಯುವವಳಲ್ಲ. ಅವಳಿಗೆ ಕಂಪೆನಿಯ ಯಾರ ಬಗೆಗೂ ಅಸೂಯೆ ಇರಲಿಲ್ಲ. ಶಾಂತಾ–ನಾಗರತ್ನರ ವಿಚಾರ ತಿಳಿದು ಅವರೆಡೆ ನೋಡಿ ನಕ್ಕವಳೂ ಅವಳೇ. "ಅದೆಲ್ಲ ಕೆಲವೊಮ್ಮೆ ಬೇಕಾಗುತ್ತಮ್ಮ ಆದರೂ ಎಚ್ಚರಿಕೆ ಮುಖ್ಯ" ಎಂದು ಅವರ ಬಗೆಗೆ ಸಹಾನುಭೂತಿ ವ್ಯಕ್ತಪಡಿಸಿದವಳೂ ಅವಳೇ. ಅವರ ಜತೆಗಾರ್ತಿಯಾಗಿ ಅವರೊಡನೆ ಬೆರೆತು ಸಂತೋಷದಿಂದ ಕಾಲಕಳೆಯುತ್ತಿದ್ದ ಅವಳನ್ನು ಕಂಡರೆ ನಾಗರತ್ನ–ಶಾಂತಾ ಇಬ್ಬರಿಗೂ ನೆಮ್ಮದಿ, ಧೈರ್ಯ.

"ನಾವ್ಯೆ ಮೇಲು–ನಾವೇ ಬುದ್ಧಿವಂತರು ಅಂತ ಇದ್ದೆಯಮ್ಮ. ಆದರೆ ಇಷ್ಟು ಅದ್ಭುತವಾಗಿ ನರ್ತಿಸುವವರನ್ನು ನಾನು ಎಂದೂ ನೋಡಿಲ್ಲ. ದೇವರು

ಆಯುಸ್ಸುಕೊಡಬೇಕು–ಅಷ್ಟೆ ! ”

“ ಅದನ್ನೇ ನಾವೂ ಮಾತನಾಡುತಿದ್ದೆವು ಸುಬ್ಬಮ್ಮ. ನಾವೆಲ್ಲ ಅವಳಿಂದ ಕಲಿಯಬೇಕು.”

“ ಸರಿ....ಆದರೆ ಅವಳಿಗೆ ಕಲಿಸಬೇಡಿ ” ಎಂದು ನಕ್ಕಳು.

“ ಅವಳೇ ಕಲಿತಿರಬಹುದು. ಆ ಕಷ್ಟ ನಮಗೇಕೆ. ಅಂತೂ ಅವಳನ್ನೂ ನಮ್ಮ ಜತೆಗೆ ಸೇರಿಸಿಕೊಳ್ಳಬೇಕು.”

“ ನಿಜ ; ಅವಳ ಕೀರ್ತಿ, ಕಲೆಗಳಿಂದ ಅವಳಿಗೆ ಎಲ್ಲೂ ಕೆಲಸ ದೊರೆ ತೀತು. ಅವಳ ಸ್ನೇಹ ಗಳಿಸಿದರೆ ನಮಗೂ ದಾರಿ ಮಾಡಿಕೊಟ್ಟಾಳು.”

“ ಅದು ಮುಂದಿನ ಮಾರ್ಗ. ಈಗ ಅವಳನ್ನು ಕಂಡು ಕಿಚ್ಚಾಗ ಬಾರದೂಂತ ನಾನಂದುದು.”

“ ನಮಗೇಕಮ್ಮ ಕಿಚ್ಚು ? ನನ್ನ ಕಾಲದಲ್ಲೂ ಎಷ್ಟೋ ಹುಡುಗಿ ಯರು ನಾಟಕ ಕಂಪೆನಿಗೆ ಬಂದಿದ್ದಾರೆ. ಆದರೆ–ಅವರವರ ಪಾಲಿನದು ಅವರಿಗೇ ಸಿಗುತ್ತದೆ. ದೇವರು ಅದಕ್ಕೆ ಕೊರತೆ ತರುವುದಿಲ್ಲ.”

“ ಪೂಜಾರಿಗಳು ಅಡ್ಡವಾದರೇಂತ ? ಅದೇ ನಮ್ಮ ಭೀತಿ. ಕಂಪೆನಿಯ ಯಜಮಾನರ ವಿಚಾರ ನಿನಗೆ ತಿಳಿದೇ ಇದೇ. ಮ್ಯಾನೇಜರ್ ಕೂಡಾ ಯಾರು ಸಿಕ್ಕಿದರೂ ಬಿಡುವುದಿಲ್ಲ. ಇವರೆಲ್ಲರ ಕಣ್ಣು ಕಲ್ಯಾಣಿಯ ಕಡೆಗೇ ಇದೆ. ಈಗ ನಾವು ಯಾರೂ ಅವರಿಗೆ ಕಾಣಿಸುವುದೇ ಇಲ್ಲ.”

“ ಮೊದಲು ಹಾಗೆಯೇ ! ಆಮೇಲೆ ಹಳೆಯವಳ ಪಾದವೇಗತೀಂತ ಬರುತ್ತಾರೆ. ಇವರದೆಲ್ಲ ಪ್ರೇಮ ಅಲ್ಲಮ್ಮ ಕಾಮ.”

“.ಆದರೂ ನಮ್ಮ ಎಚ್ಚರಿಕೆ....”

“ ಅದೆಲ್ಲ ಭ್ರಮೆ. ನಮ್ಮನ್ನು ಯಾರೇನುಮಾಡುತ್ತಾರೆ. ಪಾಪ.... ಏನೂ ತಿಳಿಯದ ಹುಡುಗಿ. ಬುದ್ಧಿವಂತಳು. ನಾವೂ ಅವಳನ್ನು ವಿಶ್ವಾಸ ದಿಂದ ನೋಡಿಕೊಳ್ಳೋಣ. ”

“ ಅದು ನಿಜ ಸುಬ್ಬಮ್ಮ. ಆದರೆ ಯಾರೂ ಅವಳಿಗೆ ಅಂಟಿಕೊಳ್ಳದ ಹಾಗೆ ನೋಡಿಕೊಳಬೇಡವೇ ? ”

“ ನೋಡಬೇಕು. ಅವಳೂ ನಮ್ಮ ದಾರಿಗೆ ಬೀಳುವುದು ಬೇಡ. ಅವಳಾಗಿ ಬಿದ್ದರೆ ನಾವೇನೂ ಮಾಡುವಹಾಗಿಲ್ಲ. ಆದರೆ, ನಾವಾಗಿ ಅದಕ್ಕೆ

ದಾರಿಮಾಡುವುದು ಬೇಡ. ಈ ಆಫೀಸಿನ ಹದ್ದುಗಳ ಬಾಯಿಗೆ ಅವಳು ಬೀಳದಿದ್ದರೆ ಸರಿ."

"ಅವೇ ಯೋಚನೆಮಾಡಿದ್ದೇವೆ ಸುಬ್ಬಮ್ಮ."

ಸುಬ್ಬಮ್ಮನೂ ತಮ್ಮವಳಾದ ಮೇಲೆ ತಮಗೆ ಭೀತಿ ಇಲ್ಲವೆಂಬ ನಂಬಿಕೆ ಶಾಂತನಲ್ಲಿ ಮೂಡಿತು. ಅವರ ಗುಂಪಿಗೆ ಶಾರದ ಮತ್ತು ಸಾಗರದ ಕಡೆಯಿಂದ ಬಂದಿದ್ದ ರಂಗಮ್ಮ ಮತ್ತು ಮಾಲತಿಯೂ ಸೇರಿದರು. ಅವರಿಬ್ಬರೂ ಚಿತ್ರಪ್ರಪಂಚಕ್ಕೂ ಕಲಾಪ್ರಪಂಚಕ್ಕೂ ಹೊಸಬರು. ಏನೋ ಈ ದಾರಿಯಿಂದ ಜೀವನ ಸುಗಮವಾದರೆ ಆಗಲಿ ಎಂದು ನಂಬಿ ಬಂದವರು. ಚಿತ್ರರಂಗದಲ್ಲಿ ಸೇರಿದವರು ಸಾವಿರಾರು ರೂಪಾಯಿ ಸಂಪಾದಿಸುತ್ತಾರೆ, ಅದು ಸ್ವರ್ಗಜೀವನ, ಎಂದೆಲ್ಲ ಕಟ್ಟುಕತೆಗಳನ್ನು ಕೇಳಿ, ಆ ಕನಸುಕಾಣುತ್ತ ಸುದಾಮರ ಕನ್ನಡಚಿತ್ರಪ್ರಪಂಚಕ್ಕೆ ಧುಮುಕಿದವರು. ಯಾರ ಕಡೆಗೂ ವಾಲದೆ, ಹಳೆಮನೆ ಪಾಪವೂ ಬೇಡ, ಹೊಸಮನೆ ಪುಣ್ಯವೂ ಬೇಡವೆಂದು ತಮ್ಮಷ್ಟಕ್ಕೆ ತಾವು ಕುಳಿತುಕೊಂಡರು.

ನೃತ್ಯಗಳನ್ನು ಕಲಿತು ಚಿತ್ರದಲ್ಲಿ ಅಭಿನಯಿಸಲು ಗೊತ್ತಾದ ಹುಡುಗಿಯರಿಗೆಲ್ಲ ರಾಜಕೀಯಗಳಾವುವೂ ಬೇಕಾಗಿರಲಿಲ್ಲ. ನಿತ್ಯ ಗಾಡಿಯಲ್ಲಿ ಬರುತ್ತಾರೆ, ಪ್ರಾಕ್ಟೀಸು ಆರಂಭವಾಗುವ ವರೆಗೂ ಅಲ್ಲಿ-ಇಲ್ಲಿ ಸುತ್ತಾಡಿ ಹರಟೆಹೊಡೆದು ಕಾಲಕಳೆಯುತ್ತಾರೆ. ಪ್ರಾಕ್ಟೀಸ್ ಮುಗಿದ ಬಳಿಕ ಪುನಃ ಗಾಡಿ ಚಾರ್ಜು ತೆಗೆದುಕೊಂಡು ಗಾಡಿಯಲ್ಲೋ ನಡೆದುಕೊಂಡೋ ಮನೆಗೆ ತೆರಳುತ್ತಾರೆ. ಅವರಿಗೆ ಸುಖವಾಗಿ ಕಾಲ ಕಳೆದರಾಯಿತು. ತಿಂಗಳ ಸಂಬಳ ಬಂದರಾಯಿತು. ಇನ್ನೂ ಮಕ್ಕಳ ಸಾಲಿಗೆ ಸೇರಿ ನಿಂತಿರುವ ಅವರಲ್ಲಿ ಹಲವರು ಹೆಣ್ಣುಗಳಾಗಿದ್ದರೂ ಆ ಸ್ಥಾನದ ಕಲ್ಪನೆ ಅವರಿಗೆ ಪೂರ್ಣವಾಗಿರಲಿಲ್ಲ. ಆಗಿರುವ ಕೆಲವರು ತಮ್ಮ ಗುಟ್ಟನ್ನು ಬಯಲುಮಾಡುತ್ತಲೂ ಇರಲಿಲ್ಲ.

ನೃತ್ಯ ಕಲಿಯಲೆಂದು ಬಂದಿರುವ ಈ ಕಲಾವಿದರೆಲ್ಲ ರಾಜುವಿನ ಅಂಕೆಯಲ್ಲಿಯೇ ಇರುವವರು. ರಾಜು ಮತ್ತು ಮ್ಯಾನೇಜರ್ ಹೇಳಿದರೆ ಕಂಪೆನಿ ಮನೆಗೆ ಬರುತ್ತಾರೆ; ಹೋಗುತ್ತಾರೆ. ಅವರನ್ನೆಲ್ಲ ಹೇಗೆ ಕುಣಿಸಬೇಕೆಂದು ತಿಳಿದಿದ್ದ ರಾಜು, ಹೇಗೆ ತನ್ನ ಅಂಕೆಯಲ್ಲಿರಿಸಿಕೊಳ್ಳಬಹುದೆಂಬುದನ್ನು ಅರಿತಿದ್ದ.

ಚಿತ್ರದಲ್ಲಿ ಪುಟ್ಟ ಪಾತ್ರಗಳನ್ನು ಕೊಟ್ಟು ಲಕ್ಷ್ಮಿ ಮತ್ತು ರಮಾ ಇಬ್ಬರನ್ನೂ ಮ್ಯಾನೇಜರ್ ತಾನು ಕರೆದಾಗ ಕಂಪೆನಿ ಮನೆಗೆ ಬರುವಂತೆ ಮಾಡಿಕೊಂಡಿದ್ದ. "ಈ ದಿನ ಶೂಟಿಂಗ್ ಇದೆ. ಸಂಜೆ ಎಂಟು ಗಂಟೆಗೆ ಬಂದುಬಿಡಿ" ಎಂದು ಹೇಳಿ ಕಳುಹಿಸಿ ಅವರನ್ನು ಕರೆಯಿಸುವುದು ಅವನಿಗೆ ಸುಲಭವಾಗಿತ್ತು. ಸರಿ, ಕಂಪೆನಿಯ ಇತರ ಹೆಣ್ಣುಮಕ್ಕಳೊಡನೆ ಸ್ಟುಡಿಯೋಕ್ಕೆ ಹೋಗುತ್ತಾರೆ. ಅವರ ಜತೆಗೇ ಇರುತ್ತಾರೆ. ಶೂಟಿಂಗ್ ಮುಗಿದೊಡನೆ ಮುಂಜಾನೆ ಮನೆಗೆ ಬರುತ್ತಾರೆ—ಎಂದು ಅವರ ಮನೆಯವರೂ ಭೀತಿ ಸಂದೇಹಗಳನ್ನು ತಂದುಕೊಳ್ಳದೆ ಕಳುಹಿಸಿಕೊಡುತಿದ್ದರು.

ಶೂಟಿಂಗ್ ಆರಂಭವಾದ ಒಂದು ವಾರದೊಳಗೆ ರಾಜು ತನ್ನ ಕೈಚಳಕ ತೋರಿಸಿದ. ಶೂಟಿಂಗ್ ಇಲ್ಲದ ದಿನವೊಮ್ಮೆ ಅವರನ್ನು ಕರೆಯಿಸಿ, ರಾಜು, ಮ್ಯಾನೇಜರ್, ಪರಮಶಿವ, ಮತ್ತು ಅವರು ಕಾರಿನಲ್ಲಿ ಕನ್ನಂಬಾಡಿಗೆ ಹೋಗಿಬಂದರು. ಈ ಪ್ರಯಾಣ ಸುಗಮವಾಗಿ ಸಾಗಿತು. ಇಬ್ಬರೂ ತಮ್ಮ ಜತೆಗೆ ಒಬ್ಬೊಬ್ಬರನ್ನು ಕೂಡಿಕೊಂಡು, ಹರಟೆಹೊಡೆಯುತ್ತಾ ಅವರು ಇತರ ಡಾನ್ಸ್ ಹುಡುಗಿಯರಿಗಿಂತ ಬೇರೆಯಾಗಿದ್ದಾರೆಂದು ಉಪದೇಶವಿತ್ತರು. ಭಾವೀ ಕನಸನ್ನು ಅವರ ಮುಂದೆ ಕಟ್ಟಿದರು. ಏನೇನೋ ಹೇಳಿ ಅವರ ತಲೆ ತಿರುಗಿಸಿದರು. ಅವರ ಯತ್ನ ಪೂರ್ಣವಾಗದಿದ್ದರೂ ವಿಫಲವಾಗಲಿಲ್ಲ. ಅವರನ್ನು ಅಪ್ಪಿಕೊಂಡು, ಬೃಂದಾವನದ ಬಣ್ಣದ ಕಾರಂಜಿಗಳನ್ನು ನೋಡುತ್ತಾ ಕುಳಿತುಕೊಳ್ಳುವುದು ಅವರಿಗೆ ಸಾಧ್ಯವಾಯಿತು. ತಗಲಿಕೊಂಡಿರುವುದು ಅಂಟಿಕೊಂಡೇಬಿಡುತ್ತದೆ, ಎಂಬ ಧೈರ್ಯ ಅವರಲ್ಲೂ ಮೂಡಿತು. ಇದಾದ ಎಂಟು ದಿನಗಳಲ್ಲೇ ಅವರಿಬ್ಬರೂ ಹೊಸ ಸೀರೆಗಳನ್ನು ಮನೆಗೊಯ್ದು "ಕಂಪೆನಿಯಲ್ಲಿ ಕೊಟ್ಟರು–" ಎಂದು ಹೇಳಿಕೊಳ್ಳುವಂತಾಯಿತು.

ವೀರಭದ್ರಪ್ಪ ಅಂದಿನಿಂದ ರಾಜುವಿನ ಪರಮಶಿಷ್ಯನಾದ. ರಾಜು ತನ್ನ ಬೆಂಗಳೂರಿನ ವಿದ್ಯೆಗಳನ್ನೆಲ್ಲ ಉಪಯೋಗಿಸಿ, ತಾನು ಪ್ರಚಂಡ ಎಂದು ಹೇಳಿಸಿಕೊಂಡ. ಹಾಗೇ ಡ್ಯಾನ್ಸ್ ಹುಡುಗಿಯರ ಹಿಂದಿನ ಏಕತೆಯಲ್ಲೂ ಕೊಂಚ ಬಿರುಕು ಹುಟ್ಟಿತು. ಒಂದಾಗಿ ನಿಂದವರು ಈಗ ಎರಡಾದರು. ಮೊದಲು ಎಲ್ಲರೂ ಜತೆಗೂಡಿ ಓಡಾಡಿ ಕಲೆತು ನಲಿಯುತ್ತಿದ್ದವರು

ಯಾವ ಕಲ್ಪನೆಯು ಕತೆಗಳನ್ನೂ ಅರಿಯದವರು, ಈಗ ಹೆಣ್ಣಾಗಿದ್ದೇವೆ ನಮ್ಮಲ್ಲೂ ಏನೋ ಒಂದು ಶಕ್ತಿ ಇದೆ ಎಂದು ತಿಳಿದ ರಮಾ ಮತ್ತು ಲಕ್ಷ್ಮಿ ಈ ಮಕ್ಕಳಂತೆ ಆಟವಾಡಿ ನಲಿಯುವವರೊಡನೆ ನಲಿಯಲು ಅಳುಕಿದರು. ಈ ವ್ಯತ್ಯಾಸವನ್ನು ಅರ್ಥಮಾಡಿಕೊಂಡು, ನಿಜಾಂಶವನ್ನು ರಾಜುವಿನಿಂದ ಅರಿತುಕೊಂಡ ಶಾಂತಾ, ಅವರನ್ನು ತನ್ನ ಗುಂಪಿಗೆ ಸೇರಿಸಿಕೊಂಡಳು.

ಕಲ್ಯಾಣಿ ದಿನಗಳೆದಂತೆ ಎಲ್ಲರ ಮೆಚ್ಚುಗೆ ಗಳಿಸಿದಳು. ಬಂದ ದಿನವೇ ಅವಳು ತನ್ನೆಡೆಗೆ ಎಲ್ಲರನ್ನೂ ಸೆಳೆದಿದ್ದಳು, ಮರುದಿನದ ನೃತ್ಯಪ್ರದರ್ಶನ ದಿಂದ ಅವರನ್ನೆಲ್ಲ ಸೆರೆಹಿಡಿದಳು. ಡ್ಯಾನ್ಸ್ ಹುಡುಗಿಯರೆಲ್ಲ ಅವಳೇ ನೃತ್ಯದೇವತೆ ಎಂದು ಬಗೆದು ಅವಳ ಬೆನ್ನು ಹತ್ತಿದರು. ಇತರರು ತಮ್ಮ ಹಿತವನ್ನು ಬಯಸಿ ಅವಳನ್ನು ಆತ್ಮೀಯಳಂತೆ ಕಂಡರು. ಅಂತೂ ಕಲ್ಯಾಣಿ ಎಲ್ಲರಿಗೂ ಸುತ್ತ ಸುಳಿದು ಸೇರಿಕೊಳ್ಳಲು ಕೇಂದ್ರವಾದಳು. ಸಾವಿರ ವಿಚಾರಗಳನ್ನು ಹೇಳಿ, ಅವಳಿಂದ ನೂರು ಅನುಭವಗಳನ್ನು ಅರಿತು, ಮತ್ತೆ ಮೂರು ಕೇಳಲು ಪೀಡಿಸುವುದೇ ಎಲ್ಲರಿಗೂ ದಿನದ ಕೆಲಸವಾಗಿತ್ತು. ಗೆಳತಿಯರೊಡನೆ ಮಾತಿಗೆ ಮೊದಲುಮಾಡಿದಳೆಂದರೆ ಅವಳಿಗೆ ಸಮಯ ಕಳೆದುದೇ ಮರೆತುಹೋಗುತಿತ್ತು.

ಕಲ್ಯಾಣಿಯ ಬಾಳಿನಲ್ಲಿ ಇದು ಪೂರ್ಣ ಹೊಸ ಪ್ರಪಂಚ; ಹೊಸ ಬಾಳು. ಶಿಸ್ತಿನ ಕಟ್ಟೆಯನ್ನು ಹಾದು ಮನ ಬಂದಂತೆ ಹರಿಯುತ್ತದೆ ಅವಳ ಉತ್ಸಾಹದ ಮಹಾಪೂರ. ಎಷ್ಟು ಹೊತ್ತು ಬೇಕಾದರೂ ಹರಟೆ ಹೊಡೆಯಬಹುದು. ಹಾಗೆ ಹೊತ್ತಾಯಿತೆಂದರೆ ಊಟವೂ ಜತೆಗಾತಿಯ ರೊಡನೆ ಕಂಪೆನಿ ಮನೆಯಲ್ಲೇ ಆಗುತಿತ್ತು. ಕೃಷ್ಣ ಜತೆಗಿದ್ದಾಗಲೇ ಅವನ ಚಿಂತೆ. ಆಗ ಅವನ ಜತೆಯೇ ಬೇಕು. ಆದರೆ, ಈ ಜತೆಗಾತಿಯರಿರು ವಾಗ ಅವನ ನೆನಪೂ ಉಳಿಯುತ್ತಿರಲಿಲ್ಲ ಅವಳಲ್ಲಿ. ಆ ನಗು, ಹಾಸ್ಯ, ಮಾತು, ಅಣಕ–ಅವುಗಳಲ್ಲೇ ಅವಳು ತನ್ನ ಗೆಳತಿಯರೊಡನೆ ಮೈಮರೆ ಯುತಿದ್ದಳು.

ನೃತ್ಯಾಭ್ಯಾಸವನ್ನು ಅವಳು ಬಿಟ್ಟು ವಾರ ಎರಡಾಯಿತು. ಹೋಟೆ ಲಿನಲ್ಲಿ ಅದು ಸಾಧ್ಯವಿಲ್ಲ. ಬೇರೆ ಮನೆಮಾಡಿಕೊಳ್ಳದೆ ಉಪಾಯವಿಲ್ಲ. ಅಂತಲೇ ಮನೆಯ ಬಗೆಗೂ ಚಿಂತಿಸುತಿದ್ದಳು. ಮನೆಯೊಂದಾಯಿತೆಂದರೆ

ನೃತ್ಯಪಾಟ ಆರಂಭಿಸಬಹುದು. ಗೆಳತಿಯರನ್ನು ಮನೆಗೆ ಕರೆಯಬಹುದು. ಊಟ-ಕಾಫಿ ವ್ಯವಸ್ಥೆ ನಡೆಸಲು ಮಾಣಿಯ ಸಹಾಯವಿದೆ. ಅವನು ಮನೆಯ ಚಿಂತೆ ನೋಡಿಕೊಳ್ಳುತ್ತಾನೆ; ಕೃಷ್ಣನಿಗೆ ಬೇಸರವಾಗದಂತೆಯೂ ಆಯಿತು.

ಕಲ್ಯಾಣಿಯು ಗೆಳತಿಯರೂ ಅವಳು ಮನೆಮಾಡಿಕೊಂಡು ಇರುವ ವಿಚಾರದಲ್ಲಿ ಆಸಕ್ತಿವಹಿಸಿದರು. ಇದು ತನ್ನ ಯೋಜನೆಗೆ ಉತ್ತಮ ಅನುಕೂಲ ಎಂದು ಶಾಂತಮ್ಮ ನಿರ್ಧರಿಸಿದಳು. ಆದರೂ ನಮ್ಮ ಮನೆಯ ಹತ್ತಿರವೇ ಅವಳ ಮನೆ ಇದ್ದರೆ ಚೆನ್ನಾಗಿರುತ್ತೆ ಎಂದು ಸುಬ್ಬಮ್ಮ ಬಯಸಿದಳು. ಆದರೆ, ಕಂಪೆನಿ ಮನೆಯ ಹತ್ತಿರ ಬೇರೆ ಮನೆಗಳು ದೊರೆಯುವುದು ಸಾಧ್ಯವಿರಲಿಲ್ಲ. ಆಗಲೇ ಈ ಫಿಲಂನವರ ಸಹವಾಸ ಬೇಡವೆಂದು ಅಕ್ಕಪಕ್ಕದವರು ಆಡತೊಡಗಿದ್ದರು. ಶಾಂತಾ ಈ ಕಾರ್ಯವನ್ನು ಲಕ್ಷ್ಮಿ ಮತ್ತು ರಮಾ ಇವರಿಗೆ ಒಪ್ಪಿಸಿದಳು.

ಸರಸ್ವತಿಪುರದಲ್ಲಿ ರಮಾ ಮನೆಯ ಹತ್ತಿರವೇ ಒಂದು ಮನೆ ದೊರೆಯಿತು. ಸ್ಟುಡಿಯೋ ಹತ್ತಿರದಲ್ಲೇ ಮನೆ ಇದೆ. ಎಲ್ಲಕ್ಕೂ ಅನುಕೂಲ. ಅವಳ ಜತೆಗೇ ರಮಾ ಕೂಡಾ ಇರುತ್ತಾಳೆ. ರಮಾ ರಾಜುವಿನ ಮಾತು ಮೀರುವುದು ಸಾಧ್ಯವಿಲ್ಲ, ಎಂದೆಲ್ಲ ಎಣಿಕೆಹಾಕಿ ಶಾಂತಾ ಒಪ್ಪಿದಳು.

"ರಮಾ ಮನೆಯವರನ್ನು ನೀನು ನೋಡಿ ಗೆಳೆತನ ಸಂಪಾದಿಸಬೇಕು. ಎಲ್ಲಾದರೂ ಆಕೆ ನಮಗೆ ವಿರುದ್ಧವಾದರೆ ಅವಳ ಬಾಲ ಮುರಿಯಲು ಎಡೆ ಇರಬೇಕು."

ಎಂದು ಶಾಂತಾ ರಾಜುವಿಗೆ ಉಪಾಯ ವೇದಾಂತದ ಉಪದೇಶ ಮಾಡಿದಳು. ಒಲ್ಲೆ ಎಂದರೂ ಈ ಅಸ್ತ್ರ ಉಪಯೋಗಕ್ಕೆ ಬರುತ್ತದೆ, ಅಷ್ಟಾದರೆ ತಾನು ಈ ಸಮ್ಮೋಹನಾಸ್ತ್ರವನ್ನು ಯಾರ ಮೇಲೂ ಪ್ರಯೋಗಿಸಬಹುದು ಎಂದು ತಿಳಿದ ರಾಜು, 'ಮಾಸ್ತರ್' ಎಂಬ ಅಭಿಮಾನಗಳಿಸಿದರೂ ಮನೆಯವರ ಗೌರವಕ್ಕೆ ಪಾತ್ರನಾದ. ಹಾಗೇ ಲಕ್ಷ್ಮಿ ಕೂಡಾ ರಾಜುವಿನ ಪರಮಶಿಷ್ಯಳಾದಳು. ರಾಜು ಕಂಪೆನಿಯ ಸರ್ವಶಕ್ತ ವೀರನಾದ.

ಎರಡು ದಿನಗಳಲ್ಲೇ ಮನೆಗೆಲ್ಲ ಸುಣ್ಣ ಬಳಿಸಿ, ಬೇಕಾದ ಸಾಮಗ್ರಿಗಳನ್ನೆಲ್ಲ ಅಳವಡಿಸಿಕೊಂಡ ಕೃಷ್ಣ. ಕಂಪೆನಿಯಿಂದ ಇನ್ನೂ ಇನ್ನೂರು ಅಡ್ವಾನ್ಸ್ ಪಡೆದು, ಗೆಳತಿಯರ ಜತೆಗೂಡಿ, ಮನೆಗೆ ಬೇಕಾದ ಪಾತ್ರೆ ಪದಾರ್ಥಗಳನ್ನೆಲ್ಲ ಕಲ್ಯಾಣಿ ಕೊಂಡುಕೊಂಡಳು. ಒಂದು ತಿಂಗಳಿಗೆ ಬೇಕಾಗುವಷ್ಟು ಅಕ್ಕಿ ಬೇಳೆ ದಿನಸಿಗಳೂ ಬಂದುವು. ಅವುಗಳನ್ನು ತುಂಬಿಡಲು ಬೇಕಾದಷ್ಟು ಟಿನ್ನುಗಳಿಂದ ಮೊದಲ್ಗೊಂಡು, ಕಸಬರಿಗೆ, ಕಾಲು ಚಾಪೆ, ಜಮಖಾನ, ಹಾಸಿಗೆಗಳವರೆಗೆ ಎಲ್ಲವನ್ನು ತುಂಬಿದಳು.

ಅಡಿಗೆಯವನನ್ನು ಕರೆಸಿ ಸಂಭ್ರಮದ ಊಟವೂ ವ್ಯವಸ್ಥೆಯಾಯಿತು. ಕಲ್ಯಾಣಿ ಮತ್ತು ಕೃಷ್ಣರಾವ್ ಹೊಸತಾಗಿ ಸಂಸಾರ ಹೂಡಿದರು. ಸುಂದರ ಹೋಟೆಲಿನ ಮಾಲೀಕರಿಗೆ ಹೇಳದೆಯೇ, ಅವರಿಗೆ ತಿಳಿಯದಂತೆ ಹೊರಟು ಬಂದು ಇವರನ್ನು ಸೇರಿಕೊಂಡ. ಅವನ ಜೀವನದಲ್ಲೂ ಹೊಸ ಅಧ್ಯಾಯ ಆರಂಭವಾಯಿತು. ಕಂಪೆನಿಯ ಪಾಲುಗಾರರೂ, ನಟನಟಿಯರೂ, ಹಿಮ್ಮೇಳದವರೂ, ಸ್ಟುಡಿಯೋದವರು ಎಲ್ಲರೂ ಬಂದು ಕಲ್ಯಾಣಿಯ ಆಥಿತ್ಯ ಸ್ವೀಕರಿಸಿದರು.

ಸಂಜೆಗೆ ಕೃಷ್ಣರಾಯನ ಸಂಗೀತಕ್ಕೂ ಎಲ್ಲರೂ ಬಂದಿದ್ದರು. ಹೊರಟು ಹೋಗುವಾಗ ರುದ್ರಪ್ಪ ಮೆಲ್ಲನೆ ಆ ಕಡೆ ಸುಳಿದು, ಕಲ್ಯಾಣಿ ಒಬ್ಬಳೇ ಸಿಗುವ ಸಮಯ ನೋಡುತಿದ್ದ. ಯಜಮಾನರು ಹೊರಡಲು ಸಿದ್ಧವಾಗಿರುವದನ್ನು ಕಂಡು ಬಾಗಿಲಿಗೆ ಬಂದು ಅವನನ್ನು ವಿಚಾರಿಸಿದಳು; ಬೀಳ್ಕೊಟ್ಟಳು. ರುದ್ರಪ್ಪ ಅವಳ ಕೈಗೆ ನೂರು ರೂಪಾಯಿಯ ಎರಡು ನೋಟುಗಳನ್ನಿರಿಸಿ ಇದು ಹೊಸ ಮನೆಗಾಗಿ ಕಾಣಿಕೆ–ಎಂದು ಹೊರಟು ಹೋದ.

ನಾರಣಪ್ಪ ಸಂಗೀತ ಪೂರ್ಣವಾಗುವವರೆಗೂ ಕಾದಿದ್ದು, ಐದು ನೂರುಗಳಿಗೆ ಚೆಕ್ ಬರೆದು ಕೃಷ್ಣನ ಕೈಗಿರಿಸಿ, "ನಿಮಗೆ ಒಳ್ಳೆಯದಾಗಲಿ. ಮುಂದಿನ ಚಿತ್ರಕ್ಕೆ ಅಗತ್ಯ ನಿಮ್ಮ ಸಹಾಯಬೇಕು. ಎಂದು ಶಾಂತಾ ಮತ್ತಿತರರೊಡನೆ ಕಂಪೆನಿ ಮನೆಗೆ ಹೊರಟ." ಎಲ್ಲರೂ ಕಲ್ಯಾಣಿಯನ್ನು ಕೃಷ್ಣರಾಯನನ್ನೂ ಬೀಳ್ಕೊಟ್ಟರು, ಆಶೀರ್ವದಿಸಿದರು, ಹೊಗಳಿದರು.

ಕಲ್ಯಾಣಿಯ ಸಂಸಾರ ಸಂಭ್ರಮದಿಂದ ಆರಂಭವಾಯಿತು.

## ೧೨

ವಜ್ರದಂತಹ ಹೆಣ್ಣು ಕಲ್ಯಾಣಿ !

ಚಿನ್ನದ ಸಂಪುಟದ ಮೇಲಿಟ್ಟು ಮೂಗುತಿಯಾಗಿಸಿ ಮೂಗಿನ ಮೇಲೆ ಶೋಭಿಸಿದಾಗ ಅದರ ಬೆಲೆ ಗೊತ್ತಾಗುತ್ತದೆ. ಕಿವಿಯಲ್ಲಿದ್ದಾಗ ಅದರ ಸೌಂದರ್ಯ ಅಧಿಕವಾಗುತ್ತದೆ. ಕತ್ತಿನಲ್ಲಿದ್ದಾಗ, ಪದಕದಲ್ಲಿ ಮೆರೆದಾಗ, ಕಣ್ಣುಗಳನ್ನು ಸೆಳೆಯುತ್ತದೆ.

ಧರಿಸಿದವರ ಅಂತಸ್ತಿಗೆ ಅನುಗುಣವಾಗಿ ಆ ಕಲ್ಲಿಗೆ ಹೆಸರು ಮಾನ ಬರುತ್ತದೆ. ಬಡವರ ಮೈ ಮೇಲಿದ್ದರೆ ಬಿಳಿಯ ಕಲ್ಲು, ಮಧ್ಯಮ ವರ್ಗದವರ ಮೈಮೇಲೆ ಪುಷ್ಯರಾಗ, ಧನಿಕರಲ್ಲಿದ್ದಾಗ ವಜ್ರ !

ಸಂಪುಟದಲ್ಲಿಲ್ಲದ ಕಲ್ಲು ಅದು ಕೇವಲ ಕಲ್ಲೇ. ಅದರ ಬೆಲೆ ಅಂಗಡಿಗಾರನಿಗೆ, ವಜ್ರವ್ಯಾಪಾರಿಗೆ ಮಾತ್ರ ತಿಳಿದೀತು. ಇತರರಿಗೆಲ್ಲ ಅದು ಕಲ್ಲು. ಐದು ಮಂದಿ ಅದರ ಬೆಲೆ ಅರಿತುಕೊಂಡಿರಬಹುದು. ತೊಂಭತ್ತೈದು ಮಂದಿಗೆ ಅದರ ಬೆಲೆ ತಿಳಿಯಲಾರದು.

ಕಲಾವಿದ, ಸಾಹಿತಿ, ಶಿಲ್ಪಿ, ಎಲ್ಲರೂ ಹಾಗೇ.

ಕನ್ನಡ ಕಲಾಮಂಡಲದಲ್ಲಿದ್ದಾಗ ಕಲ್ಯಾಣಿ ವಜ್ರ.

ವಿಜಯ ಕುಮಾರರ ನಾಟ್ಯ ಮೇಳದಲ್ಲಿದ್ದಾಗ ವಜ್ರ.

ನಾಟ್ಯಾಚಾರ್ಯರಂತಹ ಪಾಂಚಾಲರ ಕೈಯಲ್ಲಿದ್ದಾಗ ಎಲ್ಲರೂ ಇತರ ೯೫ ಮಂದಿಯೂ ಅವರು ಹೇಳಿದಂತೆ ಹ್ಞೂಗುಟ್ಟಿ ಅದು ವಜ್ರ ಎಂದು ಆದರಿಸುತಿದ್ದರು,

ಈಗ ಆ ಸಂಪುಟವಿಲ್ಲ, ಪಾಂಚಾಲನಿಲ್ಲ, ಅಹನ್ನು ಧರಿಸುವ ಯೋಗ್ಯತೆಯುಳ್ಳ ಧನವಂತರಿಲ್ಲ.

ಕಲ್ಯಾಣಿ ಹೊಸವಾತಾವರಣದಲ್ಲಿ ನಿಂತಿದ್ದಾಳೆ.

ಕನ್ನಡನಾಡಿನಲ್ಲೆಲ್ಲ ಕೀರ್ತಿಗಳಿಸಿ, ಕಲಾವಿದರಿಂದ ಹೊಗಳಿಸಿಕೊಂಡು ಕಲಾಪ್ರೇಮಿಗಳಿಂದ 'ವಜ್ರ' ಎನ್ನಿಸಿಕೊಂಡು ಮೆರೆದವಳು ಇಂದು ಚಿತ್ರರಂಗಕ್ಕೆ, ಅದರಲ್ಲೂ ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಿದ್ದಾಳೆ.

"ಛೆ! ಎಲ್ಲಾದರೂ ಉಂಟೆ? ವಜ್ರ ಧರಿಸುವ ಯೋಗ್ಯತೆ ಅವನಿಗೆಲ್ಲಿ? ಅದು ಪುಷ್ಯರಾಗ ಇರಬಹುದು, ರಂಗೂನ್ ವಜ್ರವಿರಬಹುದು." ಎನ್ನುವಂತೆ ಜನ ಆಡಿಕೊಳ್ಳುತ್ತಿದ್ದಾರೆ.

"ಅವಳೆಲ್ಲಿ ಅಲ್ಲಿಗೆ ಬರುತ್ತಾಳೆ? ಯಾರೋ ಹೊಸಬರು ಡುಪ್ಲಿಕೇಟ್ ಕಲ್ಯಾಣಿ ಇಲ್ಲಿಗೆ ಬಂದಿರಬೇಕು." ಎಂದು ಆಡಿಕೊಂಡರು.

ಮೊದಲಾಗಿ ಅವಳೆಡೆ ಯಾರ ಗಮನವೂ ಹೆಚ್ಚಾಗಿ ಹರಿಯಲಿಲ್ಲ. ಅವಳ ಬಗೆಗೆ ತಿಳಿದವರಿಗೆ, ಕಂಪೆನಿಯವರಿಗೆ, ಸ್ಟುಡಿಯೋದವರಿಗೆ, ಮೈಸೂರಿನ ಚಿತ್ರ ತಯಾರಕರಿಗೆ ಅವಳು ಪ್ರಖ್ಯಾತ ನರ್ತಕಿ.

ಮೈಸೂರಿನ ನಾಗರಿಕರಿಗೆ ಅವಳೊಬ್ಬ ಸಿನಿಮಾ ಕಂಪೆನಿಯವಳು !

ಚಿತ್ರದ ಪ್ರಚಾರದ ಮಾತು ಬಂದಾಗ ಅವರಿಗೆ ಅವಳ ಹಿನ್ನಲೆ, ಕೀರ್ತಿಗಳ ವಿಚಾರ ಬೇಕಾಗಿತ್ತು. ಸಾಲ ಕೊಡುವವನು, ಅಂಥ ಸಂದರ್ಭ ಬಂದಾಗ ಕೊಳ್ಳುವವನ ಸ್ಥಿತಿ, ಆರ್ಥಿಕ ಶಕ್ತಿ, ಅವನಿಗಿರುವ ಆಸ್ತಿ ಇತ್ಯಾದಿಗಳನ್ನು ತಿಳಿದುಕೊಳ್ಳುವಂತೆ. ಅದಿಲ್ಲದಾಗ, ಆತ ಎಲ್ಲರಂತೆ ಒಬ್ಬ ಎಂಬುದೇ ಸಾಲಿಗನ ಅಭಿಪ್ರಾಯ. ಹಾಗೇ ಚಿತ್ರ ತಯಾರಕರಿಗೂ ಅವಳೊಬ್ಬ ಹೆಣ್ಣು. ಸುಂದರಿ, ತರುಣಿ, ಮೋಹಕವಾದ ದೇಹವುಳ್ಳವಳು, ಜಾಣೆ.

ಹೆಣ್ಣು ಬಯಸುವವರಿಗೆ ಅವಳನ್ನು ಮೀರಿಸಿದ ಹೆಣ್ಣು ಸಿಗಲಾರದು. ಚಿತ್ರಪ್ರಪಂಚದಲ್ಲಿ ಅಂತಹಳು ಇರಲಿಲ್ಲ

ದೇಹ ಬಯಸುವವರು ಅಂತಹ ಸಂಪೂರ್ಣ, ಕಲಾಪೂರ್ಣ, ಅಚ್ಚುಕಟ್ಟಾದ ದೇಹ—ಕುಚ, ನಡು, ತೊಡೆ, ಕತ್ತು, ತಿದ್ದಿದ ಮೂಗು, ತುಟಿ, ನೋಡಿರಲಿಲ್ಲ.

ಇನ್ನೂ ತರುಣಿ, ೨೨ ರ ಬೆಳವಣಿಗೆ, ಮನ ತುಂಬುವ ಕೈ ತುಂಬುವ ದೇಹ.

ಕವಿ, ಸಂಗೀತಗಾರ, ಚಿತ್ರಗಾರ, ನರ್ತಕ ಇವರನ್ನೆಲ್ಲ ಅರ್ಥಮಾಡಿಕೊಂಡು ಅವರೊಡನೆ ಅವರಿಗೆ ಇಷ್ಟವಾದ ವಿಚಾರಗಳನ್ನು ಚರ್ಚಿಸಿ ಸಹಾನುಭೂತಿ ವ್ಯಕ್ತಪಡಿಸಬಲ್ಲ ಕಲಾವಿದೆ.

ದಿನಗಳೆದಂತೆ ಕಲ್ಯಾಣಿ ತಮಗಿಂತ ಮೇಲು ಎಂಬ ಭಾವ ಇತರರಿಂದ ಮರೆಯಾಗುತ್ತ ಬಂತು. ಅವಳೂ ನಮ್ಮಲ್ಲಿ ಒಬ್ಬಳು ಎಂಬಂತಾದಳು.

ಇತರರೊಡನೆ ಬೆರೆತು ಅವಳೂ ಚಿತ್ರರಂಗದ ಗೋಲದಲ್ಲಿ ಸೇರಿಕೊಂಡಳು. ಅವಳ ನಿತ್ಯದ ಕಾರ್ಯಕ್ರಮವೂ ಹಾಗೇ ಆಯಿತು.

ಹೊಸ ಪ್ರಪಂಚ, ಹೊಸ ಊರಿನ ತಂಪಾದ ಶಾಂತ, ಮಧುರ ಹವೆ. ನಿವೃತ್ತಜೀವನ ಸಾಗಿಸುವವರ ಸ್ವರ್ಗವೆಂದು ಹೆಸರಾದ ನಗರ. ಶೂಟಿಂಗ್ ಇದ್ದಾಗ ತಡೆ ಇಲ್ಲದೆ ಗುಡಿದು ಇಲ್ಲದಾಗ ಸೋಮಾರಿಗಳಂತೆ ದಿನಗಳೆಯು ವವರ ಕೂಟ. ಬೆಳಿಗ್ಗೆ ಎಷ್ಟು ಗಂಟೆಗೆ ಎದ್ದರೂ ಯಾರೂ ಕೇಳುವವರಿಲ್ಲ. ರಾತ್ರಿ ಎಷ್ಟು ಹೊತ್ತಿಗೂ ನಿದ್ರಿಸಬಹುದು. ಇಂತಹ ವಾತಾವರಣದಲ್ಲಿ ಕಲ್ಯಾಣಿಯೂ ತನ್ನ ಉತ್ಸಾಹಗಳನ್ನೆಲ್ಲ ಕಳೆದುಕೊಂಡಳು, ಸೋಮಾರಿ ಯಾದಳು. ಜನತೆ ಅವಳನ್ನು ಮರೆತರು, ಅವಳೂ ಅವಳನ್ನೇ ಮರೆಯುತ್ತ ಬಂದಳು.

ಕೃಷ್ಣರಾಯನಿಗೆ ಬೇರೇನೂ ಕೆಲಸವಿಲ್ಲ. ಹೀಗೇ ಬಾಳಿದರೆ ತನ್ನ ಭವಿ ತವ್ಯ ಕೇವಲ ತಿರುಗೂಳಿಯಾಗುವುದೆಂದು ಮೈಸೂರಿಗೆ ಬಂದಾಗಲೇ ಅನಿ ಸಿತ್ತು. ಹೊಸ ಮನೆಯಾಗುವ ವರೆಗೆ ಅವನೇನೂ ಅಭ್ಯಾಸಮಾಡುವ ಹಾಗಿರ ಲಿಲ್ಲ. ಹೋಟೆಲ್ ರೂಮಿನಲ್ಲಿ ಕುಳಿತು, ಸಂಗೀತಾಭ್ಯಾಸಮಾಡಿದರೆ, ಪಕ್ಕದ ರೂಮಿನವರೆಲ್ಲ ಅವನ ಮೇಲೆ ಧಾಳಿ ನಡೆಸಬಹುದು; ಮ್ಯಾನೇಜರ್ ರೂಂ ಬಿಟ್ಟುಬಿಡಿ ಎನ್ನಬಹುದು ಎಂಬ ಸಹಜವಾದ ಶಂಕೆ ಅವನಲ್ಲಿತ್ತು. ಈಗ ಮನೆ ಮಾಡಿಕೊಂಡು, ಸ್ವತಂತ್ರಜೀವನ ಆರಂಭಿಸಿದೊಡನೆಯೇ ಅವನು ಸಂಗೀ ತಾಭ್ಯಾಸ ಮುಂದುವರಿಸಿದ. ಎಷ್ಟು ಹೊತ್ತಿಗೆ ನಿದ್ರಿಸಿದರೂ ಬೆಳಿಗ್ಗೆ ಆರು ಗಂಟೆಗೇ ಎದ್ದು ತನ್ನ ಅಭ್ಯಾಸ ಮೊದಲು ಮಾಡುತಿದ್ದ. ಅವನ ಆಲಾಪ ನೆಗೆ ಎಚ್ಚರವಾಗಿ ಸುಂದರನೂ ಒಲೆಹತ್ತಿಸಿ ಕಾಫಿ ಕಾಯಿಸಿ, ಮಾಸ್ತರಿಗೆ ಕೊಟ್ಟು ತಾನೂ ಕುಡಿದು, ಅಭ್ಯಾಸಕ್ಕೆ ಕುಳಿತುಕೊಳ್ಳುತಿದ್ದ. ಕಲ್ಯಾಣಿ ಎದ್ದೇಳುವ ವೇಳೆಗೆ ಇನ್ನೊಮ್ಮೆ ಕಾಫಿಮಾಡಿ ಎಲ್ಲರೂ ಕುಡಿಯುತಿದ್ದರು ಮುಂದೆ ಕಲ್ಯಾಣಿಯೊಡನೆ ಮಾತುಕತೆ, ವಿನೋದ, ಹರಟೆ. ಒಂಭತ್ತು ಗಂಟೆಯಾಯಿತೆಂದರೆ ಉಪ್ಪಿಟ್ಟೊ, ದೋಸೆಯೋ ಮಾಡಿ ತಿಂದು, ಇಬ್ಬರೂ ಕಂಪೆನಿ ಮನೆಗೆ ಹೋಗುತಿದ್ದರು.

ಕಂಪೆನಿಯ ಮನೆಯಲ್ಲಿ ಎಲ್ಲರ ಗೆಳತಿಯಾಗಿ ಕಲ್ಯಾಣಿ ಅವರ ಪರಿ ಚಯಮಾಡಿಕೊಂಡ ಬಳಿಕ ಕೃಷ್ಣನೂ ಅವಳೊಡನೆ ಹೋಗುವುದನ್ನು ನಿಲ್ಲಿ

ಸಿದ. ರಮಾ ತನ್ನ ಮನೆಯ ಬಳಿಗೇ ಬಿಡಾರಮಾಡಿಕೊಂಡ ಕಲ್ಯಾಣಿ ಯನ್ನು ಕರೆದುಕೊಂಡು ಕಂಪೆನಿ ಮನೆಗೆ ಹೋಗುತ್ತಿದ್ದಳು. ತಾನು ಪೇಟೆಗೆ ತೆರಳಿ ಸುತ್ತಾಡಿ, ಮನೆಗೆ ಬೇಕಾದ ಸಾಮಗ್ರಿಗಳನ್ನು ತರುವ ಕೆಲಸವನ್ನು ಕೃಷ್ಣರಾಯ ಮಾಡುತಿದ್ದ. ಅವನ ಬೆಂಬಲಕ್ಕೆ ನಿಂತು ಸುಂದರ ದುಡಿ ಯುತ್ತ ಮನೆಗೆಲಸಗಳನ್ನೆಲ್ಲ ನೋಡಿಕೊಳ್ಳುತಿದ್ದ. ಅವನಿಗೆ ಹೋಟೆಲ್ ಕೆಲಸಕ್ಕಿಂತ ಇದು ನೂರು ಪಾಲು ಉತ್ತಮವಾಗಿ ಕಂಡಿತು. ಅಲ್ಲಿನಂತೆ ೧೬ ಗಂಟೆಗಳ ಕಾಲವೂ ಬಿಡುವಿಲ್ಲದ ದುಡಿತವಿಲ್ಲ. ಮೂವರಿಗೆ ಕಾಫಿ, ತಿಂಡಿ, ಅಡುಗೆಮಾಡಿದರಾಯಿತು. ಹೊರಗಿನ ಕೆಲಸಮಾಡಲು, ಕಸಗು ಡಿಸಿ, ಪಾತ್ರತೊಳೆಯಲು ಹೆಂಗಸೊಬ್ಬಳನ್ನು ಗೊತ್ತುಮಾಡಲಾಗಿತ್ತು. ಬಟ್ಟೆಬರೆಗಳನ್ನು ಒಗೆದು, ಅಡುಗೆಮನೆಯನ್ನು ಶುಚಿಯಾಗಿಡುತಿದ್ದ ಅವಳು ಅಡುಗೆಯ ಕೆಲವೊಂದು ಕೆಲಸಗಳಲ್ಲಿ ಹುಡುಗನಿಗೆ ನೆರವಾಗುತಿದ್ದಳು. ಒಂದಿಷ್ಟು ಅನ್ನ, ಸಾರು, ಹುಳಿ, ಮೊಸರು ಇದ್ದೇ ಇರುತ್ತದೆ. ಆಗಾಗ ಕಾಫಿ ಅಥವಾ ಟೀ. ಇದಕ್ಕಿಂತ ಹೆಚ್ಚಿನ ಕೆಲಸವಿರಲಿಲ್ಲ ಅಲ್ಲಿ.

ಸುಂದರ ಇಮ್ಮಡಿ ಉತ್ಸಾಹದಿಂದ ಮನೆಗೆಲಸವನ್ನುಮಾಡಿ, ಸಂಗೀ ತಾಭ್ಯಾಸ ನಡೆಸುತಿದ್ದ. ಪೇಟೆಗೆ ಹೋಗುವ ಕೆಲಸವಿಲ್ಲವೆಂದಾಗ, ಬೇಸರ ವಾದಾಗ ಕೃಷ್ಣ ತಬಲಾ ಬಾರಿಸುತ್ತ ಕುಳಿತುಕೊಳ್ಳುತಿದ್ದ. ಅದನ್ನು ನೋಡುತ್ತ ಕೇಳುತ್ತ ಸುಂದರ ತಬಲಾ ಕಡೆಗೂ ಗಮನ ಹರಿಯಿಸಿ ತಾಳ ಜ್ಞಾನ ಬೆಳೆಸಿಕೊಂಡ. ಅವನ ಉತ್ಸಾಹ, ಆಸಕ್ತಿ ಕಂಡ ಕೃಷ್ಣ ಅವನಿಗೂ ತಬಲಾ ಕಲಿಸತೊಡಗಿದ. ಸಂಗೀತ, ತಬಲಾ, ಮೃದಂಗ ಇವುಗಳ ಅಭ್ಯಾ ಸದಲ್ಲಿ ಮನೆಗೆಲಸಗಳಲ್ಲಿ ಕಾಲಕಳೆಯುತ್ತ ಸುಂದರ ಮನೆಯಲ್ಲೇ ಇರುತಿದ್ದ.

ಮನೆಯಾಗುವ ವರೆಗೆ ಅದರ ಚಿಂತೆ. ಅದಕ್ಕೆ ಮೊದಲು ಕಲ್ಯಾ ಣಿಯ ಚಿಂತೆ. ಅದಕ್ಕೂ ಹಿಂದೆ ತಾವಿಬ್ಬರೂ ಜತೆಗೂಡಿ ಮೈ ಮನ ಒಂದಾಗಿ ಬೆರೆತು ಇಹದಲ್ಲಿ ಸ್ವರ್ಗವನ್ನು ಕಾಣುವ ಚಿಂತೆ. ಈಗ ಕೃಷ್ಣ ನಿಗೆ ಮುಂದಿನ ಚಿಂತೆ ಆರಂಭವಾಯಿತು.

ತಾನೂ ದುಡಿಯಬೇಕು. ಅವಳು ದುಡಿದು ತಂದು ಹಾಕಿದುದನ್ನು ತಿಂದು ಕುಳಿತುಕೊಳ್ಳುವ ಗೂಳಿಯ ಬಾಳಾಗಬಾರದು. ಇದರಿಂದ ತನ್ನ ಬಗೆಗೆ ಅವಳಿಗಿದ್ದ ಗೌರವ ಅಳಿಯಬಹುದು. ಕಲ್ಯಾಣಿಯ ಒತ್ತಾಯ

ದಿಂದ ಕೃಷ್ಣ ಕಲಾಮಂಡಲವನ್ನು ತ್ಯಜಿಸಿದ್ದಾನೆ. ಅವಳಿಗಾಗೇ ಈ ಊರಿಗೆ ಬಂದಿದ್ದಾನೆ. ಅವನಿಗೆ ಇವಳೇ ಪ್ರತ್ಯಕ್ಷದೇವರು, ಸರ್ವಸ್ವ. ಅದು ಒಮ್ಮೆ ನಿಜವಾಗಿತ್ತು. ಈಗಲೂ ಹಾಗೆಯೇ ಇದೆಯೇ? ಇದ್ದರೂ ಕೂಡಾ ಮುಂದೆ ಹಾಗಿರಬಹುದು ಎಂಬ ಧೈರ್ಯ ಹೇಗೆ? ತಾನು ದುಡಿಮೆ ಇಲ್ಲದ ದುಡಿತವಿಲ್ಲದ ಜೀವನ ಸಾಗಿಸುತ್ತ ಬಂದರೆ ಎಂದಿದ್ದರೂ ವಿಶ್ವಾಸಕ್ಕೆ ಧಕ್ಕೆ ಬಂದೀತು, ಪ್ರೇಮ ಅಳಿದೀತು, ಅಭಿಮಾನ ನಾಶವಾದೀತು ಎಂದಾತ ಯೋಚಿಸತೊಡಗಿದ.

"ನಾನೂ ದುಡಿಯಬೇಕು ಕಲ್ಯಾಣಿ. ಎಲ್ಲಾದರೂ ಒಂದೆರಡು ಪಾಟ ಗೊತ್ತುಮಾಡಿಕೊಳ್ಳಬೇಕು."

"ಅದೇನು? ನಾನು ದುಡಿದರೆ ಸಾಲದೇ? ಹಣ ಸಾಲದಾದರೆ ಮತ್ತೊಂದು ಕಂಪೆನಿಯಲ್ಲೂ ಕೆಲಸ ಹಿಡಿಯೋಣ. ನೀವು ಸುಮ್ಮನಿರಿ. ನಾನು ಬೇರೆ–ನೀವು ಬೇರೆ ಆಗಿಲ್ಲ."

"ಆದರೂ ಮೂರು ಬಾಯಿಗಳು ತುಂಬಬೇಕು. ಒಂದು ಕೈ ದುಡಿಯಬೇಕು ಎಂದರೆ ಹೇಗೆ?"

"ಆಗಲಿ ದುಡಿಯಬೇಕಾದಾಗ ಹಾಗೇ ಮಾಡೋಣ. ಈಗ ಬೇಕಿಲ್ಲ"–ಎಂದು ಅವನನ್ನು ಬಳಿಗೆ ಸೆಳೆದು ಅಪ್ಪಿ ಮುದ್ದಿಟ್ಟು ನಕ್ಕು ಅವನ ಚಿಂತೆ ದೂರಮಾಡಿ, ನಾವಿಂದು ಸಿನಿಮಾಕ್ಕೆ ಹೋಗೋಣ, ನಾವಿಂದು ಕನ್ನಂಬಾಡಿಗೆ ತೆರಳೋಣ, ಎಂದು ಮಾತು ಬದಲಿಸುತ್ತಿದ್ದಳು ಕಲ್ಯಾಣಿ.

ಕೃಷ್ಣರಾಯನ ದುಡಿಮೆಯ ಆಕಾಂಕ್ಷೆ ಇದರಿಂದ ಬೆಳೆಯುತ್ತಲೇ ಇತ್ತು. ಬೇಡ, ಸುಮ್ಮನಿರಿ ಎಂದು ಕಲ್ಯಾಣಿ ಒತ್ತಾಯಿಸುತ್ತಿದ್ದಳು.

"ನೀವು ನನ್ನ ದೇವರು. ನಿಮಗೆ ಆಯಾಸವಾಗಬಾರದು. ಅಭ್ಯಾಸ ಸಾಗಲಿ. ನನಗೆ ಕಂಪೆನಿಯ ಯೋಚನೆ. ಮನೆಯ ಹೊರೆಯನ್ನೆಲ್ಲ ನಿಮ್ಮ ಮೇಲೆ ಹೇರಿಸಿ ಬಿಡುವಿಲ್ಲದಂತೆ ಮಾಡಿದ್ದೇನೆ."

"ಆ ಹೊರೆ ಹೊರಲು ಸುಂದರನಿದ್ದಾನೆ. ಮನೆಕೆಲಸದ ಹೆಂಗಸಿದ್ದಾಳೆ."

"ನನಗಾಗಿ ನೀವು ಬಂದಿದ್ದೀರಿ. ನನ್ನ ಸರ್ವಸ್ವ ನೀವು. ನಿಮ್ಮ ಕೈಹಿಡಿದು ನಾನು ಕರೆತಂದಿದ್ದೇನೆ. ತಮ್ಮನ್ನು ಯಾವ ಚಿಂತೆಯೂ ಇಲ್ಲದೆ ಇರುವಂತೆ ನೋಡಿಕೊಳ್ಳುವುದು ನನ್ನ ಧರ್ಮ."

"ಆದರೆ....ನಾನೂ ಗಂಡಸು. ನಿನ್ನಂತೆ ನಾನೂ ತಿಳಿದುಕೊಂಡಿದ್ದೇನೆ. ನಿನ್ನ ಕೈ ಹಿಡಿದವನು ನಾನೆಂಬ ಭಾವನೆಯಿದೆ; ಅಭಿಮಾನವಿದೆ, ಹೆಮ್ಮೆಯಿದೆ ನನಗೆ."

"ಹೆಣ್ಣು ದುಡಿಯಲೇಬಾರದೇ?"

"ಹಾಗಿಲ್ಲ ಕಲ್ಯಾಣಿ. ಕಲಾರಂಗದಲ್ಲಿ ಹೆಣ್ಣಿನ ದುಡಿಮೆ ಅಧಿಕ, ಗಂಡಿನದು ಅಲ್ಪವಾಗಬಹುದು. ಅಲ್ಲಿ ಎರಡು ಕಲೆಗಳ ಸಮಾವೇಶವಾಗುತ್ತದೆ. ಹೆಣ್ಣು ಒಂದು ಕಲಾಸೃಷ್ಟಿ ತಾನೆ" ಎಂದು ಕೃಷ್ಣ ನಕ್ಕ.

"ಮುಂದಿನ ಕಂಪೆನಿ ಸೇರುವಾಗ ನಿಮ್ಮನ್ನು ಸೇರಿಸಿಕೊಳ್ಳುವಂತೆ ಒತ್ತಾಯಪಡಿಸುತ್ತೇನೆ"

"ಅದು ಮುಂದಿನ ವಿಚಾರ. ನಾನು ಬೇಡವಾದಲ್ಲಿ ನೀನೂ ಬೇಡವಾಗಬಾರದು. ನಿನ್ನಲ್ಲಿ ಚಿತ್ರರಂಗಕ್ಕೆ ಬೇಕಾದ ಹತ್ತು ಯೋಗ್ಯತೆಗಳಿವೆ. ನನ್ನದು ಒಂದೋ ಎರಡೋ. ಅದೂ ತಯಾರಕರು ಒಪ್ಪಿದರೆ ಮಾತ್ರ. ನಿನ್ನನ್ನವರು ಒಪ್ಪಲೇಬೇಕು. ಈ ರಂಗದಲ್ಲಿ ಎಲ್ಲ ಸಂಪತ್ತೂ ಇರುವ ನಿನ್ನಂತಹರು ವಿರಳ."

"ಹೊಗಳಿಕೆ ಇನ್ನು ಬೇಕೇ? ಈಗ ನಾವು ಎಷ್ಟು ಹೊಗಳಿಕೊಂಡರೂ ಅಷ್ಟೆ? ನಿಮ್ಮನ್ನು ನಾನು ಸಂಪೂರ್ಣವಾಗಿ ಅರಿತಿದ್ದೇನೆ. ನನ್ನನ್ನು ನೀವೂ ಅರಿತಿದ್ದೀರಿ. ನಮ್ಮ ಕಣ್ಣು, ಮೈ, ಮನ ಬೆರೆತಿವೆ. ಚಿನ್ನಕ್ಕೆ ಪುತ್ಥಳಿಯನ್ನು ನೀವು ಬೆಸುಗೆಹಾಕಿದ್ದೀರಿ. ಒಂದೆ ಮನದ, ಒಂದೆ ಗುರಿಯ, ಒಂದೆ ಬಾಳಿನ ಈ ಎರಡು ದೇಹಗಳಿವು."

"ನಿಜ ಕಲ್ಯಾಣಿ—

ಆತ್ಮಗಳು ಎರಡು ಒಂದಾಗಿ ನಿಲ್ಲುವುದಿಲ್ಲ—
ನಿಂದಾಗ ಸಗ್ಗ ಭೂಮಿಗೆ ಇಳಿಯದಿಲ್ಲ.
ಒಂದರಂತೊಂದಿಲ್ಲ ಈ ಜಗದ ಕೃತಿಯಲ್ಲಿ
ಎಲ್ಲ ಒಂದನ್ನೊಂದು ಉಳಿದು ಇಲ್ಲ.

" ಜೇಬಿನಲ್ಲಿ ನಾವು ಕಾಸು ಇಟ್ಟುಕೊಳ್ಳುತ್ತೇವೆ. ಆದರೆ ಅದನ್ನು ಬಲಗೈಯಿಂದಲೇ ತೆಗೆಯುತ್ತೇವೆ. ಯಾಕೆ ಗೊತ್ತೇ ? ಅದನ್ನು ಬಲಗೈಯಿಂದಲೇ ಸ್ವೀಕರಿಸಿದ್ದೇವೆ. ಅಷ್ಟೇ. ಅದನ್ನು ಎಡಗೈಯಿಂದ ತೆಗೆಯಬಾರದೆಂದೇನೂ ಇಲ್ಲ. ಎಡಗೈಯಿಂದಲೇ ತೆಗೆಯುತ್ತಲೂ ಇದ್ದೇವೆ. ಯಾರ ಹಣ, ಯಾರ ದುಡಿಮೆಯಾದರೆ ಏನು ? ಯಾವ ಕೈ ಅದನ್ನೆತ್ತಿದರೆ ಏನು ? ಅದು ಒಬ್ಬರಿಗೇ ಸೇರಿದ ಹಣ. "

" ಆದರೆ ಎಡಗೈ ಪಡೆದ ಹಣ ? ಕಲ್ಯಾಣಿ, ನಮ್ಮ ಹಿರಿಯರು ಹೆಂಗಸನ್ನು ಎಡಬದಿಗೆ ನಿಲ್ಲಿಸಿಕೊಂಡಿದ್ದಾರೆ. ಅವಳು ಎಡಗೈ ಅಂತೆ. " ಎಂದು ಕೃಷ್ಣ ನಗುತ್ತ ಅವಳನ್ನು ಸೆಳೆದಪ್ಪಿದ.

" ಬಲಗೈ ಅದನ್ನು ಎತ್ತಬಹುದು. "

" ಎಡಗೈ ಹಣ ಎತ್ತುವಾಗ ಅಭ್ಯಾಸವಿಲ್ಲದೆ ತಬ್ಬಿಬ್ಬಾದಂತೆ ಆಗ ಬಲಗೈಯೂ ಆಗಬಹುದು. ಎಡಗೈಯಲ್ಲೇ ಉಣ್ಣುವವರಿಗೆ ಬಲಗೈಯ ಉಪಯೋಗವೇ ಮರೆತುಹೋಗುತ್ತದಂತೆ. "

" ಸಾಕು ನಿಮ್ಮ ವೇದಾಂತ. ಸುಂದರಾ....ಕಾಫಿ ತಾ ಮಗು. ನಿನ್ನ ಮಾಸ್ತರರಿಗೆ ಹುಚ್ಚು ಹಿಡಿದಿದೆ. ವೇದಾಂತ ಮಾತನಾಡುತ್ತಾರೆ " ಎಂದು ಅವನ ಚಿಂತೆ ಬಗೆಹರಿಸಲು ಯತ್ನಿಸುತಿದ್ದಳು.

ಅವನ ಬಳಿ ಇದ್ದಾಗ ತನ್ನನ್ನು ಪೂರ್ಣವಾಗಿ ಅವನಿಗೆ ಒಪ್ಪಿಸಿ ಮೈ ಮರೆಯುತಿದ್ದಳು ಕಲ್ಯಾಣಿ. ಕಲಾಭ್ಯಾಸದಲ್ಲಿ ಅದೇ ಹಾಡು. ಗೆಳತಿಯರೊಡನೆ ಕಲೆತಾಗಲೂ ಹಾಗೆಯೇ. ಯಾರೂ ಕೊಡದಿದ್ದ ಸುಖವನ್ನಿತ್ತವನು ಕೃಷ್ಣ. ಅದನ್ನು ಅವಳು ಬಲ್ಲಳು. ಆ ಸುಖವಿಲ್ಲದೆ ಬಾಳು ಬಾಳಲ್ಲ. ಅದಕ್ಕಾಗಿ ಅವಳು ದುಡಿಯುತಿದ್ದಾಳೆ ! ತಂದೆಯಂತೆ ಸಲಹಿದ ಮಾಸ್ತರರನ್ನು ಬಿಟ್ಟು, ತನ್ನನ್ನು ವಜ್ರವಾಗಿರಿಸಿ ತನಗೆ ಉಚ್ಚಸ್ಥಾನವಿತ್ತು ನಾಡಿನಲ್ಲೆಲ್ಲ ಮೆರೆಸಿದ ಕಲಾಮಂಡಲದಂತಹ ಚಿನ್ನದ ಸಂಪುಟದಿಂದಲೂ ಉರುಳಿಬಿದ್ದಿದ್ದಾಳೆ ಅವಳು. ಇಬ್ಬರೂ ತಮ್ಮ ಹಲಕಾಲದ ಬಯಕೆ ಈಡೇರುವವರೆಗೂ, ಮನಸ್ಸಿಗೆ ಪೂರ್ಣ ತೃಪ್ತಿಯಾಗುವ ವರೆಗೂ ಆ ಸುಖದ ಸವಿಯನ್ನು ಸವಿದಿದ್ದಾರೆ.

ಚಿತ್ರದ ಶೂಟಿಂಗ್ ನಿಧಾನವಾಗುತ್ತ ಬಂತು. ನಾಲ್ಕು ದಿನಗಳಲ್ಲಿ ನೃತ್ಯ ಸಿದ್ಧವಾಗಬೇಕೆಂದು ಬಯಸಿದ ಮಾಲಿಕರಿಗೆ ನರ್ತಕಿ ದೊರೆತು, ನೃತ್ಯವೂ ಸಿದ್ಧವಾದ ಬಳಿಕ ಅದೇಕೋ ತುರುತು ಕಡಿಮೆಯಾಯಿತು. ಕಲಾವಿದರು ದೊರೆಯುತ್ತಿಲ್ಲ. ಎಷ್ಟು ಹುಡುಕಿದರೂ ಉತ್ತಮ ನಟನಟಿಯರು ದೊರೆಯುವುದಿಲ್ಲ ಎಂದು ಚಿತ್ರತಯಾರಕರು ಗೊಣಗುತ್ತಿರುತ್ತಾರೆ. ಕಲಾವಿದರು ಅವರ ಬಳಿ ಹೋದಾಗ ಮುಂದೆ ನೋಡೋಣವೆಂದು ನಿಧಾನಿಸುತ್ತಾರೆ. ಚಿತ್ರತಯಾರಿ ಆರಂಭವಾದ ಮೇಲೂ ಯಾವ ಕಲಾವಿದ ಯಾವಾಗ ಬೇಕಾಗುತ್ತಾನೆ ಎಂದು ನಿರ್ಧರಿಸುವ ಯೋಗ್ಯತೆ ಕನ್ನಡ ಚಿತ್ರತಯಾರಕರಿಗೆ ಇಲ್ಲ. ಹೊಸ ನಟರನ್ನು ತಂದು ಕರಬೇತಿಗೊಳಿಸಿ ಅವರಿಂದ ಚಲನಚಿತ್ರಕ್ಕೆ ಬೇಕಾದ ಅಭಿನಯ ದೊರಕಿಸಿಕೊಳ್ಳಲೂ ಅವರಿಗೆ ಧೈರ್ಯವಿಲ್ಲ. ನಾಳೆ ಶೂಟಿಂಗ್, ಹೊಸ ನಟ ಬೇಕು ಎಂದಾಗ ಹುಡುಕಲಾರಂಭಿಸುತ್ತಾರೆ. ಅಂಥ ಸಂದರ್ಭದಲ್ಲಿ ಅಷ್ಟು ಶೀಘ್ರವಾಗಿ ಸಾಮಾಗ್ರಿ ಬೇಕಾದಾಗ ಮಾರುಕಟ್ಟೆಯೋ ಸಂತೆಯೋ ನಮಗೆ ಗತಿ. ಎಂತಲೇ ಕಲಾವಿದರಿಗಾಗಿ ನಾಟಕ ಕಂಪೆನಿಗೆ ತೆರಳಿ, ಅಲ್ಲಿ ದೊರೆಯುವವರನ್ನು ತಂದು ಚಿತ್ರವೆತ್ತುತ್ತಾರೆ. ನಾಟಕೀಯ ಅಭಿನಯದ ಸವಿ ನಮಗೆ ಕನ್ನಡಚಿತ್ರಗಳಲ್ಲಿ ದೊರೆಯುವಂತೆಮಾಡುತ್ತಾರೆ. ಕಲ್ಯಾಣಿಯಂತಹ ನರ್ತಕಿ ಕೈಗೆ ದೊರೆಯುವ ವರೆಗಿದ್ದ ಅವಸರವೂ ಹಾಗೇ ಅಳಿಯಿತು. ಎಂಟು ದಿನ ಕಳೆದು ಹದಿನೈದು ದಿನಗಳಾದುವು.

ಚಿತ್ರತಯಾರಕರಿಗೆ ಬೇಕಾದ ಫಿಲಂ ತರಿಸುವುದು ನಿಧಾನವಾಯಿತು. ಪ್ರಾಣಹೋಗುತ್ತೆ ಅಂದಾಗ ನೀರು ಕೊಟ್ಟರೆ ಎಷ್ಟು ಬೇಕು? ಒಂದೇ ಗುಟುಕು ಸಾಕು. ಬಾಯಾರಿದಾಗ ಕೊಟ್ಟರೆ ಒಂದು ತಂಬಿಗೆ ಬೇಕಾದರೂ ಬೇಕಾಗುತ್ತದೆ. ಆದ್ದರಿಂದ ಪ್ರಾಣೋತ್ಕ್ರಮಣ ಕಾಲದಲ್ಲಿ ನೀರು-ನೀರು ಎಂದು ಕಿರಿಚಿದಾಗ ನೀರು ಕೊಡೋಣ ಎಂಬ ವ್ಯವಹಾರ ನೀತಿಯ ಬಬೂ ತಮಲ್ ಶೂಟಿಂಗ್ ದಿನ ನಿರ್ಧಾರವಾದ ಮೇಲೆಯೇ ಫಿಲಂ ಹುಡುಕಲು ಹೊರಡುತಿದ್ದ. ನೃತ್ಯದ ಹಿನ್ನೆಲೆಯ ಶ್ಲೋಕವನ್ನು ರಿಕಾರ್ಡ್ ಮಾಡಲು "ಸೌಂಡ್" ಫಿಲಂ ಬೇಕಾಗಿತ್ತು. ಅದು ಮದ್ರಾಸಿನಲ್ಲೂ ದೊರೆಯುವುದು ನಿಧಾನವಾಯಿತು. "ರೆಕಾರ್" ಮಾಡಿ, ಅದಕ್ಕೆ ಅನುಗುಣವಾಗಿ ಒಂದೆರಡು

ಬಾರಿ ನರ್ತಕಿ ನರ್ತಿಸಿ, ನಂತರ ಚಿತ್ರವೆತ್ತಬೇಕಾಗುತ್ತದೆ. ರೆಕಾರ್ಡಿಂಗೇ ನಡೆಯದೆ ಚಿತ್ರವೆತ್ತುವುದು ಸಾಧ್ಯವಿರಲಿಲ್ಲ. ಈ "ಹುಚ್ಚು-ಮದುವೆ" ಗಾದೆಯ ಪರಿಣಾಮವಾಗಿ ಕಲ್ಯಾಣಿಯ ನೃತ್ಯವನ್ನು ಚಿತ್ರವೆತ್ತುವ ದಿನ; ಬಭ್ರುವಾಹನನ ಆಸ್ಥಾನದ ಚಿತ್ರವೆತ್ತುವ ದಿನ ಮುಂದೆ ಹೋಯಿತು.

ಡೈರೆಕ್ಟರ್ ಕಾದು ಕಾದು ಬೇಸರಗೊಂಡ. ರುದ್ರಪ್ಪನಿಗೂ ಬಬೂತ ಮಲ್‌ನಿಗೂ ಈ ವಿಚಾರವಾಗಿ ವಾದವೇ ನಡೆಯಿತು. ಅಂತೂ ಕೊನೆಗೆ ಒಂದು ರೋಲ್ ಸೌಂಡ್, ಬ್ಲಾಕ್‌ಮಾರ್ಕೆಟ್ ಬೆಲೆಗೆ ಕೊಂಡು ಶೂಟಿಂಗ್ ಆರಂಭಿಸಲು ನಿರ್ಧರಿಸಲಾಯಿತು. ಅದು ಎಲ್ಲಿಗೂ ಸಾಲದು. ಔಟ್ ಡೋರ್ ಶೂಟಿಂಗ್ ಆರಂಭಿಸಿ, ಅರ್ಜುನನ ಅಶ್ವ ಮಣಿಪುರಿಯನ್ನು ಪ್ರವೇಶಿಸುವುದು, ಅದರ ಹಿಂದೆ ಅರ್ಜುನ ಮತ್ತವನ ಸೇನೆ, ಅದರ ಪಾಳಯ, ಅಶ್ವವನ್ನು ಕಟ್ಟಿಹಾಕುವ ದೃಶ್ಯ—ಇವುಗಳನ್ನು ಚಿತ್ರವೆತ್ತುವ ನಿರ್ಧಾರ ವಾಯಿತು. ಇಲ್ಲಿ "ಸೌಂಡ್" ಫಿಲಂ ಹೆಚ್ಚಾಗಿ ಬೇಕಾಗಿಲ್ಲ, ಚಿತ್ರವೆತ್ತುವ ನೆಗೆಟಿವ್ ಮುಖ್ಯ ಬೇಕಾದುದು ಎಂದು ಡೈರೆಕ್ಟರ್ ಅಭಿಪ್ರಾಯ ಸೂಚಿಸಿದ. ಔಟ್ ಡೋರ್ ಶೂಟಿಂಗ್ ಆರಂಭವಾಯಿತು.

ನೂರಾರು ಮಂದಿ ಸೈನಿಕರನ್ನು ಸಿದ್ಧಪಡಿಸಿದರು. ಪಂಚೆ ಸುತ್ತಿ, ಕೈಯಿಲ್ಲದ ಬನಿಯನ್ ಧರಿಸಿ, ತಲೆಗೆ ಪೇಟಾ ಕಟ್ಟಿಕೊಂಡು ಕೈಯಲ್ಲಿ ಕತ್ತಿ ಬಿಲ್ಲು ಬಾಣಗಳನ್ನು ಹಿಡಿದವರೆಲ್ಲ ಅರ್ಜುನನ ಸೇನೆಗೆ ಸೇರಿದವರೆಂದು ಕರೆಯಲ್ಪಟ್ಟರು. ನಾಟಕ ಕಂಪೆನಿಯಲ್ಲಿ ಪಾತ್ರವಹಿಸಿದ್ದ ಲಿಂಗಪ್ಪ ಅರ್ಜುನ ನಾದ. ಇನ್ನೂ ಯಾರೋ ಕೆಲವರು ಸೇನಾ ನಾಯಕರೂ ವೀರವರರೂ ಆದರು. ಅರಮನೆಯ ಲಾಯದಿಂದ ಕುದುರೆಗಳು ದೊರೆತವು. ಅವುಗಳನ್ನು ಹತ್ತಿಕೊಂಡು ಸವಾರಿ ಮಾಡುವ ಗಂಡುಗಳಿಲ್ಲವಾಗಿ, ಸೇನೆ ನಿಂತಾಗಿನ ದೃಶ್ಯವನ್ನೇ ತೆಗೆಯಬೇಕಾಯಿತು. ಸೈನಿಕರು ಚಲಿಸುವ ದೃಶ್ಯಕ್ಕಾಗಿ ಗಾಡಿ ಕುದುರೆಗಳನ್ನು ಉಪಯೋಗಿಸ ಬೇಕಾಯಿತು. ಅವುಗಳನ್ನೇ ರಟ್ಟು ಅಂಟಿಸಿ ರಥಗಳಾಗಿ ಮಾರ್ಪಡಿಸಿದ್ದ ಶಾಪಸಂದ್‌ಗಳಿಗೂ ಹೂಡಿದರು. ಬಿಸಿಲು ಕಾದು, ದೃಶ್ಯ ಅಣಿಗೊಳಿಸಲು ನಡೆದಾಗ ಸೂರ್ಯ ಮೋಡಗಳ ಮರೆಯಲ್ಲಿ ಮರೆಯಾಗುತಿದ್ದ, ಅರ್ಜುನ ಮಾತು ಆರಂಭಿಸುವಾಗ ಯಾವುದೋ ಹಕ್ಕಿ ಅಥವಾ ಕಾಗೆ ಕೂಗುತಿತ್ತು. ಈ ಗೊಂದಲ, ಅಡಚಣೆ

ಗಳನ್ನು ·ಹಾದು ಚಿತ್ರವೆತ್ತುವುದು ಸಾಧ್ಯವಾಗಿ ಮುನ್ನೂರು ಅಡಿ ಚಿತ್ರ ವೆತ್ತಿದಾಗ ಸಂಜೆ ಹತ್ತಿರವಾಗುತಿತ್ತು. ಹಾಗೂ ಹೀಗೂ ಆರುದಿನಗಳ ಔಟ್‌ಡೋರ್ ಶೂಟಿಂಗ್ ಮುಗಿಯಿತು. ನಟ ನಟಿಯರೆಲ್ಲ ಮರದಡಿಗಳಲ್ಲಿ ನಿಂತು ಹುಳಿಯನ್ನ-ಮೊಸರನ್ನ ತಿಂದು ಊಟ ಮುಗಿಸಿ ಬಿಸಿಲಲ್ಲಿ ಒಣಗಿದರು. ಅರ್ಜುನನ ಆಗಮನ, ಅರ್ಜುನ ಬಬ್ರುವಾಹನರ ಮಿಲನ, ಸಂಧಾನ, ಸಮರ, ಅರ್ಜುನನ ಮರಣ, ಮುಂದೆ ಕೃಷ್ಣನ ಆಗಮನ ಎಲ್ಲ ದೃಶ್ಯಗಳಲ್ಲೂ ಮುಖ್ಯ ಭಾಗಗಳು ತೆಗೆಯಲ್ಪಟ್ಟುವು. ಆ ದೃಶ್ಯಗಳಲ್ಲಿ ಕ್ಲೋಸ್‌ಅಪ್‌ಗಳನ್ನು ಸ್ಟುಡಿಯೋದಲ್ಲಿ ತೆಗೆಯಲು ಮತ್ತೆ ನಾಲ್ಕು ದಿನಗಳು ಬೇಕಾದುವು.

ಕಲ್ಯಾಣಿ ತನ್ನ ಅಭ್ಯಾಸ ನಡೆಸಿ, ಇತರ ನಟಿಯರೊಂದಿಗೆ ಔಟ್‌ಡೋರ್ ಶೂಟಿಂಗ್‌ಗೆ ಬಿಡದೆ ಹೋಗುತ್ತಿದ್ದಳು. ಒಂದೆರಡು ಬಾರಿ ಕೃಷ್ಣನೂ ಹೋಗಿದ್ದ. ಈ ಬಿಸಿಲಲ್ಲಿ ಒಣಗುವುದು ಬೇಡವೆಂದು ಅವನು ಹಿಂತೆಗೆದ. ಆದರೆ ಜತೆಗಾತಿಯರ ವಿಶ್ವಾಸಕ್ಕೆ ಕಟ್ಟು ಬಿದ್ದು ಅವರ ಒತ್ತಾಯಕ್ಕೆ ಬಾಗಿ ಕಲ್ಯಾಣಿ ಬಿಸಿಲಿಗೆ ಬಿದ್ದಳು. ಚಿತ್ರ ತಯಾರಕರೂ ಅವಳನ್ನು ಒತ್ತಾಯ ಪಡಿಸಿ ಕರೆದೊಯ್ಯುತ್ತಿದ್ದರು. ತಮ್ಮ ಅಭಿಮಾನ ಆದರ ಆಥಿತ್ಯಗಳನ್ನು ತೋರ್ಪಡಿಸಲು ಅವರೂ ಸತತವಾಗಿ ದುಡಿಯುತಿದ್ದರು. ಶೂಟಿಂಗ್ ನೋಡುತ್ತ ಚಿತ್ರ ರಚನೆ ಎಷ್ಟು ಕಷ್ಟ ಎಂದು ತಿಳಿದಂತೆ, ಚಿತ್ರ ತಯಾರಕರು ಬಹಳ ಒಳ್ಳೆಯವರು ಎಂಬ ಅಭಿಪ್ರಾಯವೂ ಕಲ್ಯಾಣಿಯಲ್ಲಿ ಮೂಡಿತು. ಕಂಪೆನಿಯ ಪಾಲುಗಾರರ ಬಗೆಗೆ ಅಭಿಮಾನ ಉಂಟಾಯಿತು. ಅದಕ್ಕೆ ಅವರ ಕಾರು ಅವಳಿಗೆ ಸಹಾಯಮಾಡಿತು. ಕಲ್ಯಾಣಿಯನ್ನು ಕರೆದೊಯ್ಯಲೂ, ಮನೆಗೊಯ್ದು ಬಿಡಲೂ ಕಂಪೆನಿಯ ಕಾರನ್ನೇ ನಾರಣಪ್ಪ ಕಳುಹಿಸಿಕೊಡುತಿದ್ದ. ಆದಕ್ಕೆ ರುದ್ರಪ್ಪನ ಒಪ್ಪಿಗೆಯೂ ಇತ್ತು. ಕಲ್ಯಾಣಿಯ ನೆಪ ಹೂಡಿ ಶಾಂತಮ್ಮನನ್ನೂ ಕಾರಿನಲ್ಲಿ ಒಯ್ಯುವುದು ನಾರಣಪ್ಪನಿಗೆ ಸಾಧ್ಯವಾಯಿತು. ಹಾಗೇ ದಿನಗಳೆದಂತೆ ಎಲ್ಲ ವಿಶ್ವಾಸಗಳಿಗೆ ಪಾತ್ರರಾದ ನಟಿಯರಿಗೂ ಕಾರು ಕೈಗೆಟಕಿತು.

ಹದಿನೈದು ದಿನಗಳ ಶೂಟಿಂಗ್, ಕಲ್ಯಾಣಿಪ್ರತಿದಿನ ಅದನ್ನು ನೋಡಲು ಹೋಗುತ್ತಿರುವ ವಿಚಾರ, ಅವಳಿಗಾಗಿ ಕಾರು ಕಾದುನಿಲ್ಲುವ ವಿಷಯ ಕೃಷ್ಣರಾಯನಲ್ಲಿ ಅಸಮಾಧಾನ ಮೂಡಿಸಿತು.

ಇತರರಂತೆ ತಾನೂ ಆಗಲೇಬೇಕೆಂದು ಹೆಣ್ಣು ಬಯಸುತ್ತದೆ. ಗಂಡಿಗೂ ಆ ಬಯಕೆ ಇದೆ. ಗಂಡು ಅಂಥ ಬಯಕೆಯನ್ನು ತಡೆಹಿಡಿದು, ತನ್ನಿಂದ ಸಾಧ್ಯವಾದಷ್ಟನ್ನೇ ಸಾಧಿಸಿ, ಅಷ್ಟಕ್ಕೇ ತೃಪ್ತಿಪಡೆದು ಬಾಳಬಲ್ಲ. ಹೆಣ್ಣಿಗೆ ಅಂಥ ತಾಳ್ಮೆ ಕಡಿಮೆ. ಅದರಲ್ಲೂ ಅಶಕ್ತಿ ಅಧಿಕವಾದರೆ ಬಯಕೆಯ ಹಿಂದೆ ಓಡಲೂ ಹೆಣ್ಣು ಹಿಂಜರಿಯಲಾರದು. ಬಾಲ್ಯದಲ್ಲಿ ವಿವಾಹ ಬಯಸುತ್ತದೆ, ಉಡಿಗೆತೊಡಿಗೆ ಬಯಸುತ್ತದೆ. ಕಂಡುದೆಲ್ಲ ಬೇಕು, ಇತರರಂತೆ ಆಗಬೇಕೆಂದು ಹೇಳುತ್ತದೆ. ಮುಂದೆ ತಾಯಿಯಾಗುವ ಬಯಕೆ, ಬಂಗಾರ, ಬೆಡಗು, ಬಟ್ಟೆಗಳ ಬಯಕೆ. ಅನಂತರ ಮನೆ, ಮಠಗಳ ಬಯಕೆ. ಹೀಗೇ ತಡೆಯಿಲ್ಲದೆ ಅದು ಸಾಗುತ್ತಿರುತ್ತದೆ. ಹೆಣ್ಣಿನ ಆಶಯದ ಆಗ್ರಹದ ಸುಳಿಗಾಳಿಗೆ ಸಿಲುಕಿ ಅದರ ಒಂದಂಶವನ್ನು ಸಾಧಿಸಲು ಗಂಡು ಹೊರಟಾಗಲೇ ಆತ ಸಾವಿರ ಅನೀತಿಗೆ ಕಾರಣನಾಗಬೇಕಾಗುತ್ತದೆ. ಕಲ್ಯಾಣಿಯ ಬಯಕೆ ಬಲವಾಯಿತು. ಇತರರಂತೆ ತಾನೂ ಹೊಸ ಹೊಸ ಕುಪ್ಪಸಗಳನ್ನು ಧರಿಸಬೇಕೆಂದು ಚಡಪಡಿಸಿದಳು. ಆಭರಣಗಳ ಕನಸು ಕಂಡಳು. ರೇಡಿಯೋ ಬಂತು, ಮಂಚ ಮನೆ ಸೇರಿತು. ಮುಂದೆ....ಕಾರೂ ಬೇಕು.....ಮನೆ ಬೇಕು....ಹೀಗೆ ಬೇಕುಗಳ ಮಾಲೆಯನ್ನು ನೇಯಲು ತೊಡಗಿದಳು.

ಕೃಷ್ಣ ಇದನ್ನೆಲ್ಲ ನೋಡಿದ. ಈ ಬೇಕುಗಳ ಬಯಕೆ ಅವಳನ್ನೆಲ್ಲಿಗೆ ಕೊಂಡೊಯ್ಯುವುದೋ ಎಂದು ಬೆದರಿದ. ಇನ್ನು ತಾನು ಸುಮ್ಮನಿರುವುದು ಸರಿಯಲ್ಲ, ತಾನೂ ದುಡಿಯಬೇಕು, ಆ ಬೇಕುಗಳನ್ನು ಪೂರೈಸಲು ಸಾಧ್ಯವಾದಷ್ಟು ಪ್ರಯತ್ನಿಸಬೇಕು, ಇಲ್ಲವಾದರೆ ಮುಂದೆ ವಿರಸಕ್ಕೆ ಎಡೆಯಾದೀತೆಂದು ಅವನು ಚಿಂತಿಸಿದ. ಕಲ್ಯಾಣಿಯನ್ನು ಕೇಳಿದರೆ ಆಕೆ ಅದೇನೂ ಬೇಡವೆನ್ನುತ್ತಾಳೆ. ಅವಳೇ ಬೇರೆಯವರ ಸೀರೆಗಳನ್ನು ರವಕೆಗಳನ್ನು ಹೊಗಳುತ್ತಾಳೆ. ಹಸಿದವನು ದಾಕ್ಷಿಣ್ಯಕ್ಕೆ ಒಳಗಾಗಿ ಏನೂ ಬೇಡವೆನ್ನುವಂತೆ ವರ್ತಿಸುತ್ತಾಳೆ ಎಂದು ತಿಳಿಯುವುದು ಅವನಿಗೆ ಕಷ್ಟವಾಗಲಿಲ್ಲ. ಮನೆಯ ಆರಂಭದ ದಿನ ಕೈಗೆ ಬಂದ ಹಣದಲ್ಲಿ ರೇಡಿಯೋ, ಮಂಚ, ಸೀರೆ, ಬಟ್ಟೆಬರೆಗಳಿಗೆ ಐದು ನೂರು ಖರ್ಚಾಗಿತ್ತು. ಇನ್ನುಳಿದ ಇನ್ನೂರು ಮನೆ ಸಾಮಾಗ್ರಿಗಳಿಗಾಗಿ ಅರಗುತ್ತಲಿದೆ. ಆಗಲೇ ಚಿತ್ರದ ಕಂಟ್ರಾಕ್ಟಿನ ನಾಲ್ಕು ನೂರು ರೂಪಾಯಿಗಳು ಮುಗಿದಿವೆ. ಇನ್ನುಳಿದ ಆರುನೂರು ಇದೇ ರೀತಿ

ಸಾಗಿದರೆ ಮೂರು ತಿಂಗಳಿಗೆ ಸಾಕಾಗಬಹುದೇನೋ. ಆ ಬಳಿಕ ರೇಡಿಯೋ ಮನೆ ಬಿಡಬೇಕಾದೀತು. ಬಾಡಿಗೆ ಕೊಡಲಾರವೆ, ಮನೆ ಬದಲಾಯಿಸ ಬೇಕಾದೀತು ಎಂಬ ಭೀತಿ ಅವನಲ್ಲಿ ಮೂಡಿತು. ಹೀಗಾದರೆ, ಎಲ್ಲ ಗೌರವ ಗಳೂ ಮಣ್ಣುಪಾಲಾಗುತ್ತವೆ, ಅದೇ ತಮ್ಮ ಪ್ರೇಮದ ಕೊನೆಯಾದರೂ ಆಗ ಬಹುದು ಅಥವಾ ಆ ಕೊನೆಯು ಆರಂಭವಾದರೂ ಹೆಚ್ಚಲ್ಲವೆಂದು ಅವನಿಗೆ ಅನಿಸಿತು.

ಕಲ್ಯಾಣಿಯಿಂದ ಅನುಮತಿ ಪಡೆಯದೆ ಕೃಷ್ಣರಾಯ ಆಕಾಶವಾಣಿಯ ಅಧಿಕಾರಿಗಳನ್ನು ಭೇಟಿಮಾಡಿದ. ಅವನ ವಿಚಾರ ತಿಳಿದು, ಸ್ವರಪರೀಕ್ಷೆ ಗಾಗಿ ಅಡಿಶನ್ ನಡೆಸಿ, ಡೈರೆಕ್ಟರರು ಒಂದು ಛಾನ್ಸ್ ಕೊಟ್ಟರು. ಅದರಿಂದ ಅವನ ಚಿಂತೆ ಅರ್ಧ ಕಡಿಮೆಯಾಯಿತು. ಹಾಗೇ ಆಕಾಶವಾಣಿಗೆ ಸಂಗೀತ ವನ್ನು ಪ್ರಶಂಸಿಸಿ ನೂರಾರು ಪತ್ರಗಳು ಬಂದುದರಿಂದ ತಿಂಗಳಿಗೊಂದು ಕಾರ್ಯಕ್ರಮ ಕೊಡಲು ಅಧಿಕಾರಿಗಳು ಒಪ್ಪಿಕೊಂಡರು.

ಕೃಷ್ಣನ ಸಂಗೀತದ ಪ್ರಸಾರ ನಡೆದಂತೆ ಅವನನ್ನು ಹುಡುಕಿಕೊಂಡು ವಿದ್ಯಾರ್ಥಿಗಳೂ ಬಂದರು. ಮೊದಲನೆಯದಾಗಿ ಎರಡು ಪಾಠಗಳು ದೊರೆ ತುವು. ಹಿಂದುಸ್ತಾನಿ ಸಂಗೀತ ಕಲಿಸುವವರು ಮೈಸೂರಲ್ಲಿ ಇಲ್ಲವಾಗಿ ಅವನಿಗೆ ಎರಡು ಪಾಠಗಳಿಂದ ತಿಂಗಳಿಗೆ ೫೦ ರೂಪಾಯಿಗಳು ಬರುವಂತಾ ಯಿತು. ಆಕಾಶವಾಣಿಯ ಕಾರ್ಯಕ್ರಮ, ತನಗೆ ದೊರೆತ ಎರಡು ಪಾಠ ಗಳ ಬಗೆಗೆ ಕಲ್ಯಾಣಿಗೆ ತಿಳಿಸಲು ಕೃಷ್ಣ ಹಿಂತೆಗೆದ. ಅವಳ ಬಾಯಿಂದಲೇ ಆ ಅಭಿಪ್ರಾಯ ಬರಲಿ ಎಂದವನು ಕಾದಿದ್ದ.

ಮೈಸೂರಿಗೆ ಬಂದು ಒಂದು ತಿಂಗಳು ಕಳೆಯಿತು. ಅಷ್ಟರಲ್ಲೇ ಕಲ್ಯಾಣಿಯಲ್ಲಿ ತುಂಬ ಬದಲಾವಣೆಯನ್ನು ಅವನು ಕಂಡಿದ್ದ. ಅವಳಿಗೆ ಮನೆಯೇ ಬೇಕಾಗಿರಲಿಲ್ಲ. ಕಂಪೆನಿ ಇದೆ. ಶೂಟಿಂಗ್, ಗೆಳತಿಯರು, ಇದೇ ಅವಳ ಚಿಂತೆಯಾಯಿತು. ಗೆಳತಿಯರ ಜತೆ ಸೇರಿ ಸಿನಿಮಾಕ್ಕೆ ಹೋಗು ವುದೂ ಆರಂಭವಾಯಿತು. ಕೃಷ್ಣ ಮತ್ತು ಸುಂದರ ಇಬ್ಬರ ತಲೆಯ ಮೇಲೆ ಮನೆಯ ಹೊರೆ ಬಿತ್ತು. ಮನೆಗೊಬ್ಬ ಒಡತಿ ಇದ್ದರೇನೇ ಮನೆ, ಇಲ್ಲವಾದರೆ ಅದು ಬರಿ ಬಯಲು ಎಂಬ ಅನುಭವ ಅವನಿಗಾಯಿತು.

ತಾನು ಮನೆಗೆ ತಡವಾಗಿ ಬಂದಾಗ, ಸಿನಿಮಾಕ್ಕೆ ಹೋಗಿ ಹಿಂತಿರುಗಿದಾಗಲೆಲ್ಲ, ಕಲ್ಯಾಣಿ ತಪ್ಪಿತಸ್ಥಳಂತೆ ಬಂದು ಕೃಷ್ಣನ ಕ್ಷಮೆಬೇಡುತಿದ್ದಳು. ಅವನನ್ನು ನಕ್ಕು ನಗಿಸಿ ಅವನ ಬೇಸರ ಕಳೆಯಲು ಎಲ್ಲ ಯತ್ನಗಳನ್ನು ಮಾಡುತಿದ್ದಳು. ಅವನನ್ನು ತೃಪ್ತಿಪಡಿಸಲು ತನ್ನನ್ನೇ ಅರ್ಪಿಸಿ, ತಾನೆಂದೆಂದಿಗೂ ಆತನ ಚರಣದಾಸಿ ಎಂದು ತೋರಿಸಿಕೊಡಲು ಯತ್ನಿಸುತಿದ್ದಳು. ಈ ಅಭಿನಯಕ್ಕೆ ಸೋತು ತನ್ನ ಬೇಸರವನ್ನು ಬದಿಗೊತ್ತಿ ರೋಷವನ್ನು ಅದುಮಿ ಅವಳ ತೋಳಿನಲ್ಲಿ ತನ್ನನ್ನೇ ತಾನು ಮರೆಯುತಿದ್ದರೂ, ಕೃಷ್ಣನ ಮನದೊಳಗೆ ಆ ಚಿಂತೆ ಕುದಿಯುವುದು ಮಾತ್ರ ನಿಲ್ಲಲಿಲ್ಲ.

ದಿನೇ ದಿನೇ ಅವನ ಕೊರಗು ಅಧಿಕವಾಯಿತು. ಹೀಗಾದರೆ ಮುಂದೆ ಹೇಗೆ ಎಂದು ಕಳವಳ ಮೂಡಿತು. ಈ ಹುಚ್ಚು ಎಂದಾದರೂ ಕೇಡು ತರದಿರದೆಂದು ಅವನು ಮರುಗುತಿದ್ದ. ಆ ಕೊರಗಿನ ಪರಿಣಾಮವಾಗೇ ಅವನು ಸಂಗೀತ ಅಭ್ಯಾಸದ ಕಡೆಗೆ, ಪಾಟಗಳ ಕಡೆಗೆ ಹೆಚ್ಚು ಗಮನ ಹರಿಯಿಸಿದ. ಒಂಟಿಯಾಗಿದ್ದಾಗಲೆಲ್ಲ ಕಲ್ಯಾಣಿಯ ಬಗೆಗೆ ಚಿಂತಿಸಿ, ಮುಂದಿನ ಬಾಳಿನ ಬಗೆಗೆ ಯೋಚಿಸುತಿದ್ದ ಆತ.

ಎಂದಾದರೊಮ್ಮೆ ನಾವು ಬೇರೆಯಾಗುತ್ತೇವೆ–ಎಂದವನ ಮನ ಕೂಗಿ ಎಚ್ಚರಿಸುತಿತ್ತು.

ಚಿತ್ರರಂಗ ಅವಳನ್ನು ನುಂಗುತ್ತಿದೆ, ಇಂದಲ್ಲ ನಾಳೆ ಅವಳು ನನ್ನಿಂದ ದೂರವಾಗಬಹುದು ; ಕಲೆ, ನೃತ್ಯ, ಅಭಿನಯ ಎಲ್ಲವುಗಳಿಂದಲೂ ಅವಳು ದೂರಹೋಗಬಹುದು ಎಂದವನಿಗೆ ಭೀತಿ ಉಂಟಾಗುತಿತ್ತು.

ಆದರೆ ಆ ತನ್ನ ಭೀತಿಯ ಬಗೆಗೆ ಹೇಳಿದಾಗಲೆಲ್ಲ ಅವಳು ಉಫ್ಫೆಂದು ಅದನ್ನು ಹಾರಿಸಿ, ಮಾತು ಬದಲಿಸಿ, ನಕ್ಕುಬಿಡುತಿದ್ದಳು. ಇನ್ನು ಹೆಚ್ಚು ವಾದ ಹೂಡಿದರೆ ತನ್ನ ಬಗೆಗೆ ಅಪನಂಬಿಕೆ ತೋರುತಿದ್ದೀರಿ ಎಂದು ಅಳುತಿದ್ದಳು. ಅವಳನ್ನು ಸಮಾಧಾನಪಡಿಸುತ್ತ ತನ್ನ ಯೋಚನೆಯನ್ನೇ ತಾನು ಬದಲಿಸಬೇಕಾದ ಸಂದರ್ಭ ಕೃಷ್ಣನಿಗೆ ಒದಗಿತ್ತು.

ಹೇಗೂ ಈ ಚಿತ್ರದಲ್ಲಿ ಒಂದು ನೃತ್ಯವಿದೆ. ಅದು ಪೂರ್ಣವಾಯಿತೆಂದರೆ ಒಂದೆರಡು ತಿಂಗಳಾದರೂ ವಿರಾಮ ದೊರೆಯುತ್ತದೆ. ಆಗ ಎಲ್ಲವೂ ಸರಿಹೋಗಬಹುದೆಂದು ತನಗೆ ತಾನೇ ಆತ ಸಮಾಧಾನ ತಂದುಕೊಳ್ಳುತಿದ್ದ.

ನಾನು ನನ್ನ ಕಾಲ ಮೇಲೆ ನಿಲ್ಲಬೇಕು. ಆಗ ಅವಳಲ್ಲೂ ವಿವೇಚನೆ ಮೂಡುತ್ತದೆ. ಅಥವಾ ನಾವಿಬ್ಬರೂ ಈ ಚಿತ್ರನದಿಯಲ್ಲಿ ಇಳಿದು ಜತೆಯಾಗೇ ಈಜಾಡಬೇಕು ಎಂದವನು ನಿರ್ಧರಿಸಿ ಧೈರ್ಯತಂದುಕೊಳ್ಳುತಿದ್ದ.

ಕಲ್ಯಾಣಿಯ ಚಿತ್ರದ ಕಂಟ್ರಾಕ್ಟು ಮುಗಿದ ಮೇಲೆ ಬೆಂಗಳೂರಿಗೆ ಹೋಗಿ ಬರಬೇಕು. ಒಂದೆರಡುವಾರ ಈ ಜಾಡಿನಿಂದ,ದೂರವಾಗಬೇಕು. ಆಗ ಅವಳ ಸ್ನೇಹಿತರ ಕಾಟವೂ ತಪ್ಪಬಹುದು. ಇಲ್ಲವಾದರೆ ದಿನ ನಿತ್ಯ ಅವಳನ್ನು ಪೀಡಿಸು ವ ಗೆಳತಿಯರು, ಮತ್ತೂ ಕಂಪೆನಿಗೆ ಅವಳನ್ನು ಕರೆದೊಯ್ಯಬಹುದು. ಹಾಗೇ ಆಕೆ ಜಾರುತ್ತ ಮುಂದರಿಯಲೂ ಬಹುದು.

ಹೀಗೆ ಯೋಚಿಸುತಿದ್ದಂತೆ ಅವನ ಮೈ ಉರಿಯುತಿತ್ತು. ಕಲ್ಯಾಣಿಯು ಶೂಟಿಂಗ್, ಕಂಪೆನಿ, ಗೆಳತಿಯರು ಎಂದುಕೊಂಡು ಕಂಪೆನಿ ಮನೆಯಲ್ಲೆ ಕಾಲ ಕಳೆಯುತ್ತಿರುವುದನ್ನು ಕಂಡು, ಎಂದೋ ಆತ ಪಟ್ಟ ಸಂದೇಹ ಬಲವಾಯಿತು. ಅದನ್ನು ಕುರಿತು ಯೋಚಿಸುತಿದ್ದಂತೆ "ಛೆ–ನನ್ನ ಕಲ್ಯಾಣಿ ಹಾಗಾಗಳು. ಇನ್ನೂ ಬಾಲಕಿ. ಜೀವನದ ಸುಖದುಃಖ ಅರಿಯದವಳು. ಹಸುಳೆಯ ಬುದ್ಧಿ ಮಾಯವಾಗದ ಹೆಣ್ಣು" ಎಂದೂ ಅವನು ಸಮಾಧಾನ ತಂದುಕೊಂಡು ಎಲ್ಲವನ್ನು ಮರೆತು ಬಿಡಲು ಯತ್ನಿಸುತಿದ್ದ. ಯಾವುದೋ ಹಾಡನ್ನು ಗೊಣಗುತ್ತ ಹಾಡಿನಲ್ಲೇ ತನ್ನ ಚಿತ್ತವನ್ನು ಕೇಂದ್ರೀಕರಿಸಲು ಯತ್ನಿಸುತಿದ್ದ. ನೆನಪು ಮಾಡಿದಾಗ ಮರವೆಯಾಗುತ್ತದೆ; ಮರೆಯಬೇಕೆಂದಾಗ ಪುನಃ ಪುನಃ ನೆನಪಿಗೆ ಬಂದು ಕಾಡುತ್ತದೆ; ಇದು ವಿಚಾರಗಳ ಆಟ. ಅದಕ್ಕೆ ಕೃಷ್ಣನೂ ಬಲಿಯಾಗುತಿದ್ದ. ಅವನ ಮುಂದೆ ಆ ನೆನಪಿನ ಜತೆಗೆ ಮತ್ತೂ ಹಲವಾರು ವಿಚಾರಗಳ ಬಲೆ ಮುತ್ತಿಕೊಂಡು, ಅದರಿಂದ ಬಿಡುಗಡೆ ಹೊಂದಲಾಗದೆ ಅವನು ಚಡಿಪಡಿಸುವಂತಾಗುತಿತ್ತು.

"ಕಲ್ಯಾಣಿ ನನ್ನನ್ನು ನಂಬಿ ಬಂದಿದ್ದಾಳೆ. ನಾನು ಅವಳ ಕೈ ಬಿಡಲಾರೆನೆಂಬ ಭಾವನೆಯಿಂದ ಸಿಂಹನವರೂ ಆವಳನ್ನು ಆಶೀರ್ವದಿಸಿ ಕಳುಹಿಸಿದ್ದಾರೆ. ಮಾಸ್ತರರೂ ಹಿಂತಿರುಗಿದಾಗ ದುಃಖಿಸಿ ಸೋತು, ನನ್ನನ್ನು ಶಪಿಸಿ ಆ ದುಃಖ, ರೋಷ ಆರಿದ ಬಳಿಕ, ಕೃಷ್ಣ ನನ್ನ ಕಲ್ಯಾಣಿಯನ್ನು ಕೈಬಿಡಲಾರ ಎಂಬ ನಂಬಿಕೆ ತಳೆಯಬಹುದು.

" ಇಂಥ ಪರಿಸ್ಥಿತಿಯಲ್ಲಿ ಅವಳನ್ನು ಬಿಡಲು ಸಾಧ್ಯವೆ? ಮಾಸ್ತರರಿಗೆ, ಸಿಂಹನವರಿಗೆ, ಸಮಾಜಕ್ಕೆ, ಕನ್ನಡನಾಡಿಗೆ ಏನು ಉತ್ತರ ಕೊಡಲಿ?

" ಮರೆಯಲಾಗದ ಕ್ಷಮೆಯಿಲ್ಲದ ಅಪಚಾರ ನನ್ನವರಿಗೆ ಮಾಡಿದ್ದೇನೆ. ಪಿತೃಶಾಪ ಕಟ್ಟಿಕೊಂಡಿದ್ದೇನೆ. ತಂದೆಯ ಮಾನಕ್ಕೂ ಕಳಂಕ ತಂದು ಎಂದೆಂದಿಗೂ ಹಟ್ಟೂರನ್ನೂ ನೋಡಲಾಗದ ಸ್ಥಿತಿಗೆ ಇಳಿಯಲೇ? ಭಾಗವತರ ಮಗ ಹಾಗೆ ಮಾಡಿದ, ಅವನನ್ನು ನಂಬಿ ನಡೆದ ಹೆಣ್ಣಿಗೆ ದ್ರೋಹ ಬಗೆದ, ಎಂದು ಲೋಕ ಆಡಲಾರದೇ?

" ಆದರೆ, ಅವಳೇ ನನ್ನ ಕೈ ಬಿಟ್ಟರೆ!

" ಅದು ನಿಜವಾದರೂ, ಸಮಾಜ ಗಂಡಸನ್ನೇ ಮೂದಲಿಸುತ್ತದೆ. ನಂಬಿ ಕೈಹಿಡಿದ ಹೆಣ್ಣನ್ನು ಸಲಹಲಾರದ ಹೇಡಿ ಎನ್ನುತ್ತದೆ. ಅವಳು ದಾರಿ ತಪ್ಪಲು ಆಸ್ಪದವಿತ್ತ ನಪುಂಸಕನೆಂದು ಮೂದಲಿಸುತ್ತದೆ.

" ಆ ಪರಿಸ್ಥಿತಿಗೆ ಆಸ್ಪದವೀಯಬಾರದು. ಅವಳಿಗೆ ವಿವೇಕ ಹೇಳಬೇಕು. ಅವಳನ್ನು ಸರಿದಾರಿಗೆ ತರಬೇಕು. ಸ್ವಾತಂತ್ರ್ಯವೆಂದು ತಿಳಿದಿರುವ ಅವಳ ಇಂದಿನ ಸ್ವಾತಂತ್ರ್ಯ ಸ್ವೇಚ್ಛೆಯಾಗುತ್ತಿದೆ. ಅದಕ್ಕೆ ತಡೆ ಹಾಕಬೇಕು.

" ತಾನೇ ತಾನಾಗಿ ಅದು ಕೊನೆಗೊಳ್ಳಬಹುದು. ಅವಳ ನೃತ್ಯ ಮುಗಿಯಿತೆಂದರೆ ಮತ್ತೆ.... ಮನೆಯಲ್ಲೇ ಇರುತ್ತಾಳೆ."

ತಿರುಗಿ ತಿರುಗಿ ಅದೇ ಕೇಂದ್ರಕ್ಕೆ ಬರುತ್ತಿದೆ ಅವನ ಯೋಚನಾಚಕ್ರ. ಆದರೂ ಸಮಸ್ಯೆ ಮಾತ್ರ ಬಗೆಹರಿಯಲಾರದಾಗಿದೆ; ಬೃಹದಾಕಾರವಾಗಿದೆ. ಯೋಚಿಸುತ್ತಲಿದ್ದಂತೆ ಅವನು ಅಸಹಾಯಕನಾಗಿ ತನ್ನ ಬೇಸರ ಮರೆಯಲು ತಂಬೂರಿಯನ್ನು ಕೈಗೆತ್ತಿಕೊಂಡು ಹಾಡಲು ತೊಡಗುತಿದ್ದ. ಹಾಡಿನಲ್ಲೇ ಲೀನವಾಗಿ ನಾದಸಮುದ್ರದಲ್ಲಿ ಅವನ ಮನ ತೇಲುತಿತ್ತು. ಭಾವನೆಯ ಆಕಾಶದಲ್ಲಿ ಅವನು ಹಾರುತಿದ್ದ. ಹಾಡು ಮುಗಿದಾಗ ಅವನು ದುಃಖ ಮರೆತು ಹೊಸ ಹುರುಪಿನಿಂದ ಉತ್ಸಾಹದಿಂದ ಸುಂದರನೊಡನೆ ತಾನೂ ಕೂಡಿಕೊಂಡು ಮನೆಗೆಲಸದಲ್ಲಿ ತೊಡಗುತಿದ್ದ. ಕಲ್ಯಾಣಿ ಬಂದಿದ್ದರೆ ಅವಳ ಜತೆಗೆ ಮಾತನಾಡುತ್ತ ಅವಳಿಗೆ ಹೇಳಬೇಕೆಂದು ಬಯಸಿದ ಮಾತು

ಗಳನ್ನು ಹೇಳಲಾರದೆ ಸುಮ್ಮನಾಗುತಿದ್ದ. ಕಲ್ಯಾಣಿಯೂ ಮನೆಗೆ ಬರುವಾಗಲೆಲ್ಲ ಯಾವುದಾದರೊಂದು ಕತೆಯನ್ನು ಕಟ್ಟಿ ತರುತಿದ್ದಳು.

ನಿತ್ಯ ತನ್ನ ಮನಸ್ಸಿನೊಡನೆ ಹೋರಾಡುತ್ತ ಕೃಷ್ಣರಾಯ ಕಾಲಕಳೆಯುತಿದ್ದ. ಹಾಗೇ ಭವಿಷ್ಯದ ಚಿಂತನೆಯಲ್ಲಿ ನಿರತನಾಗಿದ್ದ.

ನಿತ್ಯ ದಿನ ಕಳೆದುದೇ ತಿಳಿಯದಂತೆ ಕಲ್ಯಾಣಿ ಸಂತೋಷವಾಗಿದ್ದಳು.

ಅಂತೂ ಅವಳ ಚಿತ್ರವೆತ್ತುವ ದಿನ ಬಂತು.

ಇದೊಂದು ಮುಗಿಯಲಿ-ಆ ಬಳಿಕ ಮನಸ್ಸಿಗೆ ತಗಲಿದ ಸಂದೇಹದ ಭೀತಿಯ ಕಲ್ಮಷ ತೊಡೆಯುತ್ತೇನೆ ಎಂದು ಕೃಷ್ಣ ನಿರ್ಧರಿಸಿದ.

## ೧೩

" ಮೂಗಿದ್ದರೆ ಹೀಗಿರಬೇಕು. "

" ಹೇಗೆ...."

" ನಿಮ್ಮ ಮೂಗಿನ ಹಾಗೆ. ಕೆಲವು ಮೂಗುಗಳಿವೆ ಅವನ್ನು ತಿದ್ದಿ ತಿದ್ದಿ ತಲೆನೋವು ಬರುತ್ತದೆ. ಎಷ್ಟು 'ಶೇಡ್' ಕೊಟ್ಟರೂ ಸಾಕಾಗುವುದಿಲ್ಲ. ಕೆಲವರ ಮೂಗು ಉದ್ದ, ಕೆಲವರದು ಗಿಡ್ಡ, ಕೆಲವರದು ದಪ್ಪವಾಗಿ ಬದನೇಕಾಯಿಹಾಗಿರುತ್ತೆ. ಇನ್ನು ಕೆಲವರ ಮೂಗು ಕಡ್ಡಿಯ ಹಾಗಿದ್ದು ಕ್ಯಾಮರಾಕ್ಕೆ ಕಾಣಿಸುವುದೇ ಇಲ್ಲ. ಇವುಗಳಿಗೆ ಬೇಕಾದಹಾಗೆ ಕೆಂಪು-ಬಿಳಿ ಶೇಡ್ ಕೊಟ್ಟು ತಿದ್ದಬೇಕು. "

" ಹಾಗೆ 'ಶೇಡ್' ಕೊಟ್ಟರೆ ಸರಿಹೋಗುತ್ತೇನು ? "

" ಹೌದಮ್ಮ. ಎತ್ತರವಾದ ಹಣೆಯನ್ನು ತಗ್ಗಿದಂತೆ ತೋರಿಸಬಹುದು. ಇಳಿಬಿದ್ದ ಗಲ್ಲಗಳನ್ನು ತುಂಬಿದಂತೆ ತೋರಿಸಬಹುದು. "

" ಕರೀ ಇದ್ದವರಿಗೆ ಹೆಚ್ಚು ಬಣ್ಣ ಬೇಡವೇ ? "

" ಹ್ನೂ ಬೇಕಾಗುತ್ತೆ. ಅಷ್ಟೇನೂ ಹೆಚ್ಚಲ್ಲ. ಅದಕ್ಕಿಂತಲೂ ವಿಶೇಷವೆಂದರೆ ಕೆಲವರ ಮುಖದಲ್ಲಿ ಎಣ್ಣೆ ಒಸರುತ್ತವೆ. ಅಂತಹರಿಗೆ ಬಣ್ಣ ಹಾಕುವುದು ತುಂಬ ಕಷ್ಟ. "

ಸತ್ಯನಾರಾಯಣ ಮ್ಯಾಕ್ ಅಪ್ ಮಾಡುತ್ತ ಮಾತನಾಡುತ್ತಲೇ ಇದ್ದ. ಅವನಿಗೆ ಎಷ್ಟು ಮಾತನಾಡಿದರೂ ಸಾಲದು. ಕಲ್ಯಾಣಿಯ ಬಗೆಗೆ ಅವನೂ ಬಹಳವಾಗಿ ಕೇಳಿದ್ದ. ಮದ್ರಾಸ್‌ನಲ್ಲಿ ಪ್ರಗತಿ ಸ್ಟುಡಿಯೋದಲ್ಲಿ ಮ್ಯಾಕ್ ಅಪ್ ಅಸಿಸ್ಟಾಂಟ್ ಆಗಿ ನಾಲ್ಕಾರು ವರ್ಷ ಕೆಲಸಮಾಡಿದ್ದ ಆತ. ಕಲಾಮಂಡಲದ ಬಗೆಗೆ ಹೆಚ್ಚು ತಿಳಿದುಕೊಂಡಿದ್ದಾನೆ. ಕನ್ನಡ ನಾಡಿನ ಕಲಾ ಸಂಸ್ಥೆ ಎಂದು ಕನ್ನಡಿಗರೂ ಕೂಡಾ ತಮಿಳು ತೆಲುಗರಂತೆ ತೋರಿಸಿಕೊಳ್ಳುತ್ತಿರುವ ಮದ್ರಾಸಿನಲ್ಲಿ ಆತ ಹೆಮ್ಮೆ ಪಡುತ್ತಿದ್ದ. ಕನ್ನಡ ನಾಡಿನಲ್ಲೂ ಒಂದು ಉತ್ಕೃಷ್ಟ ಕಲಾಕೇಂದ್ರವಿದೆ, ಅದು ಇತರ ಯಾವ ಪ್ರಾಂತ್ಯಗಳ ಕಲಾಕೇಂದ್ರಗಳಿಗೂ ಕಡಿಮೆಯಿಲ್ಲ ಎಂದು ಅವನು ಹೆಮ್ಮೆಯಿಂದ ವಾದಿಸುತಿದ್ದ. ಕನ್ನಡನಾಡಿನಲ್ಲಿ ಮೊದಲಬಾರಿಗೆ ಒಂದು ಆಧುನಿಕ ಸ್ಟುಡಿಯೋ ಸಿದ್ಧವಾಗುತ್ತದೆ ಎಂದು ಕೇಳಿಬಂದಾಗ ಅವನು ಮೈಸೂರಿನ ಕಡೆ ತನ್ನ ದೃಷ್ಟಿ ಹರಿಯಿಸಿದ. ಮದ್ರಾಸಿನಲ್ಲಿ ಅವನ ಭವಿಷ್ಯ ಉತ್ತಮವಾಗುವ ಸಂದರ್ಭವಿದ್ದರೂ ಮೈಸೂರಿಗೆ ಅರ್ಜಿ ಬರೆದ. ಹಾಗೇ ಮ್ಯಾಕ್ ಅಪ್ ಮ್ಯಾನ್ ಆಗಿ ಕೆಲಸಕ್ಕೂ ಸೇರಿಕೊಂಡ.

ಚಿತ್ರ ಪ್ರಪಂಚದ ಸಾವಿರ ಕತೆಗಳನ್ನೂ ಪವಾದಗಳನ್ನೂ ಬಲ್ಲ ಸತ್ಯನಾರಾಯಣ, ಹೊಸಬರಿಗೆಲ್ಲ ಆ ಬಗೆಗೆ ಹೇಳಿ ಎಚ್ಚರಿಕೆ ನೀಡುತಿದ್ದ. ಈ ಪ್ರಪಂಚದ ಗೋಮುಖ ವ್ಯಾಘ್ರಗಳು, ಹಾವುಗಳು, ಕೋಡಗಗಳು ಮುಂತಾದ ಸಕಲ ಪ್ರಾಣಿಗಳ ಬಗೆಗೆ ತಿಳಿಸಿ ಇದೊಂದು ಪ್ರಾಣಿಸಂಗ್ರಹಾಲಯ. ಇಲ್ಲಿ ಯಾವ ಪ್ರಾಣಿಗೂ ಗೂಡೇ ಇಲ್ಲ; ಕಟ್ಟೂ ಇಲ್ಲ. ಇಲ್ಲಿ ಎಚ್ಚರಿಕೆಯಿಂದಿರಬೇಕೆಂದು ಸೂಚಿಸುತಿದ್ದ. ಅವನ ಸೂಚನೆ ಎಚ್ಚರಿಕೆ ಹಿತೋಪದೇಶಗಳನ್ನು ಕೇಳಿದವರು ನೂರಾರು ಮಂದಿ. ಮ್ಯಾಕ್‌ಅಪ್ ಮಾಡಿಸಿಕೊಳ್ಳಲು ಕುಳಿತವರು ಅವನ ಈ ಹರಿಕತೆ ಕೇಳದೆ ಉಪಾಯವಿಲ್ಲ. ಅವನೂ ತನ್ನ ಕೈ ಕಣ್ಣುಗಳು ಕುಳಿತವಳ ಮುಖದ ಸೌಂದರ್ಯ ಹೆಚ್ಚಿಸಲು ದುಡಿಯುತಿದ್ದಾಗ ಬಾಯಿ ಸುಮ್ಮನಿರಬಾರದೆಂದು ಕತೆಗಳನ್ನು ಹೇಳುತ್ತಲೇ ಇದ್ದ. ಆದರೆ, ಆತ ಹೇಳಿದುದನ್ನು ನಂಬಿ, ಎಚ್ಚರಿಕೆ ವಹಿಸಿ, ತಮ್ಮ ಬಾಳು ಹಸನು ಮಾಡಿಕೊಂಡವರು ಒಬ್ಬರೋ ಇಬ್ಬರೋ. ಇತರರೆಲ್ಲ ಅವನ ಉಪದೇಶವನ್ನು ರಂಗಸಜ್ಜಿಕೆ ಬಿಟ್ಟು ಹೊರಹೊರಟಾಗಲೇ

ಮರೆತವರು. ಅವರಲ್ಲಿ ಕೆಲವರು ಮರೆತುದರ ಫಲ ಅನುಭವಿಸಿದಾಗಲಾದರೂ ಅವನನ್ನು ಜ್ಞಾಪಿಸಿಕೊಂಡಿದ್ದಾರೆ.

ಕಲ್ಯಾಣಿಯನ್ನು ಮೊದಲಬಾರಿಗೆ ಕಂಡಾಗಲೇ ಅವಳಿಗೆ ಎಚ್ಚರಿಕೆ ನೀಡಬೇಕೆಂದು ಅವನ ಮನಸ್ಸು ಕೂಗಿ ಹೇಳಿತು. ಇಂಥ ಕಲಾವಿದೆ, ಸುಂದರಿ, ತರುಣಿ, ಈ ಖಾಸ್‌ಬಂಗ್ಲೆಯಲ್ಲಿ ಯಾವ ಅವಘಡಕ್ಕೂ ತುತ್ತಾಗದೆ ಬಾಳುವುದು ಕಷ್ಟ ಎಂದು ಅವನಿಗೆ ಅನಿಸಿತು. ಈಗಲೇ ಎಚ್ಚರಿಕೆ ನೀಡಬೇಕು. ಇವರ ಈ ಅಮರ ಪ್ರೇಮದ ಬಾಳು ಹಾಳಾಗಲು ಎಡೆಯಾಗಬಾರದು. ಕೃಷ್ಣರಾಯನೂ ಶ್ರೇಷ್ಠ ಕಲಾವಿದ. ಕಲಾವಿದ ತಂತ್ರ ಕುತಂತ್ರಗಳ ಹೋರಾಟದಲ್ಲಿ ಭಾಗಿಯಾಗುವುದಿಲ್ಲ, ವಿಜಯಿಯಾಗುವುದೂ ಇಲ್ಲ. ಅವನದು ಎಲ್ಲವೂ ತನ್ನದೇ ತಪ್ಪು ಎಂದು ಮನದೊಳಗೇ ಕೊರಗುವ ರೀತಿ. ಅಲ್ಪ ವಿದ್ಯಾ ಪಂಡಿತರಂತೆ ತನ್ನ ವಿದ್ಯೆಯ ಬಗೆಗೆ ಡಂಗುರ ಸಾರಿ, ಅದನ್ನೇ ಮೇಲೆಂದು ಹೊಗಳಿಕೊಂಡು, ಅದರಿಂದಲೇ ಮಹಾ ಪಂಡಿತನೆಂದು ತೋರಿ ಮೆರೆದು ನಿಲ್ಲುವ ನೀತಿಯಾಗಲೀ; ಇತರ ನೈಜ ಕಲಾವಿದರನ್ನು ಮೆಟ್ಟಿ ನಿಲ್ಲುವುದೇ ಧ್ಯೇಯವೆಂದು ತಿಳಿದ ಮನೋಧರ್ಮವಾಗಲೀ ಇರುವುದಿಲ್ಲ. ಕೃಷ್ಣರಾಯನೂ ಕಲ್ಯಾಣಿಯೂ ಇಂಥ ಸಾತ್ವಿಕ ಮನೋಭಾವದವರು. ಇದಿರಾಳಿ ಇದಿರಾದಾಗ ತಮ್ಮ ಪ್ರೌಢಿಮೆಯಿಂದ ಗೆಲುವ ಯತ್ನ ಮಾಡುತ್ತಾರೆ, ಕುತಂತ್ರದಿಂದಲ್ಲ. ಅವಹೇಳನಕ್ಕೆ ಪ್ರತಿಯಾಗಿ ಅವಹೇಳನದ ಅಸ್ತ್ರ ಬೀರಲಾರರು, ಮೌನತಳೆದಾರು. ಇಂಥ ಅಂತರ್ಮುಖಿಗಳನ್ನು ರಕ್ಷಿಸಿ ಚಿತ್ರ ಸಂಸ್ಥೆಯಲ್ಲೂ ಕಲೆಗೆ, ನೀತಿಗೆ ಎಡೆ ಇದೆ ಎಂದು ತೋರಿಕೊಡಬೇಕು. ಅಲ್ಲೂ ವಿವೇಕಿಗಳೂ, ಯೋಗ್ಯರೂ, ನೀತಿವಂತರೂ, ಬುದ್ಧಿಶಾಲಿಗಳೂ ಬಾಳುವುದು ಸಾಧ್ಯವಿದೆ ಎಂದು ಸಾರಬೇಕು. ಎಂದು ಸತ್ಯನಾರಾಯಣ ನಿರ್ಧರಿಸಿದ್ದ. ಆ ಉಪದೇಶಕ್ಕೆ ಇಂದು ಆವನಿಗೆ ಕೊಂಚ ಎಡೆದೊರೆಯಿತು.

ಕಲ್ಯಾಣಿಗೆ ಅಲಂಕಾರ ಮಾಡುತಿದ್ದಂತೆ ಸತ್ಯನಾರಾಯಣ ಚಿತ್ರರಂಗದ ಅನೇಕ ಕತೆಗಳನ್ನು ವಿವರಿಸಿದ. ಸ್ಟುಡಿಯೋ ಸಿದ್ಧವಾದ ರೀತಿ, ಇಲ್ಲಿರುವ ಪಾಲುಗಾರರು, ಧನವಂತರುಗಳ ಈರ್ಷ್ಯೆಗಳ ಬಗೆಗೆ ಹೇಳಿದ. ಮದ್ರಾಸಿನಲ್ಲಿ ಹೇಗೆ ನೀತಿಯು ಅಧಃಪತನವಾಗುತ್ತಲಿದೆ ಎಂದು ಹೇಳುತ್ತ,

ಸ್ಟುಡಿಯೋಗಳಲ್ಲೂ ತಯಾರಿಕಾ ಕಂಪೆನಿಗಳಲ್ಲೂ ಇದೊಂದು ಇರಲೇಬೇಕಾದ ರೋಗವಾಗಿದೆ ಎಂದು ಹೇಳಿ, ಮೈಸೂರಿನಲ್ಲೂ ಇದಿದೆ ಎಂಬರ್ಥ ಬರುವಂತೆ ಮಾತನಾಡಿದ. ಅವನು ಮುಖಕ್ಕೆ ಬಣ್ಣ ಬಳಿದಾಯಿತು, ಹುಬ್ಬುಗಳನ್ನು ತಿದ್ದಿದ, ತುಟಿಗೆ ಕೆಂಪು ಬಳಿದ, ಹಣೆಗೆ ಸ್ವಸ್ತಿಕದ ತಿಲಕವಿಟ್ಟು, ಗಲ್ಲದ ಕೆನ್ನೆಯ ಮೇಲೆ ನರ್ತಕಿಯ ಅಲಂಕಾರವಾಗಿ ಬಿಳಿಯ ಚುಕ್ಕಿ ಬರೆದ. ಕೈಗಳಿಗೂ ಬಣ್ಣ ಬಳಿದಾಯಿತು; ಅಂಗೈಗೆ, ಉಗುರುಗಳಿಗೆ ಕೆಂಪು ಅಂಟಿಸಿದ. ಕಾಲಿಗೂ ಬಣ್ಣ ಸವರಿಕೊಳ್ಳಲು ಹೇಳಿದ. ಕಲ್ಯಾಣಿಯು ಈ ಭಾಗದ ಕೆಲಸ ಮುಗಿದು, ಆಭರಣ ಧರಿಸಿ, ಉಡಿಗೆ ಉಡಲು ಅವಳು ಪಕ್ಕದ ಕೋಣೆಗೆ ಹೋದಳು.

ಸತ್ಯನಾರಾಯಣ ಇತರ ಹುಡುಗಿಯರನ್ನು ಕರೆದು ಮ್ಯಾಕಪ್ ಆರಂಭಿಸಿದ. ಕಲ್ಯಾಣಿ ಒಂದು ತಾಸು ಅವನ ಕೈಗೆ ಮುಖವಿತ್ತು ಕನ್ನಡಿಯ ಮುಂದೆ ಕುಳಿತುಕೊಳ್ಳಬೇಕಾಯಿತು. ಇತರರ ಮ್ಯಾಕಪ್ ಅತಿ ಚುರಕಿನಿಂದ ಸಾಗಿತು. ಹತ್ತು ನಿಮಿಷಕ್ಕೊಬ್ಬರಂತೆ ಸಿದ್ಧಪಡಿಸಿ ಅವನು ಕಳುಹಿಸುತಿದ್ದ. ಇನ್ನೊಂದು ಕೋಣೆಯಲ್ಲಿ ಅವನ ಜತೆಗಾರ ಗಂಡುಸರಿಗೆ ಬಣ್ಣ ಬಳಿಯುವುದರಲ್ಲಿ ನಿರತನಾಗಿದ್ದ. ಮತ್ತೊಬ್ಬ ಅವನಿಗೆ ಸಹಾಯಕವಾಗಿದ್ದ.

ಕಲ್ಯಾಣಿ ಭರತನಾಟ್ಯದ ಉಡಿಗೆ ಧರಿಸಿಕೊಂಡಳು. ಕಿವಿಗೆ ಓಲೆ, ತಲೆಗೆ ಮುಂದಲೆ ಬೊಟ್ಟು, ಜಡೆಬಿಲ್ಲೆ, ಕೈಗೆ ಉಂಗುರಗಳು, ಕತ್ತಿಗೆ ಹಾರ, ಪದಕ, ಸೊಂಟಕ್ಕೆ ಪಟ್ಟಿ ಎಲ್ಲವನ್ನು ತೊಟ್ಟುಕೊಂಡಳು. ಕನ್ನಡಿಯ ಮುಂದುಗಡೆ ನಿಂತು ತನ್ನನ್ನೇ ತಾನು ನೋಡಿಕೊಂಡಳು. ತಾನು ಎಷ್ಟು ಸುಂದರಿಯಾಗಿದ್ದೇನೆ, ಎಂಥ ಅದ್ಭುತ ಬದಲಾವಣೆ ಹೊಂದಿದ್ದೇನೆ ಎಂದು ಆವಳಿಗೇ ಒಮ್ಮೆ ಅನಿಸಿತು. ಕೈಯಲ್ಲಿ ಗೆಜ್ಜೆ ಹಿಡಿದುಕೊಂಡು ಸತ್ಯನಾರಾಯಣನಿದ್ದಲ್ಲಿಗೆ ಬಂದಳು.

" ಎಲ್ಲಾ ಸರಿಯಾಗಿದೆಯೋ ಸಾರ್ ? "

ಅವನು ತಿರುಗಿ ನೋಡಿದ. ಹಾಗೇ ಎರಡು ಸೇಫ್ಟಿಪಿನ್‌ಗಳನ್ನೆತ್ತಿ, ಆವಳೆಡೆ ಬಂದು ಸೆರಗಿಗೆ ಅವುಗಳನ್ನು ಚುಚ್ಚಿ, ನರ್ತಿಸಿದಾಗ ಅವು ಜಾರದಂತೆ ಹೊಂದಿಸಿದ. ಮುಂದಲೆ ಬೊಟ್ಟನ್ನು ಸರಿಪಡಿಸಿ ನಿಲ್ಲಿಸಿದ.

" ಪೀಠಕ ಕರಣದಲ್ಲೊಮ್ಮೆ ನಿಲ್ಲಮ್ಮ."

" ಅದೇನು ಸಾರ್ ಹಾಗೆಂದರೆ-" ಎಂದು ಅಲ್ಲೇ ಕುಳಿತಿದ್ದ ಹುಡುಗಿಯರು ಪ್ರಶ್ನಿಸಿದರು.

" ನಿಮಗೇ ತಿಳಿಯುತ್ತೆ. ಈಗ ಆಕೆ ನಿಂತಿರುವ 'ಪೋಸ್' " ಎಂದು ಧರಿಸಿದ ಸೀರೆ ಸರಿಯಾಗಿದೆಯೇ ಎಂದು ನೋಡಿ, ಅದರ ನೆರಿಗೆ ತಿದ್ದಿ, ಅದಕ್ಕೊ ಒಂದೆರಡು ಪಿನ್‌ಗಳನ್ನು ಚುಚ್ಚಿದ.

" ಎಲ್ಲವೂ ಸರಿಯಾಗಿದೆ. ನಿನ್ನ ಗುರುಗಳನ್ನು ನೆನೆದು, ದೇವರಿಗೆ ವಂದಿಸಿ, ಗೆಜ್ಜೆ ಕಟ್ಟಿಕೊಂಡು, ಒಂದು ಕಡೆ ಕುಳಿತುಕೊಳ್ಳಮ್ಮ. ಡೈರೆಕ್ಟರ್ ಹೇಳಿಕಳುಹಿಸಿದ ಮೇಲೆ 'ಸ್ಟೇಜ್' ಗೆ ಹೋದರಾಯಿತು."

ಸುಂದರ ರಂಗಸಜ್ಜಿಕೆಗೆ ಬಂದು ಕಲ್ಯಾಣಿಯನ್ನು ಕರೆದ. ಅವನ ಕತ್ತಿನಲ್ಲಿ ಥರ್ಮಸ್‌ಫ್ಲಾಸ್ಕ್ ತೂಗಾಡುತಿತ್ತು. ಕೈಯಲ್ಲಿ ಗೆಜ್ಜೆ ಹಿಡಿದುಕೊಂಡೇ ಕಲ್ಯಾಣಿ ಹೊರಗೆ ನಡೆದಳು.

ಜಗಲಿಯಲ್ಲೇ ಕೃಷ್ಣ ಅವಳಿಗಾಗಿ ಕಾದಿದ್ದ. ಇಬ್ಬರೂ ಹಜಾರದ ಮೇಲೆ ಕುಳಿತುಕೊಂಡರು.

" ತುಂಬ ಚೆನ್ನಾಗಿದೆ ಮ್ಯಾಕ್ ಅಪ್. ಕೊಂಚ ಕಾಫಿ ಕುಡಿಯುತ್ತೀಯಾ ?"

" ಈಗ ಬೇಡ-ನೀವು ಕುಡಿಯಿರಿ."

" ಆಗಲೇ ಅವಸರವೇನು. ಬಾ. 'ಸೆಟ್' ಗೆ ಹೋಗಿ ನೋಡಿ ಬರೋಣ."

ಇಬ್ಬರೂ 'ಸೆಟ್' ಕಡೆಗೆ ನಡೆದರು.

ಆಸ್ಥಾನ ಸಿದ್ಧವಾಗಿತ್ತು. 'ಸೆಟ್' ನ ಒಂದು ಕೊನೆಯನ್ನು ವಿವಿಧ ಚಿತ್ರಗಳಿಂದ, ಮೂರ್ತಿಗಳಿಂದ ಅಲಂಕರಿಸಿದ್ದರು. ಸಿಂಹಾಸನ ರಾರಾಜಿಸುತಿತ್ತು. ಅದರ ಮಗ್ಗುಲಿಗೆ ಇಕ್ಕಡೆಗೆ ಎರಡು ಸಾಲಾಗಿ ಬೇರೆ ಆಸನಗಳೂ ಇದ್ದುವು. ಮುಂದೆ ನೆಲದ ಮೇಲೆ ಕನ್ನಡಿಯಂತೆ ಹೊಳೆಯುವ ಮಯಣದ ಬಟ್ಟೆ ಹಾಸಿದ್ದರು. ಅದರ ಮೇಲೆ ಕಲ್ಯಾಣಿ ನರ್ತಿಸಬೇಕು. ಅದರಲ್ಲಿ ನರ್ತಕಿಯ ನೆರಳು ಕಾಣುವಂತೆ ಮಾಡಬೇಕು, ಅದರ ಚಿತ್ರವೆತ್ತ

ಬೇಕೆಂದು ಕ್ಯಾಮರಾ ಮ್ಯಾನ್ ಕಲಾವಿದನೊಬ್ಬನನ್ನು ನಿಲ್ಲಿಸಿ ದೀಪದ ವ್ಯವಸ್ಥೆ ಮಾಡುತಿದ್ದ,

ಆಸ್ಥಾನದ ಗೋಡೆಗಳೆಂದು ನಿಲ್ಲಿಸಲಾದ ಪರದೆಯ ಗೋಡೆಗಳ ಮೇಲೆ ನಿಂತು ದೀಪದ ಹುಡುಗರು ದೀಪಗಳನ್ನು ಹೊಂದಿಸುತಿದ್ದರು. ಆ ದೀಪಗಳ ಮೇಲೆ ನಂಬರ್ ಬರೆದಿದ್ದಾರೆ. ಕೆಲವು ದೊಡ್ಡವು, ಕೆಲವು ಚಿಕ್ಕವು. ಸಿಂಹಾಸನದ ಇದಿರಿಗೆ ಸರಿಯಾಗಿ ನೆಲದಮೇಲೆ ರೈಲು ಕಂಬಿಯಂತೆ ಮರದ ಕಂಬಿಗಳನ್ನು ಜೋಡಿಸಿ, ಅದರ ಮೇಲೊಂದು ಟ್ರಾಲಿ ಇರಿಸಿದ್ದಾರೆ. ಆ ಟ್ರಾಲಿಯ ಮೇಲೆ ಕ್ಯಾಮರಾ ಇದೆ. ನರ್ತಕಿ ನಿಲ್ಲಬಹುದೆನ್ನಲಾದ ಎಡೆಯಲ್ಲಿ ನಿಂತವನ ಮೇಲೆ ದೀಪಗಳ ಬೆಳಕು ಬಿಟ್ಟು, ಕ್ಯಾಮರಾಮೆನ್ ಕ್ಯಾಮರಾದೊಳಗೆ ಇಣುಕುತಿದ್ದ.

ಕಲ್ಯಾಣಿ ಸ್ಟೇಜಿನೊಳಕ್ಕೆ ಬಂದೊಡನೆಯೇ ಎಲ್ಲರೂ ಅವಳ ಕಡೆಗೆ ತಿರುಗಿ ನೋಡಿದರು. ಕ್ಯಾಮರಾ ಮೇನ್ ಮುಗುಳುನಗೆ ನಕ್ಕ. "ಬನ್ನಿ ಕಲ್ಯಾಣಿ. ನೃತ್ಯಕ್ಕೆ ತಕ್ಕಹಾಗೆ ಇದೆಯೋ ನೋಡಿಕೊಳ್ಳಿ" ಎಂದು ಆಹ್ವಾನಿಸಿದ.

ದೀಪದ ಹುಡುಗರು ದೀಪದ ಕಡೆಗೆ ಗಮನಕೊಡುವುದನ್ನು ಮರೆತು ಅವಳ ಕಡೆ ನೋಡಿದರು.

ಕುರ್ಚಿಗಳನ್ನೂ ಇತರ ಸಾಮಾಗ್ರಿಗಳನ್ನೂ ವ್ಯವಸ್ಥೆಗೊಳಿಸುವ ಕೂಲಿಗಳು ತಮ್ಮ ಕೆಲಸ ನಿಲ್ಲಿಸಿದರು.

ನಡುವಿನಲ್ಲಿ ನಿಂತಿದ್ದ ಕಲಾವಿದ ಬದಿಗೆ ಸರಿದ. ಕಲ್ಯಾಣಿ ಅಲ್ಲಿ ನಡೆದು, ನಾಲ್ಕು ಹೆಜ್ಜೆ ಅತ್ತ-ಇತ್ತ ಸರಿದು ಪರೀಕ್ಷಿಸಿದಳು.

ಅವಳು ಮಧ್ಯದಲ್ಲಿ ನಿಂತಳು.

ಟ್ರಾಲಿ, ಕ್ಯಾಮರಾ, ಕ್ಯಾಮರಾ ಮ್ಯಾನ್ ಸಹಿತವಾಗಿ ಒಮ್ಮೆ ಅತೀ ಹಿಂದಕ್ಕೆ ಚಲಿಸಿ ನಿಧಾನವಾಗಿ ಕಲ್ಯಾಣಿ ಇದ್ದೆಡೆಗೆ ಬಂತು. ಕ್ಯಾಮರಾ ಮ್ಯಾನ್ ಕ್ಯಾಮರಾದೊಳಗಿಂದ ಇಣಿಕಿ ಅವಳನ್ನು ನೋಡುತಿದ್ದ.

"ಸ್ವಲ್ಪ ಚಲನೆ ತೋರಿಸಿ. ನೀವು ಎಷ್ಟು ಸ್ಥಳ ಆಕ್ರಮಿಸುತ್ತೀರಿ ನೋಡೋಣ. ರಾವ್‌ಜೀ, ನೀವು ಇತ್ತ ಬನ್ನಿ" ಎಂದು ಕ್ಯಾಮರಾ ಮ್ಯಾನ್ ಮಾಣಿಕ್ಯಂ ಕೃಷ್ಣನನ್ನು ಟ್ರಾಲಿಯನ್ನೇರುವಂತೆ ಕರೆದು, ಕ್ಯಾಮರ್‍ಾ

ದಲ್ಲಿ ಕಾಣುವ ದೃಶ್ಯವನ್ನು ನೋಡುವಂತೆ ಹೇಳಿದ. ಕ್ಯಾಮರಾ ಕಲ್ಯಾಣಿಯ ಕ್ಲೋಸ್ ಅಪ್ ತೋರಿಸಿತು, ಹಿಂದೆ ನಡೆದಂತೆ ಅವಳ ದೇಹ ಕಂಡು ಬಂತು, ಅವಳು ಹೇಗೆ ಚಲಿಸಿದರೂ ಕ್ಯಾಮರಾ ಅವಳ ಚಿತ್ರ ಹಿಡಿಯುವುದು ಸಾಧ್ಯವೆಂದು ತೋರಿಬಂತು.

ಸೌಂಡ್ ರೆಕಾರ್ಡಿಸ್ಟ್ ಚಂದ್ರಶೇಖರ್ ಕೇಬಲ್ ತಂತಿಗಳನ್ನು ಅಣಿಗೊಳಿಸಿದ. ಬೂಮ್ ಸಿದ್ಧವಾಗಿ ನಿಂತಿತು. ಹಾಗೇ ಮೆಗಫೋ಼ನ್ ವ್ಯವಸ್ಥೆಗೊಳಿಸಿದ. ಮಾಣಿಕ್ಯಂ ಸಲಹೆ ಪಡೆದು, ಮೆಗಫೋ಼ನ್ ಒಂದು ಮೂಲೆಯಲ್ಲಿರಿಸಿ ಸೌಂಡ್‌ವ್ಯಾನ್ ಕಡೆ ನಡೆದ.

ಡೈರೆಕ್ಟರ್ ಸಾಮಿ ಬಂದು ಎಲ್ಲವನ್ನೂ ವೀಕ್ಷಿಸಿದ. ಕಲ್ಯಾಣಿ ಮತ್ತು ಕೃಷ್ಣರಾವ್ ಅವರನ್ನು ವಂದಿಸಿದರು. ತಾನೇ ಸೆಟ್ ಕಡೆಗೆ ನಡೆದು ಕುರ್ಚಿಗಳನ್ನು ಬೇಕಾದಂತೆ ಅಣಿಗೊಳಿಸಿದ.

"ಸ್ವಲ್ಪ ವಿಶ್ರಮಿಸಿ. ನಿಮ್ಮ ನೃತ್ಯವನ್ನೇ ಮೊದಲು ಎತ್ತಿಬಿಡುತ್ತೇನೆ. ಆ ಮೇಲೆ ಇತರ ದೃಶ್ಯಗಳು."

ಸಾಮಿ ಮಾಣಿಕ್ಯಂನೊಡನೆ ಮಾತನಾಡಿ, ತಾನೂ ಟ್ರಾಲಿಯನ್ನೇರಿ ಕ್ಯಾಮರಾದೊಳಗಿಂದ ಇಣಿಕಿ ವೀಕ್ಷಿಸಿದ. ಯಾವ ಯಾವ ಕಡೆ ಕ್ಯಾಮರಾ ನಿಲ್ಲಬೇಕು, ಯಾವ ಏಂಗ್ಲ್ (ಕೋನ) ಗಳಿಂದ ಚಿತ್ರವೆತ್ತಬೇಕು ಎಂಬುದನ್ನೆಲ್ಲ ವಿವರಿಸಿದ.

ಮಾಣಿಕ್ಯಂ ಸಾಮಿ ಸೂಚಿಸಿದಲ್ಲಿ ಕುಳಿತುಕೊಂಡು ವ್ಯೂ ಫೈಂಡರ್ ಮೂಲಕ ನೋಡಿದ. ಹಾಗೇ ಒಂದು ಟೇಬಲ್ ಮೇಲೆ ನಿಂತುಕೊಂಡು ಮತ್ತೊಂದೆಡೆಯಿಂದ ವೀಕ್ಷಿಸಿದ.

ಸ್ಟುಡಿಯೋದ ಪ್ರೊಡಕ್ಷನ್ ಮ್ಯಾನೇಜರ್ ಆನಂದರಾವ್ ಡೈರೆಕ್ಟರನ್ನು ಕಂಡು ಸಲಹೆಪಡೆದು, ತಲೆಯಾಡಿಸಿ, ಹೊರಟುಹೋದ.

ಗಂಟೆ ಒಂಭತ್ತೂವರೆ ಕಳೆದಿದೆ.

"ದೊರೆ...." ಸಾಮಿ ಅಸಿಸ್ಟೆಂಟ್ ಡೈರೆಕ್ಟರನ್ನು ಕರೆದ. ದೊರೆ ಓಡಿಯೋಡಿ ಬಂದ.

"ಮ್ಯಾಕ್ ಅಪ್ ಆಯಿತೇ ನೋಡು. ಶಾಸ್ತ್ರಿಗಳು ಬಂದರೇ? ಎಲ್ಲಿಯು ಜಮಾನರು? ಹೊತ್ತಾಯಿತು."

" ಯಜಮಾನರು ಇನ್ನೂ ಬಂದಿಲ್ಲ. ಶಾಸ್ತ್ರಿಗಳು ಹೊರಗಡೆ ಕುಳಿತಿದ್ದಾರೆ. "

" ಆರ್ಟಿಸ್ಟ್...."

" ಡ್ಯಾನ್ಸರ್ ಇಲ್ಲೇ ಇದ್ದಾರೆ. "

" ಗೊತ್ತು. ಇತರರು....ಹರಿಯಪ್..."

ದೊರೆ ಕಂಕುಳಲ್ಲಿ 'ಕಂಟಿನ್ಯುಟಿ' ಪುಸ್ತಕ ಹಿಡಿದುಕೊಂಡು ಹೊರಗೆ ಧಾವಿಸಿದ.

" ದೊರೆ "

" ಯುಸ್ ಸಾರ್...." ಆತ ಹಿಂದೆ ಓಡಿಬಂದ.

" ಹಾಗೆ ಶೇಕರ್‌ಗೆ ಹೇಳಿ ಪ್ಲೇಬ್ಯಾಕ್ ಹಾಕಲಿ "

ಸ್ವಾಮಿ ಕಲ್ಯಾಣಿಯ ಕಡೆಗೆ ನಡೆದ.

" ಈಗ ನೃತ್ಯದ ಶ್ಲೋಕವಾಗುತ್ತೆ. ನೀವು ಒಮ್ಮೆ ಪೂರ್ಣ ಕೇಳಿಕೊಳ್ಳಿ. ಆಬಳಿಕ ಇನ್ನೂ ಎರಡು ಮೂರು ಬಾರಿ ಹಾಡಿಸುತ್ತೇನೆ. ಎಲ್ಲೆಲ್ಲಿ ನಿಲ್ಲಿಸುತ್ತೇನೆ ಅನ್ನೋದನ್ನ ಕೂಡಾ ಹೇಳುತ್ತೇನೆ. "

" ಆಗಲಿ ಸಾರ್ " ಎಂದು ಕಲ್ಯಾಣಿ ಗೆಜ್ಜೆಕಟ್ಟಿಕೊಳ್ಳಲು ಬಾಗಿದಳು.

" ಈಗ ಬೇಕಾಗಿಲ್ಲ. ಆ ಮೇಲೆ–ಚಿತ್ರವೆತ್ತುವಾಗ ಕಟ್ಟಿಕೊಂಡರೂ ಸಾಕು. ನಿಮಗೆ ಅಗತ್ಯವೆಂದಾದರೆ ಮಾತ್ರ ಕಟ್ಟಿಕೊಳ್ಳಿ. "

ನೃತ್ಯದ ಹಿನ್ನೆಲೆ ಗೀತದ ಸದ್ದು ಮೆಗಫೋನಿಂದ ಕೇಳಿಬಂತು.

ಕೃಷ್ಣನೇ ಹಾಡಿದುದು, ಗೆಜ್ಜೆಯ ಸದ್ದೂ ಅವಳು ಹಾಕಿದಂತೆಯೇ ಕೇಳಿಸುತ್ತಿದೆ. ತಾಳ....ಲಯ....ಎಲ್ಲವೂ ವಿರಳವಾಗಿ ವಿವರವಾಗಿ ಕೇಳುತ್ತಿವೆ!

ದೊರೆ ಬಂದು ಆರ್ಟಿಸ್ಟ್ ಸಿದ್ಧವಾಗಿದ್ದಾರೆ, ಬರುತಿದ್ದಾರೆ ಎಂದು ತಿಳಿಸಿದ.

ಸ್ಟೇಜ್ ಮೇಲೆ ಕಲ್ಯಾಣಿ ನಿಂತು ಹಿನ್ನೆಲೆಯ ಗೀತಕ್ಕೆ ಅನುಗುಣವಾಗಿ ನರ್ತಿಸಿದಳು.

ಡೈರೆಕ್ಟರ್ ಮತ್ತು ಕ್ಯಾಮರಾಮೆನ್ ಅದನ್ನು ವೀಕ್ಷಿಸಿದರು.

ಕಲಾವಿದರೆಲ್ಲ ಸೆಟ್‌ಗೆ ಬಂದರು. ಶಾಸ್ತ್ರಿಗಳೂ, ಶ್ರೀಕಂಠಪ್ಪನೂ ಬಂದು ಒಂದೆಡೆ ಕುಳಿತರು; ರಾಜು ಆತುರದಿಂದ ಮುಂದೆ ಬಂದು, ನಿಂತುಕೊಂಡ. ರುದ್ರಪ್ಪ ಮತ್ತು ನಾರಣಪ್ಪ ಅಲ್ಲೇ ಇದ್ದ ಸೋಫಾ ಅಲಂಕರಿಸಿದರು.

ಡೈರೆಕ್ಟರ್ ಅವರನ್ನೆಲ್ಲ ಅವರವರ ಸ್ಥಾನದಲ್ಲಿ ಕುಳ್ಳಿರಿಸಿ ಆಸ್ಥಾನಕ್ಕೆ ಜೀವಕಳೆ ತುಂಬಿದರು. ದಾಸಿಯರಿಬ್ಬರು ಅರಸನ ಮಗ್ಗುಲಿಗೆ ಚಾಮರ ಹಿಡಿದು ನಿಂತರು. ಅರಸ ಸಿಂಹಾಸನವನ್ನೇರಿದ. ಸ್ಟುಡಿಯೋ ಕೂಲಿ ಓಡಿ ಬಂದು, ಕಲ್ಯಾಣಿ ನರ್ತಿಸಲೆಂದು ಹಾಸಿದ್ದ ಮಯಣದ ಬಟ್ಟೆಯನ್ನು ಒರಸಿ ಧೂಳು ತೆಗೆದ.

" ರಡೀ...."

" ಆಲ್ ಲೈಟ್ಸ್."

ಸೆಟ್ ಮೇಲಕ್ಕೆ ಇದ್ದ ದೀಪಗಳು, ಸಭಾಂಗಣದಲ್ಲಿ ಕುಳಿತಿದ್ದ ಕಲಾವಿದರ ಹಿಂದೆ ನಿಲ್ಲಿಸಲಾಗಿದ್ದವೂ, ಉರಿದುಕೊಂಡವು.

ಮಾಣಿಕ್ಯಂ ಕ್ಯಾಮರಾದೊಳಗಿನಿಂದ ಇಣಿಕಿ, ಟ್ರಾಲಿಯಿಂದಿಳಿದ. ಮೀಟರನ್ನು ಪ್ರತಿಯೊಬ್ಬ ಕಲಾವಿದನ ಮುಖದ ಮೇಲೂ ಹಿಡಿದು, "ಟಿಲ್ಟ್", "ಅಪ್", "ಡೌನ್", "ಫೋಕಸ್" ಎಂದು ಸೂಚನೆ ಕೊಡುತ್ತ ದೀಪಗಳನ್ನು ಸರಿಪಡಿಸತೊಡಗಿದ. ಎಲ್ಲರ ಮುಖದ ಮೇಲೂ ಬೆಳಕು ಸರಿಯಾಗಿ ಬೀಳುವಂತೆ ವ್ಯವಸ್ಥಿಸಿದ.

" ಲೈಟ್ಸ್ ಆಫ್."

ಒಂದು ದೀಪ ಮಾತ್ರ ಉರಿಯುತಿತ್ತು. ಮಿಕ್ಕೆಲ್ಲ ನಂದಿತು. ಕಲ್ಯಾಣಿ ಆ ಸಭಾ ಮಂದಿರದ ನಡುವೆ ನಿಂತುಕೊಂಡಳು.

ಕ್ಯಾಮರಾ ಟ್ರಾಲಿ ಸಜ್ಜಾಗಿ ನಿಂತಿತು.

" ರಡೀ.... ಲೈಟ್ಸ್.... ಸ್ಟಾರ್ಟ್...."

ಹಿನ್ನೆಲೆಯ ಗೀತ ಆರಂಭವಾಯಿತು.

ಕಲ್ಯಾಣಿ ನೃತ್ಯ ಅರಂಭಿಸಿದಳು.

ಕ್ಯಾಮರಾ, ಟ್ರಾಲಿ, ಸಾಮಿ ಮತ್ತು ಮಾಣಿಕ್ಯಂ-ಇವರನ್ನು ಹೊತ್ತು ಕೊಂಡು ಹಿಂದಕ್ಕೂ ಮುಂದಕ್ಕೂ ಹೋಗುತಿತ್ತು. ಇಬ್ಬರೂ ಕ್ಯಾಮರಾ ಮೂಲಕ ನೃತ್ಯವೀಕ್ಷಿಸಿದರು. ಈ ಕಡೆಯಿಂದ ಎತ್ತ ಬೇಕಾದ ಭಾಗದ ಬಗೆಗೆ

ಸಾಮಿ ಸೂಚನೆಯಿತ್ತ. ಮಾಣಿಕ್ಯಂ ಕೂಲಿಗಳಿಗೆ ಟ್ರಾಲಿ ದೂಡುವ ಬಗೆಗೆ, ಅದರ ವೇಗ, ಅದು ನಿಲ್ಲಬೇಕಾದ ಸ್ಥಳಗಳ ಬಗೆಗೆ ಸೂಚನೆ ಕೊಡುತಿದ್ದ.

ನೃತ್ಯ ಮುಗಿಯಿತು.

"ಲೈಟ್ಸ್ ಆಫ್."

"ಮ್ಯಾಕ್ ಅಪ್...."

ಮ್ಯಾಕಪ್ ಮ್ಯಾನ್ ಬಂದು ಕಲ್ಯಾಣಿಯ ಮುಖದ ಮೇಲಿನ ಬೆವರನ್ನು ಬಟ್ಟೆಯಲ್ಲಿ ಒತ್ತಿ ತೆಗೆದ. ಪೌಡರ್ ಕೊಂಚ ಅಂಟಿಸಿ, ಮುಖದ ಮೇಲಿನ ಹೊಳಪು ನೀಗಿದ.

ಕಲ್ಯಾಣಿ ಅಲ್ಲಿಂದೆದ್ದು ಸುಂದರನ ಕೈಲಿದ್ದ ಥರ್ಮಸ್ ಫ್ಲಾಸ್ಕಿನಿಂದ ಕಾಫಿ ಬಸಿದು ಕುಡಿದಳು.

"ಆಲ್ ಲೈಟ್ಸ್"

ಸಭಾ ಮಂದಿರದಲ್ಲಿ ಕುಳಿತವರ ಮೇಲೆಲ್ಲ ಬೆಳಕು ಚೆಲ್ಲಿತು. ಕ್ಯಾಮರಾ ಮೂಲಕ ನೋಡಿದ ಮಾಣಿಕ್ಯಂ.

"ಲೈಟ್ಸ್ ಆಫ್"

ಕ್ಯಾಮರಾ ಅಸಿಸ್ಟೆಂಟ್ ಒಂದು ಟೇಪು ಹಿಡಿದು ಕ್ಯಾಮರಾದಿಂದ ಬಬ್ರುವಾಹನನಿರುವಲ್ಲಿಗೆ ಇರುವ ದೂರವನ್ನು ಅಳತೆಮಾಡಿದ. ಕ್ಯಾಮರಾದ ಲೆನ್ಸ್ ಮೇಲೆ ಕೈಯಿಟ್ಟು ಅದನ್ನು ಆ ಅಳತೆಗೆ ಫೋಕಸ್ ಮಾಡಿಕೊಂಡ.

ಸಾಮಿ ಬಬ್ರುವಾಹನನ ಬಳಿಗೆ ತೆರಳಿ ಅವನು ಅಭಿನಯಿಸಬೇಕಾದ ರೀತಿ, ತೋರಬೇಕಾದ ಆನಂದ, ನಗೆ, ತೃಪ್ತಿಗಳ ಬಗೆಗೆ ವಿವರಿಸಿದ. ಸಭಿಕರೂ ತಮ್ಮ ಮುಂದೆ ನರ್ತನವಾಗುತ್ತಿದೆ ಎಂದು ತಿಳಿದು ಹೇಗೆ ವರ್ತಿಸಬೇಕೆಂದು ಸೂಚಿಸಿದ.

ಕ್ಯಾಮರಕ್ಕೆ ಫಿಲಂ ತುಂಬಿದರು.

ಶೇಖರ್ ಡೈರೆಕ್ಟರ ಬಳಿಗೆ ಬಂದ.

"ಸೈಲೆಂಟ್....ಶಾಟ್ ತೆಗೆಯುತ್ತೇನೆ" ಎಂದ ಸಾಮಿ.

ಅಸಿಸ್ಟೆಂಟ್ ದೊರೆ ಸ್ಲೇಟು ತಗಲಿಸಿದ ಒಂದು ಮರದ ಇಕ್ಕಳವನ್ನು ಹಿಡಿದುಕೊಂಡಿದ್ದ. ಸ್ಲೇಟಿನ ಮೇಲೆ ಸೀನ್ ನಂಬರು ಮತ್ತು ಶಾಟ್ ನಂಬರುಗಳನ್ನು ಸೀಮೆ ಸುಣ್ಣದಲ್ಲಿ ಬರೆದು ಕ್ಲೇಪ್ ಬಾಯ್ ತಿಮ್ಮಪ್ಪನಿಗೆ

ಒಪ್ಪಿಸಿದ. ಆ ನಂಬರನ್ನು ತನ್ನ ಪುಸ್ತಕದಲ್ಲಿ ಗುರುತುಮಾಡಿಕೊಂಡು, ಎತ್ತಲಿರುವ ದೃಶ್ಯದ ವಿವರ ಬರೆದುಕೊಂಡ.

"ಕ್ಯಾಮರಾ ರಡೀ...."

"ಯಸ್ ಸಾರ್...."

"ಪವರ್...."

"ಯಸ್ ಸಾರ್" ಎಂದು ಕ್ಯಾಮರಾಕ್ಕೆ ವಿದ್ಯುತ್ ಬಂತೇ ಇಲ್ಲವೇ ಎಂದು ಪರೀಕ್ಷಿಸಿ ಕ್ಯಾಮರಾ ಅಸಿಸ್ಟೆಂಟ್ ಉತ್ತರಿಸಿದ.

"ರಡೀ....ಆರ್ಟಿಸ್ಟ್ಸ್....ಲೈಟ್...."

ತಿಮ್ಮಪ್ಪ ತಾನು ಹಿಡಿದುಕೊಂಡಿದ್ದ ಕ್ಲ್ಯಾಪನ್ನು ಕ್ಯಾಮರಾಕ್ಕಿಂತ ಮೂರಡಿ ದೂರದಲ್ಲಿ, ಬಬ್ರುವಾಹನನಿಗೂ ಕ್ಯಾಮರಾಕ್ಕೂ ನಡುವೆ ಹಿಡಿದ.

"ಟೇಕ್" ಕ್ಯಾಮರಾದೊಳಗಿನ ಫಿಲಂ ಚಲಿಸಲಾರಂಭಿಸಿತು.

"ಕ್ಲ್ಯಾಪ್" ತಿಮ್ಮಯ್ಯ ಕ್ಲ್ಯಾಪ್‌ನ ಒಂದು ಮರದ ಮೇಲೆ ಇನ್ನೊಂದನ್ನು ಬಡಿದು ಫಕ್ಕನೆ ಬದಿಗೆ ಸರಿದ.

ಬಬ್ರುವಾಹನ ನಗುತ್ತಾ ತಲೆದೂಗುತ್ತಾ "ನೃತ್ಯ"ವನ್ನು ವೀಕ್ಷಿಸುತಿದ್ದ. ಕ್ಯಾಮರಾ ಟ್ರಾಲಿಯು ಹಿನ್ನಡೆಯಿತು. ಕ್ಯಾಮರಾ ಒಮ್ಮೆ ಎಡದಿಂದ ಬಲಕ್ಕೆ ನಿಧಾನವಾಗಿ ಮುಖ ತಿರುವಿ ಸಭಿಕರ ಚಿತ್ರವೆತ್ತಿತು. ಪುನಃ ಮುನ್ನಡೆದು ಬಬ್ರುವಾಹನನ ಕ್ಲೋಸ್ ಅಪ್ ತೆಗೆಯಿತು.

"ಕಟ್"...."ಲೈಟ್ಸ್ ಆಫ್"

ಕ್ಯಾಮರಾ ನಿಂತಿತು. ದೃಶ್ಯ ಮುಗಿಯಿತು.

ಕಲ್ಯಾಣಿಯನ್ನು ಸಾಮಿ ಕರೆದರು. ಟ್ರಾಲಿ ಹಿಂದೆ ಸರಿಯಿತು. ತಾನು ನರ್ತಿಸಬೇಕಾದಲ್ಲಿ ಕಲ್ಯಾಣಿ ಬಂದು ನಿಂತುಕೊಂಡಳು.

"ಪ್ಲೇ ಬ್ಯಾಕ್....ಸ್ಟಾರ್ಟ್...."

ಹಿನ್ನೆಲೆಯ ಗೀತ ಆರಂಭವಾಯಿತು.

ಎರಡು ನಿಮಿಷಗಳ ಗಾನ ಮುಗಿದೊಡನೆ ಸ್ವಾಮಿ "ಕಟ್" ಎಂದರು.

"ಅಲ್ಲೇ ಒಂದು ಗುರುತುಮಾಡಿ. ಅಲ್ಲಿಂದ ನಾಲ್ಕಡಿ ಹಿಂದಕ್ಕೆ ತೆಗೆದುಕೊಳ್ಳಿ......ಅಲ್ಲಿಂದ ಮುಂದೆ ಚಿತ್ರವೆತ್ತುತ್ತೇವೆ...." ಎಂದು ಶೇಖರ್‌ನಿಗೆ ಸೂಚನೆಯಿತ್ತು ಸಾಮಿ ಕ್ಯಾಮರಾ ಬಳಿ ಬಂದರು.

" ರಡೀ...ಆಲ್ ಲೈಟ್ಸ್...."

ದೊರೆ ಕ್ಲ್ಯಾಪ್ ಮೇಲಿನ ನಂಬರು ಬದಲಿಸಿ ಬೇರೆ ನಂಬರು ಬರೆದ. ತಿಮ್ಮಪ್ಪ ಕ್ಲ್ಯಾಪ್ ಹೊಡೆಯಲು ಸಿದ್ಧನಾದ.

" ಈಗ ಹಾಡು ಅರಂಭವಾಗುವಲ್ಲಿಂದ ನಿಮ್ಮ ಅಭಿನಯಃ ನೃತ್ಯ ಮುಂದುವರಿಸಿರಿ. " ಸಾಮಿ ಕಲ್ಯಾಣಿಗೆ ಸೂಚನೆಯಿತ್ತ.

" ಸ್ಟಾರ್ಟ "

" ಕ್ಲ್ಯಾಪ್. "

ಕ್ಯಾಮರಾ ಚಲಿಸಲಾರಂಭಿಸಿತು. ಕಲ್ಯಾಣಿ ನರ್ತಿಸುತಿದ್ದಳು. ಅವಳು ಎಡಕ್ಕೂ ಬಲಕ್ಕೂ ಚಲಿಸುತ್ತ, ತಿರುಗಿ ಬಾಗಿ ಬಳುಕುತ್ತ, ಅಭಿನಯಿಸುತಿದ್ದಳು.

" ಕಟ್ "

ಕ್ಯಾಮರಾ ನಿಂತಿತು. ರೆಕಾರ್ಡೂ ಸುಮ್ಮನಾಯಿತು.

" ಲೈಟ್ಸ್ ಆಫ್ "

ಕಲಾವಿದರು ಏಳಬಹುದು, ಎಂದು ದೊರೆ ಅಪ್ಪಣೆಯಿತ್ತ. ಕಲ್ಯಾಣಿ ಸೆಟ್ಟಿನ ಪಕ್ಕಕ್ಕೆ ತಿರುಗಿ ದೀಪದ ಕಾಟವಿಲ್ಲದೆಡೆ ಸೋಫಾದ ಮೇಲೆ ಕುಳಿತಳು. ಮ್ಯಾಕಪ್ ಅಸಿಸ್ಟಂಟ್ ಒದ್ದೆ ಕರ್ಚಿಪ್ ಅವಳ ಕೈಗಿತ್ತ. ಅದರಿಂದ ಅವಳು ಮುಖವನ್ನೊತ್ತಿಕೊಂಡು ಬೆವರು ನೀಗಿದಳು.

ಮಾಣಿಕ್ಯಂ ಕ್ಯಾಮರಾವನ್ನು ಟ್ರಾಲಿಯಿಂದ ಕೆಳಕ್ಕಿಳಿಸಿ, ಸಭೆಯ ಎಡಬದಿಗೆ ಸ್ಟ್ಯಾಂಡ್ ಮೇಲಿರಿಸಿದ. ಕೆಲಸಗಾರರು ಟ್ರಾಲಿಯನ್ನು ದೂರ ತಳ್ಳಿ, ಹಳಿಗಳನ್ನು ಕಿತ್ತರು. ಕ್ಯಾಮರಾವನ್ನು ಬಬ್ರುವಾಹನನ ಹತ್ತಿರಕ್ಕೆ ಒಯ್ದು ಇರಿಸಿದರು. ಕಲ್ಯಾಣಿಯನ್ನು ಕರೆದು ನಿಲ್ಲಿಸಿ, ಸಾಮಿ ಕ್ಯಾಮರಾದ ಮೂಲಕ ನೋಡಿದ.

ಬಲಬದಿಗೆ ಕುಳ್ಳಿರಬೇಕಾದ ಕಲಾವಿದರನ್ನು ಕರೆದು ಕುಳ್ಳಿರಿಸಲಾಯಿತು. ಆ ಕಡೆಗೆ ಇದ್ದ ವಸ್ತುಗಳನ್ನೆಲ್ಲ ಎತ್ತಿ ಕಂಭಗಳನ್ನು ನಿಲ್ಲಿಸಿದರು. ಅದರ ಹಿಂದೆ ಸಭಾಮಂದಿರದ ಭಾಗದಂತೆ ಕಾಣುವ ಪರದೆ ನಿಲ್ಲಿಸಲಾಯಿತು. ಸಭಿಕರ ಹಿಂದೆ ಪರದೆಗೂ ಅವರಿಗೂ ಮಧ್ಯೆ, ಅಂಗರಕ್ಷಕರು ನಿಂತರು.

" ಲೈಟ್ಸ್ "

" ಓ. ಕೇ. "

" ಲೈಟ್ಸ್ ಆಫ್ "

" ಶೇಖರ್... ಈಗ ಸ್ಟ್ಯಾಪ್ ಆದಲ್ಲಿಂದ ಮುಂದಕ್ಕೆ. ಸ್ಟ್ಯಾಪ್ ಆದಲ್ಲಿ ಫಿಲಂ ಮೇಲೆ ಗುರುತುಮಾಡಿ, ಎರಡಡಿ ಹಿಂದಕ್ಕೆ ತೆಗೆದುಕೊಂಡು ಸಿದ್ಧಪಡಿಸಿ"

" ಕಲ್ಯಾಣಿ....ರಡೀ...."

" ಲೈಟ್ಸ್...."

ಹೊಸ ನಂಬರು ಬರೆಸಿ ತಿಮ್ಮಯ್ಯ ಕ್ಲ್ಯಾಪ್ ತಂದು ಅದನ್ನು ಕಲ್ಯಾಣಿಯ ಮುಂದೆ ಹಿಡಿದು ನಿಂತ.

" ಸ್ಟಾರ್ಟ್ "

" ಕ್ಲ್ಯಾಪ್ "

ಇನ್ನೂ ನೂರಡಿ ಫಿಲಂ ಮುಗಿಯಿತು.

" ಕಟ್ "– " ಲೈಟ್ಸ್ ಆಫ್ "

ಕ್ಯಾಮರಾವನ್ನು ಬಲಬದಿಗೆ ತಂದು ನಿಲ್ಲಿಸಿದರು. ಬಲಬದಿಗೆ ನಡೆದ ಕಾರ್ಯಕ್ರಮಗಳು ಈಗ ಎಡಬದಿಗೆ ನಡೆದುವು. ಹಿಂದೆ ಎಡಬದಿಯಲ್ಲೇ ಕುಳಿತಿದ್ದ ಕಲಾವಿದರು ಅಲ್ಲಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು.

ಪುನಃ ನೂರಡಿ ಚಿತ್ರವೆತ್ತಿದರು.

ಕ್ಯಾಮರಾವನ್ನು ಆಸ್ಥಾನದೃಶ್ಯದ ಬಲಬದಿಗೆ ಎತ್ತರವಾದ ಪೀಠದ ಮೇಲೆ ನಿಲ್ಲಿಸಿ ಕ್ಯಾಮರಾಮ್ಯಾನ್ ಕಲ್ಯಾಣಿಯನ್ನು ನೋಡಿದ. ಅವಳ ನೆರಳು, ನಿಂತ ಮಯಣದ ಬಟ್ಟೆಯಲ್ಲಿ ಪ್ರತಿಬಿಂಭಿತವಾಗಿತ್ತು. ಆ ದೃಶ್ಯಗಳನ್ನು ಎತ್ತಲಾಯಿತು.

ಕ್ಯಾಮರಾವನ್ನು ಬಬ್ರುವಾಹನನ ಸಿಂಹಾಸನವಿದ್ದಲ್ಲಿ ನಿಲ್ಲಿಸಿ, ನೃತ್ಯದ ಕೊನೆಯ ಭಾಗವನ್ನು; ಅದಾದ ಬಳಿಕ ನರ್ತಕಿ ವಂದಿಸಿ ಆರಸನೆಡೆ ಎರಡು ಹೆಜ್ಜೆ ಮುನ್ನಡೆದು ಆತ ಎಸೆದ ಹಾರವನ್ನು ಎತ್ತಿಕೊಳ್ಳುವುದೂ ಚಿತ್ರಿತವಾಯಿತು.

ಕ್ಯಾಮರಾ ಸಭೆಯ ಮುಂದೆ ಆರಸನಿಗೆ ಇದಿರಾಗಿ ನಿಂತಿತು.

ಕಲ್ಯಾಣಿ ವಿಶ್ರಾಂತಿ ಪಡೆಯಲು ತೆರಳಿದಳು.

ಬಭ್ರುವಾಹನ ಆನಂದಭರಿತನಾಗಿ ಹಾರವನ್ನು ನರ್ತಕಿಯೆಡೆ ಎಸೆವ ದೃಶ್ಯವನ್ನೆತ್ತಿದರು.

ಕ್ಯಾಮರಾ ಹಿಂದೆ, ದೂರಕ್ಕೆ ಸರಿಯಿತು.

ಮಹಾರಾಜನಾದ ಬಭ್ರುವಾಹನ ಸಭೆಗೆ ಬರುತ್ತಾನೆ. ಸಭಿಕರು ಎದ್ದು ನಿಲ್ಲುತ್ತಾರೆ. ಆತ ಮೇಲಕ್ಕೆ ಮೆಟ್ಟಲೇರಿ, ಸಿಂಹಾಸನದಲ್ಲಿ ಕುಳಿತು ಕೊಳ್ಳುತ್ತಾನೆ. ಸಭಿಕರೂ ವಂದಿಸಿ ಕುಳಿತುಕೊಳ್ಳುತ್ತಾರೆ.

"ಲೈಟ್ಸ್ ಅಫ್"

ವಿರಾಮದ ಸೂಚನೆ ಬಂತು. ಕಲಾವಿದರು ಕುಳಿತಲ್ಲಿಂದೆದ್ದು ಕಾಫಿ ತಿಂಡಿ ಪೂರೈಸಲು ಹೊರಟರು. ಹೊರಗಡೆ ನಡೆದು, ತಿಂಡಿ ತಿಂದು ಕಾಫಿ ಕುಡಿದು, ಸಿಗರೇಟು ಸೇದುತ್ತ ತಂಗಾಳಿಗೆ ಮೈಯೊಡ್ಡಿ ಕಲಾವಿದರೂ ಇತರರೂ ನಿಂತರು. ಕಲ್ಯಾಣಿಯೂ ಕೃಷ್ಣನೂ ಹೊರಗೆ ಹೋದರು. ಸಾಮಿ ಅವರೊಡನೆಯೇ ಇದ್ದ.

"ತುಂಬ ಆಯಾಸವಾಯಿತೇನಮ್ಮ?"

"ಹಾಗೇನೂ ಇಲ್ಲ. ಈ ಬೆಳಕು ಬಿಸಿಲಿಗೂ ಜೋರಾಗಿದೆ."

"ನಿಜ....ಮೈ ಒಣಗಿಸುತ್ತದೆ.....ಇನ್ನು ಮೂರು ಶಾಟ್ ಎತ್ತುತ್ತೇನೆ. ನೃತ್ಯದ ಆರಂಭ, ಮತ್ತು ನೀವು ಸಭಾಮಂದಿರಕ್ಕೆ ಬರುವುದು."

"ಅಷ್ಟೆ ಏನು...."

"ಅಷ್ಟೆ. ಆಗಿಹೋಯಿತು. ಆ ಬಳಿಕ ನೀವು ವಿಶ್ರಾಂತಿ ಪಡೆಯಬಹುದು."

ವಿರಾಮ ಮುಗಿದು ಕಲಾವಿದರೂ, ಸಾಮಿ, ದೊರೆ, ಮಾಣಿಕ್ಯಂ ಮತ್ತಿತರ ಕೆಲಸಗಾರರೂ ಸೆಟ್‌ನೊಳಕ್ಕೆ ಬಂದರು. ಸಿಂಹಾಸನವನ್ನೂ ಅದನ್ನಿರಿಸಿದ ಪೀಠವನ್ನೂ ಹಿಂದಕ್ಕೆ ಸರಿಸಲಾಯಿತು. ಸಿಂಹಾಸನವನ್ನು ಅಲ್ಲಿಂದೆತ್ತಿದರು. ಪೀಠದ ಮೇಲೆ ಕ್ಯಾಮರಾ ಇರಿಸಲಾಯಿತು.

ಇಡೀ ಸೆಟ್‌ನಿಂದ ಜನ ಚಲಿಸಿ, ಕ್ಯಾಮರಾದ ದೃಷ್ಟಿಗೆ ಬೀಳದಂತೆ ನಿಂತುಕೊಂಡರು. ಬೇಕಾದಂತೆ ಕಲಾನಿರ್ದೇಶಕ ಪರದೆಗಳನ್ನು ಅಣಿಗೊಳಿಸಿ, ನಿಜವಾದ ಸಭಾಮಂದಿರದಂತೆ ಕಾಣುವಹಾಗೆ ಮಾಡಿದ. ಲೈಟ್‌ಗಳನ್ನು ಮೇಲಕ್ಕೇರಿಸಲಾಯಿತು. ಲೈಟ್ ಹಾಕಿದರು. ಕಲ್ಯಾಣಿ ಗಂಭೀ

ರವಾಗಿ ಸಭಾಮಂದಿರ ಪ್ರವೇಶಿಸಿದಳು. ಈ ಚಿತ್ರವೆತ್ತುವ ಶಾಟ್ ಮುಗಿಯಿತು.

ಬಭ್ರುವಾಹನನೂ ಹಾಗೇ ಸಭೆಗೆ ಬರುವ ದೃಶ್ಯಗಳನ್ನು ಎತ್ತಿದರು. ಒಂದು ಬಾರಿ ಆತ ಗಂಭೀರವಾಗಿ ಪ್ರವೇಶಿಸಿದ. ಇನ್ನೊಂದು ಬಾರಿ ಉದ್ವೇಗದಿಂದ ನಡೆದು ಬಂದ.

ಕಲ್ಯಾಣಿ ನೃತ್ಯಾರಂಭಕ್ಕಾಗಿ ಸಿದ್ಧಳಾದಳು.

ಹಿನ್ನೆಲೆಯ ಗೀತ ಆರಂಭವಾಯಿತು, ಕ್ಲ್ಯಾಪ್ ಹೊಡೆದಾಯಿತು. ಅವಳ ನೃತ್ಯದ ಪೂರ್ವಾರ್ಧವನ್ನು ಎತ್ತಿದರು.

ಮೊದಲಬಾರಿಗೆ ಕಲ್ಯಾಣಿ ಚಿತ್ರದಲ್ಲಿ ನರ್ತಿಸಿದಳು.

ಯಾವ ವಿಘ್ನವೂ ಇಲ್ಲದೆ ಚಿತ್ರವೆತ್ತುವುದು ನಡೆಯಿತು.

ಮಾಣಿಕ್ಯಂ ಅವಳೆಡೆ ಬಂದು, ತುಂಬ ಚೆನ್ನಾಗಿ ಬಂದಿದೆ ಎಂದು ಶ್ಲಾಘಿಸಿದ.

ಸಾಮಿ "ತುಂಬ ಶ್ರಮವಾಯಿತು. ಆದರೂ ನೃತ್ಯ ಅತ್ಯಂತ ಸುಂದರವಾಗಿ ಬಂದಿದೆ" ಎಂದ.

ಕಲ್ಯಾಣಿ ಒಮ್ಮೆಗೆದ್ದೆ ಎಂದುಕೊಂಡು, ಗೆಜ್ಜೆ ಬಿಚ್ಚಿದಳು.

ಕೃಷ್ಣ ಥರ್ಮಸ್‌ನಲ್ಲಿದ್ದ ಕಾಫಿಯನ್ನು ಅವಳಿಗಿತ್ತ.

"ನೀವು....ವಿಶ್ರಮಿಸಬಹುದಂತೆ. ಸಾಮಿ ಹೇಳಿದರು" ಎಂದ ದೊರೆ.

"ಚೆನ್ನಾಯಿತು. ತುಂಬ ಸುಂದರವಾಗಿತ್ತು ಡ್ಯಾನ್ಸ್. ಕಾರಿದೆ. ಮನೆಗೆ ಹೋಗುವುದಾದರೆ...." ಎಂದು ನಾರಣಪ್ಪ ಎಲ್ಲಿಂದಲೋ ಕೆಳಕ್ಕೆ ಇಳಿದವನಂತೆ ಅತ್ತ ಬಂದು ಮಾತನಾಡಿಸಿದ.

"ನಾಳೆ ಸಂಜೆ ಚಿತ್ರವನ್ನು ನೋಡಬಹುದು. ತಡವಾದರೆ ನಾಡಿದ್ದು ಸಿದ್ಧವಾಗುತ್ತವೆ. ಅದನ್ನು ನೋಡುವಾಗ ಹೇಳಿಕಳುಹಿಸುತ್ತೇವೆ. ಬನ್ನಿ" ಎಂದು ರುದ್ರಪ್ಪ ದನಿಗೂಡಿಸಿದ, ದೇಶಾವರದ ನಗೆ ನಗುತ್ತ.

"ಇದೇ 'ಇಂಡೋರ್ ಶೂಟಿಂಗ್' ನಾವು ನೋಡುತ್ತಿರುವುದು. ಇಲ್ಲೇ ಇರುತ್ತೇವೆ" ಎಂದ ಕೃಷ್ಣ.

ಬಭ್ರುವಾಹನನ ಆಸ್ಥಾನ ಪುನಃ ಸಜ್ಜಾಯಿತು. ಆಸ್ಥಾನಕ್ಕೆ ಸಂಬಂಧಿಸಿದ ಸಕಲ ದೃಶ್ಯಗಳನ್ನೂ ಎತ್ತಲಾಯಿತು. ರಾತ್ರಿ ಕಳೆದು ಬೆಳಗಾಯಿತು,

ಗಂಟೆ ಏಳರವರೆಗೂ ಚಿತ್ರಣ ಸಾಗಿತು.

ನಿದ್ರೆಯ ಹೊರೆಹೊತ್ತುಕೊಂಡು ಕಲ್ಯಾಣಿ, ಸುಂದರ ಮತ್ತು ಕೃಷ್ಣ ರಾಯ ಮನೆಗೆ ಹಿಂತಿರುಗಿದರು.

## ೧೪

" ಒಂದು ಘಟ್ಟ ಮುಗಿಯಿತು " ಎಂದು ಕೃಷ್ಣರಾಯ ತನ್ನ ಹೆಗಲ ಮೇಲಿಂದ ಭಾರವಾದೊಂದು ಹೊರೆ ಇಳಿದಂತೆ ಉಸಿರುಬಿಟ್ಟು ನುಡಿದ.

" ಯಾಕೋ ನೀವೇ ಕುಣಿದಷ್ಟು ಬಳಲಿದ ಹಾಗಿದೆ. ತಡೆಯಿಲ್ಲದೆ ಹೀಗೆ ರಾತ್ರಿ ನೃತ್ಯಪ್ರದರ್ಶನವಾಗಿದೆ; ನೀವೂ ದುಡಿದಿದ್ದೀರಿ. ಇದೇನು ಮಹಾ " ಎಂದು ಕಲ್ಯಾಣಿ ನಗುತ್ತ ನುಡಿದಳು.

" ಈ ಚಿತ್ರಪ್ರಪಂಚದ ವಿಚಿತ್ರಚಿತ್ರಣ ಮುಗಿಯಿತು-ಅಂತ. ಅಷ್ಟೆ"

" ಓಹೋ...ಆಗಲೇ ಕವಿತೆ. ನಿದ್ದೆಗಣ್ಣಲ್ಲೂ ಪ್ರಾಸ. ಈ ಹೊರೆ ಇಳಿದರೆ ಇನ್ನೊಂದು ಬರುತ್ತದೆ. ಅಥವಾ ನಾವೇ ಹುಡುಕುತ್ತೇವೆ "

" ಅದು ಮುಂದಿನ ಮಾತು "

" ಮುಂದಾಗಲಿ–ಇಂದೇ ಆಗಲಿ, ಈ ರಂಗಕ್ಕೆ ಕಾಲಿಟ್ಟ ಬಳಿಕ ಇಲ್ಲಿ ಸ್ಥಿರವಾಗಿರಲು ಯತ್ನಿಸಬೇಡವೇ ? ಒಂದು ತಿಂಗಳ ಕೆಲಸದಲ್ಲಿ ನಾಲ್ಕು ತಿಂಗಳ ಖರ್ಚು ಬಂತು. ಇಷ್ಟು ಹಣ ನೃತ್ಯಕಲೆಯಿಂದ ಬರುತ್ತೇನು ? "

" ಬಂದರೂ ಬರಬಹುದು. "

" ಆದರೂ ಆ ರಂಗ ಆಗಲೇ ಬಹಳ ದೂರವಾಯಿತು. ಏನಿದ್ದರೂ ಮಾಸ್ತರ್ ಆಗಿಯೇ ಇರೋಣ ಅಂತ ನನ್ನ ಮನಸ್ಸು. "

" ಹಾಗೇನು....ಮಾಸ್ತರ್....? "

" ನಿಮಗೆ ನಗು, ಪರಿಹಾಸ್ಯ. ಇಂದು ಸಂಸಾರ ಆರಂಭಿಸಿದ್ದೇವೆ ನಾವು. ಅದಕ್ಕೆ ಅಡ್ಡಿಬರುವ, ಈ ಸುಖ-ತೊಡೆಯುವ ಯಾವುದೂ ನನಗೆ ಬೇಡ "

" ನಿಜವೇ ? "

" ಸಂದೇಹವೇ ? ನರ್ತಿಸಿದ್ದೇನೆ, ದುಡಿದಿದ್ದೇನೆ. ಆ ದುಡಿತದ ಫಲ ಉಣ್ಣಲು ಸಾಧ್ಯವಾಗಿಲ್ಲ. ಈಗಲೂ ದುಡಿಯಬೇಕಾಗಿದೆ. ಆದರೆ, ದುಡಿ

ತದ ಫಲ ಉಂಡು, ಸುಖ ಅನುಭವಿಸುವುದು ಈಗ ನಮ್ಮ ಕೈಲೆ ಇದೆ ತಾನೆ ? ”

“ ಇದೆ. ಆದರೂ ಹಣವಿದ್ದವನ ಕೈಹಿಡಿದರೂ ಋಣವಿದ್ದಷ್ಟೆ ಸಿಕ್ಕೀತು ಅಂತ ಗಾದೆ ಇದೆ. ”

“ ಎಂದರೆ....ಅದನ್ನು ಬದಲಾಯಿಸಿ ಅರ್ಥಮಾಡಬೇಕೆ ? ಸುಂದರಿಯ ಕೈ ಹಿಡಿದರೂ....ಅಥವಾ ಹಣವಿದ್ದವಳ....ಎನ್ನಲೇ ? ”

“ ಹೇಗೆ ಅರ್ಥಮಾಡಿದರೂ ಒಂದೇ. ಆ ಮಾತು ಬೇಡ. ನಮ್ಮ ಜೀವನ ಸುಗಮವಾಗಿ ಸಾಗಿಸಬೇಕೆಂಬುದೇನೆ ನಿಜ. ಅಷ್ಟಕ್ಕೆ ದೊರೆತರೆ ಸಾಕು. ”

“ ಅದಕ್ಕಾಗಿಯಾದರೂ ನಾವು ಯತ್ನಿಸಬೇಡವೇ ? ಚಿತ್ರರಂಗ ಅದಕ್ಕೆ ಅಸಮಾನ ಸಾಧನ. ”

“ ನಿಜ.....ಆದರೆ ಅದು ಸಂಸಾರ ಮುರಿದರೆ. ”

“ ಅದು ನಮ್ಮ ಶಕ್ತಿಯನ್ನು ಅವಲಂಬಿಸಿದೆ. ನಾವು ಅಶಕ್ತರಾದರೆ ಆ ನಿಮ್ಮ ಭೀತಿಯೂ ನಿಜವಾದೀತು. ಆದರೆ, ಅಂಥ ಭೀತಿಗೆ ಎಡೆಕೊಡು ವವಳು ಕಲ್ಯಾಣಿಯಲ್ಲ. ”

“ ಅದು ನನಗೆ ತಿಳಿದಿದೆ. ಆ ಬಗೆಗೆ ನಾನು ಸಂದೇಹಪಡುವುದೂ ಇಲ್ಲ ಕಲ್ಯಾಣಿ. ಆದರೂ....”

“ ನಾನು ಹೆಚ್ಚುಕಾಲ ಮನೆಯಲ್ಲೇ ಇರಬೇಕೆಂದೇ ? ”

“ ನನ್ನವಳು ನೀನು. ನನ್ನ ಬಳಿಯೇ ಇರಬೇಕೆಂದು ನಾ ಬಯಸಿದರೆ ತಪ್ಪಾದೀತೇ ? ”

“ ಚೆನ್ನಾಯಿತು ನಿಮ್ಮ ಹುಡುಗಾಟಿಕೆ. ಅಂದರೆ....ದುಡಿಮೆಯೂ ಕಷ್ಟವಾದೀತಲ್ಲ....ನಿಮ್ಮ ತಮಾಷೆಯಲ್ಲಿ.....”

“ ಇಡೀ ದಿನ ಆ ದಾರಿ ತುಳಿಯಲು ಇಬ್ಬರಿಗೂ ಶಕ್ತಿ ಸಾಲದೇನೋ?” ಕೃಷ್ಣ ನಕ್ಕು ಓರೆಗಣ್ಣಿನಿಂದ ಕಲ್ಯಾಣಿಯ ಕಡೆ ನೋಡಿದ.

“ ಸಾಕು ನಿಮ್ಮ ಪರಿಹಾಸ್ಯ. ನಿದ್ರೆಬಿಟ್ಟು ನಿಮಗೆ ಏನೇನೋ ಅನಿಸ ತೊಡಗಿದೆ. ”

" ಅದು ಇಬ್ಬರಿಗೂ ಅನ್ವಯಿಸುತ್ತದೆ......."

" ಯಾರಾದರೂ ಕೇಳಿದರೆ ನಕ್ಕಾರು...."

" ಪ್ರಕೃತಿ ನೀತಿಯ ಆತ್ಮಬಲದಿಂದ ಗೆಲ್ಲುವಾ
ಶಕ್ತಿಯಿಲ್ಲದ ಮೂಕ ಜೀವ ನಾವು.
ಹುಚ್ಚರಂದದಿ ಜಗಕೆ ವೇದಾಂತ ಸಾರುವಾ
ನಮ್ಮ ಆತ್ಮವ ಮರೆತ ನಟರು ನಾವು.
ಇಲ್ಲವೆಂದಲ್ಲ-ಇವೆ ಕೆಲ ಕೆಲವು ಆತ್ಮಗಳು
ಪ್ರೇಮವನು ದೇವತ್ವದೊಡನೆ ನಿಲಿಸಿ
ಅದನರಿತು ಜತೆಗೂಡಿ ನಿಂದಿರುವ ಹೃದಯುಗಳು
ಇಹುದನೇ ಕಂಡಿಲ್ಲ ನಾನಿನ್ನು ಅರಸಿ!"

" ಆಗಲಿ-ಕಾಣೋಣ....ನಾವೂ ಅಂಥ ಪ್ರೇಮಿಗಳೆಂದೇ ತಿಳಿಯೋಣ. ಈಗ ಸ್ನಾನಮಾಡಿ ನಿದ್ದೆಮಾಡಿ. ಹ್ಞೂಂ....ತಿಳಿಯಿತೇ ? "

ಮನೆ ತಲುಪಿದ ಸುಂದರ ಬೇಗನೇ ಕಾಫಿ ಕಾಯಿಸಿದ. ಬಿಸಿನೀರು ಸಿದ್ಧವಾಗುವವರೆಗೆ ಇಬ್ಬರೂ ಕಾಫಿ ಕುಡಿದು ಮಂಚದ ಮೇಲೊರಗಿ ಹರಟೆ-ಹಾಡಿದರು.

ಅವರ ಸ್ನಾನ ಮುಗಿದಾಗ ತಿಂಡಿ ಸಿದ್ಧವಾಗಿತ್ತು.

ಇಡೀ ದಿನ ಇಬ್ಬರೂ ಜತೆಯಾಗೇ ನೂರಾರು ವಿಚಾರಗಳನ್ನು ಮಾತನಾಡುತ್ತ ಕಾಲ ಕಳೆದರು. ಸಂತೋಷದಲ್ಲಿ ನಲಿದರು. ಊಟ ಮುಗಿಸಿ ನಿದ್ರಿಸಿದ ಅವರು ಎಚ್ಚರವಾದಾಗ ಸಂಜೆ ೫ ಘಂಟೆಯಾಗಿತ್ತು.

" ನಾನೇ ಕಾಫಿ ಸಿದ್ಧಪಡಿಸುತ್ತೇನೆ ಸುಂದರ. ನೀನೊಂದು ಗಾಡಿ ತಾ. " ಎಂದು ಕಲ್ಯಾಣಿ ಅವನನ್ನು ಅಟ್ಟಿದಳು. ಅವಳ ಉತ್ಸಾಹವನ್ನು ಕಂಡು, ಕೃಷ್ಣನಿಗೆ ತಾನೆಣಿಸಿದುದೆಲ್ಲ ತಪ್ಪು, ಎಂದೆಂದಿಗೂ ಅವಳು ನನ್ನವಳು ಎಂದೆನಿಸಿತು. ಕಲ್ಯಾಣಿ ತನ್ನನ್ನು ಬಿಡಲಾರಳು. ತನ್ನ ಬಗೆಗೆ ಅಪಾರವಾದ ಪ್ರೇಮವಿದೆ ಅವಳಲ್ಲಿ ಎಂಬುದವನಿಗೆ ತೋರಿತು. ಸಾಧ್ಯವಾದರೆ ತನ್ನ ಹೃದಯವನ್ನೇ ಎತ್ತಿ ಕೊಡುವಷ್ಟು ಆದರದಿಂದ ಅವನನ್ನು ಕಲ್ಯಾಣಿ ಒಲಿಸುತಿದ್ದಳು.

" ತೂಗಿ ನೋಡುವೆವಾವು ಜಗದೆಲ್ಲ ವಸ್ತುಗಳ
ಎಲ್ಲ ಜನ ಜೀವನದ ನಿಯಮ-ನೀತಿ
ಪ್ರೇಮವೊಂದಿದೆ-ಅದನು ತೂಗಿದವರಿಲ್ಲ ಒರೆ
ಹಚ್ಚಬಲ್ಲಂಥ ಕಲ್ಲಿಲ್ಲ ಗೆಳತಿ.

ಕಲ್ಯಾಣಿ....ನಮ್ಮ ಪ್ರೇಮ ಹೀಗೇ ಇರಲಿ. ಇಂದು ನೀನು ಪೂರ್ಣ ನನ್ನವಳಾದೆ."

" ನೀವೂ ಹಾಗೇ...." ಎಂದವನನ್ನ ಅಣಕಿಸಿದಳು.

ಗಾಡಿ ಬಂತು.

ಇಬ್ಬರೂ ಸಿನಿಮಾ ನೋಡಲು ಹೊರಟರು. ಮನೆ ಕಡೆಗೆ ಇರು ಎಂದು ಸುಂದರನಿಗೆ ಕೃಷ್ಣ ಸೂಚನೆಯಿತ್ತ.

" ವಿರಹ ಜೀವನದ ಬೆಂಗಾಡ ಬಂಧನದಲ್ಲಿ
ಬಾಳಿರುವ ಜೀವ ಇದೊ ನಿಮ್ಮ ಬಳಿಗೆ
ಅರ್ಥವಿಲ್ಲದ ನೋಟ ಬೀರಿರಲು-ನೀವ್ ಬರಲು
ಅರ್ಥ ಬಂದಿತು ಅದಕೆ ; ನಿಮ್ಮ ಸಲುಗೆ."

" ನೀನೂ ಕವಿಯಾಗಿಬಿಟ್ಟೆ ಕಲ್ಯಾಣಿ. ಇನ್ನು ನಮಗಿಬ್ಬರಿಗೂ ಒಂದೇ ಮಂತ್ರವಾದೀತು. "

" ಅದೇನೊ ? "

" ತಿಳಿದೇ ಇದೆಯಲ್ಲ. ಕವಿಗಳ ಓನಾಮ....ಭವತಿ ಭಿಕ್ಷಾಂದೇಹಿ. "

" ಕಲಾವಿದರಿಗೂ ಅದೇ ಮಂತ್ರ. "

" ಆದರೂ ಕವಿತೆಯಲ್ಲ, ಅದು ತಲೆ ಕೆಟ್ಟಾಗಲೇ ಹುಟ್ಟುತ್ತೆ. "

" ನೀವೂ ಏನೇನೋ ಹಾಡುತ್ತೀರಲ್ಲ....ಅದೆಲ್ಲ...."

" ನಿಜಕ್ಕೂ—ತಲೆ ಕೆಟ್ಟಾಗಲೇ ಹಾಡಿನ ಹುಚ್ಚು. ಈಗ ನೀನು ಹಾಡಿದ್ದೂ ಹಾಗೆ...."

" ಹಾಗಿದ್ದರೆ ಮೊದಲು ಡಾಕ್ಟರರಲ್ಲಿಗೆ ಹೋಗೋಣ. "

" ಅದನ್ನು ಅರ್ಥ ಮಾಡಿಕೊಳ್ಳಬಲ್ಲ ಡಾಕ್ಟರ್ ನಿನ್ನ ಪಕ್ಕದಲ್ಲೇ ಇದ್ದಾನೆ. "

" ನೀವೇ ಹಾಡಿದ ಹಾಡು ಅದು ; ತಿಳಿಯಿತೇ ? ಕೊಂಚ ಬದಲಾಯಿಸಿದೆ. "

" ಸಿನಿಮಾ ಪ್ರಪಂಚದಲ್ಲಿ ಅದು ಅಗತ್ಯ ಬೇಕಾದ ವಿದ್ಯೆ. "

" ಯಾವುದು ? "

" ಬದಲಾಯಿಸುವುದು. ಕುಲಗೆಡಿಸುವುದು. ಬೇರೆ ಚಿತ್ರಗಳು, ಕತೆಗಳು, ಅವುಗಳಲ್ಲಿನ ಹಾಡುಗಳು, ನೃತ್ಯಗಳು—ಕೊನೆಗೆ ಅಭಿನಯ ಕೂಡಾ ಅಣಕಿಸಿ ಕುಲಗೆಡಿಸುವುದು ಮುಖ್ಯ ತಿಳಿದಿರಬೇಕಾದ ವಿದ್ಯೆ. ಹಾಗಿದ್ದರೇನೇ ಆತ ಚಿತ್ರರಂಗದಲ್ಲಿ ಶೋಭಿಸುತ್ತಾನೆ. "

" ಅದೇ....ನಮ್ಮ ಕಂಪೆನಿ ಮಾಲಿಕರಿದ್ದಾರಲ್ಲ "

" ಯಾರು....ಹೊಟ್ಟೆ ಮಾತ್ರ ಬೆಳೆಸಿಕೊಂಡವನೇ ? "

" ಅವನೆ ! ಆತ ಆ ಚಿತ್ರದಲ್ಲಿ ನರ್ತನ ನೋಡಿದ್ದೀರಾ ? ಈ ಚಿತ್ರದ ನೃತ್ಯ ಚೆನ್ನಾಗಿತ್ತು. ಹಾಗೆ ಇರಬೇಕು, ಹೀಗೆ ಇರಲಿ–ಎಂದೇನೋ ಹೇಳುತಿದ್ದ. ಈಗ ಅರ್ಥವಾಯಿತು. "

" ಅದು ಮೊದಲು ಅರ್ಥಮಾಡಿಕೊಳ್ಳಬೇಕಾದ ವಿದ್ಯೆ. "

" ಅಂತೂ ಇಮಿಟೇಶನ್ ಲೋಕ ಅನ್ನಿ. "

" ಅದಕ್ಕೇ ಎಚ್ಚರಿಕೆ ಬೇಕು. ಇಮಿಟೇಶನ್ ಲೋಕದಲ್ಲಿ ನಿಜವಾದುದಕ್ಕೆ ಬೆಲೆ ಇಲ್ಲ. "

" ಅದೂ ನಿಜ. "

" ಹಾಗೇ ನಿಜವಾದ ಪ್ರೇಮಕ್ಕೂ ಅಲ್ಲಿ ಸ್ಥಾನವಿಲ್ಲ. "

ಗಾಡಿ ನೂರಡಿ ರಸ್ತೆ ಹಾದು ಮುನ್ನಡೆಯಿತು.

ಚಿತ್ರ ನೋಡಿ ಅವರು ಹಿಂತಿರುಗುವಾಗ ಸುಂದರ ಅಡುಗೆ ಸಿದ್ಧಮಾಡಿ ಇರಿಸಿದ್ದ.

ಹೀಗೇ ದಿನ ಕಳೆಯಲಿ—ಹೀಗೇ ಜತೆಯಾಗೇ ಬಾಳೋಣ ಎಂದು ಇಬ್ಬರೂ ಬಯಸಿ ನಲಿಯುತಿದ್ದರು.

ಹುಕ್ಕಳು ತಮ್ಮ ನಲ್ಮೆಯ ಗೊಂಬೆಯನ್ನು ನಿಮಿಷವೂ ಅಗಲದಿರುವಂತೆ ಅವರು ಜತೆಯಾಗೇ ಕೋಣೆ ಸೇರಿದರು.

" ಕಲ್ಯಾಣಿ...."

“ ಹ್ಞೂ....”

“ ನೀನೆಲ್ಲಿಂದಲೋ ಬಂದೆ.....ನೀ ಬಯಸಿ ಬಂದೆ. ನಾನೂ ಎಲ್ಲಿಂದಲೋ ಬಂದೆ....ನಾನೂ ಬಯಸಿದೆ. ”

“ ಪರಸ್ಪರ ತಗಲಿಕೊಂಡಿದ್ದೇವೆ, ಅಂಟಿಕೊಂಡಿದ್ದೇವೆ....”

“ ಸರಿ....ಪ್ರೇಮ–ಅಮರ ಪ್ರೇಮಗಳನ್ನು ಹುಡುಕಿ ಹೊರಟವರು ನಾವು. ”

“ ಅದು ಸಿಕ್ಕಿದೆ....”

“ ಅದು ಕಲ್ಪನೆ. ಆದರೂ ಇಬ್ಬರೂ ಪೂರ್ಣ ಪರಸ್ಪರ ತೃಪ್ತರಾಗಿಲ್ಲ. ನಾವಾಗೇ ಕುಳಿತು ಚಿಂತಿಸಿದಾಗ ನಮಗೆ ಅರ್ಥವಾಗುತ್ತೆ. ಕೊನೆಯವರೆಗೂ....ಅರುವತ್ತು ಕಳೆದರೂ....ಹೆಣ್ಣು ನಿಮಗೆ ನಾನು ಬೇಡವಾಗಿದ್ದೇನೆ ಎಂದು ಹಂಗಿಸುತ್ತಾಳೆ. ಗಂಡು....ಎಳೆತನದ ಹೆಣ್ಣು ಸಿಕ್ಕರೂ ಆಗುತಿತ್ತು ಎಂದು ಒಮ್ಮೆಯಾದರೂ ಬಯಸುತ್ತದೆ.

“ ಹಾಗೇನು ? ಅದು ಡೇಂಜರಸ್. ”

ನಿನ್ನ ಪ್ರೇಮವದೆನ್ನದಿದೆ—ಆದರ ‘ಕೊನೆ’ ಯಿಲ್ಲ
ನೀ ಬಯಸಿ ಬಂದಂತೆ ನಾ ಬಂದಿಹೆ.
ನಮ್ಮಿರ್ವರಾ ಹೃದಯ ಕೂಡಿ ನಲಿನಲಿದಾಗ
ಕೊನೆ ಮುಟ್ಟಿ ಸಾಗುವೆವು ಎಂಬ ಊಹೆ.

“ ನಿಜ. ಮೂವತ್ತು ವರ್ಷ ಬಾಳಿದ ಹಿರಿಯರೂ ಪೂರ್ಣ ತೃಪ್ತರು. ನಾವು ಅಮರಪ್ರೇಮ ಕಂಡಿದ್ದೇವೆ ಎಂದು ಹೇಳಲಾರರು. ನಾವೂ ಹಾಗೆಯೇ? ಯಾವುದೋ ಒಂದನ್ನು ಬಯಸಿ ಬರುತ್ತೇವೆ. ಅದುವೇ ಪೂರ್ಣ, ಎನ್ನುತ್ತೇವೆ. ಅದು ದೊರೆತಾಗ ಅದರ ಸವಿ ಸವಿದಾಗ, ಅದುವೇ ಪೂರ್ಣವಲ್ಲ ಪ್ರೇಮದ ಒಂದು ಪುಟ್ಟ ಅಂಶ ಮಾತ್ರ ಎಂದು ತಿಳಿಯುತ್ತೇವೆ. ಮತ್ತೊಂದನ್ನು ಬಯಸುತ್ತೇವೆ. ”

“ ಅಂತೂ ಬಯಕೆಗೆ ಕೊನೆಯಿಲ್ಲ. ”

“ ಅದೇ ಸಂಸಾರ....ಆ ಬಯಕೆ ಪೂರ್ಣವಾಯಿತು ಎಂದವರೂ ಇರಲಾರರು. ಆದರೂ, ಆ ಪರಿಪೂರ್ಣತೆಯನ್ನು ಕಾಣುವ ಬಯಕೆ ಬೇಕು. ”

“ ದೊರೆತುದೇ ಸಾಕೆಂದರೆ....”

" ಹಾಗೆ ತಿಳಿಯುವುದು ಆಡಿದಷ್ಟು ಸುಲಭವಲ್ಲ. ಅತೃಪ್ತಿಯೇ ಜೀವನ, ತೃಪ್ತಿಯೇ ಮರಣ. ಮಾನವನ ಮನೋಭಾವದಲ್ಲೇ ಅಡಕವಾಗಿದೆ ಆ ಅತೃಪ್ತಿ. ಎಂತಲೇ ತೃಪ್ತಿಯ ಕಡೆ ನಡೆಯುತ್ತೇವೆ ನಾವು."

" ನಿಜ ! ಅದಕ್ಕೇ ಇನ್ನೊಂದು ನೃತ್ಯ, ಮತ್ತಷ್ಟು ಹಣ, ಇನ್ನಷ್ಟು ಕೀರ್ತಿ ಎನ್ನುತ್ತಿದೆ ನನ್ನ ಮನ."

" ನನ್ನದೂ ಅದೇ ಮನೋಭಾವ. ಅದು ಮುನ್ನಡೆಯ ಸಾಧನ. ಆದರೆ ಜೀವನದಲ್ಲಿ, ನಾವು ಒರೆಹಚ್ಚಿ ತೂಗಿನೋಡಲಾಗದ ಪ್ರೇಮದ ವಿಚಾರದಲ್ಲಿ ಹಾಗೆ ಮರದಿಂದ ಮರಕ್ಕೆ ಹಾರುತ್ತ ನಡೆಯುವುದು ಸಾಧ್ಯವಿಲ್ಲ."

" ನಿಜ. ಆದರೂ ಗಂಡಸು...."

" ನೀ ಉದಹರಿಸಲೆಳಸುವ ಗಂಡಸು ನೈಜಪ್ರೇಮ ಬಯಸುವುದಿಲ್ಲ. ಪ್ರೇಮಕ್ಕೆ ಕಾಮದ ಅರ್ಥಕೊಟ್ಟು ಆ ದಾರಿ ಹಿಡಿಯುತ್ತಾನೆ."

" ಕಾಮಕ್ಕೆ ಪ್ರೇಮದ ಅರ್ಥಕೊಡಬೇಕೇ ?"

ಕಲ್ಯಾಣಿಯು ಮುಂದೆ ಮಾತಾಡಲು ಕೃಷ್ಣನ ತುಟಿಗಳು ಎಡೆಗೊಡಲಿಲ್ಲ. ಅವನ ಕೈಗಳು ಅವಳನ್ನು ಬಿಗಿದಿದ್ದುವು. ತುಂಟತನ ಮಾಡಿದ ಕಲ್ಯಾಣಿಯನ್ನಾತ ಶಿಕ್ಷಿಸುತಿದ್ದ.

ಅವರು ಎಷ್ಟು ಹೊತ್ತಿಗೆ ನಿದ್ರೆಯನ್ನು ಕರೆದರೋ, ಅಂತೂ ಮುಂಜಾನೆ ಎಚ್ಚರವಾದುದು ರಮಾ ಕೂಗಿದುದನ್ನು ಕೇಳಿ. ಸುಂದರ ಬೇಗನೇ ಎದ್ದು ಕಾಫಿ, ಉಪ್ಪಿಟ್ಟನ್ನು ಸಿದ್ಧಪಡಿಸಿದ್ದ. ಸ್ನಾನಕ್ಕೆ ನೀರೂ ಬಿಸಿಯಾಗಿತ್ತು. ರಮಾ ಬಂದವಳೇ ಎಂಟು ಗಂಟೆಯಾದರೂ ಕೋಣೆಯೊಳಗೆ ಅವಿತಿದ್ದ ಕಲ್ಯಾಣಿಯನ್ನು ತಾನೇ ಎಚ್ಚರಿಸುತ್ತೇನೆಂದು ಕೂಗಿದಳು.

ನಿದ್ರೆಯ ಅಮಲಿನಲ್ಲಿ ಇನ್ನೂ ಪಕ್ಕದಲ್ಲಿ ಇದ್ದ ದೇಹಕ್ಕೆ ಬಳ್ಳಿಯಂತೆ ಅಪ್ಪಿಕೊಂಡಿದ್ದ ಕಲ್ಯಾಣಿ ಫಕ್ಕನೆ ಕಣ್ಣು ತೆರೆದಳು. ಬಿಸಿಲು ಕೋಣೆಯೊಳಗೆ ಪ್ರವೇಶಿಸಿತ್ತು. ಎದ್ದು, ಹೊದಿಕೆಯನ್ನು ಕೃಷ್ಣನ ಮೇಲೆಳೆದು, ಕೋಣೆಯ ಬಾಗಿಲು ತೆರೆದು ಕಲ್ಯಾಣಿ ಹೊರಬಂದಳು.

" ಬೆಳಗಾಯಿತೆ? ಇನ್ನೂ ಎಂಟೂವರೆ ಮಾತ್ರ" ಎಂದು ರಮಾ ಕೆಣಕಿದಳು.

" ಬೆಳಗೂ ಇರುಳೂ ನಮ್ಮ ಕೈಲೇ ಇದೆಯಲ್ಲ."

"ಸರಿ....ಸರಿ....ಚಿತ್ರಪ್ರಪಂಚವೇ ಹಾಗೆ. ನಾವೂ ಹಾಗೇ ಇರಬೇಕಾಗಿದೆ ಅನ್ನಾ."

"ಕುಳಿತಿರಮ್ಮ. ಬೇಗನೇ ಸ್ನಾನ ಮುಗಿಸುತ್ತೇನೆ."

ಕಲ್ಯಾಣಿ ಸ್ನಾನಕ್ಕೆ ತೆರಳಿದ ಸ್ವಲ್ಪ ಹೊತ್ತಿನಲ್ಲಿ ಕೃಷ್ಣ ಎಚ್ಚರವಾದುದನ್ನು ಅರಿತ ಸುಂದರು, ಕಾಫಿ ಹಿಡಿದುಕೊಂಡು ಅವನ ಕೋಣೆಗೆ ನಡೆದ.

"ಹಾಗೇ ಅವರಿಗೂ ಕಾಫಿ ಕೊಡು."

ಸುಂದರ ರಮಾನಿಗೂ ಕಾಫಿ ತಂದುಕೊಟ್ಟ.

ಪುನಃ ಈಕೆ ಬಂದಿದ್ದಾಳೆ. ವಾಸ್ತವವಾಗೇ ಕಲ್ಯಾಣಿ ಕಂಪೆನಿಯ ಮನೆಗೆ ಹೋಗುತ್ತಾಳೆ. ಬರಬೇಕಾದ ಹಣವನ್ನು ತರಬೇಕು....ನಿಜ.... ಅದರೊಂದಿಗೆ....ಚಿತ್ರದ ಕೆಲಸ ಪೂರ್ತಿಯಾದರೂ ಗೆಳತಿಯರ ಕೂಟ ಪೂರ್ತಿಯಾದೀತೆ? ಈಕೆ....ಇವಳ ಇತರ ಗೆಳತಿಯರು....ಎಲ್ಲರೂ ಕಲ್ಯಾಣಿಯ ಬೆನ್ನು ಬಿಡುವಂತಿಲ್ಲ. ಅವಳನ್ನು ಚಿತ್ರರಂಗದಲ್ಲಿ ಮುಳುಗಿಸಿ ಎಂದೆಂದೂ ಅಲ್ಲೇ ಇರುವಂತೆ ಮಾಡಲು ಯತ್ನಿಸಬಹುದು. ಕಲ್ಯಾಣಿ ಮುಂಚೂಣಿ! ಆಕೆಯನ್ನು ಚಿತ್ರಕ್ಕೆ ಸೇರಿಸುವುದು ಸುಲಭ. ಅದಾಯಿತೆಂದರೆ ಇಂದು ಅವಳ ಬಾಲ ಹಿಡಿದವರು ಅವಳ ನೆರಳಲ್ಲಿ ಮುನ್ನಡೆಯಬಹುದು. ಅದಕ್ಕೆ ಇವರೆಲ್ಲ ಅವಳಿಗೆ ಗಂಟುಬಿದ್ದಿದ್ದಾರೆ. ಅಂತೂ....ಅವಳು....ದೂರವಾಗುವ ....ಸೂಚನೆಗಳೇ ಅಧಿಕ.

ನಿನ್ನೆ....ಒಂದು ದಿನ ಅವಳು ತನ್ನ ಹೃದಯವನ್ನು ಪೂರ್ಣವಾಗಿ ನನಗೆ ಅರ್ಪಿಸಿದ್ದಾಳೆ. ನಾನೂ ನನ್ನ ಬಯಕೆಯನ್ನು ತಿಳಿಯಹೇಳಿದ್ದೇನೆ. ಇನ್ನೆಂದಿಗೂ ನಾವಿಬ್ಬರೂ ಅಗಲುವುದಿಲ್ಲ, ಪರಸ್ಪರ ತಿಳಿದು ವಿಚಾರ ಮಾಡಿ ಕೂಡಿ, ನಲಿಯುತ್ತೇವೆ ಎಂದು ನಿರ್ಧರಿಸಿದ್ದೇವೆ. ಅವಳ ಬಗೆಗೆ ಇದ್ದ ಭೀತಿ, ಸಂದೇಹ ಎಲ್ಲವೂ ಅಳಿಯಿತು. ಕಾಮದೇವನೇ ಬಂದರೂ ಕಲ್ಯಾಣಿ ನನ್ನನ್ನು ಅಗಲಲಾರಳು. ಮಾಸ್ತರ್ ಬಂದು ನಿಂತರೂ ತೊಲಗಲಾರಳು. ನಮ್ಮಿಬ್ಬರ ಆತ್ಮಗಳು, ಮನಗಳು, ಭಾವಗಳು ಬೆರೆತು ನಿಂತಿವೆ ಇಲ್ಲಿ—ಚಿನ್ನಕ್ಕೆ ಪುತ್ಥಳಿ ಸೇರಿದಂತೆ; ಹಾಲಿಗೆ ನೀರು ಬೆರೆತಂತೆ!

ಸಂದೇಹ, ಧೈರ್ಯಗಳ ನಡುವೆ ತೂರಾಡುತ್ತ ಕೃಷ್ಣ ಹಾಸಿಗೆಯಿಂದೆದ್ದು ಬಂದು, ರಮಾನನ್ನು ಸ್ವಾಗತಿಸಿ ವಂದಿಸಿದ. ಅಲ್ಲೇ ಕುಳಿತು ಅವಳ ಬಗೆಗೆ,

ಚಿತ್ರದ ಬಗೆಗೆ ಯಾವುದೋ ಮಾತುಗಳನ್ನಾಡುತ್ತ ತನ್ನ ಚಿಂತೆ ಮರೆಯಲೆತ್ನಿಸಿದ.

ಕಲ್ಯಾಣಿ ಸ್ನಾನದ ಮನೆಯಿಂದ ಹೊರಬಿದ್ದಳು.

ಅವಳ ಹಿಂದೇ ಅವಳ ಕೋಣೆಗೆ ರಮಾ ನಡೆದಳು.

ಎಲ್ಲರೂ ಜತೆಯಾಗೇ ಕುಳಿತು ಉಪಾಹಾರ ಮುಗಿಸಿದರು. ಕಲ್ಯಾಣಿ ಉತ್ಸಾಹದಿಂದ, ಸುಂದರವಾಗಿ ಅಲಂಕರಿಸಿಕೊಂಡು ಸಿದ್ಧವಾಗಿದ್ದಳು.

" ನಾವು ಕಂಪೆನಿಯ ಮನೆಗೆ ಹೋಗಿಬರುತ್ತೇವೆ. "

" ಹ್ಞಾ...."

" ಬೇಗನೇ ಬರುತ್ತೇವೆ. "

" ಆಗಲಿ....ನಿಮ್ಮ ನೃತ್ಯ ಎಂದು ? " ಎಂದು ಕೃಷ್ಣ ರಮಾನನ್ನು ಪ್ರಶ್ನಿಸಿದ.

" ಇನ್ನೂ ತಿಳಿದಿಲ್ಲ. ಅದೇನೋ ದಿನನಿತ್ಯ ಪ್ರಾಕ್ಟೀಸ್ ಸಾಗುತ್ತಿದೆ. ಬೇರೆ ಪಾರ್ಟೂ ಕೊಡುತ್ತೇನೆ ಅಂದಿದ್ದಾರೆ. "

" ಮೊನ್ನೆ ಒಂದು ಯಾವುದೋ ಇತ್ತೂಂತ ಕಾಣುತ್ತೆ. "

" ಅದೇ ? ದಾಸಿಯರಲ್ಲಿ ಒಬ್ಬಳು. ಅದಲ್ಲ....ಬೇರೆ ಯಾವುದೋ ಇನ್ನೊಂದಿದೆಯಂತೆ. "

" ಅಂತೂ ಚಿತ್ರ ಮುಗಿಯಲು ಇನ್ನೂ ಮೂರು ತಿಂಗಳು ಬೇಕು. "

" ಅಷ್ಟರೊಳಗೆ ಪೂರ್ಣವಾದರೆ ಅದೊಂದು ಪವಾಡ. "

" ಫಿಲಂಗೇ ಕಾದು ಕಾದು ಬೇಸರ ಬರುತ್ತದೆ. "

" ಅವನೊಬ್ಬ ಮಾರ್ವಾಡಿ. ನಿಧಾನವಾದಷ್ಟೂ ಲಾಭ ಎಂದು ತಿಳಿದಿರುತ್ತಾನೆ. "

ಕಾಫೀಮುಗಿಸಿ ಕೃಷ್ಣನ ಕಡೆ ಓರೆನೋಟ ಬೀರಿ,ಮುಗುಳುನಗೆ ನಕ್ಕು ಕಲ್ಯಾಣಿ ಅಪ್ಪಣೆ ಪಡೆದು ಹೊರಟಳು.

ದಾರಿಯಲ್ಲಿ ಉಮಾ ಉಪಾಯ ಹೇಳಿದಳು.

" ಇನ್ನೊಂದು ಡ್ಯಾನ್ಸ್ ಅಂತ ಮಾತು ಬರಬಹುದು. ನಿನ್ನ ಡ್ಯಾನ್ಸ್ ನೋಡಿ ಮಾಲೀಕರಿಗೆ ಹುಚ್ಚುಹಿಡಿದಿದೆ. "

" ಹಾಗೇನು ? "

" ಅಷ್ಟೇ ಅಲ್ಲ. ನಿನ್ನ ಹುಚ್ಚು ಹಿಡಿದಿದೆ. "

" ಅಂದರೆ "

ಹೆದರಬೇಡ. ಫಿಲಂ ಕಂಪೆನಿಗಳ ಅವಸ್ಥೆಯೇ ಅಷ್ಟು. ಕಣ್ಣಿನಿಂದ ನೋಡಿಯಾದರೂ ಸಂತೋಷಪಡುತ್ತೇವೆ ಅಂತ ಮಾಲಿಕರು ತೃಪ್ತರಾಗುತ್ತಾರೆ. "

" ವಿಚಿತ್ರಲೋಕ "

" ಇಷ್ಟು ತಡವಾಯಿತೇ ತಿಳಿಯಲು. ಒಂದು ತಿಂಗಳಿಂದ ಎಷ್ಟೋ ಕತೆ ನಡೆದುಹೋಗಿದೆ ನಮ್ಮಲ್ಲಿ. "

" ಯಾರೂ ಏನೂ ಹೇಳಿಲ್ಲ. "

" ಹುಚ್ಚಿ....ಅದನ್ನು ಮಾತ್ರ ಹೆಣ್ಣು ಯಾರಿಗೂ ಹೇಳುವುದಿಲ್ಲ. ಹೇಳಿದ ದಿನ ಅವಳ ಕತೆ ಮುಗಿದಂತೆ. "

" ನಿಜ. ಗುಟ್ಟು ಹೆಣ್ಣಿನ ಹುಟ್ಟುಕಲೆ. "

" ಮಾತ್ರವಲ್ಲ ಧರ್ಮ. ಗಂಡು ಎಲ್ಲಿ ಬೇಕಾದರೂ ಹೋಗಿ ಆಟ ವಾಡಿ ಬರುತ್ತಾನೆ. ಅದರ ಬಗೆಗೆ ಹೇಳುತ್ತಾನೆ. ನಾನು ಗಂಡಸು, ವೀರ, ಮನ್ಮಥ ಎಂದು ಮೀಸೆ ತಿರುವುತ್ತಾನೆ. ಹಾಗೆ ಹೆಣ್ಣು ಮಾಡಿದರೆ ಆಡಿದರೆ ಛೀಮಾರಿ ಹಾಕಿಸಿಕೊಳ್ಳಬೇಕು. "

" ಅಂತೂ ನಮ್ಮವರ ಭೀತಿ ನಿಜ. "

" ಏನು ? "

" ಹೆಣ್ಣು ಫಿಲಂ ಕಂಪೆನಿಗೆ ಸೇರಿದರೆ ಎಚ್ಚರಿಕೆಯಿಂದ ಇರಬೇಕು.... ಅಂತ...."

" ಗಂಡಿಗೂ ಅದೇ ಹೇಳಬಹುದು....ಅದೆಲ್ಲ ಸುಮ್ಮನೆ. ಹೆಣ್ಣು ತನ್ನ ಬಾಳು ಹಸನಾಗಿಸಲು, ಮೇಲೇರಲು ಅಗತ್ಯವಾದರೆ ಆ ದಾರಿ ಹಿಡಿಯಲೇಬೇಕು. "

" ಮಾನ ಕೆಟ್ಟು...."

" ಮಾನ ಕೆಟ್ಟು ಅಂದರೆ......ಅದೆಲ್ಲಿ ಹೋಗುತ್ತೆ ? ಮಾನ ಕೆಡಿಸಿಕೊಂಡರೂ ಮಾನವಂತೆ ಎನ್ನಿಸಿಕೊಳ್ಳಲು ಬೇಕಾದ ಹಣ, ಕಲಾವಿದೆ ಎಂಬ ಸ್ಥಾನ ಇಲ್ಲಿದೆ. ಸಾವಿರಾರು ಮಂದಿ ನಟಿ....ಎಂದು ನಮ್ಮನ್ನು ನೋಡಿ

ತಾರಾಲೋಕಕ್ಕೇರಿಸಿ ಹೊಗಳುತ್ತಾರೆ. ಅದೇ ಕೇವಲ ಮಾನಗೆಡುವ ದಾರಿ ಯಾದರೆ ಕಾಮಿಗಳ ಕಣ್ಣಿನಲ್ಲಿ ಮಾತ್ರ ನಾವು ನಿಲ್ಲುತ್ತೇವೆ."

"ಅಂತೂ ಹೊಲಸು....."

"ನಾಟಕರಂಗವಿದು. ನೀನು ನಾಯಕಿ–ಇನ್ನೊಬ್ಬ ನಾಯಕ. ಅಷ್ಟೆ. ಬಣ್ಣ ತೆಗೆದು ಸ್ನಾನಮಾಡಿದಾಗ ಎಲ್ಲ ಕತೆ ಮುಗಿಯುತ್ತೆ. ಹಾಗಿರಬೇಕು ನಾವು. ಇದೂ ಒಂದು ನಾಟಕ."

"ನನಗೇಕೋ ಭಯವಾಗುತ್ತಮ್ಮ....."

"ಹೆದರಿದವರು ಹೇಡಿಗಳಾಗುತ್ತಾರೆ. ಧೈರ್ಯದಿಂದಿದ್ದವರು ಮುನ್ನಡೆಯುತ್ತಾರೆ. ಅಷ್ಟೆ....ಅದಿರಲಿ....ಇನ್ನೊಂದು ನೃತ್ಯ ಬೇಕು ಅಂದರೆ ಏನು ಮಾಡುತ್ತೀಯಮ್ಮ..."

"ಸಾಕಮ್ಮ ಈ ಪ್ರಪಂಚ...."

"ಹಾ–ಆಗಲೇ ಸನ್ಯಾಸವೇ. ಅದೆಲ್ಲ ಸಾಕು....ಏನೋ ಊರಿಗೆ ಹೊರಡಬೇಕು ಅಂತ ಇದ್ದಿಯಲ್ಲ...."

"ಆ ಮಾತು ಈಗಿಲ್ಲ."

"ಅಂದರೆ....

ಆಣೆಮಾಡಿಸಿಕೊಂಡು, ಕಲ್ಯಾಣಿ ತನ್ನ ಕಥೆಯನ್ನು ರಮಾಗೆ ಹೇಳಿದಳು.

"ನಮಗಿನ್ನು ಮೈಸೂರೇ. ಇಲ್ಲವಾದರೆ ಇನ್ನೊಂದೂರು."

ರಮಾ ಪಶ್ಚಾತ್ತಾಪದ ದನಿಯಲ್ಲಿ ಅವಳ ಬಗೆಗೆ ಅನುತಾಪ ವ್ಯಕ್ತಪಡಿಸುತ್ತಾ ನುಡಿದಳು.

"ನಮ್ಮೆಲ್ಲರ ಬಾಳೂ ಹಾಗೇ. ದೇವರು ದೊಡ್ಡವನು. ಕಾಪಾಡುತ್ತಾನೆ. ಧೈರ್ಯದಿಂದ ನಡೆಯೋಣ. ಏನಾಗಬೇಕಾಗಿದೆಯೋ ಅದೆಲ್ಲಾ ಆಗುತ್ತೆ. ಅದನ್ನು ತಪ್ಪಿಸಲು ಸಾಧ್ಯವಿಲ್ಲ. ಮುಖ್ಯ ಮುಂದಿನ ದಾರಿ ಖಚಿತಮಾಡಿಕೊಳ್ಳಬೇಕು."

"ಇದೇ ದಾರಿ ರಮಾ....ಇನ್ನಾವ ದಾರಿ ನನಗೆ. ನೃತ್ಯಮೇಳ ಕೂಡಿಸಿ ಒದ್ದಾಡುವುದು ಸಾಕು. ಸುಖವಾಗಿ ಜೀವನ ಸಾಗಿಸುವ ದಾರಿ ಹಿಡಿಯಬೇಕು."

" ನಿನಗೆ ಸೌಂದರ್ಯವಿದೆ ಕಲ್ಯಾಣಿ. ಕಲೆ ಇದೆ. ಸುಂದರವಾದ ಮೈಕಟ್ಟಿದೆ. ಇದರ ಪ್ರಯೋಜನ ಪಡೆ. ಇದೇ ರಂಗ ನಿನಗೆ ಉಚಿತ. "

" ಆದರೂ ಭೀತಿ...."

" ಆ ಬಗೆಗೆ ತಾನೆ? ಅದನ್ನ ಬಯಸುವ ಗಂಡು ನಾಟಕದ ಅಭಿನಯ ಕೇಳುತ್ತಾನೆ. ಅವನಿಗೆ ತೋರಿಕೆ ಬೇಕು, ದೇಹ ಬೇಕು. ಮನವಲ್ಲ. ಅಭಿನಯ....ಅದು ಕೇವಲ ಅಭಿನಯ ಅಂತ ತಿಳಿ. ನೀನು ನರ್ತಿಸಿದಾಗ ನಿನಗೆ ತುಂಬ ಆನಂದವಾಗಬಹುದು. ನರ್ತನ ನಿನ್ನ ಹೃದಯ ಸೂರೆಗೊಂಡಿದೆ. ಆದರೆ ಅಭಿನಯ? ಅದು ದೇಹ ಉಳಿಸಿಕೊಳ್ಳುವುದಕ್ಕಾಗಿ. ಅರ್ಥವಾಯಿತೇ ? "

"ದಾರಿ ತಪ್ಪಬಾರದು. ತಪ್ಪದೆ ಸಾಧ್ಯವಿಲ್ಲವೆಂದಾಗ, ಅದರಿಂದಾಗಿ ನಿನ್ನ ಭವಿಷ್ಯಕ್ಕೆ ತಡೆ ಬಂದೀತೆಂದಾಗ ಏನು ಮಾಡುತ್ತೀ? ನಿನ್ನ ಮನಕ್ಕೆ ನಿಜವಾಗಿಯೂ ಹರ್ಷ, ಪೂರ್ಣ ತೃಪ್ತಿ ತಂದುಕೊಡಬಲ್ಲವನನ್ನು ಉಳಿಸಿಕೊಳ್ಳುವುದಕ್ಕಾಗಿ ಆ ಅಭಿನಯ ಆಗತ್ಯವಾದರೆ ? "

" ಬೇರೆ ದಾರಿಯೇ ಇಲ್ಲವೇ ? "

" ಒಂದು ನೃತ್ಯಕ್ಕೆ ಸಾವಿರ. ಒಂದು ಅಭಿನಯಕ್ಕೆ ಸಾವಿರ....ಅದೆಲ್ಲ ಯಾವಾಗ ಗೊತ್ತೇ ಕಲ್ಯಾಣಿ ? ನೀನು ಈ ಇಂದಿನ ಸೌಂದರ್ಯ ಉಳಿಸಿಕೊಂಡಾಗ. ಇನ್ನೂ ಹತ್ತು ವರುಷ. ಆ ಬಳಿಕ ಆ ಬೆಲೆ ಬರಲಾರದು. "

" ನಿಜ...."

" ಹತ್ತು ವರುಷ ನಮ್ಮ ದುಡಿಮೆ. ಸಾಯುವ ವರೆಗೂ ಕುಳಿತು ತಿನ್ನಲು ಬೇಕಾದಷ್ಟು ದುಡಿಯಬೇಕು. ಆ ಬಳಿಕ ಈ ಪ್ರಪಂಚವನ್ನೇ ಬಿಟ್ಟು–ನಮ್ಮ ಮನಸ್ಸಿಗೆ ಒಪ್ಪಿಗೆಯಾಗುವ ಜೀವನ ನಡೆಸಬಹುದಲ್ಲವೇ ? "

" ನಿಜ....ರಮಾ...."

" ಅದಕ್ಕೇ ಇನ್ನೊಂದು ನೃತ್ಯದ ಮಾತು ಬಂದರೆ ಒಪ್ಪಿಬಿಡು. "

" ಆಗಲಿ.... ಸಾವಿರವೇ ಬಂದೀತೇ ? "

" ಬರಲಿ ಬಾರದಿರಲಿ. ಕಡಿಮೆ ಕೊಡುತ್ತೇನೆ ಎಂದರೆ ಹೊಸ ಉಪಾಯ ಹೂಡು. "

" ಏನು...."

" ತಿಂಗಳಿಗೆ ನೂರು ಮನೆಯ ಖರ್ಚಿಗೆ ಕೊಡಬೇಕು ಅನ್ನು."

" ಕೇವಲ ಐದು ನೂರು ಕೊಡುತ್ತೇವೆ.... ಅಂದರೆ.... ಇದೊಂದು ನೂರು ಸೇರಿ ಆರು ನೂರಾಯಿತು. "

" ಅದಕ್ಕೇ ನೀನಿನ್ನೂ ಹುಡುಗಿ ಅನ್ನುವುದು. ಚಿತ್ರ ಮುಗಿಯಲು ಇನ್ನೂ ನಾಲ್ಕು ತಿಂಗಳು ಬೇಕು. ಅದು ಆರು ತಿಂಗಳಾದರೂ ಆಗ ಬಹುದು. ಅಷ್ಟು ದಿನದ ಖರ್ಚು ಸಾಗಲಿ.... ಅಂದರೆ.... ಅಲ್ಲಿಗೂ ಸಾವಿರ ಸಿಕ್ಕಿದಂತಾಯಿತು. "

" ಹಾಗಾದರೆ ಆಗಲ್ಲಮ್ಮ. "

" ಕಂಪೆನಿ ಮನೆಯ ಊಟ ಅಂತ ಕಂಪೆನಿಯ ಯಜಮಾನರು ಹೇಳಿ ದರೆ ಒಪ್ಪಬೇಡ. ತಿಳಿಯಿತೇ ? ನೂರು ಬರಲಿ. ''

ಇಬ್ಬರೂ ಕಂಪೆನಿಯ ಮನೆ ತಲುಪಿದರು. ಜತೆಗಾರರೊಡನೆ ಕಲೆತು ಹರಟೆಯಲ್ಲಿ ಲೀನವಾದರು.

ಕಲ್ಯಾಣಿಯ ಬಗೆಗೇ ಚಿಂತಿಸುತ್ತ ಕಾಲಕಳೆಯುತಿದ್ದ ನಾರಣಪ್ಪ ಮತ್ತು ರುದ್ರಪ್ಪ ನೃತ್ಯ ಮುಗಿದೊಡನೆ ಯೋಚನೆಗೆ ಒಳಗಾದರು. ಅತ್ಯಂತ ಸುಂದರವಾಗಿ ಅವಳು ನರ್ತಿಸಿದ್ದಾಳೆ, ಶಾಸ್ತ್ರಿಗಳೂ ತುಂಬಾ ಹೊಗಳಿದರು, ಚಿತ್ರದ ಕೀರ್ತಿ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಆದರೆ, ಕಲ್ಯಾಣಿ ಊರಿಗೆ ಹೊರಡಬೇಕೆಂದು ಮೊದಲಿನ ದಿನವೇ ತಿಳಿಸಿದ್ದಾಳೆ. ಈಗ ನೃತ್ಯವೂ ಮುಗಿ ಯಿತು. ಅವಳು ಹೊರಟುಹೋಗುತ್ತಾಳೆ. ಮುಂದೆ ಅವಳನ್ನು ನೋಡುವ ಭಾಗ್ಯವೂ ಇಲ್ಲವಾಗುತ್ತದೆ. ಎಂದು ಅವರು ಯೋಚನೆಗೀಡಾದರು. ಹೇಗಾದರೂ ಮಾಡಿ ಅವಳನ್ನು ಕಂಪೆನಿಯಲ್ಲಿ ಇರಿಸಿಕೊಳ್ಳಬೇಕು. ಎಲ್ಲ ಯತ್ನ ನಡೆಸಿ ತಮ್ಮವಳಾಗಿ ಮಾಡಿಕೊಳ್ಳಬೇಕು-ಎಂದು ಇಬ್ಬರೂ ಯೋಚಿ ಸುತಿದ್ದರು.

ಆದರೂ ಆಕೆ ಇರಲಿ ಎಂದು ಹೇಳುವ ಧೈರ್ಯ ಅವರಿಗೆ ಇಬ್ಬರಿಗೂ ಇಲ್ಲ. ಹಾಗೆಂದರೆ ಎಲ್ಲಿ ಇನ್ನೊಬ್ಬ ತಪ್ಪು ತಿಳಿದುಕೊಳ್ಳುತ್ತಾನೋ ಎಂಬ ಭೀತಿ. ಸಮಸ್ಯೆ ಬಗೆಹರಿಸಲು ಅವರಿಗೆ ಶಾಸ್ತ್ರಿಗಳು ನೆರವಾದರು.

" ಇನ್ನೂ ಒಂದು ನೃತ್ಯ ಸೇರಿಸಿದರೆ ಚೆನ್ನಾಗಿರುತ್ತೆ.'' ಎಂದು ಶಾಸ್ತ್ರಿ ಗಳೇ ಅಭಿಪ್ರಾಯ ಸೂಚಿಸಿದರು.

"ಅವಳು ಕಡಿಮೆ ಕೊಟ್ಟರೆ ಒಪ್ಪುವುದಿಲ್ಲ. ಹೆಚ್ಚು ಕೊಡಲು ಸಾಧ್ಯವಿಲ್ಲ–ಅಂದಹಾಗಾಗಿದೆ." ಎಂದು ನಾರಣಪ್ಪ ವಾದಿಸಿದ.

"ಅದಕ್ಕೇನು? ಯಾವುದರಲ್ಲೋ ಕೊಂಚ ಕತ್ತರಿಸಿದರಾಯಿತು. ನೀವು ಬೇಕೆಂದರೆ ನಾನೇಕೆ ಅಡ್ಡಿ ಬರಲಿ." ಎಂದ ರುದ್ರಪ್ಪ.

"ಆದರೂ ಹಣದ ಪ್ರಶ್ನೆ...."

"ಚಿತ್ರ ಉತ್ತಮವಾಗಬೇಕು ಅನ್ನುವ ಅಭಿಪ್ರಾಯ" ಎಂದರು ಶಾಸ್ತ್ರಿಗಳು.

"ನಿಮಗೆ ಸರಿಯಾದರೆ ನನಗೂ ಸರಿ" ಎಂದು ರುದ್ರಪ್ಪ ಅವರ ಸಲಹೆಗೆ ಬೆಂಬಲವಿತ್ತ.

ಕಲ್ಯಾಣಿಯ ನೃತ್ಯವಾದ ಮೇಲಂತೂ ಅದುವರೆಗೂ ಹೊರಬೀಳದಿದ್ದ ಹಲವು ವಿಚಾರಗಳು ಹೊರಬಂದುವು. ಆಗಲೇ ಚಿತ್ರ ತಯಾರಿಸಲೆಂದು ಬಂದಿದ್ದ ಮೋಹಿನಿ ಚಿತ್ರಸಂಸ್ಥೆಯವರು ಅವಳನ್ನು ಕಂಪೆನಿಗೆ ಸೇರಿಸಿಕೊಳ್ಳಲು ಯೋಚಿಸಿದ್ದರು. ಆ ಬಗೆಗೆ ಕಂಪೆನಿ ಮನೆಯ ಮೇಲೆ ಕಣ್ಣಿಟ್ಟು, ರಮಾನನ್ನು ತಮ್ಮ ಕಡೆಗೆ ವಾಲಿಸಿಕೊಂಡಿದ್ದರು. ರಮಾ ಈ ವಿಚಾರ ತಿಳಿಸಿ, ತಾನು ಆ ಕಂಪೆನಿಗೆ ಕಾಲಿಡುವುದಿಲ್ಲ ಎಂದು ವಿವರಿಸಿ, ಗುಟ್ಟು ಬಯಲುಮಾಡಿದ್ದಳು.

ಮೋಹಿನಿ ಚಿತ್ರಸಂಸ್ಥೆಯನ್ನು ಸೇರಿದ ಕಲ್ಯಾಣಿ ತಮ್ಮಿಂದ ದೂರವಾಗುತ್ತಾಳೆ, ಮುಂದೆ ಇತ್ತ ಬರುವುದೂ ನಿಂತುಹೋಗುತ್ತದೆ, ಎಂಬ ಶಂಕೆ ಬೆಳೆದು ರುದ್ರಪ್ಪ ಅವಳನ್ನು ಕಂಪೆನಿಯಲ್ಲೇ ಇರಿಸಿಕೊಳ್ಳಲು ಚಿಂತಿಸುತಿದ್ದ. ಇಲ್ಲಿ ಅವಳು ಸೇರಿಕೊಂಡಿದ್ದರೆ, ದಿನಕ್ಕೊಂದು ಬಾರಿಯಾದರೂ ಬಂದೇ ಬರಬೇಕಾಗುತ್ತದೆ. ಹಾಗೇ ಅವಳ ಮನವೊಲಿಸಲೂ ಅವಕಾಶವಿರುತ್ತದೆ. ಎಂದಾತ ನೆನೆದಿದ್ದ.

ಕಲ್ಯಾಣಿ ಇನ್ನೊಂದು ನೃತ್ಯ ನೀಡಲು ಒಪ್ಪಿಕೊಂಡಳು. ಮನೆ ಬಾಡಿಗೆ, ಊಟದ ಖರ್ಚಿಗಾಗಿ ತಿಂಗಳಿಗೆ ನೂರು ರೂಪಾಯಿಯಂತೆ ಕೊಟ್ಟು, ಐದು ನೂರು ಕೊಡಲು ರುದ್ರಪ್ಪ ಒಪ್ಪಿಕೊಂಡ.

ಆರು ತಿಂಗಳ ಚಿಂತೆ ಹರಿಯಿತೆಂದು ಸಂತೋಷದಿಂದ ಉಬ್ಬಿ ಕಲ್ಯಾಣಿ ಮನೆಗೆ ಹಿಂತಿರುಗಿದಳು.

## ೧೫

"ಅಂತೂ ಗೆದ್ದುಬಿಟ್ಟೆಯಮ್ಮ. ನೀನೇ ಸರಿ. ಹೇಗಿದ್ದರೂ ನಾವೆಲ್ಲ ನಿನ್ನಂತಹರಿಂದ ಕಲಿಯಬೇಕು" ಎಂದು ರತ್ನ ಶಾಂತನ ಬೆನ್ನು ತಟ್ಟಿದಳು.

"ನೀವೂ ಜತೆ ಸೇರಿದಿರಿ. ಇಲ್ಲವಾದರೆ ಆಕೆ ನಮ್ಮ ಬಲೆಗೆ ಸುಲಭ ವಾಗಿ ಬೀಳುತ್ತಾಳೇನು? ಈಗ ನಮ್ಮ ಮಾತು ಮೀರಿ ಒಂದು ಹೆಜ್ಜೆ ಮುಂದಿಡುವುದಿಲ್ಲ."

"ಅದಕ್ಕೂ ಮೇಲಾಗಿ ಇನ್ನೊಂದು ಲಾಭ ಕಾದಿದೆ. ಮೋಹಿನಿ ಪಿಕ್ಚರ್ಸ್ ಅಂತ ಹೊಸ ಕಂಪೆನಿ ಹುಟ್ಟಿಕೊಂಡಿದೆಯಲ್ಲ–ಅವರಿಗೂ ಇವಳ ಮೇಲೆ ಕಣ್ಣು." ಎಂದಳು ರಮಾ.

"ಅದು ವಾಸ್ತವವೇ. ಅವಳ ಮೇಲೇ ಎಲ್ಲರಿಗೂ ಕಣ್ಣು. ನಮ್ಮ ಕತೆ ಮಾತ್ರ ಇಲ್ಲೇ ಮುಗಿಯುತ್ತೋ ಏನೋ?" ಎಂದಳು ಸುಬ್ಬಮ್ಮ.

"ಅದೇನೂ ಇಲ್ಲ. ನಮ್ಮ ಕಂಪೆನಿಯ ಯಜಮಾನರು ಈ ಚಿತ್ರ ಮುಗಿದೊಡನೆ ಹೊಸ ಚಿತ್ರ ಆರಂಭಿಸುತ್ತಾರಂತೆ. ನೀವೆಲ್ಲ ಪರ್ಮನೆಂಟ್ ಆರ್ಟಿಸ್ಟ್‌ಗಳು ಅಂದಿದ್ದಾರೆ."

"ನಿನಗೆ ಹುಚ್ಚು ನಾಗರತ್ನ. ನಾನೂ ಪರ್ಮನೆಂಟ್ ಆಸಾಮೀನೇ. ಹಾಗೆ ಪ್ರತಿ ರಾತ್ರಿಯೂ ಹೇಳುತ್ತಾರೆ ಈ ಯಜಮಾನರು. ಹಗಲು ಮಾತ್ರ ಬೇರೆ ಕಡೆ ಗಾಳ ಹಾಕುತ್ತಲೇ ಇರುತ್ತಾರೆ" ಎಂದು ನಕ್ಕಳು ಶಾಂತಾ.

"ಆದರೂ ಆ ಮೀನನ್ನು ಹಿಡಿಯುವುದು ಸಾಧ್ಯವಿಲ್ಲ. ಅದು ನಮ್ಮ ಕೈಲಿದೆ. ಅದೊಮ್ಮೆ ಅವರ ಕೈಗೆ ಸಿಕ್ಕಿದರೆ ಮತ್ತೆ ಯಾರೂ ಪರ್ಮನೆಂಟಲ್ಲ" ರಮಾ ದನಿಗೂಡಿಸಿದಳು.

"ಅದೇನೋ ನಿಜ. ಆದರೂ ಅವಳನ್ನು ಬೇರೆ ಕಂಪೆನಿಗೆ ಹೋಗಲು ಬಿಡಬಾರದು."

"ಅದಕ್ಕೂ ಉಪಾಯ ಹೂಡಿದ್ದೇನೆ"

"ಏನೇ ಅದು–ರಮಾ...."

" ಕಲ್ಯಾಣಿ ಆ ಕಂಪೆನಿ ಸೇರುವದಾದರೆ ನಮಗೂ ಛಾನ್ಸ್ ಬರುವ ಹಾಗಿರಬೇಕು. "

" ಈ ಕಂಪೆನಿ ಬಿಡುತ್ತೀಯಾ ? ನಿನ್ನ.... ಪರಮೇಶ್ವರನ ಗತಿ...."

" ಸುಮ್ಮನಿರಮ್ಮ....... ನಿನ್ನವರು ರುದ್ರ..... ಇದನ್ನೇಕೆ ಬಿಡಬೇಕು. ಇಲ್ಲೇ ಇರುತ್ತೇನೆ.... ಅಲ್ಲೂ ಕಾಸು ಕಿತ್ತುಕೊಳ್ಳುತ್ತೇನೆ...."

" ಅದೀಗ ಸರಿಯಾದ ಯೋಚನೆ. ಆದರೆ.... ನಡೆಯಬೇಕಲ್ಲ."

" ಆ ಕಂಪೆನಿಯವರೂ ಹೇಳಿಕಳುಹಿಸಿದ್ದಾರೆ. ಹೇಗಾದರೂ ಕಲ್ಯಾಣಿಯನ್ನು ಕಂಪೆನಿಗೆ ಸೇರಿಸು ಅಂತ. ಅದು ನಡೆದುಬಿಟ್ಟರೆ ನಮ್ಮ ಕೆಲಸ ಗ್ಯಾರಂಟಿ. "

" ಪರವಾಯಿಲ್ಲ. ಅಂತೂ ಅದೃಷ್ಟವಂತೆ ಕಣೆ ನೀನು."

" ಹೆಣ್ಣಿನ ಅದೃಷ್ಟವೆಲ್ಲ ಅಷ್ಟೆ. ಅಂಗೈಯಷ್ಟು. ಅಂಗೈಯಲ್ಲೇ ಇದೆ."

ಎಲ್ಲರೂ ನಕ್ಕರು.

" ನಮ್ಮನ್ನು ಮರೆತುಬಿಡಬೇಡ. "

" ಖಂಡಿತ ಇಲ್ಲ. "

ಕಲ್ಯಾಣಿಯ ವಿಚಾರದಲ್ಲಿ ಇತರ ಕಂಪೆನಿಗಳು ಆಸಕ್ತಿವಹಿಸಿದಾಗ ವಾಸ್ತವವಾಗಿ ಇತರ ನಟಿಯರಿಗೆ ಕಿಚ್ಚಾದರೂ, ತಮ್ಮನ್ನಾಕೆ ಮರೆಯಲಾರಳೆಂಬ ಧೈರ್ಯದಿಂದ ಕೊಂಚ ನೆಮ್ಮದಿಯಾಯಿತು. ಅವಳ ಬಗೆಗೆ ಕಂಪೆನಿಯಲ್ಲಿನ ಎಲ್ಲರ ಆಸಕ್ತಿಯೂ ಹೆಚ್ಚಿತು. ತಮ್ಮ ಗೆಳತಿಯಾಗಿದ್ದಾಳೆ; ತಮ್ಮವಳಾಗಿದ್ದಾಳೆ—ಎಂದು ತಿಳಿದಿದ್ದ ಶಾಂತನಲ್ಲಿ ಮಾತ್ರ ಯಾವುದೋ ಒಂದು ಸಂದೇಹ ತಲೆ ಎತ್ತುತಿತ್ತು.

ಅವಳಿನ್ನೂ ತಾನು ಗರತಿ ಎಂದುಕೊಂಡಿದ್ದಾಳೆ. ಎಂದಾದರೂ ತಮ್ಮ ವಿಚಾರ ತಿಳಿದುಬಂದರೆ, ಜಿಗುಪ್ಸೆಯಿಂದ ದೂರ ಸರಿಯಬಹುದು; ಬೇಸರದಿಂದ ತಮ್ಮ ಸ್ನೇಹವನ್ನೇ ಬಿಟ್ಟುಬಿಡಬಹುದು. ಹಾಗಾಗದಂತೆ ನೋಡಿಕೊಳ್ಳಬೇಕು.... ಶಾಂತಾ ಯೋಚಿಸಿದಷ್ಟಕ್ಕೂ ಅವಳನ್ನು ತಮ್ಮ ದಾರಿಗೆ ತರುವುದೊಂದೇ ಮಾರ್ಗವೆಂದು ಅವಳಿಗೆ ಖಚಿತವಾಗುತಿತ್ತು. ಆದರೆ, ಅದು ಹೇಗೆ ಸಾಧ್ಯ, ಯಾರಿಂದ ಸಾಧ್ಯ ?

ರಾಜು ಅವಳನ್ನು ಒಲಿಸಿ ಬೇರೆಯವರ ಪಾಲುಮಾಡಬಲ್ಲ. ಆತ ಅಸಮಾನ ಏಜಂಟ್. ಸ್ವತಃವಾಗಿ ಸುಖ ಅನುಭವಿಸುವ ಶಕ್ತಿ ಸಾಲದು; ರೂಪವೂ ಇಲ್ಲ.

ಪರಮಶಿವನೂ ಅವಳಿಗೆ ತಕ್ಕ ಗಂಡು ಅಲ್ಲ. ಕಂಪೆನಿಯ ಯಜಮಾನರಲ್ಲಿ ಯಾರೂ ಆಕೆಯ ಮನ ಒಲಿಸಲಾರರು. ಹೀಗೆ ಯೋಚಿಸುತ್ತ ಕುಳಿತಿದ್ದ ಅವಳಿಗೆ ಕಥೆ ಬರೆದ ಶ್ರೀಕಂಠನ ನೆನಪಾಯಿತು. ಶ್ರೀಕಂಠ ಸುಂದರನಲ್ಲವಾದರೂ ಬುದ್ಧಿವಂತ. ಕತೆಗಾರ, ಹಾಡುಗಳನ್ನು ಬರೆವ ಕವಿ. ನಾಡಿನ ಪತ್ರಿಕೆಗಳಿಗೆಲ್ಲ ಚಿತ್ರದ ಬಗೆಗೆ ಬರೆದು ಕಳುಹಿಸುತಿದ್ದ. ಆದರೆ, ಅವನೆಂದೂ ಇವರ ಕಡೆ ತಿರುಗಿದವನಲ್ಲ. ತನ್ನ ಪಾಲಿನ ಕೆಲಸ ನಿರ್ವಹಿಸಿಕೊಂಡು, ನಿರ್ದೇಶಕರೊಡನೆ ವಿಚಾರ ವಿನಿಮಯ ಮಾಡುತ್ತ, ಚಿತ್ರವೆತ್ತುವಾಗಲೇ ಪ್ರತ್ಯಕ್ಷವಾಗುತ್ತಾನೆ. ಸೆಟ್‌ನಲ್ಲಿ ನಿಂತುಕೊಂಡು, ಮಾತುಗಳನ್ನು ಹೇಳಿಕೊಟ್ಟು ತಿದ್ದುತ್ತಾನೆ. ಆಗಲೇ ಅವನ ಜಾಣ್ಮೆಯ ಅರಿವಾಗುತ್ತದೆ. ಅವನ ಯತ್ನವನ್ನು ಕಂಡು ಕಲ್ಯಾಣಿಯೂ ತಲೆದೂಗಿ, ತುಂಬ ಚೆನ್ನಾಗಿ ಹೇಳಿಕೊಡುತ್ತಾರೆ ಎಂದಿದ್ದಳು. ಆ ಅಭಿಮಾನದ ನುಡಿಯ ತೂಕ ನೋಡಲು ಇದೇ ಸಮಯ ಎಂದು ಶಾಂತಾ ನಿರ್ಧರಿಸಿದಳು.

ಎಂದಿನಂತೆ ಕಂಪೆನಿಯ ಮನೆಯ ಕೋಣೆಯಲ್ಲಿ ಶ್ರೀಕಂಠ ಒಂಟಿಯಾಗಿ ಕುಳಿತಿದ್ದಾಗ ಶಾಂತಾ, ಕಲ್ಯಾಣಿಯೊಡನೆ ಒಳಗೆ ಬಂದಳು. ಬೆಚ್ಚಿಬಿದ್ದರೂ ತೋರಗೊಡದೆ, ಬಲಾತ್ಕಾರವಾಗಿ ನಗುತ್ತ ಆತ ಅವರನ್ನು ಕುಳ್ಳಿರಿಸಿದ.

"ಯಾವುದಾದರೂ ಪುಸ್ತಕವಿದ್ದರೆ ಕೊಡಿ ಸಾರ್. ಓದುತ್ತೇವೆ. ತುಂಬ ಬೇಸರವಾಗುತ್ತದೆ."

"ಆಗಲಿ, ನಾಳೆ ಕೊಡುತ್ತೇನೆ."

ಕೋಣೆಯಲ್ಲಿ ತುಂಬಿದ್ದ ಚಲನಚಿತ್ರ ವಿಚಾರದ ಪತ್ರಿಕೆಗಳನ್ನೆತ್ತಿ ಇಬ್ಬರೂ ನೋಡತೊಡಗಿದರು. ಹಾಗೇ ಮಾತನಾಡುತ್ತ ಶಾಂತಾ ತನ್ನ ಬಗೆಗೆ ಪತ್ರಿಕೆಯಲ್ಲಿ ಬಂದೇ ಇಲ್ಲ ಎಂದು ವಾದಿಸಿದಳು..

"ಕಲ್ಯಾಣಿಯ ವಿಚಾರ ಬಂದಿದೆ."

"ಎಲ್ಲಿ ನೋಡೋಣ ಸಾರ್"

ಕಲ್ಯಾಣಿ ಅದನ್ನು ಕೈಗೆತ್ತಿಕೊಂಡಳು.

" ಹೆಚ್ಚಿಗೆ ಬರೆಯಲಾಗಲಿಲ್ಲ. ನನಗೇ ಪೂರ್ಣ ವಿಚಾರ ತಿಳಿದಿಲ್ಲ. "

" ಹೇಳುತ್ತೇನೆ ಸಾರ್, ಕೆಲವು ಚಿತ್ರಗಳನ್ನೂ ಕೊಡುತ್ತೇನೆ. "

" ಪತ್ರಿಕೆಗಳಲ್ಲಿ ಪ್ರಚಾರವಾದರೇನೇ ನಮ್ಮ ಮುಂದಿನ ಕಲಾಸೇವೆ ಖಚಿತವಾದೀತು ಕಲ್ಯಾಣಿ. ಶ್ರೀಕಂಠಯ್ಯನವರು ಬರೆದರೆ ಯಾವ ಪತ್ರಿಕೆಯೂ ಪ್ರಕಟಿಸದಿರುವುದಿಲ್ಲ. "

" ತುಂಬ ಚೆನ್ನಾಗಿ ಬರೆದಿದ್ದೀರಿ. "

" ಅದಕ್ಕೇ ಮೋಹಿನಿ ಫಿಲಂಸ್‌ನವರು ನಿನಗಾಗಿ ಕಾದಿದ್ದಾರೆ."

" ನೀವು ಮನೆಗೊಮ್ಮೆ ಬಂದರೆ, ಎಲ್ಲ ವಿಚಾರ ತಿಳಿಸುತ್ತೇನೆ. "

" ಆಗಲಮ್ಮ. "

" ನಮ್ಮ ವಿಚಾರವೂ ನೆನಪಿರಲಿ ಸಾರ್. "

" ನಿಮ್ಮೆಲ್ಲರ ಬಗೆಗೂ ಬರೆಯಬೇಕೆಂದಿದ್ದೇನೆ ಶಾಂತಾ. ಚಿತ್ರವೇನೇ ಆಗಲಿ. ನಿಮಗೆ ಎಲ್ಲಾದರೂ ಎಡೆ ಸಿಗಲೆಂಬುದೇ ನನ್ನ ಬಯಕೆ. "

" ನಿಮ್ಮ ಆಶೀರ್ವಾದ. "

" ಆಶೀರ್ವಾದದ ಮಾತಲ್ಲ. ನನ್ನ ಪಾಲಿನ ಕೆಲಸ. "

" ನಮಗೆ ಪಾರ್ಟುಕೊಡಿಸಿ ಸಾರ್. ನಾಲ್ಕು ಮಾತು ಆಡುತ್ತೇವೆ. ಇದೇನಿದು....ಸುಮ್ಮನೆ ದಾಸಿಯರಾಗಿ ಕೊಳೆಯುವುದು. "

" ಆ ಯೋಚನೆಯನ್ನು ಮಾಡಿದ್ದೇನೆ. "

ಮಾತುಕತೆಗಳನ್ನು ನಡೆಸುತ್ತಾ ಶಾಂತಾ ಶ್ರೀಕಂಠನ ವಿಶ್ವಾಸ ಗಳಿಸಿಕೊಂಡಳು. ಅವಳ ಜತೆಗೆ ಇತರರೂ ಯಾರ ತಂಟೆಗೂ ಬಾರದೆ ಮೂಲೆಯಲ್ಲಿದ್ದ ಆ ಸಾಹಿತಿಯ ಸ್ನೇಹ ಸಂಪಾದಿಸಿದರು.

ಶ್ರೀಕಂಠ ತನ್ನ ಪಾಲಿನ ಕೆಲಸ ನಿರ್ವಹಿಸುವ ಜೀವಿ. ಈ ಕಂಪೆನಿಯ ರಾಜಕೀಯದಿಂದ ದೂರವಿರಬೇಕೆಂದು ಅವನು ಸದಾ ದುಡಿಯುತಿದ್ದ. ತನ್ನ ಕರ್ತವ್ಯದಲ್ಲಿ ಯಾರಿಗೂ ಅನ್ಯಾಯವಾಗಬಾರದು, ತನ್ನಿಂದಾದ ಸಹಾಯವನ್ನು ಎಲ್ಲರಿಗೂ ನೀಡಬೇಕೆಂದು ಅವನು ಬಯಸಿದ್ದ. ಅವನಿಗಿದ್ದ ಗೆಳೆಯರು ಡೈರೆಕ್ಟರ್ ಸಾಮಿ ಮತ್ತು ಹರಿದಾಸರಾದ ಶಾಸ್ತ್ರಿಗಳು.

ಕಂಪೆನಿಯ ಪಾಲುಗಾರರು ಒಬ್ಬೊಬ್ಬರನ್ನು ಕಟ್ಟಿಕೊಂಡು ಅವರ ಬಗೆಗೆ ವಕಾಲತ್ತು ವಹಿಸುವದನ್ನು ಕಂಡು ಸಾಮಿ ತುಂಬ ರೋಸಿದ್ದ. ಆದರೂ ತಮಿಳು ನಾಡಿನಲ್ಲಿದ್ದು, ತಮ್ಮ ಕೈಹಿಡಿದ ಆನೆಮರಿಗಳೇ ಸುರ ಸುಂದರಿಯರೆಂದು ಸಾಧಿಸಿ ಅವರಿಗೇ ಮುಖ್ಯಪಾತ್ರ ಕೊಡಿಸುತಿದ್ದ ಚೆಟ್ಟಿ ಯಾರರನ್ನು ಬಲ್ಲ ಅವನಿಗೆ ಇದು ಆಶ್ಚರ್ಯವೆನಿಸಲಿಲ್ಲ.

"ಈ ಪ್ರಾಣಿಗಳಿಗೆ ಹೇಳಿಕೊಟ್ಟು ನನ್ನ ಉಸಿರು ಹೊರಟುಹೋಯಿತು" ಎಂದು ಶ್ರೀಕಂಠ ಸಿಟ್ಟುಸಿರಿಟ್ಟಾಗ, "ಸರ್ವಸ್ವವನ್ನೂ ಪಾದತಳ ದಲ್ಲಿ ಸುರಿದು ಭಿಕಾರಿಯಾದವನು ಬೇಡಿದರೂ ಇಂಬುಗೊಡಲಾರದ ಕರುಣೆ ತೋರದ ಇವರಿಗೆ ಎಲ್ಲಿ ದುಃಖ ಬಂದೀತು" ಎಂದು ಸಾಮಿ ಸಮಾಧಾನ ಹೇಳಿ ನಗುತ್ತಿದ್ದ. ಮರದ ಮುಖದ ನಟಿಯರ ಮುಖದಲ್ಲಿ ವಿವಿಧ ರಸ ಭಾವಗಳನ್ನು ಮೂಡಿಸುವ ಯತ್ನದಲ್ಲಿ ಹೋರಾಡುತಿದ್ದ ಅವರಿಗೆ ಅವರೇ ಬೆಂಬಲಿಗರು. ಆದರೂ ಶ್ರೀಕಂಠ ಯಾರ ಬಗೆಗೂ ಮೂಗು ಮುರಿಯು ವಂತೆ ಮಾತನಾಡುತ್ತಿರಲಿಲ್ಲ. ಕನ್ನಡ ನಾಡಿನಲ್ಲಿ ಕಲಾವಿದರಿಗೆ ಬರಗಾಲ ವಿಲ್ಲವಾದರೂ ಚಿತ್ರರಂಗದಲ್ಲಿ ಬರಗಾಲ ಬಂದಿದೆ. ಬಂದಿರುವ ನಾಲ್ಕು ಮಂದಿ ಒಳ್ಳೆ ಹೆಸರು ತರಲಿ: ಹೆಸರು ಉಳಿಸಿಕೊಳ್ಳಲಿ. ಇತರರು ಬರಲು ಎಡೆಯಾಗಲಿ ಎಂದಾತ ಬಯಸಿದ್ದ. ತನ್ನ ಪಾಲಿನ ಕೆಲಸ ತಾನು ನಿರ್ವಹಿ ಸುತ್ತೇನೆ. ಹಿಡಿದ ಚಿತ್ರ ಪೂರ್ಣವಾಗಲಿ; ಬರಬೇಕಾದ ಕಾಸು ಬರಲಿ— ನನಗೇಕೆ ಕಂಪೆನಿಯ ರಾಜಕೀಯ ಎಂದು ಸಾಮಿ ತನ್ನ ಪಾಡಿಗೆ ತಾನಿರು ತಿದ್ದ.

ಶ್ರೀಕಂಠನ ಪ್ರಚಾರವೈಖರಿಯಿಂದ ಕನ್ನಡ ನಾಡಿನ ಜನತೆ ಈ ಚಿತ್ರ ವನ್ನು ಇದಿರುನೋಡುವಂತಾಯಿತು. ನಟನಟಿಯರ ಬಗೆಗೂ ವಿಶೇಷ ಪರಿ ಚಯ ಲೇಖನಗಳನ್ನಾತ ಬರೆದ. ಕಲ್ಯಾಣಿಯ ಬಗೆಗೆ ಲೇಖನಗಳೂ ಚಿತ್ರ ಗಳೂ ಪ್ರಕಟವಾದುವು.

ಶಾಂತಾ, ರಮಾ, ಸುಬ್ಬಮ್ಮ ಮತ್ತಿತರರು ನಾನಾ ಬಗೆಯಾಗಿ ಶ್ರೀಕಂಠನನ್ನು ತಮ್ಮ ಬಲೆಗೆ ಸೆಳೆಯಲು ಯತ್ನಿಸಿದರು. ಅವನು ಎಲ್ಲ ವನ್ನೂ ತನ್ನ ಪಾಲಿನ ಕರ್ತವ್ಯವೆಂದು ನಿರ್ವಹಿಸುತಿದ್ದ; ಅವನಿಗೆ ಪ್ರತಿಫಲ ಬೇಕಾಗಿರಲಿಲ್ಲ. ಪರಿಣಾಮವಾಗಿ, ಇದೇಕೆ ಹೀಗೆ ಎಂಬ ಸಂದೇಹ ಬೆಳೆ

ಯಿತೇ ವಿನಾ ಅವನನ್ನು ಅರ್ಥಮಾಡಿಕೊಳ್ಳುವುದು ನಟಿಯರಿಗೆ ಸಾಧ್ಯವಾಗ ಲಿಲ್ಲ. ಶ್ರೀಕಂಠ ಗಂಡೇ ಅಲ್ಲ. ಅವನಿಗೆ ಧೈರ್ಯವಿಲ್ಲ. ಎಂದೇನೇನೋ ಅಭಿಪ್ರಾಯಕ್ಕೆ ಅವರು ಮುಟ್ಟಿದರು.

ಆದರೆ ಆಶಾವಾದಿಯಾಗಿದ್ದವಳು ಶಾಂತಾ. ಇನ್ನೂ ಯತ್ನಿಸಬೇಕು. ಈ ಚಿತ್ರ ಮುಗಿದ ಮೇಲೂ ಬೇರೆ ಚಿತ್ರದಲ್ಲಾದರೂ ಎಡೆ ಮಾಡಿಕೊಡಬಲ್ಲ ಪ್ರಭಾವ ಆತನಿಗಿದೆ. ಯಾವ ಚಿತ್ರ ತಯಾರಕನೇ ಆದರೂ ಅವನನ್ನು ಇದಿರು ಹಾಕಿಕೊಳ್ಳುವಂತಿಲ್ಲ. ಅಂತಹನ ಸ್ನೇಹ, ವಿಶ್ವಾಸ, ಅಗತ್ಯ ಎಂದಾಕೆ ನಂಬಿದ್ದಳು. ಅವಳಲ್ಲಿದ್ದ ಸಂದೇಹ ಒಂದೇ. ಶ್ರೀಕಂಠನ ಕಣ್ಣು ಕಲ್ಯಾಣಿಯ ಮೇಲೆ ನೆಟ್ಟಿರಬಹುದೆ? ಅವಳೇ ತನಗೆ ಸರಿ ಎಂದಾತ ನಂಬಿ ಕುಳಿತಿರಬಹುದೆ? ದೊರೆತರೆ ಅವಳು ಬೇಕು, ಇಲ್ಲವಾದರೆ ಯಾರೂ ಬೇಡವೆಂದಾತ ನಿರ್ಧರಿಸಿರಬಹುದೇ?

ಈ ಬಗೆಗೆ ಪರೀಕ್ಷಿಸಬೇಕೆಂದೂ ಶಾಂತಾ ಮುಂದಾದಳು.

ಕಲ್ಯಾಣಿಯ ಬಗೆಗೆ ಶ್ರೀಕಂಠನಿಗೆ ಅಪಾರ ಅಭಿಮಾನವಿತ್ತು. ಹುಟ್ಟು ಕಲಾವಿದೆ, ಸುಂದರಿ, ಸುಗುಣೆ. ಅಂತಹಳು ಚಿತ್ರಪ್ರಪಂಚಕ್ಕೆ ಅಗತ್ಯವಾದರೂ, ಆ ಗುಣಗಳನ್ನು ಇರಿಸಿಕೊಂಡಷ್ಟು ದಿನ ಅವಳ ಪ್ರಗತಿ ಸಾಧ್ಯವೇ ಎಂದೆನಿಸುತಿತ್ತು ಅವನಿಗೆ. ಹೇಗಾದರೂ ಅವಳಿಗೆ ಸಹಾಯ ನೀಡಬೇಕೆಂದು ಅವನು ಬಯಸಿದ್ದ. ಅವನ ಪ್ರಚಾರ ಲೇಖನಗಳು ಆ ಧ್ಯೇಯದಿಂದ ಪ್ರಕಟವಾಗಿದ್ದುವು.

ಶಾಂತಾ ಕಲ್ಯಾಣಿಯನ್ನೇ ಎಲ್ಲ ವಿಚಾರಗಳಿಗೂ ಮುಂದೆ ದೂಡಲು ಆರಂಭಿಸಿದಳು. ಯಾವ ವಿಚಾರ ಹೇಳಬೇಕಾದರೂ ಅವಳೇ ನಟಿಯರೆಲ್ಲರ ಪರವಾಗಿ ಶ್ರೀಕಂಠನ ಬಳಿಗೆ ಬಂದು ಮಾತನಾಡುತಿದ್ದಳು. ಅವಳ ಸೌಜನ್ಯ ಅವನ ಹೃದಯವನ್ನು ಸೂರೆಗೊಂಡಿತು. ಅವನ ನಡೆ, ನುಡಿ, ಪಾಂಡಿತ್ಯ, ಸೌಜನ್ಯ ಅವಳಲ್ಲಿ ಅದ್ಭುತ ಪರಿಣಾಮವನ್ನುಂಟುಮಾಡಿತು. ಅವನ ಬಗೆಗೆ ಅಭಿಮಾನ ಮೂಡಿಸಿತು. ತನ್ನ ಮುನ್ನಡೆಗೆ ದಾರಿಮಾಡಿ ಕೊಟ್ಟು, ತನ್ನ ಉತ್ಕರ್ಷೆಗೆ ಹಿಗ್ಗಿ, ತನ್ನ ಕೀರ್ತಿಗೆ ಹರ್ಷಿತನಾಗುವವನು ಈತನೆಂದು ಅವಳಿಗನಿಸಿತು.

ಕಂಪೆನಿಯ ಯಜಮಾನರಾದಿಯಾಗಿ ಎಲ್ಲರೂ ಅವನಿಗೆ ಹೆದರುತಿದ್ದರು. ಅವನನ್ನು ಕೆಣಕಬೇಡಿ, ಅವನ ಮಾತು ನಿಶ್ಚಿತ, ನಿರ್ಧಾರ ಕಠಿಣ ಎಂದು ಶಾಸ್ತ್ರಿಗಳೂ ಅಭಿಪ್ರಾಯಪಟ್ಟಿದ್ದರು. ಚಿತ್ರಪ್ರಪಂಚ ಶುಚಿಯಾಗಿರಬೇಕಾದರೆ, ಇಲ್ಲಿ ಸೂಳೆಗೇರಿ ಏರ್ಪಡುವುದು ನಿಲ್ಲಬೇಕಾದರೆ ಅಂತಹನೊಬ್ಬ ಬೇಕೇಬೇಕು. ಎಂದು ಅವರ ನಂಬುಗೆಯಾಗಿತ್ತು. ಇತರ ಚಿತ್ರಸಂಸ್ಥೆಯವರಿಗೂ ಶ್ರೀಕಂಠನ ಬಗೆಗೆ ಭೀತಿಪೂರಕವಾದ ಅಭಿಮಾನ. ಅವನನ್ನು ಹಿಂದಿನಿಂದ ನಾನಾ ರೀತಿಯಾಗಿ ಹೀನಯಿಸಿ ಆಡುತಿದ್ದ ಚಲನಚಿತ್ರ ತಯಾರಕರೂ ಇದಿರಲ್ಲಿ ಗೌರವಿಸುತಿದ್ದರು. ಕಲ್ಯಾಣಿ ಇದನ್ನೆಲ್ಲ ಅರಿತೇ ಅವನ ಬಗೆಗೆ ಗೌರವ ತಳೆದಿದ್ದಳು. ಇದೊಂದು ಖಡ್ಗ, ನಮ್ಮಂತಹರಿಗೆ ರಕ್ಷಣೆ ಎಂದವಳ ಮನ ಕೂಗಿ ಹೇಳುತಿತ್ತು. ಆದರೂ ಇವರ ಉಪಕಾರಕ್ಕೆ ತಾನೇನು ಉಪಕಾರಮಾಡಲಿ ಎಂದವಳಿಗೆ ತೋರದೆ ಇರಲಿಲ್ಲ.

ರಾಜು, ಪರಮಶಿವ ಶ್ರೀಕಂಠನ ಬಗೆಗೆ ಹೆದರುತಿದ್ದರು. ಅವನನ್ನು ಎತ್ತಿಹಾಕುವ ಯೋಚನೆಮಾಡಿಯೂ ಅವರು ನೋಡಿದ್ದರು. ಕಂಪೆನಿಗೆ ಬಂದು ನಿಂತಿದ್ದಾನೆ, ಎಲ್ಲ ವಿಚಾರವೂ ತಿಳಿದಿದೆ, ಕಥೆಯೂ ಅವನದೆ, ಇನ್ನು ಅವನನ್ನು ಮುಟ್ಟಲೂ ಸಾಧ್ಯವಿಲ್ಲವೆಂದು ಯಜಮಾನರೂ ಅಂದಿದ್ದರು. ಇದರಿಂದಾಗಿ ಅವನ ಬಗೆಗೆ ಯಾವ ಮಾತನ್ನೂ ಆಡದೆ, ಅವನಿಗೆ ಗೌರವ ಸಲ್ಲಿಸುತ್ತ, ಅವನಿಗೆ ತಿಳಿಯದಂತೆ ತಮ್ಮ ಆಟ ಆಡುತ್ತ ಅವರು ಸಾಗಿದ್ದರು.

ಕಲ್ಯಾಣಿಯ ಕೀರ್ತಿ ಬೆಳೆದು ಅವಳ ಬಗೆಗೆ ಇತರ ಚಿತ್ರಸಂಸ್ಥೆಯವರೂ ಆಸಕ್ತರಾಗಿದ್ದಾರೆ ಎಂದು ತಿಳಿದಾಗ ರಾಜು, ಶಾಂತಾ ಸಲಹೆ ಕೇಳದಿರಲಿಲ್ಲ. ರಾಜು ಎಲ್ಲ ರೀತಿಯಿಂದಲೂ ಕಲ್ಯಾಣಿಯನ್ನು ಒಲಿಸಿಕೊಳ್ಳಲು ಯತ್ನಿಸಿದ್ದ. ಆದರೆ, ನೃತ್ಯಕಲೆಯನ್ನೇ ಅರಿಯದ ಅವನ ಬಗೆಗೆ ಅವಳಲ್ಲಿ ಆದರ ಮೂಡಲಿಲ್ಲ, ಅಭಿಮಾನ ಹುಟ್ಟಲಿಲ್ಲ. ಈತ ಎಷ್ಟಿದ್ದರೂ ಬೊಗಳೆ, ಎಲ್ಲರಿಗೂ ಆಗುವಂತೆ ನಡೆದುಕೊಂಡು ದಿನ ದೂಡುತ್ತಾನೆ ಎಂದವಳಿಗೆ ತಿಳಿದಿತ್ತು. ಶಾಂತಾ, ರಾಜು ಕಡೆಯವಳು ಎಂದು ತಿಳಿದ ಮೇಲಂತೂ, ಅವನಿಗೆ ಕೆಲಸ ದೊರೆತುದೂ ಅವಳಿಂದಾಗಿ ಎಂದರಿತು, ಅವನ ಬಗೆಗೆ ವಿಶ್ವಾಸವು ಅಳಿಯಿತು. ಆದರೂ, ತನ್ನಿಂದ ಯಾರಿಗೂ ಅಪಕಾರವಾಗಬಾರದು ಎಂಬ ದೃಷ್ಟಿಯಿಂದಾಕೆ ಅವನ ಬಗೆಗೆ ಯಾವ ವಿರುದ್ಧ ಮಾತನ್ನೂ ಆಡದಿದ್ದಳು.

ಚಿತ್ರರಚನೆಯ ಕಾರ್ಯದ ಬಗೆಗೆ ಆರಂಭದಲ್ಲಿದ್ದ ಉತ್ಸಾಹ, ಅವಸರ ಎಲ್ಲವೂ ಮಾಯವಾದಂತಿತ್ತು. ತಿಂಗಳು ಎರಡಾಯಿತು, ಈಗ ಮೂರೂ ಆಯಿತು. ಆಗೊಮ್ಮೆ ಈಗೊಮ್ಮೆ ಎಂಬಂತೆ ಕಳೆದ ಎರಡು ತಿಂಗಳಲ್ಲಿ ಹತ್ತು ದಿನಗಳ ಶೂಟಿಂಗ್ ನಡೆದಿತ್ತು. ಪಾತಾಳಲೋಕದ ಸೆಟ್ಟಿಂಗ್ ಹಾಕಬೇಕು, ಅದು ನಿಧಾನವಾಗುತ್ತದೆ ಎಂದು ಸಾಮಿ ಚಿತ್ರದ ಇತರ ಭಾಗಗಳನ್ನು ಮುಗಿಸಲು ಹವಣಿಸುತಿದ್ದನಾದರೂ, ಅವನಿಗೆ ಸಹಕಾರಕ್ಕಿಂತ ಅಡಚಣೆಗಳೇ ಅಧಿಕವಾಗಿದ್ದುವು. ನಾಗರತ್ನ ಊರಿಗೆ ಹೋಗಿಬರುತ್ತೇನೆಂದು ಹದಿನೈದು ದಿನ ಹೊರಟುಹೋದಳು. ನಾಟಕ ಕಂಪೆನಿಯ ನಟರು ಹೇಳಿ ಕಳಿಸಿದೊಡನೆ ಹಾಜರಾಗುತ್ತೇವೆ ಎಂದು ತಮ್ಮ ಕಂಪೆನಿಯನ್ನು ಸೇರಿದರು. ಪರಮಶಿವ ಮತ್ತು ರಾಜು ಡ್ಯಾನ್ಸ್ ಹುಡುಗಿಯರನ್ನು ಕುಣಿಸುತ್ತ ಕಾಲ ಕಳೆದರು. ಕಲ್ಯಾಣಿಗೆ ಮೊದಲಿದ್ದ ಉತ್ಸಾಹ ಅಳಿಯುತ್ತ ಬಂತು.

ಆರಂಭದಲ್ಲಿ ಎಲ್ಲವೂ ಹೊಸತು, ಹೊಸ ವಾತಾವರಣ, ಹೊಸ ಗೆಳತಿಯರು. ಅದರಿಂದ ತನ್ನನ್ನೇ ತಾನು ಮರೆತಿದ್ದಳು ಅವಳು. ಈಗ ಎಲ್ಲವೂ ಹಳೆಯದಾಯಿತು. ಹೊಸ ಮಾತುಗಳೂ ಚಟುವಟಿಕೆಗಳೂ ಇಲ್ಲವಾದುವು. ಅದೇ ಗೆಳತಿಯರು, ಅದೇ ಮಾತು, ಅದೇ ಸುತ್ತಾಟ, ಸಿನಿಮಾ ಕಾರ್ಯಕ್ರಮಗಳು. ಶ್ರೀಕಂಠನ ಸ್ನೇಹವಾದುದರಿಂದ ಕಂಪೆನಿಯ ಮನೆಯಲ್ಲಿ ಒಂದರ್ಧತಾಸಾದರೂ ಅವಳಿಗೆ ವಿಚಾರ ಪ್ರಚೋದನೆಗೆ ಎಡೆಯಿತ್ತು. ಕಲೆ ಸಾಹಿತ್ಯದ ಬಗೆಗೆ, ಚಿತ್ರಪ್ರಪಂಚದ ಬಗೆಗೆ ಅವನೊಡನೆ ಮಾತನಾಡುತಿದ್ದಳು, ಚರ್ಚಿಸುತಿದ್ದಳು. ಅವನೂ ತಾನಾಗಿ ಉತ್ಸಾಹ ಪಡೆದು ಮಾತನಾಡಿ ಮುನ್ನಡೆಯುವವನಲ್ಲ. ಇವಳು ಮಾತನಾಡಿದರೇನೇ ಉತ್ತರವೀಯುತ್ತಾನೆ. ಮಾತು ಆರಂಭಿಸುವುದೇ ಅಪರೂಪ; ಆರಂಭವಾದರೆ ಅದು ಮಹಾಪೂರ.

ಮನೆಯಲ್ಲೂ ಅಷ್ಟೆ. ಅದೇ ಗೆಳೆಯ–ಅದೇ ಪ್ರಣಯಪ್ರೇಮ, ಅದೇ ನಿತ್ಯದ ಕಾರ್ಯಕ್ರಮ. ಒಂದೇ ಬಗೆಯ ಶಿಸ್ತಿನ ನಿರ್ದಿಷ್ಟ ಬಾಳನ್ನು ಬಾಳಿದ್ದ ಕಲ್ಯಾಣಿಗೆ ಹಿಂದೆ ಅದೇ ರೂಢಿಯಾಗಿತ್ತು. ಅದು ಬದಲಾಗಿ, ಶಿಸ್ತಿನ ಅಂಕೆಯ ಕಟ್ಟು ಸಡಿಲಾಗಿ ಅವಳು ನಡೆದಾಗ ವೈವಿಧ್ಯತೆಯೇ ಜೀವನವೆಂದು ಅರಿತುಕೊಂಡಳು. ಈಗ ಒಂದೇ ರೀತಿಯ ಜೀವನ ಅವಳಿಗೆ

ಹಿಡಿಸದು. ಅದು ಬೇಸರ ತರುತಿತ್ತು. ನಾವೀನ್ಯತೆ ವೈವಿಧ್ಯತೆ ಬೇಕು. ಇಂದು ನೃತ್ಯ, ನಾಳೆ ಅಭಿನಯ, ನಾಡಿದ್ದು ಸಿನೆಮಾ, ಮತ್ತೊಂದು ದಿನ ಪ್ರಯಾಣ ಹೀಗೆ ದಿನ ದಿನ ಉತ್ಸಾಹದ ಕಟ್ಟೊಡೆದು ಬಾಳಬೇಕೆಂದಾಕೆ ಬಯಸಿದಳು. ಈ ದಾರಿಯಲ್ಲಿ ಚಿತ್ರರಂಗದ ನಟಿಯರೆಲ್ಲ ಅವಳಿಗೆ ಬೆಂಬಲ ವಾದರು. ಆದರೂ, ಈ ಉತ್ಸಾಹದ ಮುಸ್ಸಿ, ಹುಮ್ಮಸಿನ ಹರಿಣ ಇನ್ನೂ ಚಟುವಟಿಕೆ ಬಯಸಿತು.

ಶೂಟಿಂಗ್ ನಿಧಾನವಾದಂದಿನಿಂದಲೂ, ಇಂದು ಶ್ರೀರಂಗಪಟ್ಣ, ನಾಳೆ ಚಾಮುಂಡಿಬೆಟ್ಟ, ನಾಡಿದ್ದು ಕನ್ನಂಬಾಡಿ, ಮತ್ತೊಂದು ದಿನ ಸೋಮನಾಥ ಪುರ ಎಂದುಕೊಂಡು ಗೆಳೆಯರು 'ಟ್ರಿಪ್' ಹೋಗುತಿದ್ದರು. ಕಲ್ಯಾಣಿ, ಶಾಂತಾ, ರಮಾ ಇವರೇ ನಾಯಕಿಯರಾಗಿ ಮುನ್ನುಗ್ಗುತಿದ್ದರು. ರಾಜು, ಪರಮಶಿವ ಇವರ ಬೆಂಬಲಕ್ಕೆ ನಿಂತು ತಮ್ಮ ಚಪಲ ತೀರಿಸಿಕೊಳ್ಳುತ್ತಿದ್ದರು. ಕಲ್ಯಾಣಿ ಈ ಎಲ್ಲ 'ಟ್ರಿಪ್' ಗಳಲ್ಲೂ ತಾನು ಮಾತ್ರ ಬೇರೆ—ಎಂದು ತಿಳಿದು ಕೊಳ್ಳುವಂತಾಯಿತು. ಎಲ್ಲ ಹುಡುಗಿಯರಲ್ಲೂ ಬಳಕೆಯಾಗಿ ರಾಜು, ಪರಮಶಿವ ಇದ್ದರು. ಅವರೊಡನೆ ನಗೆಯಾಡಿ ಮಾತನಾಡಿ ಅವರು ಸಾಗು ತಿದ್ದರು. ಕಲ್ಯಾಣಿಗೆ ಒಪ್ಪಿದವರು ಅಲ್ಲಿಲ್ಲ; ಅವರು ಕೆಣಕಿ ಆಡುವ ಮಾತಿಗೆ ಆಕೆ ಉಪಾಯವಿಲ್ಲದೆ ಉತ್ತರವೀಯುತಿದ್ದಳು. ನೀನೂ ಅವರೊ ಡನೆ ಸೇರಿಕೊಳ್ಳು ಎಂದೂ; ಸೇರಿದರೆ ಕೆಡುತ್ತಿ ಎಂದೂ ಮನ ಕೂಗಿ ಹೇಳಿ ಅವಳನ್ನು ಕೆಣಕುತಿತ್ತು.

ಕಲ್ಯಾಣಿ ತನ್ನ ಈ ಎಲ್ಲಾ ವಿಹಾರಗಳಲ್ಲಿ ಕೃಷ್ಣನೂ ಜತೆಗಿರ ಬೇಕೆಂದು ಬಯಸಿದ್ದಳು. ಆದರೆ, ಕಂಪೆನಿಯವರ ಜತೆಗೆ ಬೆರೆಯಲು ಅವನು ಇಷ್ಟಪಡಲಿಲ್ಲ. ನಾವಿಬ್ಬರೇ ಹೋಗೋಣ, ಆ ಸಂತೆಯಲ್ಲಿ ನಾನೂ ಸೇರುವುದಿಲ್ಲ ಎಂದಾತ ಖಚಿತವಾಗಿ ತಿಳಿಸಿದ. ಕಲ್ಯಾಣಿ ಈ ಉತ್ತರದಿಂದ ನೊಂದುಕೊಂಡಳು. ಯಾವ ರೀತಿಯಿಂದಲೂ ಈತ ತನ್ನ ಜತೆಗೂಡಿ ನಲಿದು, ಮುನ್ನಡೆಯಲು ಮುಂದಾಗುತ್ತಿಲ್ಲ, ತನ್ನ ಆನಂದ ಉತ್ಸಾಹ ಉತ್ಕರ್ಷ ಸಹಿಸುವುದಿಲ್ಲ, ಎಂದಾಕೆ ಅಪಾರ್ಥಮಾಡಿಕೊಳ್ಳಲೂ ಕೃಷ್ಣನ ಅನಾಸಕ್ತಿ ಕಾರಣವಾಯಿತು. ಕೃಷ್ಣ ಮನೆಬಿಟ್ಟು ಹೊರಡುವುದಿಲ್ಲ, ಹೊರ ಟರೂ ಪೇಟೆಗೆ ಹೋಗಿ ಸುತ್ತಾಡಿ ಬರುತ್ತಾನೆ. ಕಲ್ಯಾಣಿ ಸಿನೆಮಾ

ನೋಡೋಣ ಅಂದಾಗ ಮಾತ್ರ ಅವರು ಜತೆಯಾಗಿ ತಿರುಗಾಡಿಕೊಂಡು, ಸಿನಿಮಾ ನೋಡಿ ಹಿಂತಿರುಗುತಿದ್ದರು. ಇದು ನನ್ನದು, ಅವಳು ನನ್ನವಳು, ನನ್ನವಳೇ ಆಗಿರಬೇಕು ಎಂಬ ಅವನ ಮನೋಭಾವಕ್ಕೆ ಕಲ್ಯಾಣಿಯ ಚಟುವಟಿಕೆ ಆಘಾತ ಉಂಟುಮಾಡಿತ್ತು. ಅವಳು ರಾಜು, ಪರಮಶಿವ ತಮ್ಮ ಕೂಟದಲ್ಲಿದ್ದರು, ಅವರು ಹಾಗಂದರು, ಇವರು ಹೀಗೆಂದರು ಎಂದು ವರದಿ ಒಪ್ಪಿಸುತಿದ್ದಾಗಲೆಲ್ಲ, ಸಂದೇಹ ಬೆಳೆಸಿಕೊಳ್ಳುತಿದ್ದ. ಎಂದಾದರೊಂದು ದಿನ ಈಕೆ ತನ್ನ ಕೈ ಬಿಡುತ್ತಾಳೆ ಎಂಬ ಸಂಶಯ ಅವನಲ್ಲಿ ದಿನೇ ದಿನೇ ಬೆಳೆಯಿತು. ನನ್ನ ಬಾಳು ಇವನು ಒಪ್ಪುವುದಿಲ್ಲ ಎಂಬ ಸಂದೇಹ ಕಲ್ಯಾಣಿಯ ಮನದಲ್ಲೂ ಮೂಡಿತು. ಇಬ್ಬರೂ ಅತ್ಯಂತ ಹತ್ತಿರವಾಗೇ ಇದ್ದರೂ ಅವರ ಮನಸ್ಸು ಮಾತ್ರ ದೂರವಾಗುತ್ತಲೇ ಇದ್ದುವು.

ಚಿತ್ರದ ಕೆಲಸವಿಲ್ಲದಾಗಲಾದರೂ ಮನೆಯಲ್ಲಿ ನೃತ್ಯಾಭ್ಯಾಸ ನಡೆಸಬೇಕೆಂದು ಕೃಷ್ಣರಾವ್ ಕಲ್ಯಾಣಿಯನ್ನು ಒತ್ತಾಯಪಡಿಸುತಿದ್ದ. ಅಭ್ಯಾಸವಿಲ್ಲದಿದ್ದರೆ ಮುಂದೆ ತೊಡಕಾಗಬಹುದು, ದೊರೆತ ಸ್ಥಾನ ಕೀರ್ತಿಗಳೂ ಅಳಿಯಬಹುದು, ಬಳುಕುವ ಈ ದೇಹ ಸ್ಥೂಲವಾಗಬಹುದು ಎಂದಾತ ವಿವಿಧ ರೀತಿಯಿಂದ ಹೇಳಿದ್ದ. ಆದರೆ, ಕಲ್ಯಾಣಿಗೆ ಅದೀಗ ಬೇಕಾಗಿರಲಿಲ್ಲ. ಕಂಪೆನಿ ಮನೆಯಲ್ಲಿ ಅಭ್ಯಾಸಮಾಡುತ್ತೇನೆ ಎಂದು ಜಾರಿಕೊಳ್ಳಲು ಯತ್ನಿಸುತಿದ್ದಳು.

" ಅದು ಚಿತ್ರಕ್ಕೆ ಅಗತ್ಯವಾದ ನೃತ್ಯ. ನೀನು ಇದುವರೆಗೆ ಕಲಿತುದು ಈಗ ನಾಲ್ಕು ತಿಂಗಳಿಂದ ಮರೆತುಹೋಗಿರಬಹುದು. "

" ಹತ್ತು ವರ್ಷದ ಅಭ್ಯಾಸ ಹೇಗೆ ಮರೆಯುತ್ತೆ. ಯಾವ ನೃತ್ಯ ಬೇಕಾದರೂ ಅಭಿನಯಿಸಬಲ್ಲೆ. "

" ನಿಜ. ಆದರೆ ಆ ನಯ ನಾಜೂಕು, ಬಳುಕು ಬಾಗು, ಅಭಿನಯ ಭಾವ ಒರಟಾಗಬಾರದು. ಅಭ್ಯಾಸವಿಲ್ಲದಿದ್ದರೆ ಅದು ನೈಜತೆ ಕಳೆದುಕೊಳ್ಳುತ್ತದೆ. "

" ನಾನೇನೂ ಗಂಡಸಿನಂತೆ ಕೆಲಸಮಾಡುತ್ತಿಲ್ಲ. ಹೆಣ್ಣಿನ ಅಂಗಾಂಗ ಳು ಸದಾ ಮೃದು. "

" ಅಲರಿಪು, ಸ್ವರಜತಿ, ವರ್ಣಗಳು ಮರೆತುಹೋಗುತ್ತವೆ—ಅಭ್ಯಾಸ ವಿಲ್ಲದಿದ್ದರೆ. "

" ನನಗಂತೂ ಮರೆಯುವುದಿಲ್ಲ. ನಿತ್ಯ ಉರುಹೊಡೆಯುವುದೆಂದರೆ ನನಗಂತೂ ಆಗದು. "

" ಭರತನಾಟ್ಯ ಉರುಹೊಡೆಯಬೇಕಾದ ನೃತ್ಯ. ನಿತ್ಯ ಅಭ್ಯಾಸ ಅಗತ್ಯ. ಯಂತ್ರದಂತೆ ಕಲಾವಿದ ಅದರ ಅಭ್ಯಾಸ ನಡೆಸಬೇಕು. ಇಲ್ಲ ವಾದರೆ ಹತ್ತು ವರ್ಷ ಕಲಿತವನೂ ಒಂದು ವರ್ಷ ಸುಮ್ಮನಾದರೆ ಮತ್ತೆ ಎಡವಬೇಕಾಗುತ್ತದೆ. "

" ಆಗಲಿ....ಅಭ್ಯಾಸಮಾಡುತ್ತೇನೆ " ಎಂದು ಕಲ್ಯಾಣಿ ಆ ಮಾತುಗ ಳನ್ನು ಮುಗಿಸಿಬಿಡುತಿದ್ದಳು. ಹೆಚ್ಚು ಒತ್ತಾಯಪಡಿಸಿ ಬೆದರಿಸಿದರೆ ಅತ್ತು ಬಿಡುತಿದ್ದಳು. ಅಂತೂ ಕೃಷ್ಣನ ಸಲಹೆಗೆ ಮಾತ್ರ ಮಾನ್ಯತೆ ದೊರೆಯಲಿಲ್ಲ. ಕೆಲವೊಮ್ಮೆ ಅವನು ರೇಗುತ್ತಾನೆ ಎಂದುಕೊಂಡು ಹಳೆಯ ನೃತ್ಯಗಳನ್ನೆಲ್ಲ ಅಭಿನಯಿಸುತಿದ್ದಳು. ಅಭಿನಯದಲ್ಲಿ ತಾಳದಲ್ಲಿ ತಪ್ಪಿದಾಗ ಕೃಷ್ಣ ತನ್ನ ಮಾತು ಸರಿ ಎಂದು ವಾದಿಸುತಿದ್ದ ; ಕಲ್ಯಾಣಿ ಸೋಲನ್ನೊಪ್ಪಲಾರದೆ ಇದಿ ರಿಸಿ, ಹೋರಾಡಿ, ಕೊನೆಯದಾಗಿ ಕಣ್ಣೀರಿಡುತಿದ್ದಳು. ಅಲ್ಲಿಗೆ ಅವರ ವಿವಾದ ಬಗೆಹರಿಯುತಿತ್ತು. ಈ ಪರಿಸ್ಥಿತಿಯಿಂದ ಬೇಸರಗೊಂಡ ಕೃಷ್ಣ ನೃತ್ಯದ ಬಗೆಗೆ ಅವಳನ್ನು ಒತ್ತಾಯಿಸಿ ಕಾಡುವುದನ್ನೂ ನಿಲ್ಲಿಸಿದ. " ನರ್ತಕಿ ನೃತ್ಯ ನಿಲ್ಲಿಸಿದರೆ ಬಸಿರಾಗುತ್ತಾಳೆ. ಅವಳಿಗೆ ಮೈ ಬರುತ್ತದೆ. ಆನೆಮರಿ ಯಾಗುತ್ತಾಳೆ. " ಎಂದು ಪರಿಹಾಸ್ಯಮಾಡಿ ಅವಳು ಆಗಾಗ ಒಂದರ್ಧಗಂಟೆ ಯಾದರೂ ನರ್ತಿಸುವಂತೆ ಮಾಡುತಿದ್ದ.

ಕೃಷ್ಣರಾಯ ಮಾತ್ರ ತನ್ನ ಸಂಗೀತಾಭ್ಯಾಸವನ್ನು ಮರೆಯಲಿಲ್ಲ. ಕಲ್ಯಾಣಿಯ ವಿಚಾರವಾಗಿ ಯೋಚಿಸುತ್ತ, ತಾನು ಅಭ್ಯಾಸ ಬೆಳೆಸಬೇಕು, ತನ್ನ ದಾರಿ ನಿಶ್ಚಿತಗೊಳಿಸಬೇಕು, ಕಲ್ಯಾಣಿ ಮಾಡುತ್ತಿರುವ ತಪ್ಪು ಮಾಡ ಬಾರದೆಂದು ಅವನು ನಿರ್ಧರಿಸಿ ಪ್ರತಿದಿನವೂ ಗಂಟೆಗಟ್ಟಲೆ ಅಭ್ಯಾಸ ನಡೆಸು ತ್ತಲೇ ಇದ್ದ. ಟ್ಯೂಷನ್‌ಗಳನ್ನು ಹೆಚ್ಚಿಸಿಕೊಂಡ. ಸುಂದರನೊಬ್ಬನೇ ಅವ ನನ್ನು ಅರ್ಥಮಾಡಿಕೊಂಡು, ಅವನ ಜತೆಗೆ ನಿಂತು, ದುಡಿಯುವವನಾದ.

ಸುಂದರನ ಬಗೆಗೆ ಬೆಳೆದಿದ್ದ ಕಲ್ಯಾಣಿಯ ಪ್ರೀತಿಯೂ ಕಡಿಮೆಯಾಗುತ್ತ ಬಂತು. ಅವಳು ಕಂಪೆನಿಯಲ್ಲಿ ಯಾರೊಡನೆ ಮಾತನಾಡುತಿದ್ದಳು, ಎಲ್ಲಿಗೆ ಹೋಗಿದ್ದಳು, ಯಾರೆಲ್ಲ ಜತೆಯಲ್ಲಿದ್ದರು ಎಂಬ ಬಗೆಗೆ ಆತ ಕೃಷ್ಣನಿಗೆ ವರದಿ ಒಪ್ಪಿಸುತಿದ್ದ. ಏನೇ ಆಗಲಿ ಗುರುವಿಗೆ ದ್ರೋಹ ಬಗೆಯಬಾರದು ಎಂಬುದು ಅವನ ಚಿತ್ತ. ಜತೆಗೆ ಹೆಣ್ಣು ಇಷ್ಟು ಸ್ವಾತಂತ್ರ್ಯದಿಂದ ನಕ್ಕು ನಲಿದು, ಎಲ್ಲರೊಡನೆಯೂ ಬೆರೆತು, ಹರಟುತ್ತಿರುವುದನ್ನು ಅವನೂ ನೋಡಿದವನಲ್ಲ. ಎಂತಲೇ—"ಕತೆ ಬರೆಯುವವರ ಕೋಣೆಯಲ್ಲಿ ಅವರೊಡನೆ ಮಾತನಾಡುತ್ತ ಕುಳಿತಿದ್ದರು." "ಚಿತ್ರ ತೆಗೆಯುವಲ್ಲಿ ಹೆಂಗುಸರ ಮಧ್ಯೆ ಹರಟೆಹೊಡೆಯುತಿದ್ದರು. ಡ್ಯಾನ್ಸ್ ಮಾಸ್ತರರೂ ಅಲ್ಲೇ ನಗುತ್ತ ಇದ್ದರು." ಎಂದು ಇದ್ದುದನ್ನು ಇದ್ದಂತೆ ವರದಿ ಒಪ್ಪಿಸುತಿದ್ದ. ಕಲ್ಯಾಣಿಯನ್ನು ಮಾಸ್ತರ್ ತಿದ್ದಬೇಕು ಎಂಬುದು ಅವನ ಬಯಕೆ. ಅವರು ಅವಳಿಗೆ ಬುದ್ಧಿ ಹೇಳಿ ಸೋತಾಗ ಅವನೂ ತುಂಬ ನೊಂದುಕೊಳ್ಳುತಿದ್ದ.

ಮನೆ ಕೆಲಸ, ಸಂಗೀತಾಭ್ಯಾಸ ಇವುಗಳ ಜತೆಗೆ ಕಲ್ಯಾಣಿ ಶೂಟಿಂಗ್ ನೋಡಲೆಂದಾಗಲೀ ಶೂಟಿಂಗ್‌ಗಾಗಿಯಾಗಲೀ ಹೋದಾಗ ಕಾಫಿ ಊಟ ಹೊರುವುದು ಅವನ ಕೆಲಸವಾಗಿತ್ತು. ಆಗಾಗ ಮಾಸ್ತರರೂ, ಅವಳನ್ನು ನೋಡಿ ಬೇಗನೇ ಬರಬೇಕೆಂದು ತಿಳಿಸು ಎಂದು ಅವನನ್ನು ಕಂಪೆನಿ ಮನೆಗೆ ಕಳುಹಿಸಿಕೊಡುತಿದ್ದರು. ಸುಂದರ ವಿಧೇಯನಾಗಿ ತನ್ನ ಕೆಲಸವನ್ನು ನಿರ್ವಹಿಸುತಿದ್ದ; ಅಭ್ಯಾಸ ಮುಂದುವರಿಸುತಿದ್ದ. ಮಾಸ್ತರರು ಹಾಡುವಾಗ ತಬಲಾ ಠೇಕ ಹಿಡಿಯುವುದೂ, ಅವನಿಗೆ ಅನುಭವವಾಯಿತು. ತಂಬೂರಿ ಮಿಾಟುವುದು ಗೊತ್ತಾಯಿತು.

ಶ್ರೀಕಂಠನ ಬಗೆಗೆ ಕಲ್ಯಾಣಿಯ ಒಲವು ಅಧಿಕವಾಗುತಿದ್ದಂತೆ ಅವನು ಮನೆಗೆ ಬರುವುದೂ ಆರಂಭವಾಯಿತು. ಆದರೆ, ಕಲ್ಯಾಣಿಯ ದೂರ ದೃಷ್ಟಿಯ ಅರಿವಿಲ್ಲದ ಶ್ರೀಕಂಠ, ಕೃಷ್ಣನ ಗೆಳೆಯನಾದ, ಅವನ ಸಂಗೀತವನ್ನು ಮೆಚ್ಚಿಕೊಂಡ. ಕಂಪೆನಿಯಲ್ಲಿ ಕೆಲಸವಿಲ್ಲದಾಗಲೆಲ್ಲ ಅವನು ಕಲ್ಯಾಣಿಯ ಮನೆಯಲ್ಲಿ ಕೃಷ್ಣನ ಜತೆಗಿರುತಿದ್ದ. ಆ ಹಾಡು ಹಾಡಿ; ಈ ರಾಗ ಹೇಗಿದೆ; ಒಂದು ತುಮ್ರಿ ಕೇಳೋಣ; ಖಯಾಲ್ ಕೇಳಿಸಿ–ಎಂದು ಪೀಡಿಸಿ ಸಂಗೀತದ ಬಗೆಗೆ ಚರ್ಚಿಸಿ ಕಾಲಕಳೆಯುತಿದ್ದ. ಕೃಷ್ಣರಾಯನಿಗೂ ಅವ

ನನ್ನು ಅರ್ಥಮಾಡಿಕೊಳ್ಳುವ ಕಲಾ ಪ್ರೇಮಿಯೊಬ್ಬ ದೊರೆತನೆಂದು ಆನಂದವಾಗಿತ್ತು. ಅವನ ಬಗೆಗೂ ಶ್ರೀಕಂಠ ಪತ್ರಿಕೆಗಳಲ್ಲಿ ಬರೆದ. ಅವನ ಸಂಗೀತಕ್ಕೆ ತಲೆದೂಗಿದ.

ಕಲ್ಯಾಣಿ ವಾಸ್ತವವಾಗೇ ಶ್ರೀಕಂಠನ ಮತ್ತು ಕೃಷ್ಣನ ಸ್ನೇಹದಿಂದ ಬೇಸರಗೊಂಡಳು. ತನ್ನ ಬಗೆಗೆ ಇವನೇನಾದರೂ ಹೇಳುತ್ತಾನೋ, ಇದರಿಂದ ಕೃಷ್ಣ ಅಪಾರ್ಥ ಕಲ್ಪಿಸುತ್ತಾನೋ ಎಂಬ ಭೀತಿ ಅವಳಲ್ಲಿ ಮೊಳಗಿತು. ಆದರೂ ಅದನ್ನು ತೋರಗೊಡದೆ ಅಭಿನಯಿಸುವ ಪ್ರಾಯ ಅವಳದು. ಕೃಷ್ಣ ಕಲ್ಯಾಣಿ, ಶ್ರೀಕಂಠ ಆತ್ಮೀಯ ಗೆಳೆಯರಾದರು. ಒಂದೇ ಮನೆಯವರಂತೆ ನಡೆದುಕೊಂಡರು. ಇಬ್ಬರಿಗೂ ಚಿತ್ರರಂಗದ ಹಿನ್ನೆಲೆಯ ಕತೆ ಹೇಳಿ ವಿವೇಕ ಹೇಳುವ ಅಣ್ಣನಾದ ಶ್ರೀಕಂಠ. ಕಲ್ಯಾಣಿ ಎಚ್ಚರಿಕೆಯಿಂದ ನಡೆಯಬೇಕಾದ ಸಂದರ್ಭ ಎಂದುಕೊಂಡು ತನ್ನ ಬಗೆಗೆ ತಾನೇ ಹಿಡಿತವಿರಿಸಿಕೊಂಡಳು.

ಶ್ರೀಕಂಠ ಗೆಳೆಯನಾದ ಮೇಲೆ ಕೃಷ್ಣನ ದುಗುಡವೆಷ್ಟೋ ಕಡಿಮೆಯಾಯಿತು. ತನ್ನ ಹೃದಯದಲ್ಲಿ ತುಂಬಿದ ಅಳಲನ್ನೂ ಆಶಯಗಳನ್ನೂ ಹೇಳಲು ಅವನಿಗೊಬ್ಬ ಆತ್ಮೀಯ ದೊರೆತ. ತನ್ನ ಬಗೆಗೆ ಆಸಕ್ತಿಯಿಂದ ಕೇಳಿ ತಿಳಿದುಕೊಳ್ಳುವವನೂ ದೊರೆತ. ಕಲ್ಯಾಣಿಗೆ ಇದೆಲ್ಲ ತಿಳಿದಿದೆ; ಹೆಚ್ಚಿನ ವಿಚಾರ ಬೇಕಾಗಿಲ್ಲ. ಅವಳಿಗೆ ಬೇಕಾದುದನ್ನು ಕೊಡಬಲ್ಲವನು ಆತ; ಅದನ್ನಾತ ಕೊಟ್ಟಿದ್ದಾನೆ. ಆ ಬಯಕೆ ಈಡೇರಿಸಬಲ್ಲವರು ಯಾರೂ ದೊರೆಯದಿದ್ದಾಗ ಸುಲಭವಾಗಿ ಕೈಗೆಟಕಿದವನು ಆತ. ಈಗ ಅದು ಕಷ್ಟವಲ್ಲ, ತುಂಬಿಗಳು ತುಂಬಿದಲ್ಲಿ ನಿಂತಿದೆ ಈ ಹೂವು. ಅವನದು ಅಂಥ ಬಾಳಲ್ಲ. ಇಂದೂ ಅವನಿಗೆ ಆ ದಾರಿ ಭೀತಿಯುಂಟುಮಾಡುತಿತ್ತು. ತನ್ನವಳು ಒಬ್ಬಳು ಬೇಕು; ಅವಳು ಇವಳೇ. ಗಂಡು ಹೆಣ್ಣಿನ ಬೇಟೆಯನ್ನು ಹೆಣ್ಣು ಗಂಡಿನ ಬೇಟೆಯನ್ನು ಬಯಸಿ ಮುನ್ನಡೆದರೆ ಜೀವಮಾನವೆಲ್ಲ ಆ ಬೇಟೆಯಲ್ಲೇ ಮುಗಿದೀತು. ಬೇರಾವುದರ ಬಯಕೆಗೂ ಎಡೆ ಇರಲಾರದು ಎಂದು ತಿಳಿದವನು ಕೃಷ್ಣ. ಅವನ ಬೇಟೆ ಇಂದು ಸಂಗೀತ. ಅದರ ಬೆನ್ನು ಹತ್ತಿ ಹೊರಟಿದ್ದಾನೆ. ಹೆಣ್ಣು ಬೇಕಾಗಿತ್ತು, ಅದು ದೊರೆತಿದೆ. ಅದು

ಕೈಬಿಡಲಾರದೆಂಬ ನಂಬಿಕೆ ಅವನಿಗಿದೆ. ಹಾಗೆ ಕೈ ಬಿಟ್ಟರೆ ಇನ್ನೊಂದರ ಬೆನ್ನು ಹತ್ತುವದರಲ್ಲಿ ಸಂಗೀತವನ್ನೇ ಮರೆಯಲು ಅವನು ಸಿದ್ಧನಾಗಿರಲಿಲ್ಲ.

ಅವನ ಹೃದಯವರಿತಿದ್ದ ಶ್ರೀಕಂಠನಿಗೆ ವಾಸ್ತವವಾಗೇ ಕೃಷ್ಣ ಆಕಾಶ ವಾಣಿಯಲ್ಲಿ ಹಾಡುತ್ತಿರುವ ವಿಚಾರವೂ ತಿಳಿಯಿತು. ಟ್ಯೂಶನ್ ಬಗೆಗೂ ಅವನು ತಿಳಿದುಕೊಂಡ. ಅವನಿಂದ ಸುದ್ದಿ ಕಲ್ಯಾಣಿಗೆ ತಿಳಿಯಿತು. ವಿಚಾರ ತಿಳಿದಾಗ ತನಗೆ ಅದುವರೆಗೂ ಹೇಳದಿದ್ದುದಕ್ಕಾಗಿ ಕಲ್ಯಾಣಿ ರೋಷಕೊಂಡಳು. ಅವಳು ಅಪ್ಪಣೆಕೊಡಲಿಲ್ಲವಾಗಿ ಹೀಗಾಯಿತೆಂದು ಕೃಷ್ಣ ನುಡಿದು ಸಮಾಧಾನ ಪಡಿಸಿದ. "ಯಾವ ಜೇಬಿನಲ್ಲಿ ಹಣವಿದ್ದ ರೇನು, ಅಂಗಿ ನಿಮ್ಮದೇ" ಎಂದು ಶ್ರೀಕಂಠ ಅವಳಿಗೆ ಸಮಾಧಾನ ಹೇಳಿದ. ಕೃಷ್ಣ ತನ್ನ ದುಡಿತದಿಂದ ಮನೆಯ ಖರ್ಚು ನಿರ್ವಹಿಸುತಿದ್ದಾನೆ; ನನ್ನ ಹಣವನ್ನು ಮುಗಿಸಿಲ್ಲ ಎಂದು ತಿಳಿದುಕೊಂಡರೂ ಕಲ್ಯಾಣಿಯ ಮನಸ್ಸಿನೊಳಗೆ ಅವನ ಬಗೆಗೆ ಸಂದೇಹ ಮೂಡುತಿತ್ತು. ತನಗರಿಯದಂತೆ ಇವನು ಹಣ ಕೂಡಿಸುತಿದ್ದಾನೆ; ತನ್ನನ್ನು ಅಗಲಲು ದಾರಿಮಾಡಿಕೊಳ್ಳುತಿದ್ದಾನೆ ಎಂದವಳ ಹೆಣ್ಣು ಹೃದಯ ಕಲ್ಪನೆಯ ದೆವ್ವ ಸೃಜಿಸಿಕೊಂಡಿತು. ಪರಿಣಾಮ ವನ್ನು ಗಮನಿಸದೆ "ಸಾವಿರ ಕಣ್ಣುಗಳು ನನಗಾಗಿ ಕಾದಿವೆ–ಇವನೇನು ಮಹಾ" ಎಂದವಳ ರೊಚ್ಚಿಗೆದ್ದ ಮನ ಕೂಗಿಕೊಳ್ಳದಿರಲಿಲ್ಲ.

ಶ್ರೀಕಂಠ ಅವರ ಸೌಹಾರ್ದಕ್ಕೆ ಬೆಸುಗೆ ಹಾಕಿ, ಜಗತ್ತಿನ ಪರಿಸ್ಥಿತಿಯ ಅರಿವು ಮಾಡಿಕೊಟ್ಟು, ಬಿನ್ನಾಭಿಪ್ರಾಯ ನೀಗುತ್ತಲಿದ್ದ.

## ೧೬

"ಬೀರಿ...."

ಕಾನಕಾನಹಳ್ಳಿಯ ಇದ್ದಲಿಯಿಂದಲೇ ಕೊರೆದು ಸೃಜಿಸಿದ ಹೊಯಿಸಳ ಕಲಾಕೃತಿ ಬೀರಿ.

ಆ ದೇಹ, ನಡೆ, ಮಾಟ, ನಡು, ನೋಟ, ಎಲ್ಲವೂ ಒಂದು ಕಾಲದಲ್ಲಿ ಮೈಸೂರು ನಗರಕ್ಕೆ ಪರಿಚಿತವಾಗಿದ್ದುವು. ತರುಣರ ದಮನಿಯಲ್ಲಿ ಬಿಸಿ ನೆತ್ತರು ಹರಿಯಿಸಿ; ಅವರ ಮೈ ಬೆವರುವಂತೆ ಮಾಡುತಿದ್ದವಳು ಅವಳು.

ಯುವ್ವನವನ್ನು ಕಳೆದುಕೊಂಡವರನ್ನು ತಿರುಗಿ ಯುವ್ವನದೆಡೆ ತಿರುಗಿಸುತಿದ್ದ ಮಂತ್ರವಾದಿ. ಜಗತ್ತಿನ ಕಲಾ ಪ್ರೇಮಿಗಳು ಇಂದು ಹೊಯ್ಸಳ ಕಲಾ ವೈಭವವನ್ನು ನೋಡಲು ಮೈಸೂರಿಗೆ ಬರುವಂತೆ; ಕಲಾವಂತೆಯರನ್ನು ಬಯಸಿದ ರಾಜಧಾನಿಯ ರಸಿಕರು ಬೀರಿಯ ಬಳಿ ಸುಳಿಯುತ್ತಿದ್ದರು.

ಬೀರಿ ಈ ಜೀವನ ಬೇಕೆಂದು ಬಯಸಿದವಳಲ್ಲ. ಅವಳ ಗೆಳತಿಯರೆಲ್ಲ ಆ ದಾರಿ ಹಿಡಿದಿರುವಾಗ ತಾನೂ ಏಕೆ ಹಿಡಿಯಬಾರದು, ಬಾಳು ಹಸನಾಗಿಸಿಕೊಳ್ಳಬಾರದು ಎಂದು ತೋರಿ ಹಾಗೆ ಮಾಡಿದಳು. ಊದುಬತ್ತಿ ಕಾರ್ಖಾನೆಯಲ್ಲಿ ಚಿಕ್ಕವಳಿರುವಾಗಲೇ ಕೆಲಸಕ್ಕೆ ಸೇರಿದಳು ಬೀರಿ. ಮನೆ ತೋಟದ ಹೂವು ಅರಳಿದೊಡನೆ ಮನೆದೇವರ ಪಾದ ಸೇರುವಂತೆ, ಮಗುವಾಗಿದ್ದ ಬೀರಿ ಹೆಣ್ಣಾದೊಡನೆ ಕಂಪೆನಿಯ ಮೇಸ್ತ್ರಿಯ ಪಾದ ಸೇರಿದಳು. ಕಾರ್ಖಾನೆಯ ಹೆಂಗಸರಿಗೆಲ್ಲ ನಾಯಕಿಯಾಗಿದ್ದ ಮುತ್ತಮ್ಮ ಬೀರಿಗೆ ಹತ್ತಾರು ಕತೆಗಳನ್ನು ಹೇಳಿ ಆಸೆ ತೋರಿಸಿದಳು. ಮೇಸ್ತ್ರಿಯ ಬಗೆಗೆ ಬಾಯಿತುಂಬ ಹೊಗಳಿದಳು. ಅದೇನು ಹೊಸತು ನೋಡೋಣವೆಂದು ಬಯಸಿದ ಬೀರಿಗೆ ಈ ಗಾಳ ಸಾಕಾಗಿತ್ತು. ಅವಳು ಬಯಸಿದ್ದ ಹೊಸ ಸೀರೆ ಅವಳಿಗೆ ದೊರೆಯಿತು. ಕೂಲಿಯಲ್ಲೂ ಒಂದಾಣೆ ಹೆಚ್ಚಿತು. ಹೊಸತು ನೋಡಲೆಂದು ಬಯಸಿದ ಬೀರಿ ಮೇಸ್ತ್ರಿಯ ಬಯಕೆಗೆ ಬಲಿಯಾದಳು.

ಒಂದೆರಡು ತಿಂಗಳು ಮಾತ್ರ ಅವಳ ಈ ಸುಖ ಅವಳದಾಯಿತು. ಮುಂದೆ ಮೇಸ್ತ್ರಿ ಇನ್ನೊಬ್ಬಳನ್ನು ಬಯಸಿದ. ತನ್ನ ಬಾಳಿನಲ್ಲಿ ಹೆಣ್ತನವನ್ನಿತ್ತು ಬೆಳಗಿಸಿದ ಈ ಹೊಸ ಸುಖವನ್ನು ಅರಸುತ್ತ ನಡೆದ ಬೀರಿ ಮದುವೆಯಾದಳು. ಕಾರ್ಖಾನೆಯ ಕೆಲಸಗಾರನಾದ ಅವಳ ಗಂಡ, ಹೆಂಡತಿ ದುಡಿದು ಅನ್ನ ನೀಡುತ್ತಾಳೆ ಎಂದು ತಿಳಿದು ತನ್ನ ದುಡಿತವನ್ನೆಲ್ಲ ಕುಡಿತಕ್ಕೆ ವ್ಯಯಿಸಿದ. ಬೀರಿಗೆ ಹಗಲು ದುಡಿಮೆ, ರಾತ್ರಿ ಕುಡುಕ ಪತಿಯ ಹಿಂಸೆಯಾಯಿತು. ಅವಳ ಸುಖದ ಕನಸು ಅಳಿಯುತ್ತ ಬಂತು. ಕಾರ್ಖಾನೆಯ ಮುತ್ತಮ್ಮನೇ ಅವಳಿಗೆ ಸುಖ ದೊರಕಿಸುವ ದೇವತೆಯಾಗಿ, ಅಂಥ ಸುಖ ದೊರೆಕಾಗಲೆಲ್ಲ ಕಾರ್ಖಾನೆಗೂ ಹೋಗದೆ ಇರುತಿದ್ದಳು. ಅಂತೂ ಈ ಬಾಳು ಬೇಸರಗೊಂಡ ಬೀರಿ ಗಂಡನನ್ನು ತೊರೆದು ನಿಂತಳು.

ಮುತ್ತಮ್ಮ ನೀಡಿದ ಧೈರ್ಯದಿಂದ ಬೀರಿ ತನ್ನದೇ ಆದ ಗುಡಿಸಲು ಮಾಡಿಕೊಂಡಳು. ಊದುಬತ್ತಿ ಕಾರ್ಖಾನೆಯಲ್ಲಿ ಕೆಲಸ. ಹೆಣ್ಣಿಗೆ ಬೇಕಾದ ಸುಖವನ್ನು ಒದಗಿಸಬಲ್ಲವರಿಗೆ ಕೊರತೆ ಇರಲಿಲ್ಲ. ಬೀರಿ ತನ್ನ ಒಂಟಿ ಸಂಸಾರ ಹೂಡಿದಳು. ಜೀವನದ ಹೋರಾಟದಲ್ಲಿ ಅವಳಿಗೆ ದಶಕಗಳು ದಶಕಗಳಾಗಿ ಕಾಣಲಿಲ್ಲ. ಮೂವತ್ತು ವರ್ಷ ಕಳೆದರೂ ಅವಳು ಮತ್ತೂ ಕಾಮಿನಿಯಾಗೇ ಮುನ್ನಡೆದಳು. ಆವಳ ಜತೆಗಾರರಾಗಿ ಇನ್ನೂ ಹಲವು ಮಂದಿ ಸೇರಿಕೊಂಡರು. ಈ ಸಹವಾಸದಿಂದ ತಾನೂ ಮುತ್ತಮ್ಮನಾಗುವುದು ಬೀರಿಗೆ ಸಾಧ್ಯವಾಯಿತು.

ಅವಳ ಬಾಳಿನಲ್ಲಿ ಅವಳು ಸಾವಿರಾರು ಮಂದಿಯನ್ನು ಕಂಡಿದ್ದಾಳೆ. ಏನೂ ಅರಿಯದವರನ್ನು ಅವಳು ನೋಡಿದ್ದಾಳೆ; ಹೆಣ್ಣಿನ ಒಂದೊಂದು ಅಂಗವನ್ನಷ್ಟೇ ಮೆಚ್ಚಿ ವಿಹರಿಸುವ ವಿಟರನ್ನು ಸಂಧಿಸಿದ್ದಾಳೆ.

ತನ್ನ ಬಾಳು ಮುಗಿಯಿತೆಂದುಕೊಂಡು, ಇತರರ ಬಾಳಿನ ಸುಖದಿಂದ ತನ್ನ ಜೀವನ ಸಾಗಿಸುತಿದ್ದ ಬೀರಿ ಕಾರ್ಖಾನೆಯ ಕೆಲಸ ಬಿಟ್ಟಮೇಲೆ ಚಿಕ್ಕದೊಂದು ಅಂಗಡಿ ಮಾಡಿಕೊಂಡು ಜೀವನ ಸಾಗಿಸಲು ತೊಡಗಿದಳು. ನೂರಡಿ ರಸ್ತೆಯಲ್ಲಿ ಒಂದು ಮರಕ್ಕೆ ಒರಗಿಕೊಂಡು ನಿಂತಿದ್ದ ಅವಳ ಮರದ ಗೂಡು ಎಲ್ಲರಿಗೂ ಪರಿಚಯದ ಅಂಗಡಿಯಾಗಲು ಹೆಚ್ಚು ಕಾಲ ಬೇಕಾಗಲಿಲ್ಲ. ಅವಳನ್ನರಿತವರು ಅತ್ತ ಬಂದು ವ್ಯಾಪಾರಮಾಡುತಿದ್ದುದನ್ನು ಕಂಡು ಅರಿಯದವರೂ ಬಂದರು. ಹಾಗೇ ವಿದ್ಯಾರ್ಥಿಗಳಿಗೂ ಅವಳ ಅಂಗಡಿಯ ಸಿಗರೇಟು ಪರಿಚಿತವಾಯಿತು.

ಸಿಗರೇಟು, ಎಲೆ ಅಡಿಕೆ, ಸೋಡಾ, ಬೀಡಾ ಇರಿಸಿದ್ದ ಅವಳ ಅಂಗಡಿಯಿಂದಲೇ ಅವಳ ತಿಂಗಳ ಖರ್ಚು ನಡೆದುಹೋಗುತಿತ್ತು. ಹಾಗೇ ಅವಳ ವ್ಯವಹಾರಕ್ಕೆ ಇದೇ ಉತ್ತಮ ಸಾಧನವಾಗಿ ಅದೂ ಕುದುರಿತು. ಕೈತುಂಬ ಕಾಸು ಓಡಾಡಲಾರಂಭಿಸಿತು. ಕಳೆದ ಬಾಳಿನ ಕಾಮದಹನ ಅವಳ ಮೈಯನ್ನು ಹಿಂಡುತಿತ್ತು. ಬೀರಿ ಕುಡಿತ ಕಲಿತಳು. ಮಾಂಸ ಆಹಾರವಿಲ್ಲದಿದ್ದರೆ ಸಾಧ್ಯವಿಲ್ಲವಾಗಿ ಅವಳಿಗೆ ತೋರಿತು. ಆದರೂ, ಅವೆಲ್ಲವುಗಳಿಗೂ ಬೇಕಾದ ಕಾಸು ಅವಳ ಕೈಗೆ ಸೇರಿತ್ತು.

ಒಂದು ಕಾಲವಲ್ಲಿ ಯಾವುದೇ ವಸ್ತುವಿನ ಪರಿಚಯು ಜನರಿಗಾಗುವ ವೊದಲು ಅವನ್ನೆತ್ತಿಕೊಂಡು ವುನೆಗೆ ಹೋಗಿ ವಿಕ್ರಯಿಸಬೇಕಾಗುತ್ತದೆ. ಅಂಗಡಿಯಲ್ಲಿ ಸಾವುಗ್ರಿ ದೊರೆಯುದಿದ್ದರೂ, ಜನಕ್ಕೆ ಅದೆಲ್ಲಿ ದೊರೆಯುತ್ತಿದೆ ಎಂದು ತಿಳಿಯದಿದ್ದರೂ, ಅದರ ಪರಿಚಯುವಿಲ್ಲದಿದ್ದರೂ ಏಜಂಟನಿಗೆ ದುಡಿವೆು ತುಂಬ. ಸಾವುಗ್ರಿ ಪ್ರಚಾರಕ್ಕೆ ಬಂದು, ಜನ ಅದನ್ನು ಬಯುಸಿ, ಅದು ಎಲ್ಲಾ ಅಂಗಡಿಗಳಲ್ಲೂ ದೊರೆಯುುವಂತಾದ ವೇಲೆ ಏಜಂಟನಿಗೆ ದುಡಿವೆು ಕಡಿವೆು. ನಿತ್ಯಸುವುಂಗಲಿಯುರ ಸಂಖ್ಯೆ ಬೆಳೆಸುವ ನಾಗರಿಕತೆ ಹರಡಿತು. ಬೀರಿಯು ಸಹಾಯುದಿಂದ ಬೇಕಾದುದನ್ನು ದೊರಕಿಸಿಕೊಂಡವರು ವುುಂದೆ ಅವಳ ಸಹಾಯುಪಡೆದು ಕವಿುಷನ್ ಕೊಡುವುದು ನಿಲ್ಲಿಸಿದರು. ಅವರವರೇ ಯಾರ ಸಹಾಯುವೂ ಇಲ್ಲದೆ ತವುಗೆ ಬೇಕಾದವರನ್ನು ಆರಿಸಿಕೊಳ್ಳುವುದು ಆರಂಭವಾಯಿತು. ನಿವೃತ್ತ ಅಧಿಕಾರಿಗಳ ಸ್ವರ್ಗವೆಂದು ಹೆಸರಾದ ವೈಸೂರು; ರಾಜಧಾನಿ; ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳೂ ಬಿಡುವಿಲ್ಲದ ಜೀವನವೂ ಇಲ್ಲದೆ ಶಾಂತವಾಗಿ ನಿಧಾನವಾಗಿ ವಿರಾಮಪೂರ್ಣವಾಗಿ ಸಾಗುವವರ ನಗರ. ಇಲ್ಲಿ ಅವರವರೇ ಅವರವರ ಬೇಟೆ ಹುಡುಕಲಾರಂಭಿಸಿದಾಗ ಬೀರಿಯು ವ್ಯವಹಾರಕ್ಕೆ ತಡೆ ಬಂತು.

ದಿನಕ್ಕೊಂದೋ ಎರಡೋ ಗಿರಾಕಿಗಳನ್ನು ತಂದುಕೊಡುವ ಅಂಗಡಿಯಿಂದ ಪ್ರಯೋಜನವಿಲ್ಲವೆಂದು ಅರಿತ ಬೀರಿ ಬೇರೆ ದಾರಿ ಹಿಡಿಯಬೇಕಾಯಿತು. ಇಳಿವಯಸ್ಸಿನಲ್ಲಿ ದುಡಿದು ಸಂಪಾದಿಸುವುದು ಸಾಧ್ಯವಿರಲಿಲ್ಲ. ತನ್ನನ್ನು ಬಯುಸಿ ಬರುವವರಿಲ್ಲ. ಅಂಗಡಿಯಲ್ಲೇ ಕುಳಿತು ದಿನ ಕಳೆದು, ಗಿರಾಕಿಗಳಿಗೆ ಬೇಕಾದವರನ್ನು ಕಂಡುಹಿಡಿಯುುವುದು ಕಷ್ಟವಾಗ ತೊಡಗಿತು. ಅಷ್ಟು ಸುಲಭವಾಗಿ ವ್ಯವಹಾರ ನಡೆಯುುವುದಿಲ್ಲ. ತಾನೇ ಸುತ್ತಾಡಿ, ತರುಣಿಯುರನ್ನು ಹುಡುಕಿ, ಅವರ ಸ್ನೇಹ ಸಂಪಾದಿಸಿಕೊಂಡಿರಬೇಕು ಎಂದು ಅವಳಿಗೆ ತೋರಿತು. ಅವಳಿಗೆ ಗಿರಾಕಿಗಳ ಕೊರತೆಯಿರಲಿಲ್ಲ. ಅವಳನ್ನು ಅರಿತವರು ಅವಳ ಬಳಿಗೆ ಬಂದು ಅವಳನ್ನು ಮಾತನಾಡಿಸದೆ ಹೋಗುತ್ತಿರಲಿಲ್ಲ. ಆದರೆ ತನ್ನ ಅಂಕೆಯದು ಎಂಬ ಮಾಲು ಮಾತ್ರ ಅವಳಿಗೆ ಇಲ್ಲವಾಗಿತ್ತು. ಬೀರಿ ಅಂಗಡಿಯುನ್ನು ಬಿಟ್ಟು, ವುನೆಯಲ್ಲೇ

ಬಿಡಾರವಮಾಡಿದಳು. ಊರಿನ ಕೇರಿ ಸುತ್ತಿ ಸುಳಿದು ಮಾಲುಗಳ ಪರಿಚಯ ಮಾಡಿಕೊಂಡಳು.

ಸಿನಿಮಾ ತೆಗೆಯುವವರು ಬಂದಿದ್ದಾರೆ ಎಂದಾಗ ಯಾರದೋ ಮನೆ ಕೆಲಸವನ್ನು ವಹಿಸಿಕೊಂಡಿದ್ದ ಬೀರಿ ಕೆಲಸ ಕೇಳಿಕೊಂಡು ಸಿನಿಮಾ ಕಂಪೆನಿಗೂ ಬಂದಳು. ಆದರೆ ಅವಳಿಗೆ ಅಲ್ಲಿ ಕೆಲಸ ದೊರೆಯಲಿಲ್ಲ. ಈ ಇಡೀ ಕಂಪೆನಿಯ ಕೆಲಸಮಾಡಲು ಸಾಧ್ಯವಿಲ್ಲವೆಂದು ಮ್ಯಾನೇಜರ್ ಅವಳನ್ನು ನಿರಾಕರಿಸಿದ. ನಿರಾಶಳಾಗದೆ ಬೀರಿ ಮುನ್ನಡೆದಳು. ರಮಾ ಮನೆಯಲ್ಲಿ ಅವಳಿಗೆ ಕೆಲಸ ದೊರೆಯಿತು. ಸಿನಿಮಾ ಕಂಪೆನಿಗೆ ಸೇರಿ ಹಣ ಸಂಪಾದಿಸುವಾಗ ಮನೆ ಕೆಲಸಕ್ಕೆ ಒಬ್ಬಳು ಇದ್ದುಬಿಡಲಿ. ತಿಂಗಳಿಗೆ ಮೂರು ರೂಪಾಯಿ ತಾನೇ? ಎಂದು ರಮಾ ಅವಳನ್ನು ಕೆಲಸಕ್ಕೆ ನೇಮಿಸಿಕೊಂಡಳು. ಒಂದುಊಟ, ಮೂರು ರೂಪಾಯಿ ಸಂಬಳ. ಮನೆಯ ಕಸಗುಡಿಸಿ, ಪಾತ್ರೆಗಳನ್ನು ಬೆಳಗಿ, ಬಟ್ಟೆ ಒಗೆಯುವುದು ಬೀರಿಯ ಕೆಲಸ. ಮಧ್ಯಾಹ್ನದ ತನಕ ಕೆಲಸಮಾಡಿ ಮನೆಗೆ ತೆರಳಿದಳೆಂದರೆ, ಆ ಒಳಿಕ ನಿತ್ಯದ ಕೆಲಸ. ಬೀರಿಯ ಜೀವನ ಸುಗಮವಾಗಿ ಸಾಗುತಿತ್ತು.

ಮರ ಮುಪ್ಪಾದರೂ ಹುಳಿ ಮುಪ್ಪಾಗಲಾರದು. ಎಲ್ಲ ತರುಣಿಯರ ಸ್ನೇಹವನ್ನೂ ಸಂಪಾದಿಸಿ, ತನ್ನ ದುಡಿಮೆಯನ್ನು ಹೆಚ್ಚಿಸಿಕೊಳ್ಳುವ ದಾರಿಯನ್ನಾಕೆ ಬಿಟ್ಟಿರಲಿಲ್ಲ. ಅದಕ್ಕೆ ಬೇಕಾದ ಕಣ್ಣು, ಅಭಿನಯ, ಮಾತುಗಾರಿಕೆ ಅವಳಿಗೆ ಸಿದ್ಧಿಸಿತ್ತು. ಯವ್ವನ ಬಂದಾಗ ಸುಖವನ್ನು ಅರಸಬೇಕು ಎಂಬ ವೇದಾಂತ ಅವಳ ಕರಗತವಾಗಿತ್ತು. ನಾಲಿಗೆ ಇನ್ನೂ ಹರಿತವಾಗುತಿತ್ತು ; ಯವ್ವನದ ಹುರುಪು ತಳೆಯುತಿತ್ತು.

ರಮಾನ ಮನೆಗೆ ಬರುತಿದ್ದ ಕಲ್ಯಾಣಿಯ ಕಡೆಗೆ ವಾಸ್ತವವಾಗೇ ಬೀರಿಯ ದೃಷ್ಟಿ ಹರಿಯಿತು. ಅವಳ ಶರೀರ ಸೌಷ್ಟವ, ಸೌಂದರ್ಯ ಅವಳನ್ನೇ ಮಂತ್ರಮುಗ್ಧಳಾಗಿಸಿತು. ಇಂಥ ಹೆಣ್ಣು ನನ್ನ ಗೆಳತಿಯಾದರೆ! ಕೇಳಿದ ಹಣ ತನ್ನದು ; ಸಕಲರೂ ತನ್ನ ದಾಸಿಯರು, ತನ್ನ ಮುಂದಿನ ಬಾಳೇ ಹಸನಾಗುತ್ತದೆ ಎಂದಾಕೆ ಸುಖದ ಕನಸು ಕಂಡಳು. ಏನು ಕೊಟ್ಟರೂ ಸಾಕು, ನಿಮ್ಮ ಕಂಪೆನಿಯಲ್ಲಿ ದುಡಿಯುತ್ತೇನೆ ಎಂದಾಕೆ ಹೇಳಲು ಹಿಂಜರಿಯಲಿಲ್ಲ. ಕಲ್ಯಾಣಿಯ ಮನ ಸೆಳೆದು, ಅವಳಲ್ಲಿ ಅನನ್ಯ ವಿಶ್ವಾಸ

ತೋರಿ, ಸಾವಿರ ಕತೆಗಳ ಕಂತೆ ಬಿಚ್ಚಿ, ಬೀರಿ ತನ್ನ ಬಯಕೆ ಈಡೇರಿಸಿಕೊಂಡಳು. ಚಿತ್ರಪ್ರಪಂಚದ ಚಟುವಟಿಕೆ, ಅಲ್ಲಿನ ಗೆಳತಿಯರೊಡನಾಟಗಳಿಂದ, ಬಿಡುವಿಲ್ಲದಾಗ ಕಲ್ಯಾಣಿಯ ಗಮನ ಬೀರಿಯ ಕಡೆಗೆ ಹರಿಯಿತು. ಬೀರಿಗೆ ಕಲ್ಯಾಣಿಯ ಮನೆಯಲ್ಲಿ ಕೆಲಸ ದೊರೆಯಿತು. ಒಳಗಿನ ಕೆಲಸಕ್ಕೆ ಸುಂದರ. ಹೊರಗಿನ ಕೆಲಸ ಬೀರಿಗೆ ಸೇರಿದುದು. ಸುಂದರ ಕೃಷ್ಣರಾಯನ ಶಿಷ್ಯ. ಬೀರಿ ಕಲ್ಯಾಣಿಯ ಶಿಷ್ಯೆಯಾದಳು.

ಕಲ್ಯಾಣಿಯ ಮನೆಗೆ ಆಕೆ ಕಾಲಿಟ್ಟ ಬಳಿಕ ರಮಾ ಮತ್ತು ಕಲ್ಯಾಣಿಯ ಸ್ನೇಹ ಬೆಳೆಯಿತು. ಈ ಇಬ್ಬರ ನಡುವಿನ ಸೇತುವೆಯಾದಳು ಬೀರಿ. ಹಾಗೇ ಕೃಷ್ಣನ ಬಗೆಗೆ ಆಗೊಂದು ಈಗೊಂದು ಮಾತನ್ನಾಡಿ, ಜಿಗುಪ್ಸೆಗೊಂಡಾಗ ಆತ ಆಡಿರಬಹುದಾದ ಮಾತುಗಳನ್ನು ಆಕೆ ಕಲ್ಯಾಣಿಯ ಕಿವಿಗೆ ಮುಟ್ಟಿಸುತ್ತಿದ್ದಳು. ಮನೆಯ ಕೆಲಸದವಳಾಗಿ ಸೇರಿಕೊಂಡವಳು, ದಿನಗಳೆದಂತೆ ಕಲ್ಯಾಣಿಯ ಮಂತ್ರಿಯಾದಳು. ಕಲ್ಯಾಣಿ ಮತ್ತು ಕೃಷ್ಣನ ವಿಶ್ವಾಸದ ಹಾಲಿಗೆ ನೀರು ಬೆರೆಸುತ್ತ ಅದನ್ನು ತಿಳಿಯಾಗಿಸುವ ಮಂಥರೆಯೂ ಆದಳು.

ಬೀರಿಯ ಉಪದೇಶ ಕಲ್ಯಾಣಿಯ ಮನದಲ್ಲಿ ಅನೇಕ ಸಮಸ್ಯೆಗಳನ್ನು ತಂದೊಡ್ಡಿದುವು. ಆ ದಾರಿ ಸರಿಯಲ್ಲ ಎಂದು ಏಕಾಂತದಲ್ಲಿ ನಿರ್ಧರಿಸುತ್ತಿದ್ದವಳೇ ಅದರಿಂದೇನು? ಮಿತಿಯಿದ್ದರೆ ಸರಿ, ಅದೂ ಅಭಿನಯ–ಎಂದುಕೊಳ್ಳುವಂತಾಗುತ್ತಿತ್ತು. ಆದರೂ ಮುನ್ನಡೆವ ಧೈರ್ಯ ಅವಳಿಗಿರಲಿಲ್ಲ. ಅಭಿನಯ, ನಾಟಕ, ಬಣ್ಣ ಬಳಿದು ಅಭಿನಯಿಸಿ ಸ್ನಾನಮಾಡಿದರೆ ತೀರಿತು ಎಂಬ ಮಾತು ಅವಳ ಮನದಲ್ಲಿ ಆಗಾಗ ಪ್ರತಿಧ್ವನಿಗೊಡುತ್ತಿತ್ತು. ಹೆದರುವವನು ಹೇಡಿಯಾಗಿ ಹಿನ್ನಡೆಯುತ್ತಾನೆ; ಧೈರ್ಯ ತಂದುಕೊಂಡವನು ಈಜಾಡಿ ಮುನ್ನಡೆಯುತ್ತಾನೆ ಎಂದು ಅವಳ ಮನ ಕೂಗಿ ಹೇಳುತ್ತಿತ್ತು.

ಕಲ್ಯಾಣಿಯ ವಿಚಿತ್ರ ನಡೆ ನುಡಿಗಳಿಂದ ಬೇಸರಗೊಂಡ ಕೃಷ್ಣ ತನ್ನ ಬಿಡುವನ್ನು ಪಾರ್ಕ್‌ನಲ್ಲೋ ಎಲ್ಲಾದರೂ ಏಕಾಂತದಲ್ಲೋ ಕಳೆಯುತ್ತಿದ್ದ. ಹಿಂದಿನ ಸರಳತೆ, ಶಾಂತ ಮನೋಭಾವ ಅವಳಲ್ಲಿ ಇಂದಿಲ್ಲ. ತಾನು ಹೆಚ್ಚು, ತಾನೇ ರಾಣಿ ಎಂಬ ಅಹಂಕಾರ ಬೆಳೆದಿದೆ. ಅಸಹನೆ, ಅಧಿಕಾರ, ದಾಹ ತುಂಬಿದೆ. ಎಂದವನಿಗೆ ಅರಿವಾಗಿತ್ತು. ಎಷ್ಟೋ ಬಾರಿ ಮಾತ

ನಾಡಿ, ಚರ್ಚಿಸಿ, ರೇಗಾಡಿ ಅವನೇ ಸೋಲನ್ನೊಪ್ಪಿಕೊಳ್ಳುತ್ತಿದ್ದ. ತಾನಾಗಿ ದೂರವಾಗಬಾರದು, ತಿಳುವಳಿಕೆಯಿಲ್ಲದ ಹೆಣ್ಣು ಆಕೆ. ಅವಳಿಗಿಲ್ಲದ ವಿವೇಚನೆ, ವಿವೇಕ ತನಗಿರಬೇಕು. ಎಂದುಕೊಂಡು ತನ್ನ ದುಗುಡವನ್ನು ತಾನೇ ನುಂಗಿಕೊಳ್ಳುತ್ತಿದ್ದ. ತನ್ನ ದುಃಖವನ್ನು ತಾನೇ ಮರೆಯಲೆತ್ನಿಸುತ್ತಿದ್ದ.

ಅಂದು ಕಲ್ಯಾಣಿ ಊಟಕ್ಕೂ ಬಂದಿರಲಿಲ್ಲ. ಅವಳನ್ನು ಕರೆದುಕೊಂಡು ಬರಲೆಂದು ಹೋಗಿದ್ದ ಸುಂದರ "ಅವಳು ಅಲ್ಲೇ ಊಟಮಾಡಿದಳಂತೆ, ಸಿನಿಮಾಕ್ಕೆ ಹೋಗುತ್ತಾಳಂತೆ" ಎಂದು ಸುದ್ದಿ ಮುಟ್ಟಿಸಿದ. ಬೇಸರಗೊಂಡ ಕೃಷ್ಣ ಊಟಮುಗಿಸಿ ತನ್ನನ್ನು ತಾನೇ ಶಪಿಸಿಕೊಂಡು ಮನೆಯಿಂದ ಹೊರಟ. ಸುತ್ತಾಡಿ ಸ್ಟುಡಿಯೋ ಪಕ್ಕದ ಕೆರೆಯ ಕಟ್ಟೆಯ ಮೇಲೆ ಕುಳಿತ. ಅವನು ಒಂಟಿಯಾಗಿದ್ದಷ್ಟೂ ಹಿಂದಿನ ಯೋಚನೆಗಳು ಅವನನ್ನು ನೂರು ಕಡೆಗಳಿಂದ ಬಂದು ಹಿಂಸಿಸತೊಡಗಿದುವು. ಯಾವುದೋ ಹಾಡನ್ನು ನೆನೆದು ಹಾಡತೊಡಗಿದ. ಆದರೂ ಯೋಚನೆಗಳನ್ನು ಮರೆಯುವುದು ಸಾಧ್ಯವಾಗಲಿಲ್ಲ. ಒಂದು ತಾಸು ಕಳೆಯಿತು. ಆದರೂ ದುಗುಡವಳಿಯಲಿಲ್ಲ; ಚಿಂತೆ ಹರಿಯಲಿಲ್ಲ. ಕೃಷ್ಣ ಅಲ್ಲಿಂದೆದ್ದು ಪೇಟೆಗೆ ಹೊರಟ.

ಟೌನ್ ಹಾಲಿನ ಸುತ್ತಲೂ ಸಂಜೆಯ ಹೊತ್ತನ್ನು ಕಳೆಯಲು ಅಲ್ಲಲ್ಲಿ ವಿಶ್ರಾಂತಿಪ್ರಿಯರು ಸೇರಿದ್ದರು. ಕಡಲೆ ಕಾಯಿ ವಿಕ್ರಯಿಸುವವರಿಗೆ ಅದೇ ಉತ್ತಮ ವ್ಯಾಪಾರಸ್ಥಳ. ಬಂದವರು ಅಲ್ಲಲ್ಲಿ ಒಂಟಿಯಾಗಿಯೂ, ಜತೆಗಾರರೊಡನೆ ಕುಳಿತುಕೊಂಡು ಕಡಲೆ ಕಾಯಿ ಧ್ವಂಸ ನಡೆಸುತ್ತಿದ್ದರು. ಯಾವುದೇ ಹಾಡನ್ನು ಮೆಗಫೋನ್ ಕಿರಿಚಿಕೊಂಡು, ಸಂಗೀತಗಾರರು ತಮಗರಿತ ಸಂಗೀತದ ಬಗೆಗೇ ಸಂದೇಹಪಡುವಂತೆ ಮಾಡುತ್ತಿತ್ತು. ಸಂಜೆಯ ಮೈಸೂರು ಪತ್ರಿಕೆಯನ್ನು ವಿಕ್ರಯಿಸುತ್ತಿದ್ದ ಹುಡುಗರೂ ತಮ್ಮ ಪಾಲಿನ ಕೂಗಾಟ ನಡೆಸುತ್ತಿದ್ದರು.

ಕೃಷ್ಣ ತಾನೂ ಒಂದು ಮೂಲೆಯಲ್ಲಿ ಕುಳಿತುಕೊಂಡ. ತುಸು ಹೊತ್ತಿನಲ್ಲಿ ಒಂದಿಷ್ಟು ಕಡಲೆ ಕಾಯಿ ಹೊತ್ತುಕೊಂಡು ಶ್ರೀಕಂಠನೂ ಅವನ ಜತೆ ಸೇರಿದ. ಕೃಷ್ಣನಿಗೆ ಭಾರವಾದ ಹೊರೆ ಹೆಗಲಮೇಲಿಂದಿಳಿದಷ್ಟು

ಅವನ ದುಗುಡ ಕಡಿಮೆಯಾಯಿತು. ಶ್ರೀಕಂಠ ಯಾವುದೋ ಮಾತು ಆರಂಭಿಸಿದ, ಚರ್ಚೆಗೆ ಮೊದಲುಮಾಡಿದ. ಅವರ ಮಾತು ಕತೆ ನಡೆದಿತ್ತು.

ಮಾತನಾಡುತಿದ್ದಂತೆ ಕೈ ಕಡಲೆಕಾಯಿ ಸುಲಿಯುವ ಕೆಲಸ ನಡೆಸಿತ್ತು. ಕಣ್ಣು ಎತ್ತಲೋ ಹರಿದಿತ್ತು. ಫಕ್ಕನೆ ಕೃಷ್ಣನ ಮುಂದೆ ದೂರದಲ್ಲಿ ಯಾರೋ ಸುಳಿದಂತಾಯಿತು. ಯಾವುದೋ ಯೋಚನೆಯಲ್ಲಿ ಮುಳುಗಿ ಏನೋ ಮಾಡುತಿದ್ದವನಿಗೆ ಅದಾರೆಂದು ತಿಳಿವ ಹೊತ್ತಿಗೆ ನಿಮಿಷ ಒಂದ ಕಳೆದು ಅವರು ಹತ್ತಾರು ಹೆಜ್ಜೆ ಮುನ್ನಡೆದಿದ್ದರು. ಕೃಷ್ಣ ಫಕ್ಕನೆ ಜಾಗ್ರತನಾಗಿ ಅವರೆಡೆಗೆ ಓಡಿದ.

ಶ್ರೀಕಂಠ ಆಶ್ಚರ್ಯದಿಂದ ತಬ್ಬಿಬ್ಬಾಗಿ ಅವನು ನಡೆದ ಕಡೆಯೇ ನೋಡುತ್ತ, ಕಡಲೆಕಾಯಿಯನ್ನೆಲ್ಲ ಕಿಸೆಗೆ ಸೇರಿಸಿಕೊಂಡು ಅವನು ಹೋದೆಡೆಗೇ ಹೋದ.

ಆ ವ್ಯಕ್ತಿಯ ಮುಂದೆನಡೆದು ಕೃಷ್ಣ ಬಾಗಿ, ಅವರ ಕಾಲು ಮುಟ್ಟಿ ನಮಸ್ಕರಿಸಿದ.

ಇದು ಬೀದಿ, ನೂರಾರು ಜನ ನೋಡುತಿದ್ದಾರೆ, ಯಾರೋ ಒಬ್ಬ ಸಾಮಾನ್ಯವ್ಯಕ್ತಿಯ ಮುಂದೆ ಈ ಅಭಿನಯ ಸಲ್ಲದು ಎಂಬ ಯೋಚನೆಯೂ ಅವನಿಗೆ ಹೊಳೆಯಲಿಲ್ಲ.

ವ್ಯಕ್ತಿ ನಿಂತುಕೊಂಡ.

"ನನ್ನದು ಮಹಾಪರಾಧವಾಯಿತು ; ಕ್ಷಮಿಸಿರಿ. ಉಭಯಸಂಕಟಕ್ಕೆ ಒಳಗಾಗಿ ನಾನು ಈ ದಾರಿ ತುಳಿಯಬೇಕಾಯಿತು. ಕ್ಷಮಿಸಿ ಆಶೀರ್ವದಿಸಿ. ಎಲ್ಲಾದರೂ ಬದುಕುತ್ತೇನೆ."

"ಆದುದು ಆಗಿಹೋಯಿತು. ಅದಕ್ಕೇಕೆ ಚಿಂತೆ."

"ತಮ್ಮ ಆಶೀರ್ವಾದವಿಲ್ಲದೆ ನಾ ಬಾಳಲಾರೆ ಸ್ವಾಮಿ."

"ಅದು ಸದಾ ನಿನ್ನ ಮೇಲಿದೆ."

"ನನ್ನ ತಪ್ಪು ಕ್ಷಮಿಸಿ"

"ಕ್ಷಮಿಸಿದ್ದೇನೆ. ಆದರೆ, ನಿನ್ನ ಬಾಳನ್ನು ನೀನು ಹಸನಾಗಿಸಿಕೊಂಡು ಕೀರ್ತಿಶಾಲಿಯಾದಾಗಲೇ ನನಗೆ ಪೂರ್ಣ ಆನಂದ."

"ಆ ದಾರಿಯಲ್ಲಿ, ನೀವು ತೋರಿದ ಬೆಳಕಿನಲ್ಲಿ ನಡೆಯುತ್ತಿದ್ದೇನೆ."

" ಗುರಿ ಮುಟ್ಟಬೇಕು. ಧೈರ್ಯದಿಂದ ಮುನ್ನಡೆಯಬೇಕು. ಬರುವ ಸಾವಿರ ಆತಂಕಗಳನ್ನು ಹಾದು ನಡೆಯಬೇಕು. "

" ನಡೆಯುತ್ತೇನೆ ಸ್ವಾಮಿ. "

" ಇಂದ್ರಿಯನಿಗ್ರಹ ಮುಖ್ಯ. ಆಗಲೇ ತಪಸ್ಸು ಸಿದ್ಧಿಸುತ್ತದೆ. "

" ಆಶೀರ್ವಾದ ಸ್ವಾಮಿ "

" ಆಗ ನೀನೂ ಒಬ್ಬ ಸನ್ಯಾಸಿ ಎಂದು ಈ ಲೋಕ ತಿಳಿಯ ಬಹುದು. ಹಲ್ಲಿಲ್ಲದ ಹಾವೆಂದು ಬಗೆದು ಪೀಡಿಸಲೂ ಬಹುದು; ಕಡೆಗಣಿಸಲೂ ಬಹುದು. ಆದರೆ ಆಗ ನೀನು ಈ ಸಮಾಜದ ದೃಷ್ಟಿಯಲ್ಲಿ ಹಲ್ಲಿಲ್ಲದ ಹಾವು; ರಸ ಹೀನ ವಸ್ತು. ದೇವಿಯ ಮುಂದೆ ಪೂರ್ಣವಸ್ತು; ಕಲೆಯ ದೃಷ್ಟಿಯಲ್ಲಿ ಮಹಾತಪಸ್ವಿ; ನಿನ್ನಂತಹ ತಪಸ್ವಿಗಳ ಕಣ್ಣಿಗೆ ಪುರುಷೋತ್ತಮ."

" ಆ ದಾರಿ ತುಳಿಯುತ್ತೇನೆ ಸ್ವಾಮಿ "

" ಅದೇ ನನ್ನ ಬಯಕೆ. ಗಿಡ ನೆಡುವಾಗ, ಬೆಳೆಸುವಾಗ, ಅದರ ಫಲ ತನ್ನದೇ ಎಂದು ಪೂರ್ಣ ನಂಬಿ ಯಾರೂ ಬೆಳೆಸುವುದಿಲ್ಲ. ತನ್ನ ಮಕ್ಕಳ ಪಾಲಿಗಾದರೂ ಅದು ದೊರೆಯಲಿ ಎಂಬ ಬಯಕೆ ಅವನಿಗಿರುತ್ತದೆ. ಅಂಥ ಬಯಕೆ ನನ್ನದು. ನಾಡಿನ ಯಾರಾದರೂ ಆ ಫಲ ಉಣ್ಣಲಿ. ಅದು ಬರಡಾಗಬಾರದು. ಹಾಗಾದರೆ ಬೆಳೆದವನಿಗೆ ತುಂಬ ದುಃಖ."

" ಆ ದುಃಖಕ್ಕೆ ನಾನು ಕಾರಣನಾಗುವುದಿಲ್ಲವೆಂದು ಆಣೆ ಮಾಡುತ್ತೇನೆ ಸ್ವಾಮಿ "

" ಅದು ಬೇಕಾಗಿಲ್ಲ ಕೃಷ್ಣಾ. ನಿನ್ನ ಬಗೆಗೆ ನಿನ್ನ ನೀತಿಯ ಬಗೆಗೆ ನೀ ತುಳಿದ ದಾರಿಯ ಬಗೆಗೆ ನೀನೇ ತಿಳಿದುಕೊಂಡು; ತಿದ್ದಿಕೊಂಡು ಮುನ್ನಡೆದರೆ ಸಾಕು."

" ಅಂಥ ಒಬ್ಬ ಸಾಧಕನ ನೆರಳಲ್ಲಿ ಬೆಳೆದೆ ನಾನು. ಎಂದೆಂದಿಗೂ ಆ ತಪಸ್ವಿಯನ್ನು ಮರೆಯುವುದಿಲ್ಲ. ಆ ನನ್ನ ಜೀವನದ ಜ್ಯೋತಿಗೆ ದ್ರೋಹ ಬಗೆದು, ಚಿಂತೆ ತಂದಿದ್ದೇನೆ ಎಂದು ದುಃಖಿಸುತಿದ್ದೇನೆ "

" ಅದು ಮೂರ್ಖತನ. ಎಲ್ಲವೂ ಒಳ್ಳಿತಕ್ಕೆ ಆಗುತ್ತಿವೆ ಎಂದು ತಿಳಿದು ನಡೆ. ನಿನ್ನ ನಡೆ ನಿನ್ನನ್ನು ಕನ್ನಡನಾಡಿನ ಕಲಾ ಕೇಂದ್ರಕ್ಕೆ

ಎಳೆದು ತಂದಿದೆ. ಇಲ್ಲಿ ಸಂಗೀತಕಲೆಯ ಮಹಾ ತಪಸ್ವಿಗಳಿದ್ದಾರೆ. ಅವರ ನೆರವಿನಿಂದ ನೀನು ಮುನ್ನಡೆಯಬಹುದು, ಗುರಿ ಮುಟ್ಟಬಹುದು. ನಿನ್ನ ಪಾಲಿಗೆ ಇದು ಒಳ್ಳಿತೇ ಆಗುವಂತೆ ಮಾರ್ಪಡಿಸಿಕೊಳ್ಳುವ ಚೇತನ ನಿನ್ನದಾಗಲಿ"

ಶ್ರೀಕಂಠ ಕಡಲೆಕಾಯಿ ತಿನ್ನುತ್ತ ಅವರು ನಿಂತಲ್ಲಿಂದ ಸ್ವಲ್ಪದೂರ ನಿಂತು ಅವರೆಡೆಗೇ ನೋಡುತಿದ್ದ.

"ಮನೆಗೆ ದಯಮಾಡಿಸಬೇಕು ಗುರುವೇ"

"ಅದು ಮನೆಯಾಗಿಲ್ಲವಲ್ಲ"

ಕೃಷ್ಣ ಮೂಕನಂತೆ ನಿಂತುಬಿಟ್ಟ. ಅವನಿಗೆ ಈ ಮಾತು ಕೇಳಿ ಆಶ್ಚರ್ಯವಾಯಿತು. ಏನೆಂದು ಉತ್ತರ ಕೊಡೋಣ, ಯಾಕೆ ಹೀಗೆ ಆಡಿದರು ಎಂದೇ ಅವನಿಗೆ ಸಮಸ್ಯೆಯಾಯಿತು. ತಲೆ ತಗ್ಗಿಸಿ ನಿಂತಿದ್ದವನು ತಲೆ ಎತ್ತಿ ಪ್ರಶ್ನಾರ್ಥಕ ದೃಷ್ಟಿಯಿಂದ ಆ ವ್ಯಕ್ತಿಯನ್ನು ನೋಡಿದ.

"ಹೌದು ಕೃಷ್ಣ. ಅದು ಮನೆಯಾಗಿಲ್ಲ. ಮನೆಯಾಕೆ ಅಲ್ಲಿಲ್ಲ. ಸಂಸಾರಿಗಳ ಮನೆಯಂತೆಯೂ ಅದಿಲ್ಲ."

"ತಾವು ಹೋಗಿದ್ದಿರೆ...."

"ಹೋಗಿದ್ದೆ. ನೀವು ಇತ್ತಬಂದ ಬಳಿಕ ಯಾವ ಸುದ್ದಿಯನ್ನೂ ನನಗೆ ತಿಳಿಸಲಿಲ್ಲ."

"ತಪ್ಪಾಯಿತು ಸ್ವಾಮಿ"

"ನಿಜ ತಿಳಿಸಲೂ ನಿಮಗೆ ಭೀತಿ, ಅಳುಕು. ಆವರೂ ಒಕ್ಕಲೆದ್ದು ಹೊರಟುಹೋದ ಮೇಲೂ ರೈತ ತಾನು ಹಿಂದೆ ಆರಂಭಮಾಡಿದ್ದ ಹೊಲದ ಕಡೆಗೆ ಬಂದು, ತನ್ನ ಕೃಷಿಯನ್ನು ಕಂಡು ಹರ್ಷಿತನಾಗುವಂತೆ ಅಥವಾ ಮರುಗುವಂತೆ, ಈ ರೈತ ನಿಮ್ಮನ್ನೇ ನೋಡಲು ಬಂದ."

"ಕಂಪೆನಿಗೆ ಹೋಗಿರಬೇಕು."

"ಬಲ್ಲೆ. ನಾನು ಕಾಣಬೇಕಾದ್ದು ಕಲಾಮಂದಿರ. ನಾನು ನೋಡ ಬಯಸಿದ್ದು ಕಲಾರಾಧಕರ ಗುಡಿಸಲು. ವಿಲಾಸಮಂದಿರವಲ್ಲ ಕೃಷ್ಣ. ಅಲ್ಲಿ ತಬಲಾ, ತಂಬೂರಿಗೆ ಸ್ಥಾನವಿತ್ತು; ನಿಜ. ಗೆಜ್ಜೆ ಎಲ್ಲಿ? ನಾಟ್ಯದೇವತೆಯ ಚಿತ್ರವೆಲ್ಲಿ? ರಂಗವಲ್ಲಿ ಅಲ್ಲಿ? ಏನಿದೆ ಇಲ್ಲಿ....ಹೇಳು...."

" ತಪ್ಪಾಯಿತು ಸ್ವಾಮಿ...."

" ಅದು ನನಗೆ ಬೇಕಾಗಿಲ್ಲ, ಅದು ನಿನಗೆ ಇರಬೇಕಾದ ಮನೋಭಾವ ಕೃಷ್ಣ. ನಾನು ಅತ್ತ ಬರುವುದಿಲ್ಲ. ಆದರೂ ಒಂದು ಮಾತು ಕಲ್ಯಾಣಿಗೆ ತಿಳಿಸಿಬಿಡು. 'ಕಲೆಯನ್ನು ತೊರೆದಂದಿಗೆ ಕಡೆಗಣಿಸಿದಂದಿಗೆ ಆಕೆ ಕಲಾವಂತೆಯಾಗುತ್ತಾಳೆ ; ಗರ್ಭಗುಡಿಯ ಕತ್ತಲಲ್ಲಿ ಅಡಗಿದ್ದಷ್ಟು ಕಾಲ, ಕಣ್ಣಿಗೆ ಕಾಣಿಸದೆ ಅಡಗಿಕೊಂಡಿದ್ದಷ್ಟು ಕಾಲ ದೇವರ ಬಗೆಗೆ ಭೀತಿ, ಭಕ್ತಿ, ವಿಶ್ವಾಸ, ಅಭಿಮಾನ, ಉಳಿಏರುತ್ತದೆ.' ಮಾಸ್ತರ್ ಇದನ್ನು ತಿಳಿಸಿದ್ದಾರೆ ಎಂದು ಹೇಳಿಬಿಡು. "

" ಆಗಲಿ ಸ್ವಾಮಿ...."

" ಒಂದು, ಕೈ ತಪ್ಪಿದಾಗ ಇನ್ನೊಂದನ್ನು ನಾವು ಉಪಯೋಗಿಸುತ್ತೇವೆ. ಅದೂ ತಪ್ಪಿದರೆ ಮತ್ತೊಂದು. ಆಗ ಆ ಅರಸುವ ವಸ್ತುವಿನ ಬಗೆಗೆ ಕಾತರ, ಕಳೆದ ವಸ್ತುವಿನ ಬಗೆಗೆ ದುಃಖ ಕಡಿಮೆಯಾಗುತ್ತಾ ಸಾಗುತ್ತದೆ. ಒಂದು ತಪ್ಪಿದಾಗ ಇನ್ನೊಂದನ್ನು ಅರಸುವ ಹುಚ್ಚುತನಕ್ಕೆ ಹೋಗದಷ್ಟು ಸಂಯಮಿಗಳಾದಾಗ ನಮಗೆ ವಿರಹವಿಲ್ಲ, ದುಃಖವಿಲ್ಲ, ಬಯಕೆಯೂ ಇಲ್ಲ."

" ಅಷ್ಟೆ ನನ್ನ ಮಾತು. ಕಲಾಮಂಡಲದ ಕೀರ್ತಿಗೆ ಕಲಂಕವಾಗುತ್ತದೆ ಎಂದು ಈ ಮಾತು ನಾ ಹೇಳುತ್ತಿಲ್ಲ. ಅಂಥ ದುಃಖವಿತ್ತು, ಅಶಕ್ತಿಯೂ ಇತ್ತು ಹಿಂದೆ. ಈಗ ಆ ಮೌಢ್ಯ ಮಾಯವಾಗಿದೆ. ಕಲಾಮಂದಿರ ಕಲಾವಿದೆಯ ಮೂಗುತಿ, ಓಲೆ. ಅಲ್ಲಿ ಬಿಳುಚು ಕಲ್ಲೂ ವಜ್ರವೆಂದು ಕರೆಯಲ್ಪಡುತ್ತದೆ ಈಗ. ಆದರೆ ವಜ್ರಕ್ಕೆ ಮಾತ್ರ ಚಿಂತೆ. ಅಲ್ಲಿಂದುರುಳಿದ ವಜ್ರ ವಜ್ರವೆಂದೇ ಕರೆಸಿಕೊಳ್ಳಬೇಕಾದರೆ ಯುಕ್ತ ಸ್ಥಾನಕ್ಕೆ ಏರಬೇಕು. "

" ನಿಜ ಸ್ವಾಮಿ. "

" ನಿಮಗೆ ಒಳ್ಳೆಯದಾಗಲಿ....ಅದಾರು ? "

ಶ್ರೀಕಂಠ ಮಾತಿನಿಂದಲೇ ಅದಾರೆಂದು ತಿಳಿದುಕೊಂಡು, ಅವನೆಡೆ ಆ ವ್ಯಕ್ತಿ ತಿರುಗಿದೊಡನೆಯೇ ನಮಸ್ಕರಿಸಿದ.

" ನನ್ನ ಗುರು–ನಾಟ್ಯಾಚಾರ್ಯ ವಿಜಯಕುಮಾರ್ " ಕೃಷ್ಣ ಶ್ರೀಕಂಠನಿಗೆ ಮಾಸ್ತರರ ಪರಿಚಯಮಾಡಿಕೊಟ್ಟ.

ಮಾಸ್ತರ್ ಅವನ ವಿಚಾರ ತಿಳಿದು, ಕಲಾಮಂಡಲದ ಬಗೆಗೆ ಮಾತುಕತೆ ಬೆಳೆಸಿದರು. ಇಬ್ಬರೂ ಸ್ವಲ್ಪ ಹೊತ್ತು ಮಾತನಾಡುತ್ತ ಮುನ್ನಡೆದರು. ಮರಣದಂಡನೆಗೆ ಒಳಗಾದ ಕೈದಿಯಂತೆ ಕೃಷ್ಣ ಅವರ ಹಿಂದೆ ನಡೆಯುತಿದ್ದ. ಶ್ರೀಕಂಠನ ಆತಿಥ್ಯವನ್ನು ಮಾಸ್ತರ್ ನಿರಾಕರಿಸಲಾರದೆ, ಕಾಫಿ ಹೋಟಿಲಿಗೆ ನುಗ್ಗಿದರು. ಮಾತು ಕತೆಗಳು ನಡೆದು ಮಾಸ್ತರ್ ಅವರನ್ನು ಬೀಳ್ಕೊಟ್ಟಾಗ ಶ್ರೀಕಂಠ, ಮಾಸ್ತರರ ಆಪ್ತ ಮಿತ್ರನಾಗಿದ್ದ.

" ಕನ್ನಡ ಕಲಾಮಂಡಲಕ್ಕೆ ಬಂದು ಕೆಲ ದಿನವಿದ್ದು ಹೋಗಬಹುದಲ್ಲ."

" ಆಗಲಿ ಸಾರ್. ಬಂದೇ ಬರುತ್ತೇನೆ. ತಾವೂ ಈ ಕಡೆ ಬಂದಾಗ ನಮ್ಮನ್ನು ಮರೆಯಬಾರದು."

" ನಾಡೇ ನನ್ನದು. ಮರೆಯುವುದಿಲ್ಲ."

" ಊರಿಗೆ....? "

" ಇಂದೇ ಹೊರಡುತ್ತೇನೆ. ಬೆಂಗಳೂರಿಗೆ ಹೋಗಿ, ಮದ್ರಾಸ್ ವರೆಗೂ ಹೋಗಬೇಕಾಗಿದೆ."

" ಆಗಲಿ....ಬರೆಯುತ್ತೇನೆ...."

" ಅಗತ್ಯವಾಗಿ. ಕೃಷ್ಣಾ...."

" ಸ್ವಾಮಿ...."

" ಕಲಾದೇವಿಯನ್ನು ಮರೆಯಬೇಡ "

" ಇಲ್ಲ ಸ್ವಾಮಿ "

" ಕಲಾಮಂಡಲದ, ಈ ಮಾಸ್ತರರ ಬಾಗಿಲು, ತೋಳು, ಸದಾ ತೆರೆದೇ ಇವೆ. ಎಂದು ಬೇಕಾದರೂ ಬಂದು ಹಿಂದಿನಂತೇ ದುಡಿಯಬಹುದು."

" ಆಗಲಿ ಸ್ವಾಮಿ...."

" ಬರುತ್ತೇನೆ...."

ಮಾಸ್ತರ್ ವೇಗವಾಗಿ ನಡೆದು ಹೊರಟುಹೋದರು. ಕೃಷ್ಣ ಬಹಳ ಹೊತ್ತು ಮೂಕನಾಗಿಯೇ ಕುಳಿತಿದ್ದ. ಶ್ರೀಕಂಠನೇ ಮಾತು ಆರಂಭಿಸಿದ.

"ಚಿನ್ನದಂತಹ ವ್ಯಕ್ತಿ. ಬೇರೊಬ್ಬರಾಗಿದ್ದರೆ ನಿಮ್ಮ ಮುಖವನ್ನು ನೋಡುತ್ತಿರಲಿಲ್ಲ."

"ನಿಜ ಶ್ರೀಕಂಠ. ಅಂತಹ ಅಪಘಾತವನ್ನು ಉಂಟು ಮಾಡಿದ್ದೇವೆ. ಅನ್ಯಾಯವೆಸಗಿದ್ದೇವೆ. ಆದರೂ ಅವರ ಹೃದಯದಲ್ಲಿ ಮಕ್ಕಳ ಸಾವಿರ ತಪ್ಪುಗಳನ್ನು ಮನ್ನಿಸುವ ಪವಿತ್ರ ಜ್ಯೋತಿ ಬೆಳಗುತ್ತಿದೆ."

"ಪ್ರತಿಯೊಂದು ಮಾತೂ ಆಣಿ ಮುತ್ತುಗಳು."

"ಬೆಂದ ಹೃದಯದಿಂದ, ಅನುಭವದ ರಸಪಾಕ ಹೊರಟಿದೆ. ಅವರ ಹೋರಾಟ, ತಪಸ್ಸು, ತ್ಯಾಗಗಳನ್ನು ನೆನೆದರೆ 'ಅದು ನಮ್ಮಿಂದ ಸಾಧ್ಯವೇ' ಎಂಬ ಭೀತಿ ಮೂಡುತ್ತದೆ. ನಾವು ಹೇಡಿಗಳಾಗುತ್ತೇವೆ ಶ್ರೀಕಂಠ. ಅವರ ಬಯಕೆ ಈಡೇರಿಸಲಾಗಲಿಲ್ಲವಲ್ಲ ಎಂದು ಕೊರಗು ನನ್ನ ಹೃದಯ ಹಿಂಡುತ್ತಿದೆ."

"ಅವರು ಆಶೀರ್ವದಿಸಿದ್ದಾರೆ. ಎಚ್ಚರಿಕೆ ನೀಡಿದ್ದಾರೆ. ಧೈರ್ಯ ವಿತ್ತಿದ್ದಾರೆ. ಮುನ್ನಡೆ ಕೃಷ್ಣರಾವ್. ಆ ಗುರುವಿನ ಪೂರ್ಣ ಕೃಪೆ ನಿನ್ನ ಮೇಲಿದೆ. ಅವರೇನೆಂದರು ಗೊತ್ತೇ?."

"ಏನೆಂದರು ?"

"ಹುಚ್ಚು ಹುಡುಗರು. ಪ್ರಣಯ, ಪ್ರೇಮ–ಎಂಬುದು ಏನೆಂದು ತಿಳಿಯದೆ ಹಾರಾಡಿ ಇತ್ತ ಬಂದರು. ಈಗ ಅದರ ಸವಿ ಸವಿದಾಗ ಇಷ್ಟೇ ಏನು ಎಂದರಿತು ವಿವೇಕಶಾಲಿಗಳಾಗಬಹುದು. ಎಷ್ಟಾದರೂ ನನ್ನ ಮಕ್ಕಳು–ನಾನು ಬೆಳೆಸಿದ ಕೂಸುಗಳು–ಎಂದರು."

"ನಿಜ. ಆ ಹುಚ್ಚು ಈಗಿಲ್ಲ. ಬದಲಾಗಿ ಜಿಗುಪ್ಸೆಯೂ ತಲೆದೋರಿದೆ. ಆದರೂ—ಕಲ್ಯಾಣಿಯ ಬಗೆಗೆ ನನಗೆ ಚಿಂತೆ ಅಧಿಕವಾಗಿದೆ."

"ಸೊಸೆಗೇರಿಗೆ ಗರತಿಯೊಬ್ಬಳು ಬಂದಿದ್ದಾಳೆ; ನನ್ನ ಮಗಳು. ಅವಳ ಕಡೆ ಗಮನವಿರಲಿ, ಅವಳು ದಾರಿ ತಪ್ಪದಂತೆ ನೋಡಿಕೊಳ್ಳಿ—ಎಂದು ಗದ್ಗದ ಕಂಠದಿಂದ ಹೇಳಿದರು ಕೃಷ್ಣ. ಕಲ್ಯಾಣಿಯ ಬಗೆಗೆ ಅವರಿಗೆ ಧೈರ್ಯ

ವಿಲ್ಲವಾಗಿದೆ. ಎಲ್ಲ ವಿಚಾರವನ್ನೂ ಅವರು ತಿಳಿದುಕೊಂಡಂತೆ ಕಾಣುತ್ತಿದೆ. ಆ ಗುರುವಿಗಾಗಿ ನಾವಿಬ್ಬರೂ ಯತ್ನಿಸಬೇಕು. ”

“ ನಿಜ. ನನ್ನ ಪಾಲಿನ ಕರ್ತವ್ಯದಲ್ಲಿ ನಾನಾಗಲೇ ಸೋಲಿನ ಕಡೆ ಸರಿಯುತ್ತಿದ್ದೇನೆ ಶ್ರೀಕಂಠ. ಇನ್ನು ನಿನ್ನ ಪಾಲಿನ ಕರ್ತವ್ಯ. ಅದನ್ನು ಸಾಧಿಸು-ನೋಡೋಣ. ನಿನ್ನ ಬಗೆಗೆ ಅವಳಿಗೆ ಅಭಿಮಾನವಿದೆ; ಭೀತಿಯೂ ಇದೆ. ”

“ ಆದರೂ ಹೆಣ್ಣು ಹೆಣ್ಣೇ. ನನ್ನ ಕರ್ತವ್ಯ ನಾನು ಮಾಡುತ್ತೇನೆ. ಧೈರ್ಯ ಮಾತ್ರ ಉಡುಗಿದೆ. ಅವಳ ಗೆಳತಿಯರು, ಅವಳಿರುವ ಕಂಪೆನಿ, ಅವಳು ಮನೆಯನ್ನೇ ಮರೆತಿರುವ ರೀತಿ ಇದಕ್ಕೆ ಆಸ್ಪದವಿತ್ತಿದೆ. ”

“ ನಿಜ. ಆದರೂ ಭವಿಷ್ಯ ನಮ್ಮದಲ್ಲ.. .ಆಶಾವಾದಿಗಳಾಗಿ ಹೋರಾಡುವುದು ಮಾತ್ರ ನಮ್ಮ ಪಾಲಿನದು–ಶ್ರೀಕಂಠ....ಇಂದಿಗೆ ನನಗೆ ಹೊಸ ಜೀವ ಬಂತು. ನನ್ನ ಗುರು ನನ್ನನ್ನು ಕ್ಷಮಿಸಿ ಆಶೀರ್ವದಿಸಿದ್ದಾನೆ. ”

“ ಮನ್ನಿಸಿದ್ದಾನೆ....”

“ ಗುರುದ್ರೋಹದ ಚಿಂತನೆ, ಗುರುಶಾಪದ ಭೀತಿ ನನ್ನನ್ನು ಇದುವರೆಗೂ ಕಾಡುತಿತ್ತು. ಈಗ ಅದರಿಂದ ಮುಕ್ತನಾದೆ. ”

“ ಅವರ ಬಯಕೆ ಈಡೇರಿಸು. ”

“ ಅದಕ್ಕಾಗಿ ಸರ್ವಸ್ವವನ್ನೂ ತೊರೆದು ಹೋರಾಡುತ್ತೇನೆ. ”

“ ಕಲ್ಯಾಣಿಯನ್ನು ಸಹಾ....” ನಗುತ್ತ ಅವನ ಬೆನ್ನು ತಟ್ಟಿ ಶ್ರೀಕಂಠ ಪ್ರಶ್ನಿಸಿದ.

“ ಅಗತ್ಯವಾದರೆ....”

“ ಅಗತ್ಯವಾಗದಿರಲಿ. ನಿಮ್ಮ ಬಾಳು ಜತೆಯಾಗೇ ಸಾಗಲಿ. ಧೈರ್ಯದಿಂದ ಮುನ್ನಡೆ. ”

ಇಬ್ಬರು ಗೆಳೆಯರೂ ತಮ್ಮ ತಮ್ಮ ಮನೆಯ ಕಡೆ ಹೊರಟರು.

ಕೃಷ್ಣ ಉತ್ಸಾಹದಿಂದ ಮನೆ ಹೊಕ್ಕಾಗ ಕಲ್ಯಾಣಿಯ ಸುಳಿವಿರಲಿಲ್ಲ.

೧೭

"ಏನೇ ಆಗಲಿ, ಆಕೆಯನ್ನು ನಮ್ಮ ಕಂಪೆನಿಗೆ ಸೇರಿಸಿಕೊಳ್ಳಲೇ ಬೇಕು."

"ಅಂದರೆ....ನನಗೆ ಅರ್ಥವಾಗಲಿಲ್ಲ...."

"ಆಗುತ್ತೆ....ಅವಳು ಬಂದೇಬರುತ್ತಾಳೆ."

"ಯಾವ ಕಂಪೆನೀಂತ. ಫಿಲಂ ಕಂಪೆನಿಗೆ ಅಥವಾ ನಿಮ್ಮ ಪರ್ಸನಲ್ ಕಂಪೆನಿಗೆ...."

"ಅರ್ಥವಾಯಿತು....ಯಾವುದಾದರೂ ಒಂದೇ. ಅಂತೂ ಅವಳೇ ಚಿತ್ರದ ನಾಯಕಿಯಾಗಬೇಕು."

"ಅದಕ್ಕೇನು; ಆಗಲಿ. ಆದರೆ ಆ ಕಂಪೆನಿಯವರು ಅವಳ ಕೈ ಬಿಡು ವಂತೆ ಕಾಣುವುದಿಲ್ಲ. ಅವರ ಚಿತ್ರಕ್ಕೆಲ್ಲ ಅವಳ ನೃತ್ಯವೇ ಜೀವಾಳ."

"ಪಾಲುಗಾರರಿಗೂ ಹಾಗೆಯೇ...."

"ನಮ್ಮ ಹಾಗೆ...."

"ಅದು ಮುಂದಿನ ವಿಚಾರ. ಅಂತೂ ಪ್ರಯತ್ನಿಸುವುದು ನಮ್ಮ ಧರ್ಮ."

"ಅದರಲ್ಲೊಂದು ಧರ್ಮ ಬೇರೆ ಇದೆಯೋ...."

"ಡ್ಯೂಟಿ....ಕರ್ತವ್ಯ....ಅಂತ."

"ಆಗಲಿ....ನಿಮಗೇ ಜಯವಾಗಲಿ....."

"ನೋಡೇಬಿಡುತ್ತೇನೆ....."

"ಏನನ್ನು ? ಹಾಗೆ ನೋಡುವುದಾದರೆ ನೀರಿಗಿಳಿಸಿ ಚಿತ್ರವೆತ್ತಬೇಕಾ ದೀತು...."

"ಅದನ್ನೂ ಮಾಡೋಣವಂತೆ"

"ಓಹೋ....ಅಂತೂ ದೃಶ್ಯಾವಳಿಯೂ ನಿರ್ಧರವಾಗಿದೆ....ಚಿಂತೆ ಯಿಲ್ಲ....ನಿಮ್ಮ ದೃಷ್ಟಿ ಪರದೆಯ ಹಿಂದಕ್ಕೂ ಹೋಗಿದೆ...."

"ಅದಿರಲಿ ಮಿಸ್ಟರ್ ಅರುಣ್. ಅವಳ ಬಗೆಗೆ ಖಚಿತ ಅಭಿಪ್ರಾಯ ಹೇಳಿ. ಅಂಥ ಹೆಣ್ಣು ಚಿತ್ರರಂಗದಲ್ಲೇ ಇಲ್ಲ. ಎಲ್ಲೂ ಅಪರೂಪ."

" ಅದೇನೋ ಸರಿಯೆ...."

" ನರ್ತನದಲ್ಲಿ ಅಸಮಾನಳು...."

" ನಮ್ಮನ್ನು ಕುಣಿಸಿದರೆ...."

" ಕುಣಿಯೋಣ. ಜತೆಗಾರರಾಗಿ ತಾನೆ....ಅಂತಹಳೊಡನೆ ಕುಣಿಯುವುದರಿಂದ ಲಾಭವೇ. ಅಭಿನಯದಲ್ಲೂ ಉತ್ತಮಳು. ದೇಹ....ಏನು ನಡು....ಎಂಥ ನಡೆ...."

" ಹಾಗೇನು? ಹದ್ದಿನ ಕಣ್ಣು ಯಾವ ಕಡೆ ಬಿದ್ದಿದೆ ಎಂಬುದೀಗ ತಿಳಿಯಿತು. "

" ಅದು ವಾಸ್ತವ. ಇಬ್ಬರಿಗೂ ತಿಳಿದೇ ಇರುವ ವಿಚಾರ. "

ಚಲನ ಚಿತ್ರ ಪ್ರಪಂಚದಲ್ಲಿ ಬಹಳವಾಗಿ ಅನುಭವ ಪಡೆದವನು ಅರುಣ. ತುಂಬು ಮೈ, ಆಜಾನುಬಾಹು, ಉಬ್ಬಿದ ಎದೆ, ದುಂಡು ಮೊಗ. ಆದರೂ ಒಂದಕ್ಕೊಂದು ಹೊಂದಿಕೊಳ್ಳದೆ ಸ್ವತಂತ್ರವಾಗಿ ಬೆಳೆದವುಗಳೆಲ್ಲ. ತೋರಿಕೆಗೆ ಸುಂದರವಾಗೇ ಕಾಣುತ್ತಾನೆ; ಬೆಳ್ಳಗಿದ್ದಾನೆ.

ಯಾವುದೋ ಒಂದು ವಿಷಗಳಿಗೆಯಲ್ಲಿ ಅವನಿಗೆ ಚಿತ್ರಪ್ರಪಂಚಕ್ಕೆ ಕಾಲಿಡಬೇಕೆಂಬ ಬಯಕೆ ಮೂಡಿತು. ಕನ್ನಡಿಯ ಮುಂದೆ ನಿಂತು ತನ್ನನ್ನು ತಾನೇ ನೋಡಿಕೊಂಡ. ವಿಚಿತ್ರ ಉಡುಗೆಗಳನ್ನು ಉಟ್ಟು ಫೋಟೋ ತೆಗೆಸಿಕೊಂಡ. ಚಿತ್ರಗಳನ್ನು ನೋಡಿದಂತೆಲ್ಲ, ತನ್ನ ಬಗೆಗೆ ತಾನೇ ಯೋಚನೆಮಾಡಿದಂತೆಲ್ಲ ಅವನಿಗೆ ತಾನು ಇತರ ಯಾವ ನಟನಿಗಿಂತಲೂ ಕಡಿಮೆಯಲ್ಲವೆಂದು ಕಂಡುಬಂದಿತು. ಈ ಹುಚ್ಚು ಬೆಳೆದಂತೆ ಸೂರ್ಯನಾರಾಯಣ-ಅರುಣಕುಮಾರ್ ಆದ.

ಚಲನಚಿತ್ರಗಳನ್ನು ಒಂದೂ ಬಿಡದೆ ನೋಡುತಿದ್ದ. ಚಿತ್ರಗಳ ಬಗೆಗೆ ಬರೆಯುವ ಪತ್ರಿಕೆಗಳೆಲ್ಲ ಅವನ ಮನೆ ಸೇರುತಿದ್ದುವು. ಚಿತ್ರಗಳನ್ನು ನೋಡಿ, ನಟನಟಿಯರ ಬಗೆಗೆ ಓದಿ ಓದಿ ಅವನಿಗೆ ನಟಿಯರ ಹುಚ್ಚು ಹಿಡಿಯಿತು. ವಿವಿಧ ನಟಿಯರಿಗೆ ಪತ್ರಬರೆದು ಅವರ ಫೋಟೋ ತರಿಸುವುದೇ ಕಸಬಾಯಿತು. ಅವರಿಗೆ, ದಂತದ ಗಂಧದ ಕೆತ್ತನೆಯ ಕೆಲಸಗಳ ಬಹುಮಾನಗಳನ್ನು ಕಳುಹಿಸುವುದರಲ್ಲಿ ಕಾಸು ನೀರಿನಂತೆ ವ್ಯಯವಾಯಿತು. ಸುಲೋಚನ, ಸಬಿತಾದೇವಿ, ಮಾಧುರಿ, ದೇವಿಕಾರಾಣಿಯವರ ಹುಚ್ಚು ವಿಪರೀತವಾಗಿ

ಕಾಲೇಜಿಗೂ ಶರಣುಹೊಡೆದು, ಕೈಗೆ ದೊರೆತಷ್ಟು ಹಣ ಎತ್ತಿಕೊಂಡು ಅವನು ಬೊಂಬಾಯಿಗೆ ಪ್ರಯಾಣ ಬೆಳೆಸಿದ. ತನ್ನ ಮುಂದಿನ ಬಾಳೆಲ್ಲ ಈ ತಾರೆಯರ ಸೇವೆಯಲ್ಲಿ ಎಂದು ತಿಳಿದು, ತಾಯಿತಂದೆಯರೊಡನೆ ಹೋರಾಡಿ, ತನ್ನ ಪಾಲಿಗಾಗಿ ವ್ಯಾಜ್ಯವಾಡಿ, ನಾಲ್ಕೈದು ಸಾವಿರ ಸಂಗ್ರಹಿಸಿ ಅರುಣ ಬೊಂಬಾಯಿ ಸೇರಿದ.

ತನ್ನ ನೆಚ್ಚಿನ ತಾರೆಯರನ್ನು ಕಾಣಲೆಂದು ಸ್ಟುಡಿಯೋಗೆ ಹೋದ. ಅಲ್ಲಿ ಕಾವಲುಗಾರರು ಒಳಬಿಡದಾಗ ಜುಹೂ ಬೀಚ್‌ನಲ್ಲಿ ಅವರಿಗಾಗಿ ಕಾದು ಕುಳಿತ. ಅವರ ಮನೆಗಳನ್ನು ಹುಡುಕಿ ಸತ್ಯಾಗ್ರಹಮಾಡಿದ. ಅಂತೂ ತಿಂಗಳುಗಟ್ಟಲೆ ಬೊಂಬಾಯಿಯಲ್ಲಿ ಕುಳಿತು ಪ್ರಯತ್ನಿಸಿದರೂ ಯಾವ ಸ್ಟುಡಿಯೋ ಒಳಗೂ ಅವನಿಗೆ ಪ್ರವೇಶ ದೊರೆಯಲಿಲ್ಲ. ಹಿಂದೀ ನಟನಾಗುವೆನೆಂದು ಕಲಾಸಿಪಾಳ್ಯ ಹಿಂದುಸ್ಥಾನಿ ಬಲ್ಲ ಇವನು ಹಿಂದೀ ಭಾಷೆಯನ್ನು ಹಗಲಿರುಳೂ ಗಟ್ಟಿಮಾಡಿದ. ಸಂಗೀತ ಕಲಿಯಲು ಹೊರಟು ಅಪಸ್ವರಗಳನ್ನು ಅಭ್ಯಾಸಮಾಡಿದ. ಅಂತೂ ಯಾವ ಯತ್ನವೂ ಸಫಲವಾಗಲಿಲ್ಲ. ಹಿಂದೀ ಚಿತ್ರಗಳ ಮೂಲಕ ರಜತಪರದೆಯ ಮೇಲೆ ಬರಲು ಎಳ್ಳಷ್ಟೂ ಆಸ್ಪದ ಸಿಗಲಿಲ್ಲ. ಹತ್ತಾರು ಸ್ಟುಡಿಯೋಗಳನ್ನು ಸುತ್ತಿಯಾಯಿತು. ಕೊನೆಗೆ ಭಾರತದ ಚಿತ್ರರಂಗದ ಎಲ್ಲ ನಟರನ್ನೂ ದಂಗುಬಡಿಸುತ್ತೇನೆಂದು ಹೊರಟ ಈ ಸಾಹಸಿ ತಾನೇ ಸಿಡಿಲು ಬಡಿದವನಂತೆ ಕನ್ನಡ ನಾಡಿಗೆ ಹಿಂತಿರುಗಿದ.

ಉತ್ತರ ಭಾರತೀಯರಿಗೆ ದಕ್ಷಿಣದವರನ್ನು ಕಂಡರೆ ಒಗ್ಗದು ; ಮಹಾರಾಷ್ಟ್ರೀಯರಿಗೆ ಕನ್ನಡಿಗರ ಬಗೆಗೆ ಜಿಗುಪ್ಸೆ. ಆ ಸ್ಟುಡಿಯೋ ಹಾಗೆ, ಈ ಚಿತ್ರ ತಯಾರಕರು ಹೀಗೆ. ಎಂದೇನೇನೋ ಹೇಳಿಕೊಳ್ಳುತ್ತ, ಈ ಕಲಾವಿದ, ತಾನಾಗಿ ತನ್ನ ದೇವಲೋಕಕ್ಕೆ ಹಿಂತಿರುಗಿದ.

ಕನ್ನಡನಾಡಿನಲ್ಲಿ ಆಗಲೋ ಈಗಲೋ ಒಂದೊಂದು ಕನ್ನಡ ಚಿತ್ರ ತಯಾರಾಗುತಿತ್ತು. ತಮಿಳುನಾಡಿನಲ್ಲಿ ತಮಿಳರ ಸಹಕಾರ ಸಹಾಯಗಳಿಂದ, ತಮಿಳು ಸಂಸ್ಕೃತಿ ಹಾಸ್ಯ ಅಪಹಾಸ್ಯಗಳನ್ನೆಲ್ಲ ಕೂಡಿಕೊಂಡು ಈ ಚಿತ್ರಗಳು ಸಿದ್ಧವಾಗುತಿದ್ದುವು. ಇಲ್ಲಿ ಯಾವ ಕಲಾವಿದನೂ ಚಿತ್ರದಲ್ಲಿ ಅಭಿನಯಿಸುವುದೇ ಉದ್ಯೋಗವಾಗಿ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ.

ಕರೆದಾಗ ಕೈಗೆಟುಕುವ ನಾಟಕ ಕಂಪೆನಿಯ ನಟರು ಯಾವ ವೇಷ ಧರಿಸಲೂ ಸಿದ್ಧವಾಗೇ ಇದ್ದರು.

ಈ ಕಾರಣಗಳಿಂದ ಅರುಣ, ಮುಂಜಾನೆ ಐದು ಗಂಟೆಗೆದ್ದು ಏಳು ಗಂಟೆಗೆ ರೇಡಿಯೋ ಮೂಲಕ ಉದಯರಾಗ ಹಾಡಿಸುವ ಹೋಟೆಲನ್ನು ತೆರೆದ. ಕಲಾವಿದರ ಸೇವೆಯನ್ನಾದರೂ ಮಾಡಲು ಸಹಾಯಕವಾಗುವ ಈ ಉದ್ಯಮದಲ್ಲಿ ಅವನಿಗೆ ಪ್ರಗತಿ ತೋರಿತು. ಹೋಟೆಲು ಮಾಲಿಕನಾಗಿ ಅರುಣನಿಗೆ ಕಲಾಪ್ರೇಮಿಗಳ ಪರಿಚಯವಾಯಿತು. ತನ್ನ ಜೀವನ ಹಸನಾಯಿತು. ಆಗಲೇ ಸಂಸಾರರಂಗದಲ್ಲಿ ಕಾಲಿಟ್ಟ ಅವನ ಹೆಂಡಿರು ಮಕ್ಕಳು ಉಪವಾಸ ಬೀಳುವುದು ತಪ್ಪಿತು. ಕಲಾಸೇವೆಯ ಬಯಕೆಯಿಂದ ಬಳಲಿ ಬೆಂಡಾಗಿದ್ದ ಅರುಣ ಹಾಲು ನೀರಿನ ಸಹವಾಸದಿಂದ ಚಿಗುರಿಕೊಂಡ.

ಹೋಟೆಲಿಗೆ ಬಂದು ಕಾಫಿ ಕುಡಿಯುತ್ತ ಅವನ ಪರಿಚಯ ಮಾಡಿಕೊಂಡು ಕಲಾರಂಗದ ಕಡೆಗೆ ಕಣ್ಣು ಹೊರಳಿಸಿದ ಪದ್ಮನಾಭ ಸ್ವತಃ ಕಲಾವಿದನೂ ಅಲ್ಲ, ಈ ರಂಗದಲ್ಲಿ ದುಡಿಯಬೇಕೆಂದೇ ಬಯಸಿದವನೂ ಅಲ್ಲ. ಮೈಸೂರಿಗೆ ಮಾವನ ಮನೆಗೆ ಬಂದಾಗಲೆಲ್ಲ ಅರುಣನ ಇಂದ್ರಭವನಕ್ಕೆ ಕಾಫಿ ಕುಡಿಯಲು ಹೋಗುವ ವಾಡಿಕೆ. ನಾಟಕದ ನಟನಂತೆ ಕಾಣುವ ಅರುಣನನ್ನು ಕಂಡು ಕುತೂಹಲ ಕೆರಳಿ ಅವನ ಬಗೆಗೆ ತಿಳಿಯಲು ಮುಂದಾದ. ಹಾಗೇ ಇಬ್ಬರೂ ಸ್ನೇಹಿತರಾದರು.

ಪದ್ಮನಾಭನಿಗೆ ತಂದೆ ಬಿಟ್ಟುಹೋದ ಜಮೀನು, ನಾಲ್ಕೆಂಟು ಬಾಡಿಗೆ ತರುವ ಮನೆಗಳೂ ಇದ್ದುವು. ಜತೆಗೆ ಇತರರೊಡನೆ ಸೇರಿ, ಪಾಲುಗಾರನಾಗಿ, ಯುದ್ಧಕಾಲದಲ್ಲಿ ವ್ಯಾಪಾರಮಾಡಿ ಇಪ್ಪತ್ತು ಮುವತ್ತು ಸಾವಿರ ಸಂಪಾದಿಸಿದ್ದ. ಅನೇಕ ವ್ಯಾಪಾರಿಗಳ ಪರಿಚಯವಾಗಿತ್ತು. ವ್ಯವಹಾರ ಲೋಕದಲ್ಲಿ ಗೌರವವೂ ಇತ್ತು.

ಅರುಣನ ವಾದ, ಮಾತುಗಾರಿಕೆಗಳಿಂದ ಅವನಿಗೂ ಚಿತ್ರ ಪ್ರಪಂಚದ ಹುಚ್ಚು ಹಿಡಿಯಿತು. ಈ ರಂಗ ನಿಜಕ್ಕೂ ಲಾಭದಾಯಕ ಎಂಬುದರ ಜತೆಗೆ, ತನ್ನೆಲ್ಲ ಚಪಲ ತೀರಿಸಿಕೊಳ್ಳಲು ಉತ್ತಮ ಹೊಲ ಎಂಬುದೂ ಅವನಿಗೆ ಅರಿವಾಯಿತು. ಸಿನಿಮಾ ನಟಿಯರು ನಾನು ಹೇಳಿದಂತೆ ಕೇಳುತ್ತಾರೆ; ನಾನೂ ಒಬ್ಬ ಚಿತ್ರ ತಯಾರಕನಾಗಿ ಮೆರೆಯಬಹುದು ಎಂದಾತ ಉಬ್ಬಿದ.

ಅವನಿಗೆ ಸಂಸಾರದಲ್ಲೂ ಆಗಲೇ ಬೇಸರ ಬಂದಿತ್ತು. ವರುಷಕ್ಕೊಂದು ಹೆರುವ ಹೆಂಡತಿಯನ್ನು ಕಂಡು, ಈಕೆ ಪೂರ್ಣ ಸುಖಕ್ಕೆ ಅಡ್ಡಿ ಎಂಬ ಜುಗುಪ್ಸೆಯೂ ಅವನಲ್ಲಿ ಮೂಡಿ, ಬೇರೆ ದಾರಿಯನ್ನಾತ ಹುಡುಕುತಿದ್ದ. ತಂದೆ ಎಂದು ಕರೆಯದ ಮಕ್ಕಳ ತಂದೆಯಾಗಲು ಬಯಸುವವನಿಗೆ ಈ ಪ್ರಪಂಚ ಒಳ್ಳೆಯದೆಂದು ಅವನಿಗೆ ಅನಿಸದಿರಲಿಲ್ಲ.

ಚಿತ್ರ ತಯಾರಿಯ ಹುಚ್ಚು ಬೆಳೆದೊಡನೆಯೇ ಪದ್ಮನಾಭ ತನ್ನ ವ್ಯಾಪಾರೀ ಮಿತ್ರರಿಗೆ ಗಂಟುಬಿದ್ದ. ನಾಲ್ಕು ಮಂದಿ ಸೇರಿ ಒಂದು ಲಕ್ಷ ಕೂಡಿಸಿದರು. ಮೋಹಿನಿ ಪಿಕ್ಚರ್ಸ್ ಸಂಸ್ಥೆ ಒಂಟೆಕೊಪ್ಪಲಿನಲ್ಲಿ ಸ್ಥಾಪಿತವಾಯಿತು. ಪದ್ಮನಾಭ ಸಂಸ್ಥೆಯ ಮೇಲ್ವಿಚಾರಕನಾದ. ಅರುಣ ಅವನ ಬಲಗೈಯೂ, ಮಂತ್ರಿಯೂ, ಮಾಂಡಲಿಕನೂ ಆದ. ಅನುಭವವಿಲ್ಲದ ಪದ್ಮನಾಭನಿಗೆ ಪೂರ್ಣ ಅನುಭವವಿದ್ದ ಅರುಣನ ಸಾರಥ್ಯದಿಂದ ತುಂಬ ಅನುಕೂಲವಾಯ್ತಿತು.

ಕಥೆ ಬರೆಯಲು ಶ್ರೀಕಂಠನನ್ನೇ ಗೊತ್ತುಮಾಡಬಹುದೆಂದು ಸ್ಟುಡಿಯೋ ಮಾಲಿಕರೇನೋ ತಿಳಿಸಿದರು. ಆದರೆ, ಅವನು ಕಂಪೆನಿಯಲ್ಲಿ ನೀತಿ ಇರಬೇಕು, ನಿಯಮವಿರಬೇಕು ಎಂದೇನೇನೋ ವಾದಿಸಹೊರಟಾಗ ಅವನ ಬಗೆಗೆ ಪದ್ಮನಾಭನಿಗೆ ಭೀತಿಯೇ ಬೆಳೆಯಿತು. ನಾವು ಹೇಳಿದಂತೆ ಕೇಳಿಕೊಂಡು ನಮಗೆ ಬೆಂಬಲವಾಗಿರುವ ವ್ಯಕ್ತಿ ಇವನಲ್ಲ. ಎಲ್ಲಾ ಪತ್ರಿಕೆಗಳೂ ಗುರುತು ಅಂತ ಹಾರುತ್ತಾನೆ. ಬುದ್ಧಿವಂತನೇನೋ ನಿಜ. ಆದರೆ.... ನಾಳೆ ನಮ್ಮ ನೀತಿಯ ಬಗೆಗೂ ಮಾತೆತ್ತಬಹುದು. ಅಂತಹವರನ್ನು ದೂರವಿರಿಸಿ, ಅಭಿಮಾನವಷ್ಟೆ ತೋರಿದರೇನೆ ಉಚಿತ ಎಂದು ಅರುಣ ಸೈಗುಟ್ಟಿದ. ಅಂತೂ ಕೊನೆಗೆ ನಾಟಕ ಕಂಪೆನಿಗಳಲ್ಲಿ ನಿಂತು, ನಾಟಕ ಬರೆಯುತ್ತ ಅಭಿನಯಿಸುತ್ತ, ಕಂಪೆನಿ ಮಾಲಿಕರ ಮಂತ್ರಿಯೆನಿಸಿದ್ದ ರಂಗನಾಥ ಇವರ ಕಥಾಲೇಖಕನಾದ.

ರಂಗನಾಥ ಹುಡುಗಿಯರ ಗುರು ಎಂದು ಹೆಸರು ಗಳಿಸಿದ್ದ. ಯಾವ ಹುಡುಗಿ ಬೇಕಾದರೂ ಒಂದು ಗಂಟೆಯಲ್ಲಿ ತರಿಸಬಲ್ಲ ಎಂದು ಜನ ಅವನ ಬಗೆಗೆ ಆಡುತಿದ್ದರು. ನಾಟಕ ಕಂಪೆನಿಗೆ ಸೇರಿದ ನಟಿಯರೆಲ್ಲ ಅವನ ಮೂಲಕವೇ ಬಂದರಂತೆ. ಕಂಪೆನಿಯಿಂದ ಸಂಬಳ ದೊರೆಯದೆ ಅಥವಾ ಮಾಲಿಕರ

ಕೋಪಕ್ಕೆ ಒಳಗಾಗಿ ನಟಿಯರು ಹೊರಟುಹೋದಾಗಲೆಲ್ಲ ಆ ಸ್ಥಾನವನ್ನು ತುಂಬುವ ಕಾರ್ಯ ರಂಗನಾಥನದಾಗಿತ್ತು. ಅವನನ್ನೇ ಕಂಪೆನಿಗೆ ಸೇರಿಸಿ ಕೊಂಡರೆ ನಟಿಯರಿಗೆ ಬರಗಾಲವಿರದು ಎಂದು ನಂಬಿ ಪದ್ಮನಾಭ ಚಿತ್ರ ಕತೆ ಬರೆಯಲು ನೇಮಿಸಿಕೊಂಡ.

ನಾಟಕ ಕಂಪೆನಿಯ ಕೆಲವು ನಟರಿಗೂ ವಾಸ್ತವವಾಗೇ ಕಂಪೆನಿಯಲ್ಲಿ ಕೆಲಸ ದೊರೆಯಿತು. ಒಂದಿಬ್ಬರು ನಾಟಕ ಕಂಪೆನಿಯ ನಟಿಯರೂ ಕಂಪೆನಿ ಮನೆ ಸೇರಿದರು. ಆದರೂ, ಕಲ್ಯಾಣಿಯನ್ನು ಕಂಡ ಪದ್ಮನಾಭನಿಗೆ ಅವಳನ್ನು ಏನಾದರೂ ಮಾಡಿ ತನ್ನ ಕಂಪೆನಿಗೆ ಸೇರಿಸಿಕೊಳ್ಳಬೇಕೆಂಬ ಬಯಕೆ ಇದ್ದೇ ಇತ್ತು.

ಬಬ್ರುವಾಹನ ಚಿತ್ರದ ಶೂಟಿಂಗ್‌ಗೆ ಆತ ನಾಲ್ಕಾರು ಬಾರಿ ಹೋಗಿದ್ದ. ಸ್ಟುಡಿಯೋದಲ್ಲೂ ಅವಳನ್ನು ನೋಡಿ ಕಂಪೆನಿಯಲ್ಲಿ ಇಂಥ ಇಬ್ಬರಿದ್ದರೆ ಬೇರೆ ನಟಿಯರೇ ಬೇಕಾಗಿಲ್ಲ ಎಂದು ಬಾಯಿನೀರು ಸುರಿಸಿದ್ದ. ಅರುಣನೊಡನೆಯೂ ಅವಳ ಸೌಂದರ್ಯವನ್ನು ವರ್ಣಿಸಿ ಅವನೂ ಆಕೆ ಯನ್ನು ನೋಡುವಂತೆ ಮಾಡಿದ್ದ. ಕಲ್ಯಾಣಿಯನ್ನು ಕಂಡಂದಿನಿಂದ ಅವಳನ್ನು ಚಿತ್ರಕ್ಕೆ ಸೇರಿಸಿಕೊಳ್ಳಬೇಕೆಂಬ ಬಯಕೆ ಇಬ್ಬರಲ್ಲೂ ಮೂಡಿತು.

ಸ್ಟುಡಿಯೋದಲ್ಲಿ ಮ್ಯಾಕಪ್‌ಮ್ಯಾನ್ ಸತ್ಯನಾರಾಯಣನನ್ನು ವಿಚಾ ರಿಸಿ, ಅವಳ ಗುಣ ಶೀಲಗಳ ಬಗೆಗೆ ತಿಳಿದುಕೊಂಡರು. ಸ್ಟುಡಿಯೋ ಮಾಲಿಕರೂ ಅವಳು ಅದ್ಭುತ ಕಲಾವಿದೆ ಎಂದು ಹೊಗಳಿದರು. ಯಾರನ್ನು ಕೇಳಿದರೂ ಅವಳ ಬಗೆಗೆ ವಿರುದ್ಧ ಮಾತನಾಡಲಿಲ್ಲ. ಶ್ರೀಕಂಠನನ್ನು ಕೇಳೋಣವೆಂದರೆ ಧೈರ್ಯ ಸಾಲದು. ಹಾಗೇ ತಮ್ಮ ಕಡೆಯಿಂದ ರಂಗ ನಾಥನನ್ನು ಈ ಕೆಲಸಕ್ಕೆ ಹಚ್ಚಿದರು.

ರಂಗನಾಥ ರಾಜುವನ್ನು ವಿಚಾರಿಸಿದ. ರಮಾನನ್ನು ಮಾತನಾಡಿಸಿದ. ಅವಳು ಬಂದರೆ ನಿನ್ನ ಸ್ಥಾನ ಕಟ್ಟಿಟ್ಟಂತೆ ಎಂದು ಆಕೆಗೆ ಆಶೆ ಹುಟ್ಟಿಸಿದ. ರಮಾ, ರಾಜು ಇಬ್ಬರೂ ಈ ದಾರಿಯಲ್ಲಿ ದುಡಿಯುವಂತೆ ಮಾಡಿದ.

ಕಲ್ಯಾಣಿಯನ್ನು ಮೋಹಿನಿ ಚಿತ್ರಸಂಸ್ಥೆಗೆ ಸೇರಿಸಿದರೆ ತಮಗೆ ಲಾಭ ವಿದೆಯೆಂದು ಎಲ್ಲ ಕಲಾವಿದರೂ ದುಡಿಯತೊಡಗಿದರು. ಅವಳನ್ನು ಒಪ್ಪಿಸಿದರೆ ಸಾಕು–ಮುಂದೆ ಯಾವ ತೊಂದರೆಯೂ ಇಲ್ಲ ಎಂದು ನಿರ್ಧರಿಸಿ

ಆ ದಾರಿಯಲ್ಲಿ ದುಡಿಯಲು ಅನುವಾದರು. ರಂಗನಾಥ ಬೀರಿಯ ಪರಿಚಯ ವಿದ್ದವನು. . ಈಗ ಆಕೆ ಕಲ್ಯಾಣಿಯ ಮನೆಯಲ್ಲಿ ಕೆಲಸಕ್ಕೆ ಸೇರಿರುವುದನ್ನು ತಿಳಿದು ಅವಳ ಕೈಗೆ ಹತ್ತು ರೂಪಾಯಿಯ ಎರಡು ನೋಟುಗಳನ್ನಿತ್ತು ಸಂದೇಶವನ್ನು ಸಾರಿದ.

"ಅದಕ್ಕೇನು ಸ್ವಾಮಿ. ಖಂಡಿತ ಜಯವಾಗುತ್ತದೆ." ಅಂದಳು ಬೀರಿ .

ಅವಳೆಂದೂ ಅಪಜಯವಾಗುತ್ತೆ ಎಂದು ನುಡಿದವಳೇ ಅಲ್ಲ.

ಕೃಷ್ಣ, ಸುಂದರ ಮನೆಯಲ್ಲಿಲ್ಲದಾಗ ಬೀರಿ ತನ್ನ ಕಾರ್ಯಾರಂಭಮಾಡಿದಳು. ಮೋಹಿನಿ ಚಿತ್ರಸಂಸ್ಥೆಯ ಸುದ್ದಿ ತಿಳಿಸಿದಳು.

ಹಾಗೇ ತನ್ನ ಅನುಭವದ ರಸಪಾಕವನ್ನೂ ಅವಳ ಕಿವಿಗೆರೆದಳು.

ದಿನಗಳೆದಂತೆ ಬೀರಿಯ ಉಪದೇಶ ಬಲವಾಯಿತು.

ಯಾವುದರ ಕೊರತೆಯ ಬಗೆಗೆ ಹೇಳಿದರೂ–ಬೀರಿ ತನ್ನ ಅಭಿಪ್ರಾಯವನ್ನು ಸೂಚಿಸಿ ತನ್ನ ಹಾದಿಯಲ್ಲಿ ನಡೆಯುವಂತೆ ತಿಳಿಸುತಿದ್ದಳು.

" ಬೇಡ ಅಂದವರಾರು ? ಮಿತಿ ಇರಲಿ. ಸಾವಿರ ರೂಪಾಯಿ ಅನ್ನಿ. ಬರುತ್ತೆ. ಐನೂರು ಅನ್ನಿ ಬರುತ್ತೆ. "

" ಧೈರ್ಯ ಸಾಲದು...."

" ಅದೇ ನಿಮ್ಮ ಹೇಡಿತನ. ಪಾಪ....ಅಂತ. ಅದೇನು ಹಾಗೆ ಬಂದವನು ಗುರುತುಚೀಟಿ ಅಂಟಿಸುತ್ತಾನೆಯೆ ? "

" ಆದರೂ...."

" ಸರಿ ಸರಿ. ನಿಮ್ಮ ಹುಚ್ಚು ಹೀಗೇ. ಆಮೇಲೆ ಪ್ರಾಯ ಸಂದ ಬಳಿಕ ಲಾಭವಿಲ್ಲದಾಗ ಎಚ್ಚರವಾಗುತ್ತೀರಿ. "

ಇಂಥ ಉಪದೇಶ ಎಷ್ಟೋ ಬಗೆಯಾಗಿ ಸಾಗಿದೆ. ಕಲ್ಯಾಣಿ ಖಚಿತವಾಗಿ ತೀವ್ರವಾಗಿ ಅದನ್ನು ವಿರೋಧಿಸಿದ್ದಾಳೆ. ಆದರೂ ಆ ಮಾತು ಬಂದಾಗಲೆಲ್ಲ ಚರ್ಚೆ ಮುಂದುವರಿಸಿದ್ದಾಳೆ. ಪುನಃ ರೇಗಾಡಿದ್ದಾಳೆ. ಇಲ್ಲ–ಸಾಧ್ಯವಿಲ್ಲ ಎಂದಿದ್ದಾಳೆ.

ಆಶಾವಾದಿಯಾದ ಬೀರಿಯು ಮಾತ್ರ ನಿರಾಶಳಾಗಲಿಲ್ಲ.

ಅವಳು ಇನ್ನೂ ಒಂದು ಹೆಜ್ಜೆ ಮುಂದುವರಿಸಿದಳು.

ಕಲ್ಯಾಣಿ ಮೈ ಕೈ ನೋವು, ನೆಗಡಿ ಎಂದು ಮಲಗಿದಾಗ ಅವಳಿಗರಿಯದಂತೆ 'ಅಮೃತ' ಕುಡಿಸಿದಳು.

"ತುಂಬ ಒಳ್ಳೆಯ ಔಷಧಿ. ಮೈ ಕೈ ನೋವು ಹಗುರವಾಯಿತು. ಚೆನ್ನಾಗಿ ನಿದ್ರೆ ಬಂತು." ಎಂದು ಕಲ್ಯಾಣಿ ನುಡಿದಾಗ ಮನಸ್ಸಿನಲ್ಲೇ ನಕ್ಕಿದ್ದಾಳೆ ಬೀರಿ.

ಹತ್ತಾರು ಬಾರಿ ಹೀಗೆ ಔಷಧ ಕುಡಿಸಿದ್ದಾಳೆ.

ಆದರೂ ಅದೇನೆಂದು ಕಲ್ಯಾಣಿಗೆ ತಿಳಿಸಲಿಲ್ಲ. ಕೃಷ್ಣರಾಯನಿಗೂ ತಿಳಿದಿರಲಿಲ್ಲ.

ಈಗ ರಂಗನಾಥನ ಸೂಚನೆ ಬಂದಾಗ ಬೀರಿ ತನ್ನ ಮುಂದಿನ ಕರ್ತವ್ಯದ ಬಗೆಗೆ ನಿರ್ಧರಿಸಿಕೊಂಡಳು. ರಮಾ ಮನೆಯಲ್ಲಿ ಅದನ್ನು ನಡೆಸೋಣವೇ? ಅಥವಾ ಮೋಹಿನಿ ಚಿತ್ರಸಂಸ್ಥೆಯಲ್ಲೇ ಏರ್ಪಡಿಸೋಣವೇ? ಎಂದು ಅವಳು ಯೋಚಿಸುತಿದ್ದಳು.

ಆದರೂ ಎಚ್ಚರಿಕೆ ಮುಖ್ಯ. ಇಲ್ಲವಾದರೆ ರೇಗಿದ ನಾಗವಾದಾಳು ಆಕೆ ಎಂದು ಬೀರಿ ಹೆದರಿದಳು. ಅವಳದು ದೂರ ದೃಷ್ಟಿ. ಇಂದಲ್ಲದಿದ್ದರೆ ನಾಳೆಯಾದರೂ ಆಕೆ ತನ್ನ ಪುಂಗಿಯ ಸ್ವರಕ್ಕೆ ತಲೆದೂಗುತ್ತಾಳೆ ಎಂಬ ಆತ್ಮವಿಶ್ವಾಸ ಅವಳಿಗಿತ್ತು. ಈಗ ಅವಸರ ಮಾಡಬಾರದೆಂದು ಅವಳು ತನ್ನ ತುರುತನ್ನು ತಾನೇ ತಡೆದುಕೊಂಡಳು.

ರಂಗನಾಥ 'ಏನಾಯಿತು' ಎಂದು ಕೇಳಲು ಬಂದಾಗ ಬೀರಿ ತನ್ನ ಉಪಾಯ ಹೇಳಿದಳು.

"ಮೋಹಿನಿ ಕಂಪೆನಿಯಲ್ಲೇ ಎಲ್ಲವೂ ನಡೆಯಲಿ. ರಮಾ, ಶಾಂತಾ ಮತ್ತಿತರರು ಅವಳನ್ನು ಕರೆದುಕೊಂಡು ಬರುತ್ತಾರೆ. ಅಲ್ಲೇ ಕಂಪೆನಿಯ ಬಗೆಗೆ ಹೇಳಿ, ಉಪಾಹಾರ ಸತ್ಕಾರ ಏರ್ಪಡಿಸಿ, ನಾಲ್ಕು ಮಾತುಗಳನ್ನಾಡಿದರೆ, ಅವಳು ಕಂಟ್ರಾಕ್ಟಿಗೆ ಸಹಿ ಹಾಕುತ್ತಾಳೆ. ವಿಚಾರಮಾಡಲು ಎಡೆ ಕೊಡಬಾರದು."

"ಒಪ್ಪದಿದ್ದರೆ...."

"ಸಾವಿರ ಹೆಚ್ಚು...."

"ನಟಿಸುವುದೇ ಇಲ್ಲವೆಂದರೆ...."

" ಅದೆಲ್ಲ ಸುಮ್ಮನೆ. ಹೆಂಗಸರ ವಿಚಾರ ನನಗೆ ಗೊತ್ತು. ಮಹಾ ಪತಿವ್ರತೆಯರನ್ನೇ ಮನೆಹೊರಡಿಸಿದ್ದೇನೆ. ನನ್ನ ಕೂದಲೂ ಬಿಳಿದಾಗಿದೆ. ಹಾಗೂ ಒಪ್ಪದಿದ್ದರೆ....ಎಲ್ಲರಿಗೂ ಕ್ರಶ್‌ಕೊಡು....ಅವಳಿಗೆ ಅರ್ಧ ಕ್ರಶ್ ಅರ್ಧ ಅಮೃತ...."

" ಅದೀಗ ಉಪಾಯ...."

" ಅಂದರೆ ಅದು ಯಾರಿಗೂ ತಿಳಿಯಬಾರದು. ಎಚ್ಚರಿಕೆ."

" ಹ್ಞೂ...."

ರಂಗನಾಥ ಮತ್ತೆ ಹತ್ತು ರೂಪಾಯಿ ಅವಳ ಕೈಯಲ್ಲಿಟ್ಟು ಹೊರಟು ಹೋದ.

ಬೀರಿ ರಮಾ ಕಡೆಗೆ ತನ್ನ ಗಮನ ಹರಿಯಿಸಿದಳು.

ತ್ರಿಭುವನ ಕಂಪೆನಿಯಿಂದ ಸಿನಿಮಾ ನೋಡುವುದಕ್ಕೆಂದು ಹೊರಟವರು ಮೂರು ಗಂಟೆಗೇ ಒಂಟಿಕೊಪ್ಪಲ್ ಕಡೆಗೆ ತಿರುಗಿದರು. ಅಡ್ಡಾಡಿಕೊಂಡು ಹಾಗೇ ಸಿನಿಮಾ ನೋಡಿ ಬರೋಣ ಎಂದು ಶಾಂತಾ ಉಪಾಯ ಹೂಡಿದಳು.

ರಮಾ, ಲಕ್ಷ್ಮಿ ತಲೆದೂಗಿದರು.

ಕಲ್ಯಾಣಿ ಉಪಾಯವಿಲ್ಲದೆ ಒಪ್ಪಿಕೊಂಡಳು.

ಅವರು ಮೋಹಿನಿ ಚಿತ್ರಸಂಸ್ಥೆಯ ಪಕ್ಕದಲ್ಲೇ ಹೋಗುತಿದ್ದಾಗ ಶಾಂತಾ ಹೊಸ ಮಾತು ಆರಂಭಿಸಿದಳು.

" ಈಗೊಂದು ಉಪಾಯ ಮಾಡೋಣ. ತಮಾಷೆಯಾಗಿರುತ್ತೆ."

" ಏನು...."

" ಈ ಕಂಪೆನಿಯೊಳಗೆ ನಡೆಯೋಣ. ಮಾತನಾಡಿ ಬರೋಣ. ಕಂಪೆನಿ ಹೇಗಿದೆ ನೋಡೋಣ. "

" ನಾವಾಗಿ ಹೋಗಬಾರದು...."

" ಸರಿ....ಹೋದರೇನಂತೆ....ಈ ಎಳಪು ಕಂಪೆನಿ ಹೇಗಿದೆ ನೋಡೋಣಾಂದ್ರೆ...."

" ಹೌದೇ. ಕೊಂಚ ಕುಣಿಸೋಣ...." ಅಂದಳು ರಮಾ.

ಮಾತನಾಡುತ್ತ ಎಲ್ಲರೂ ಕಂಪೆನಿಯ ಮನೆಗೆ ನಡೆದರು. ಬಾಗಿಲಲ್ಲಿ ನಿಂತಿದ್ದ ಕಾವಲಿಗ ಅವರನ್ನು ನೇರವಾಗಿ ಒಳಗೆ ನಡೆಯಲು ಬಿಟ್ಟ.

"ಹೆಂಗಸರೆಂದರೆ ಹಾಗೆ....ಎಲ್ಲಿ ಹೋದರೂ ಫ್ರೀಪಾಸ್" ಎಂದು ಶಾಂತಾ ನಗುತ್ತ ಕಲ್ಯಾಣಿಯ ಕಿವಿಯಲ್ಲಿ ನುಡಿದಳು.

ಅವರ ನಗು, ಬಳೆಗಳ ಸದ್ದು ಕೇಳಿ ಪದ್ಮನಾಭ ಹೊರಗೆ ಬಂದ.

ಸಂತೋಷವನ್ನು ವ್ಯಕ್ತಪಡಿಸಲು ಬಾಯಿ ಬಿಡುತ್ತ, ಓರೆಗಣ್ಣಿನಿಂದ ಅವರನ್ನೇ ನೋಡುತ್ತ, ಅಂಗಿ ಗುಂಡಿಯ ಮೇಲೆ ಕೈಯಾಡಿಸಿ, ದೇಶಾವರದ ನಗೆ ಬೀರಿ "ಬನ್ನಿ ಬನ್ನಿ...." ಎಂದು ಸ್ವಾಗತಿಸಿದ.

ಹುಟ್ಟಿದ ಮೇಲೆ ಹೆಂಗಸರನ್ನೇ ನೋಡದವರಂತೆ ವಿಚಿತ್ರವಾಗಿ ಅಭಿನಯಿಸುವ ಅವನನ್ನು ನೋಡಿ ಕಲ್ಯಾಣಿಗೆ ನಗು ಬಂತು.

ಎಲ್ಲರೂ ಆಫೀಸಿನೊಳಹೊಕ್ಕು ಕುಳಿತುಕೊಂಡರು.

"ನೀವು....ಏನು ಬಂದಿರಿ...."

"ಬೋರ್ಡಿದೆ. ನೋಡೋಣಾಂತ...." ಎಂದು ಶಾಂತಾ ನಕ್ಕಳು.

ಮೊದಲಬಾರಿ ವೇಶ್ಯೆಯ ಮನೆಗೆ ಕಾಲಿಟ್ಟ ತರುಣನಂತೆ ತಬ್ಬಿಬ್ಬಾಗಿ ತಾನೂ ಮುಗುಳುನಗೆ ನಗುತ್ತ ಪದ್ಮನಾಭ ಅವರನ್ನೇ ನೋಡುತ್ತಿದ್ದ.

"ಅವರು....ಅವರು ಕಲ್ಯಾಣಿ ಅಲ್ಲವೇ?"

"ಹ್ಞೂ....ಅವರು ಕಲ್ಯಾಣಿ. ಇವಳು ರಮಾ....ಇವಳು ಲಕ್ಷ್ಮಿ.... ನಾನು ಶಾಂತಾ....ತ್ರಿಭುವನ ಕಂಪೆನಿಯ ನಟಿಯರು.

ಬಿಸಿಯುಸಿರು ಬಿಡುತ್ತ ಬೆವರು ಸುರಿಸಿಕೊಂಡು ರಂಗನಾಥ ಆಫೀಸಿನೊಳಕ್ಕೆ ಬಂದು, ಪದ್ಮನಾಭನನ್ನು ಕರೆದ. ಎಲ್ಲರೂ ಒಮ್ಮೆ ತಿರುಗಿ ಅವನನ್ನು ನೋಡಿದರು.

ಪದ್ಮನಾಭ "ಬಂದೆ...." ಎಂದು ಹೊರಗಡೆ ನಡೆದ.

ಇಬ್ಬರೂ ಏನೋ ಮಾತನಾಡಿದರು. ನಟಿಯರು ಬಂದ ಕಾರಣವನ್ನು ರಂಗನಾಥ ತಿಳಿಸಿದ. ಈಗಲೇ ಅರುಣ ಬರುತ್ತಾರೆ....ಎಂದೂ ಸೂಚಿಸಿ ಇತರ ವ್ಯವಸ್ಥೆಗಳಿಗಾಗಿ ಆತ ಹೊರಟುಹೋದ.

ಪದ್ಮನಾಭನಿಗೆ ಆಕಾಶವೇ ಕೈಗೆಟಕಿದಂತಾಯಿತು. ಕಲ್ಯಾಣಿಯನ್ನು ತನ್ನ ಆಫೀಸಿನಲ್ಲಿ ಕಂಡೊಡನೆಯೇ ಅವನು ಭೂಮಿಗಿಳಿದುಬಿಟ್ಟಿದ್ದ. ಇವರೆಲ್ಲ ಏಕೆ ಬಂದರು? ತನ್ನ ಉಪಾಯ ತಿಳಿದು ಛೀಮಾರಿ ಹಾಕಲು ಬಂದರೇ? ಎಂಬ ಭೀತಿ ಅವನಲ್ಲಿ ಮೂಡಿತ್ತು.

ಧೈರ್ಯ ತಂದುಕೊಂಡು ಅವನು ಆಫೀಸಿನೊಳಕ್ಕೆ ಬಂದ.

ಏನಾದರೂ ಮಾತನಾಡಿ ಅರುಣ ಬರುವವರೆಗೆ ಹೊತ್ತು ಕಳೆಯ ಬೇಕು. ಆದರೆ ಹೇಗೆ ಮಾತನಾಡಲಿ, ಏನು ಮಾತನಾಡಲಿ ಎಂಬುದೇ ಅವನಿಗೆ ತೋರದಾಯಿತು. ವ್ಯಾಪಾರಿಯಾಗಿದ್ದ ಅವನು ನಟಿಯರೊಡನೆ ಮಾತನಾಡಬೇಕಾಗಿದೆ. ಇಲ್ಲಿ ಹೊಸ ವಿಚಾರ, ಹೊಸ ಮಾತು ಬೇಕು. ಅವನು ಬಾಯಿ ಬಿಡುತ್ತ, ಮುಖದ ಬೆವರನ್ನು ಒರಸಿಕೊಳ್ಳುತ್ತ ಅವರನ್ನೇ ನೋಡಿಕೊಂಡು ಕುಳಿತಿದ್ದ. ಅವನ ದೃಷ್ಟಿ ಕಲ್ಯಾಣಿಯ ಕಡೆಗೇ ನೆಟ್ಟಿರುವುದನ್ನು ಕಂಡು ಇತರರು ಒಳಗೊಳಗೇ ನಗುತ್ತಿದ್ದರು.

"ಯಾವ ಚಿತ್ರ ನಿಮ್ಮದು?" ಎಂದು ಶಾಂತಾ ತಾನೇ ಮಾತು ಆರಂಭಿಸಿದಳು.

"ಭಕ್ತ ಪ್ರಹಲ್ಲಾದ."

"ಚೆನ್ನಾಗಿದೆ ಕತೆ. ಯಾವಾಗ 'ಶೂಟಿಂಗ್' ಆರಂಭಿಸುತ್ತೀರಿ?"

"ಮುಂದಿನ ತಿಂಗಳ ಕೊನೆಗೆ...."

"ನಟ....ನಟಿಯರು...."

"ನಮ್ಮ ಅರುಣಕುಮಾರ್ ಹಿರಣ್ಯಕಶಿಪು ಪಾತ್ರ ವಹಿಸುತ್ತಾರೆ. ಅವರೀಗ ಬರಬಹುದು...."

"ಕತೆ ಯಾರದು?" ಎಂದಳು ಕಲ್ಯಾಣಿ.

"ರಂಗನಾಥ ಅಂತ. ನಾಟಕ ಬರೆದು ತುಂಬ ಕೀರ್ತಿ ಗಳಿಸಿದ್ದಾರೆ"

ಅರುಣ ಕುಮಾರ್ ಮದುಮಗನಂತೆ ಉಡಿಗೆ ಧರಿಸಿ ಆಫೀಸಿನೊಳಕ್ಕೆ ಬಂದ. ಕುಳಿತುಕೊಳ್ಳಲು ಕುರ್ಚಿ ಇಲ್ಲದುದನ್ನು ಕಂಡು ಮೇಜಿನ ಒಂದು ಮೂಲೆಯ ಮೇಲೆ ಕುಳಿತ.

"ತುಂಬ ಬಿಸಿಲು. ಬಹಳ ದೂರ ಬಂದಿರಿ...."

"ತಿರುಗಾಡುತ್ತಾ ಬಂದೆವು....ಹಾಗೇ ಆಫೀಸು ನೋಡಿ ಒಳ ಹೊಕ್ಕೆವು."

"ಬಹಳ ಚೆನ್ನಾಯಿತು. ತುಂಬ ಸಂತೋಷ." ಧೈರ್ಯದಿಂದ ಯಾವ ಅಳುಕೂ ಇಲ್ಲದೆ ಅವನು ಮಾತನಾಡುತಿದ್ದ.

ಕಚೇರಿಯ ಆಳು ಕೋಲ್ಡ್ ಡ್ರಿಂಕ್ ತಂದಿರಿಸಿದ.

ರಂಗನಾಥ್ ತಾನೂ ಎರಡು ಗ್ಲಾಸ್ ಹಿಡಿದುಕೊಂಡು ಬಂದು ಒಂದನ್ನು ಕಲ್ಯಾಣಿಗೆ ಕೊಟ್ಟು “ ಇವರೇ ನಾಟ್ಯಸರಸ್ವತಿ ಕಲ್ಯಾಣಿ ” ಎಂದು ಅರುಣನಿಗೂ ಪದ್ಮನಾಭನಿಗೂ ಪರಿಚಯ ಮಾಡಿಸಿಕೊಟ್ಟ. ಇನ್ನೊಂದು ಗ್ಲಾಸನ್ನು ಶಾಂತಾ ಕೈಲಿಟ್ಟು ಅವಳ ಪರಿಚಯ ಮಾಡಿಸಿದ. “ ನಮ್ಮ ಪರಿಚಯ ಆಗಲೇ ಆಗಿದೆ ” ಎಂದಳು ರಮಾ.

“ ಅರುಣಕುಮಾರ್‌ರಿಗೆ ಹೊಸ ಪರಿಚಯ ” ಎಂದು ರಂಗನಾಥ ಇತರರ ಪರಿಚಯವನ್ನೂ ಮಾಡಿಕೊಟ್ಟ.

“ ಇವರೇ ನಮ್ಮ ಚಿತ್ರದ ಕಥೆ ಬರೆಯುವವರು. ರಂಗನಾಥ. ಕವಿಗಳೂ ಕೂಡಾ ” ಎಂದು ಅರುಣ ಪರಿಚಯ ಮಾಡಿಸಿದ.

ಗ್ಲಾಸುಗಳು ಖಾಲಿಯಾದುವು.

“ ಇಲ್ಲಿ ತುಂಬ ಬಿಸಿ. ಮಹಡಿಯ ಮೇಲೆ ಹೋಗೋಣವೇ. ಬಿಸಿಲು ಆರಿದ ಮೇಲೆ ಹೋದರಾಯಿತು. ಬಂದ ವಿಚಾರ ವಿಚಾರಿಸೋಣ ” ಎಂದ ಅರುಣ.

“ ಅದೇ ಒಳ್ಳೆಯದು. ಇಲ್ಲಿ ಯಾರಾದರೂ ಬರುತ್ತಾರೆ. ವ್ಯವಹಾರದ ವಿಚಾರವೇನಿದ್ದರೂ ಅಲ್ಲೇ ಆಗಲಿ.” ಎಂದು ರಂಗನಾಥ ದನಿಗೂಡಿಸಿದ.

ಪದ್ಮನಾಭ ತನ್ನ ಒಪ್ಪಿಗೆಯನ್ನು ನಗೆಯ ಮೂಲಕವೇ ಸೂಚಿಸಿ ಎದ್ದು ನಿಂತ.

ಕಲ್ಯಾಣಿಯನ್ನು ಬಿಗಿದಪ್ಪುವಷ್ಟು ಹುಚ್ಚು ಹಿಡಿದಿತ್ತು ಪದ್ಮನಾಭನಿಗೆ. ಅವಳನ್ನು ನೋಡುತಿದ್ದಂತೆ ಅವಳು ಇನ್ನೂ ಹೆಚ್ಚು ಸುಂದರಿಯಾಗಿ ಕಾಣಿಸುತಿದ್ದಳು. ಈಕೆ ನನ್ನವಳಾದರೆ–ಎಂಬ ಒಂದೇ ಚಿಂತೆ ಈಗ ಅವನದಾಯಿತು.

ಎಲ್ಲರೂ ಮಹಡಿಯನ್ನೇರಿದರು.

ಹಾಸಿದ್ದ ಜಮಖಾನದ ಮೇಲೆ ಕುಳಿತು ಬೆವರು ಒರಸಿಕೊಳ್ಳುತ್ತ, ಸೆರಗಿನಿಂದ ಗಾಳಿ ಬೀಸಿಕೊಳ್ಳುತಿದ್ದ ನಟಿಯರ ಎದೆಯ ಮೇಲೇ ದೃಷ್ಟಿ ನೆಟ್ಟು ಬಾಯಿಬಿಟ್ಟು ಪದ್ಮನಾಭ ಕುಳಿತಿದ್ದ. ತಮ್ಮ ಉಬ್ಬಿದ ಎದೆಯನ್ನು ತೋರಿಸುತ್ತ ರಮಾ, ಶಾಂತಾ ಸೆರಗನ್ನೂ ಸರಿಸಿ ಗಾಳಿ ಬೀಸಿಕೊಳ್ಳುತಿದ್ದರು.

" ಮುಂದಿನ ತಿಂಗಳಿಂದ ಚಿತ್ರ ಆರಂಭಿಸುತ್ತೇವೆ. ರಂಗನಾಥ ಆಗಲೇ ನಿಮ್ಮೆಲ್ಲರ ಬಗೆಗೂ ತುಂಬ ಹೇಳಿದ್ದಾರೆ...." ಎಂದು ಮಾತಿಗೆ ಮೊದಲು ಮಾಡಿ ಅರುಣ ಕಂಪೆನಿಯ ವಿಚಾರ ತಿಳಿಸಿದ. ಅದ್ಭುತವಾದ ಚಿತ್ರವೆತ್ತುವ ತಮ್ಮ ಯೋಜನೆಯನ್ನು ವಿವರಿಸಿದ. ಎಷ್ಟೇ ಖರ್ಚಾದರೂ ನಾವು ಹೆದರುವುದಿಲ್ಲ ಎಂದು ಹೆಮ್ಮೆಕೊಚ್ಚಿಕೊಂಡ. ನೀವೂ ಸಹಕರಿಸಬೇಕು. ನಮ್ಮ ಚಿತ್ರದಲ್ಲಿ ಅಭಿನಯಿಸಬೇಕು. ಕಲ್ಯಾಣಿ ಇಂದು ಆಕಸ್ಮಿಕವಾಗಿ ಬಂದಿದ್ದಾರೆ. ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಚಿತ್ರದಲ್ಲಿ ಮುಖ್ಯ ನಟಿಯಾಗಿ ಅವರು ಸಹಕರಿಸಬೇಕು. "

ಮಾತುಗಳು ಆರಂಭವಾಗಿ ವ್ಯವಹಾರದ ಕಡೆಗೆ ಗಮನ ಹರಿಯಿತು. ಎಲ್ಲರ ಪರವಾಗಿ ಶಾಂತಾ ಮಾತನಾಡಿದಳು.

ಹೋಟೆಲ್ ಮಾಣಿ ತಿಂಡಿ, ಕಾಫಿ ತಂದಿಟ್ಟ. ಎರಡೆರಡು ಬಗೆಯ ಸಿಹಿ, ಖಾರದ ಅವಲಕ್ಕಿ, ಕಾಫಿ ಅವರ ಮುಂದೆ ನಿಂತಿತು.

ಕೋಲ್ಡ್ ಕುಡಿದು ಮೈ ಬೆವರಿತ್ತು ಕಲ್ಯಾಣಿಗೆ. ಗಂಟಲು ಶುದ್ಧವಾಗಿತ್ತು. ತಾನು ಕುಡಿದ ಔಷಧಿಯ ನೆನಪು ತರುವ ಕ್ರಷ್ ಬಗೆಗೆ ಅವಳಿಗೆ ಪ್ರೀತಿ ಮೊಳೆಯಿತು. ಮೈಯಲ್ಲೇನೋ ಒಂದು ಬಗೆಯ ನವಚೇತನ ಮೂಡಿತ್ತು ಆಗಲೇ. ಅವಳು ಹಾಗೇ ತಲೆ ಎತ್ತಿ ನೋಡಿದಾಗ ರಂಗನಾಥ ಅಲ್ಲೇ ಇದ್ದ.

" ಕಾಫಿ ಬೇಡ. ನನಗೆ ಕ್ರಷ್ ಕೊಡಿ " ಎಂದಳು ಕಲ್ಯಾಣಿ.

ತನ್ನ ಯತ್ನ ಸಾರ್ಥಕವಾಯಿತೆಂಬ ಹೆಮ್ಮೆಯಿಂದ ರಂಗನಾಥ ಮಹಡಿಯಿಂದಿಳಿದ. ಐದು ನಿಮಿಷಗಳಲ್ಲೇ ಕ್ರಷ್ ಕಲ್ಯಾಣಿಯ ಮುಂದೆ ನಿಂತಿತು. ತಿಂಡಿ ತಿಂದು ಪೂರೈಸಿದ್ದ ಅವಳು ಅದನ್ನು ಸೇವಿಸಿದಳು. ಏನೋ ಒಂದು ತರಹ ಆಗುತ್ತೆ....ಏನೋ ಒಂದು ತರಹ....ಎಂದು ಅವಳಿಗೆ ಅನಿಸದಿರಲಿಲ್ಲ. ಅವಳು ಕುಳಿತಲ್ಲೇ ಹಿಂದಕ್ಕೆ ಸರಿದು ಗೋಡೆಗೆ ಒರಗಿ ಕುಳಿತುಕೊಂಡಳು.

ವ್ಯವಹಾರದ ಮಾತು ನಡೆದೇ ಇತ್ತು. ಮುಖ್ಯಪಾತ್ರಧಾರಿಗೆ ಮೂರು ಸಾವಿರ ಕೊಡುತ್ತೇವೆ ಎಂದು ಅರುಣ ತಿಳಿಸಿದ.

"ಅಷ್ಟೇ ಏನು," ಎಂದು ಶಾಂತಾ ಮೂಗು ಮುರಿದಾಗ ಪದ್ಮನಾಭ ಭೀತನಾಗಿ ಮಾತು ಆರಂಭಿಸಿದ.

"ಉತ್ತಮ ನಟಿ ದೊರೆತರೆ ಅದೇನೂ ವಿಶೇಷವಲ್ಲ. ಇನ್ನೂ ಹೆಚ್ಚು ಕೊಡಬಹುದು."

"ಕಲ್ಯಾಣಿಯೇ ಒಪ್ಪಿದರೆ."

"ಐದು ಕೊಡುತ್ತೇವೆ."

"ಸರಿ. ಒಪ್ಪಿದ್ದಾಳೆ. ಕಂಟ್ರಾಕ್ಟು ಸಿದ್ಧಪಡಿಸಿ."

"ನಿಜವೇ...." ತನ್ನ ಕಿವಿಯನ್ನೇ ತಾನು ನಂಬದಾದ ಪದ್ಮನಾಭ.

"ನಿಜ" ಎಂದು ಅರುಣ ರಂಗನಾಥನ ಕಡೆ ತಿರುಗಿದ. ಅವನೂ ಎಲ್ಲರ ಹೆಸರಿನ ಕಂಟ್ರಾಕ್ಟನ್ನೂ ಬರೆದು ಸಿದ್ಧಪಡಿಸಿದ್ದ.

ಶಾಂತಾ.... ಸಾವಿರದ ಐದುನೂರು ರೂಪಾಯಿ.

ರಮಾ-ಲಕ್ಷ್ಮಿ-ಇವರಿಗೆ ಸಾವಿರ.

ಕಲ್ಯಾಣಿಗೆ ಐದು ಸಾವಿರ.

ಕಂಪೆನಿಯವರು ಊಟದ ಬಗೆಗೂ ತಿಂಗಳಿಗೆ ಪ್ರತಿಯೊಬ್ಬರಿಗೂ ಈಗ ೫೦ ರಂತೆ, ಮುಂದೆ ತ್ರಿಭುವನ ಕಂಪೆನಿಯ ಕೆಲಸ ಮುಗಿದ ಬಳಿಕ ನೂರರಂತೆ ಕೊಡಬೇಕು.

ಎಲ್ಲರೂ ಸಹಿಮಾಡಿದರು. ಕಲ್ಯಾಣಿಯೂ ಸಹಿ ಮಾಡಲೇ ಬೇಕಾಯಿತು. ಅಡ್ವಾನ್ಸ್ ಪಡೆದು ಅವರು ಹೊರಡುವಾಗ ಹಾರುತ್ತಲೇ ಇದ್ದರು. ಕಲ್ಯಾಣಿ ಎಲ್ಲರಿಗೂ ಮುಂದಾಗಿ ಸಂತೋಷದಿಂದ ಉಬ್ಬಿದಳು. ಅವಳಿಗೆ ದೊರೆತ ಸಂಭಾವನೆಯ ಬಗೆಗೆ ಇತರರು ಅವಳನ್ನಷ್ಟು ಉಬ್ಬಿಸಿದ್ದರು.

## ೧೮ .

ಬಾಳ ಶ್ರಾವಣವ ಕಾದಿದ್ದು ಕಾಣದೆ ನಿಂತ
    ಈ ನನ್ನ ಬಾಳ ಆಗಸದಲಿಂದು
ರವಿಯು ಮೂಡಿಸಿ ಹೊಸತು ಜಗವ ತೋರಿದೆ ನಿನ್ನ
    ಅಭಯ ನೀಡುತೆ ಗುರುವೆ ನಡೆವೆ ಮುಂದು.

ಸುಂದರ....ಕಲ್ಯಾಣಿ ಎಲ್ಲಿ? ಹ್ಞಾ ಇನ್ನೂ ಬಂದಿಲ್ಲವೇನು? ಮನೆಗೆ ದೇವರು ಬಂದಾಗಲೂ ಅವಳಿಲ್ಲ. ಎಂಥ ಭಾಗ್ಯಹೀನೆ!

ಯಾಕೆ ಹಾಗೆ ನೋಡುತಿದ್ದೀ—ಸುಂದರಾ? ಇಲ್ಲ, ತುಂಬ ಹರ್ಷಿತ ನಾಗಿದ್ದೇನೆ ಅಷ್ಟೆ. ಈ ಮನೆಗೆ ಯಾರೋ ಬಂದಿದ್ದರಲ್ಲ....ನನಗೆ ಗೊತ್ತು ಯಾರು ಅಂತ....ನಿನಗೆ ತಿಳಿಯಿತೇ?

ಹೌದು. ಕಲಾವಿದರು. ನನ್ನ ಗುರುದೇವ. ಕಲ್ಯಾಣಿಯ ಗುರು, ಪಿತ, ದೇವರು. ಅವರೇ ಬಂದಿದ್ದರು.

ನಮ್ಮ ವಿಚಾರವೆಲ್ಲ ಕೇಳಿದರು....ಅಲ್ಲವೇ....ತಲೆಯಲ್ಲಾಡಿಸಿದರೂ ಸಾಕು ನಾನು ಅರ್ಥಮಾಡಿಕೊಳ್ಳಬಲ್ಲೆ.....ನೀನು ಹೇಳಿದೆ....ನಾನೆಲ್ಲಿ ಹೋಗಿ ದ್ದೇನೆ - ಕಲ್ಯಾಣಿ ಎತ್ತ - ಹೇಗಿದ್ದಾಳೆ, ಅವಳ ಕಾರ್ಯಕ್ರಮವೇನು.... ಎಲ್ಲವನ್ನೂ ಕೇಳಿದರು....ಅಲ್ಲವೇ? ನೀನು ಹೇಳಿದೆ....ಸತ್ಯವನ್ನೇ ಹೇಳಿದೆ.

ಏನು? ಅವರ ಮುಂದೆ ಸುಳ್ಳಾಡುವುದು ಸಾಧ್ಯವಿಲ್ಲವೆಂದೇ? ನಿಜ. ಆ ಶಕ್ತಿ ಯಾರಿಗೂ ಇಲ್ಲ, ಅವರ ಮುಂದೆ ನಿಂತಾಗ ಮಾತೇ ಹೊರಡುವು ದಿಲ್ಲ. ಅಭಿಮಾನ, ಭಕ್ತಿ ಗಂಟಲು ಹಿಡಿಯುತ್ತದೆ.

ಅವರೆಲ್ಲ ತಿಳಿದುಕೊಂಡರು. ನಮಗಿಂತಲೂ ಹೆಚ್ಚು ಅರ್ಥಮಾಡಿ ಕೊಂಡರು. ನಮಗರಿಯದ ನಮ್ಮ ಭವಿಷ್ಯವನ್ನು ತಿಳಿದರು.

ಹೌದು ಸುಂದರೂ....ನನ್ನ ದೇವರು ಅವರು.

ಹ್ಞೂ....ನಿಜ....ನನ್ನೊಡನೆ ಮಾತನಾಡಿದರು. ನಾನವರ ಕಾಲಿಗೆ ಬಿದ್ದು ಕ್ಷಮಿಸುವಂತೆ ಬೇಡಿಕೊಂಡೆ. ಅವರು ಕ್ಷಮಿಸಿದರು. ಹರಸಿದರು. ಒಳ್ಳೆಯ ಮಾತು ಹೇಳಿದರು.

ಅದು ಸಾಧ್ಯವಿಲ್ಲ ಅವರಿಂದ....ಅನ್ಯಾಯಮಾಡಿದವರ ಬಗೆಗೆ ಅವರ ಒಲವು ಅತ್ಯಧಿಕ. ದೇವರೇ ಇವರಿಗೆ ಬುದ್ಧಿ ಹೇಳು ಎಂದು ಅವರ ಬಗೆಗೆ ಬೇಡುತ್ತಾರೆ. ನಾವು ಮಾಡಿದ ದ್ರೋಹಕ್ಕೆ ಬೇರೆಯವರು ಮುಖವೆತ್ತಿ ನೋಡುತ್ತಿರಲಿಲ್ಲ. ಆದರೆ ಅವರಿಗೆ ಅದು ಮರೆತೇಹೋಗಿದೆ. ನಮ್ಮ ಹಿತ ಚಿಂತನೆಯೊಂದೇ ನೆನಪಿದೆ.

ಅದಕ್ಕೇ ಬಂದರು. ಇಲ್ಲಿಯವರೆಗೂ ಬಂದರು. ಮನೆಯನ್ನೆಲ್ಲ

ನೋಡಿದರು. ತಂಬೂರಿ, ತಬಲಾ ಅವರ ಕಣ್ಣಿಗೆ ಬಿತ್ತು. ಗೆಜ್ಜೆ-ಕಲ್ಯಾಣಿಯ ಜೀವನ ಸಾಧನ, ಕೀರ್ತಿಯ ಕಲಶ ಅವರ ಕಣ್ಣಿಗೆ ಬೀಳಲಿಲ್ಲ.

ಹಾಗೇಕೆ ನೋಡುತ್ತೀ ಸುಂದರೂ....ನಿನಗೂ ಆಶ್ಚರ್ಯವಾಗಿದೆಯೋ? ನಿಜ. ಅಂಥವರು ಇನ್ನೊಬ್ಬರು ದೊರೆಯುವುದು ಸಾಧ್ಯವೇ ಅಂತ ನನಗೂ ಸಂದೇಹ.

ನನ್ನ ದೇವರು ನನಗೆ ಕಾಣಿಸಿಕೊಂಡರು. ನಾ ಹಾಡುತ್ತೇನೆ ಹಾಡುತ್ತೇನೆ....ತಂಬೂರಿ ಸಿದ್ಧಪಡಿಸು. ಬಾ....ಬೇಗ....

ನನ್ನ ಬಾಳಿನಲೆನಗೆ ಇರಲಿಲ್ಲ ನಂಬುಗೆಯು
ಭವದ ಭವಿತವ್ಯದಾ ಬವಣೆಯರಿಯೆ
ಎಲ್ಲೆಲ್ಲು ಜನಕೋಟಿ-ಪ್ರಕೃತಿಯಾ ವಿಕೃತಿಯು
ಇಂಥ ಬಾಳಿಗೆ ಹೊಸತು ಬೆಳಕ ಹಿಡಿದೆ.

ಎಂಥ ಮಾಂತ್ರಿಕನ ಕೈಚಳಕ ನಿನ್ನಯ ಬೇಟೆ
ಕಲ್ಲು ಚಿಗುರಿಸಿ-ಇದನು ಗೈದೆ ಹೂವು
ಬೇರೊಂದು ಹೃದಯವಿದ ಅರಳಿಸುತ್ತಿರಲಿಲ್ಲ
ನಿನ್ನ ನಲ್ಮೆಯು ಹರಕೆ ದಿವ್ಯಪ್ರಭೆಯು.

ಊಟವೇ? ಈಗೇನೂ ಬೇಕಾಗಿಲ್ಲ. ನನ್ನ ಗುರುವಿನ ಜತೆಗೆ ಕಾಫಿಯಾಯಿತು. ಮಾತುಕತೆಯಾಯಿತು. ಅವರು ಪೂರ್ಣ ಹೃದಯದಿಂದ ಆಶೀರ್ವದಿಸಿದರು ಸುಂದರೂ.

ಗುರುದ್ರೋಹದ ಚಿಂತೆ ದೂರವಾಯಿತು. ಗುರುಶಾಪದ ಭೀತಿ ಅಳಿಯಿತು. ಬೆಳಕು ಕಾಣುತ್ತಿದೆ ಈಗ, ಮುನ್ನಡೆಯುತ್ತೇನೆ....

ಹ್ಞಾ ವಿಾಟು....ಸರಿ....ಇತ್ತಕೊಡು....ನಾನೇ ಹಾಡುತ್ತೇನೆ....

ಮುದುಡಿ ಮೂಲೆಯಲಿದ್ದ ಈ ನನ್ನ ವೀಣೆಯಾ
ಗಾನ ಕೇಳುವ ಮಂದಿ ಎಷ್ಟೊ ಏನೊ?
ಅವರ ಹೃದಯವ ತಣಿಪ ಇಂದಿನೀ ಭಾಗ್ಯವನು
ನೀ ಪಡೆದೆ, ನನ್ನನೆಚ್ಚರಿಸಿ ಏನೊ!

ಮರುಭೂಮಿಯಲಿ ಹೊಸತು ಸೃಷ್ಟಿಯನೆ ಮಾಡಿರುವೆ
ಒಲವಿನುತ್ಸಾಹದಾ ಹೊಳೆಯು ಹರಿಸಿ
ನಿನ್ನ ಬೆರಳಿನ ಮೀಟು ಗಂಧರ್ವ ಗಾನವನೆ
ಈ ಕಿನ್ನರಿಯಲಿ ಹೊರಡಿಸಿದೆ ಹರಸಿ!

ಯಿತ್ತು ಉದಯ ಸಂಜೆಯು ಬಂತು ಹಲಬಾರಿ
ಅದು ನಿನ್ನ ಕಾಣದಾ ಬವಣೆಯಿಂದ
ಯಿತ್ತು ಉದಯ ಇದೋ ಬಾಳು ಬೆಳಗಿತು ಇಂದು
ಅದು ನಿನ್ನ ಕಂಡಿರುವ ಪುಣ್ಯದಿಂದ.

ಮೊಗ ತಿರುವಿ ನಿನ್ನೆಡೆಗೆ ನೋಡಿದೆನು ನನ್ನ ಮನ
ತುಂಬಿ ಬಂದಿತು ಹಳೆಯ ನೇಹವುಕ್ಕಿ
ತಬ್ಬಿ ಮುದ್ದಿಡುವೆಯೊ ಕಣ್ಣಲೆಂಬಂತೆ ನಿನ
ದಿಟ್ಟಿ ಬೀರಿತ್ತು ನಗು ಮೊಗದಿ ಉಕ್ಕಿ

ಂಗಳೋ ವರುಷವೋ ನಿನನೆಂದು ಕಾಂಬೆನೋ
ಹತ್ತು ಹದಿನಾರಾಗ ಬಹುದು ವರುಷ
ಸಂದಿಸದೆ ಇರಬಹುದು ನಾನೆಂತು ಕಾಂಬೆನೋ
ಎಂದು ಕೊರಗುತ್ತಿರಲು ತಂದೆ ಹರುಷ.

ಬಾ ಗುರುವೆ ಗುರುದೇವ ನನ್ನ ಬಾಳಿನ ಬೆಳಕೆ
ಬಾ ನಿನ್ನ ಚರಣಕಿದೊ ಈ ಬಾಳು ಬದುಕು
ನೀ ಬೆಳಗಿದಾ ಬೆಳಕಿನಡಿಯಲ್ಲಿ ನಡೆಯುವೆನು
ನಿನ್ನ ಹರಕೆಯೆ ರಕ್ಷೆ; ಬಾಳೆ ನನಗುರಿಯು.

ಕೃಷ್ಣ ಮೈಮರೆತು ಹಾಡುತಿದ್ದ. ಅದೆಷ್ಟುಹೊತ್ತು ಹಾಡಿದನೋ ವನಿಗೆ ಅರಿವೇ ಇರಲಿಲ್ಲ. ಅವನ ಕಣ್ಣಿನಿಂದ ನೀರು ಧಾರಾಕಾರವಾಗಿ ಹರಿಯುತಿತ್ತು. ಸಾಧಕನೊಬ್ಬ ತನ್ನ ದೇವರ ಮುಂದೆ ಕುಳಿತು ಕ್ಷಮಾ ಯಾಚನೆ ಮಾಡುವಂತಿತ್ತು, ಅವನ ಸ್ಥಿತಿ. ಅವನು ಮೈಮರೆತು ಹಾಡುತ್ತಿದ್ದ. ುಂದರನೂ ಅವನ ಸ್ಥಿತಿಯನ್ನೇ ಅರಿಯದೆ ಅಚ್ಚರಿಯಿಂದ ಕುಳಿತು ಹಾಡು ೕಳುತಿದ್ದ.

ಕಲ್ಯಾಣಿ ಎಂದಿನಂತೆ ನಲಿನಲಿದು ಮನೆಗೆ ಬಂದಳು. ಕೃಷ್ಣ ಸಿಟ್ಟಾಗುತ್ತಾನೆ. ಅವನಿಗೇನಾದರೂ ಸಮಾಧಾನ ಹೇಳಿ ಅವನನ್ನಪ್ಪಿ ಚುಂಬಿಸಿದರೆ ಅವನ ಸಿಟ್ಟು ಆರುತ್ತದೆ. ಇಲ್ಲವಾದರೆ ಅತ್ತು ಕಣ್ಣೀರು ಸುರಿಸಿದರೆ ಸರಿ. ಈಗೇನು ಮಾಡಬೇಕು? ಅವನೇನನ್ನಬಹುದು? ಏನು ಉತ್ತರ ಕೊಡಲಿ- ಎಂದು ತನ್ನ ಮನದಲ್ಲೇ ಪ್ರಶ್ನೋತ್ತರಗಳನ್ನು ಕಲ್ಪಿಸಿಕೊಂಡು ಅಭಿನಯವನ್ನು ಗಟ್ಟಿಮಾಡಿಕೊಂಡು ಅವಳು ಮನೆಗೆ ಬಂದಳು.

ಗೇಟಿನಲ್ಲೇ ಅವನ ಗಾನ ಕೇಳಿಸಿತು.

ಅದರಲ್ಲಿ ಏನೋ ನಾವೀನ್ಯತೆ, ಏನೋ ಹೆಚ್ಚಳ ಅವಳಿಗಿಂದು ಕಂಡಿತು. ಅಲ್ಲೇ ನಿಂತಳು-ಆಲಿಸಿದಳು.

ಅಷ್ಟು ಅದ್ಭುತವಾಗಿ ಅವನೆಂದೂ ಹಾಡಿರಲಿಲ್ಲ. ಹೃದಯ ಕರಗುವಂತೆ ಮನ ಮರುಗುವಂತೆ ಕಲ್ಲನ್ನೂ ಕರಗಿಸಲು ನಿಂತ ಸಾಧಕನಂತೆ ಅವನು ಹಾಡುತಿದ್ದ. ತನ್ನ ಅಂಗಾಂಗಗಳನ್ನು ಕತ್ತರಿಸಿ ಆರಾಧ್ಯದೇವತೆಯ ಮುಂದಿರಿಸುವ ಮಹಾಭಕ್ತನಂತೆ ಅವನು ಹಾಡುತಿದ್ದಾನೆ ಎಂದು ಅ೦ ವಾಯಿತು ಅವಳಿಗೆ.

ಇದಾವ ಹಾಡು? ಅವಳೆಂದೂ ಕೇಳಿರಲಿಲ್ಲ.

ಅವಳಿಗೆ ಮುನ್ನಡೆಯಲು ಧೈರ್ಯ ಬರಲಿಲ್ಲ.

ಹಾಗೇ ಅಲ್ಲೇ ನಿಂತಳು.

ಗುರುವಿನ ನೆನಪಾಯಿತೇ? ಯಾಕೆ? ಎಂದೂ ಇಲ್ಲದ ಈ ನೆನಪ್ರ ಇಂದೇಕೆ ಬಂತು?

ಗುರುವಿಗೆ ತನ್ನನ್ನೇ ತಾನು ಅರ್ಪಿಸುತಿದ್ದಾರಲ್ಲ-ಇದೇಕೆ ಹೀಗೆ?

ಕಲ್ಯಾಣಿ ಈ ಅರ್ಪಣೆ, ಈ ಭಕ್ತಿಯ ಕಾಣಿಕೆ ಗುರುಚರಣಕ್ಕೆ ಎಂದು ತಿಳಿದು ಮೆಲ್ಲನೆ ಮನೆಯೆಡೆ ನಡೆದು ಜಗಲಿ ಏರಿದಳು.

ಆದರೂ ಕೃಷ್ಣನಿಗೆ ಎಚ್ಚರವಿಲ್ಲ. ಸುಂದರನಿಗೆ ಅವಳು ಬಂದಿರುವುದೇ ತಿಳಿಯಲಿಲ್ಲ.

ಕಲ್ಯಾಣಿ ಬಾಗಿಲು ಸರಿಸಿ, ಹಾಲಿನೊಳಗೆ ನಡೆದಳು. ಫಕ್ಕನೆ ಎಚ್ಚರ ವಾಗಿ ಸುಂದರ ಅವಳೆಡೆ ನೋಡಿದ. ಅವನ ದೃಷ್ಟಿ ಟೈಂಪೀಸ್ ಕ ಹರಿಯಿತು. ಗಂಟೆ ಒಂಭತ್ತೂವರೆ ಕಳೆದಿತ್ತು.

ಕಣ್ಣುಮುಚ್ಚಿ ಧ್ಯಾನಾಸಕ್ತನಾದವನಂತೆ ಕೃಷ್ಣ ಹಾಡುತ್ತಿದ್ದ.

ಅವನ ಕಣ್ಣುಗಳಿಂದಿಳಿಯುತ್ತಿರುವ ಅಶ್ರುವನ್ನು ನೋಡಿ ಕಲ್ಯಾಣಿಯ ಹೃದಯ ನಡುಗಿತು.

ಇದೇಕೆ ಹೀಗೆ?....

ಅವಳೂ ಅಲ್ಲೇ ಕುಸಿದು ಕುಳಿತಳು.

ಸಪ್ತಸಾಗರ ವಾರಿಸಿಂತ ಭಾವನೆಯನ್ನು
ಅಂಗೈಯಲಿರಿಸುವೆನೆ–ಸಾಧ್ಯವಹುದೆ?
ನನ ಹೃದಯದಲಿ ನಿಂತ ಭಕ್ತಿ ನೇಹಗಳನ್ನು
ನಿನ ಚರಣಕರ್ಪಿಸಲು ಸಾಧ್ಯವಹುದೆ?

ಕಣಕಣಗಳಾಗಿ ನಿನ್ನೆಡೆ ಅವನು ಕಳುಹಿದರೆ
ಶತಮಾನಗಳ ಕಾಲ ಕಳೆದೀತು ಆಗ.
ನುಡಿಯ ನುಡಿವೆನೆ ನುಡಿಯದೆಲ್ಲ ಹುದುಗಿದೆ ಒಳಗೆ
ಭಕುತಿಯುಕ್ಕುತೆ ಕಂಠ ಬಿಗಿದು ಈಗ.

ನೋಡುತ್ತ ಗುರುವೆ ಅನಿಮಿಷನಾಗಿ ನನ್ನೆಡೆಗೆ
ನನ್ನ ಮೂರ್ತಿಯು ನಿನ್ನ ಕಣ್ಣಲಿರಲಿ.
ಅದು ಅಲ್ಲೆ ಸ್ಥಿರವಾಗಿ, ನನ್ನ ಹೃದಯದಿ ನಿನ್ನ
ನಲ್ಮೆ ನೇಹದ ಚಿತ್ರ ಅಮರವಿರಲಿ.

ನನ್ನ ಹೃದಯದ ದೇಗುಲದಿ ಕಾದಿಹುದು ನಿನ್ನ
ವಜ್ರಪೀಠವು–ಬಾರ ಗುರುವೆ ಇಲ್ಲಿ
ಚರಣಕರಣವನೀವೆ, ಹೃದಯ ನೇವೇದ್ಯವಿದೆ
ಅದಕೊಳ್ಳು ಈ ಬಾಳಿಗೀಯೆ ಮೋದ.

ಗಂಟೆ ಹತ್ತು ಕಳೆಯಿತು. ಕೃಷ್ಣ ತಂಬೂರಿಯನ್ನು ಕೆಳಗಿರಿಸಿ, ಕಣ್ಣೊರಸಿಕೊಂಡ.

ಸುಂದರ ಮುಂದೆ ನಡೆದು ತಂಬೂರಿಯನ್ನೆತ್ತಿ ಅದಕ್ಕೆ ಬಟ್ಟೆಯ ಚೀಲ ಹೊದಿಸಿ ಮೂಲೆಯಲ್ಲಿರಿಸಿದ.

ಕಲ್ಯಾಣಿಗೆ ಕುಳಿತಲ್ಲಿಂದೇಳುವ ಧೈರ್ಯವಿರಲಿಲ್ಲ. ಮಾತು ಹೊರಡದಂತಾಗಿತ್ತು. ಅವಳು ಕುಳಿತಲ್ಲೇ ತಲೆ ತಗ್ಗಿಸಿದಳು.

ಸುಂದರ ಬೇಗನೇ ಓಡಿ, ಊಟಕ್ಕೆ ಸಿದ್ಧತೆ ನಡೆಸಿದ. ಕೃಷ್ಣ ಹೊರಗಡೆ ನಡೆದು, ಮುಖ ತೊಳೆದುಕೊಂಡು ಬಂದ. ಅವನು ಯಾವ ಮಾತನ್ನೂ ಆಡದೆ ಎಲೆಯ ಮುಂದೆ ಕುಳಿತ.

ಕಲ್ಯಾಣಿ ಮೆಲ್ಲನೆ ಎದ್ದು ಉಣ್ಣಲು ಸಿದ್ಧವಾದಳು.

ಮಾತನಾಡುವ ಮನಸ್ಸು ಕೃಷ್ಣನಿಗಿರಲಿಲ್ಲ, ಅವನು ಸರ್ವಶಕ್ತಿಯನ್ನೂ ಚೇತನವನ್ನು ಗುರುವಿನ ಪಾದತಳದಲ್ಲಿ ಅರ್ಪಿಸಿದ್ದ.

ಕಲ್ಯಾಣಿಗೆ ಮಾತನ್ನಾರಂಭಿಸುವ ಧೈರ್ಯವೂ ಇರಲಿಲ್ಲ.

ಊಟ ಮುಗಿಸಿ ಕೃಷ್ಣ ತನ್ನ ಕೋಣೆಗೆ ಹೋಗಿ ಕುಳಿತುಕೊಂಡ.

ಕಲ್ಯಾಣಿ ಅವನನ್ನು ಹಿಂಬಾಲಿಸಿದಳು.

ಕೃಷ್ಣ ಎಂದೂ ಹೀಗೆ ಮೌನವಾಗಿರಲಿಲ್ಲ. ಸಿಟ್ಟಾದರೆ ಬೆದರಿಸಿ ಮಾತನಾಡುತ್ತಾನೆ, ಪ್ರಶ್ನಿಸುತ್ತಾನೆ. ಇಬ್ಬರಿಗೂ ವಾಗ್ಯುದ್ಧವೇ ಸಾಗುತ್ತದೆ. ಒಮ್ಮೆ ಹೃದಯದಲ್ಲಿ ಹುದುಗಿದ್ದ ರೋಷ ಹೊರಚಿಮ್ಮಿ ಹಾರಾಡಿ, ಶಾಂತವಾಗುತಿತ್ತು ವಾತಾವರಣ. ಸಿಟ್ಟು ಪ್ರಯೋಜನವಿಲ್ಲವೆಂದರಿತಾಗ ಅವನೇ ನಗುನಗುತ್ತ ಅವಳ ಹೃದಯ ಸೀಳುವ ಮಾತುಗಳನ್ನಾಡಿ ತಾನು ಹೇಳಬೇಕಾದುದನ್ನು ಹೇಳುತಿದ್ದ. ಇಂದು ಅದಾವುದೂ ಇಲ್ಲ. ಮೌನ; ಸತ್ಯಾಗ್ರಹ. ಕಲ್ಯಾಣಿಯ ಮನದಲ್ಲಿ ಸಾವಿರ ಸಂದೇಹಗಳನ್ನು ತುಂಬಿ ಭೀತಿಯನ್ನು ಬೆಳೆಸುವ ಮೌನ.

" ಕಲ್ಯಾಣಿ....ಸಿನಿಮಾ ನೋಡಿಯಾಯಿತೇ ?"

" ಹ್ಞೂ...."

" ಇಷ್ಟು ಬೇಗ ! ಮಧ್ಯಾಹ್ನ ಊಟಕ್ಕೂ ಬಾರದೆ ಈಗ ರಾತ್ರಿ ಹತ್ತು ಗಂಟೆಗೆ ಬಂದಿದ್ದೀಯಾ ? ಎಷ್ಟು ಚಿತ್ರಗಳನ್ನು ನೋಡಿದೆ ?"

"............"

" ಅದೇಕೆ ಸುಮ್ಮನಾಗಿದ್ದೀ ? ಮಾತನಾಡು. ಎಷ್ಟೋಬಾರಿ ಹೀಗೇ ಕೇಳಿದ್ದೇನೆ. ಎಷ್ಟೋಬಾರಿ ರೇಗಿದ್ದೇನೆ. ಆದರೂ ನೀನು ಮಾತ್ರ ನಿನ್ನ ದಾರಿ ಬಿಡಲಿಲ್ಲ."

" ಇನ್ನು ಹೀಗಾಗಲಾರದು."

" ಹಸುಳೆಗಳ ನಿರ್ಧಾರ ಅದು. ಆದರೆ, ನೀನಿನ್ನೂ ಮಗುವಲ್ಲ, ತಾಯಿಯಾಗಲು ಎಂದೋ ಸಿದ್ಧವಾದವಳು."

" ತಪ್ಪಾಯಿತು...."

" ಅದನ್ನು ಹೇಳಿ ಪ್ರಯೋಜನವೇನೂ ಇಲ್ಲ. ನಿನ್ನೆಯೇ ಈ ಭಾವನೆ ಮೂಡಿದ್ದರೆ ಎಷ್ಟೋ ಚೆನ್ನಾಗಿತ್ತು."

"............"

" ಇಂದು ನೀನು ಮಧ್ಯಾಹ್ನ ಊಟಕ್ಕೂ ಬರಲಿಲ್ಲ....ಸುಂದರ ಕರೆಯ ಲೆಂದು ಬಂದರೂ ನೀನು ಬರಲಿಲ್ಲ....ಸಂಜೆ ಆರು ಘಂಟೆಗೆ ನೋಡಬೇಕಾದ ಸಿನಿಮಾಕ್ಕೆ ಮಧ್ಯಾಹ್ನವೇ ಸಿದ್ಧತೆ ನಡೆಸುತಿದ್ದೆ....ನಿನ್ನ ಗೆಳೆಯರೊಂದಿಗೆ...."

"............"

" ಯಾಕೆ ಮಾತನಾಡುವುದಿಲ್ಲ. ಉತ್ತರ ಕೊಡು. ನನಗಾಗಿ ನಾನೀ ಮನೆ ಮಾಡಿಕೊಂಡಿದ್ದೇನೇನು ? ನೀನು ನನ್ನವಳು. ಆತ್ಮಸಾಕ್ಷಿಯಾಗಿ ನಾವಿಬ್ಬರೂ ಪತಿ ಪತ್ನಿಯರಾಗಿದ್ದೇವೆ, ಸಂಸಾರ ಹೂಡಿದ್ದೇವೆ–ಎಂದು ಈ ಬಿಡಾರ ಮಾಡಿದ್ದೇವೆ. ಅಲ್ಲವೇ ? ಆದರೆ....ಗಂಡನಂತೆ ನಾನಿದ್ದೇನೆ, ಮನೆ ಇದೆ, ನೀನು ಗೃಹಿಣಿ....ಆದರೂ ನೀನಿನ್ನೂ ಪತ್ನಿಯಾಗಿಲ್ಲ....."

" ಮನ್ನಿಸಿ."

" ನೀನು ವಿವಾಹಿತ ಹೆಣ್ಣಾಗಿದ್ದರೆ, ಅಲ್ಲಿ ಹೃದಯದ ಕಟ್ಟು ಇಲ್ಲ ವಾಗಿದ್ದರೂ, ಶಾಸ್ತ್ರದ ಕಟ್ಟಿಗೆ ಹೆದರಿ ನನ್ನ ಚರಣದಾಸಿಯಾಗುತಿದ್ದೆ. ನನ್ನ ಮಾತನ್ನು ಮೀರುತ್ತಿರಲಿಲ್ಲ. ಆದರೆ ಅಂಥ ಕಟ್ಟಳೆಯ ಕಟ್ಟು ಇಲ್ಲ ; ನಾವು ನಮ್ಮ ನಾಲ್ಕು ಕೀಟಗಳನ್ನು ಈ ಜಗತ್ತಿನಲ್ಲಿ ತರಲೆಂದು ಜತೆಗೂಡಿಲ್ಲ. ಹೃದಯಗಳು ಎರಡು ಒಂದಾಗಿ ಒಂದುಗೂಡಿದ್ದೇವೆ....

" ನೀನು ಸ್ವತಂತ್ರಳು....ನಾನೂ ಹಾಗೆಯೇ. ಆದರೆ, ಸ್ವಾತಂತ್ರ್ಯ ಹೇಗೆ ಉಪಯೋಗಿಸಲ್ಪಡಬೇಕು ಎಂಬ ಬಗೆಗೆ ನಿನಗೆ ಕಲ್ಪನೆಯಿಲ್ಲ. ಮನ ಬಂದಂತೆ ಬಾಳಿದರೆ, ಅದು ಸ್ವೇಚ್ಛೆ ಕಲ್ಯಾಣಿ–ಸ್ವಾತಂತ್ರ್ಯವಲ್ಲ.

" ಇದು ಮನೆ....ನನ್ನ ಮನೆ....ಎಂದು ನಂಬಿದ್ದೆ ನಾನು. ಅದು

ನನ್ನದು ಮಾತ್ರ....ನಿನ್ನದೂ ಅಲ್ಲ ಎಂಬುದು ನನಗೆ ತಿಳಿಯಿತು. ಹಾಗೇ ಊಟವಮಾಡಿ ಈ "ರೂಮ್"ನಲ್ಲಿರಲಾರದೆ ಹೊರಟೆ."

"ಗೆಳತಿಯರು ಒತ್ತಾಯಪಡಿಸಿದರು. ಇಂದೊಂದು ದಿನ ಜತೆಯಾಗೇ ಇರೋಣ....ಮನೆಯಲ್ಲೇನಿದೆ ಮಹಾ....ಎಂದರು."

"ನಿಜ. ಇಲ್ಲೇನಿದೆ ಮಹಾ? ನಿನಗೇ ಒಲವಿಲ್ಲದಾಗ ಇತರರಿಗೆ ಹೇಗೆ ಮೂಡೀತು?....ಇದೊಂದು ದಿನವೇ....ಇಂಥ ಎಷ್ಟು ದಿನಗಳಾಗಿವೆ ಇದುವರೆಗೆ?....

"ಇಂದು ಎತ್ತಲೋ ಸುತ್ತಾಡಿ ಟೌನ್‌ಹಾಲ್‌ಬಳಿ ತೆರಳಿದ್ದೆ. ಕೇಳು....ಆಸಕ್ತಿಯಿಂದ ಕೇಳು....ಶ್ರೀಕಂಠನೂ ನನ್ನ ಜತೆ ಸೇರಿದ ಅಲ್ಲಿ....

"ಅಲ್ಲಿ ನನ್ನ ದೇವರು ನನಗೆ ಕಾಣಿಸಿಕೊಂಡರು...."

ಕಲ್ಯಾಣಿ ಇದುವರೆಗೂ ಸುಮ್ಮನಿದ್ದವಳು ಈಗ ಎಚ್ಚರವಾದಳು. ಅವಳ ಸಂದೇಹ, ಕೃಷ್ಣ ಹಾಡುತಿದ್ದ ಹಾಡಿನ ಕಾರಣದ ಸಮಸ್ಯೆ ಈಗ ಬಗೆಹರಿಯುವಂತಾಯಿತು. ಅವಳಿಗೆ ತನ್ನ ತಪ್ಪು ಅರಿವಾಯಿತು.

"ಯಾರು...." ಎಂದು ಕಣ್ಣರಳಿಸಿ ಕೇಳಿದರು.

"ಯಾರು?....ನಿಜ....ಮರೆತು ಹೋಗಿದೆ ನಿನಗೆ....ನೀನು ಮರೆತು ಬಿಡಬೇಕಾದುದೇ....ರಾಜುವಂತಹ ನಾಟ್ಯಕಲಾವಿಶಾರದರಿದ್ದಾರೆ....ಕಂಪೆನಿ ತುಂಬ ಕಲಾವಂತರಿದ್ದಾರೆ....ಜೋಳದ ರಾಶಿಯಲ್ಲಿ ಬಿದ್ದಾಗ ಮುತ್ತಿಗೆ ಅದೇ ಮುತ್ತಿನ ರಾಶಿ ಎಂಬ ಕಲ್ಪನೆ ಬರುತ್ತದೆ....

"ನನ್ನ ದೇವರು....ನನ್ನ ಗುರು....ನಿನ್ನ ದೇವರು....ನಿನ್ನ ಗುರು....

"ನಾವಿಬ್ಬರೂ ಮೋಸಗೊಳಿಸಿ, ನಂಬಿದವರನ್ನು ಕೈಬಿಟ್ಟು, ಕಾಮವನ್ನೇ ಪ್ರೇಮವೆಂದು ತಿಳಿದು ನಂಬಿ, ಹಾರಿ ಹಾರಿ ಬಂದೆವಲ್ಲ! ನಿನ್ನ ಮಾತು ಕೇಳಿದೆ, ಪ್ರೇಮಕ್ಕೆ ಬಲಿಯಾದೆ, ಸೋತೆ. ಈ ದಾರಿ ಹಿಡಿಯೋಣ, ಇಲ್ಲವಾದರೆ ಪ್ರಾಣ ಕಳೆದುಕೊಳ್ಳುತ್ತೇನೆ ಎಂದು ನೀನು ಹೆದರಿಸಿದೆ–ನಾನು ನಂಬಿದೆ. ಎಂದೆಂದೂ ನಾನು ನಿಮ್ಮವಳು....ಎಂದು ನೀನು ನೂರುಬಾರಿ ಹೇಳಿದೆ; ನಾನು ನಂಬಿದೆ, ನಿನ್ನಂತಹಳನ್ನು ಪಡೆದ ಭಾಗ್ಯಶಾಲಿಯೆಂದು ಉಬ್ಬಿದೆ, ಅಹಂಕಾರಿಯಾದೆ....ನಾನೂ ಹಸಿದ ಹಾರುವನಂತೆ ಉಂಡು

ತೇಗಿವೆ....ಈಗ....ನೀನು ಉಂಡ ಹರದನಂತಾಗಿದ್ದೀಯಲ್ಲ....ಇದೆಲ್ಲ ಹಳೆಯ ಕತೆ. ನಾವು ಯಾರ ಕೈಬಿಟ್ಟೆವೋ ಅವರು....ಅವರೇ ಬಂದರು."

ಕಲ್ಯಾಣಿ ಕರಗಿ ನೀರಾದಳು. ಅವಳಿಗೆ ಮುಂದೆ ಮಾತೇ ಹೊರಡ ಲಿಲ್ಲ. ತಲೆ ತಗ್ಗಿಸಿ ಕುಳಿತಿದ್ದಳು. ಬೇಡವೆಂದರೂ ಕಣ್ಣೀರು ಹರಿಯುತಿತ್ತು.

"ಅವರು ಇಲ್ಲಿಗೂ ಬಂದಿದ್ದರು....ಈ ಮನೆ ನೋಡಿದರು. ನಾನೂ ಇರಲಿಲ್ಲ. ಗೃಹಿಣಿಯಾದ ನೀನೂ ಇರಲಿಲ್ಲ. ನಿನ್ನನ್ನು ನೋಡಲೆಂದೇ ಬಂದರು....ಕಲಾದೇವಿಯ ಮಂದಿರ ನೋಡಲೆಂದು ಬಂದವರು ಕಾಮ ಕೇಳಿಯ ಕೊಠಡಿಯನ್ನು ಕಂಡರಂತೆ....ಸುಂದರನೊಡನೆ ಮಾತನಾಡಿದರು.... ಹೊರಟುಹೋದರು...."

ಕೃಷ್ಣ ಮುಂದೆ ಮೌನತಾಳಿದ. ಅವನ ಹೃದಯದಿಂದ ಹಾಡಿನ ಹೊನಲು ಹರಿಯುತಿತ್ತು. ಭಾವಗೀತೆಯನ್ನಾತ ಗೊಣಗುತ್ತಲೇ ಇದ್ದ.

ಕಲ್ಯಾಣಿ ಸುಮ್ಮನೆ ಮರದ ಬೊಂಬೆಯಂತೆ ಕುಳಿತಿದ್ದಳು.

"ಹ್ಞು ಮಲಗಿಕೋ. ತುಂಬ ಹೊತ್ತಾಯಿತು. ನಾಳೆ ಮಾತ ನಾಡೋಣ."

ಅವಳು ಅಳುತಿದ್ದಳು.

"ಆಗಲೇ ಕಣ್ಣೀರು ಹರಿಯಿತೇ? ಅಳು ಬಂತೇ? ಯಾಕೆ? ಅಳ ಬೇಕಾಗಿಲ್ಲ ಕಲ್ಯಾಣಿ....ನಗು....ಇಂದು ನಿನ್ನ ದೇವರು ಬಂದರು. ನೀನು ಅವರು ಬರುವಾಗ ಎಲ್ಲೋ ಆನಂದದಿಂದ ನಲಿಯುತಿದ್ದೆ. ನನ್ನನ್ನೂ, ಮನೆಯನ್ನೂ, ಅವರನ್ನೂ ಮರೆತಿದ್ದೆ....ಅಲ್ಲವೇ?....ಇದು ನಿನ್ನ ಜೀವನದಲ್ಲಿ ಪರ್ವಕಾಲವಾಗಲಿ....ನಿನ್ನನ್ನು ನೀನು ತಿದ್ದಿಕೊಂಡು ಬದುಕುವ ಬಾಳಿನ ಮೊದಲ ದಿನವಾಗಲಿ....

"ಅಳಬೇಕಾಗಿಲ್ಲ....ಅತ್ತು ಅತ್ತು ಹೀಗಾಯಿತು. ನಾನು ಕಠಿಣ ನಾದಾಗಲೆಲ್ಲ ಈ ಕಣ್ಣೀರು ಬಂದು ನನ್ನ ನಿರ್ಧಾರ ಬದಲಿಸುವಂತೆ ಮಾಡಿತು. ನಾನು ಹೇಳಿದ ಮಾತೆಲ್ಲವನ್ನೂ ತೊಳೆದುಕೊಂಡು ಹೋಯಿತು. ಅದು ಉಪ್ಪು ನೀರು ಕಲ್ಯಾಣಿ—ಉಪ್ಪು ನೀರು.

"ಹಾಲನ್ನೂ ಕೆಡಿಸುತ ....

"ನಿನ್ನ ಬಾಳನ್ನೂ ನನ್ನ ಬಾಳನ್ನೂ ಕೆಡಿಸಬಲ್ಲುದು....

" ಹ್ಞೂ....ಮಲಗು....ಎಲ್ಲವನ್ನೂ ಮರೆತು ಹೊಸಬಾಳು ಬಾಳುವ ದಿನದ ಆರಂಭಕ್ಕಾಗಿ ಕಾದು ನಿದ್ರಿಸು...."

ಕೃಷ್ಣ ಹಾಸಿಗೆಯಿಂದೆದ್ದು ಹಾಲ್‌ನೆಡೆಗೆ ನಡೆದ. ಹಾಳ್‌ನಲ್ಲಿ ದೀಪ ಉರಿಯುತ್ತಲೇ ಇತ್ತು. ಸುಂದರ ಒಂದು ಮೂಲೆಯಲ್ಲಿ ಹಾಸುಕೂಡಾ ಹಾಸದೆ ಮಲಗಿದ್ದ. ಅವನೂ ಅತ್ತಂತೆ ಕಂಡುಬರುತಿತ್ತು. ಕೃಷ್ಣ ಅವನ ಹಾಸನ್ನು ಹಾಸಿ, ಅವನನ್ನೆತ್ತಿ ಅದರ ಮೇಲೆ ಮಲಗಿಸಿ ಹೊದಿಕೆ ಹೊದಿಸಿದ. ದೀಪವಾರಿಸಿ, ಮನೆಯ ಅಂಗಳಕ್ಕಿಳಿದು, ಗಾಳಿಗೆ ಮೈಯೊಡ್ಡಿ ನಿಂತ.

ಮುಂದಿನ ಯೋಚನೆ ಏನು? ಯಾವ ದಾರಿ ತುಳಿಯಬೇಕು-ಎಂಬುದೇ ಅವನ ಚಿಂತೆಯಾಗಿತ್ತು.

ಬಹಳ ಹೊತ್ತು ಹಾಗೇ ಕಳೆದು ಕೃಷ್ಣ ಕೋಣೆಗೆ ಬಂದ. ಗಂಟೆ ಹನ್ನೆರಡು ಬಾರಿಸಿತು.

ಹಾಸಿಗೆಯ ಮೇಲೆ ಕಲ್ಯಾಣಿ ಮುದುಡಿಕೊಂಡು ಮಲಗಿದ್ದಳು.

ಅವಳನ್ನು ಎಚ್ಚರಿಸುವುದೇ ಬೇಡವೆಂದು ಕೃಷ್ಣ ದೂರ ಹಾಸಿಗೆ ಹಾಸಿ ಮಲಗಿಕೊಂಡ.

ತನ್ನ ಮನಸ್ಸಿಗೆ ಅದೇನೋ ಒಂದು ತರಹ ಶಾಂತಿ ದೊರೆತಿದ್ದರೂ ಆಗಾಗ ಕಲ್ಯಾಣಿಯ ಯೋಚನೆ ಅವನನ್ನು ಕಾಡುತ್ತ ನಿದ್ರೆಗೆ ಅಡಚಣೆಯಾಗುತಿತ್ತು. ಇವಳು ದಾರಿ ತಪ್ಪಿದಳೇ? ಹೇಗೆ ನಂಬಲಿ? ಹೀಗೇಕೆ ಮನಬಂದಂತೆ ತಿರುಗಾಡುತ್ತಾಳೆ? ಹೊತ್ತಲ್ಲದ ಹೊತ್ತಿಗೆ ಮನೆಗೆ ಹಿಂತಿರುಗುತ್ತಾಳೆ?

ಇಂದೂ ಸಿನಿಮಾ ನೋಡಿ ಬಂದಳೇ? ಅದೇಕೆ ಮಾತಿಲ್ಲ? ಏಕೆ ತುಂಬ ಬಳಲಿದಂತೆ ಕಾಣುತಿದ್ದಳು? ಮುಖದ ಮೇಲಿನ ಕಳೆ ಕೆಟ್ಟಂತಿತ್ತಲ್ಲ-ಎಂದು ತನ್ನ ಮನಕ್ಕೆ ತೋರಿದುದಕ್ಕೆ ಕೈಕಾಲು ಕೂಡಿಸಿ ಯೋಚಿಸುತಿದ್ದ ಕೃಷ್ಣ. ಬೇಡವೆಂದರೂ ಅವಳ ಬಗೆಗೆ ಸಂದೇಹವೇ ಬೆಳೆಯುತಿತ್ತು.

ಅಂತೂ ಜೊಂಪು ಹತ್ತಿತು.

ಎಚ್ಚರವಾಯಿತು.

ಇನ್ನೂ ಬೆಳಗಾಗಿರಲಿಲ್ಲ. ಹಾಗೇ ಮುಸುಕೆಳೆದುಕೊಂಡ. ಪುನಃ ಹಾಳು ಯೋಚನೆ....ಗಂಟೆ ೫ ಬಾರಿಸಿತು.

ಕೃಷ್ಣ ಎದ್ದು ಕುಳಿತ. ಈ ಯೋಚನೆಗಿಂತ ನನ್ನ ಅಭ್ಯಾಸವನ್ನಾದರೂ ನಡೆಸೋಣವೆಂದು ಮುಖತೊಳೆದು ತಂಬೂರಿಯನ್ನು ಕೈಗೆತ್ತಿಕೊಂಡ.

ಇಲ್ಲ ; ಕಲ್ಯಾಣಿ ತನ್ನ ದಾರಿ ಹಿಡಿದಳು–ದಾರಿ ತಪ್ಪಿದಳು.

ನಿನ್ನ ದಾರಿ ನಿನಗೆ–ಅದು ಖಚಿತವಾಗಲಿ.

ಪತಿವ್ರತೆಯಳೊಬ್ಬಳು ಸೂಳೆಗೇರಿ ಸೇರಿದ್ದಾಳೆ.

ನಿನ್ನ ಅಭ್ಯಾಸ ಸಾಗಲಿ....

ಕೃಷ್ಣನಿಗೆ ಯೋಚನೆಗಳ ಅಲೆಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಲಿಲ್ಲ.

ಗುರುವಿನ ಒಂದೊಂದು ಮಾತುಗಳೂ ಅವನ ಮುಂದೆ ಸುಳಿದುವು.

ನಿಜವಾಗಿಯೂ ಗುರು ನನ್ನನ್ನು ಕ್ಷಮಿಸಿದರೇ ?

ನನ್ನನ್ನು ಹಾರ್ದಿಕವಾಗಿ ಆಶೀರ್ವದಿಸಿದರೇ ?

ತನ್ನ ಸರ್ವಸ್ವವೆಂದು ಬಗೆದ ಕಲ್ಯಾಣಿಯ ಬಗೆಗೆ ಅದೇಕೆ ಅಷ್ಟು ಅನಾಸಕ್ತಿ ತೋರಿದರು ?

ನಾನು ಮಾಡಿದ್ದನ್ನೆಲ್ಲ ಮರೆತರೇ ?

ತಪ್ಪಿತಸ್ಥನಲ್ಲವೆಂಬ ಅರಿವಾಯಿತೇ ?

ಎಂತಹನಾದರೂ ಹೆಣ್ಣು ತಪ್ಪುಮಾಡಿಲ್ಲ, ಗಂಡಿನದೇ ತಪ್ಪು ಎನ್ನುತಿದ್ದರು. ಆದರಲ್ಲೂ ತನ್ನ ಸರ್ವಸ್ವವೆನಿಸಿದ್ದ ಹೆಣ್ಣು ತಪ್ಪು ಮಾಡುವಳೆಂದು ತಂದೆಯ ಸ್ಥಾನದಲ್ಲಿರುವವನು ತಿಳಿಯುವುದು ಅಸಂಭವ.

ಮಾಸ್ತರ್ ಇಂಥ ಎಲ್ಲ ಬಂಧನಗಳಿಗೂ ಹೊರತಾದ ಮಹಾಶಕ್ತಿಯೇ ?

ಅವನಿಗೆ ಗುರುವಿನ ಬಗೆಗೆ ಅಭಿಮಾನ ಮೂಡಿ ಬೆಳೆದು ತಾನೇತಾನಾಗಿ ಹಾಡು ಹರಿಯಿತು.

ತಂಬೂರಿಯ ನಾದದಲ್ಲಿ ಮೈಮರೆತು ಹಾಡಿದ.

ಇನ್ನೂ ಹೊಸಭಾವ, ಹೊಸಭಕ್ತಿ, ಹೊಸ ಉತ್ಸಾಹ.

“ ಶಾಂತಿ ಇಲ್ಲವೆ ನನ್ನ ಬಾಳಿಗೀ ಬಾಳಿನಲಿ
ದೇವನಿಚ್ಛೆಯೆ ಇದುವು ದುಃಖ–ನೋವು
ಹೇ ಗುರುವೆ ! ಸಾಕು ಈ ಚಿತ್ರ ಹಿಂಸೆಯು ನನಗೆ
ಬದುಕಿಸೆನ್ನನು ನೀಗು ನನ್ನ ನೋವು.

ದಿನ ಬರಲಿ, ಪ್ರಕೃತಿಯಾ ಸೌಂದರ್ಯ ಬೆಳೆದಿರಲಿ
ಎನಗದರ ಸವಿಯು ಕಹಿಯಾಗುತಿಹುದು.
ಮನವೆಲ್ಲೊ ಕಣ್ಣೆಲ್ಲೊ ಯಾವುದೋ ಭಾವದಲಿ
ಗಣನೆಗೆಟಕದ ಗಣನೆ ನಡೆಸುತಿಹುದು.

ಇಲ್ಲ! ನಿನ್ನಯ ಕನಸ ಕಾಂಬ ಶಕ್ತಿಯು ಇಲ್ಲ
ಕನಸ ಕಾಣುವ ದಿಟ್ಟಿ ಮಸಕಾಗಿದೆ.
ನನ್ನ ಹೃದಯದ ನೈಜ ಭಾವ ನೀವರಿತಿಲ್ಲ
ನಿಷ್ಕಲ್ಮಶಾತ್ಮ ನಿಮ್ಮನು ಕಾದಿದೆ.

ಗಿರಿಯ ಶಿಖರದ ಮೇಲೆ ಪ್ರೇಮದಾ ಮಂಟಪವ
ನೀವು ರಚಿಸಿದಿರೆನ್ನ ಹೃದಯಕಾಗಿ
ಆ ಗಿರಿಯನೇರುವೊಡೆ ನಾನಳುಕಬಹುದೆಂದು
ನಿಂದಿಹಿರಿ ನನ್ನ ಭವ ಬಾಳ ತೂಗಿ.

ನಿಮ್ಮ ಆ ಮೊಗದಲ್ಲಿ ಮೂಡಿರುವ ಮುಗುಳುನಗೆ
ನನಗೆ ಕೊಡುತಿರಲೆಲ್ಲ ಆತ್ಮಶಕ್ತಿ
ಆ ಚಿತ್ರ ನೆನೆ ನೆನೆದು ಉಸಿರ ಹಿಡಿದಳಿಯುವೆನು
ನೀವ್ ಬರುವ ದಿನ ಕಾದು ಪಡೆಯೆ ಮುಕ್ತಿ.

ಕಾಯುವೆನು ನಾನು ಗುರು! ಶತಮಾನವಾದರೂ
ನಿಮ್ಮ ಪ್ರೀತಿಸುವೆ ನೀವೆಲ್ಲಿದ್ದರೂ.
ಕಾಯುವೆನು ಆಶೆಯಾ ದೊಂದಿ ಆರಿದ್ದರೂ
ನೀವೆಲ್ಲಿ–ಹೇಗೆ–ಏನಾಗಿದ್ದರೂ–

ಇದೊ ಗುರುವೆ ಗುರುದೇವ ತವಚರಣ ಕಮಲದಲಿ
ನಿಂತಿಹುದು ಈ ಶಿರವು ಅಭಯ ಬೇಡಿ
ಹರಸಿ ಎತ್ತಿರಿ ಇದನು ತೋಳು ಮುಂತೂಗುತಲಿ;
ನಡೆವೆ ಮುಂದಕೆ, ಭವದಿ ಬೆಳಕ ನೀಡಿ!

ಬೆಳಗಾಯಿತು. ತನ್ನ ದುಃಖದ ಹೊರೆಯನ್ನೆಲ್ಲ ಇಳಿಸಿ ಕೃಷ್ಣ ತಂಬೂರಿ ಕೆಳಗಿಟ್ಟ.

ಸುಂದರ ಆಗಲೇ ಎದ್ದು ಕಾಫಿ ಸಿದ್ಧಪಡಿಸಿದ್ದ.

ಕಲ್ಯಾಣಿಯನ್ನು ಎಚ್ಚರಿಸಲೆಂದು ಕೃಷ್ಣ ಕೋಣೆಗೆ ನಡೆದ.

ಅವಳಿಗಿನ್ನೂ ಎಚ್ಚರವಿಲ್ಲ.

ಹಾಸಿಗೆಯ ಮೇಲೆ ದಿಂಬಿನ ಎಡೆಯಿಂದ ಬೆವರಿನಿಂದ ತೊಯ್ದು ಕಾಗದವೊಂದು ಕಾಣಿಸುತ್ತಿತ್ತು. ಹಾಗೇ ನೋಟಿನ ಕಂತೆ ಕೂಡಾ.

ಕೃಷ್ಣ ಕಾಗದವನ್ನೆತ್ತಿ ನೋಡಿದ.

ಮೋಹಿನಿ ಚಿತ್ರ ಸಂಸ್ಥೆಯ ಕಂಟ್ರಾಕ್ಟ್.

ಕಟ್ಟಿನಲ್ಲಿ ನೂರು ರೂಪಾಯಿಗಳ ಹತ್ತು ನೋಟುಗಳೂ ಇದ್ದುವು.

ಹಿಂದಿನ ದಿನ ಅವಳು ಯಾವ ಸಿನಿಮಾ ನೋಡಲು ಹೋಗಿದ್ದಳು, ಯಾಕೆ ಅಷ್ಟು ಹೊತ್ತಾಯಿತು ಎಂಬುದೆಲ್ಲ ಅವನಿಗೆ ಅರಿವಾಯಿತು. ಹಿಂದೆ ತ್ರಿಭುವನ ಫಿಲಮ್ಸ್‌ಗೆ ಹೋಗುವಾಗ ಅವನೂ ಜತೆಗೆ ಇದ್ದ. ಈಗ, ಎರಡನೇ ಕಂಟ್ರಾಕ್ಟ್ ಮಾಡುವಾಗಲೇ ಅವನ ಅಗತ್ಯವಿಲ್ಲ ಅವಳಿಗೆ. ಈ ಯೋಜನೆಯ ಸೂಚನೆಯನ್ನು ಆಕೆ ಕೊಟ್ಟಿಲ್ಲ, ಸಲಹೆ ಕೇಳಿಲ್ಲ. ತಾನು ಇದ್ದೂ ಇಲ್ಲದವನಾಗಿದ್ದೇನೆ; ಅವಳಿಗೆ ತನ್ನ ಅಗತ್ಯವಿಲ್ಲವಾಗಿದೆ.

ಯಾರೋ ಬೇರೆ ಅವಳ ಹಿಂದೆ ನಿಂತಿರಬಹುದು. ಅವಳ ಕೈಹಿಡಿದು ಮುನ್ನಡೆಸುತ್ತಿರಬಹುದು. ಇನ್ನು ನನ್ನ ಅಗತ್ಯ ಅವಳಿಗಿಲ್ಲ.

ಪರಿಸ್ಥಿತಿ ಕೈಮೀರುವ ಮೊದಲೇ ನನ್ನ ದಾರಿ ನಾನು ಹಿಡಿಯಬೇಕು. ನಾನಾಗೇ ಹೊರಟುಹೋದರೆ ಎಷ್ಟೋ ಮೇಲು. ಮಾನಕೆಟ್ಟ ಬಳಿಕ ಇಲ್ಲಿ ನಿಲ್ಲುವುದು ಸಾಧ್ಯವಿಲ್ಲ. ನಾನು ಪತಿ ಎನಿಸುವ ಬದಲು ದಳ್ಳಾಳಿಯಾಗುತ್ತಿದ್ದೇನೆ....ಯೋಚಿಸಿದಷ್ಟಕ್ಕೂ ಮುಂದೆ ಏನಾಗಬಹುದೆಂಬ ಚಿತ್ರ ಅವನ ಮುಂದೆ ನಿಂತು ಅವನಿಗೆ ಭೀತಿಯಾಯಿತು. ಹಾಗೇ ಹೋರಾಡಿ ಜಗಳವಾಡಿ ಈ ಬಿರುಕನ್ನು ಸರಿಪಡಿಸುವುದು ಸಾಧ್ಯವಿಲ್ಲವೆಂದೂ ಅವನಿಗೆ ತೋರಿತು.

ಎಷ್ಟೋ ಬಾರಿ ವಾದ ನಡೆದಿದೆ–ಪ್ರಯೋಜನವಾಗಿಲ್ಲ.

ಇಂದು ಗುರು ಬಂದಾಗಲೂ ಆಕೆ ಜಾರುವ ದಾರಿಯಲ್ಲಿ ಮುಂದೆ ಮುಂದೆ ಸಾಗುತ್ತಿದ್ದಾಳೆ.

ಕಾಫಿ ಕುಡಿಯುತ್ತ ಕೃಷ್ಣ ಜಗಲಿಯಲ್ಲಿ ಕುಳಿತಿದ್ದ. ಅವನ ದುಃಖ ರೋಷ ನಿಧಾನವಾಗಿ ಬೆಳೆಯುತ್ತಿತ್ತು.

"ರಾವ್‌ಜೀ....ನಮಸ್ಕಾರ."

"ನಮಸ್ಕಾರ ಶ್ರೀಕಂಠ. ಬನ್ನಿ. ನಿಮ್ಮನ್ನೇ ಇದಿರುನೋಡುತಿದ್ದೆ. ನಿಮಗಾಗಿ ಕಾದಿದ್ದೆ."

"ಹಾಗೇನು ಬಹಳ ಚೆನ್ನಾಯಿತು. ಇನ್ನೂ ಚಿಂತೆ ಅಳಿದಿಲ್ಲವೇ?"

"ಅದೆಲ್ಲ ಗುರುವಿನ ಪಾದ ತಳದಲ್ಲೇ ಸುರಿಸಿದ್ದೇನೆ. ಈಗ ನನಗಾವ ಚಿಂತೆಯೂ ಇಲ್ಲ....ಕುಳಿತಿರಿ....ಬಂದೆ."

ಕೃಷ್ಣ ಒಳಗಡೆ ನಡೆದು ಜುಬ್ಬಾ ಧರಿಸಿಕೊಂಡು ಬಂದ.

"ಬನ್ನಿ–ಸ್ವಲ್ಪ ಹೊರಗಡೆ ಹೋಗಿ ಬರೋಣ."

ಇಬ್ಬರೂ ನಡೆದುಕೊಂಡು ಯೂನಿವರ್ಸಿಟಿ ರೆಸ್ಟಾರೆಂಟ್ ಕಡೆಗೆ ಹೊರಟರು. ಕೃಷ್ಣ ನಡೆದುದೆಲ್ಲವನ್ನೂ ಸೂಕ್ಷ್ಮವಾಗಿ ವರ್ಣನೆ ಮಾಡಿದ. ಈಗ ಉಂಟಾಗಿರುವ ಸಮಸ್ಯೆಯನ್ನು ಅವನ ಮುಂದಿಟ್ಟ. ಇಬ್ಬರೂ ಶಾಂತವಾಗಿ ಪರಿಸ್ಥಿತಿಯನ್ನು ವಿಮರ್ಶಿಸಿದರು. ಶ್ರೀಕಂಠನಿಗೆ ಈ ಕಂಟ್ರಾಕ್ಟ್ ಬಗೆಗೆ ಸಂದೇಹ ಬಂದರೂ ಆತ ತೋರಿಕೊಡಬಾರದೆಂದು ಯತ್ನಿಸುತಿದ್ದ.

"ಪ್ರಹ್ಲಾದ ಚಿತ್ರ. ಮುಖ್ಯ ಪಾತ್ರ. ಜತೆಗೆ ನೃತ್ಯ ನಿರ್ದೇಶನವನ್ನೂ ಅವಳಿಗೇ ಕೊಡುತ್ತಾರೋ ಏನೋ."

"ಆದರೂ ಐದು ಸಾವಿರ....ಅದೂ ಕನ್ನಡ ಚಿತ್ರರಂಗದಲ್ಲಿ....ನನಗೇನೋ ಸಂದೇಹ."

"ಕಲ್ಯಾಣಿಯ ಯೋಗ್ಯತೆಗೆ ಅದು ಕಡಿಮೆಯಲ್ಲವೇ? ಕನ್ನಡ ನಟಿಯರು ಮದ್ರಾಸ್‌ನಲ್ಲಿ ಅದರ ನಾಲ್ಕಾರು ಪಾಲು ಪಡೆಯುತಿದ್ದಾರೆ."

"ಅದು ತಮಿಳುನಾಡು."

"ಕನ್ನಡ ನಾಡೂ ಆ ಹಂತಕ್ಕೇರುತ್ತದೆ. ಇನ್ನೊಬ್ಬ ಚಿತ್ರ ತಯಾರಕ ಹುಟ್ಟಿಕೊಂಡರೆ ಇನ್ನೂ ಹೆಚ್ಚು ವರಮಾನ ನಟಿಯರಿಗೆ ಬರಬಹುದು."

"ನಿಜ. ಆಗಲೇ ಕಲ್ಯಾಣಿಯ ವಿಚಾರ ನಿಮಗೆಲ್ಲ ತಿಳಿದಿದೆ. ನಾನೇನು ಮಾಡಬೇಕು–ಹೇಳಿ. ನನಗಿಲ್ಲಿ ನಿಲ್ಲುವುದು ಸಾಧ್ಯವಿಲ್ಲ. ನಾನು ದಳ್ಳಾಳಿ ಎಂದು–ಕರೆಸಿಕೊಳ್ಳಲು ಸಿದ್ಧವಿಲ್ಲ."

" ನಿಮ್ಮ ಸ್ಥಿತಿ ನನಗೆ ಅರ್ಥವಾಗುತ್ತದೆ ರಾವ್‌ಜಿ. ಆದರೆ ಅವಳು ಹಿಡಿದ ದಾರಿಯಿಂದ ಅವಳನ್ನು ತಡೆಯುವುದು ಸಾಧ್ಯವೇ ? ಹಳೆ ಕಂಪೆನಿಯವರು, ಹೊಸ ಕಂಪೆನಿಯವರು, ಗೆಳತಿಯರು ಎಂದು ಎಲ್ಲರೂ ಅವಳನ್ನು ಕರೆಯುತ್ತಾರೆ. ಮನೆ ಕೇವಲ ರಾತ್ರಿ ನಿದ್ರಿಸುವ ಕೋಣೆಯಾಗುತ್ತದೆ. ಆಗ ನಿಮ್ಮಲ್ಲಿನ ಪತಿಭಾವ ಕ್ರಾಂತಿಯೆದ್ದು ಹೋರಾಡುತ್ತದೆ. ಅವಳು ನಟಿ. ಅವಳ ಕರ್ತವ್ಯ ಅವಳು ನಿರ್ವಹಿಸಬೇಕು. ಅದಕ್ಕೆ ಅಡ್ಡಿಯಾದರೆ ಅವಳ ಭವಿಷ್ಯವೂ ಹಾಳಾಗುತ್ತದೆ."

" ಅಡ್ಡಿಯಾಗುವುದಿಲ್ಲ ನಾನು, ಅದು ನಿಮಗೇ ತಿಳಿದಿದೆ. ಆದರೆ ಹಾರಾಟಕ್ಕೆ ಮಿತಿ ಬೇಡವೇ ?"

" ಕುಡುಕನಂತೆ ಕಲಾವಿದನ ಜೀವನ. ಇಷ್ಟೇ ಹೊತ್ತು ಹಾಡು ಎಂದರೆ ನಿಮಗೆ ಸಾಧ್ಯವೇ ? ಹಾಗೇ ಈ ರಂಗದಲ್ಲಿ ಇಳಿದ ಮೇಲೆ ಇತಿಮಿತಿಗಳೆಲ್ಲಿ ? ಎಲ್ಲ ವಿಚಾರಗಳಲ್ಲೂ ಹಾಗೆಯೇ ? ಹಿತಮಿತವರಿಸುವುದು ಸಾಮಾನ್ಯರಿಗೆ ಸಾಧ್ಯವಿಲ್ಲ."

" ಅಂದರೆ........"

" ಆಕೆಯೊಡನೆ ಹೋರಾಡಬೇಡಿ. ಕಾದಾಡಬೇಡಿ. ವಿವೇಕ ಹೇಳಿ. ಇನ್ನೂ ನಿಮ್ಮ ಕರ್ತವ್ಯ ನಿರ್ವಹಿಸಿ. ಕೊನೆಯವರೆಗೂ ಯತ್ನಿಸಿ ಮುಂದೆ ನಡೆಯಬೇಕು. ನಾವು ದುಡುಕಬಾರದು."

" ಇನ್ನೂ ನಿಧಾನವೇ ? ಅಪಮಾನ ಸಹಿಸಿಕೊಂಡು ಕುಳಿತಿರಲೇ ?"

" ಅದೇ ಹುಚ್ಚು ಕಲ್ಪನೆ. ನೀವು ಸುಖ ಅನುಭವಿಸುವಾಗ ಯಾರ ಕಾಲು ಯಾರ ಎದೆಯ ಮೇಲಿರುತ್ತೋ ? ಆದರೂ ಅದು ಅಪಮಾನವೆಂದು ತಿಳಿಯುವುದಿಲ್ಲ. ಸಂಸಾರವೂ ಹಾಗೆಯೇ ? ಒಮ್ಮೆ ಗೆದ್ದವರು ಮತ್ತೊಮ್ಮೆ ಸೋಲಬೇಕು. ಅದು ಸೋಲಲ್ಲ-ಗೆಲುವು ನಾನೂ ಹೇಳುತ್ತೇನೆ."

" ಸೋಲು ನಮ್ಮದಾದರೆ...."

" ನಡೆದು ಹೋಗಬೇಕಾದ ದಾರಿಗೆ ಸುಂಕವಿಲ್ಲ-ಗೇಟೂ ಇಲ್ಲ."

ಕಾಫಿ ಕುಡಿದು ಇಬ್ಬರೂ ಮರಳಿದರು.

## ೧೯

ಕಲ್ಯಾಣಿ ಎಚ್ಚರವಾಗಿ ಎದ್ದು ಕುಳಿತಳು.

ರಾತ್ರಿ ನಡೆದುದೆಲ್ಲ ಅವಳ ನೆನಪಿಗೆ ಬಂದುವು.

ಎಲ್ಲೆಲ್ಲೂ ತನಗೆ ಆದರವಿದೆ. ಪ್ರತಿಯೊಬ್ಬನೂ ತನ್ನನ್ನು ಗೌರವಿಸುತ್ತಾನೆ. ಅತ್ಯಂತ ಅಭಿಮಾನದಿಂದ ಕಾಣುತ್ತಾರೆ.

ತ್ರಿಭುವನ ಚಿತ್ರದ ನಟ-ನಟಿಯರು-ಅವರು ಗೌರವಿಸಿ, ಆದರಿಸುವ ಬಗೆ. ಅಲ್ಲಿನ ಯಜಮಾನರು ಅವಳನ್ನು ಹೊತ್ತು ತಿರುಗಲೂ ಸಿದ್ಧರಾಗಿರುವಂತೆ ನಡೆದುಕೊಳ್ಳುವ ರೀತಿ-ಅವಳ ಕಣ್ಣ ಮುಂದೆ ನಿಂತಿತು. ಕಾಸು ಕೊಡುತ್ತಾರೆ; ನಾನು ನರ್ತಿಸುತ್ತೇನೆ. ನಾನು ಅವರ ಸಂಬಳಕ್ಕೆ ನಿಂತವಳು. ಹೀಗಿದ್ದರೂ ಅಷ್ಟು ನನ್ನನ್ನೇಕೆ ಗೌರವಿಸಬೇಕು? ಅವರಿಗೇನು ಅಗತ್ಯ?

ಹೆಣ್ಣು - ಸುಂದರಿ - ಎಂದೇ? ನನ್ನಂಥ ಎಷ್ಟೋ ಹೆಣ್ಣುಗಳನ್ನು ಅವರು ನೋಡಿರಬಹುದು. ಕಾಸು ಒಗೆದರೆ ಬರುವವರೆಷ್ಟೋ ಮಂದಿ. ಶಾಂತಾ, ರಮಾ ಎಲ್ಲರೂ ಹೆಣ್ಣುಗಳಲ್ಲವೇ? ನನಗೇನು ಹೆಚ್ಚು, ಅವರಿಗೇನು ಕಡಿಮೆ? ಅವರು ಕೊಡುವ ಸುಖ ನಾನೇನು ಕೊಡಬಲ್ಲೆ?

ಯಾವ ಗಂಡಸಾದರೇನು - ಎಲ್ಲರೂ ಒಂದೇ. ಕೃಷ್ಣನೂ ನನ್ನನ್ನು ಬಯಸಿ ಬಂದಿದ್ದಾನೆ - ಹಾಗೇ ಇತರರೂ ಬರಬಹುದು. ಅದರಲ್ಲೇನಿದೆ ಮಹಾ? ಬೇರಿ ಹೇಳಿದಂತೆ ಅದೆಲ್ಲ ತಾಸಿನ ವಿನೋದ, ವಿಹಾರ ತಾನೆ?

ಆದರೆ ಈ ಹೆಣ್ಣಿನ ಬಗೆಗೆ ಅಭಿಮಾನ ತಳೆದು ಪೂಜಿಸುವವರಿಲ್ಲವೇ? ತ್ರಿಭುವನ ಕಂಪೆನಿಯಲ್ಲಿ ದೊರೆಯುವ ಆದರ, ವಿಶ್ವಾಸ, ಆತ್ಮೀಯತೆ ಈ ಮನೆಯಲ್ಲಿಲ್ಲವಲ್ಲ! ಅವರಿಗೆ ಬಾಡಿಗೆ ಹೆಣ್ಣು - ಕೂಲಿ. ಇವರಿಗೆ ಬಾಳ ಸಂಗಾತಿ, ಜೀವನದ ಗೆಳತಿ. ಮೇಲಾಗಿ ನನ್ನ ದುಡಿಮೆಯಿಂದ ಅವರು ಬಾಳುತಿದ್ದಾರೆ.

ಹೌದು. ನಾನು ಅವರನ್ನು ಸಲಹುತಿದ್ದೇನೆ. ಆದರೂ ಕೃತಜ್ಞತೆಯಿಲ್ಲ. ನಾನು ಅವರನ್ನು ನನ್ನವನಾಗಿ ಇರಿಸಿಕೊಂಡಿದ್ದೇನೆ - ಅಲ್ಲವೇನು? ಅಷ್ಟು ವಿಚಾರ ಮಾಡದೆ ತಾನು ಗಂಡಸು ಎನ್ನುತ್ತ ನಿತ್ಯ ಕಾಡುತ್ತಾರೆ.

ನಿತ್ಯ ಗೀತೋಪದೇಶ. ನಿತ್ಯ ರೋಷ! ಇದೇನು? ನಾನು ತೊತ್ತೇ? ತೊತ್ತಾದರೂ ಹೀಗೆ ನಡೆಸಿಕೊಂಡರೆ ಮೂರು ದಿನವೂ ನಿಲ್ಲಲಾರಳು.

ದಿನವಿಡಿ ದುಡಿದು ಬರುತ್ತೇನೆ. ಅದೂ ಸಾಲದೇ?

ನನಗಾಗಿ ಸಾವಿರ ಕಣ್ಣುಗಳು ಕಾದಿವೆ. ಆದರೆ ನನ್ನ ಮೈಯನ್ನೂ ದುಡಿಮೆಯನ್ನೂ ಬಳಸಿಕೊಂಡು ವಿಹರಿಸುವವನಿಗೆ ವಿನಯವಿಲ್ಲ, ವಿಧೇಯತೆಯಿಲ್ಲ, ವಿವೇಚನೆಯಿಲ್ಲ.

ನಿನ್ನೆ ಯಾರೂ ಸಾಧಿಸದ ವಿಜಯ ಸಾಧಿಸಿ ಬಂದಿದ್ದೇನೆ. ಐದು ಸಾವಿರ ರೂಪಾಯಿ! ಒಂದು ವರ್ಷ ಮಹಾರಾಜ್ಞಿಯಂತೆ ಮೆರೆಯಬಹುದು. ಯಾವ ಚಿಂತೆಯೂ ಇಲ್ಲ. ಆದರೂ ವಿಚಾರ ತಿಳಿದು ಆದರಿಸುವ ವ್ಯವಧಾನವಿಲ್ಲದ ಗಂಡಸು ಮನೆಯಲ್ಲಿದ್ದಾನೆ. ಆನಂದದಿಂದ ನಲಿದು ಕಾಲಕಳೆಯೋಣವೆಂದು ಮನೆಗೆ ಬಂದರೆ; ತನ್ನ ಉತ್ಕರ್ಷೆಯನ್ನು ಕಂಡು ಹಿಗ್ಗಿ ಬೆನ್ನು ಚಪ್ಪರಿಸುತ್ತಾನೆ ಎಂದು ನಂಬಿ ಬಂದರೆ ಈ ಅವಸ್ಥೆ! ಯಾರಾಗಿದ್ದರೂ ಲೋಕವನ್ನೇ ಮರೆತು ನನ್ನ ಉತ್ಕರ್ಷೆಯನ್ನು ಕಂಡು ಹಿಗ್ಗಿ ವಿಹರಿಸುತ್ತಿದ್ದರು.

ಹೌದು – ಬೇರೆ ಯಾರಾದರೂ ನನಗೆ ಪೂರ್ಣ ಸುಖವೀಯುತಿದ್ದರು. ನನ್ನನ್ನು ಪೂಜಿಸುತಿದ್ದರು. ಅಲಂಕರಿಸುತಿದ್ದರು.

ಇಲ್ಲಿ ಮಾತ್ರ ನನಗೆ ಮನೆಯಿಲ್ಲ – ಆನಂದವಿಲ್ಲ.

ಕಲಾಮಂದಿರ ಕಾಣಲು ಬಂದ ಗುರುಗಳು ಕಾಮಕೇಳಿಯ ಕೊಠಡಿ ಕಂಡರಂತೆ.

ಕಾಣಲಿ – ಆದರೆ ಅದನ್ನು ಅವರು ಕಂಡರೇ? ಇರಬಹುದು ಕೇವಲ ನನ್ನ ಮೈಯನ್ನಷ್ಟೇ ಬಯಸಿ ಕಾಮಿಸಿ ಸುಖಿಸುವವರು ಇಲ್ಲಿದ್ದಾರೆ. ನನ್ನ ಹೃದಯವನ್ನು ತಿಳಿದವರಿಲ್ಲ. ನನ್ನ ಆನಂದ ಅವರಿಗೆ ಬೇಕಾಗಿಲ್ಲ. ಅವರ ಆನಂದ, ಅವರ ವಿಹಾರ, ಅವರ ಸೇವೆ ಬೇಕು. ನಿಜ....ಅದಕ್ಕೆ ಈ ದೇಹ ಮಾಸಲಾಗಿರಬೇಕು....

ಆದರೆ ನನಗೂ ಹೃದಯವಿದೆ. ಬಯಕೆ ಇದೆ. ಆನಂದ ವಿಹಾರ ವಿನೋದಗಳ ಅಗತ್ಯವಿದೆ.

ನನ್ನ ನೃತ್ಯ ಅಭಿನಯ ಕಂಡು ಬೆನ್ನು ತಟ್ಟುವವರು ಬೇಕು. ನನ್ನ ಉತ್ಕರ್ಷೆಗೆ ಹಿಗ್ಗುವವರು ಬೇಕು. ನನ್ನನ್ನು ಅರ್ಥಮಾಡಿಕೊಳ್ಳುವವರು ಬೇಕು. ನನ್ನವರು ಬೇಕು.

ಈಗ ಅಂಥವರು ಯಾರು?

ರಮಾ, ಶಾಂತಾ, ಶ್ರೀಕಂಠ............

ನಿಜ! ಅವರೇ....ಕಂಪೆನಿಯ ಇತರ ನಟಿಯರು.

ಆ ರಾಜುಗೆ ಇದ್ದ ಭಯ ಭಕ್ತಿ ಅಭಿಮಾನ ಇವರಿಗಿಲ್ಲ. ಆದರೂ ಅವನನ್ನು ದೂರುತ್ತಾರೆ.

ಬೀರಿ ನನ್ನನ್ನು ಅರಿತಂತೆ ಬೇರಾರೂ ಅರಿತಿಲ್ಲ. ಅವಳೇ ನನ್ನ ಜೀವನದ ಬರಡು ಬಾಳನ್ನು ಅರ್ಥಮಾಡಿಕೊಂಡವಳು.

ಶಾಂತಾ....ಅವಳ ಅಪ್ಪುಗೆಯಲ್ಲಿ ಪಡೆಯುವಷ್ಟು ಸುಖವೂ ಇವರೊಡನೆ ಕೂಡಿದಾಗ ಬಾರದಂತಾಗಿದೆ.

ನಿನ್ನೆ ಮೊದಲಬಾರಿಗೆ ನೋಡಿದ್ದೇವೆ. ಏನೋ ಸುಮ್ಮನೆ ಹೋಗಿದ್ದೇವೆ. ಆದರೂ ಮೋಹಿನಿ ಚಿತ್ರದವರಿಗೆ ಅದೆಷ್ಟು ಅಭಿಮಾನ. ಪದ್ಮನಾಭ....ನಿಜಕ್ಕೂ ಒಬ್ಬಳೇ ಅಲ್ಲಿದ್ದರೆ ಕಾಲು ಹಿಡಿದು ನನ್ನನ್ನು ಪೂಜಿಸುತಿದ್ದನೋ ಏನೋ. ಎಂಥ ವಿನಯಶೀಲತೆ, ಏನು ಕಲಾಭಿಮಾನ! ನನ್ನ ನೃತ್ಯವನ್ನು ಕಂಡು ಎಷ್ಟು ಹಿಗ್ಗಿದ್ದಾನೆ. ಐದು ಸಾವಿರ ರೂಪಾಯಿ....ಒಂದು ಚಿತ್ರಕ್ಕೆ. ಜತೆಗೆ ಊಟ ಉಪಚಾರಗಳ ಖರ್ಚು ಬೇರೆ.

ಯಾವ ಹೆಣ್ಣಿಗೆ ದೊರೆತೀತು ಇಂಥ ಪುರಸ್ಕಾರ. ಯಾವ ಗಂಡಿಗೆ ಇದೆ ಈ ಗೌರವ!

ಆದರೂ ನಾನು ಕಟ್ಟಿಕೊಂಡ ಗಂಡಿಗೆ ತೃಪ್ತಿಯಿಲ್ಲ. ನನ್ನ ಬಗೆಗೆ ಅಭಿಮಾನವಿಲ್ಲ, ಆದರವಿಲ್ಲ, ವಿಶ್ವಾಸವಿಲ್ಲ, ನಂಬಿಕೆಯೂ ಇಲ್ಲ.

ನಿಜ. ನಂಬಿಕೆಯೂ ಇಲ್ಲ. ಒಂದು ಗಂಟೆ ಹೊತ್ತಾದರೆ ಸಂಶಯ. ನಾನೇನು ಮಾಡಿದೆ? ಯಾರೊಡನೆ ವಿಹರಿಸಿದೆ. ಬೀರಿ ಹೇಳಿದಂತೆ ಕೇಳಿದ್ದರೆ ಸಂಶಯ ಬರಬೇಕಾದುದು ನ್ಯಾಯ. ಆದರೆ ಇಷ್ಟು ನೀತಿಯನ್ನು ಕಾಪಾಡಿಕೊಂಡು ಬಂದರೂ ಸಂದೇಹವೇ? ಸಂದೇಹ ಬಂದ ಮೇಲೆ ನೀತಿಯ ಪ್ರಶ್ನೆ ಏನು? ಬಂದದ್ದೆಲ್ಲ ಬರಲಿ–ಪೂರ್ಣ ಸಂಶಯ ಬರಲಿ–ನಾನೂ ಸುಖ

ಪಡಬೇಕು-ಪಡುತ್ತೇನೆ. ಸಂಶಯ ಬಂದ ಮೇಲೆ, ನನ್ನ ನೀತಿಯ ಬಗೆಗೇ ಸಂದೇಹ ಮೂಡಿದ ಮೇಲೆ ಇನ್ನೇನು ಬೆದರಿಕೆ ನನಗೆ?

ಆಗಲಿ. ಏನಾಗುತ್ತೋ ನೋಡೋಣ. ಕೊನೆಯ ನಿರ್ಧಾರವಾಗಿ ಬಿಡಲಿ. ಈ ಹಿಂಸೆ ಸಾಕು-ಈ ನಿತ್ಯ ಹೋರಾಟ ಸಾಕು. ನಾನು ದುಡಿಯುತ್ತೇನೆ-ನಾನು ಬದುಕುತ್ತೇನೆ. ಹೆಣ್ಣಿಗೆ ಗಂಡಿದ್ದರೇ ಬಾಳು ಎಂದೇನೂ ಇಲ್ಲ. ಇಂಥ ಗಂಡನ್ನು ಕೊಳ್ಳುವ ಸೌಂದರ್ಯವಿದೆ-ಶಕ್ತಿ ಇದೆ!

ಸರ್ಕಸ್ಸಿನ ಸಿಂಹ ಚಾಟಿಗೆ ಹೆದರಿ ಹೆದರಿ ಬಾಳಿ ಬೇಸರಗೊಂಡು ಫಕ್ಕನೆ ತಲೆ ಎತ್ತಿ ರೋಷಗೊಂಡು ತನ್ನನ್ನು ಆಡಿಸುವವನ ಮೇಲೇ ಬೀಳಲು ಸಿದ್ಧವಾಗುವಂತೆ ಕಲ್ಯಾಣಿ ಸಿದ್ಧಳಾದಳು.

ಇದುವರೆಗೂ ಹುದುಗಿದ್ದ ಹೆಣ್ಣುತನ ಅವಳಲ್ಲಿ ಹೆಡೆ ಎತ್ತಿ ನಿಂತಿತು. ಅವಳು ಕೆರಳಿದ್ದಳು!

ಹಾಸಿಗೆ ಬಿಟ್ಟೆದ್ದ ಕಲ್ಯಾಣಿ ಮುಖ ತೊಳೆದುಕೊಂಡು ಬಂದಳು. ಅಧಿಕಾರ ವಾಣಿಯಿಂದ ಸುಂದರನನ್ನು ಕರೆದು, ಕಾಫಿ ಕುಡಿದಳು. ಇನ್ನೂ ಕೃಷ್ಣ ಬಂದಿರಲಿಲ್ಲ.

ಸ್ನಾನವೂ ಆಯಿತು.

ಅಲಂಕರಿಸಿಕೊಳ್ಳಲು ಮೊದಲುಮಾಡಿದಳು.

ಕನ್ನಡಿಯನ್ನು ನೋಡುತಿದ್ದಂತೆ ಅವಳ ಮನ ಉಬ್ಬಿತು, ಹೃದಯ ಮರಳಿತು.

ಇಂಥ ಸೌಂದರ್ಯಕ್ಕೆ ಯಾರೂ ಮರುಳಾಗಲೇ ಬೇಕು. ನೃತ್ಯದ ಕಣ್ಣು, ತಿದ್ದಿದ ಮೂಗು-ಹಣೆ, ತುಂಬಿದ ಗಲ್ಲ....

ಈ ಕಣ್ಣುಗಳೇ ಸಾಕು-ಯಾರನ್ನೂ ತನ್ನವರಾಗಿ ಮಾಡಿಕೊಳ್ಳಲು....

ಕಲ್ಯಾಣಿ ಅತ್ಯಂತ ಸುಂದರವಾಗಿ ಅಲಂಕರಿಸಿಕೊಳ್ಳಲು ನಿರ್ಧರಿಸಿ ತನ್ನ ಸೌಂದರ್ಯದಲ್ಲೇ ಸೌಂದರ್ಯಸಾಧನದಲ್ಲೇ ಲೀನವಾದಳು.

ಶ್ರೀಕಂಠನೊಡನೆ ಕೃಷ್ಣರಾಯ ಮನೆಗೆ ಹಿಂತಿರುಗಿದ. ಇಬ್ಬರೂ ಹೊರ ಜಗಲಿಯಲ್ಲಿ ಸೋಫಾದ ಮೇಲೆ ಕುಳಿತು ಮಾತುಕತೆ ನಡೆಸಿದ್ದರು.

ಕಲೆ, ಸಂಗೀತ, ಆಕಾಶವಾಣಿ ಇತ್ಯಾದಿಗಳ ಬಗೆಗೆ ಮಾತು ಆರಂಭವಾಗಿ ಸಾಹಿತ್ಯದ ಕಡೆಗದು ತಿರುಗಿತ್ತು.

ಕಲ್ಯಾಣಿ ಸುಂದರವಾಗಿ ಅಲಂಕರಿಸಿಕೊಂಡು ಕೋಣೆಯಿಂದ ಹೊರ ಬಿದ್ದಳು. ಶ್ರೀಕಂಠನನ್ನು ವಂದಿಸಿದಳು. ಅವಳ ಮುಖದಲ್ಲಿ ಅಹಂ-ತುಂಬಿದ ಗೆಲವು ಮೂಡಿತ್ತು.

ಶ್ರೀಕಂಠ ಕುಳಿತುಕೊಳ್ಳಲು ಸೂಚಿಸಿದ.

ಕಲ್ಯಾಣಿ ಅಲ್ಲೇ ಇನ್ನೊಂದು ಸೋಫಾದ ಮೇಲೆ ಕುಳಿತುಕೊಂಡಳು.

"ಸುಂದರೂ...."

ಸುಂದರ ಓ ಎಂದು ಪ್ರತಿಧ್ವನಿಸಿದ.

"ಚೆನ್ನಾಗಿರಬೇಕು. ಮೂರು ಕಾಫಿ ಮಾಡಪ್ಪ."

"ಈಗ ತಾನೇ ಕುಡಿದಾಯಿತು."

"ಇನ್ನೊಂದು ಬಾರಿ. ಕಾಂಗ್ರೆಸಿನವರಿಗೆ ಗಾಂಧೀಜಿ ಹೆಸರು; ಕಮ್ಯುನಿಷ್ಟರಿಗೆ ಸ್ಟಾಲಿನ್-ಲೆನಿನ್ ಹೆಸರು; ಸಾಹಿತಿಗಳಿಗೆ ಕಾಫಿ-ಸಂಜೀವಿನಿ ತಾನೆ?"

"ಕಲಾವಿದರಿಗೂ ಕೂಡಾ...." ಎಂದ ಶ್ರೀಕಂಠ.

"ಅದೂ ನಿಜವೇ."

ಕೃಷ್ಣರಾಯ ಯಾವ ವಿಚಾರವನ್ನೂ ಪ್ರಸ್ತಾಪಿಸುವುದು ಅಗತ್ಯವಿಲ್ಲವೆಂದು ಮನಗಂಡು ಸುಮ್ಮನಾಗಿದ್ದ. ಅವನ ಮುಖಭಾವದಲ್ಲೂ ಯಾವ ಚಿಂತೆಯೂ ಕಂಡು ಬರುತ್ತಿರಲಿಲ್ಲ. ಆದರೆ, ಕಲ್ಯಾಣಿಗೆ ಮಾತ್ರ ಹಿಂದಿನ ದಿನದ ಕಂಟ್ರಾಕ್ಟ್ ವಿಚಾರ ಇಬ್ಬರಿಗೂ ತಿಳಿಸಬೇಕೆಂಬ ಬಯಕೆ ಮೂಗಿನ ವರೆಗೂ ಬಂದು ನಿಂತಿತ್ತು. ತನ್ನ ಕೀರ್ತಿ, ಅದಕ್ಕಾಗಿ ಚಿತ್ರ ತಯಾರಕರು ಹಣ ಸುರಿಯುವ ರೀತಿ, ಇವುಗಳನ್ನು ತಿಳಿಸಿ, ತನ್ನ ಹೆಮ್ಮೆ ಕೊಚ್ಚಿಕೊಳ್ಳಬೇಕೆಂಬಾಶೆ ಅವಳಿಗೆ. ಪತ್ರಿಕಾ ಲೇಖಕನಾದ ಶ್ರೀಕಂಠ ಈ ವಿಚಾರವನ್ನು ಪ್ರಕಟಪಡಿಸಬಹುದು, ತನ್ನ ಬಗೆಗೆ ಬರೆಯಬಹುದು, ತನ್ನನ್ನು ಶ್ಲಾಘಿಸಬಹುದು ಎಂಬ ಉತ್ಸುಕತೆ ಅವಳನ್ನು ಕಾಡುತಿತ್ತು.

ಸುಂದರ ಕಾಫಿ ತಂದು, ಪಕ್ಕದಲ್ಲಿದ್ದ ಟೀಪಾಯಿಯನ್ನು ಎರಡು ಸೋಫಾಗಳ ಮಧ್ಯೆ ನಿಲ್ಲಿಸಿ, ಅದರ ಮೇಲಿರಿಸಿದ.

ಕಲ್ಯಾಣಿ ಕಾಫಿಯನ್ನೆತ್ತಿ ಕೃಷ್ಣನಿಗೂ ಶ್ರೀಕಂಠನಿಗೂ ಕೊಟ್ಟು ತಾನೊಂದು ಗ್ಲಾಸ್ ಎತ್ತಿಕೊಂಡಳು.

ಕಾಫಿ ಕುಡಿಯುತಿದ್ದಂತೆ ಹಿಂದಿನ ದಿನದ ವಿಚಾರ ಹೇಳಲೇಬೇಕೆಂದು ಅವಳಿಗೆ ಅನಿಸಿತು.

"ನಿನ್ನೆ ಮೋಹಿನೀ ಫಿಲಂಸ್‌ನವರು ಕರೆಕಳುಹಿಸಿದ್ದರು." ಎಂದಳು ಕಲ್ಯಾಣಿ–ಶ್ರೀಕಂಠನೆಡೆ ನೋಡುತ್ತ.

"ಒಂಟಿಕೊಪ್ಪಲ್‌ನಲ್ಲಿ ಆಫೀಸುಮಾಡಿದ್ದಾರೆ....ಅವರೇ ತಾನೇ?"

"ಹೌದು....ನಮ್ಮ ಕಂಪೆನಿಯ ಕೆಲವರೂ ನಾವೂ ಹೋಗಿದ್ದೆವು."

"ಯಾವ ಚಿತ್ರವಂತೆ ಅವರದು" ಏನೂ ತಿಳಿಯದವನಂತೆ ಅವನು ಪ್ರಶ್ನಿಸಿದ. ಕೃಷ್ಣರಾಯ ಯಾವ ಮಾತನ್ನೂ ಆಡದೆ ಸುಮ್ಮನೆ ಕುಳಿತಿದ್ದ. ಶ್ರೀಕಂಠ ಅವನಿಗೂ ಒಂದು ಸಿಗರೇಟು ಕೊಟ್ಟು ತಾನೂ ಒಂದು ಹಚ್ಚಿದ.

ತನ್ನ ಕಂಟ್ರಾಕ್ಟ್ ಬಗೆಗೆ, ಅಡ್ವಾನ್ಸ್ ವಿಚಾರ, ಕೃಷ್ಣನಿಗೂ ತಿಳಿದಿಲ್ಲವೆಂಬ ಧೈರ್ಯ ಅವಳಿಗಾಯಿತು. ಈಗಲೇ ಹೇಳಿದರೆ ಯಾವ ಮನಸ್ತಾಪವೂ ಬರಲಾರದು. ಶ್ರೀಕಂಠ ಒಪ್ಪಿದ ಬಳಿಕ ಕೃಷ್ಣ ವಿರೋಧಿಸಲಾರ ಎಂದು ಕಲ್ಯಾಣಿ ಧೈರ್ಯ ತಂದುಕೊಂಡಳು.

"ಭಕ್ತ ಪ್ರಹ್ಲಾದ. ಮುಂದಿನ ತಿಂಗಳಲ್ಲಿ ಚಿತ್ರದ ಕೆಲಸ ಆರಂಭಿಸುತ್ತಾರಂತೆ."

"ಅಂತೂ ಚಿತ್ರರಂಗಕ್ಕೆ ಹೊಸಬರು ಬರುತಿದ್ದಾರೆ. ವಿಚಿತ್ರ ವ್ಯಕ್ತಿಗಳೂ ಕಾಲಿಡುತಿದ್ದಾರೆ."

"ಆಗಲೇ ನಟಿಯರ ಆಯ್ಕೆಯನ್ನೂ ನಡೆಸಿದ್ದಾರೆ."

"ನಿಮ್ಮನ್ನೇನಾದರೂ ಕೇಳಿದರೇ?"

"ಅದಕ್ಕೇ ಕರೆಸಿದ್ದರು. ಮುಖ್ಯಪಾತ್ರ ಕೊಡುತ್ತಾರೆ."

"ಕಂಟ್ರಾಕ್ಟು...."

"ಅದೂ ಆಯಿತು." ಎಂದು ಕಲ್ಯಾಣಿ ಒಳಗಡೆ ಕೋಣೆಗೆ ನಡೆದು ಕಂಟ್ರಾಕ್ಟ್ ತಂದು ಶ್ರೀಕಂಠನ ಕೈಗಿತ್ತಳು. "ಸಾವಿರ ರೂಪಾಯಿ ಅಡ್ವಾನ್ಸ್ ಕೂಡಾ ಕೊಟ್ಟಿದ್ದಾರೆ."

"ಈ ಚಿತ್ರ ಮುಗಿಯುವ ಮೊದಲೇ ಸೇರಬಾರದಿತ್ತು. ಅದಕ್ಕೂ ಇದಕ್ಕೂ ತೊಂದರೆ ಬಂದರೆ...."

"ಅದು ಹೇಗೆ ಬರುತ್ತದೆ. ಶೂಟಿಂಗ್ ಬೇರೆ ಬೇರೆ ದಿನ ನಡೆಯು ವಂತೆ ತಿಳಿಸಿದರೆ ಸರಿ. ಈ ಚಿತ್ರದಲ್ಲಿ ನನ್ನದು ಇನ್ನೊಂದು ನೃತ್ಯ ಮಾತ್ರ ತಾನೆ? ಅದೂ ಯಾವಾಗಲೋ."

"ಅದೂ ಸರಿಯೆ....ಕಂಟ್ರಾಕ್ಟ್ ಮಾಡಿಕೊಂಡ ಮೇಲೆ ಇನ್ನೇನು ಯೋಚನೆ. ಅಂತೂ ಒಳ್ಳೆ ಶುಭ ಮುಹೂರ್ತದಲ್ಲೇ ಮೈಸೂರಿಗೆ ಬಂದಿದ್ದೀರಿ. ಹೀಗೇ ಆಗಲಿ."

"ತಮ್ಮೆಲ್ಲರ ಬೆಂಬಲ."

"ನಮ್ಮದೇನಿದೆ. ನೀವು ಎಚ್ಚರಿಕೆಯಿಂದಿರಬೇಕು. ಎಷ್ಟು ಬೇಕೋ ಅಷ್ಟೇ ನಡೆದುಕೊಳ್ಳಬೇಕು."

"ಒಂದು ಕಂಪೆನಿ ಕೆಲಸದಲ್ಲೇ ಇಡೀ ದಿನ ಮನೆಯಲ್ಲಿರುವುದಿಲ್ಲ. ಇನ್ನು ಇನ್ನೊಂದರ ಕೆಲಸದಿಂದ...." ಎಂದು ರಾಗ ಎಳೆದ ಕೃಷ್ಣ.

"ಹೌದು....ಇಲ್ಲೇನೂ ಕೆಲಸವಿಲ್ಲ. ಅಲ್ಲಾದರೂ ಹೋಗಿ ಗೆಳತಿಯರೊಡನೆ ಕಾಲ ಕಳೆಯುತಿದ್ದೇನೆ. ಈ ಕಂಪೆನಿಯು ಕೆಲಸ ಮೊದಲಾದರೆ, ಆ ಬಳಿಕ ಅಗತ್ಯವಿದ್ದರೇನೇ ಹೋಗುತ್ತೇನೆ."

"ಹಾಗಿರಬೇಕು. ಯಾರು ಬೇಕಾದರೂ ಮನೆಗೇ ಬಂದು ಮಾತನಾಡಲಿ. ಕೆಲಸವಿಲ್ಲದಾಗ ಕಂಪೆನಿ ಮನೆಯಲ್ಲೇ ಕಾಲಕಳೆದರೆ ಮಾಲಿಕರೂ ವಿಚಿತ್ರವಾಗಿ ವರ್ತಿಸುತ್ತಾರೆ. ನಮ್ಮ ಗೌರವ ಕಡಿಮೆಯಾಗುತ್ತದೆ."

"ಇಲ್ಲೇ ಬಿದ್ದಿರುತ್ತಾಳೆ ಅಂತಾರೆ."

"ಅವರೇ ಹುಡುಕಿಕೊಂಡು ಬರುವ ಹಾಗಿರಬೇಕು. ಆಗಲೇ ಅವರಿಗೆ ನಮ್ಮ ಬಗೆಗೆ ಗೌರವ ಮೂಡುವುದಾದರೂ."

ಕಲ್ಯಾಣಿ ಮಾತನಾಡದೆ ಸುಮ್ಮನಾದಳು.

ಬೀರಿ ಬಂದು ಮನೆಯೊಳಗಿನ ಪಾತ್ರೆಗಳನ್ನು ನಲ್ಲಿ ಬಳಿಗೆ ಒಯ್ದು ತನ್ನ ಕೆಲಸದಲ್ಲಿ ನಿರತಳಾದಳು.

ಶಾಂತಾ ಮತ್ತು ರಮಾ ಅಲಂಕೃತರಾಗಿ ಬಂದರು. ಅವರನ್ನು ಅಲ್ಲೇ ಕುಳ್ಳಿರಹೇಳಿ, ಕಲ್ಯಾಣಿ ಒಳಗಡೆ ನಡೆದು, ಕಂಟ್ರಾಕ್ಟನ್ನು ತೆಗೆದಿರಿಸಿ, ನೋಟುಗಳನ್ನು ರವಕೆಯೊಳಗಡೆ ಸೇರಿಸಿಕೊಂಡು ಹೊರಟಳು.

"ಪೇಟೆಗೆ ಹೋಗಿ ಕೊಂಚ ಬಟ್ಟೆ ತರಬೇಕು. ನಾವು ಬರುತ್ತೇವೆ."

ಉತ್ತರ ಬರುವ ಮೊದಲೇ ಕಲ್ಯಾಣಿ, ರಮಾ, ಶಾಂತಾ ಹೊರಟು ಹೋದರು.

ಶ್ರೀಕಂಠ ಹೊರಡುತ್ತೇನೆಂದರೂ ಕೃಷ್ಣರಾಯ ಅವನನ್ನು ತಡೆದ.

"ನನ್ನ ಮನಸ್ಸು ತುಂಬ ವ್ಯಘ್ರವಾಗಿದೆ ಶ್ರೀಕಂಠ. ಅವಳ ಮಾತಿನ ಧಾಟಿ; ಅವಳು ಹೊರಟು ಹೋದ ರೀತಿ ಎಲ್ಲವೂ ವಿಚಿತ್ರವಾಗಿದೆ. ಆಗಲೇ ಆ ಕಂಟ್ರಾಕ್ಟು ಅವಳ ತಲೆ ಕೆಡಿಸಿದೆ. ನೀವು ಬಳಿಯಲ್ಲಿದ್ದುದರಿಂದ ನನ್ನ ಶಾಂತಿ, ತಾಳ್ಮೆ ಉಳಿಯಿತು. ಇಲ್ಲವಾದರೆ ಏನಾಗುತಿತ್ತೋ."

"ಯಾವುದೇ ವಿಚಾರವಿರಲಿ, ನಮ್ಮ ಶಾಂತಿ ನಮ್ಮಲ್ಲಿರಬೇಕು. ತಾಳ್ಮೆ ಬೇಕು. ವಿವೇಚನೆ ಬೇಕು. ಕಣ್ಣಾರೆ ಕಾಣದೆ, ಸಾಕಷ್ಟು ಆಧಾರವಿಲ್ಲದೆ ಯಾವುದನ್ನೂ ನಾವು ಸರಿಯೆಂದು ತಿಳಿದುಕೊಳ್ಳಬಾರದು. ಚಿತ್ರರಂಗ ದಲ್ಲಂತೂ ಅದು ಅತಿ ಮುಖ್ಯ. ಇಲ್ಲಿ ಒಬ್ಬರ ಬಗೆಗೆ ಸಾವಿರ ಮಂದಿ ಸಾವಿರ ವಿಧವಾಗಿ ಆಡುತ್ತಾರೆ. ಕಾದು ನೋಡೋಣ."

"ಕಣ್ಣಾರೆ ಆಕೆ ಇನ್ನೊಬ್ಬನೊಡನಿರುವುದನ್ನೂ ನೋಡಬೇಕಾದರೆ."

"ಅದೂ ಆಗಿ ಹೋಗಲಿ. ಆಗ ಪೂರ್ಣ ತೃಪ್ತಿಯಿಂದ, ತಾನು ನಿರಪ ರಾಧಿ ಎಂಬ ಧೈರ್ಯದಿಂದ, ನೀವೂ ಮುಂದಿನ ದಾರಿ ಹಿಡಿಯಬಹುದು."

"ಅದೂ ನಿಜ. ಅದನ್ನು ಕಾಣುವ ದುರದೃಷ್ಟ ಈ ಕಣ್ಣುಗಳಿಗಿದ್ದರೆ ಹಾಗೂ ಆಗಲಿ."

"ಚಿತ್ರರಂಗದಲ್ಲಿ ಅದು ಆಶ್ಚರ್ಯವಲ್ಲ. ಯಾಕೆ ಗೊತ್ತೇ?

"ಯಾಕೆ...."

"ಐದು ಸಾವಿರ ಕೊಡುವವರು ಹತ್ತು ಕೊಡುತ್ತಾರೆ. ಒಬ್ಬ ನಟಿಯ ಅಭಿನಯಕ್ಕೆ ಬೊಂಬಾಯಿಯಲ್ಲಿ ಒಂದು ಲಕ್ಷ ಕೊಡುತ್ತಾರೆ. ಮದ್ರಾಸಿನಲ್ಲಿ ಅರುವತ್ತು ಸಾವಿರದ ವರೆಗೂ ಕೊಡುತ್ತಾರೆ. ಇದು ಮತ್ತಾವ ರಂಗದಲ್ಲೂ ದೊರೆಯದ ವರಮಾನ."

"ನಿಜ."

"ಇಂಥ ಪವಾಡವಿರುವಲ್ಲಿ ಎಂತಹ ಪವಾಡವೂ ನಡೆದೀತು. ಹತ್ತು ಇಪ್ಪತ್ತು ವ್ಯಯಿಸಿ ಒಂದು ಹೆಣ್ಣಿನೊಡನೆ ಇರಲು ನಾವು ಅಸಮರ್ಥರಿರು

ತ್ತೇವೆ. ಚಿತ್ರರಂಗದಲ್ಲಿ ಒಂದು ರಾತ್ರಿಗೆ ಒಂದು ಸಾವಿರ ವ್ಯಯಿಸುವವರೂ ಇದ್ದಾರೆ."

"ಇದು ಜೂಜು...."

"ನಿಜ. ದಿನಾ ಇಪ್ಪತ್ತು ಕೊಡುವವರು ಆರು ತಿಂಗಳಿಗೆ ಎಷ್ಟು ಕೊಡುತ್ತಾರೆ? ನಾಲ್ಕು ಸಾವಿರ ಕೊಡಬಹುದು. ಈ ಸಾವಿರ ಕೊಡುವ ಸರದಾರರು ಎರಡೇ ಸಾವಿರ ಕೊಟ್ಟು, ಮತ್ತೆ ಹತ್ತರ ಆಶೆ ಹುಟ್ಟಿಸುತ್ತಾರೆ. ಅದನ್ನು ನಂಬಿದ ಹೆಣ್ಣುಗಳು ಅವರ ಕೈಗೊಂಬೆಗಳಾಗುತ್ತಾರೆ. ಈ ಸರದಾರರು ಎರಡು ಸಾವಿರದಲ್ಲೇ ನಾಲ್ಕು ಸಾವಿರದ ಸುಖ ಪಡೆದು ಹೆಣ್ಣನ್ನೂ ಮೂಲೆಗೆಸೆದು ಮುನ್ನಡೆಯುತ್ತಾರೆ. ಇದು ಅವರಿಗೆ ವ್ಯಾಪಾರ!"

"ನನಗೇನೋ ತೀರಾ ಹೊಸ ಲೋಕವಿದು."

"ಅದಕ್ಕೇ ಎಡವುತಿದ್ದೀರಿ. ಕಹಿಗೆ ಬೆದರುತಿದ್ದೀರಿ. ತಮ್ಮದೆಂದು ಹೆಣ್ಣನ್ನು ಇರಿಸಿಕೊಂಡು, ಅದನ್ನು ಬೇರೆಯವರಿಗೆ ಒದಗಿಸುವ 'ಭಗದಾನಿ' ಗಳಿಗೆ ಮಾತ್ರ ಇಲ್ಲಿ ನೆಮ್ಮದಿ, ಸುಖ, ಸಂತೃಪ್ತಿ. ನೀತಿ, ರೀತಿ, ನಿಯಮ ಅಂತ ಕೂಗಾಡುವ ನಮ್ಮ ನಿಮ್ಮಂತಹರಿಗೆ ಇದು ನರಕ."

ಅವರು ಮಾತನಾಡುತಿದ್ದಂತೆ ಸ್ಟುಡಿಯೋ ಮ್ಯಾಕ್‌ಅಪ್ ಮ್ಯಾನ್ ಸತ್ಯನಾರಾಯಣ ಅಲ್ಲಿಗೆ ಬಂದ. ಕೃಷ್ಣ ಅವನನ್ನು ಬರಮಾಡಿಕೊಂಡು ವಿಚಾರಿಸಿದ.

ಸತ್ಯನಾರಾಯಣ ಏನೋ ಹೇಳಬಂದವನು ಶ್ರೀಕಂಠನನ್ನು ನೋಡಿದೊಡನೆಯೇ ತಾನು ಸುಮ್ಮನಾಗಬೇಕೆಂದು ಅವನಿಗೆ ಅನಿಸಿತು. ಸ್ಟುಡಿಯೊ, ಅಲ್ಲಿ ಚಿತ್ರವೆತ್ತಲು ಬಂದಿರುವ ಹೊಸಬರು, ಸ್ಟುಡಿಯೋ ವ್ಯವಸ್ಥೆಗಳ ಬಗೆಗೆ ಅವರ ಮಾತು ಹೊರಳಿತು. ಬಬ್ರುವಾಹನ ಚಿತ್ರದ ಮುಂದಿನ ಸೆಟಿಂಗ್, ಮುಂದಿನ ಶೂಟಿಂಗ್ ಬಗೆಗೆ ಮಾತುಗಳು ಆರಂಭವಾದುವು. ಮೋಹಿನಿ ಫಿಲಂ ಕಂಪೆನಿಯವರು ಸ್ಟುಡಿಯೋಕ್ಕೆ ಬಂದಿರುವ ವಿಚಾರ, ಅವರು ಕಲ್ಯಾಣಿಯ ಬಗೆಗೆ ಕೇಳಿದ ವಿಷಯ, ತಾನೇನು ಉತ್ತರವಿತ್ತೆ ಎಂಬುದನ್ನೆಲ್ಲ ಸತ್ಯನಾರಾಯಣ ಹೇಳಿದ.

ತನ್ನ ಮನಸ್ಸಿನಲ್ಲಿ ಹೇಳಬೇಕೆಂದು ನಿರ್ಧರಿಸಿದ್ದ ವಿಚಾರವನ್ನು ಹಿಡಿದಿಡುವುದು ಅವನಿಗೆ ಸಾಧ್ಯವಾಗಲಿಲ್ಲ.

" ನಿನ್ನೆ ಕಲ್ಯಾಣಿ ಅವರ ಕಂಪೆನಿಗೆ ಹೋಗಿದ್ದರಂತೆ."

" ಆಗಲೇ ನಿಮಗೆ ಸುದ್ದಿ ತಿಳಿದಿದೆ. ಪರವಾಯಿಲ್ಲ."

" ನಮಗೆ ಅಂಥ ಸುದ್ದಿಗಳು ಆಗುವ ಮೊದಲೇ ತಿಳಿಯುತ್ತವೆ. ಅಲ್ಲಿ ಕಾಫಿ-ಟೆಫಿನ್ ಎಲ್ಲಾ ನಡೆಯಿತಂತೆ."

" ಅದೇನೋ ತಿಳಿಯದು. ಆ ಮೇಲೆ...." ಎಂದ ಕೃಷ್ಣ.

" ಕಂಟ್ರಾಕ್ಟೂ ಆಯಿತಂತೆ.........ಅಲ್ಲಿಂದ ಹೊರಟವರು ಎಲ್ಲರೂ ಚಾಮುಂಡೇಶ್ವರಿ ಸಿನಿಮಾಕ್ಕೆ ಬಂದಿದ್ದರು."

" ಆ ಬಗೆಗೆ ನಾನು ವಿಚಾರಿಸಲಿಲ್ಲ. ನಮಗೇನು, ಅವರಿಗೇ ಬೇಡವಾದ ಮೇಲೆ. ಹೇಳಬೇಕಾದ್ದು ಅವರ ಧರ್ಮ, ಅದನ್ನವರು ಮರೆತಾಗ ನಾವೂ ಎಚ್ಚರಿಕೆಯಿಂದಿರಬೇಕು."

"ಎಚ್ಚರಿಕೆ ನೀಡಲೂ ಬೇಕು."

" ಅದು ಸಾಕಷ್ಟು ಆಗಿದೆ."

" ಸಿನಿಮಾಕ್ಕೆ ಬಂದಿದ್ದವರು ಗಂಡುಬೀರಿಗಳ ಹಾಗೆ ಆಡುತಿದ್ದರಂತೆ. ಬಲೆ ಬೀಸುವವರಂತೆ ಇವರೂ ಇವರ ಗೆಳತಿಯರೂ ಅತ್ತಿತ್ತ ಸುತ್ತಾಡಿ, ನಕ್ಕು, ಮಾತನಾಡುತಿದ್ದರಂತೆ."

" ಇಂತಹದು ಎಷ್ಟೋ ನಡೆಯುತ್ತದೆ. ನಮ್ಮ ಕಂಪೆನಿಯಲ್ಲಿ ಇವರ ಜತೆಗಿರುವವರೆಲ್ಲ ಬಲೆ ಬೀಸುವವರೇ. ಬಲೆ ಬೀಸಿ ಕಂಪೆನಿಯ ಎಲ್ಲರನ್ನೂ ಗಟ್ಟಿಯಾಗಿ ಹಿಡಿದಿದ್ದಾರೆ. ತಪ್ಪಿಸಿಕೊಂಡಿರುವ ಪಶುಗಳು ನಾವೆ; ನಾನು ಮತ್ತು ಡೈರೆಕ್ಟರ್ ಸಾಮಿ."

" ಕಲ್ಯಾಣಿ ಕೊಂಚ ತೂರಾಡುತಿದ್ದರು........ಅಂತಲೂ ಕೇಳಿದೆ. ಮಾತನ್ನು ನಾನೇ ನಂಬಲಿಲ್ಲ. ಆದರೂ ಹೇಳಿದ ವ್ಯಕ್ತಿ ಕತೆ ಕಟ್ಟುವವನೇ ಅ . ಎಂತಲೇ ತಮಗೆ ತಿಳಿಸೋಣವೆಂದು ಬಂದೆ. ಆದರೂ ಕಣ್ಣಾರೆ ಕಾಣುವ ವರೆಗೆ ದಯವಿಟ್ಟು ಈ ವಿಚಾರವನ್ನು ಅವರ ಮುಂದೆ ಎತ್ತಬೇಡಿರಿ."

" ಅದೂ ನಿಜ. ಅದು ನಮ್ಮ ಧರ್ಮವೂ ಆಗಿದೆ–ಈ ಪ್ರಪಂಚದಲ್ಲಿ."

" ಗರತಿಯರಿಗೆ ಇದು ಸರಿಯಾದ ಸ್ಥಳವಿನ್ನೂ ಆಗಿಲ್ಲ. ಆಗಬೇಕಾ

ದರೆ ಹೆಣ್ಣು ಶಿಸ್ತಿನಿಂದ ನಡೆದುಕೊಳ್ಳಬೇಕು. ಅವಳ ಬೆಂಬಲಕ್ಕಿರುವಾತ ನಮ್ಮ ಶ್ರೀಕಂಠನ ಹಾಗೆ ಇರಬೇಕು."

"ಅಂದರೆ-ನಾನೇನಪ್ಪ-ಹುಲಿ ಕಟ್ಟಿಕೊಂಡಿದ್ದೇನೆಯೇ?"

"ಹಾಗಲ್ಲ. ನಿಮ್ಮ ಹೆಸರು ಕೇಳಿದರೆ ಚಿತ್ರ ತಯಾರಕರಿಗೆ ಭೀತಿ. ನೀವು ಹ್ಞೂ ಅಂದರೆ ಸ್ಟುಡಿಯೋದವರೆಲ್ಲ ನಿಮ್ಮ ಬೆನ್ನ ಹಿಂದೆ ನಿಲ್ಲುತ್ತಾರೇಂತ ಎಲ್ಲರಿಗೂ ತಿಳಿದೇ ಇದೆ. ಇಲ್ಲೂ ಅವರ ಹುಟ್ಟಡಗಿಸಬಲ್ಲಿರಿ; ಪತ್ರಿಕೆಗಳ ಮೂಲಕ ಬರೆದು ಮತ್ತೆ ತಲೆ ಎತ್ತದಂತೆಯೂ ಮಾಡಬಲ್ಲಿರೀಂತ ಭೀತಿ."

"ಅದು ವಾಸ್ತವ. ಅವರ ನೈತಿಕ ಶಕ್ತಿ ಅವರಿಗೆ ಆ ಪ್ರಭಾವ ತಂದು ಕೊಟ್ಟಿದೆ ಸತ್ಯನಾರಾಯಣ."

"ಕಲ್ಯಾಣಿಯ ಬಗೆಗೇ ಒಂದು ವಿಚಾರ ಹೇಳುತ್ತೇನೆ. ಇದೇ ರುದ್ರಪ್ಪ ಕೈ ಆಡಿಸೋಣಾಂತ ಯೋಚಿಸಿದ್ದ. ಅದರಿಂದೇನುಬೇಕಾದರೂ ಆಗಲಿ, ಅಂತ ನಿರ್ಧರಿಸಿದ್ದ. ಯಾರೋ ಶ್ರೀಕಂಠನವರೂ ಅವರ ಮನೆಗೆ ಹೋಗುತ್ತಾರೆ, ನೀವೂ ಅವರೂ ಮಿತ್ರರು ಅಂದರಂತೆ. ಅಂದಿನಿಂದ ಹಾಳಾಗಿ ಹೋಗಲಿ. ನೋಡೋಣ ಎಂದು ಉಸಿರು ಬಿಗಿ ಹಿಡಿದಿದ್ದಾರೆ."

"ಅಂತೂ ನಾನೆಂದರೆ ಭೀತಿ ಅಲ್ಲವೇ? ಹಾಗಿದ್ದರೆ "ನಾಯಿಗಳಿವೆ-ಎಚ್ಚರಿಕೆ" ಅನ್ನುವ ಬದಲು "ಶ್ರೀಕಂಠನಿದ್ದಾನೆ-ಎಚ್ಚರಿಕೆ" ಅಂತ ಇನ್ನು ಬೋರ್ಡು ತಗಲಿಸಬಹುದು" ಎಂದು ನಗುತ್ತ ಶ್ರೀಕಂಠ ಇನ್ನೊಂದು ಸಿಗರೇಟು ಹಚ್ಚಿದ.

"ಏನೇ ಆಗಲಿ. ಇದು ನಡೆದ ವಿಚಾರ. ನಮ್ಮ ಕಿವಿಗೆ ಬಿದ್ದ ವಿಷಯ. ಅಂತೂ ನಿಮ್ಮಂತಹರು ಒಬ್ಬರಾದರೂ ಇದ್ದುದರಿಂದ ಚಿತ್ರರಂಗ ಇನ್ನೂ ಮೇರೆ ಮೀರಿಲ್ಲ."

"ಆ ದಿನವೂ ದೂರವಿರಲಾರದು."

"ಅದಕ್ಕೇ ಬಂದಿದ್ದಾರಲ್ಲ ಮೋಹಿನಿ ಚಿತ್ರ ಸಂಸ್ಥೆಯವರು. ಇಬ್ಬರೂ ಅದ್ಭುತ ಕಾಮಣ್ಣಗಳು."

"ಹಾಗೇನು?"

"ನಿಮಗೆ ಗೊತ್ತಿಲ್ಲವೇ? ಒಬ್ಬನಿಗೆ ನಟಿ ಅಂದರೆ ಸಾಕು, ಲೋಕವೇ ಮರೆತು ಹೋಗುತ್ತದೆ. ಹೆಂಡತಿ ಶಾಟಕಿ ಹಾಗಿರುವದರಿಂದ ಇದುವರೆ

ಗಾದರೂ ಅವನ ಹೋಟೆಲ್ ಇದೆ. ಇನ್ನೊಬ್ಬನು ಸುಖ ಪಡೆಯಲೆಂದೇ ಈ ರಂಗಕ್ಕೆ ಕಾಲಿಟ್ಟವನು. ಅವರಿಗೆ ಜತೆ ಸೇರಿರುವವನು ನಾಟಕ ಕಂಪೆನಿ ರಂಗನಾಥ. ಇನ್ನೇನು ಬೇಕು ಹೇಳಿ?"

"ಈ ಕಂಪೆನಿಗಳ ಹವ್ಯಾಸವೇ ಸಾಕೆನ್ನುವಷ್ಟು ಬೇಸರವಾಗಿದೆ ಶ್ರೀಕಂಠ. ಮಾನವಂತರಿಗೆ ಈ ರಂಗವಲ್ಲ."

"ನಾಲ್ಕಾಣೆ ಎಂಟಾಣೆಯ ಸೂಳೆಯನ್ನು ಮಹಾ ಅದ್ಭುತ ನಟಿ, ನರ್ತಕಿ ಎಂದೂ; ಕುಡುಕ–ವ್ಯಭಿಚಾರಿಯನ್ನು ಅಸಮಾನ ನಟನೆಂದೂ ಬರೆದರೇ ಇಲ್ಲಿ ಮಾನ. ಅಂತಹರಿಗೆ ಎಲ್ಲಾ ಕಡೆಯೂ ಗೌರವ. ಎಲ್ಲವುಗಳ ದಾನ. ನಮ್ಮ ಶ್ರೀಕಂಠ ಅಂದರೆ ಇದಿರಿಗೆ ನಮಸ್ಕಾರ, ಹಿಂದಿನಿಂದ ಛೀಮಾರಿ."

"ಆದರೂ ನಾವಿರುವಷ್ಟುಕಾಲ ಹೋರಾಡೋಣ. ಅಷ್ಟೆ ನನ್ನ ನಿರ್ಧಾರ."

"ಚಿತ್ರರಂಗದ ಹೊಲಸು ನೋಡಿ ನೋಡಿ ಬೇಸರವಾಗಿ ಇಲ್ಲಿಗೆ ಬಂದೆ. ಇಲ್ಲೂ ಅದೇ ಗತಿ. ಇನ್ನೆಲ್ಲಿ ಹೋಗಲಿ ಅಂತ ನನಗೇ ಹೆದರಿಕೆ ಯಾಗಿದೆ."

"ನಿಮಗೇನು ಸತ್ಯನಾರಾಯಣ. ನಿಮ್ಮ ದಿನದ ದುಡಿಮೆ ಇದ್ದೇ ಇದೆ. ಮಾತು ಕೇಳುವವರಿದ್ದರೆ ನಾಲ್ಕು ಎಚ್ಚರಿಕೆಯ ಮಾತು ಹೇಳಿ. ಕೇಳದಿದ್ದರೆ ಅವರು ಹಾಳಾದ ಮೇಲಾದರೂ ನಿಮ್ಮ ನೆನಪು ತಂದುಕೊಳ್ಳು ತ್ತಾರೆ. ಅಂತೂ ಕರ್ತವ್ಯಮಾಡಿದ ನೆಮ್ಮದಿ ನಿಮ್ಮ ಪಾಲಿಗಿರುತ್ತದೆ."

"ಅದೂ ನಿಜ ಸಾರ್. ನಾನು ಇನ್ನು ಬರುತ್ತೇನೆ. ಸ್ಟುಡಿಯೋ ಕಡೆಗೆ ಒಮ್ಮೆ ಹೋಗಿ ಬರಬೇಕಾಗಿದೆ."

"ಆಗಲಿ. ನಾವೂ ಅಡ್ಡಾಡಿ ಬರುತ್ತೇವೆ. ತಲೆ ಕೆಟ್ಟು ಹೋಗಿದೆ."

ಎಲ್ಲರೂ ಹೊರಟರು.

ಮನೆ ಕೆಲಸದಲ್ಲೇ ನಿರತಳಾಗಿದ್ದ ಬೀರಿಯ ಕಿವಿ ಮಾತ್ರ ಈ ಮಾತು ಗಳನ್ನೆಲ್ಲ ಕೇಳುತ್ತಲೇ ಇತ್ತು. ಅಂತೂ ರಂಗನಾಥ ತನ್ನ ಮಾತಿನಂತೆ ವರ್ತಿಸಿದ್ದಾನೆ ಎಂದವಳಿಗೆ ಸಂತೋಷವಾಯಿತು. ಕೃಷ್ಣನಿಗೆ ಉಂಟಾದ ಬೇಸರ, ಸಂಶಯ ಹೆಚ್ಚಿಸಬೇಕು, ಈ ಪೀಡೆ ತೊಲಗಿದರೆ ಕಲ್ಯಾಣಿ ನನ್ನ

ಕೈಗೊಂಬೆ; ಸಾಯುವವರೆಗೆ ಉಣ್ಣುವಷ್ಟು ನಾನೂ ಸಂಪಾದಿಸಬಹುದು ಎಂದು ಬೀರಿ ನಿರ್ಧರಿಸಿದಳು.

ಮೊದಲು ಅವಳು ತಿಳಿದವರೇ ಬರಲಿ. ಮುಂದೆ ನಾನು ತಿಳಿದ ಸಾಹುಕಾರರ ಮಕ್ಕಳು ಬಂದೇ ಬರುತ್ತಾರೆ.

ಅಂತೂ ಅಪ್ರಯೋಜಕವಾಗಿ ಮೂಲೆಯಲ್ಲಿ ಬಿದ್ದಿದ್ದ ಈ ಬೀರಿಗೆ ಯಾವುದೋ ಅದೃಷ್ಟ ಕಾದಿದೆ.

## ೨೦

ಹೆದರಿದವನು ಹಿನ್ನಡೆಯುತ್ತಾನೆ; ಧೈರ್ಯ ತಂದುಕೊಂಡವನು ಮುನ್ನಡೆಯುತ್ತಾನೆ.

ಕಲ್ಯಾಣಿ ಧೈರ್ಯ ತಂದುಕೊಂಡಳು.

ಏನಾದರೂ ಆಗಲಿ, ಈ ಪ್ರಪಂಚದಲ್ಲಿ ಮುನ್ನಡೆಯಬೇಕು. ಯಾವುದೇ ಹಗ್ಗ ದೊರೆಯಲಿ, ಅದನ್ನು ಹಿಡಿದು ಮೇಲೇರಬೇಕು.

ಅದು ಹಗ್ಗದ ಬದಲು ಹಾವಾದರೆ ?

ಆ ಭೀತಿಯಿಂದ ಮೇಲೇರುವದನ್ನೇ ಮರೆತುಬಿಡುವುದು ಧರ್ಮವಲ್ಲ. ಹಗ್ಗವೆಂದು ತಿಳಿದುದೂ ಹಾವಾಗಬಹುದು. ಹಾವೆಂದು ತಿಳಿದು ಹೆದರಿ ನಿಂತು, ಅದು ಹಗ್ಗವೆಂದು ಕಂಡುಬಂದಾಗ ಬೇಸರವಾಗಲಾರದೇ ? ಈಗ ಹಗ್ಗವೆಂದು, ಅದು ಬಲವಾಗಿದೆ ಎಂದು ನಂಬಿ ಹಿಡಿದುದೇ ಹಾವಾಗುತ್ತಿದೆ....

ಹೌದು – ಕೃಷ್ಣನ ಬಗೆಗೇ ಅವಳಿಗೆ ಸಂದೇಹ ಬಲವಾಯಿತು.

ಮೋಹಿನಿ ಚಿತ್ರ ಸಂಸ್ಥೆಯನ್ನು ಸೇರಿದಾಗಿನಿಂದಲೂ ಅವನು ಒಂದು ತರಹೆ ಇದ್ದಾನೆ.

ಎಷ್ಟು ಬೇಕೋ ಅಷ್ಟೇ ಮಾತು. ಎಂದಾದರೊಮ್ಮೆ ಹರ್ಷಿತನಾಗಿ ಎಲ್ಲ ಮರೆತು ಅವಳನ್ನು ಆದರಿಸುತ್ತಾನೆ. ಮಿಕ್ಕ ದಿನಗಳಲ್ಲಿ ಅದೇಕೋ ಚಳಿಗಾಲದಲ್ಲಿ ತಣ್ಣೀರು ಮಿಂದವನಂತಿರುತ್ತಾನೆ. ಉತ್ಸಾಹವಿಲ್ಲ, ಹುಮ್ಮಸ್ಸಿಲ್ಲ, ಪ್ರೇಮವಿಲ್ಲ!

ತಾನು ಸಂಪಾದಿಸಿದ ಹಣಕ್ಕಾಗಿ ಮೈಮರೆತು ನಲಿಯಬೇಕಾಗಿತ್ತು ಅವನೂ. ಕಲ್ಯಾಣಿ ಹಾಗೆಂದುಕೊಂಡು ಉಬ್ಬಿದಳು. ನಲಿಯೋಣ, ಹರ್ಷಿತ

ರಾಗಿರೋಣ, ಮೈಮರೆತು ಬಾಳೋಣ ಎಂದಿದ್ದಳು ಅವಳು. ಆದರೆ ಆ ಕನಸು ಅಳಿಯಿತು.

ಅವಳ ದುಃಖವನ್ನು ಅರ್ಥಮಾಡಿಕೊಳ್ಳುವವರೂ ಅವಳ ಮನೆಯಲ್ಲಿಲ್ಲ.

ಅವಳನ್ನು ಅರ್ಥಮಾಡಿಕೊಳ್ಳುವವರ ಜತೆಗೇ ಆಕೆ ಕಾಲ ಕಳೆಯಬೇಕಾಯಿತು.

ಮೋಹಿನಿ ಚಿತ್ರಸಂಸ್ಥೆಯ ಪದ್ಮನಾಭ – ಅವಳನ್ನು ದೇವರಿಗಿಂತ ಹೆಚ್ಚಾಗಿ ಪೂಜಿಸುತಿದ್ದಾನೆ.

ಕಂಪೆನಿಗೆ ಸೇರಿ ಒಂದು ತಿಂಗಳಾಯಿತಷ್ಟೆ. ಆಗಲೇ ಅವನೆಷ್ಟು ಅಭಿಮಾನದಿಂದ ಅವಳನ್ನು ಆದರಿಸುತಿದ್ದಾನೆ.

ಒಲ್ಲೆನೆಂದರೂ ಸತ್ಕಾರ.

ಬೇಡವೆಂದರೂ ಸಿನಿಮಾ.

ಬೇಕಿಲ್ಲವೆಂದರೂ ಸೀರೆ – ಕುಪ್ಪಸಗಳ ಉಡುಗೊರೆ.

ಅವನು ಅವಳ ಮುಂದೆ ಕುಳಿತರೆ ಅತ್ಯಂತ ಚಿಕ್ಕದಾಗುತ್ತಾನೆ. ಆಕೆಯನ್ನು ಹೊಗಳಿ ಆಗಸಕ್ಕೇರಿಸುತ್ತಾನೆ.

ಅವಳೂ ಧೈರ್ಯ ತಂದುಕೊಂಡಳು. ಇಂತಹ ಔದಾರ್ಯವನ್ನು ತಿರಸ್ಕರಿಸಬಾರದೆಂದುಕೊಂಡಳು.

ಅವನ ಆದರಕ್ಕೆ ಪಾತ್ರಳಾದಳು.

ಅವನ ಪಕ್ಕದಲ್ಲೇ ಆ ಸೋಫಾದ ಮೇಲೆ ಅದೊಂದು ದಿನ ಕುಳಿತಳು.

ಮನ, ಮೈ ನಡುಗುತಿತ್ತು. ಆದರೂ ಅವನ ಬಯಕೆಯನ್ನು ನಿರಾಕರಿಸುವ ಇಚ್ಛೆ ಅವಳಿಗಾಗಲಿಲ್ಲ. ಅವನ ಪ್ರಾರ್ಥನೆಯನ್ನು ಮನ್ನಿಸದಿರಲಾಗಲಿಲ್ಲ. ಎಷ್ಟು ದಿನ ಅವರು ಇದಿರಿದಿರಾಗಿ ಕುಳಿತು ಮಾತನಾಡಿಲ್ಲ. ಅದೆಷ್ಟು ದಿನ ಅವನು ಅವಳನ್ನು ನೋಡುತ್ತ ಮಾತೇ ಬರದೆ ಮೂಕನಾಗಿ ಅವಳ ಮುಂದೆ ಕುಳಿತಿರಲಿಲ್ಲ. ಅದೊಂದು ಬಾರಿ ಅವನ ಬಳಿಯಲ್ಲೇ ಕುಳಿತು ಅವನ ದುಃಖದ ಕತೆ ಕೇಳಿದ್ದು ಧರ್ಮವಲ್ಲವೇ?

ಆ ಕ್ರಶ್ ಕುಡಿದಾಗ ಅವಳಿಗೂ ಮೈ ಬೆವರಿತು.

ಅವನ ಕೈ ಅವಳ ಹೆಗಲ ಮೇಲೇರಿತು.

ಆಕೆ ಅದನ್ನು ದೂರ ಸರಿಸಿದಳು.

ಅವನು ತುಂಬ ವಿನೀತನಾಗಿ ಕ್ಷಮೆ ಕೋರಿದ.

ತನ್ನ ತಪ್ಪು ಮರೆಸಲೆಂದು ಮರುದಿನವೇ ಆ ಸೀರೆಯನ್ನು ಬಹು ಮಾನವಾಗಿ ಕೊಟ್ಟ.

ಅಂದಿನ ಅವಳ ದುಡುಕಿಗೆ ಅವಳಿಗೇ ಬೇಸರವಾಯಿತು. ತಾನು ಹೀಗೆ ಮಾಡಬಾರದಿತ್ತು. ಏನೋ ಕೈ ಹೆಗಲ ಮೇಲೇರಿರಬಹುದು ಅದರಲ್ಲೇನ ?

ಹೌದು – ಅದರಲ್ಲೇನು? ಇದು ನಾಟಕ – ನಮ್ಮದುಃ ಅಭಿನಯ. ಬಣ್ಣ ತೆಗೆದು ಮಿಂದರೆ ಸರಿ. ಅಂದಿನ ಕತೆ ಮುಗಿಯಿತು. ರಮಾ ಚಿನ್ನ ದಂಥ ಮಾತು ಹೇಳಿದ್ದಳು.

ಕಲ್ಯಾಣಿ ತುಂಬ ಯೋಚಿಸಿದಳು.

ಅವಳ ಮನೆಯ ಬಗೆಗೆ, ಕೃಷ್ಣನ ಬಗೆಗೆ – ಜಿಗುಪ್ಸೆ ಬಲವಾಯಿತು. ತನ್ನನ್ನು ಹೊಗಳಿ ಹೊತ್ತುಕೊಳ್ಳುತಿದ್ದ ಪದ್ಮನಾಭನ ಬಗೆಗೆ ಅಭಿಮಾನ ಮೂಡಿತು. ಅವನ ಜತೆಗೆ ಅವಳು ಸಿನಿಮಾ ನೋಡಿದಳು.

ಸುದ್ದಿ ಹೇಗೋ ಕೃಷ್ಣನ ಕಿವಿಗೆ ಬಿತ್ತು. ಆತ ಆ ದಿನವೆಲ್ಲ ಮಾತ ನಾಡಲೇ ಇಲ್ಲ.

ಶ್ರೀಕಂಠ ಏಕೋ ಒಂದು ತರಹ ಇದ್ದ. ಆದರೂ ತೋರಿಸಿಕೊಳ್ಳು ತ್ತಿರಲಿಲ್ಲ.

ಕೃಷ್ಣ ಮಾತು ಮಾತಿಗೂ ರೇಗಾಡಿದ. ಅವಳ ನೀತಿಯನ್ನು ಪ್ರಶ್ನಿ ಸಿದ. ವಿವೇಕ ಹೇಳಿದ. ಮನೆಯಲ್ಲಿ ಹೋರಾಟವೇ ಆರಂಭವಾಯಿತು.

ಕಲ್ಯಾಣಿ ನಡುಗಿದಳು, ಕ್ಷಮೆ ಕೇಳಿದಳು. ಕೊನೆಗೆ ಬುಸುಗುಟ್ಟುತ್ತ ತಲೆ ಎತ್ತಿ ಇದಿರಾಡಿದಳು. ನಾನು ಯಾರಿಗೂ ದಾಸಳಲ್ಲ ಎಂಬ ಮಾತು ಅವಳ ಬಾಯಿಂದ ಹೊರಬಿತ್ತು.

ಕೃಷ್ಣ ಹಾಗೇ ಆಗಲಿ. ನಾನೂ ಅಲ್ಲ. ಎಂದ.

ಪುನಃ ಒಂದು ವಾರ ಕಳೆಯಿತು.

ತಾನು ಹಿಡಿದ ಹಗ್ಗ ಇಂದೋ ನಾಳೆಯೋ ಜಾರಬಹುದು, ಬೇರೆ ಹಗ್ಗ ಹಿಡಿಯಲೇಬೇಕೆಂಬ ಬಯಕೆ ಅವಳಲ್ಲಿ ಮೂಡಿತು.

ತನ್ನ ದಾರಿ ತಪ್ಪು ಎಂಬ ಚಿಂತೆ ಅವಳನ್ನು ಹಿಂಸಿಸಿ, ವಿವೇಕ ಹೇಳಿ, ಹಿಂಡಿ, ಅಧೀರಳಾಗಿ ಮಾಡಿತು.

ಆದರೂ ಆ ಭೀತಿ ಮಾಯವಾಗಿ, ನಿರ್ಧಾರ ಸಡಲಿತು – ಆಕೆ ಪದ್ಮನಾಭನ ಮುಂದೆ ಕುಳಿತಾಗ.ಅವರ ಜತೆಗೆ ಕನ್ನಂಬಾಡಿಗೆ ಹೋದಳು. ಅಲ್ಲಿ ಎಷ್ಟೋ ಹೊತ್ತು ಹುಲ್ಲಿನ ಮೇಲೆ ಅವರು ಜತೆಯಾಗೇ, ಮೈಗೆ ಮೈ ತಗಲುವಂತೆ ಕುಳಿತರು. ಅಲ್ಲಿಂದ ಹಿಂತಿರುಗುವಾಗ ಗಂಟೆ ಹತ್ತಾಗಿತ್ತು. ಇದು ಜೀವನ ಎನ್ನಿಸಿತ್ತು ಆಕೆಗೆ.

ಇದು ಜೀವನ ಎಂದಿದ್ದ ಪದ್ಮನಾಭ.

ಇದು ಜೀವನದ ಜಾರುಬಂಡೆ ಎಂದು ಉದ್ಗಾರ ತೆಗೆದ ಕೃಷ್ಣ.

ತಿಂಗಳು ಮುಗಿಯುವ ಹೊತ್ತಿಗೆ ತನ್ನನ್ನು ತಾನು ಕಲ್ಯಾಣಿ ಗೆದ್ದಿದ್ದಳು. ಈ ಅಶಕ್ತಿ, ಭೀತಿಯ ಬಗೆಗೆ ಅವಳಿಗೇ ಜುಗುಪ್ಸೆಯಾಗಿತ್ತು.

ಬೇರೆ ಅವಳ ಭೀತಿಯನ್ನು ನೀಗಲು ಎಲ್ಲ ಯತ್ನಗಳನ್ನೂ ನಡೆಸುತ್ತಲೇ ಇದ್ದಳು.

ಪದ್ಮನಾಭನೂ ತನ್ನಲ್ಲೇ ತಾನು ಗೆದ್ದೆನೆಂದು ಉಬ್ಬಿದ್ದ. ಕಲ್ಯಾಣಿ ಅವನ ಕೈಗೂಸಾದಳು. ಇನ್ನು ಮುಂದಿನ ದಾರಿ ಸುಲಭ ಎಂದಾತ ನಂಬಿದ್ದ.

ಆದರೆ – ಶ್ರೀಕಂಠನ ಚಿತ್ರ ಅವನ ಮುಂದೆ ನಿಂತು ಹೆದರಿಸುತಿತ್ತು.

ಕೃಷ್ಣನ ಬಗೆಗೆ ಅವನಿಗೆ ಸಂದೇಹ ಮೂಡಿತ್ತು.

ಕಲ್ಯಾಣಿಯೂ ಕೂಡಾ ಅವನೊಡನೆ ಗಂಟೆಗಟ್ಟಲೆ ಮಾತನಾಡುತಿದ್ದಳು. ಜತೆಗೇ ಕುಳಿತುಕೊಳ್ಳುತಿದ್ದಳು. ಅವನ ಕೈಯ ಭೀತಿ ಅವಳಿಗೀಗ ಇಲ್ಲ. ಆದರೂ – ಮುನ್ನಡೆಯಲು ನಿರಾಕರಿಸುತ್ತಾಳೆ. ಮುನ್ನಡೆವ ಧೈರ್ಯ ಅವನಿಗೂ ಇಲ್ಲವಾಗುತ್ತದೆ. ಅವಳಿಲ್ಲದಾಗ ಮಾಡಿಕೊಳ್ಳುತಿದ್ದ ನಿರ್ಧಾರಗಳೆಲ್ಲ ಅವಳಿದಿರು ಮಾಯವಾಗುತಿದ್ದುವು.

ಕೃಷ್ಣ, ಕಲ್ಯಾಣಿಯ ಕತೆ ಕೇಳಿ ಕೇಳಿ ನೊಂದುಹೋದ.

ರಮಾ ಬಂದವಳು "ಇಲ್ಲವೇ, ಕಂಪೆನಿಯಲ್ಲೂ ಇಲ್ಲ. ಮೋಹಿನಿ ಚಿತ್ರ ಕಂಪೆನಿಯಲ್ಲಿರಬಹುದೇನೋ" ಎಂದುಕೊಂಡು ಹೊರಟು ಹೋದಳು.

ಶಾಂತಾ ಬಂದವಳು ಮಾತನಾಡುತ್ತ ಅವನಿಗೆ ತಿಳಿದಿರದ ಅನೇಕ ವಿಚಾರ ಹೇಳಿ, ಅವನ ಸಂದೇಹವನ್ನು ಬೆಳೆಸಿದಳು.

ಶ್ರೀಕಂಠ ತನಗೆ ತಿಳಿದ ವಿಚಾರಗಳನ್ನು ತಿಳಿಸಿದ್ದ.

ಇನ್ನು ಇಲ್ಲಿರುವುದು ಸಾಧ್ಯವಿಲ್ಲ, ಹೊರಡಲೇಬೇಕು ಎಂದು ಅವನು ನಿರ್ಧರಿಸಿದ್ದ. ಆದರೆ, ಶ್ರೀಕಂಠ ಮಾತ್ರ ಅವನನ್ನು ತಡೆಯುತ್ತಿದ್ದ.

ದಿನಗಳೆದಂತೆ ತಾನಿನ್ನು ಯಾರಿಗೂ ಹೇಳದೆ ಹೊರಡಬೇಕು ಎಂಬ ಯೋಚನೆ ಕೃಷ್ಣನಲ್ಲಿ ಬೆಳೆಯತೊಡಗಿತು. ನಾನು ಅಪಮಾನ ಸಹಿಸಿ ಬದುಕಲಾರೆ; ದಳ್ಳಾಳಿ ಎಂದು ಕರೆಸಿಕೊಳ್ಳಲಾರೆ; ನನ್ನ ಕಣ್ಣೆದುರೇ ಅವಳ ಪತನವಾಗುವದನ್ನು ಕಾಣಲಾರೆ – ಎಂದವನ ಮನದ ಒಳದನಿ ಕೂಗುತ್ತಿತ್ತು.

ತಿಂಗಳೂ ಕಳೆಯಿತು.

ಬಭ್ರುವಾಹನ ಚಿತ್ರದ ಶೂಟಿಂಗ್‌ನ ಕೊನೆಯ ಹಂತ ಆರಂಭ ವಾಯಿತು. ಕಲ್ಯಾಣಿಯ ನೃತ್ಯವೂ ಮುಗಿಯಿತು. ಚಿತ್ರದ ಎಡಿಟಿಂಗ್ ಕೆಲಸದಲ್ಲಿ ಸಾಮಿ ಮತ್ತು ಶ್ರೀಕಂಠ ತಲ್ಲೀನರಾದರು.

ಕಂಪೆನಿಯ ಮನೆಯಲ್ಲಿ ತುಂಬಿದ್ದ ನಟನಟಿಯರೆಲ್ಲ ಊರಿಗೆ ತೆರಳಿದರು.

ಶಾಂತಾ ಮೋಹಿನಿ ಚಿತ್ರ ಸಂಸ್ಥೆಯಲ್ಲೇ ಉಳಿದುಕೊಂಡಳು.

ಜಲಜ ಮತ್ತು ಇನ್ನಿಬ್ಬರು ಹುಡುಗಿಯರು ಹೊಸದಾಗಿ ಚಿತ್ರ ರಂಗಕ್ಕೆ ಪ್ರವೇಶಿಸಿದರು. ಅವರೂ ಮೋಹಿನಿ ಸಂಸ್ಥೆಯಲ್ಲೇ ಬಿಡಾರಮಾಡಿ ಶಾಂತಾನ ಗೆಳತಿಯರಾದರು.

ಚಿತ್ರರಂಗದ ಸವಿ ಸವಿದ ನಾರಣಪ್ಪ ಕಂಪೆನಿ ಮನೆಯು ತನಗೇ ಇರಲೆಂದು ಇರಿಸಿಕೊಂಡು, ಅದರ ಬಾಡಿಗೆ ಕೊಡಲು ನಿರ್ಧರಿಸಿದ. ಪೇಟೆಗೆ ಬಂದಾಗಲೆಲ್ಲ ಹೋಟೆಲಿನಲ್ಲಿ ಇಳಿದುಕೊಂಡರೂ ೫೦ ಖರ್ಚಾಗುತ್ತದೆ. ಈ ಮನೆಯೇ ಇದ್ದು ಬಿಡಲಿ ಎಂದು ಅವನು ವಾದಿಸಿದ.

ರಾಜು ತನ್ನ ಪೆಟ್ಟಿಗೆ ಕಟ್ಟಿಕೊಂಡು ಊರಿಗೆ ಮರಳಿದ.

ಆಗಾಗ ನಾಣಪ್ಪನನ್ನು ಕಂಡು ಹಳೆಯ ಸ್ನೇಹವನ್ನು ಶಾಂತಾ ಉಳಿಸಿಕೊಂಡು ಬಂದಳು.

ದಿನಗಳೆದಂತೆ ಕಲ್ಯಾಣಿಗೆ ಕೃಷ್ಣನ ಬಗೆಗೆ ಜುಗುಪ್ಸೆ ಅಧಿಕವಾಗುತ್ತ ಸಾಗಿತು. ಅವನಲ್ಲಿ ತನ್ನ ಬಗೆಗೆ ಪ್ರೇಮವಿಲ್ಲ, ವಿಶ್ವಾಸವಿಲ್ಲ, ಅಭಿಮಾನ

ವಿಲ್ಲ ಎಂದುಕೊಂಡು ನೂರಾರು ಸಂದೇಹಗಳನ್ನು ತಲೆಯಲ್ಲಿ ತಂದು ಕೊಂಡಳು. ಶಾಂತಾ ಈ ದಾರಿಯಲ್ಲಿ ದುಡಿದಳು. ಬೀರಿ ತನ್ನ ಎಲ್ಲ ಯತ್ನ ಗಳನ್ನೂ ನಡೆಸಿದಳು.

ಕೃಷ್ಣ ಟ್ಯೂಷನ್‌ಗೆ ತೆರಳುತಿದ್ದ ಮನೆ, ಅಲ್ಲಿ ಅವನಿಗೆ ದೊರೆಯುತಿದ್ದ ಆದರಗಳ ಕತೆ ಹೆಣೆದು, ಅವನು ಆ ಮನೆಯವರ ಅಳಿಯನಾಗುತ್ತಾನೆ; ಈ ಮನೆಯಲ್ಲಿ ಹೀಗೆ ನಡೆದುಕೊಳ್ಳುತ್ತಾನೆ ಎಂದು ರಮ್ಯ ಕತೆಗಳನ್ನು ಬೀರಿ ಹೆಣೆದಳು. ತಾನು ವಿವಾಹಿತನಲ್ಲವೆಂದು ಅವನು ಹೇಳುತಿದ್ದಾನೆ ಎಂಬ 'ಸುದ್ದಿ'ಯನ್ನೂ ಹುಟ್ಟಿಸಿದಳು.

ದಿನ ದಿನವೂ ಇಂತಹ ಸುದ್ದಿಗಳನ್ನು ಕೇಳುತ್ತ ಕಲ್ಯಾಣಿಯಲ್ಲಿ ಅಪೂರ್ವ ಬದಲಾವಣೆಯಾಯಿತು.

ಆಕೆಯಲ್ಲಿ ದ್ವೇಷ, ರೋಷ ಬೆಳೆದು ಹಟ ತಲೆಯೆತ್ತಿ ಸೇಡಿನ ಯೋಚನೆ ಮೂಡಿತು!

ತನ್ನ ಬಗೆಗೆ ಎಷ್ಟು ಮಂದಿ ಆಸಕ್ತರಾಗಿದ್ದಾರೆ ಎಂಬುದನ್ನು ತೋರಿಸಿ ಕೊಡುತ್ತೇನೆ ಎಂದು ಬಗೆದಳು.

ಅವಳ ಈ ಬಗೆಯ ವಿಚಿತ್ರ ಬದಲಾವಣೆಯನ್ನು ಅರ್ಥಮಾಡಿಕೊಳ್ಳ ಲಾರದೆ ಕೃಷ್ಣ ಹಿಂಸೆಯನ್ನು ಅನುಭವಿಸಬೇಕಾಗಿ ಬಂತು. ಅವನಿಗೆ ಆ ಮನೆ ಮುಳ್ಳು ಹಾಸಿಗೆಯಾಯಿತು.

ಕಲ್ಯಾಣಿ ಮೋಹಿನಿ ಚಿತ್ರಸಂಸ್ಥೆಯಲ್ಲೇ ಈಗ ಅಧಿಕ ಕಾಲ ಕಳೆಯಲು ಆರಂಭಿಸಿದಳು. ಬೆಳಿಗ್ಗೆ ತೆರಳಿದರೆ ಮಧ್ಯಾಹ್ನ ಹಿಂತಿರುಗುತಿದ್ದಳು. ನಾಲ್ಕು ಗಂಟೆಗೆ ತೆರಳಿದರೆ ಮತ್ತೆ ರಾತ್ರಿ ಎಂಟಕ್ಕೇ ಅವಳ ಮುಖದರ್ಶನ.

ನಾನೇ ನೃತ್ಯ ನಿರ್ದೇಶಕಳೂ ಆಗಿದ್ದೇನೆ ಎಂದು ತನ್ನ ಬಿಡುವಿಲ್ಲದ ಕಾರ್ಯಕ್ರಮಗಳ ಕಾರಣ ತಿಳಿಸುತಿದ್ದಳು.

ಪ್ರಹ್ಲಾದ ಚಿತ್ರದ ಮುಹೂರ್ತವೂ ವೈಭವದಿಂದ ಜರುಗಿತು. ನೂರಾರು ಮಂದಿ ವ್ಯಾಪಾರಿಗಳೂ, ಗಣ್ಯ ಮಹನೀಯರೂ ಸ್ಟುಡಿಯೋದಲ್ಲಿ ಕಲೆತಿದ್ದರು. ಅವರೆಲ್ಲರಿಗೂ ಪದ್ಮನಾಭ ತನ್ನ ನಟನಟಿಯರನ್ನು ಪರಿಚಯ ಮಾಡಿಸಿದ. ಕಲ್ಯಾಣಿ ಉಬ್ಬಿ ಆಗಸಕ್ಕೇರಿದಳು. ಆದರೆ, ಕೃಷ್ಣನನ್ನು

ಮಾತ್ರ ಯಾರೂ ಕೇಳುವವರಿರಲಿಲ್ಲ. ಅವನು ಕಲ್ಯಾಣಿಯ ಪತಿಯ ಸ್ಥಾನ ದಿಂದ ಎಷ್ಟೋ ಕೆಳಕ್ಕೆ ಇಳಿಸಿದ್ದ.

ಈ ಸಮಾರಂಭ ಅವನನ್ನು ಪೂರ್ಣ ಅಧೀರನನ್ನಾಗಿ ಮಾಡಿತು.

ಕಲ್ಯಾಣಿ ಸ್ಟುಡಿಯೋದಲ್ಲೇ ಇದ್ದಳು. ವಿವಿಧ ಕಾರ್ಯಕ್ರಮ ಸ್ವಾಗತಗಳಲ್ಲಿ ಭಾಗಿಯಾಗಿ ಅಲ್ಲಿ ಬಂದಿರುವ ಸ್ತ್ರೀಯರೊಡನೆ ಮಾತ ನಾಡುತ್ತ, ಕಾಲ ಕಳೆಯುತ್ತಿದ್ದಳು. ಕೃಷ್ಣ ಮನೆಗೆ ಹಿಂತಿರುಗಿದ.

ಅವನ ಬುದ್ಧಿ ಪೂರ್ಣ ಮಂಕಾಗಿತ್ತು. ಹೊರಟುಹೋಗಲೇ, ಬೇಡವೇ ಎಂಬ ಪ್ರಶ್ನೆ ಅವನನ್ನು ಕಾಡುತಿತ್ತು. ಬಂದವನೇ ಸುಂದರನಿಗೆ ಕಾಫಿ ಮಾಡಲು ಹೇಳಿ, ತನ್ನ ಸಾಮುಗ್ರಿಗಳನ್ನೆಲ್ಲ ಪೆಟ್ಟಿಗೆಗೆ ತುಂಬಿದ. ಅರ್ಧ ಕೆಲಸ ಮುಗಿಸಿ ಆಯಾಸದಿಂದ ಕುಳಿತುಕೊಂಡ. ಗಂಟೆ ಇನ್ನೂ ಆರು.

ಸುಂದರ ಕಾಫಿ ತಂದುಕೊಟ್ಟ.

ಕೃಷ್ಣ ಸುಂದರನ ಕೈಗೆ ಕಾಸು ಕೊಟ್ಟು, ಹೂವು-ಹಣ್ಣು ತರುವಂತೆ ಹೇಳಿದ.

“ಇಂದು ಪೂಜೆಯಾಗಬೇಕು. ಅರ್ಧತಾಸಿನಲ್ಲಿ ಬಂದುಬಿಡು.”

ಸುಂದರ ಹೊರಟು ಹೋದೊಡನೆಯೇ ಕೃಷ್ಣ ತನ್ನ ಬಟ್ಟೆಬರೆಗಳನ್ನೆಲ್ಲ ಪೆಟ್ಟಿಯಲ್ಲಿರಿಸಲು ಆರಂಭಿಸಿದ. ಹಾಲ್ಡೊಓಲ್ ಹಿಡಿಯುವಷ್ಟು ತುಂಬಿ ಅದನ್ನು ಕಟ್ಟಿ ಬಿಗಿದು ಸಿದ್ಧಪಡಿಸಿ, ಮಂಚದ ಅಡಿಯಲ್ಲಿರಿಸಿದ. ಎಲ್ಲೆಲ್ಲೊ ಹರಡಿದ್ದ ಚಿತ್ರಗಳೆಲ್ಲ ಅವನ ಪೆಟ್ಟಿಗೆ ಸೇರಿದುವು.

ಮನೆಯ ಸಾಮುಗ್ರಿ ?

ಇದೊಂದೂ ನನ್ನದಲ್ಲ ; ನನಗೆ ಬೇಕಾಗಿಲ್ಲ.

ನನ್ನದೂ ಇಲ್ಲೇ ಕೊಂಚ ಇರಲಿ- ಎಂದು ಪುಸ್ತಕ ಹಾಸಿಗೆ ಹಾಗು ಸೊಳ್ಳೆಪರದೆಗಳು ಅಲ್ಲೇ ಉಳಿದುವು.

ಅವನ ಮನಸ್ಸು ಚಿಂತೆಯಿಂದ ಬೆಂದು ಹೋಗಿತ್ತು.

ಕೊನೆಯ ನಿರ್ಧಾರಕ್ಕೆ ಅವನು ಸಿದ್ಧವಾಗುತಿದ್ದ.

ಕಲೆ ಈ ಸೂಳೆಗೇರಿಯಲ್ಲಿ ಬೆಳೆಯಲಾರದು. ಕಣ್ಣೆದುರಿನಲ್ಲಿ ನಡೆವ ಅಚಾತುರ್ಯವನ್ನು ಮರೆತು ಅಭ್ಯಾಸ ನಡೆಸುವುದು ಸಾಧ್ಯವಿಲ್ಲ. ಅವನೆಷ್ಟು

ಯತ್ನಿಸಿದರೂ ಕಲ್ಯಾಣಿಯ ಬಗೆಗೇ ಅವನ ಯೋಚನೆ ಹರಿದು ಅಭ್ಯಾಸಕ್ಕೆ ಅಡಚಣೆಯಾಗುತಿತ್ತು.

ಸುಂದರನನ್ನೇನು ಮಾಡಲಿ?

ಅವನ ಉದ್ಯೋಗ ಅವನಿಗೆ ಗೊತ್ತೇ ಇದೆ. ಆದರೂ ತನ್ನ ವಿಳಾಸವನ್ನು ಅವನಿಗೆ ತಿಳಿಸುವದಾಗಿ ಭರವಸೆ ಕೊಡಬಹುದು. ಹೇಗೆ? ಹೇಳಿ ಹೋದರೆ ಅವನೂ ಬರುತ್ತಾನೆ. ಇಬ್ಬರೂ ಹೊರಡಲು ಅನುವಾದಾಗ ಕಲ್ಯಾಣಿ ಅಡ್ಡ ಬಂದರೂ ಬರಬಹುದು. ಕೊನೆಯ ಗಳಿಗೆಯಲ್ಲಿ ಹೋರಾಟ ಬೇಕಾಗಿಲ್ಲ.

ಯಾರಿಗೂ ಹೇಳದೆ ಹೊರಡಬೇಕೆಂದು ಕೃಷ್ಣ ನಿರ್ಧರಿಸಿದ.

ಎಲ್ಲಿಗೆ ಎತ್ತ ಎಂಬುದೇ ಅವನಿಗಿನ್ನೂ ನಿರ್ಧಾರವಾಗಿರಲಿಲ್ಲ.

ರೈಲು ಬಂಡಿಯನ್ನು ನೋಡಿ, ನಿರ್ಧರಿಸೋಣ. ಬೆಂಗಳೂರಿಗೆ ತೆರಳಿ ಮುಂದೆ ಯೋಚನೆ ಮಾಡೋಣ ಎಂದಾತ ಆ ಸಮಸ್ಯೆಯನ್ನು ಬದಿಗೆ ಸರಿಸಿದ.

ದುಃಖದಲ್ಲಿ ಭಾಗಿಯಾಗಲು ಅವನ ಉದ್ವೇಗವನ್ನು ಶಾಂತಗೊಳಿಸಲು ಕೆಲವು ದಿನಗಳಿಂದ ಶ್ರೀಕಂಠನೂ ಬರುತ್ತಿಲ್ಲ. ಅವನಿಗೆ ಹಗಲಿರುಳೂ ಸ್ಟುಡಿಯೋದಲ್ಲೇ ಕೆಲಸವಾಗುತ್ತಿದೆ.

ಹೇಳು ಸಖಿ ನಿನ್ನ ಮನ ಯಾರೆಡೆಗೆ ಸರಿದಿಹುದು
ನಾ ನಿನ್ನ ಸುಖಕಡ್ಡಿಯಾಗಲಾರೆ
ನೀನೊಲಿದವನು ನಿನ್ನ ಒಲಿಯದಿರೆ ನಿನಗಹುದು
ಸಂಕಟ–ನಿರಾಶೆ ಅದ ತಡೆಯಲಾರೆ....

ಸಿಂಹಾಸನವನೇರಿ ಸಕಲ ವೈಭವದಿಂದ
ಬಾಳಿ ಬದುಕೆಲೆ ಸಖಿ ಎಂದೆ ನಾನು
ಎಲ್ಲೊ ಯಾವುದೊ ಮೂಲೆಯಲಿ ಇರುವ ಬಾಳಿರಲು
ನನ್ನೆಡೆಗೆ ಮತ್ತೇಕೆ ಬರುವೆ ನೀನು?

ನಿನ ಬಾಳು ಹೇಗಿತ್ತು ಮುಂದೆ ಹೇಗಾಗುವುದು
ಎಂಬ ಚಿಂತೆಯ ನೀನು ಮಾಡಲಿಲ್ಲ
ಅದನರಿತು ನಡೆಯುವೊಡೆ ಬಾಳು ಹಸನಾಗುವುದು
ಅದ ಮರೆತು ಬಾಳುವೊಡೆ ಶಾಂತಿಯಿಲ್ಲ.

ಕೃಷ್ಣ ದುಃಖದ ವಿರಹದ ಹಾಡುಗಳನ್ನು ಹಾಡುತ್ತ ಸಿದ್ಧತೆ ನಡೆಸಿದ್ದ. ತನ್ನ ಗುರುವಿನ ಚಿತ್ರವನ್ನು ಪೀಠದ ಮೇಲಿರಿಸಿದ. ದೀಪ ಹಚ್ಚಿದ. ಸುಂದರ ಹೂವಿನೊಂದಿಗೆ ಹಿಂತಿರುಗಿದ.

ಗುರುವನ್ನೂ ದೇವರನ್ನೂ ಅಲಂಕರಿಸಿ ಕೃಷ್ಣ ತಂಬೂರಿ ಹಿಡಿದು ಕುಳಿತ.

ಗುರುವಿನ ಬಗೆಗೆ ತುಂಬ ಹಾಡಿದ....

ಎಲ್ಲೋ ನಾ ನಡೆವಾಗ ಯಾವುದೋ ತೋಟದಲಿ
ಅರಳಿತ್ತು ಕಮ್ಮನೆಯ ಅಲರದೊಂದು
ಅದನೆಕೆ ಕೈನೀಡೆ ಮನ ಕೂಗಿ ಕರೆವಿತ್ತು
ಕಂಡುದನು ಬಯಸಿ ಕೆಡಬೇಡ ಎಂದು.

ನನ್ನ ಬಾಳಿನ ಬವರ ಹೇಳಲಂಜುವೆ ನಿನಗೆ
ನಿನ ಕೆನ್ನೆ ಕಂಬನಿಯ ಕಾಂಬುದೆಂದು.
ಆದರೂ, ನನ ಬಾಳ ದುಃಖವನು ತಡೆಯುವೆನೆ
ಹೇಳುವೆನು ನನ ಹೃದಯ ತಣಿಯಲೆಂದು.

ಹೃದಯವನು ಕಳೆದುಕೊಂಡೇಕಾಂತದಲಿ ಕುಳಿತು
ವಿಧವಿಧದ ಚಿತ್ರಗಳ ನೆನಸುವವರು
ತಿಳಿಯಲಾಗದನೆಲ್ಲ ತಿಳಿಸುತಿದೆ – ನನ ಮನದಿ
ತುಂಬಿ ನಿಂತಿಹ ಕಳೆದ ಇತಿಹಾಸವು.

ಜೀವನದ ಯಾತ್ರೆಯಲಿ ಎಷ್ಟೋ ಹಗಲಿರುಳುಗಳ
ಎಲ್ಲೆಲ್ಲೊ ಕಳೆದು ಸಾಗುವೆವು ಮುಂದೆ –
ಎಷ್ಟೊ ಕನಸಲಿ – ನೆನಸ ಚಿತ್ರ ಕಂಡವುಗಳ –
ಅರಿಯದೆಲೆ ಬೀಳುವೆವು – ಎಡವಿ ಹಿಂದೆ.

ದೂರ ದೂರಕೆ ಎಲ್ಲೊ ಕಾಣದಿಹುದನು ಬಯಸಿ
ಬೆಂಬತ್ತಿ ಸಾಗುವುದು ನಮ್ಮ ಕರ್ಮ.
ಕಾಣುವದ ತುಳಿದು ಕಾಣದುದನ್ನು ಬಯಸಿದೆವು
ಇಂದಿಗರಿತೆನು ಇಂಥ ನಡೆಯ ಮರ್ಮ.

ಇಂದಿದೋ ಅರ್ಪಿಸುವೆ ನಾನು ನಂಬಿದ ಹೆಣ್ಣು
ನಿನ್ನ ಪಾದಕೆ ಗುರುವೆ, ನಾಟ್ಯ ದೇವತೆಯೆ.
ನಂಬಿ ಹುಟ್ಟಿಲ್ಲ – ಹುಟ್ಟಿದ ಬಳಿಕ ನಂಬಿಕೆಯು
ಅದು ನಂಬುವವರಿಗೇ – ನಂಬದರಿಗಿಲ್ಲ.

ಯಾವುದೋ ನಾಡಿಂದ ಹಾರಿ ಬಂದಿಹ ಹಕ್ಕಿ
ನನ್ನ ಜೀವನ ಕಥೆಯ ಕೇಳ್ವುದೇನು –
ನಿನ್ನೆ ಬಂದಿಹುದಿನ್ನು ನಾಳೆ ಹಾರಲುಬಹುದು
ನಾವದಕೆ ಮರುಗಿ ಅಳುಕುವುದು ಬೇಕೇನು ?

ಗುರಿಯುತೋರಿದೆ ಗುರುವೆ ಅದೆ ನನ್ನ ಕೈದೀಪ
ಅದಮರೆತು ಬಾಳುವೆನೆ – ಬಾಳದಲ್ಲ.
ಗುರಿಯು ಮರೆತರೆ ನಿನ್ನ ಮರೆತಂತೆ – ಆ ನೆನಪ
ಇರಿಸಿಹೆನು ಅದರಿಂದೆ ದುಃಖವೆಲ್ಲ.

ಕೃಷ್ಣ ರಾತ್ರಿ ಬಹಳಹೊತ್ತು ಹಾಡುತ್ತಿದ್ದ. ಊಟವೂ ಬೇಡ ಎಂದು ಸುಂದರನನ್ನು ಊಟ ಮಾಡಿಸಿದ. ಸುಂದರ ಒಂದು ಮೂಲೆಯಲ್ಲಿ ಒರಗಿಕೊಂಡ. ಕೃಷ್ಣ ಹಾಡುತ್ತ ಮೈಮರೆತು ಅಲ್ಲೇ ಮಲಗಿದ.

ಕಲ್ಯಾಣಿ ಎಷ್ಟು ಹೊತ್ತಿಗೆ ಬಂದಳು – ಯಾರಿಗೂ ತಿಳಿಯದು.

ಮುಂಜಾನೆ ನಾಲ್ಕು ಘಂಟೆಗೇ ಕೃಷ್ಣನಿಗೆ ಎಚ್ಚರವಾಯಿತು. ಅವನು ಎದ್ದು ಕಲ್ಯಾಣಿಯ – ತನ್ನ – ಕೋಣೆಗೆ ಹೋಗಿ ನೋಡಿದ.

ಹಾಸಿಗೆಯಲ್ಲಿ ಅಸ್ತವ್ಯಸ್ತವಾಗಿ ಅವಳು ಮಲಗಿದ್ದಳು. ರವಕೆ ಇಲ್ಲ, ಬಟ್ಟೆ ಅವ್ಯವಸ್ಥಿತವಾಗಿದೆ.

ಏನೋ ವಾಸನೆ !

ಹಾಗೇ ಅವಳೆಡೆ ಬಾಗಿದ.

ಬೆಡ್‌ಲ್ಯಾಂಪ್ ಉರಿಸಿದ – ಅದರ ಬೆಳಕಿನಲ್ಲಿ ದಿಂಬು ಒದ್ದೆಯಾಗಿರುವುದೂ ಕಂಡು ಬಂತು.

ದುರ್ವಾಸನೆ ಅರ್ಥ ಹೇಳಿತು.

ಅವನ ನಿರ್ಧಾರ ಬಲವಾಯಿತು.

ತನ್ನ ಬೆಡ್ಡಿಂಗ್, ಪೆಟ್ಟಿಗೆಗಳನ್ನು ಅಂಗಳಕ್ಕೆ ಸದ್ದಾಗದಂತೆ ತಂದಿರಿಸಿದ.

ಹೊದಪನ್ನು ಅವಳ ಮೇಲೆ ಹೊದಿಸಿ, ಮನೆಯ ದೀಪವಾರಿಸಿ ಕೃಷ್ಣ ಹೊರಬಿದ್ದ.

ಕಲ್ಯಾಣಿಗೆ ಎಚ್ಚರವಾದಾಗ ಗಂಟೆ ಎಂಟು ಕಳೆದಿತ್ತು.

ಬಾಯಿಯಿಂದ ಹೊರಬಿದ್ದ ನೊರೆ, ನೀರು, ದಿಂಬನ್ನು ಒದ್ದೆಮಾಡಿರುವುದನ್ನು ನೋಡಿ ಬೆಚ್ಚಿಬಿದ್ದಳು ಆಕೆ. ಬೇಗನೇ ಎದ್ದು ಮುಖ ತೊಳೆದುಕೊಂಡು ಅಡುಗೆ ಮನೆಗೆ ನಡೆದಳು. ಸುಂದರು ಕಾಫಿ ಕೈಗಿತ್ತ.

ಕೃಷ್ಣ ಮನೆಯಲ್ಲಿಲ್ಲವೆಂಬುದು ತಿಳಿದು ಅವಳಿಗೆ ಧೈರ್ಯ ಉಂಟಾಯಿತು.

ಎಂದಿನಂತೆ ಏಳು ಗಂಟೆಗೇ ಟ್ಯೂಷನ್‌ಗೆ ಹೋಗಿರಬಹುದು.

ಬರುವ ಮೊದಲೇ ಬಟ್ಟೆಯನ್ನು ನೀರಲ್ಲಿ ನೆನೆಹಾಕಬೇಕು. ಯಾವ ಸಂದೇಹವೂ ಬಾರದಂತೆ ಎಚ್ಚರವಾಗಿರಬೇಕು.

ಕ್ರಶ್ ಎಂದು ಆಕೆ ಅದುವರೆಗೂ ಕುಡಿಯುತಿದ್ದುದರ ಅರಿವು ಅವಳಿಗಾಗಿತ್ತು. ಅದೇ ಯೋಚನೆ ಅವಳ ಮನದಲ್ಲಿ ನಾಟ್ಯವಾಡುತಿತ್ತು.

ಕಲ್ಯಾಣಿ ಸ್ನಾನ ತೀರಿಸಿ ಅಲಂಕಾರದಲ್ಲಿ ಆಸಕ್ತಳಾದಳು. ಅತ್ಯಂತ ಸುಂದರಳಾಗಿ ಕಾಣಬೇಕು ಎಂಬುದು ಅವಳ ಮನದಲ್ಲಿ ಮೂಡಿದ ಬಯಕೆ. ಹೊಸತಾಗಿ ತಂದಿದ್ದ ಸೀರೆ ಉಟ್ಟುಕೊಂಡು ಕನ್ನಡಿ ನೋಡಿಕೊಂಡಳು. ಹೆರಳನ್ನು ಹಲವಾರು ರೀತಿಯಿಂದ ಸುತ್ತಿ ಬಿಚ್ಚಿ, ಯಾವುದು ಸರಿ ಎಂದು ನಿರ್ಧರಿಸಿದಳು. ಹಿಂದಿನ ದಿನ ಕಂಪೆನಿ ಮನೆಯಿಂದ ತಂದ ಹೂವು ಇಂದೂ ಮುಡಿಯನ್ನೇರಿತು.

ಬೀರಿ ಅವಳ ಬಳಿ ಬಂದು ಸುಳಿದು ನೆರವಾಗಿ ಆ ಮಾತು ಈ ಮಾತು ಆರಂಭಿಸಿದಳು. ಕಲ್ಯಾಣಿಯ ಸೌಂದರ್ಯವನ್ನು ಹೊಗಳುತ್ತ ಕೈಗೆಟಕಿದರೆ ಒಂದು ಬಾರಿಗೆ ಸಾವಿರ ಸುರಿಯುವವರಿದ್ದಾರೆ ಈ ರೂಪಕ್ಕೆ ಎಂದು ತನ್ನ ಅಭಿಪ್ರಾಯವನ್ನೂ ವ್ಯಕ್ತಪಡಿಸಿ ನಕ್ಕಳು. ಕಲ್ಯಾಣಿ ನಗುತ್ತಾ ಹೆಮ್ಮೆಯಿಂದ ಮತ್ತೊಮ್ಮೆ ಕನ್ನಡಿಯೆಡೆ ನೋಡಿ ಓರೆ ನೋಟ ಬೀರಿದಳು.

ಹೊರಗಿನಿಂದ ಯಾರೋ ಕೂಗಿದುದು ಕೇಳಿಸಿತು.

" ಹತ್ತು ಘಂಟೆ–ಇನ್ನೂ ರಾಣಿಯವರು ಎದ್ದಿಲ್ಲವೇನೋ ?"

ಕಲ್ಯಾಣಿ ಕೋಣೆಯಿಂದ ಹೊರಬಂದಳು.

ರಮಾ, ಜಲಜ, ಅಂಬುಜ, ಲೀಲಾ ಸೋಫಾವನ್ನು ಆಕ್ರಮಿಸಿದ್ದರು.

" ಓಹೋ ರಾಣಿಸಾಹೇಬ್ ಬಂದರು."

" ಶೂಟಿಂಗ್‌ಗೆ ಸಿದ್ಧವಾಗಿದ್ದಾರೆ."

" ಮೇಕಅಪ್–ಡ್ರೆಸ್ ಎಲ್ಲ ನಡೆದಿದೆ."

" ನಾಟ್ಯರಾಣಿಯೇ ಸರಿ ಈಗ...."

" ಸೀರೆ ತುಂಬ ಒಪ್ಪುತ್ತೆ ನಿನಗೆ ಕಲ್ಯಾಣಿ...."

" ಆ ರವಕೆ....ಸರಿಯಾದ ಜೋಡಿ."

ಸೀರೆ ರವಕೆಗಳ ಪ್ರಶಂಸೆ, ಬೆಲೆ, ಮಾತುಗಳೇ ಮುಂದುವರಿದುವು.

" ಸುಂದರ " ಕಲ್ಯಾಣಿ ಕೂಗಿದಳು.

" ಓ........"

" ಐದು ಕಾಫಿ....ಬೇಗ....ಇನ್ನೊ ಒಂದು ಹೆಚ್ಚೇ ಇರಲಿ."

" ಯಾರೋ ಬರುವ ಹಾಗಿದೆಯಲ್ಲ...." ಅಂದಳು ರಮಾ.

" ಇರೋವರಿಗೇ."

" ಅಷ್ಟೇ ಏನು...."

ಹಿಂದಿನ ದಿನದ ಶೂಟಿಂಗ್ ಕತೆ ಆರಂಭವಾಯಿತು. ಅಲ್ಲಿ ಬಂದಿದ್ದವರ ಸೀರೆಗಳಿಂದ ತೊಡಗಿ ವಿವಿಧ ಗಂಡುಸರ ಕಣ್ಣಾಟಗಳವರೆಗಿನ ಟೀಕೆ ನಡೆಯಿತು. ಹುಡುಗಿಯರನ್ನು ನೋಡುವುದಕ್ಕೆ ಈ ಹೆಚ್ಚಿನವರು ಬರುತ್ತಾರೆ ಎಂಬ ತೀರ್ಪೂ ಹೊರಬಿತ್ತು.

ಕಾಫಿ ಕುಡಿದು ಎಲ್ಲರೂ ಮೋಹಿನಿ ಸಂಸ್ಥೆಯ ಕಡೆಗೆ ಹೊರಟರು.

ಸುಂದರ ತನ್ನ ಕೆಲಸಕಾರ್ಯಗಳಲ್ಲಿ ನಿರತನಾದ. ಆದರೂ ಅವನಲ್ಲೇನೋ ಚಿಂತೆ ಸಂದೇಹ ಬಾಧಿಸುತಿತ್ತು. ಮಾಸ್ತರ್ ಇಷ್ಟು ಬೇಗನೆ ಏಕೆ ಹೊರಟುಹೋಗಿದ್ದಾರೆ. ಹಾಗೆ ಹೋಗುವುದಾದರೂ ನನ್ನನ್ನು ಎಚ್ಚರಿಸಿ ಹೋಗುತಿದ್ದರಲ್ಲವೇ? ಬೆಳಗಿನಿಂದ ಕಾಫಿ ಕಾಯಿಸುವುದರಲ್ಲೇ ಮಗ್ನನಾಗಿ, ಮನೆ ಕೆಲಸದಲ್ಲೇ ಕಾಲ ಕಳೆದ ಅವನಿಗೆ ಈ ಬಗೆಗೆ ಹೆಚ್ಚು ವಿಚಾರಮಾಡುವುದೂ ಸಾಧ್ಯವಾಗಿರಲಿಲ್ಲ.

ಈಗ ಕಸಗುಡಿಸುತ್ತ, ತಂಬೂರಿಯನ್ನೆತ್ತಿ ಮಾಸ್ತರರ ಕೋಣೆಗೆ ಒಯ್ದ. ಅಲ್ಲಿ ತೂಗಾಡುತಿದ್ದ ಅವರ ಶಾಲು ಇರಲಿಲ್ಲ. ಶರ್ಟೂ ಇಲ್ಲ. ಹಾಗೇ ಟ್ರಂಕುಗಳ ನಡುವೆ ಇದ್ದ ಅವರ ಟ್ರಂಕೂ ಮಾಯವಾದುದು ಕಂಡು ಬಂತು. ಅಲ್ಲಿಂದ ಕಲ್ಯಾಣಿಯ ಕೋಣೆಗೆ ಓಡಿದ. ಅಲ್ಲಿ ಅವರ ಬೆಡ್ಡಿಂಗ್ ಇರಲಿಲ್ಲ.

ಮಾಸ್ತರ್ ಹೊರಟು ಹೋಗಿದ್ದಾರೆ ಎಂಬುದು ಅವನಿಗೆ ಖಚಿತ ವಾಯಿತು.

ಕಲ್ಯಾಣಿಗೂ ತಿಳಿಸಿಲ್ಲ. ತನಗೂ ಹೇಳಲಿಲ್ಲ.

ಎಲ್ಲಿಗೆ ಹೋದರು ?

ಏಕೆ ಹೋದರು ? ಹೋಗದೆ ಇನ್ನೇನು ? ಯಾವ ಮಾನವಂತ ಇವ ಳೊಡನೆ ಕುಣಿಯಬಲ್ಲ....

ಇನ್ನು ನಾನು ?

ತನ್ನ ಬಗೆಗೆ ಯೋಚಿಸುತ್ತ ಅವನ ಕಣ್ಣುಗಳಲ್ಲಿ ನೀರು ತುಂಬಿತು. ಹಾಗೇ ಮಾಸ್ತರರ ಚಿತ್ರವನ್ನು ನೋಡುತ್ತ ಅತ್ತುಬಿಟ್ಟ.

ಮನೆ ಕೆಲಸ ಮುಗಿಸಿದ ಬೀರಿ ಬಂದು ಯಾಕೆ ಅಳು ಎಂದು ಕೇಳಿ ಸಮಾಧಾನಪಡಿಸಿದಳು.

ಮನೆಯ ನೆನಪಾಯಿತು ಎಂದು ಸುಂದರ ಮಾತು ತಿರುಗಿಸಿದ.

ಅವಳು ಸಮಾಧಾನಪಡಿಸಿ ಹೊರಟು ಹೋದಳು.

ಸುಂದರ ಮನೆಯ ಬಾಗಿಲು ಹಾಕಿಕೊಂಡು ತನ್ನ ದುಃಖವನ್ನೆಲ್ಲ ತೋಡಿಕೊಂಡ.

ಇನ್ನೇನು ? ಅತ್ತು ಅತ್ತು ಸುಸ್ತಾದ ಅವನಿಗೆ ಮುಂದೇನು ಮಾಡ ಬೇಕೆಂಬ ಬಗೆಗೆ ಚಿಂತೆ ಹರಿಯಿತು.

ನಾನೂ ಹೊರಡಬೇಕು....

ಎಲ್ಲಿಗೆ ?

ಎಲ್ಲಿಗಾದರೇನು ? " ಯಥಾ ಗಚ್ಛತಿ ಚಾ ಗರ್ " ಅಂತ ಮಾಸ್ತರರೇ ಅವನಿಗೆ ಪರಿಹಾಸ್ಯ ಮಾಡಿದ್ದರು.

ಸುಂದರ ತನ್ನ ಬಟ್ಟೆಬರೆಗಳನ್ನೆಲ್ಲ ನೆನೆಹಾಕಿ, ಒಗೆದು ಒಣಗಿಸಿದ.

ಹೊರಡುವುದು ನಿರ್ಧರವಾಗಿತ್ತು.

ಎಲ್ಲಿಗೆ ಎಂಬುದು ಅವನಿಗೂ ಗೊತ್ತಿಲ್ಲ!

## ೨೦

" ಮಿ|| ಮಣಿ "

" ಯಸ್ ಸಾರ್ "

" ಫಯು ಮಿನಿಟ್ಸ್ ಪ್ಲೀಸ್ "

" ಯಸ್ ಸಾರ್."

ಪದ್ಮನಾಭ ತನ್ನ ಆಫೀಸಿನ ಬಾಗಿಲಲ್ಲಿ ನಿಂತು, ಮೇಲಿನ ದಾರವಂದವನ್ನು ಹಿಡಿದುಕೊಂಡು, ಹೊರಗೆ ಹಾಲ್‌ನ ಕಡೆಗೆ ಇಣುಕುತ್ತ ಹೇಳಿದ. ಹಾಗೇ ನೋಡುತಿದ್ದಂತೆ ಅವನ ಮುಖದ ಭಾವ ಬದಲಾಯಿತು, ನಗೆಯು ತೆಳುವಾದ ಪರಿಯೊಂದು ಮುಖವನ್ನು ಮುಚ್ಚಿತು. ತಲೆ ಮುಂದಕ್ಕೆ ಬಾಗಿ ತಿರುಗಿ ಆಫೀಸ್ ಗುಮಾಸ್ತೆಯನ್ನು ನೋಡಿ ಅಪ್ಪಣೆ ಕೊಟ್ಟಿತು.

ಅವನ ಈ ತೆರನ ಅಪ್ಪಣೆಯನ್ನು ಮಣಿ ಅರ್ಥಮಾಡಿಕೊಂಡು ಆಗಲೇ ತಿಂಗಳು ಕಳೆದಿದೆ. ನಿತ್ಯದ ಕೂಗು ಎಂದರೂ ಸರಿಯೆ. ಅವನು ಟೈಪ್‌ರೈಟರನ್ನು ಹಾಗೇ ಬಿಟ್ಟು, ಫೈಲುಗಳನ್ನು ಒತ್ತಟ್ಟಿಗಿರಿಸಿ ಆಫೀಸಿನಿಂದ ಹೊರಹೊರಟ. ಇನ್ನೇನು – ಅರ್ಧತಾಸಿನ ನಂತರ ಬಂದರೂ ಸಾಕು. ಒಂದು ಗಂಟೆ ನಂತರ ಬಂದರೂ ಚಿಂತೆ ಇಲ್ಲ. ಒಂಟಿಕೊಪ್ಪಲ್‌ನಿಂದ ಚಾಮುಂಡೇಶ್ವರಿ ಭವನದವರೆಗೂ ನಡೆದು ಹೋಗಿ ಕಾಫಿ ಕುಡಿದು ಬರಲು ಸಾಕಷ್ಟು ಸಮಯಾವಕಾಶವಿದೆ.

ಅಷ್ಟು ದೂರ ಏಕೆ ಹೋಗಬೇಕು. ಕಂಪೆನಿ ಮನೆಯಲ್ಲೇ ಕಾಫಿ ಇದೆ; ಊಟವೂ ಇದೆ ಈಗ. ಅಡುಗೆ ಭಟ್ಟರ ಸ್ನೇಹ ಸಂಪಾದಿಸಿ ಅವರಿಗೊಂದು ಸಿಗರೇಟು ಕೊಟ್ಟು ಒಂದು ಲೋಟಾ ಕಾಫಿ ಕುಡಿಯಲು ಅವನು ಅಡುಗೆ ಮನೆಗೆ ನಡೆದ.

ಕಲ್ಯಾಣಿ ಆಫೀಸಿನೊಳಗೆ ಕಾಲಿಟ್ಟಳು. ಅವಳ ಜತೆಗೇ ರಮಾ ಕೂಡಾ ನಡೆದಳು.

"ಹೋ! ಹೊಸ ಸೀರೆ ಬಂದಿದೆ...." ಎಂದು ಓರೆ ತಲೆಯ ಓರೆ ನೋಟ ಬೀರಿ, ಬಾಯಿಬಿಟ್ಟು ನಗುತ್ತ ಪದ್ಮನಾಭ ಪ್ರಶ್ನಿಸಿದ.

"ಹೊಸತೇನು? ತಿಂಗಳಾಯಿತು. ಸಾರಿವಾಲಾನಿಂದ ತಂದುದು. ಚೆನ್ನಾಗಿಲ್ಲವೇ?" ಕಲ್ಯಾಣಿ ಪದ್ಮನಾಭನ ಹೊಗಳಿಕೆಯ ಗ್ರಾಮಫೋನ್‌ಗೆ ತನ್ನ ಓರೆನೋಟದ ಸೂಜಿ ಚುಚ್ಚಿದಳು.

"ತುಂಬ ಚೆನ್ನಾಗಿ ಒಪ್ಪುತ್ತೆ." ಎಂದು ರಮಾ ದನಿಗೂಡಿಸಿದಳು

"ನೀನು ನಿಜಕ್ಕೂ ದೇವತೆ. ಚೆನ್ನಾಗಿದೆಯೋ ಎಂದು ಕೇಳಬೇಕೆ?" ಎಂದು ಅದುವರೆಗೂ ಚೆಕ್ ಬುಕ್ಕನ್ನೇ ನೋಡುತ್ತ ಕುಳಿತಿದ್ದ ಅರುಣ ದನಿಗೂಡಿಸಿದ.

"ದೈತ್ಯ ಮಹಾಪ್ರಭು ಮಾತನಾಡುತಿದ್ದಾರೆ; ನಾನು ದೇವತೆಯಂತೆ" ಎಂದಳು ಕಲ್ಯಾಣಿ. ನಗುವಿನ ಹೊಳೆ ಹರಿಯಿತು.

"ಅವಳಿಗಂತೂ ಸೀರೆ ಅಂದರೆ ಅದೇನೋ ಹುಚ್ಚು. ಲೆಕ್ಕವಿಲ್ಲದಷ್ಟು ಸೀರೆ ಸಂಗ್ರಹಿಸಿದ್ದಾಳೆ."

"ಎಲ್ಲಿದೆಯೋ....ಸುಮ್ಮನೆ. ಇರೋದು ನಾಲ್ಕಾರು."

"ಇರಲಿ....ಅಷ್ಟಾದರೂ ಸಾಕು."

"ಹೆಣ್ಣಿಗೆ ಹಾಗೇ. ಅಲಂಕರಿಸಿಕೊಳ್ಳುವ ಬಯಕೆ." ಎಂದ ಪದ್ಮನಾಭ.

"ಒಂದು ವಿಚಿತ್ರ ಪದ್ಮನಾಭ್. ನೋಡಿ; ಈಗ ನೆನಪಾಯಿತು. ಮನುಷ್ಯೇತರ ಪ್ರಾಣಿಗಳಲ್ಲೆಲ್ಲ ಗಂಡೇ ಅತ್ಯಂತ ಸುಂದರವಾಗಿರುವುದು. ಯಾವುದನ್ನೇ ಬೇಕಾದರೂ ನೋಡಿ. ನವಿಲು, ಕೋಳಿ, ಎತ್ತು, ಕುದುರೆ, ನಾಯಿ....ಎಲ್ಲವೂ ಹಾಗೇ. ಆದರೆ, ಈ ಮನುಷ್ಯರಲ್ಲಿ ಮಾತ್ರ ಹೆಣ್ಣು ಸೌಂದರ್ಯದ ರಾಶಿ."

"ನಿಜ....ನಿಜ....ಇಲ್ಲವಾದಲ್ಲಿ ಗಂಡುಸು ತನ್ನ ವ್ಯವಹಾರ ಜೀವನದಲ್ಲಿ ಹೆಣ್ಣನ್ನೇ ಮರೆತುಬಿಡುತಿದ್ದ...."

"ಹ್ಞೂ....ಈಗಲಂತೂ ವ್ಯವಹಾರವನ್ನೇ ಮರೆತುಬಿಡುತ್ತಾನೆ."

"ಕೆಲವೊಮ್ಮೆ. ಆದರೂ ಪ್ರಕೃತಿಯ ನಿಯಮಪಾಲನೆಗಾಗಿ ಅಲ್ಲವೇ?

"ಪ್ರಕೃತಿಯ ಕರೆಯನ್ನು ಉತ್ತರಿಸುವದಕ್ಕಾಗಿ. ಸರಿ – ಸರಿ....ಏನು ....ಕಲ್ಯಾಣಿ? ನಾನು ಅಂದುದು ತಿಳಿಯಿತೇ? ಪ್ರಕೃತಿಯ ಕರೆಗೆ ಓಗೊಡದವರೇ ಇಲ್ಲ. ಭೂಮಿ ಎಲ್ಲವನ್ನೂ ತನ್ನೆಡೆಗೆ ಸೆಳೆದು ನಿಲ್ಲಿಸುತ್ತದೆ ಅಂತ ವಿಜ್ಞಾನಿಗಳ ಮತ. ಹೆಣ್ಣು ಭೂಮಿದೇವಿ. ಅದಕ್ಕೇ ಅವಳಿಂದಲೇ ನಾವೆಲ್ಲ ನಿಂತಿರುವುದು........"

"ದಯವಿಟ್ಟು ಕುಳಿತುಕೊಳ್ಳಿ...." ರಮಾ ನಕ್ಕಳು.

"ಕಲ್ಯಾಣಿ ಏನೋ ಒಂದು ತರಹೆ ಇದ್ದಾಳೆ........"

"ನಿಜ....ಕೈತೊಳೆದು ಮುಟ್ಟಬೇಕು....ಅಥವಾ ಅವಳನ್ನು ನೋಡಿ ನಿಮಗೆ ಒಂದು ತರಹೆ....ಆಗುತ್ತಿದಯೋ...."

"ಸುಮ್ಮನಿರಮ್ಮ ನೀನು."

"ಪ್ರಣಯ ಕಲಹ ಬೇರೆ ಆರಂಭವಾಗಿದೆಯಂತೆ ಈಗ." ಅರುಣ ಮಾತು ಆರಂಭಿಸಿದ.

"ಹೌದು. ಇಲ್ಲೇ ಇಡೀ ದಿನ ಇದ್ದರೆ, ಮನೆಯಲ್ಲಿರುವವರು ಸುಮ್ಮನಿರುತ್ತಾರೆಯೋ. ಅವರಿಗೆ ಬೇಸರ. ಒಬ್ಬರೇ ಇರಬೇಕೆಂದರೆ ಬೇಸರವಲ್ಲವೇ?"

"ಹಾಗೆಂದು ಕಂಪೆನಿಯ ಕೆಲಸ ಮರೆಯುವುದಕ್ಕಾಗುತ್ತೆಯೋ?"

"ಅದೂ ನಿಜ. ಅವಳಿಲ್ಲವಾದರೆ ನಮಗೂ ಇಲ್ಲಿ ತುಂಬ ಬೇಸರವಾಗುತ್ತದೆ."

"ನಮಗೂ ಸಹ" ಎಂದು ಅರುಣ ಮಾತು ಸೇರಿಸಿದ.

"ಏನಮ್ಮ ಅದು...." ಎಂದು ಪದ್ಮನಾಭ ಕಳಕಳಿಯಿಂದ ಕಲ್ಯಾಣಿಯನ್ನು ಪ್ರಶ್ನಿಸಿದ.

"ಅಷ್ಟೇ ಸಾರ್. ಇಲ್ಲೇ ಇರುತ್ತೇನೆ ಅಂತ."

"ಗಂಡಸು ತುಂಬ ಸ್ವಾರ್ಥಿ. ಇಂಥ ರತ್ನವನ್ನು ತಾನೇ ಇಟ್ಟುಕೊಂಡಿರಬೇಕೆಂದರೆ ಹೇಗೆ ಸಾಧ್ಯ. ಹತ್ತು ಜನ ನೋಡಿದರೆ ಅದರ ಬೆಲೆ, ಖ್ಯಾತಿ." ಅರುಣನೆಂದ.

"ಅದು ನಿಜವಾದ ಮಾತು ಅರುಣ್. ಕಲ್ಯಾಣಿ ನಾಡಿನ ಕಲಾವಿದೆ. ಹತ್ತು ಜನರು ಹೊಗಳಬೇಕಾದವಳು, ಹತ್ತು ಜನರಿಗೆ ಆನಂದವೀಯಬೇಕಾ

ದವಳು. ಅವಳನ್ನು ಪೆಟ್ಟಿಗೆಯಲ್ಲಿರಸಲು ಯತ್ನಿಸಿದರೆ ಅದು ಹುಚ್ಚುತನ. ಅವಳ ಬೆಲೆ ತಿಳಿಯದ ನೀತಿ."

" ನೋಡಮ್ಮ....ಹಾಗೆಲ್ಲ ಸಂದೇಹ ಪಡುವವರಿಗೆ ಚಿತ್ರ ಪ್ರಪಂಚವಲ್ಲ. ಇಲ್ಲಿ ಧೈರ್ಯದಿಂದ ಮುನ್ನಡೆಯಬೇಕು.

" ಸಂದೇಹವೇನೂ ಇಲ್ಲ...."

" ಇಲ್ಲವಾದರೆ ಆ ಅಡಚಣೆಯ ಮಾತೇ ಬರುವುದಿಲ್ಲ. ನಿನಗಂತೂ ಅದ್ಭುತ ಭವಿತವ್ಯವಿದೆ. ಈ ಕಲಾಪ್ರಪಂಚದಲ್ಲಿ ಖ್ಯಾತ ನಟಿಯರೇ ಇಲ್ಲ. ನೀನು ಕಾಲಿಟ್ಟಿದ್ದೀಯ. ಮಹಾರಾಣಿಯಾಗಿ ಮೆರೆಯಬಹುದು. ಅದಕ್ಕೆ ಯಾರೂ ಅಡ್ಡಿಯಾಗದಂತೆ ನೋಡಿಕೊಳ್ಳಿ."

" ಇಲ್ಲ ಸಾರ್. ಹಾಗೇನೂ ಅಡ್ಡಿ ಇಲ್ಲ. ಅಂತಹ ಅಡ್ಡಿ ಬಂದರೆ ಇದಿರಿಸುತ್ತೇನೆ."

" ಅದೀಗ ಬೇಕಾದ ಧೈರ್ಯ, ನಿರ್ಧಾರ."

" ಕೀರ್ತಿ, ಹಣ, ಮುನ್ನಡೆಗಳ ದೃಷ್ಟಿಯಿಂದ ಧೈರ್ಯಗೊಂಡು ಮುನ್ನಡೆಯಬೇಕು."

" ಈ ಹೆದರಿಕೆ, ನಾಚುಗೆ, ಸಂಶಯ....ತುಂಬ ಹೊಲಸಮ್ಮ.... ನಾವೇನು ಅಷ್ಟೂ ತಿಳಿಯದವರೇ " ಎಂದಳು ರಮಾ.

" ಅದೂ ನಿಜ ! ಇದು ನಾಟಕ....ಅಭಿನಯ ಜೀವನ...."

" ಹಾಗೆಂದು ದಾರಿ ತಪ್ಪಿದರೆ....ಎಂಬ ಭೀತಿ ಅವರಿಗೆ...." ಎಂದಳು ಕಲ್ಯಾಣಿ.

" ಆ ಭೀತಿ ನಿನಗಿಲ್ಲವಷ್ಟೆ ! ದಾರಿ ತಪ್ಪುವುದೆಂದರೇನು ? ಬೆಳಕು ಬೇಕು, ದಾರಿ ತೋರಿಸುವವರೂ ಬೇಕು, ಆಗ ಮುನ್ನಡೆ. ಬೇರೆಯವರನ್ನು ನಂಬಬೇಡ, ನೀನೇ ನಡೆ ಅಂದರೆ...."

" ಹಾಗೇನೂ ಇಲ್ಲ....."

" ಯಾವ ಹಗ್ಗ ಹಿಡಿದು ಮೇಲೇರಬಹುದೋ ಅದನ್ನು ಹಿಡಿಯಲೇ ಬೇಕು. ಅದು ಬಲವಾಗಿದೆ ಎಂದಾಗ ಹಿಂದೆ ಹಿಡಿದುದನ್ನು ಬಿಡಲೂ ಬಹುದು " ಎಂದ ಅರುಣ.

" ಆದರೆ, ನಾವು ಹಿಡಿದ ಹಗ್ಗಗಳೆಲ್ಲ ಹಾವುಗಳಾದರೆ? ಅದೇ ಭೀತಿ, ಸಂದೇಹ."

" ನಿಜ ಕಲ್ಯಾಣಿ. ಹಾಗೆಂದು ಹೆದರಿ ಹಗ್ಗವನ್ನು ಹಿಡಿಯುವುದನ್ನೇ ಬಿಟ್ಟರೆ? ಮುನ್ನಡೆಯೇ ಇಲ್ಲವಾದೀತು."

" ಹಗ್ಗ ಹಿಡಿದಾಗ ಮುನ್ನಡೆ ಇದೆ ಎಂಬ ಧೈರ್ಯವಾದರೂ ಉಂಟಾಗುತ್ತದೆ. ಆ ಧೈರ್ಯ ಮುನ್ನಡೆಗೆ ಸಹಾಯಕವೂ ಆಗುತ್ತದೆ. ಇದು ನನ್ನ ಅನುಭವ" ಎಂದಳು ರಮಾ.

" ಆದರೂ ನಮ್ಮ ಅಭಿಮಾನ, ಗೌರವ ಉಳಿಸಿಕೊಳ್ಳಬೇಕು."

" ಅದಿಲ್ಲ ಅಂದವರಾರು?"

" ಹಿಡಿದ ಹಗ್ಗ ಕೈ ತಪ್ಪುವುದೆಂದು ತಿಳಿಯುವವರೆಗೂ ಬಿಡಬಾರದು."

" ಕೈ ತಪ್ಪುತ್ತೇನೆ ಎಂದು ಅದು ಎಚ್ಚರಿಕೆ ಕೊಡುತ್ತದೆಯೇನು?"

" ಕೊಡಬಹುದು. ನಾವು ವಿವೇಕಿಗಳಾದರೆ."

" ಅದೀಗ ಮುಖ್ಯ. ವಿವೇಕ ಅಂದಿರಲ್ಲ ಅದು." ಎಂದು ರಮಾ ದನಿಗೂಡಿಸಿದಳು.

" ಸಾಕು ಕಾಡು ಹರಟೆ. ಸಂಜೆ ಕನ್ನಂಬಾಡಿಗೆ ಹೋಗೋಣವೇ" ಪದ್ಮನಾಭ ಸೂಚಿಸಿದ.

" ಅಗತ್ಯವಾಗಿ...." ಎಂದಳು ರಮಾ.

" ಕಲ್ಯಾಣಿ ಏನನ್ನುತ್ತಾಳೆ."

" ಇತರರೂ ಬರಲಿ. ಎಲ್ಲರೂ ಹೋಗೋಣ."

ಪದ್ಮನಾಭನ ಮುಖ ಗೆರಸೆಯಷ್ಟು ಅಗಲವಾಯಿತು.

ಕಲ್ಯಾಣಿ ಎದ್ದು ನಿಂತಳು. ರಮಾ ಅವಳನ್ನು ಹಿಂಬಾಲಿಸಿದಳು. ಕೋಣೆಯ ಬಾಗಿಲು ತೆಗೆದು ಅವರು ಹೊರಹೊರಟರು.

ನೃತ್ಯದ ಹುಡುಗಿಯರೆಲ್ಲ ಪ್ರಾಕ್ಟೀಸ್ ಹಾಲ್‌ನಲ್ಲಿ ಕಾದಿದ್ದರು. ಕಲ್ಯಾಣಿ ನೃತ್ಯಾಭ್ಯಾಸ ಆರಂಭಿಸಿದಳು.

ಅರ್ಧ ಸೇದುತ್ತಿದ್ದ ನಾಲ್ಕನೇ ಸಿಗರೇಟನ್ನು ಪೂರೈಸಿ ಮಣಿ ಆಫೀಸಿಗೆ ಹಿಂತಿರುಗಿದ.

ಅಡುಗೆಯುವರು ಕಲ್ಯಾಣಿ, ರಮಾ, ಮತ್ತಿತರರಿಗೆ ಕಾಫಿ ತಂದು ಕೊಟ್ಟರು.

ಪ್ರಾಕ್ಟೀಸ್ ಮುಗಿಸಿ ಮನೆಗೆ ಹೊರಡೋಣ ಅಂದುಕೊಂಡಿದ್ದಳು ಕಲ್ಯಾಣಿ. ಸಂಜೆ ಕನ್ನಂಬಾಡಿಯ ಕಾರ್ಯಕ್ರಮವಿದೆ. ಈಗಲೂ ಮನೆಗೆ ಹೋಗದಿದ್ದಲ್ಲಿ, ರಾತ್ರಿ ಹತ್ತು ಹನ್ನೊಂದು ಘಂಟೆಗೇ ಮನೆಯ ಮುಖ ನೋಡುವುದು. ನಿನ್ನೆಯೂ ತುಂಬ ತಡವಾಗಿದೆ. ಇಂದೂ ಆದರೆ, ತೊಂದರೆ ಅಧಿಕವಾದೀತು. ಮನೆಯಲ್ಲಿ ಮಹಾಯುದ್ಧ ನಡೆದೀತು ಎಂದವಳಿಗೆ ಭೀತಿ.

ಆದರೆ, ರಮಾ ಮನೆಯ ಕಡೆಗೆ ಹೊರಡುವ ಯೋಚನೆಯಲ್ಲಿರಲಿಲ್ಲ.

ತಾನು ಹೊರಡಬೇಕೆಂದು ಕಲ್ಯಾಣಿ ಎದ್ದು ನಿಂತಾಗಲೇ ಪದ್ಮನಾಭ ಇದಿರಾದ.

" ಇಲ್ಲೇ ಊಟ ಮುಗಿಸುವಿರಂತೆ."

" ಮನೆಗೆ ಹೋಗಬೇಕು."

" ಮನೆ? ಮಕ್ಕಳಿಲ್ಲ – ಮರಿಗಳಿಲ್ಲ – ಅದೇನಿದೆ ಅಲ್ಲಿ. ಹಾಲುಣ್ಣಿಸುವ ಮಕ್ಕಳಿದ್ದರೆ ಚಿಂತೆ" ಎಂದ ಆತ.

" ಆದರೂ, ಅವರಿದ್ದಾರಲ್ಲ...." ರಮಾ ಧ್ವನಿಗೂಡಿಸಿದಳು.

" ನಿನ್ನೆ ರಾತ್ರಿಯೂ ನಾ ಮನೆ ಸೇರುವಾಗ ಅವರು ಮಲಗಿದ್ದರು."

" ಅದಕ್ಕೇನು? ನೀವೇ ಹೋಗಿ ಅವರನ್ನು ಮಲಗಿಸಬೇಕೇನು?" ಎಂದು ನಕ್ಕಳು ರಮಾ. ನಗು ಎಲ್ಲರದಾಯಿತು. ಕಲ್ಯಾಣಿ ಪೆಚ್ಚಾದಳು; ನಾಚುಗೆ ಅವಳದಾಯಿತು.

" ಅಷ್ಟು ಸ್ವಾತಂತ್ರ್ಯವಿಲ್ಲವೇ?"

" ರತ್ನ, ಎಲ್ಲರೂ ನೋಡಿ ಆನಂದಿಸಬೇಕಾದ ವಸ್ತು. ಪೆಟ್ಟಿಗೆಯಲ್ಲೇ ಇಡುವುದಕ್ಕಲ್ಲ. ಹಾಗಿಟ್ಟರೆ ಅದು ಕೇವಲ ಕಲ್ಲಾಗಬಹುದು" ಎಂದು ಅರುಣ ಮಾತನಾಡುತ್ತ ಹಾಲ್‌ನೆಡೆ ಬಂದ.

**ಕಲ್ಯಾಣಿ ಮುಂದೆ ವಾದಿಸದಾದಳು.**

**ನಿಜ! ಅವರು ಸಂದೇಹ ಪಡುತ್ತಾರೆ. ರೇಗಾಡುತ್ತಾರೆ. ಆಗಲಿ, ಅದರಿಂದೇನು? ನಾನು ಅವರಿಗೆ ನನ್ನನ್ನು ಮಾರಿಕೊಂಡಿಲ್ಲ. ಇಷ್ಟು ಮಂದಿ**

ಅಭಿಮಾನದಿಂದ ಕೇಳಿಕೊಳ್ಳುವಾಗ ನಿರಾಕರಿಸಿ ಹೋಗುವುದು ಸರಿಯೇ? ಅವರಿಗೆ ಗೆಳೆಯರೇ ಇರದಿರಬಹುದು. ನಾನೂ ಹಾಗೇ ಮೂಲೆ ಸೇರಲೇ? ನನ್ನನ್ನು ಅರ್ಥಮಾಡಿಕೊಳ್ಳಲು ಅವರು ನಿರಾಕರಿಸುತ್ತಾರೆ. ಇವರೆಲ್ಲ ಅರ್ಥಮಾಡಿಕೊಂಡಿದ್ದಾರೆ. ಆಗಲಿ, ಏನಾಗುತ್ತೋ ಆಗಲಿ. ಎಂದು ಆಕೆ ಧೈರ್ಯ ತಂದುಕೊಂಡಳು. ಆದರೂ ಮನದ ಭೀತಿ ಮರೆಯಾಗಲು ನಿರಾಕರಿಸುತಿತ್ತು.

ಆ ದಿನ ಎಲ್ಲರೂ ಜತೆಯಾಗೇ ಊಟ ಮಾಡಿದರು. ಅರುಣ ಹೋಟೆಲಿನಿಂದ ಬೇಕಾದ ಸಿಹಿತಿಂಡಿ ತರಿಸಿದ. ಪದ್ಮನಾಭ ಇದೇ ಸುದಿನವೆಂದು ಕಲ್ಯಾಣಿಯ ಜತೆಯಲ್ಲಿ ಕುಳಿತು ಊಟಮಾಡಿದ. ರಂಗನಾಥ ಅವರನ್ನೆಲ್ಲ ನಾಟಕ ಕಂಪೆನಿಗಳ ಕಥೆ ಹೇಳಿ ನಗಿಸಿದ. ಅಡುಗೆ ಭಟ್ಟರೂ ಯಾರದೋ ಮದುವೆ ನಡೆದಿದೆ ಎಂದು ತಿಳಿದವರಂತೆ ಉತ್ಸಾಹದಿಂದ ಊಟ ಬಡಿಸುತಿದ್ದರು.

ಊಟ ಮುಗಿಸಿ ನಟಿಯರೆಲ್ಲ ತಮ್ಮ ಕೋಣೆಯಲ್ಲಿ ಕುಳಿತು ಹರಟುತಿದ್ದರು. ಅಲ್ಲೇ ಒರಗಿಕೊಂಡು ವಿನೋದ ವಿಚಾರಗಳಲ್ಲಿ ಕಾಲ ಕಳೆಯುತಿದ್ದರು.

ಪದ್ಮನಾಭ ಸ್ಟುಡಿಯೋ ನೋಡಿ ಬರುತ್ತೇನೆ ಎಂದು ಹೊರಟ.

ಅರುಣ ಕಚೇರಿಯಲ್ಲೇ ಕುಳಿತು ಏನೋ ಕೆಲಸ ನಡೆಸುತಿದ್ದ.

ನಾಲ್ಕು ಗಂಟೆಗೆ ಅಡುಗೆಯವರು ಎಲ್ಲರಿಗೂ ಕಾಫಿ ಹಂಚಿದರು. ಸಂಜೆಯ ಪ್ರಯಾಣಕ್ಕೆ ತಿಂಡಿ, ಕಾಫಿ ಸಿದ್ಧಪಡಿಸಲು ಅವರು ತೊಡಗಿದರು.

ಅರುಣ ಮಹಡಿಯ ಮೆಟ್ಟಿಲಿಳಿದ.

ಪದ್ಮನಾಭ ಬಂದು ಹೊರಡಲು ಸಿದ್ಧರಾಗಿ ಎಂದು ಸೂಚಿಸಿದ.

ಕನ್ನಂಬಾಡಿಯ ಪ್ರಯಾಣಕ್ಕೆ ಸಿದ್ಧತೆ ನಡೆಸುವದರಲ್ಲೇ ಎಲ್ಲರೂ ತಲ್ಲೀನರಾದರು. ಮೇಕಪ್ ಮುಗಿದು ಕಾರು ಹತ್ತುವಾಗ ಐದುವರೆ ಘಂಟೆ ಕಳೆದಿತ್ತು. ಕಲ್ಯಾಣಿ, ರಮಾ, ಶಾಂತಾ, ಇತರ ಹುಡುಗಿಯರು ಕಾರನ್ನೇರಿದರು.

"ಜಲಜ ಎಲ್ಲೋ ಕಾಣಲೇ ಇಲ್ಲ."

"ಅವಳಿಗೆ ಮೈ ಚೆನ್ನಾಗಿಲ್ಲ. ಮಹಡಿಯ ಮೇಲೆ ಮಲಗಿದ್ದಾಳೆ".

"ಬೆಳಿಗ್ಗೆ ಚೆನ್ನಾಗಿದ್ದಳು. ಚೆನ್ನಾಗಿ ಊಟಮಾಡಿ ಕುಣಿದಳು."

"ಅದರಿಂದಲೇ...."

ಹೆಚ್ಚು ಮಾತು ನಡೆಸಲು ಇಷ್ಟವಿಲ್ಲದೆ ಅರುಣ ಕಾರನ್ನು ನಡೆಸಿದ. ಅವನ ಜತೆಗೆ ಪದ್ಮನಾಭ ಕುಳಿತ. ರಂಗನಾಥ ತುರುಕಿಕೊಂಡ.

ಕನ್ನಂಬಾಡಿ ಪ್ರಯಾಣ ಸುಖವಾಗಿ ಸಾಗಿತ್ತು. ರಂಗನಾಥ ಕ್ರಶ್ ಇತ್ಯಾದಿ ತರಲು ಮರೆತಿರಲಿಲ್ಲ.

ಏಳು ಗಂಟೆವರೆಗೂ ಸುತ್ತಾಡಿ ಎಲ್ಲರೂ ಒಂದೆಡೆ ಕುಳಿತರು. ತಂದಿದ್ದ ತಿಂಡಿ, ಕ್ರಶ್ ಸ್ವಾಗಿಯಿತು. ಎಲ್ಲರೂ ಉತ್ಸಾಹದಿಂದ ಈ ವನಭೋಜನದಲ್ಲಿ ಭಾಗವಹಿಸಿದರು. ಕೆಲವರು ವನಚರರಂತೇ ಆದರು.

ಕಲ್ಯಾಣಿ ಪದ್ಮನಾಭನ ತೊಡೆಯನ್ನೇ ಏರಿದ್ದಳು. ಶಾಂತಾ ಅರುಣನ ಬೆನ್ನು ಬಿದ್ದಳು. ರಂಗನಾಥ ಇತರರನ್ನು ಆಟವಾಡಿಸಿದ. ಹೇಗೂ ಕಾರು ಹನ್ನೊಂದು ಘಂಟೆಗೆ ಕಂಪೆನಿ ಮನೆ ಸೇರಿತು.

ಮನೆಗೆ ಹೋದರೆ ಇಷ್ಟು ಹೊತ್ತಿನಲ್ಲಿ ತೊಂದರೆಯಾಗುತ್ತದೆ ಎಂದು ತಿಳಿದ ಕಲ್ಯಾಣಿ ಕಂಪೆನಿ ಮನೆಯಲ್ಲೇ ಇದ್ದಳು. ಪದ್ಮನಾಭ ಅವಳೊಡನೆ ಮಾತನಾಡುತ್ತ ಕಾಲ ಕಳೆಯಲು ಯತ್ನಿಸಿದನಾದರೂ ಕಲ್ಯಾಣಿ ನಿದ್ರೆಯ ಗುಂಗಿನಲ್ಲಿದ್ದು ಅವನಿಗೆ ಉತ್ತರ ಕೊಡದಾದಳು. ಅವಳು ಅವನ ಕೈಗೆ ಬಿದ್ದಿದ್ದಳು. ಅವನೂ ಹಾಗೇ ಅಲ್ಲೇ ಒರಗಿಕೊಂಡ.

ಬೆಳಿಗ್ಗೆ ಎಚ್ಚರವಾದಾಗಲೇ ತನ್ನ ಕೋಣೆಯಲ್ಲೇ ಒಂದೆಡೆ ಪದ್ಮನಾಭ ಸಿರುವುದು ಅವಳಿಗೆ ಅರಿವಾಯಿತು. ಅವಳು ಎದ್ದು ಸ್ನಾನದ ಮನೆಗೆ ನಡೆದಳು. ಇತರರ ಕೋಣೆಯೊಳಗೆ ಕಾಲಿಟ್ಟಾಗ ಇತರ ಹುಡುಗಿಯರಾರೂ ಎಚ್ಚರವಾಗಿರಲಿಲ್ಲ. ಜಲಜ ನಿದ್ರೆ ಬಾರದಿದ್ದರೂ ಸುಮ್ಮನೆ ಮಲಗಿ ಕೊಂಡಿದ್ದಳು.

ಅವಳು ಹೊದುಕೊಂಡಿದ್ದ ಸೀರೆ ತುಂಬ ರಕ್ತದ ಕಲೆಗಳಿದ್ದುವು. ಕಲ್ಯಾಣಿ ಕಳಕಳಿಯಿಂದ ಅವಳನ್ನು ವಿಚಾರಿಸಿದಳು.

"ಯಾಕಮ್ಮ ನಿನ್ನೆ ಬರಲಿಲ್ಲ."

"ಮೈ ಚೆನ್ನಾಗಿರಲಿಲ್ಲ."

"ಸುಮ್ಮನಿರು. ಅದೆಲ್ಲಾ ಗೊತ್ತು.

"ಏನೋ ಆಗಿ ಹೋಯಿತು."

"ಆಗಲಿ. ಅದಕ್ಕೇಕೆ ಅಳು. ಸುಮ್ಮನಿರು...."

"ಮೈ ಕೈ ಎಲ್ಲಾ ನೋವು. ನಡೆಯಲೂ ಕಷ್ಟ."

"ಎರಡು ದಿನ ರೆಸ್ಟ್ ತೆಗೆದುಕೋ. ನೋಡು–ಹೊದ್ದುಕೊಂಡಿರುವ ಸೀರೆ ತೆಗೆದಿಡು. ಯಾರಿಗೂ ತೋರಿಸದೆ ತೊಳೆದು ಹಾಕು."

ಜಲಜ ಆಗಲೇ ಆ ಕಲೆಗಳನ್ನು ನೋಡಿದಳು. ನಾಚುಗೆಯಿಂದ ಹೊದೆಪನ್ನು ತೆಗೆದು, ಮಡಚಿ ಬದಿಯಲ್ಲಿರಿಸಿ ಎದ್ದು ಕುಳಿತಳು.

ಕಲ್ಯಾಣಿ ಸ್ನಾನ ಮುಗಿಸಿ ಬಂದೊಡನೆ ಜಲಜ ಸ್ನಾನದ ಮನೆ ಸೇರಿದಳು.

ಆಡುಗೆಯವರು ಕಾಫಿ ದೋಸೆಗಳನ್ನು ತಂದಿಟ್ಟು, ಮಣೆ ಇರಿಸಿ, ಕಲ್ಯಾಣಿಯನ್ನು ಕೂಗಿದರು. ಅವಳು ನಾಷ್ಟ ಮುಗಿಸುವ ವೇಳೆಗೆ ಇತರರೂ ಒಬ್ಬೊಬ್ಬರಾಗಿ ಸಿದ್ಧರಾದರು.

ಕಲ್ಯಾಣಿಯ ಮನದಲ್ಲಿ ತಾನು ಎಲ್ಲಿಗೆ ತಲಪುತ್ತೇನೆ ಎಂಬುದು ಖಚಿತವಾಯಿತು.

ತನ್ನ ದಾರಿ ತಪ್ಪಿತು–ಎಂಬ ಅರಿವಿನೊಡನೆ, ಜಲಜನ ಸ್ಥಿತಿಯನ್ನು ಕಂಡು ಅವಳು ಅಧೀರಳಾದಳು.

ಸಂಜೆ....ಇಲ್ಲಿರಬಾರದಾಗಿತ್ತು; ರಾತ್ರಿ ಅಷ್ಟು ಕುಡಿಯಬಾರದಿತ್ತು; ಪದ್ಮನಾಭನನ್ನು ಕೋಣೆಯಿಂದ ಹೊರಕ್ಕೆ ಕಳುಹಿ ಮಲಗಬೇಕಾಗಿತ್ತು; ತಾನು ಅವಿವೇಕಿಯಾದೆ.

ಆದರೂ, ಮುಂದೆ ಹೀಗಾಗದಂತೆ ನಡೆದುಕೊಳ್ಳಬೇಕು!

ಅದು ಸಾಧ್ಯವೇ? ತಾನು ತಡೆಯಬಹುದು. ಆದರೆ, ಪದ್ಮನಾಭ–ಇನ್ನೊಂದು ಬಾರಿ ಮತ್ತೊಂದು ಬಾರಿ ಎಂದು ಕಾಡಿದರೆ!

ತನ್ನ ಬಗೆಗೆ ಅವಳಿಗಿನ್ನೂ ಧೈರ್ಯ. ಹಾಗೆ ಕಾಡಿದರೆ ಇದಿರಿಸೋಣ, ನಿರಾಕರಿಸೋಣ ಎಂಬೆಲ್ಲ ಹುಚ್ಚು ಕಲ್ಪನೆ ಭರವಸೆ ನೀಡುತಿತ್ತು.

ಆದರೂ....ಜಲಜ....ಪಾಪ ಎಷ್ಟು ನೊಂದುಕೊಂಡಳೋ. ಅಕ್ರಮ ನಡೆದಿದೆ. ಇಲ್ಲವಾದರೆ ಹಾಗಾಗುತ್ತಿರಲಿಲ್ಲ. ರಕ್ತ....ಛೆ....ಇತರರ ಕಣ್ಣಿಗೆ ಆ ದೃಶ್ಯ ಬಿದ್ದಿದ್ದರೆ ಪಾಪ....ಅವಳ ಮಾನ ಕಳೆಯುತಿದ್ದರು. ಈಗ ನಾನೇ

ಅವಳ ಗುಟ್ಟು ಅರಿತವಳು. ಇಷ್ಟು ಅಮಾನುಷೀಯ ರೀತಿಯಲ್ಲಿ....ಹೇಗೆ.... ಯಾರು ?....

ಅರುಣನೇ ಇರಬಹುದೆಂದು ಊಹಿಸಲು ಅವಳಿಗೆ ಕಷ್ಟವಾಗಲಿಲ್ಲ. ಅವಳಿಗೆ ನ್ಯೈ ಚೆನ್ನಾಗಿಲ್ಲವೆಂದು ಹಿಂದಿನ ದಿನ ಹೇಳಿದವನೂ ಅವನೇ.

ಆದರೂ ಆ ಪಶು ಶಾಂತಾನ ತೋಳಲ್ಲಿ ಬಿದ್ದಿತ್ತು – ತಾನು ನಡೆಸಿದ ಕೃತ್ಯ ಮರೆತು.

ನಿಜ. ಬೇಟೆಗಾರನಿಗೆ ಬೇಟೆಯ ನೋವು ಏನು ತಿಳಿಯುತ್ತದೆ.

ಕಲ್ಯಾಣಿಯ ಮನದಲ್ಲಿ ಭೀತಿ, ಜುಗುಪ್ಸೆ, ರೋಷಗಳು ತಾಂಡವ ಮಾಡಿದುವು.

ಕಂಪೆನಿಯ ವಿಚಾರದಲ್ಲಿ ಎಚ್ಚರಿಕೆ ಮೂಡಿತು.

ಇಲ್ಲಿಗೆ ಬರುವುದು ಕಡಿಮೆ ಮಾಡಬೇಕು.

ಅವರಿಗೂ ಇಲ್ಲೇ ಒಂದು ಕೆಲಸ ಕೊಡಿಸಬೇಕು.

ಆಗ ಇವರ ಆಟ ಆಕ್ರಮಣ ಕಡಿಮೆಯಾಗಬಹುದು. ಅವರು ಪಡುತ್ತಿರುವ ಸಂದೇಹ ನಿವಾರಣೆಯಾಗಬಹುದು. ನಾನೂ ದಾರಿ ತಪ್ಪದಂತೆ ಅಡ್ಡಿಯಾಗಬಹುದು. ಎಲ್ಲಕ್ಕೂ ಮಿತಿ ಇದ್ದೀತು. ಎಂದು ನಿರ್ಧರಿಸಿದಳು.

ನಾಷ್ಟ ತೀರಿಸಿ ಬೇಗನೇ ಹೆರಳು ಹಾಕಿಕೊಂಡು, ಹೊರಡಲು ಸಿದ್ಧವಾದಳು.

ರಮಾ ಕೂಡಾ ಮನೆಯ ಕಡೆಗೆ ಹೊರಡಲನುವಾದಳು.

ಕಲ್ಯಾಣಿಯನ್ನು ಅವಳ ಮನೆಯಲ್ಲೇ ಬಿಟ್ಟು – ರಮಾ ತನ್ನ ಮನೆಗೆ ನಡೆದಳು.

ಕಲ್ಯಾಣಿ ಮನೆಯನ್ನು ಹೊಕ್ಕಾಗ ಶ್ರೀಕಂಠ ಅಲ್ಲೇ ಕುಳಿತಿದ್ದ. ಸುಂದರ ಮುದುಡಿ ಮೂಲೆಯಲ್ಲಿ ಕುಳಿತಿದ್ದ.

"ನಮಸ್ಕಾರ....ಸುಂದರೂ ಒಂದಿಷ್ಟು ಕಾಫಿ ತಯಾರಿಸು....ಬನ್ನಿ.... ಇಲ್ಲೇ ಕುಳಿತುಕೊಳ್ಳಿ."

"ಏನು ವಿಚಾರ? ನಿಮ್ಮ ಗೆಳೆಯರು ಎಲ್ಲಿ?"

"ಅದನ್ನೇ ಹೇಳುತ್ತೇನೆ; ಕೇಳುತ್ತೇನೆ."

ಅರ್ಥವಾಗದೆ ಕಲ್ಯಾಣಿ ಅವನಿದಿರು ಸೋಫಾದಲ್ಲಿ ಕುಳಿತಳು.

"ನಿನ್ನೆ ಬೆಳಿಗ್ಗೆ ಹೋಗಿದ್ದವರು ಈಗ ತಾನೇ ಬರುತಿದ್ದೀರಿ. ಅಲ್ಲವೇ?"

"ಹೌದು. ಗೆಳತಿಯರು ಸಂಜೆ ಕನ್ನಂಬಾಡಿಗೆ ಹೋಗೋಣ ಎಂದು ಹಟ ಹಿಡಿದರು. ಹಾಗೇ ಹೊತ್ತಾಯಿತು."

"ರಾತ್ರಿ ಕಂಪೆನಿ ಮನೆಯಲ್ಲೇ ಇದ್ದಿರಿ."

ಭವಿಷ್ಯ ಹೇಳುವವನ ಮುಂದೆ ಕುಳಿತ ತಪ್ಪಿತಸ್ಥನಂತೆ, ಅವನೇನು ಹೇಳುತ್ತಾನೋ ಎಂಬ ಭೀತಿಯಿಂದ ಕಲ್ಯಾಣಿ ಸುಮ್ಮನಾದಳು.

"ನಿಮ್ಮ ಜತೆಗೆ ಗೆಳೆಯರೂ ಬಂದಿದ್ದರು."

"ಯಾರೂ ಇಲ್ಲ" ತಾವೆಲ್ಲರೂ ಹೋದುದು ಇವನಿಗೆ ತಿಳಿದಿದೆ; ಅಲ್ಲಿ ನಡೆದುದೂ ತಿಳಿದಿರಬಹುದು ಎಂಬ ಭೀತಿ ಆವರಿಸಿದ್ದರೂ ತೋರಗೊಡದೆ ಆಕೆ ಸುಳ್ಳು ಹೇಳಿದಳು.

"ಪದ್ಮನಾಭ ಮತ್ತು ಅರುಣ."

"ಹ್ಞಾ....ಬಂದಿದ್ದರು."

"ನಿನ್ನೆ ಕೃಷ್ಣನನ್ನು ನೋಡಿದ್ದಿರಾ?"

"ಇಲ್ಲ. ನಾನು ಎದ್ದು ನೋಡುವಾಗ ಅವರಿರಲಿಲ್ಲ. ಆಗಲೇ ಹೊರಟು ಹೋಗಿದ್ದರು."

"ಹೌದು. ಹಿಂದಿನ ದಿನದ ರಾತ್ರಿಯೂ ಎಲ್ಲರೂ ನಿದ್ರಿಸಿದ ಮೇಲೇ ನೀವು ಬಂದಿರಿ."

"ಹ್ಞಾ........"

"ಕುಡಿದೂ ಬಂದಿರಿ...."

"............"

"ಹೀಗೆಲ್ಲ ಆಗಬಾರದು; ನಿಮ್ಮ ಸಂಸಾರ ಚೆನ್ನಾಗಿರಬೇಕು ಎಂದು ನಾನು ಎಷ್ಟೋ ಬಾರಿ ಹೇಳಿದ್ದೇನೆ. ಚಿತ್ರರಂಗದ ಬಗೆಗೆ ಎಚ್ಚರಿಕೆ ನೀಡಿದ್ದೇನೆ."

"ಇನ್ನು ಹಾಗಾಗಲಾರದು."

"ನೀತಿ, ರೀತಿಗಳು ಎನ್ನುವ ಒಳ್ಳೆತನಗಳೆಲ್ಲ ಬಹಳ ಎತ್ತರದಲ್ಲಿವೆ ಕಲ್ಯಾಣಿ. ಅಲ್ಲಿಗೇರುವುದು ಕಷ್ಟ, ಅಲ್ಲಿ ನಿಲ್ಲುವುದು ಇನ್ನೂ ಕಷ್ಟ.

ಆದರೆ ಇಳಿಯುವುದು ತುಂಬ ಸುಲಭ. ಜಾರುಬಂಡೆ ಅದು. ಸ್ವಲ್ಪ ಜಾರಿದರೆ ಮತ್ತೆ ಜಾರುತ್ತ ಬರುವುದೇ ಮಾನವನ ಸ್ವಭಾವ. ತಳ ಮುಟ್ಟಿದಾಗಲೇ ತನ್ನ ನೀತಿಯ ಬಗೆಗೆ ಪಶ್ಚಾತ್ತಾಪ ಪಡುತ್ತಾರೆ. ಆದರೆ ಆ ಬಳಿಕ ಏರಲು ಶಕ್ತಿಯಾಗಲೀ ಧೈರ್ಯವಾಗಲೀ ಕಾಲವಾಗಲೀ ಇರುವುದಿಲ್ಲ."

"ಆಗಲೇ ನಾನೂ ಈ ಬಗೆಗೆ ವಿಚಾರಮಾಡಿದೆ ಸಾರ್. ಇನ್ನು ನಿಮ್ಮ ಮಾತು ಮೀರುವುದಿಲ್ಲ."

"ಮನೆಗಳ ಮುಂದೆ "ನಾಯಿಗಳಿವೆ ಎಚ್ಚರಿಕೆ" ಎಂದು ಬೋರ್ಡು ಹಾಕುತ್ತಾರೆ ಗೊತ್ತೇ? ಅಂಥ ಮನೆಗಳಲ್ಲಿ ನಾಯಿಗಳು ಇಲ್ಲದಿದ್ದರೂ ಫಕ್ಕನೆ ಒಳಹೋಗಲು ಯಾರಿಗಾದರೂ ಭೀತಿ. ಆ ಬೋರ್ಡು ನೋಡಿ ಕಳ್ಳರೂ ದೂರ ಸರಿಯುತ್ತಾರೆ. ಹಾಗೇ ಹೆಣ್ಣಿಗೆ ಅಂತಹ ಒಂದು ರಕ್ಷೆ ಗಂಡಸು. ಇನ್ನೊಂದು ಮಂಗಲಸೂತ್ರ. ಅದೆರಡೂ ಇದ್ದಾಗ ಇತರರು ಹತ್ತಿರ ಸುಳಿಯಲು ಹೆದರುತ್ತಾರೆ. ಹಾಗೆ ಇದ್ದೂ ಇತರರನ್ನು ಹೆಣ್ಣು ಸೆಳೆದಾಗ, ಈ ಬೋರ್ಡು ಇರುವ ಮನೆಯಲ್ಲೇ ಕಳ್ಳನಿಗೆ ಆಥಿತ್ಯ ದೊರೆತಂತಾಗುತ್ತದೆ. ಅವನ ನೀತಿಗೆ ಎಲ್ಲವೂ ಸಹಾಯಕವೇ!"

"ನಿಜ...."

"ಈಗ ನಿನ್ನ ಸ್ಥಿತಿಯೂ ಹಾಗೇ ಆಗಿದೆ."

"............"

ಸುಂದರು ಕಾಫಿ ತಂದುಕೊಟ್ಟು ಒಳಗಡೆ ನಡೆದು ಹಾಲ್‌ನಲ್ಲಿ ಕುಳಿತ. ಅವನು ನಿರ್ಜೀವವಾಗಿದ್ದ. ಯಂತ್ರದಂತೆ ದುಡಿಯುತ್ತಿದ್ದ. ಮುಖದಲ್ಲಿ ನಗುವಿಲ್ಲ, ಉತ್ಸಾಹವಿಲ್ಲ. ಅವನನ್ನು ನೋಡಿ ಕಲ್ಯಾಣಿಗೆ ಆಶ್ಚರ್ಯದೊಡನೆ ಭೀತಿಯೂ ಮೂಡಿತು.

"ಸುಂದರೂ....ಮೈ ಚೆನ್ನಾಗಿಲ್ಲವೇ? ಯಾಕೆ ಹೀಗೆ" ಎಂದು ಪ್ರಶ್ನಿಸಿದಳು ಕಲ್ಯಾಣಿ. ಅವನು ಉತ್ತರ ಕೊಡಲಿಲ್ಲ.

"ಚೆನ್ನಾಗೇ ಇದ್ದಾನೆ. ಅದನ್ನು ನಾನೇ ಹೇಳುತ್ತೇನೆ.—

"ನೀನು ಗರತಿ. ಸಿನಿಮಾಲೋಕ ನಿನಗೆ ಹೊಸತು. ಅಲ್ಲಿ ಎಷ್ಟು ಕೆಲಸವಿದೆ ಅಷ್ಟನ್ನು ಮುಗಿಸಿ ನೀನು ಮನೆಯಲ್ಲೇ ಇರಬೇಕಾಗಿತ್ತು. ನರ್ತಕಿಯಾಗಿ ಮಾಸ್ತರರ ಅಂಕೆಯಲ್ಲಿ ಶಿಸ್ತಿನ ಬಾಳು ಬಾಳಿದವಳು

ಒಮ್ಮೊಂದೊಮ್ಮೆ ಎಲ್ಲ ಶಿಸ್ತನ್ನೂ ಮೀರಿ ಮನಬಂದಂತೆ ಹಾರಾಡಲು ಮುಂದಾಗಬಾರದಿತ್ತು.

" ಈ ಬಗೆಗೆ ನಾನೂ ಹೇಳಿದ್ದೇನೆ. ಕೃಷ್ಣನೂ ಸಾಕಷ್ಟು ಹೇಳಿದ್ದಾನೆ. ಮಾಸ್ತರರು ಬಂದಾಗಲೂ ನೀನು ಮನೆಯಲ್ಲಿರಲಿಲ್ಲ. ಆಗಲೂ ನೀನು ತಿಳಿದುಕೊಳ್ಳಲಿಲ್ಲ. ನಿನ್ನ ನಿರ್ಧಾರಗಳೆಲ್ಲ ಮಳಲಿನ ಮೇಲಿನ ಮನೆಗಳಾದುವು. ಪಶ್ಚಾತ್ತಾಪ ನಾಟಕೀಯವಾಯಿತು.

" ಇದು ನಾಟಕ. ಇಲ್ಲಿ ಅಭಿನಯವೇ ಮುಖ್ಯ. ಎಂದು ತಿಳಿದು ನೀನು ಅಭಿನಯ ನಡೆಸಿದೆ. ನಾವು ನಂಬಿ ಸೋತೆವು. ನೀನೂ ಸೋತೆ·

" ಕಲ್ಯಾಣಿ. ನಾನಿಷ್ಟು ಹೇಳಿದೆನೆಂದು ಕೋಪಿಸಿಕೊಳ್ಳಬಹುದು ನೀನು. ನನಗದರ ಪರವೆಯಿದೆ, ಆದರೆ, ಅದರಿಂದ ಕರ್ತವ್ಯಭ್ರಷ್ಟನಾಗುವುದಿಲ್ಲ. ಸಾವಿರ ಹೆಣ್ಣುಗಳ ಕತೆ ನನಗೆ ಗೊತ್ತು. ಹಾಗೇ ಗಂಡುಗಳ ಕತೆಯೂ ತಿಳಿದಿದೆ. ನೀನು – ಕೃಷ್ಣ – ಚೆನ್ನಾಗಿದ್ದರೆ ಈ ಮರುಭೂಮಿಯಲ್ಲಿ ನೀರು ದೊರೆಯುತಿತ್ತು. ಈ ಸೂಳೆಗೇರಿಯ ನಡುವೆ ಒಂದು ಸಂಸಾರಿಗಳ ಮನೆ ಇರುತಿತ್ತು. ನಾನೂ ಧೈರ್ಯವಾಗಿ ಬಂದು ನಿಮ್ಮನ್ನು ನೋಡಿ ಮಾತನಾಡಿ ಹೋಗುತಿದ್ದೆ.

" ಈಗ ಆ ಆಶೆ ಅಳಿಯಿತು. ನಾನೂ ಇನ್ನು ನಾಲ್ಕು ದಿನಗಳಲ್ಲಿ ಹೊರಟು ಹೋಗುತ್ತೇನೆ."

ಶ್ರೀಕಂಠ ತನ್ನ ಜೇಬಿನಲ್ಲಿದ್ದ ಕಾರ್ಡನ್ನು ತೆಗೆದು ಕಲ್ಯಾಣಿಯ ಕೈಗಿತ್ತ.

" ಇನ್ನು ಈ ಮನೆಗೆ ಕಳ್ಳರು ಬಾರದಂತೆ ತಡೆವ ನಾಯಿಗಳಿಲ್ಲ. ಈ ರಕ್ಷೆಯೂ ಮುಂದೆ ದೊರೆಯುವುದಿಲ್ಲ."

ತಾನು ಹೊರಟು ಹೋಗುತ್ತೇನೆ, ಕ್ಷಮಿಸಿ ಎಂದು ಸೂಕ್ಷ್ಮವಾಗಿ ತಾನು ಹೊರಡುವ ಕಾರಣ ತಿಳಿಸಿ ಸುಂದರನನ್ನು ನೋಡಿಕೊಳ್ಳಬೇಕೆಂದು ಸೂಚಿಸಿ ಕೃಷ್ಣ ಬರೆದಿದ್ದ. ಸ್ಟೇಷನ್‌ನಲ್ಲೇ ಅದನ್ನು ಅಂಚೆಗೆ ಹಾಕಿ ಅವನು ಮುಂದೆ ಪ್ರಯಾಣ ನಡೆಸಿದ್ದ.

ಕಲ್ಯಾಣಿ ಉಕ್ಕುವ ದುಃಖ ತಡೆಯಲಾರದೆ ಕಾಲ ಸಂದಿನಲ್ಲಿ ತಲೆ ಇರಿಸಿ ಕಣ್ಣೀರು ಸುರಿಸಿದಳು. ಅವಳ ಅಳು ಬೆಳೆಯುತಿತ್ತು

ಶ್ರೀಕಂಠ ಹತ್ತಿರ ನಡೆದು ಅವಳ ಬೆನ್ನು ತಟ್ಟಿ, ಸಮಾಧಾನ ಹೇಳಿದ.

" ಇನ್ನು ಅತ್ತು ಪ್ರಯೋಜನವಿಲ್ಲ ಕಲ್ಯಾಣಿ. ಕೃಷ್ಣ ಮಾತುಗಾರನಲ್ಲ. ಅಲ್ಪ ಮಾತಿನವರದೆಲ್ಲ ಅನಂತ ನಿರ್ಧಾರ. ಅವನೂ ತನ್ನ ನಿರ್ಧಾರ ಬದಲಿಸುವಂತೆ ಕಂಡುಬರುವುದಿಲ್ಲ. ನನ್ನನ್ನು ಕಂಡರೆ ಅವನ ನಿರ್ಧಾರ ಸಡಿಲಾದೀತೆಂದು ನನಗೂ ಹೇಳದೆ ಹೋಗಿದ್ದಾನೆ. ಸುಂದರನಿಗೂ ತಿಳಿಸಲಿಲ್ಲ.

" ನಾನೇನು ಅಂಥ ಅನ್ಯಾಯ ಮಾಡಿದೆ ಸ್ವಾಮಿ ?"

" ಅದನ್ನು ಇನ್ನು ಯೋಚಿಸಿ ಫಲವಿಲ್ಲ. ನಿನ್ನ ಮುಂದಿನ ದಾರಿ ನಿರ್ಧಾರವಾಗಲಿ. ನಿಶ್ಚಿತವಾಗಲಿ."

" ಈಗ ಹೊತ್ತಿರುವ ಹೊಣೆ."

" ಅದನ್ನು ನಿರ್ವಹಿಸಲೇಬೇಕು. ಈ ರಂಗದಲ್ಲಿ ನೀನು ದುಡಿಯಲೇಬೇಕು. ಆದರೆ ಕಟ್ಟಿದ ಕಚ್ಚೆ ಭದ್ರವಾಗಿದ್ದರೆ ಬಂದವನೇನೂ ಮಾಡಲಾರ ತಂಗೀ. ಇದು ನಿನ್ನ ನಿತ್ಯ ಮಂತ್ರವಾಗಲಿ."

" ನಿಜ...."

" ಧೈರ್ಯದಿಂದ ಮುನ್ನಡೆ."

" ನಡೆಯುತ್ತೇನೆ. ನೀವು ಕೈಬಿಡಬಾರದು."

" ಅದನ್ನು ಈಗಲೇ ನಾ ಹೇಳಲಾರೆ."

" ನನ್ನನ್ನು ಕಾಡುಪಾಲು ಮಾಡಿದರು ಅವರು...."

" ಹಾಗೆ ತಿಳಿದುಕೊಳ್ಳಬೇಡ. ಯಾವುದೋ ಒಂದು ದಾರಿಯಲ್ಲಿ ನಿಲ್ಲಿಸಿದರು. ಇಲ್ಲೇ ನೀನು ಮಹಾರಾಣಿಯಾಗಬಹುದು."

" ಆದರೂ ಭೀತಿ."

" ಹಾಗೆಂದು ನಡುಗಿದರೆ ಪ್ರಯೋಜನವೇನು ? ಧೈರ್ಯದಿಂದ ಮುನ್ನಡೆಯಬೇಕು."

ಕಲ್ಯಾಣಿಯ ಅಳು ಶಾಂತವಾಯಿತು. ಆದರೂ ನಿರ್ಜೀವವಾಗಿದ್ದಳು. ತಾನೇ ಒಳಗೆ ನಡೆದು ತನ್ನ ದುಃಖ ಮರೆಯಲೆಂದು ಅಡುಗೆ ಮನೆ ಸೇರಿದಳು. ಸುಂದರನನ್ನು ಸಮಾಧಾನಪಡಿಸಿದಳು. ನನ್ನ ಜತೆಗೇ ಇರು ಎಂದು ಕೇಳಿಕೊಂಡಳು. ಆದರೂ ಅವನು ಯಾವ ಉತ್ತರವನ್ನೂ ಕೊಡಲಿಲ್ಲ. ಸ್ವಲ್ಪ

ಹೊತ್ತು ಕಳೆದ ಮೇಲೆ ಶ್ರೀಕಂಠ ಹೊರಡುತ್ತೇನೆ ಎಂದು ಹೇಳಲು ಒಳಗೆ ನಡೆದ.

“ಇಲ್ಲ ಸ್ವಾಮಿ. ನನಗೆ ಭೀತಿಯಾಗುತ್ತಿದೆ. ತಾವಿಲ್ಲೇ ಊಟ ಮಾಡಬೇಕು” ಎಂದು ಕಲ್ಯಾಣಿ ಬೇಡಿಕೊಂಡಳು.

ಈ ಬುದ್ಧಿ ಈ ಮೊದಲೇ ಬಂದಿದ್ದರೆ ಎಂದುಕೊಂಡು ಆತ ಒಪ್ಪಿ ಹೊರಗಡೆ ಬಂದು ಕುಳಿತ.

ಚಿತ್ರ ಪ್ರಪಂಚದ ಕಲಾಲೋಕದ ನೂರಾರು ಕತೆಗಳನ್ನು ಹೇಳುತ್ತ ಶ್ರೀಕಂಠ ಕಲ್ಯಾಣಿಯಲ್ಲಿ ಧೈರ್ಯ ತುಂಬಿದ. ಸುಂದರನ ದುಃಖ ನೀಗಲು ಹಲವಾರು ವಿಚಾರಗಳನ್ನು ಅವನ ಮುಂದಿಟ್ಟು ಇಲ್ಲೇ ಇರುವಂತೆ ಸಮಾಧಾನಪಡಿಸಿದ. ತನ್ನ ಬಟ್ಟೆಬರೆಗಳನ್ನು ಕೈಚೀಲದಲ್ಲಿ ತುಂಬಿ ಹೊರಡಲು ಸಿದ್ಧವಾಗಿದ್ದ ಅವನ ಮನಸ್ಸನ್ನು ಬದಲಾಯಿಸಿದ. ಊಟ ಮುಗಿಸಿ ಅವನು ಸ್ಟುಡಿಯೋಗೆ ತೆರಳಿದ. ಕಲ್ಯಾಣಿ ಇನ್ನೂ ಮೊದಲ ‘ಸಿಡಿಲಿ’ನಿಂದ ಚೇತರಿಸದಾಗಿ ಕೋಣೆ ಸೇರಿ ಒರಗಿಕೊಂಡಳು.

ಕಲ್ಯಾಣಿ ಕಂಪೆನಿ ಕಡೆಗೆ ಬಾರದಿದ್ದುದನ್ನು ಕಂಡು ಪದ್ಮನಾಭ ಹೆದರಿದ. ತನ್ನ ಬಗೆಗೆ ಈಕೆ ಜುಗುಪ್ಸೆಗೊಂಡಳೇ, ಸಿಟ್ಟಾದಳೇ, ತಾನು ಮಾಡಿದುದು ತಪ್ಪಾಯಿತೇ ಎಂಬ ವಿಪರೀತ ಯೋಚನೆಗಳು ಅವನ ಮನದಲ್ಲಿ ಮೂಡಿದುವು. ಕಲ್ಯಾಣಿಯನ್ನು ಕಾಣದೆ ಅವನು ತಳಮಳಗೊಂಡ. ಸಂಜೆಗಾದರೂ ಬರಬಹುದೆಂದರೆ ಅದೂ ಇಲ್ಲ. ಎಂದೆಂದೂ ತನ್ನವಳೇ ಎನಿಸುವಂತೆ ಸಲುಗೆಯಿಂದಿದ್ದವಳು ಅದೇಕೆ ಬರಲಿಲ್ಲ, ಏನಾಯಿತು, ಯಾಕೆ ಹೀಗೆ ಎಂದು ‘ಗಾಬರಿ’ಯಾದ ಅವನು ಆರು ಗಂಟೆಯಾಯಿತೆಂದು ಅವಳ ಮನೆಗೆ ಹೊರಟ.

ಅವನ ಕಾರು ಅವಳ ಮನೆಯ ಮುಂದೆ ನಿಂತಿತು. ಹಾಗೇ ಒಳಗೆ ನಡೆದು ಸೋಫಾದ ಮೇಲೆ ಕುಳಿತು ಕಲ್ಯಾಣಿಯೂ, ಶ್ರೀಕಂಠನೂ ಮಾತ ನಾಡುತಿದ್ದಾಗ ಅವನ ಎದೆ ಬಡಿತವೂ ಒಮ್ಮೆ ನಿಂತಿತು. ಥಕ್ಕನೆ ಜಾಗೃತ ನಾಗಿ ಅವರನ್ನು ವಂದಿಸಿ, ಕಲ್ಯಾಣಿ ಸೂಚಿಸಿದ ಮೇಲೆ ಆತ ಕುಳಿತು ಕೊಂಡ.

"ಕಂಪೆನಿ ಕಡೆ ಬರಲಿಲ್ಲ. ಮೈ ಚೆನ್ನಾಗಿಲ್ಲವೇ ಎಂದು ಭೀತಿಯಾಯಿತು. ಹಾಗೇ ಬಂದೆ."

"ಹೌದು. ಒಂದೆರಡು ದಿನ ಅತ್ತ ಬರುವುದು ಸಾಧ್ಯವಾಗದು." ಎಂದು ಅಲಂಕಾರವನ್ನು ಮಾಡಿಕೊಳ್ಳದೆ ಕುಳಿತಿದ್ದ ಕಲ್ಯಾಣಿ ನಿರುತ್ಸಾಹದಿಂದ ಉತ್ತರಿಸಿದಳು.

"ಡಾಕ್ಟರರನ್ನು ಬರಹೇಳಲೇ....ಔಷಧಿ ತೆಗೆದುಕೊಂಡಿರಾ...."

"ಯಾರೂ ಬೇಕಾಗಿಲ್ಲ. ಅದಾಗೇ ಸರಿಹೋಗುತ್ತೆ."

ಅವನು ಹೆಚ್ಚಿಗೆ ಮಾತು ಬೆಳೆಸಲು ಆಸ್ಪದವೇ ದೊರೆಯಲಿಲ್ಲ. ಶ್ರೀಕಂಠನ ಇದಿರು ಅವನೂ ಗರಿಮುರಿದ ಹಕ್ಕಿಯಾದ. ಅವನ ಮನದಲ್ಲಿ ಸಂದೇಹ ಇನ್ನೂ ಸುಳಿದಾಡುತ್ತಲೇ ಇತ್ತು.

ಶ್ರೀಕಂಠನೊಡನೆ ಅವನ ಚಿತ್ರದ ಬಗೆಗೆ ಮಾತನಾಡುತ್ತ ಒಂದೆರಡು ನಿಮಿಷ ಕಳೆದು ಪದ್ಮನಾಭ ಹೊರಟುನಿಂತ. ಕಲ್ಯಾಣಿ ಅವನನ್ನು ಕುಳಿತುಕೊಳ್ಳಲು ಒತ್ತಾಯಿಸದೆ ಬೀಳ್ಕೊಟ್ಟಳು.

ಶ್ರೀಕಂಠ ಅಡ್ಡಬಂದಂತಿದೆ....

ಏನೋ ನಡೆದಿದೆ....ನಿನ್ನೆಯ ರಾತ್ರಿ ಕತೆ ಒಳಿತು ಮಾಡಿದಂತಿಲ್ಲ....

ಎಂದು ಯೋಚಿಸುತ್ತ ಪದ್ಮನಾಭ ಹಿಂತಿರುಗಿದ.

## ೨೨

ಒಬ್ಬೊಬ್ಬರಾಗಿ ಗೆಳತಿಯರೆಲ್ಲ ಕಲ್ಯಾಣಿಯನ್ನು ಹುಡುಕಿಕೊಂಡು ಅವಳ ಮನೆಗೇ ಬಂದರು.

ತನ್ನ ಗೋಳಿನ ಕತೆಯನ್ನು ಹೇಳುತ್ತ ಕಲ್ಯಾಣಿ ಕಣ್ಣೀರು ಕರೆದಳು. ಶಾಂತಾ, ರಮಾ, ಎಲ್ಲರೂ ಅವಳನ್ನು ಸಮಾಧಾನಪಡಿಸಿ, ಧೈರ್ಯ ಕೊಟ್ಟರು. ತಮ್ಮ ಪೂರ್ಣ ಸಹಕಾರ ನೀಡುವ ಭರವಸೆಯಿತ್ತರು.

ಶ್ರೀಕಂಠ ಸ್ಟುಡಿಯೋ ಕೆಲಸ ಮುಗಿದೊಡನೆ ಅತ್ತ ಬರುತಿದ್ದ. ಅವನನ್ನು ಕಲ್ಯಾಣಿಯು ಕರೆಕಳಿಸಿ ವಿಚಾರ ಮಾಡುತಿದ್ದಳು. ಮುಂದಿನ ದಾರಿಯ ಬಗೆಗೆ ಅವನ ಮಾತುಗಳಲ್ಲಿ ಅವಳು ಬೆಳಕು ಕಾಣುತಿದ್ದಳು. ಅದರಿಂದ ಎಷ್ಟೋ ಧೈರ್ಯ ಅವಳಿಗಾಗುತಿತ್ತು.

ಎರಡು ಮೂರು ದಿನಗಳಾದರೂ ಕಲ್ಯಾಣಿ ಚಿತ್ರಸಂಸ್ಥೆಯ ಕಚೇರಿಗೆ ಕಾಲಿಡಲಿಲ್ಲ. ಹೊಸ ಲೋಕದ ಬಗೆಗೆ ವಿಚಾರ ಮಾಡಲು ಮನೆಯಲ್ಲೇ ತಂಗಿದಳು. ಶ್ರೀಕಂಠ ಅವಳ ಅಂದಿನ ಸ್ಥಿತಿಯಲ್ಲಿ ದೈವವಾಗಿ ರಕ್ಷಕನಾಗಿದ್ದ.

ಪದ್ಮನಾಭ ಪ್ರತಿದಿನವೂ ಎರಡೆರಡು ಬಾರಿ ಅಲ್ಲಿಗೆ ಬಂದು ನೋಡಿ, ವಿಚಾರಿಸಿ, ಮಾತನಾಡಿ ಹೋಗುತಿದ್ದ. ಕಲ್ಯಾಣಿಯ ದುಃಖದ ಅರಿವು ಅವನಿಗಾದರೂ ಸಂತೋಷ ಅವನನ್ನು ಆಗಸಕ್ಕೇರಿಸಿತು. ಇದ್ದ ಅಡಚಣೆ ಮಾಯವಾಯಿತು, ತನ್ನ ತಪಸ್ಸು ಸಿದ್ಧಿಸಿತು, ತನಗಿಂತ ಹೆಚ್ಚು ಇನ್ನಾರೂ ಇಲ್ಲ ಎಂದು ಅವನು ಉಬ್ಬಿದ. ಆದರೂ ಅವನಿಗೆ ಈ ಆನಂದದ ನಡುವೆ ಅಳುಕನ್ನು ತಂದುಕೊಡುತಿದ್ದುದೆಂದರೆ ಕಲ್ಯಾಣಿಯ ಮನೆಯಲ್ಲಿ ಅವನನ್ನು ಸಂದಿಸುತಿದ್ದ ಶ್ರೀಕಂಠ.

ಕಲ್ಯಾಣಿ ನಾಲ್ಕು ದಿನ ಅಧೀರಳಾಗಿ ದುಃಖಿಸಿ ಮತ್ತೆ ನಾಲ್ಕು ದಿನಗಳಲ್ಲಿ ಧೈರ್ಯ ತಂದುಕೊಂಡಳು. ಆದರೂ, ಹಿಂದಿನ ನವಚೇತನ ಅವಳಲ್ಲಿ ಮೂಡಲಿಲ್ಲ. ಬೀರಿ ಅವಳ ದುಃಖ ಪರಿಹರಿಸಲು ಮುಂದೆ ಬಂದು, "ಕ್ರಶ್" ಅಭ್ಯಾಸ ಹೆಚ್ಚಿಸಿದಳು. ಮಾದಕ ದ್ರವ್ಯದ ಬಾಟಲು ಮನೆಯೊಳಗೇ ಅಡಗಿ ಕುಳಿತಿತು. ನಿದ್ದೆ ಬಾರದಾಗ ಕೊಂಚ ಕುಡಿದರಾಯಿತು ಎಂದುಕೊಂಡು, ಕಲ್ಯಾಣಿ ನಿತ್ಯ ಹಾಸಿಗೆ ಮೇಲೆ ಕುಳಿತು ಒಂದಿಷ್ಟು ಕುಡಿಯಲೂ ಮುಂದಾದಳು. ಅಂತೂ ಅವಳ ಬೆಂಬಲಕ್ಕೆ ನಿಂತು ಆ ಪಾನೀಯ ಧೈರ್ಯವಿತ್ತಿತು.

ಶ್ರೀಕಂಠ ಅವಳ ಸಂಕಟಗಳನ್ನು ಕಂಡು, ಸಮಾಧಾನಪಡಿಸಿ, ವಿವೇಕ ಹೇಳಲು ಅವಳಲ್ಲಿಗೆ ಸದಾ ಬರಬೇಕಾಯಿತು. ಸ್ಟುಡಿಯೋದಲ್ಲಿದ್ದಾನೆಂದು ತಿಳಿದ ಕಲ್ಯಾಣಿ, ಊಟ ಸಿದ್ಧವಾದೊಡನೆ ಅವನನ್ನು ಊಟಕ್ಕೆ ಕರೆಯಲು ಸುಂದರನನ್ನು ಕಳುಹಿಸುತಿದ್ದಳು. ಹತ್ತು ಗಂಟೆವರೆಗೂ ಆತ ಬಾರದಿದ್ದಲ್ಲಿ ಸ್ಟುಡಿಯೋವಿಗೆ ಹೋಗಿ ಅಲ್ಲಿದ್ದಾನೆಯೇ ಎಂದು ನೋಡಿಕೊಂಡು ಬಂದು ಸುಂದರ ಕಾಫಿಯನ್ನು ತೆಗೆದುಕೊಂಡು ಹೋಗುತಿದ್ದ. ಸಂಜೆಯ ಕಾಫಿಯೂ ಕಲ್ಯಾಣಿಯ ಮನೆಯಿಂದಲೇ ಬರುತಿತ್ತು. ಈ ಆತ್ಮೀಯತೆ, ಕಲ್ಯಾಣಿ ಸರಿಯಾದ ದಾರಿ ಹಿಡಿಯುತ್ತಾಳೆ, ಇನ್ನು ದಾರಿ ತಪ್ಪುವುದಿಲ್ಲ ಎಂಬ ನಂಬಿಕೆ ವಿಶ್ವಾಸಗಳನ್ನು ಶ್ರೀಕಂಠನಲ್ಲಿ ಹುಟ್ಟಿಸಿದುವು

ಅಂತೆಯೇ ಸದಾ ಸುಂದರ ಅವನನ್ನು ಹುಡುಕಿಕೊಂಡು ಬರುವದನ್ನು ಆತ ಕಲ್ಯಾಣಿಯ ಮನೆಗೆ ಹೋಗುತ್ತಿರುವದನ್ನು ಕಂಡ ಕಲಾವಿದರೂ ಸ್ಟುಡಿಯೋದ ಕೆಲಸಗಾರರೂ ಕಿಚ್ಚಾದರು. ಶ್ರೀಕಂಠ ಕೊನೆಗೂ ಅತ್ಯಂತ ಶ್ರೇಷ್ಠ ವಸ್ತುವನ್ನೇ ಹಿಡಿದುಕೊಂಡ ಎಂದು ಆಡಲು ತೊಡಗಿದರು. ಶ್ರೀಕಂಠನಿಗೂ ಕಲ್ಯಾಣಿಗೂ ಸಂಬಂಧ ಕಲ್ಪಿಸಲು ಯತ್ನಿಸಿದರು. ಕೆಲವರು ಸಂಬಂಧ ಕಲ್ಪಿಸಿಕೊಂಡರು. ಅಂತೂ ಅವನ ಹಿಂದೆ ಹಲವು ಕತೆಗಳು ಹುಟ್ಟಿಕೊಂಡುವು. ಈ ಕತೆಗಳನ್ನು ಕೇಳಿದ ಶ್ರೀಕಂಠ ಅಧೀರನಾದ. ಸ್ವಾಭಿಮಾನವೇ ಅತ್ಯಂತ ಶ್ರೇಷ್ಠ ವಸ್ತು, ಮಾನವಂತನಾಗೇ ಕಲಾರಂಗ ದಲ್ಲಿರಬೇಕು, ಕನ್ನಡ ಚಿತ್ರರಂಗ ನೈತಿಕ ವಿಚಾರದಲ್ಲಿ ಅತ್ಯಂತ ಪರಿಶುದ್ಧ ವಾಗಿರಬೇಕು ಎಂಬ ಹುಚ್ಚು ಕಲ್ಪನೆಯಿಂದ ದುಡಿಯುತ್ತ ಅನೀತಿ ತೋರಿ ದಾಗ ಅವುಗಳನ್ನು ಖಂಡಿಸುತ್ತ ನೀತಿ ತಪ್ಪದಂತೆ ಎಲ್ಲ ನಟಿಯರಿಗೂ ಸಹಾಯ ನೀಡುತಿದ್ದ ಅವನಿಗೆ ಇದರಿಂದ ದುಃಖವಾಯಿತು, ಬೇಸರ ಮೂಡಿತು. ಆದರೂ ತನ್ನಲ್ಲಿ ತಲೆದೋರುತಿದ್ದ ನಿರಾಶೆಯನ್ನು ಬದಿಗೊತ್ತಿ, ಇಲ್ಲಿ ಇರುವಷ್ಟು ಕಾಲ ಯತ್ನಿಸುತ್ತೇನೆ, ನನ್ನ ಕರ್ತವ್ಯ ಮಾಡುತ್ತೇನೆ ಎಂದು ಅವನು ದುಡಿದ.

ಕಲ್ಯಾಣಿಯನ್ನು ಕಂಪೆನಿಗೆ ಬರುವಂತೆ ಫಕ್ಕನೆ ಒತ್ತಾಯಿಸುವುದು ಸರಿಯಲ್ಲ. ತಾನೇ ಅವಳಲ್ಲಿಗೆ ಹೋಗುತ್ತ ಬರುತ್ತ ಇರುವುದೇ ಈಗ ಚೆನ್ನು. ಅವಳ ವಿರಹ ದುಃಖ ಅಳಿದ ಮೇಲೆ ಚಿತ್ರದ ಕೆಲಸ ಆರಂಭವಾಗಲಿ–ಎಂದು ಪದ್ಮನಾಭನೂ ನಿಧಾನಿಸಿದ. ಕಂಪೆನಿಯ ಇತರ ನಟರು ಸಿದ್ಧರಾದರು. ಚಿತ್ರದ ಶೂಟಿಂಗ್ ಆರಂಭವೂ ಆಯಿತು. ಕಲ್ಯಾಣಿಯ ಅಭಿನಯವಾಗಲೀ, ನೃತ್ಯದ ದೃಶ್ಯಗಳಾಗಲೀ ಇಲ್ಲದ ಭಾಗಗಳ ಶೂಟಿಂಗ್ ನಡೆಸಲು ಅರುಣ ಮುಂದಾದ. ಕಲ್ಯಾಣಿಯ ಸಮಸ್ಯೆಯಿಂದ ಕಂಪೆನಿಯಲ್ಲಿ ಒಮ್ಮೆ ಮೋಡ ಮುಸುಕಿತ್ತು. ಈಗ ಅದು ಮಾಯವಾಯಿತು. ಕಾರ್ಯಕ್ರಮಗಳೊಡನೆ ವಿಹಾರ ವಿಲಾಸಗಳೂ ಸರಾಗವಾಗಿ ಸಾಗಿದುವು. ಅರುಣ ಜಲಜನನ್ನು ಪೂರ್ಣ ತನ್ನವಳಾಗಿ ಮಾಡಿಕೊಂಡ. ಕಲ್ಯಾಣಿಯನ್ನು ನೆನೆದುಕೊಳ್ಳುತ್ತಾ ಪದ್ಮನಾಭ ರಮಾ ಮೈಮೇಲೆ ಕೈಹಾಕಿ ದಿನಗಳೆದ.

ಮೂರುವಾರ ಕಳೆಯುವಲ್ಲಿ ಕಲ್ಯಾಣಿ ಕೃಷ್ಣನ ವಿಚಾರವನ್ನು ಪೂರ್ಣ

ವಾಗಿ ಮರೆತಳು. ಹಾಗೇ ಪ್ರತಿದಿನವೂ ತನ್ನಲ್ಲಿಗೆ ಬಂದು, ಗಂಟೆಗಟ್ಟಲೆಯಾಗಿ ಮಾತನಾಡುತ್ತ ತನ್ನ ಹೃದಯವರಿತು ನುಡಿಯುತಿದ್ದ ಶ್ರೀಕಂಠನ ಕಡೆ ಅವಳ ಗಮನ ಹರಿಯಿತು. ಅವನ ಕೀರ್ತಿ, ಅವನನ್ನು ಕಂಡರೆ ಇತರರು ಹೆದರುತಿದ್ದ ವಿಚಾರ, ಅವನ ನಿರ್ಮಲ ವಿಶ್ವಾಸಗಳು ಅವಳನ್ನು ತಪ್ಪು ಕಲ್ಪನೆಯ ಕಡೆಗೆ ದೂಡಿದುವು. ಅವನು ತನಗೆ ಸೋತಿದ್ದಾನೆ, ಎಂಬ ಮನೋಭಾವ ಮೂಡಿತು ಅವಳಲ್ಲಿ. ಇಂದಲ್ಲ ನಾಳೆ ಆತ ತನ್ನ ಬಳಿ ಸರಿಯುತ್ತಾನೆ, ತನ್ನನ್ನು ಬಯಸುತ್ತಾನೆ, ಎಂದೂ ಅವಳು ನಂಬಿದಳು.

ಬಿಡುವಿಲ್ಲದೆ ವಿಹಾರ ವಿಲಾಸಗಳಲ್ಲಿ ಕಳೆದ ಒಂದು ವರ್ಷವನ್ನು ಕಲ್ಯಾಣಿ ಕಳೆದಿದ್ದಾಳೆ. ಹಾಗೇ ಕೃಷ್ಣ ಅವಳಿಗೆ ಬೇಕಾದುದನ್ನು ಕೊಟ್ಟು ತೃಪ್ತಿಗೊಳಿಸಿದ್ದಾನೆ. ಅವನು ಬಳಿಯಲ್ಲಿದ್ದಾಗ ವಿಲಾಸದ ಆಶೆ ಅವಳಿಗೆ ಕಡಿಮೆಯಾಗಿತ್ತು. ವಿಹಾರದಲ್ಲೇ ಅದರ ಮರವೆಯಾಗಿತ್ತು. ಆದರೆ ಈಗ ಅವನಿಲ್ಲದಾಗ ವಿಲಾಸ ಅವಳಿಗೆ ಬೇಕು ಎನಿಸಿತು. ದುಃಖ, ಬೇಸರ ಮರೆಯಲು ಇದು ಸಾಧನ ಎಂದವಳಿಗೆ ಅನಿಸಿತು. ಮಾದಕದ್ರವ್ಯದಂತೆ ಇದೂ ಒಂದು ಎಂದು ಅವಳು ತಿಳಿದಳು. ಹಾಗೇ ಮಾದಕ ದ್ರವ್ಯದ ಗುಂಗಿನಲ್ಲಿ ಅವಳಿದ್ದಾಗ ಅವಳಿಗೆ ವಿಲಾಸ ಅತ್ಯಗತ್ಯವಾಗಿಯೂ ತೋರಿತು. ಈ ಮೂರು ವಾರಗಳಲ್ಲಿ ಅವಳು ತನ್ನ ಉತ್ಸಾಹವನ್ನೂ ಸುತ್ತಾಟಗಳನ್ನೂ ಹಿಡಿದಿಟ್ಟಿದ್ದಳು. ಈಗ ಅವು ಕಾರಂಜಿಯಾಗಿ ಪುಟಿಯಲು ಎಡೆ ಹುಡುಕುತಿದ್ದುವು.

ಆದರೆ....ಅವನು ನಿರಾಕರಿಸಿದರೆ?

ನಿರಾಕರಿಸಿದರೆ ಅವನೇನೂ ಮಾಡಲಾರ. ಇತರರೊಡನೆ ಈ ವಿಚಾರ ಹೇಳುವ ಧೈರ್ಯವಿಲ್ಲ. ಮಾತ್ರವಲ್ಲ, ಕಲ್ಯಾಣಿ ಕೈಗೆ ದೊರೆಯಲಿಲ್ಲೆಂದು ಈ ರೀತಿ ಆಡುತ್ತಾನೆ ಎಂದು ಇತರರು ಆಡಬಹುದು. ಅಥವಾ ನಾನು ಆ 'ಕೋತಿ'ಯನ್ನು ಒಪ್ಪಲಿಲ್ಲ, ಅದಕ್ಕೇ ಹೀಗೆಲ್ಲ ಹೇಳುತ್ತಾನೆ ಎಂದು ನಾನೇ ಹೇಳಬಹುದು. ನನ್ನ ಮಾತನ್ನು ನಂಬುವವರೇ ಬಹಳವಾಗಿದ್ದಾರೆ; ಇಲ್ಲವಾದರೆ ನಂಬಿಸಬಲ್ಲೆ ನನ್ನ ನಡೆ ನುಡಿ ಹಾವ ಭಾವಗಳಿಂದ ಎಂದು ಅವಳು ತೃಪ್ತಿಪಡೆದಳು.

ಒಲಿದರೆ....?

ಬೇರೆ ಗಟ್ಟಿಯಾದ ಮರ ಸಿಗುವವರೆಗೆ ಇರಲಿ. ಅವನ ದುಡಿಮೆ ಅಷ್ಟರಲ್ಲೇ ಇದೆ. ಆದರೂ ನನ್ನ ಮನಸ್ಸಿಗೆ ಸರಿಯಾಗಿ ಬಾಳುವವನಂತೆ ಕಾಣಿಸುತ್ತಾನೆ. ಹಾಗೆ ನನ್ನ ನಂಬಿಕೆ ನಿಜವಾದರೆ ಅವನೇ ಆಗಲಿ. ಇಲ್ಲ ವಾದರೆ ಹೊರಟು ಹೋಗಲಿ. ಅವನೇ ಅಂದಿದ್ದಾನೆ "ನಾಯಿಗಳಿವೆ" ಅಂದ ಹಾಗೆ ಮನೆಗೊಬ್ಬ ಗಂಡಸು ಬೇಕು ಅಂತ. ಅವನೇ ಆ ಗಂಡಸಾಗಲಿ! ಕಲ್ಯಾಣಿಯ ಮೇಲೆ ಇತರರು ದಾಳಿ ಮಾಡದಂತೆ ಕಾಯುವ 'ನಾಯಿ' ಯಾಗಲಿ. ಎಂದು ಯೋಚಿಸುತಿದ್ದಂತೆ ಅವಳಿಗೆ ನಗು ಬಂದಿತು.

ದಿನಗಳೆದಂತೆ ಈ ಯೋಚನೆ ಬೆಳೆದು ಬಲವಾಯಿತು. ವಿಲಾಸದ ಬಯಕೆ ಅವಳಲ್ಲಿ ಬೆಳೆಯಿತು.

ಎಂದಿನಂತೆ ಅಂದೂ ಶ್ರೀಕಂಠ ರಾತ್ರಿ ಹತ್ತು ಗಂಟೆಯಾದರೂ ಅವ ಳೊಡನೆ ಮಾತನಾಡುತ್ತ ಕುಳಿತಿದ್ದ. ಕಲೆ, ಚಿತ್ರರಂಗ, ವೇದಾಂತ, ಇತ್ಯಾದಿ ಎಲ್ಲವೂ ಅವನ ಚರ್ಚೆಯಲ್ಲಿ ಮಾತಿನಲ್ಲಿ ಮೂಡಿ ಮರೆಯಾಗು ತಿತ್ತು. ಅವಳ ಮುಖವನ್ನು ನೋಡುತ್ತ ಆತ ಮಾತನಾಡುತಿದ್ದ. ಇಬ್ಬರೂ ಹತ್ತಿರವಾಗೇ ಕುಳಿತಿದ್ದರು.

ಕಲ್ಯಾಣಿ ಧೈರ್ಯ ತಂದುಕೊಂಡು ಅವನ ಕೈ ಹಿಡಿದಳು. ಅವಳ ಬಲಗೈಯ ನಡುಬೆರಳು ಅವನ ಕೈಯ ಅಂಗೈಯ ಮೇಲೆ ಸರಿದಾಡಿತು. ಮುಖದಲ್ಲಿ ಆಶಾದೃಷ್ಟಿ ಮೂಡಿತ್ತು; ಬಯಕೆ ಉಕ್ಕಿತ್ತು.

ಚೇಳು ಕಡಿದಂತೆ ಅನಿಸಿ, ಶ್ರೀಕಂಠ ಕೈ ಹಿಂದಕ್ಕೆ ಸೆಳೆದ.

"ಕಲ್ಯಾಣಿ....ಇದೇಕೆ ಹೀಗೆ....ಇದರ ಅರ್ಥ."

"ನನಗೆ ತಿಳಿಯದು" ಎಂದು ಫಕ್ಕನೆ ಜಾಗೃತಳಾಗಿ ಅವಳು ಉತ್ತರಿ ಸಿದಳು.

"ನನಗೆ ತಿಳಿದಿದೆ. ಇದಕ್ಕೆ ಉತ್ತರ ಕೊಡುವುದೂ ತಿಳಿದಿದೆ."

"ಸುಮ್ಮನೆ ಹಾಗೆ ಮಾಡಿದೆ. ಯಾರೋ ಗೆಳತಿಯರು ಹೇಳಿದ್ದರು. ಕ್ಷಮಿಸಿ" ಎಂದು ಮಾತು ಬದಲಾಯಿಸಲು ಯತ್ನಿಸಿದಳು.

"ನಿಜ. ನಾನು ಉತ್ತರವೀಯಲು ಮುಂದಾದರೆ? ಮುಂದಿನ ದಾರಿ ಅರಿತು ದುಡಿಯಬೇಕು. ಉತ್ತರವೀಯುವುದು ತುಟಿಗೆ! ತಿಳಿಯಿತೇ? ನಾನು ಯಾವ ಹೆಣ್ಣನ್ನೂ ಸೂಳೆಯಾಗಿಸಲು ಸಿದ್ಧವಿಲ್ಲ. ಹಾಗೆಂದು

ಹೇಡಿಯೂ ಅಲ್ಲ. ನಿನ್ನ ನಿರ್ಧಾರಮಾಡು; ನಾವಿಬ್ಬರೂ ದಂಪತಿಗಳಾಗೋಣ. ಆ ಬಳಿಕ ನೀನೇನು ಬಯಸಿದರೂ ಬಯಸಬಹುದು, ನಾನಾಗ ನಿರಾಕರಿಸಲಾರೆ."

"…………"

"ಈಗ ಮಾತ್ರ ಈ ದಾರಿ ಬೇಡ. ಭೋಗ ಆಟವಲ್ಲ. ಈ ಆಟ ಇನ್ನು ಆಡಬೇಡ."

ಮುಂದೆ ಬೇರೆಡೆಗೆ ಮಾತು ತಿರುಗಿಸಿ ಆತ ಹೆಣ್ಣು ಗಂಡುಗಳ ಸಮಸ್ಯೆಯ ಬಗೆಗೆ ಮಾತನಾಡಿದ. ವಿವಾಹವಾಗದೆ ಯಾವ ಹೆಣ್ಣನ್ನೂ ಕೆಡಿಸಲಾರೆನೆಂಬ ತನ್ನ ನಿರ್ಧಾರ ಸೂಚಿಸಿದ. ಹೆಣ್ಣನ್ನು ಕೆಡಿಸಿ ವಿವಾಹವಾಗುವ ನೀತಿಗೆ ತಾನು ಇಳಿಯಲಾರೆನೆಂದ. ಕಲ್ಯಾಣಿಯ ವಿಲಾಸದ ಬಯಕೆ ಇಳಿಯಿತು. ಅವಳೂ ಅದನ್ನೆಲ್ಲ ಮರೆತವಳಂತೆ ಅಭಿನಯಿಸಿದಳು.

ಹನ್ನೊಂದು ಗಂಟೆಯಾಯಿತೆಂದು ಶ್ರೀಕಂಠ ತೆರಳಿದ.

ಕಲ್ಯಾಣಿ ಒಂದಿಷ್ಟು ಕುಡಿದು ಒರಗಿಕೊಂಡಳು.

ಆದರೆ ನಿದ್ರೆ ಮಾತ್ರ ಅವಳು ಎಷ್ಟು ಪ್ರಯತ್ನಿಸಿದರೂ ಹತ್ತಿರ ಬರಲಿಲ್ಲ.

ಇನ್ನೂ ಕುಡಿಯಲೇ….ಆದರೆ ಹೆದರಿಕೆ….ಹೊಸ ಅಭ್ಯಾಸ….ತಾನು ಹುಚ್ಚರಂತೆ ಕುಣಿದರೆ….ಯಾರೂ ಹತ್ತಿರವಿಲ್ಲ….ಮಾನ ಹೋದೀತು ಎಂಬ ಭೀತಿ ಬೇರೆ.

ಶ್ರೀಕಂಠ ಹೇಡಿ….ಎಂದು ಅವಳ ಮನಸ್ಸು ಕೂಗಿಕೊಳ್ಳುತ್ತಿತ್ತು. ತಾನು ಕರೆದಾಗ ಬಾರದವರು ಯಾರೂ ಈ ಚಿತ್ರ ಪ್ರಪಂಚದಲ್ಲಿಲ್ಲ. ತನ್ನನ್ನು ಹಿಂಬಾಲಿಸಿ, ಪೂಜಿಸಿ, ಬೇಡಿಕೊಳ್ಳುತ್ತಿರುವವರೇ ಎಲ್ಲರು. ಒಮ್ಮೆ ಕರೆದರೆ, ಜೀವಾವಧಿ ಶರಣಾಗಿ ಸರ್ವಸ್ವವನ್ನೂ ಪಾದತಳದಲ್ಲಿ ಅರ್ಪಿಸಲು ಸಿದ್ಧರಾದವರು ಇದ್ದಾರೆ. ಈತ ಹುಚ್ಚ. ನೀತಿಯ ಹುಚ್ಚು ಹಿಡಿದು ಅನೀತಿಯ ಕೊಂಪೆಯಲ್ಲಿ ಸುತ್ತಾಡುತಿದ್ದಾನೆ. ನನ್ನ ನಚ್ಚಿನವನಾಗಿ ಬಾಳುವ ಭಾಗ್ಯವಿಲ್ಲ. ಈ ಸೌಂದರ್ಯ, ಯವ್ವನ ನಿನ್ನದು–ಸುಖಿಸು ಎಂದರೂ ಅನುಭವಿಸಲಾರದವನು. ಭಾಗ್ಯಬೇಕು, ಪುಣ್ಯಬೇಕು–ಅನ್ನುವುದಾದರೂ ಇದಕ್ಕೆ.

ಆಗಲೇ ಮಾತು ಬಂದಿದೆ. ಮಾತು ಬರುವುದು ನಿಲ್ಲುವುದಿಲ್ಲ. ಮಾಡಿದರೂ ಮಾಡದಿದ್ದರೂ ಅದು ಬರುತ್ತದೆ. ಮೈಸೂರಿನ ನಗರದಲ್ಲಿ ಹೆಚ್ಚಿನವರಿಗೆ ಇತರರ ಬಗೆಗೆ ಆಡುವುದೇ ವಿಹಾರ ಸಾಧನ. ನಿವೃತ್ತರ ಸ್ವರ್ಗವಿದು. ಕಿಡಿಯಿಲ್ಲದೆ ಬೆಂಕಿ ಹರಡುವ ಕೇಂದ್ರ. ಅದಕ್ಕೀತ ಹೆದರ ಬೇಕೆ? ಇವನೆಷ್ಟು ಪವಿತ್ರ? ಏನು ಹುಚ್ಚು? ಇಂದಲ್ಲ ನಾಳೆಯಾದರೂ ಯಾರ ಬಲೆಗಾದರೂ ಬೀಳುವ ಪ್ರಾಣಿ. ಇಂದು ರತ್ನ ದೊರೆತಿದೆ; ನಾಳೆ ಬಿಳಿಕಲ್ಲು ದೊರೆಯುಬಹುದು. ಆದರೂ ವಿವೇಕವಿಲ್ಲ.

ಗಂಡಸೇ ಅಲ್ಲವೋ ಏನೊ ಯಾರು ಬಲ್ಲ?

ಆ ಕಂಪೆನಿಗೆ ಡ್ಯಾನ್ಸ್ ಮಾಡಲು ಸೇರಿದ ಸಾವಿತ್ರಿ! ಪ್ರತಿದಿನ ಅವಳ ತಂದೆಯೇ ಕಂಪೆನಿ ಮನೆಗೆ ಕರೆದು ತರುತ್ತಾನೆ. ನೃತ್ಯ ಅಭ್ಯಾಸ ಮುಗಿಯಿ ತೆಂದರೆ ಕರೆದೊಯ್ಯಲು ಹಾಜರಾಗುತ್ತಾನೆ. ತನ್ನ ಮಗಳು ಪರಿಶುದ್ಧ ಎಂದು ಊರೆಲ್ಲ ಹೇಳುತ್ತ ಪತಿವ್ರತಾ ಮಹಾತ್ಮೆಯ ಬಗೆಗೆ ಉಪದೇಶ ಮೀಯುತ್ತಾನೆ. ಆದರೆ ರಂಗನಾಥ ಆಗಲೇ ಅವಳನ್ನು "ಮುಗಿಸಿ"ದ್ದಾನೆ. ಆದರೂ ತಂದೆಗೆ ಈ ವಿಚಾರ ಗೊತ್ತೇ ಇಲ್ಲ. ಅವಳು ಕೈಬಿಟ್ಟು ಕಣ್ಮರೆ ಯಾಗುವವರೆಗೆ ಅಥವಾ ಹೆರುವವರೆಗೂ ಪರಿಶುದ್ಧಳೇ ಎಂಬ ಭಾವನೆ ಅವನಲ್ಲಿ ಮೂಡಿರಬಹುದು. ಎಂಥ ಹುಚ್ಚ. ಹೆಣ್ಣಿನ ತಂದೆ, ಹೆಣ್ಣಿನ ಮಗ, ಹೆಣ್ಣಿನ ಗಂಡ. ಆದರೂ ಹೆಣ್ಣನ್ನು ಅರ್ಥಮಾಡಿಕೊಳ್ಳಲಾರದ ಮೂರ್ಖ. ತನ್ನ ಮಗಳಿಗೆ ಗಂಡನನ್ನು ಹುಡುಕುತಿದ್ದಾನಂತೆ. ಅವನ ಅಂಕೆ ಯಲ್ಲಿದ್ದಂತೆ, ಅವನಿಗೆ ನಚ್ಚಿನವಳಾಗಿದ್ದಂತೆ, ಅವನಿಗೆ ಮಗುವಾಗಿದ್ದಂತೆ ಆಕೆ ತಾಯಿಯಾಗುತಿದ್ದಾಳೆ. ಆದರೂ ತನ್ನ ಮಗಳ ಮಾನವನ್ನು ಹೊತ್ತು ಕೊಂಡು, ಮಾನದ ಬಗೆಗೆ ಉಪದೇಶ ಮಾಡುವದನ್ನು ನಿಲ್ಲಿಸಿಲ್ಲ.

ಅಥವಾ ಅವಳ ವ್ಯಾಪಾರ ಮುಚ್ಚಿಡಲು ಇದೂ ಒಂದು ತಂತ್ರವೇ?

ಇರಬಾರದೇಕೆ? ಪತಿವ್ರತೆಯಾಗಿದ್ದವಳು ಆ ಬಗೆಗೆ ಆಡುವುದೇ ಇಲ್ಲ. ಪರಿಶುದ್ಧಳು ಪರಿಶುದ್ಧತೆ ಬಗೆಗೆ ಚಿಂತಿಸುವುದಿಲ್ಲ.

ಹಾಗಿದ್ದರೆ ಈ ಚಿತ್ರರಂಗ ಮಾಸ್ತರ್ ಹೇಳಿದ ಹಾಗೆ "ಸೂಳೆಗೇರಿ" ಯೇ? ಇಲ್ಲಿ ಬಂದ ನಾನು ಸೂಳೆಯಾಗಲೇ ಬೇಕೆ? ಇಲ್ಲವಾದರೆ ಬೇರೆ ದಾರಿ ಇಲ್ಲವೇ? ಒಬ್ಬನನ್ನೇ ನಂಬಿ ಇರುತ್ತೇನೆ ಅಂದರೆ ಅದೂ ಸಾಧ್ಯ

ವಾಗಲಿಲ್ಲ. ಚಿತ್ರರಂಗದ ಪ್ರತಿಯೊಬ್ಬರೂ ಸಾವಿರ ಕತೆಗಳನ್ನು ಅವರ ಬಗೆಗೆ ನನಗೆ ಹೇಳಿದರು – ನಾನು ಅದನ್ನು ನಂಬಿದೆ. ಹಾಗೇ ನನ್ನ ಬಗೆಗೆ ಅವರಿಗೆ ಹೇಳಿರಬಹುದು – ಅದನ್ನು ಅವರು ನಂಬಿದರು. ನಮ್ಮ ದಾರಿ ಬೇರೆ ಬೇರೆಯಾಯಿತು. ಈಗ ಶ್ರೀಕಂಠನ ಬಗೆಗೆ ಏನೇನೋ ಮಾತು ಬರುತ್ತಿದೆ. ಪದ್ಮನಾಭ ಒಂದು ಬಗೆಯಾಗಿ ಹೇಳಿದ. ಇತರರು ಇನ್ನೊಂದು ಬಗೆಯಾಗಿ ಹೇಳಿದರು. ಅವನಿಗೂ ಹಾಗೇ ನನ್ನ ಬಗೆಗೆ ಹೇಳಿರಬಹುದೇನೊ ? ಅದಕ್ಕೆ ಆತ ನನ್ನ ಬಯಕೆ ಈಡೇರಿಸದಾದನೇ ?

ಆದರೂ ವಿವಾಹವಾಗೋಣ ಆ ಬಳಿಕ ಈ ಆಟ ಅಂದನಲ್ಲ !

ನಿಜ ! ನಾನಿನ್ನು ದಾರಿ ತಪ್ಪದಂತೆ ಮಾಡಲೆಂದು ಆತ ಅಷ್ಟು ಮುನ್ನಡೆಯಲೂ ಸಿದ್ಧನಾಗಿರಬಹುದು. ಕೃಷ್ಣನೊಡನೆ ಬಾಳುವೆ ಮಾಡಿದವಳು ; ಅನೇಕ ಬಗೆಯ ಮಾತು ಕೇಳಿದವಳು. ಆದರೂ ಅವನು ಕೈಹಿಡಿಯಲು ಸಿದ್ಧನಾಗಿದ್ದಾನೆ. ನನ್ನ ಸೌಂದರ್ಯಕ್ಕೆ ಆತ ಸೋತಿದ್ದರೆ ಎಂದೋ ಬಯಸುತಿದ್ದ. ನಾ ಬಯಸಿದಾಗಲಂತೂ ಖಂಡಿತ ನಿರಾಕರಿಸುತ್ತಿರಲಿಲ್ಲ. ಆದರೆ, ನನ್ನನ್ನು ಸರಿ ದಾರಿಗೆ ತಿರುಗಿಸಲು ತನ್ನ ಗೌರವದ ತ್ಯಾಗಕ್ಕೂ ಸಿದ್ಧನಾದನೇ ?

ಯೋಚನೆಯಲ್ಲಿ ಕಂಗಾಲಾಗುತ್ತ ಶ್ರೀಕಂಠನ ಬಗೆಗೆ ಮೂಡಿದ ಅತೃಪ್ತಿಯನ್ನು ಮರೆಯುತ್ತ ಅವಳು ನಿದ್ರಿಸಿದಳು.

ಅವಳು ಎಚ್ಚರವಾದಾಗ ಗಂಟೆ ಎಂಟಾಗಿತ್ತು. ಸುಂದರ ಕಾಫಿ ಸಿದ್ಧಪಡಿಸಿ, ಅದು ಆರಿಹೋಯಿತೆಂದು ಪುನಹ ಬಿಸಿ ಮಾಡುತಿದ್ದ. ಅವಳ ಕರೆ ಕೇಳಿ ಕೂಡಲೇ ಕಾಫಿ ತಂದು ಕೊಟ್ಟ. ಕಾಫಿ ಮುಗಿಯುತಿದ್ದಂತೆ ಶ್ರೀಕಂಠ ಕಾಣಿಸಿಕೊಂಡ. ಹಿಂದಿನ ದಿನದ ವಿಚಾರವನ್ನೆಲ್ಲ ಮರೆತವನಂತೆ ನೇರಾಗಿ ಅವಳ ಕೋಣೆಗೇ ನಡೆದು ಮಂಚದ ಬಳಿಯಲ್ಲೇ ಇದ್ದ ಕುರ್ಚಿಯಲ್ಲಿ ಕುಳಿತುಕೊಂಡ.

" ರಾಣಿ ಸಾಹೇಬರು ಇನ್ನೂ ಎದ್ದೇ ಇಲ್ಲ."

" ರಾಜಾ ಸಾಹೇಬರು ಬರಲಿ ಎಂದು ಕಾದಿದ್ದೆ."

" ಹಾಗೇನು. ಬಂದೇ ಬರುತ್ತಾರೆ ; ಇಂದಲ್ಲವಾದರೆ ನಾಳೆ."

" ಮುಖ ತೊಳೆದುಕೊಂಡು ಬರುತ್ತೇನೆ" ಎಂದು ಮಾತು ಬದಲಿಸಿ ಕಲ್ಯಾಣಿ ಹೊರಟಳು. ಸುಂದರ ಇನ್ನೊಂದು ಕಪ್ ಕಾಫಿ ತಂದು ಶ್ರೀಕಂಠನಿಗೆ ಕೊಟ್ಟ.

" ಅಭ್ಯಾಸ ನಡೆಸುತಿದ್ದೀಯಾ ಸುಂದರೂ. ಮಾಸ್ತರ್ ಹೇಳಿಕೊಟ್ಟುದನ್ನಾದರೂ ಮರೆಯದೆ ಇರಿಸಿಕೊಳ್ಳು."

" ಹ್ಞೂ.... ಸಾರ್ "

" ಅವರ ಚಿಂತೆ ಮಾಡುತ್ತ ಬಡವಾಗಬೇಡ. ಅವರು ನಿನ್ನನ್ನು ಮರೆಯುವುದಿಲ್ಲ."

" ನಿಜವೇ ಸಾರ್ "

" ನಿಜ. ತಾವು ಸೇರಿದ ಊರಿನಲ್ಲಿ ಕೆಲದಿನ ಮರೆತುಬಿಡಬಹುದು. ತನ್ನ ಜೀವನದ ವ್ಯವಸ್ಥೆಯಲ್ಲಿ ತೊಡಗಬಹುದು. ಆಮೇಲಾದರೂ ನಿನ್ನನ್ನು ಕರೆಸಿಕೊಳ್ಳುತ್ತಾರೆ."

" ಊಟವಿಲ್ಲದಿದ್ದರೂ ಅವರ ಜತೆಗೇ ಇರುತ್ತೇನೆ ಸಾರ್. ಅವರು ಯಾವ ಊರಲ್ಲಿದ್ದಾರೆ ಎಂಬುದೇ ತಿಳಿಯಲಿಲ್ಲ."

" ತಿಳಿದರೆ" ಎಂದು ಶ್ರೀಕಂಠ ಮುಗುಳುನಗೆ ಬೀರಿದ.

" ಅಲ್ಲಿಗೆ ಹೋಗಿ ಹೋಟೆಲ್ ಕೆಲಸ ಮಾಡಿಕೊಂಡು ಕಲಿಯುತ್ತೇನೆ. ನನಗೆ ದೊರೆಯುವ ಸಂಬಳದಿಂದ ಅವರಿಗೂ ಸಹಾಯ ಮಾಡುತ್ತೇನೆ."

" ಆಗಲಿ.... ಹಾಗೂ ಆದೀತು."

" ಅವರ ಕಾಗದ.... ನಿಮಗೂ ಬಂದಿಲ್ಲವೇ ?"

" ಬಂದಿತ್ತಲ್ಲ."

" ಹೌದು. ಅದು ಇಲ್ಲೇ ರೈಲ್ವೆ ಸ್ಟೇಷನ್‌ನಿಂದ ಬರೆದುದು. ಆ ಮೇಲೆ ?"

" ಅದನ್ನು ಆ ಮೇಲೇ ಹೇಳುತ್ತೇನೆ."

ಸುಂದರನಿಗೆ ಮಾಸ್ತರರ ಪತ್ರ ಬಂದಿದೆ ಎಂದು ತಿಳಿಯುವುದು ಕಷ್ಟವಾಗಲಿಲ್ಲ. ಅವರೆಲ್ಲಿದ್ದಾರೆ ಎಂದು ತಿಳಿಯುತ್ತದೆ, ನಾನೂ ಅಲ್ಲಿಗೆ ಹೋಗುತ್ತೇನೆ ಎಂದಾತ ಹಿಗ್ಗಿದ. ಕಲ್ಯಾಣಿಯ ಇದಿರು ಆ ವಿಚಾರ ತಿಳಿಸಲು ಶ್ರೀಕಂಠ ಹಿಂದಾದನೆಂದೂ ಅವನು ಅರ್ಥ ಮಾಡಿಕೊಂಡ. ಸ್ಟುಡಿಯೋಗೆ

ಹೋಗಿ ಅಲ್ಲೇ ಅವರನ್ನು ಕೇಳೋಣ ಎಂದು ನಿರ್ಧರಿಸಿದ. ಕಲ್ಯಾಣಿ ಮುಖ ತೊಳೆದುಕೊಂಡು, ಸ್ನಾನ ಮುಗಿಸಿ, ಒಳಗಡೆ ನಡೆದಳು. ಸುಂದರ ಅಡುಗೆ ಮನೆಗೆ ನಡೆದ.

ಸೀರೆ ಬದಲಿಸಿ, ಕನ್ನಡಿ, ಬಾಚಣಿಗೆ ಹಿಡಿದುಕೊಂಡು ಕಲ್ಯಾಣಿ ಮಲಗುವ ಕೋಣೆಗೇ ಬಂದಳು. ಅಲ್ಲೇ ಮಂಚದ ಮೇಲೆ ಕುಳಿತುಕೊಂಡು ಶ್ರೀಕಂಠನೊಡನೆ ಮಾತನಾಡುತ್ತ ಹೆರಳು ಹಾಕಿಕೊಳ್ಳಲು ಆರಂಭಿಸಿದಳು.

ಶ್ರೀಕಂಠ ರೇಡಿಯೋ ತಿರುಗಿಸಿ ಆಕಾಶವಾಣಿಯ ಕಡೆಯಿಂದ ಬರುತಿದ್ದ ಸಂಗೀತ ಕೇಳಲು ತೊಡಗಿದ.

ಸುಂದರು ಒಳಬಂದು ಪದ್ಮನಾಭ ಬಂದಿರುವುದನ್ನು ತಿಳಿಸಿದ.

"ಮೂರು ಕಾಫಿ ಮಾಡು. ಹಾಗೇ ಕುಳಿತುಕೊಳ್ಳಲು ಹೇಳು." ಎಂದು ಕಲ್ಯಾಣಿ ಅಪ್ಪಣೆ ಕೊಡಿಸಿದಳು.

ಶ್ರೀಕಂಠ ಹೊರಗಡೆ ನಡೆದು ಪದ್ಮನಾಭ ಕುಳಿತಿದ್ದ ಸೋಫಾದ ಇದಿರಿನ ಕುರ್ಚಿಯಲ್ಲಿ ಕುಳಿತ.

"ನಿಮ್ಮ ಚಿತ್ರದ ಎಡಿಟಿಂಗ್ ಮುಗಿಯಿತಂತೆ."

"ಹೌದು. ಆದರೂ ನೆಗೆಟಿವ್ ತೆಗೆದಿಡುವ ಕೆಲಸ ಇನ್ನೂ ಇದೆ. ಮಿಕ್ಕುದನ್ನು ಎತ್ತಿ ಇಡಬೇಕು ತಾನೆ. ಈ ಸೆನ್ಸಾರ್ ಕಾಟದಲ್ಲಿ ಯಾವು ದಾದರೂ ಭಾಗ ಬೇಡವಾದರೆ."

"ಅದೂ ನಿಜ. ಯಾವಾಗ ರಿಲೀಸ್ ?"

"ಮುಂದಿನ ತಿಂಗಳು. ಥಿಯೇಟರ್ ಗೊತ್ತಾಗಿದೆ. ತಾರೀಕು ಇನ್ನೂ ನಿರ್ಧಾರವಾಗಿಲ್ಲ."

"ಅಂತೂ ಮೊದಲನೆಯ ಚಿತ್ರ ..."

"ನಿಮ್ಮ ಚಿತ್ರದ ಶೂಟಿಂಗ್ ಭರದಿಂದ ಸಾಗುತ್ತಿದೆ; ಇನ್ನೇನು ದೀಪಾವಳಿಗೇ ಸಿದ್ಧವಾಗಬಹುದು."

"ದೀಪಾವಳಿಗೇ ಪ್ರದರ್ಶಿಸಬೇಕೆಂದು ನಿರ್ಧರಿಸಿದ್ದೇವೆ. ನೋಡ ಬೇಕು."

"ಹಾಗೇ ಒಂದೊಂದಾಗಿ ಬರುತ್ತಾ ಇದ್ದರೆ ಕನ್ನಡ ಚಿತ್ರ ನೋಡುವ ಅಭ್ಯಾಸವಾದರೂ ಜನರಲ್ಲಿ ಹುಟ್ಟುತ್ತೆ."

" ನಿಮ್ಮ ಮುಂದಿನ ಯೋಜನೆ ?"

" ಈಗಲೇ ಏನೂ ಇಲ್ಲ. ಈ ಚಿತ್ರದ ಸ್ಥಿತಿ ತಿಳಿದ ಮೇಲೆ, ಹಣ ಕೊಂಚ ಬಂದ ಮೇಲೆ, ಮುಂದಿನ ಯೋಚನೆ ತಾನೆ? ಅಂತೂ ತಯಾರಕರೇನೋ ಚಿತ್ರ ತಯಾರಿಸುತ್ತೇವೆ–ಎಂದುಕೊಳ್ಳುತಿದ್ದಾರೆ."

" ಯುಗಾದಿಗೆ ಪ್ರದರ್ಶನಕ್ಕೆ ಬರುವ ಹಾಗೆ ಇನ್ನೊಂದು ಆರಂಭಿಸಬಹುದು."

ಕಲ್ಯಾಣಿಯೂ ಹೆರಳು ಹಾಕಿಕೊಂಡು, ಹೊರಬಂದು, ಇನ್ನೊಂದು ಸೋಫಾದಲ್ಲಿ ಕುಳಿತಳು. ಏನು ಮಾತನಾಡಬೇಕೆಂದು ತಿಳಿಯದೆ ಅವಳನ್ನೇ ನೋಡುತ್ತ ಪದ್ಮನಾಭ ಕುಳಿತುಕೊಂಡ. ಸುಂದರು ಕಾಫಿ ತಂದಿಟ್ಟ. ಬೀರಿ ಮನೆಗೆಲಸಮಾಡಲು ಪ್ರವೇಶಿಸಿದಳು.

ಚಿತ್ರದ ಶೂಟಿಂಗ್‌ಗಳ ವಿವರದ ಬಗೆಗೆ ಪ್ರಶ್ನಿಸಿ ; ಪದ್ಮನಾಭನನ್ನು ಕಲ್ಯಾಣಿ ಮಾತನಾಡಿಸಿದಳು. ನೃತ್ಯ ಬೇಗನೇ ಸಿದ್ಧವಾಗಬೇಕೆಂದು ಅವನು ವಿನಂತಿಸಿ, ಸೆಟ್ ಇನ್ನು ಒಂದು ವಾರದಲ್ಲಿ ತಯಾರಾಗುತ್ತವೆ–ಎಂದ.

" ನಿಜ ! ಕಲ್ಯಾಣಿ. ನಾಳೆಯಿಂದ ಕಂಪೆನಿಗೆ ಹೋಗಬಾರದೆ ? ಅದರಿಂದ ಬೇಸರವೆಷ್ಟೋ ಕಡಿಮೆಯಾಗುತ್ತದೆ."

" ಹ್ಞಾ ...ಅದೂ ನಿಜ. ನಾಳೆಯಿಂದ ಹಾಗೇ ಮಾಡುತ್ತೇನೆ."

" ಕಲ್ಯಾಣಿಯಿಲ್ಲದೆ ಕಂಪೆನಿ ಮನೆಯಲ್ಲಿ ಕಳೆಯೇ ಇಲ್ಲ" ಎಂದ ಪದ್ಮನಾಭ.

" ನಿಜ. ಅವಳ ಗೆಳತಿಯರಿಗೂ ತುಂಬ ಬೇಸರ."

" ದಿನಾ ಇಲ್ಲೇ ಬಂದು ಪೀಡಿಸುತ್ತಿರುತ್ತಾರೆ " ಎಂದಳು ಕಲ್ಯಾಣಿ.

" ನಾನಿನ್ನು ಬರಲೇ ? ಆ ಫಿಲ್ಮ್ ತುಂಡುಗಳನ್ನೆಲ್ಲ ತೆಗೆದು ಗುರುತು ಹಾಕಿಟ್ಟು, ಡೈರೆಕ್ಟರರಿಗೆ ಒಪ್ಪಿಸಬೇಕು. ಈ ಒಂದು ದಿನ ಕಳೆದರೆ ನನ್ನ ಕೆಲಸ ಮುಗಿಯಿತು."

" ಅಂತೂ ಕಲ್ಯಾಣಿಯ ನೃತ್ಯವನ್ನು ನಾವೆಲ್ಲ ಬೇಗನೇ ನೋಡುತ್ತೇವೆ."

" ಅದೇನು ಹೊಸದು. ದಿನಾ ನಿಮ್ಮ ಕಂಪೆನಿಯಲ್ಲೇ ಕುಣಿಯುತ್ತಿರುತ್ತೇನೆ."

"ಅದು ಬೇರೆ ವಿಚಾರ. ರಜತ ಪರದೆಯ ಮೇಲೆ ನೋಡುವ ವಿಚಾರ ಬೇರೆ."

"ಸರಿ....ಸರಿ...."

ಶ್ರೀಕಂಠ ಎದ್ದು ನಿಂತು ಅಪ್ಪಣೆ ಪಡೆದು ಹೊರಟ. ಪದ್ಮನಾಭ ಮಾತು ಮುಂದುವರಿಸಿ, ಕಲ್ಯಾಣಿಯ ಸೌಂದರ್ಯವನ್ನು ಸವಿಯುತ್ತ ಕುಳಿತು ಕೊಂಡ.

ಏನಿದ್ದರೂ ಆತ ಇತರರ ಬಗೆಗೆ, ಅವಳ ಬಗೆಗೆ, ಚಿತ್ರದ ಬಗೆಗೆ ಮಾತ ನಾಡಬೇಕು. ಸಾಹಿತ್ಯ, ಸಂಸ್ಕೃತಿ, ಸಂಗೀತ, ಕಲೆಗಳ ಗಂಧವೂ ಅವನನ್ನು ಸೋಕಿಲ್ಲ. ವೇದಾಂತ ತಿಳಿಯದು. ರಾಜಕೀಯ ಮರೆತು ಹೋಗಿದೆ. ಆರ್ಥಿಕ ವಿಚಾರ ಅವನಿಗೆ ಹೇಳಲು ಬಾರದ ಅನುಭವ. ಅದಕ್ಕಿಂತ ಹೆಚ್ಚಿಗೆ ಮಾತ ನಾಡಬೇಕಾದರೆ ಅದು ಕಲ್ಯಾಣಿಯ ಕೃಪಾಭಿಲಾಷೆ; ತನ್ನವಳಾದರೆ ತಾನೇನು ಮಾಡುತ್ತೇನೆ ಎಂಬ ಕನಸಿನ ಚಿತ್ರ.

"ಈ ಮನೆ ಖರೀದಿಗೆ ಇದೆಯಂತೆ."

"ಎಷ್ಟು ಹೇಳುತ್ತಾರೊ...."

"ಹನ್ನೆರಡು ಹದಿಮೂರು ಅಂತಾನೆ. ಹತ್ತು ಸಾವಿರಕ್ಕೆ ದೊರೆಯ ಬಹುದು."

"ಸರಿ....ನನಗೇಕೆ ಅದರ ಚಿಂತೆ."

"ನನಗಿದೆ. ಕೊಳ್ಳುವ ನಿರ್ಧಾರ ಮಾಡಿದ್ದೇನೆ."

"ಹಾಗೇನು? ಚೆನ್ನಾಯಿತು. ಆ ಮೇಲೆ ಇಲ್ಲೇ ಬರುತ್ತೀರೇನೋ ಸಂಸಾರ ಸಹಿತ."

"ಅದೇನೂ ಇಲ್ಲ."

"ಕಂಪೆನಿಗಾಗಿಯೋ?"

"ಅಲ್ಲ. ನನಗಾಗಿ."

ಕಲ್ಯಾಣಿ ಮುಂದೆ ಪ್ರಶ್ನಿಸಲಿಲ್ಲ.

ಪದ್ಮನಾಭ ಏನು ಹೇಳಬೇಕೆಂಬುದೇ ತೋರದೆ ಸ್ವಲ್ಪ ಹೊತ್ತು ಸುಮ್ಮನಾದ.

"ಚೆನ್ನಾಗಿದೆಯಲ್ಲವೇ ಮನೆ"

"ಚೆನ್ನಾಗೇ ಇದೆ. ಕೊಳ್ಳಬಹುದು...." ಎಂದು ಕೋಣೆಯೊಳಗಡೆ ನಡೆದು ರೇಡಿಯೋ ತಿರುಗಿಸಿದಳು. ಯಾವುದೋ ಹಿಂದೀ ಹಾಡು ಕೇಳಿಸಿತು.

ಪದ್ಮನಾಭ ತಾನೂ ಒಳಗಡೆ ನಡೆದ. ಅವನೂ ಬಂದುದನ್ನು ಕಂಡು ಕಲ್ಯಾಣಿ ಮಂಚದ ಮೇಲೇ ಕುಳಿತಳು. ಆತ ಹತ್ತಿರದ ಕುರ್ಚಿಯಲ್ಲಿ ಕುಳಿತ.

ಆದುವರೆಗೂ ಹುದುಗಿದ್ದ ಅವನ ಬಯಕೆ, ಮಾತು ಪ್ರಕಟಿತ ವಾಯಿತು.

ಈ ಮನೆ ನಿನ್ನದು. ನೀನು ಕೇಳಿದ್ದು ಕೊಡುತ್ತೇನೆ–ಎಂದು ನೂರು ಆಶೆಗಳನ್ನು ಅವಳ ಮುಂದಿರಿಸಿದ.

"ಆದರೆ, ನೀವೀಗ ಕಟ್ಟಿಕೊಂಡವಳ ಗತಿ."

"ಅವಳು ಇರುತ್ತಾಳೆ. ಅವಳಿಗೆ ಅನ್ಯಾಯ ಮಾಡುವುದಿಲ್ಲ."

"ಅಂದರೆ ನನಗೆ? ಅನ್ಯಾಯವಾಗಬಾರದಲ್ಲ."

"ಆಗುವುದಿಲ್ಲ. ನನ್ನ ಮಕ್ಕಳಾಣೆ."

"ಆಗಲೇ ನಾಲ್ಕು ಮಕ್ಕಳ ತಂದೆ ನೀವು. ಅವುಗಳ ಸುಖಕ್ಕೆ ಅಡ್ಡಿ ಬರಲಾರೆ. ಮನೆಯ ಮಂಗಳಕ್ಕೆ ನಾನು ಕಲ್ಲು ಹಾಕಬಾರದು."

"ಇಲ್ಲ ಕಲ್ಯಾಣಿ. ನಾನು ಅಪ್ಪಣೆ ಪಡೆದಿದ್ದೇನೆ."

"ಅಂಥ ಅಪ್ಪಣೆ ಒಲ್ಲದ ಮನಸ್ಸಿನದು. ಯಾವ ಹೆಣ್ಣೂ ಸವತಿ ಯನ್ನು ಕರೆದುಕೊಳ್ಳಿರೆಂದು ಒಪ್ಪಿಗೆ ಸೂಚಿಸಲಾರಳು."

"ಆಕೆಗೆ ಸದಾ ಅನಾರೋಗ್ಯ. ಹೆತ್ತು ಹೆತ್ತು ಬತ್ತಿ ಹೋಗಿದ್ದಾಳೆ."

"ಸರಿ–ಸರಿ....ಆ ಭಾಗ್ಯ ನನ್ನದಾಗಲಿ ಎಂದೇನೋ ನಿಮ್ಮ ಬಯಕೆ." ಎಂದು ನಗುತ್ತ ಮತ್ತೆ ಗಂಭೀರಳಾಗಿ "ತುಂಬ ಯೋಚಿಸಬೇಕಾದ ವಿಚಾರ." ಎಂದಳು ಕಲ್ಯಾಣಿ.

"ನಾನಂತೂ ಯೋಚಿಸಿದ್ದೇನೆ."

"ನಾನು ಅಲ್ಲವೆನ್ನಲಾರೆ. ಹಾಗೆ ದಾರಿ ತಪ್ಪಲಾರೆನೆಂಬ ಧೈರ್ಯವೂ ನನಗಿಲ್ಲ. ಆದರೂ ನಿರ್ಧರಿಸುವ ಮೊದಲು ಯೋಚಿಸಬೇಕಾಗಿದೆ."

"ಯೋಚಿಸು. ಬೇಡವೆನ್ನಲಾರೆ. ಆದರೆ ಬೇಡಿಕೆ ನಿರಾಕರಿಸಬೇಡ."

ದೀನ ದೃಷ್ಟಿಯನ್ನು ಬೀರಿ ಪದ್ಮನಾಭ ಅವಳ ಮುಂದೆ ಕುಳಿತು ತನ್ನ ಸಂಸಾರದ ದುಃಖದ ಕತೆಯನ್ನು ಏನೇನೋ ಹೇಳಿದ. ಅವನ ಪರಿಸ್ಥಿತಿ, ವಿನಯ, ಬೇಡಿಕೆಗಳನ್ನು ಕಂಡು ಕಲ್ಯಾಣಿ ಅಧೀರಳಾಗುತಿದ್ದಳು. ಹಾಗೇ ಜುಗುಪ್ಸೆ ಹೊಂದುತ್ತಲೂ ಇದ್ದಳು. ಒಮ್ಮೆ ಕಟ್ಟಿಕೊಂಡಾಯಿತು. ಅದು ಬಿಟ್ಟೂ ಹೋಯಿತು. ಇನ್ನೇಕೆ ಈ ಕಟ್ಟು ಎಂಬ ಯೋಚನೆಯೂ ಅವಳಲ್ಲಿ ಮೂಡುತಿತ್ತು. ಆದರೂ, ಯಾರಾದರೊಬ್ಬ ಗಂಡಸು ಬೇಕು, ಅವನಿಲ್ಲವಾದರೆ ಸುಖವಿಲ್ಲ ಎಂಬ ಅರಿವು ಮೂಡಿ ಅವಳ ಗಮನ ಪದ್ಮನಾಭ ನೆಡೆಗೂ, ಶ್ರೀಕಂಠನೆಡೆಗೂ ಸರಿಯುತಿತ್ತು.

ಪದ್ಮನಾಭ ಚಿತ್ರ ತಯಾರಕ, ಹಣವೂ ಇವೆ, ದೀನ ದಾಸನಂತೆ ವರ್ತಿಸುತ್ತಾನೆ. ತನ್ನ ಕೈ ಹಿಡಿದಾಕೆಯನ್ನೂ ದೂರ ನಿಲ್ಲಿಸಿ, ಇತ್ತ ಬರಲು ಸಿದ್ಧವಾಗಿದ್ದಾನೆ.

ಶ್ರೀಕಂಠ ಸಾಹಿತಿ, ಕಲಾಪ್ರೇಮಿ. ವಿಚಾರವಂತ, ಸರಸ್ವತೀ ಪುತ್ರ. ಅವನ ಬಗೆಗೆ ಜನತೆಯಲ್ಲಿ ಅಭಿಮಾನವಿದೆ, ಕೀರ್ತಿಯಿದೆ, ಗೌರವವಿದೆ. ಅದರೆ ಹಣವಿಲ್ಲ.

ಯಾರು ಬೇಕು–ಯಾರು ಸರಿ ?

ಕಲ್ಯಾಣಿಯ ಯೋಚನೆ ಈ ಕಡೆಗೇ ತಿರುಗಿತು.

## ೨೩

ನಾಟ್ಯ ರಾಣಿಯಾಗಿ ಪವಿತ್ರವಾದ ಜೀವನ ನಡೆಸಿದ್ದೇನೆ. ಈ ದಾರಿ ತುಳಿಯುವುದು ಕನಸಿನಲ್ಲೂ ನೆನಸಿರಲಿಲ್ಲ. ಆದರೂ ಆ ಹೊಸತನ್ನು ಬಯಸಿ, ಆ ದಾರಿ ಹಿಡಿದು, ಕೃಷ್ಣನನ್ನೇ ಒಲಿದು, ನಾವಿಬ್ಬರೂ ಒಂದಾದೆವು.

ಎಂದೂ ಒಬ್ಬರನ್ನೊಬ್ಬರು ಅಗಲುವುದಿಲ್ಲ. ಜತೆಯಾಗಿ ಈ ಜಗತ್ತಿನಲ್ಲಿ ಮುನ್ನಡೆಯೋಣ. ಎಂದೆಂದಿಗೂ ನಾವಿಬ್ಬರೂ ಒಂದಾಗಿ ಬಾಳೋಣ ಎಂದು ಆತ ತಂಬೂರಿಯ ಮೇಲೆ ಆಣೆ ಇಟ್ಟು ಹೇಳಿದ. ನಾನು ಗೆಜ್ಜೆಯ ಮೇಲೆ ಆಣೆ ಇಟ್ಟೆ. ಆದರೂ ನಮ್ಮ ಆಣೆಯ ಆಣೆಕಟ್ಟು ನಿರ್ಧಾರದ ಕೋಟೆ ಬಿರಿಯಿತು.

ಎಂದೆಂದಿಗೂ ನನ್ನವನೆಂದು ನಂಬಿದವನೇ ನನ್ನಿಂದ ದೂರವಾದ.

ಎಂದೆಂದಿಗೂ ಅಪರ ಮಾರ್ಗ ತುಳಿಯಲಾರೆ ಎಂದವಳೇ ಇಂದು ಆ ದಾರಿ ತುಳಿಯಬೇಕಾಗಿದೆ.

ಈ ದಾರಿ ತುಳಿಯದಿದ್ದರೆ?

ಬಾಳು ನರಕವಾಗುವುದು. ಯವ್ವನವೇ ಹಾಳಾಗ್ಗುವುದು. ಅಂಥ ಜೀವನ ನಡೆಸಬೇಕಾದಲ್ಲಿ ಇಲ್ಲಿಗೇಕೆ ಬರಬೇಕು? ಕಲಾಮಂಡಲವೇ ಇದೆ. ಈ ಜೀವನ ಯಾವ ಸುಖವನ್ನು ಅರಸಿ ಬಂತೋ ಅದು ಒಂದು ವರುಷವೂ ಪೂರ್ಣ ದೊರೆಯಲಿಲ್ಲ. ಇನ್ನೂ ಉಳಿದಿದೆ ಬಾಳು! ಇದನ್ನು ಬರಡು ಮಾಡಲಾರೆ! ಯಾರನ್ನಾದರೂ ಈ ಬಳ್ಳಿ ಅಪ್ಪಿಕೊಳ್ಳಲೇಬೇಕು. ಇಲ್ಲವಾದರೆ ನೆಲದ ಮೇಲೆ ಹರಿದು, ಹಸುಗಳ ದಾರಿಗರ ಕಾಲಡಿಗೆ ಬಿದ್ದು, ಹುಡಿಯಾದೀತು. ದಾರಿ ತಪ್ಪಬಾರದಿತ್ತು; ಕಲಾಮಂಡಲ ಬಿಡಬಾರದಿತ್ತು. ಸುಖವನ್ನು ಸ್ವಾತಂತ್ರ್ಯವನ್ನು ಬಯಸಿ ಬಂದಾಯಿತು. ಇನ್ನು ಸುಖ, ಸ್ವಾತಂತ್ರ್ಯಗಳನ್ನೇ ಮರೆಯುವುದು ಸಾಧ್ಯವಿಲ್ಲ. ವರುಷಗಟ್ಟಲೆ ಹೆಣ್ಣುತನದ ಸುಖದ ಕನಸು ಕಂಡಿದ್ದೇನೆ; ಈಗ ಅದು ಕೈಗೆ ದೊರೆತಿದೆ; ಅದನ್ನುಳಿಯಲಾರೆ.

ಸುಖ ಬೇಕು.

ಸ್ವಾತಂತ್ರ್ಯ ಬೇಕು.

ಈ ಎರಡು ಉಳಿಯುವಷ್ಟು ಧನವೂ ಬೇಕು.

ಶ್ರೀಕಂಠ ನನ್ನನ್ನು ಅರ್ಥಮಾಡಿಕೊಂಡಿದ್ದಾನೆ. ಅವನಲ್ಲಿ ಮನಸೆಳೆವ ಸಂಸ್ಕೃತಿಯಿದೆ. ಆದರೆ, ಅವನನ್ನು ಹಿಡಿದುಕೊಂಡರೆ – ಈ ಕಂಪೆನಿಯ ಕೆಲಸವೂ ಇಷ್ಟರಲ್ಲೇ ಮುಗಿಯಬಹುದು. ಕೊನೆವರೆಗೆ ನಿಂತರೂ ಮುಂದೆ ದೊರೆತೀತೆ? ಸಾವಿರ ಸಾವಿರ ಕಾಲಡಿಗೆ ಸುರಿಯುವವರು ಆಗ ಎಲ್ಲೋ ಮಾಯವಾಗುತ್ತಾರೆ. ನಾನೂ ಕಲಾಶಾಲೆ ಇರಿಸಿಕೊಂಡು ಬಾಳಬೇಕಾದೀತು. ಇಂದಿನ ಕೀರ್ತಿ, ಗೌರವ ಎಲ್ಲವನ್ನೂ ಬಿಟ್ಟು ಬಿಡಲೇ? ಚಿತ್ರರಂಗದಲ್ಲಿ ಆಕಸ್ಮಿಕವಾಗಿ ದೊರೆತ ಉನ್ನತ ಪೀಠವನ್ನುಳಿದು ಮೂರ್ಖಳಾಗಲೇ?

ಅದು ಸಾಧ್ಯವಿಲ್ಲ. ಪ್ರೇಮಕ್ಕಾಗಿ, ಬಂದುದೆಲ್ಲ ಬರಲಿ, ಉಪವಾಸವೇ ಬಾಳಿನ ಉಡುಗೊರೆಯಾಗಲಿ, ಅನುಭವಿಸುತ್ತೇನೆ ಎಂದುಕೊಂಡು ಕಲಾ

ಮಂಡಲವನ್ನು ಬಿಟ್ಟಿ. ಇಲ್ಲಿ ಕಲಾ ಶಾಲೆ ನಡೆಸಿಕೊಂಡು ಬಾಳಿದ್ದರೆ, ಒಂದೆರಡು ನೂರು ಸಂಪಾದಿಸಿ ಇಬ್ಬರೂ ಜೀವನ ನಿರ್ವಹಿಸುತಿದ್ದೆವು. ಆದರೆ ಆ ಸ್ಥಿತಿ ಒದಗಲಿಲ್ಲ. ಚಿತ್ರಪ್ರಪಂಚ ಒಮ್ಮೆಂದೊಮ್ಮೆ ಪಟ್ಟವನ್ನೇ ಕಟ್ಟಿತು. ಅವರೂ ಹೊರಟು ಹೋದರು.

ಈಗ ಆ ಪ್ರೇಮವನ್ನು ಬಯಸುವವರಿಲ್ಲ. ಅದನ್ನು ಅರ್ಪಿಸಲು ಯಾರೂ ಇಲ್ಲಿಲ್ಲ.

ಶ್ರೀಕಂಠನಿಗೆ ಅರ್ಪಿಸಬಹುದು.

ಆದರೆ ಪ್ರತಿಫಲ, ದೇವರ ತಲೆಯ ಹೂವು, ತೀರ್ಥ, ಅರ್ಧಕಳಿತ ಹಣ್ಣು-ಕಾಯಿ!

ಆ ಬಡತನವೇಕೆ ಬೇಕು?

ಸುಖವಾಗಿ ಬಾಳುತ್ತೇನೆ; ಮೆರೆಯುತ್ತೇನೆ; ಹಣದ ಚೆಲ್ಲಾಟವಾಡಿ ನಲಿಯುತ್ತೇನೆ.

ಹೇಗೆ - ಹೇಗೆ?

ಪದ್ಮನಾಭನನ್ನು ಸೇರಿದರೆ?

ಮನೆ ನನ್ನದಾಗಿ ಕೊನೆಯ ಗಳಿಗೆಗಾದರೂ ಆಸರೆಯು ದೊರೆಯ ಬಹುದು.

ಕೇಳಿದ್ದನ್ನು ಕೊಡಬಹುದು.

ಚಿತ್ರಗಳಲ್ಲಿ ಮುಂದೆಯೂ ಅಭಿನಯಿಸಬಹುದು.

ಚಿತ್ರಗಳಲ್ಲಿ ಅಭಿನಯಿಸಿ ಒಬ್ಬರು ದೂರವಾದರು.

ಮುಂದೆ ಶ್ರೀಕಂಠನೂ ದೂರವಾಗಬಹುದು.

ಹೀಗಾದರೆ ವರುಷಕ್ಕೊಬ್ಬನಾಗುತ್ತಾನೆ.

ಪದ್ಮನಾಭ ಮುಂದೆ ಚಿತ್ರ ತಯಾರಿಸಬಹುದು. ಅದರಿಂದಾಗಿ ಆತ ನನ್ನಿಂದ ದೂರವಾಗುವಂತಿಲ್ಲ.

ವಿಲಾಸ, ವಿಹಾರ, ಕೀರ್ತಿ-ಎಲ್ಲವೂ ನನ್ನದು!

ಆದರೆ ಕಲೆ?

ನೃತ್ಯಕಲೆ ಅಳಿಯಬಹುದು. ಮಾನಸಿಕ ಬೆಳವಣಿಗೆ ಹಿಂಗಬಹುದು.

ಹೆರುವ ಯಂತ್ರವಾಗಬಹುದು. ಕಾಮಕೇಳಿಯು ಪೀಠವಾದೀತು ಈ ಸುಂದರ ದೇಹ!

ನಿಜ! ದೇಹವಿಲ್ಲದ ಮನವೇಕೆ. ಹಣವಿಲ್ಲದ ಬಾಳೇಕೆ?

ಕಲ್ಯಾಣಿ ನಾನಾರೀತಿಯಾಗಿ ಯೋಚಿಸಿದಳು. ಅವಳಿಗೆ ಯೋಚಿಸಿದಂತೆಲ್ಲ ತಲೆಬೇನೆ ಬಂತು. ದಾರಿ ಕಾಣದಾಯಿತು.

ಸುಂದರನನ್ನು ಮಾರ್ಕೆಟಿಗೆ ಕಳುಹಿಸಿ ಬೀರಿಯೊಡನೆ ವಿಚಾರ ಮಾಡಿದಳು.

ಬೀರಿ ಮಾತ್ರ ಈ ಕಟ್ಟಿಕೊಳ್ಳುವ ಯೋಚನೆ ಒಪ್ಪಲಿಲ್ಲ. ಅವಳಿಗೆ ಸಂದೇಹ; ತನ್ನ ಜೀವನದ ದಾರಿಗೇ ಇದು ಅಡ್ಡಗಲ್ಲೆಂಬ ಭೀತಿ. ಆದರೂ ನಿರಾಕರಿಸುವ–ಧೈರ್ಯವಿಲ್ಲ. ಇನ್ನೂ ಯೋಚಿಸೋಣ, ನಾಲ್ಕು ತಿಂಗಳು ಕಳೆಯಲಿ–ಆ ಬಳಿಕ ಕಟ್ಟಿಕೊಳ್ಳುವ ಮಾತು, ಎಂದು ಬುದ್ಧಿ ಹೇಳಿದಳು.

"ತಗಲಿದರೆ ಚಿಂತೆಯಿಲ್ಲ; ಅಂಟಿಕೊಳ್ಳಬಾರದು. ಒಮ್ಮೆ ಅಂಟಿಕೊಂಡರೆ ಮುಂದೆ ಬಿಡುಗಡೆ ಕಠಿಣ. ಪುನಹ ದುಃಖಕ್ಕೆ ಕಾರಣವಾದೀತು" ಎಂದಳು ಬೀರಿ.

"ನಿಜ ಬೀರಿ. ಆದರೆ ಈ ಜೀವಕ್ಕೆ ಸುಖ ಬೇಡವೇ?"

"ಅದು ದೊರೆಯುತ್ತದೆ. ಬಯಸಿದಾಗಲೆಲ್ಲ ದೊರೆಯುತ್ತದೆ."

"ಅಂದರೆ ಸನ್ಯಾಸಿಯಾಗಿರಲೇ?"

"ಯಾಕಿರಬೇಕು. ಅದು ಕೂಡದು. ಹುಚ್ಚು ಹಿಡಿದೀತು."

"ನಿಜವೇ?"

"ಯುವ್ವನೆಯರು ಸುಖಪಡದೆ ಸುಮ್ಮನಿದ್ದು ಆ ಬಗೆಗೆ ಯೋಚಿಸಿದರೆ ಹುಚ್ಚು ಹಿಡಿಯುತ್ತಂತೆ."

"ನನಗೂ ಹಿಡಿಯುತ್ತಲಿದೆ."

"ಹಾಗಾಗಲಾರದು. ನಾನಿರುವವರೆಗೆ."

"ದಾರಿ...."

"ನನಗೆ ತಿಳಿದಿದೆ. ಈಗ ಅವಸರಮಾಡಿ ಪದ್ಮನಾಭನ ಕೈಗೆ ಬಿದ್ದರೆ ಅನರ್ಥವಾದೀತು."

"ಅಂದರೆ"

" ಅವನು ಕೊಟ್ಟ ಭರವಸೆ ಮರೆತಾನು. ಅವನ ಸಂಸಾರ ಅಡ್ಡ ಬಂತೆಂದು ಬೇಕಾದಂತೆ ಸುಖಿಸಿ ಕೈಬಿಟ್ಟಾನು."

" ನಿಜ. ಮತ್ತೇನುಮಾಡಲಿ ಬೀರಿ."

" ನನ್ನ ಮಾತು ಕೇಳುತ್ತೀರಾ ?"

" ನೀನೇ ಈಗ ದಾರಿ."

" ನಾನಂದಂತೆ ಕೇಳಿದರೆ ಸಾಕು. ನಿಮಗೆ ಎಲ್ಲವೂ ದೊರೆಯುತ್ತದೆ. ಸುಖವಾಗಿರುತ್ತೀರಿ. ಈ ಕಾಮಣ್ಣಗಳ ಕಾಟವೂ ಕಡಿಮೆಯಾಗುತ್ತದೆ."

" ತಿಳಿದಂತೆ ಮಾಡು."

" ಹಾಗಿದ್ದರೆ ತೆಗೆದುಕೊಳ್ಳಿ " ಬೀರಿ ಕವಾಟನ ಬಾಗಿಲು ತೆಗೆದು ಒಂದಿಷ್ಟು ಪಾನೀಯವಿತ್ತಳು. ಅದನ್ನು ಕುಡಿಯುತ್ತಿದ್ದಂತೆ ಬೀರಿ ಹೇಳಿದಳು. " ಬಯಕೆಯಾದಾಗ ಒಂದು ಮಾತು ಹೇಳಿ. ಸಾವಿರ ಉರುಳಿಸುತ್ತೇನೆ."

ಕಲ್ಯಾಣಿ ಮಾತನಾಡಲಿಲ್ಲ. ಅವಳಿಗೆ ಬೀರಿಯನ್ನು ತಬ್ಬಿ ಮುತ್ತಿಡೋಣವೆಂಬಂತಾಯಿತು. ಹಾಗೇ ಎದ್ದು ನಿಂತು ಕನ್ನಡಿ ನೋಡಿ, ಎದೆಯ ಸೆರಗು ಸರಿಸಿ, ತನ್ನನ್ನು ತಾನೇ ನೋಡಿಕೊಂಡು ಹರ್ಷಿತಳಾದಳು.

ನಿಧಾನಿಸಬೇಕು.

ಈ ರಂಗಕ್ಕೆ ಕಾಲಿಟ್ಟಿದ್ದೇನೆ. ಇಲ್ಲೇ ಗಟ್ಟಿಯಾಗಿ ನಿಲ್ಲುವ ಯತ್ನ ಮಾಡಬೇಕು.

ಸಾಧ್ಯವಾದಷ್ಟು ಹಣ ಕೂಡಿಸಿ ಬದುಕಬೇಕು. ಈ ಯವ್ವನ, ಸೌಂದರ್ಯ ಅಳಿದ ಬಳಿಕ ಬೀದಿಯ ಪಾಲಾಗಬಾರದು.

ಬೀರಿಯ ಮಾತು ಅನುಭವದ ರಸಪಾಕ – ಎಂದು ಕಲ್ಯಾಣಿ ನಿರ್ಧರಿಸಿದಳು.

ಶ್ರೀಕಂಠ ತನ್ನ ಕೆಲಸ ಮುಗಿದುದರಿಂದ ಮೈಸೂರು ಬಿಡಲು ನಿರ್ಧರಿಸಿದ. ಕಲ್ಯಾಣಿ ಅವನನ್ನು ಸತ್ಕರಿಸಿ, ಆದರಿಸಿ, ಬೀಳ್ಕೊಟ್ಟಳು. ಇನ್ನೂ ನಾನು ನಿನ್ನವಳು ಎಂಬಂತೆ ತೋರಿಕೊಟ್ಟಳು. ಆದರೂ ಆತ ಅವಳ ಸೌಂದರ್ಯಕ್ಕೆ ಸೋತು ದೇಹ ಬಯಸಲಿಲ್ಲ. ಕಲೆಗೆ ಮಾತ್ರ ತಲೆದೂಗಿದ್ದ. ತನಗೆ ತಿಳಿದುದನ್ನೆಲ್ಲ ಹೇಳಿ, ಎಚ್ಚರಿಕೆ ನೀಡಿದ.

ಸುಂದರ ಅವನಿಂದ ಕೃಷ್ಣನ ವಿಚಾರ ತಿಳಿದು ಹೊರಡಲು ಸಿದ್ಧನಾದ.

"ಈಗ ಹೊರಡಬೇಡ. ಇಲ್ಲೇ ಇರು. ಹೊರಡಲೇ ಬೇಕಾದಾಗ ಹೊರಡು" ಎಂದು ಸಮಾಧಾನ ಹೇಳಿ ಅವನ ತುರುತನ್ನು ಶ್ರೀಕಂಠ ತಡೆದ.

ಕಲ್ಯಾಣಿಯು ಅವನನ್ನು ಹೋಗಬಾರದೆಂದು ಕೇಳಿಕೊಂಡಳು. ಅವನಿಗೆ ಇನ್ನೊಂದು ಜತೆ ಉಡುಗೆ ಮಾಡಿಸಿ ಕೊಟ್ಟಳು.

ಶ್ರೀಕಂಠ ಮೈಸೂರಿಂದ ಮರೆಯಾದುದನ್ನು ಕೇಳಿ ಪದ್ಮನಾಭ ಉಬ್ಬಿದ. ಅವನಿಗೆ ಎಲ್ಲಿಲ್ಲದ ಆನಂದವಾಯಿತು. ಬಿಡುವಾದಾಗಲೆಲ್ಲ ಕಲ್ಯಾಣಿಯ ಬಳಿಯಲ್ಲೇ ಆತ ಕಾಲ ಕಳೆಯುತಿದ್ದ. ದಿನ ಬೆಳಗಾದರೆ ಅವಳ ಮನೆ. ಅವಳು ಕಂಪೆನಿಗೆ ಬರುವುದೂ ಅಲ್ಲಿಂದ ಹಿಂತಿರುಗುವುದೂ ಅವನ ಕಾರಿನಲ್ಲೇ ಆಯಿತು. ಸದಾಕಾಲವೂ ಅವನ ಕಾರು ಅವಳ ಮನೆಯ ಮುಂದೆ ಗಂಟೆಗಳ ಕಾಲ ನಿಲ್ಲುತಿತ್ತು.

ಬೀರಿ ತನ್ನ ಜಾಣ್ಮೆಯನ್ನು ಪ್ರದರ್ಶಿಸಿದಳು. ಪದ್ಮನಾಭನಿಗೆ ಧೈರ್ಯ ಹೇಳಿದಳು. ದಾರಿ ತೋರಿಸಿ ಅವನಿಂದ ಕಾಸು ಕಿತ್ತುಕೊಂಡಳು.

ಸೀರೆಗಳು ಬಂದುವು. ಹಾಗೇ ಸಾವಿರ ಬಂತು, ಎರಡು ಸಾವಿರವಾಯಿತು, ಮೂರೂ ಆಯಿತು. ಮಾತನಾಡುತ್ತ ಪದ್ಮನಾಭ ಮುಂದುವರಿಸಿದ. ಕಲ್ಯಾಣಿ ಬೇಡವೆನ್ನಲಿಲ್ಲ.

ಆದರೂ ಬೀರಿಯ ಉಪದೇಶ ಅವಳಿಗೆ ಎಚ್ಚರಿಕೆ ನೀಡುತಿತ್ತು. ಇಂದು ಕಲ್ಯಾಣಿ ಅವನ ದಾಸಿ. ನಾಳೆ ಅವನು ಕೈನೀಡಿದರೆ ನಿರಾಕರಣೆ!

ಮನೆ ಅವಳ ಹೆಸರಿಗೆ ಬಂತು.

ಪದ್ಮನಾಭ ಕಲ್ಯಾಣಿಯನ್ನು ತನ್ನವಳಾಗಿ ಮಾಡಿಕೊಂಡ.

ಕಲ್ಯಾಣಿ ಮಾತ್ರ ಪೂರ್ಣವಾಗಿ ಅವನ ಪ್ರೇಯಸಿಯಾಗಲಿಲ್ಲ. "ತಡೆಯಿರಿ – ತಾಳಿರಿ" ಎಂಬುದೇ ಅವಳ ಮಂತ್ರವಾಯಿತು. "ಹೀಗೇ ಸಾಗಲಿ – ನಾನು ಬೇಡವೆಂದೆನೇ" ಇದು ಉತ್ತರವಾಯಿತು. "ನಿಮಗೆ ಬೇಕಾದುದು ದೊರೆತಾಯಿತು. ಇನ್ನೇಕೆ ಅವಸರ" ಎಂದು ಬೀರಿಯು ಹೇಳಿದಳು.

ಈ ಸುಂದರಿ ಕೈ ತಪ್ಪಿದರೆ? ಇವಳು ಎಂದೆಂದೂ ನನ್ನವಳೇ ಆಗಬೇಕು – ಎಂಬುದು ಪದ್ಮನಾಭನ ಬಯಕೆ.

ಬಬ್ರುವಾಹನ ಚಿತ್ರ ಅಷ್ಟೊಂದು ಯಶಸ್ವಿಯಾಗಲಿಲ್ಲ. ನಾಟಕೀಯ ಅಭಿನಯ, ವಿನೋದದ ಹೆಸರಲ್ಲಿ ನಗಿಸುತ್ತೇವೆ ಎಂದುಕೊಂಡು ತಾವೇ ನಗುವ ಹಾಸ್ಯಗಾರರ ಅಪಹಾಸ್ಯ, ತಮಿಳು ಚಿತ್ರಗಳಲ್ಲಿ ಕಾಣುವ ವೇಷ ಭೂಷಣಗಳು, ಇವೆಲ್ಲವುಗಳೂ ಟೀಕೆಗಳನ್ನು ತಂದುವು. ಆದರೆ ಕಲ್ಯಾಣಿಯ ನೃತ್ಯದ ಬಗೆಗೆ ಎಲ್ಲ ಪತ್ರಿಕೆಗಳೂ ಹೊಗಳಿದುವು. ಅವಳು ಕನ್ನಡ ಚಿತ್ರ ರಂಗದ ರತ್ನವೆಂದು ಕೊಂಡಾಡಿದುವು. ಕಥೆ ಮತ್ತು ಮಾತುಗಳ ಬಗೆಗೆ ಪತ್ರಿಕೆಗಳು ಪ್ರಶಂಸಿದುವು. ಆದರೂ ಚಿತ್ರದಿಂದ ತಯಾರಕರಿಗೆ ನಷ್ಟ ವಾಗಲಿಲ್ಲ.

ಕಲ್ಯಾಣಿ ತಾನು ಎಲ್ಲರಿಗೂ ಹೆಚ್ಚು, ತನ್ನ ಸ್ಥಾನ ಭದ್ರವಾಯಿತು ಎಂದು ಹಿಗ್ಗಿದಳು.

ಪ್ರಹ್ಲಾದ ಚಿತ್ರದ ಶೂಟಿಂಗ್ ಭರದಿಂದ ಸಾಗಿತು. ಕಲ್ಯಾಣಿ ಬಿಡು ವಿಲ್ಲದೆ ದುಡಿದಳು. ಶೂಟಿಂಗ್, ನೃತ್ಯ ಶಿಕ್ಷಣ, ಪದ್ಮನಾಭನ ಸಹವಾಸ ಗಳಿಂದ ಪಾನೀಯವಿಲ್ಲದೆ ಇರುವುದೇ ಸಾಧ್ಯವಾಗಲಿಲ್ಲ ಅವಳಿಗೆ. ಅವಳು ಬಳಲಿದಳು, ಸ್ಟುಡಿಯೋ ದೀಪಗಳಿಗೆ ಬೆಂದಳು, ಪಾನೀಯವೇ ಅವಳ ಸೋತ ನರಗಳಿಗೆ ಶಕ್ತಿ ನೀಡುವ ಸಾಧನವಾಯಿತು.

ಅವಳ ವಿಚಿತ್ರ ಜೀವನದಿಂದ ಸುಂದರ ಬೇಸರಗೊಂಡು ಹೊರಡಲು ನಿರ್ಧರ ಮಾಡಿಕೊಂಡೇ ಕಾಲ ದೂಡುತಿದ್ದ.

ಪದ್ಮನಾಭ ಮಾತನಾಡುತ್ತಾನೆ, ಹೋಗುತ್ತಾನೆ ಎಂಬುದು ಆತ ತಿಳಿದಿದ್ದ.

ಈಗ ಅವನನ್ನೇ ಕೇಳಿ ಪರಿಹಾಸ್ಯ ಮಾಡುವವರೂ ಹುಟ್ಟಿಕೊಂಡರು. ನಾನೂ ಬರಲೇ ಎಂದು ಕೆಲವರು ಅವನನ್ನು ಕೆಣಕಿದರು.

ಸತ್ಯ ತಿಳಿಯುಲು ಅವನು ಕಾತರನಾದ.

ಆ ದಿನ ಶೂಟಿಂಗ್ ಇರಲಿಲ್ಲ.

ಕಂಪೆನಿ ಮನೆಯಿಂದ ಕಲ್ಯಾಣಿಯನ್ನು ಕರೆದು ತಂದ ಪದ್ಮನಾಭ ಹರಟೆ ಹೊಡೆಯುತ್ತ ಗಂಟೆ ಒಂಭತ್ತಾದರೂ ಹೊರಟಿರಲಿಲ್ಲ.

ಸುಂದರು ನಿದ್ರೆಗೆ ಬಲಿಯಾದ.

ಹನ್ನೊಂದು ಘಂಟೆಗೆ ಅವನಿಗೆ ಫಕ್ಕನೆ ಎಚ್ಚರವಾಯಿತು. ಎದ್ದು ಹೊರಬಂದ. ಕಲ್ಯಾಣಿಯ ಕೋಣೆಯಲ್ಲಿ ಹಸುರು ದೀಪ ಉರಿಯುತ್ತಿತ್ತು. ಬಾಗಿಲು ಅರೆ ತೆರೆದಿತ್ತು. ಹಾಗೇ ಬೆಕ್ಕಿನ ಹೆಜ್ಜೆ ಇರಿಸಿ ಆತ ಬಾಗಿಲ ಬಳಿ ನಡೆದು ಸಂದಿನಿಂದ ಇಣಿಕಿದ.

ಕಲ್ಯಾಣಿ ಮಲಗಿದ್ದಾಳೆ. ಅವಳ ಕಾಲುಗಳ ಮೇಲೆ ಬಟ್ಟೆ ಇಲ್ಲ.

ನಿಜ – ಮತ್ತೆರಡು ಕಾಲುಗಳೂ ಕಾಣಿಸುತ್ತವೆ.

ಅಲ್ಲಿಂದ ದೂರ ಸರಿದು ಸುಂದರ, ಚಾವಡಿಯ ಬಾಗಿಲಿನ ಕೀಲಿಯನ್ನು ನಿಧಾನವಾಗಿ ತೆಗೆದು ಬಾಗಿಲು ತೆರೆದ. ಬೀದಿಯ ಬಳಿ ನಡೆದ. ಕಾರು ಅಲ್ಲೇ ಇದೆ; ಪದ್ಮನಾಭನ ಕಾರು.

ಒಮ್ಮೆಂದೊಮ್ಮೆ ಕಿರಿಚಿಕೊಳ್ಳೋಣ ಅನ್ನುವಂತಾಯಿತು ಅವನಿಗೆ.

ಆದರೂ ಧೈರ್ಯ ತಂದುಕೊಂಡು ಮನೆಯೊಳಕ್ಕೆ ಬಂದ. ಚಾವಡಿಯ ಬಾಗಿಲು ಹಾಕಿ, ಹಾಲ್‌ನೊಳಗೆ ನಡೆದು, ಅದರ ಬಾಗಿಲನ್ನು ಹಾಕಿದ.

ಅವನಿಗೆ ಮುಂದೆ ನಿದ್ದೆ ಬರಲಿಲ್ಲ.

ಗಂಟೆ ಹನ್ನೆರಡು ಬಾರಿಸಿತು.

ಪದ್ಮನಾಭ ಎದ್ದು ಕೋಣೆಯಿಂದ ಹೊರಬಿದ್ದುದು ಕೇಳಿಸಿತು. ಬಳೆಗಳ ಸದ್ದು – ಕಲ್ಯಾಣಿ ಚಾವಡಿಗೆ ಬಂದು ಚಾವಡಿಯ ಬಾಗಿಲು ಹಾಕಿದುದನ್ನು ಸೂಚಿಸಿತು. ಕಾರು ಸದ್ದುಮಾಡಿತು – ಹೊರಟುಹೋಯಿತು.

ಸುಂದರ ಉಸಿರು ಬಿಗಿ ಹಿಡಿದು ಕುಳಿತುಕೊಂಡ.

ಅರ್ಧ ತಾಸು ಕಳೆಯಿತು. ಹಾಲ್‌ನ ದೀಪ ಉರಿಸಿದ.

ತನ್ನ ಬಟ್ಟೆಬರೆಗಳನ್ನು ಚೀಲದಲ್ಲಿ ತುಂಬಿಕೊಂಡು ಹೊರಡಲು ಸಿದ್ಧತೆ ಮಾಡಿದ.

ನಿದ್ರೆ ಬರಲಿಲ್ಲ ಅವನಿಗೆ. ಕುಳಿತುಕೊಂಡು ಗಂಟೆಗಳನ್ನೇ ಎಣಿಸುತ್ತಿದ್ದ. ಹಾಗೇ ಜೊಂಪು ಹತ್ತಿತು. ನಾಲ್ಕು ಗಂಟೆ ಬಾರಿಸಿದ್ದು ಕುಳಿತಲ್ಲೇ ತಲೆದೂಗುತ್ತಿದ್ದ ಸುಂದರನಿಗೆ ಕೇಳಿಸಿತು.

ಏನಾದರೂ ಬರೆದಿಡೋಣವೇ ಎಂದು ಒಮ್ಮೆ ಅವನಿಗೆ ಅನಿಸಿತು. ನನ್ನ ಮಾಸ್ತರರ ಹೆಂಡತಿ ಸತ್ತು ಹೋದಳು. ಇನ್ನೇಕೆ ಬರೆದು ಇರಿಸಲಿ – ಎಂದು ಪುನಃ ಅವನ ಮನ ಉತ್ತರವಿತ್ತಿತು.

ತನಗೆ ದೊರೆತ ಸಂಬಳವನ್ನೆಲ್ಲ ಅಂಗಿಯ ಜೇಬಿಗೆ ಸೇರಿಸಿಕೊಂಡು, ಬೆಕ್ಕಿನ ಹೆಜ್ಜೆಯಿರಿಸಿ ಮನೆಯಿಂದ ಹೊರಬಿದ್ದ.

ರೈಲ್ವೇ ಸ್ಟೇಷನ್ ಅವನ ಗುರಿ.

ಮುಂದಿನದು ರೈಲಿಗೆ ಸೇರಿದ್ದು ; ಅದು ತೋರಿದ ದಾರಿ.

ಎಚ್ಚರವಾದೊಡನೆ ಕಲ್ಯಾಣಿ ಸುಂದರನನ್ನು ಕೂಗಿದಳು.

ಆಗಲೇ ಗಂಟೆ ಎಂಟಾಗಿತ್ತು. ಅವಳ ಕೂಗಿಗೆ ಉತ್ತರವೀಯುತ್ತ ಬೀರಿ ಕೋಣೆಯೊಳಹೊಕ್ಕಳು.

" ಇಷ್ಟು ಹೊತ್ತು ಮಲಗಬಾರದು."

" ಮಲಗುವಾಗಲೇ ಹೊತ್ತಾದರೆ...."

" ಹಾಗೇನು....ಚೆನ್ನಾಗಿ ಬಾಳಮ್ಮ...."

" ಕಲ್ಯಾಣಿ ದಿಂಬಿನಡಿಯಿಂದ ನೋಟಿನ ಕಟ್ಟನ್ನು ಹೊರತೆಗೆದು ಬೀರಿಗೆ ತೋರಿಸಿದಳು. ಅದರಿಂದ ಹತ್ತು ರೂಪಾಯಿಯ ಎರಡು ನೋಟು ತೆಗೆದು ಅವಳಿಗಿತ್ತು, ಈ ಹರುಕು ಸೀರೆ ಸಾಕು, ಹೊಸತು ತೆಗೆದುಕೊಳ್ಳು ಎಂದು ನುಡಿದು ಹಾಸಿಗೆಯಿಂದ ಎದ್ದು ನಿಂತಳು.

" ಸುಂದರೂ...."

" ಯಾರೂ ಕಾಣಲಿಲ್ಲ."

" ಎಲ್ಲಿ ಹೋದನೋ ? ಇಷ್ಟು ಬೇಗ."

ಕಲ್ಯಾಣಿ ಕೋಣೆಯಿಂದ ಹೊರಬಂದು ಅಡುಗೆ ಮನೆಗೆ ನಡೆದಳು. ಅವಳಿಗಾಗಿ ಕಾಫಿ ಅಂದು ಕಾದಿರಲಿಲ್ಲ. ಒಲೆಯಲ್ಲಿ ಬೆಂಕಿಯೂ ಇರಲಿಲ್ಲ.

" ಬೀರಿ...."

" ಏನಮ್ಮ"

" ಹುಡುಗನೂ ಹೊರಟು ಹೋದ."

" ಹೋಗಲಿ ಬಿಡಿ...."

" ಕಾಫಿ....ಅಡುಗೆ....ಯಾರೂ ಇಲ್ಲವಲ್ಲ." ಅಧೀರಳಾಗಿ ವ್ಯಸನದ ಧ್ವನಿಯಲ್ಲಿ ಆಕೆ ನುಡಿದಳು.

" ನಾನಿದ್ದೇನೆ. ಅವನಲ್ಲದಿದ್ದರೆ ಅವನಪ್ಪ ಇನ್ನೊಬ್ಬ ಬರುತ್ತಾನೆ.

ಕಲ್ಯಾಣಿ ಬಚ್ಚಲಿಗೆ ನಡೆದಳು.

" ಹಾಗೇ ಕಾಲೇಜ್ ಹೋಟೆಲಿಗೆ ಹೋಗಿ ಕಾಫಿ, ತಿಂಡಿ ತಂದುಬಿಡು."

ಬೀರಿ ಅಡುಗೆ ಮನೆಗೆ ನಡೆದು ಥರ್ಮಾಸ್ ತೆಗೆದು, ತೊಳೆದು, ಹೊರಟಳು.

ಹೆಜ್ಜೆ ಹೆಜ್ಜೆಗೂ ತನಗಾಗುತ್ತಿರುವ ಸ್ಥಿತಿ ಕಂಡು ಕಲ್ಯಾಣಿಗೆ ಭೀತಿ ಮೂಡಿತು. ಸುಂದರನಿಗೆ ವಿಚಾರ ತಿಳಿಯಿತು. ಅದಕ್ಕೇ ಹೊರಟುಹೋದ ಎಂದು ಊಹಿಸುವುದು ಅವಳಿಗೆ ಕಷ್ಟವಾಗಲಿಲ್ಲ.

ಹೋಗಲಿ. ಯಾರ ಆಳೂ ನಾನಲ್ಲ. ಬಂದುದೆಲ್ಲ ಬರಲಿ. ಬೀರಿ ಎಂದಂತೆ ಇಂಥ ನಾಲ್ಕು ಆಳುಗಳನ್ನು ಇರಿಸಿಕೊಳ್ಳುವ ಶಕ್ತಿ ಇದೆ ಎಂದೂ ಅವಳೇ ಧೈರ್ಯ ತಂದುಕೊಂಡಳು.

ರಮಾ ನಾಟ್ಯರಾಣಿಯನ್ನು ನೋಡಲು ಬಂದಳು.

ಕಂಪೆನಿಯ ವಿಚಾರದೊಡನೆ, ಹೆರಳುಹಾಕಿಕೊಂಡಿಲ್ಲವೆಂಬ ಮಾತೂ ಸೇರಿದ್ದರಿಂದ, ಸುಂದರ ಹೊರಟುಹೋದ ವಿಚಾರ ಕಲ್ಯಾಣಿ ತಿಳಿಸ ಬೇಕಾಯಿತು.

" ಅವರಿಂದೇನಾದರೂ ಕಾಗದ ಬಂದಿತ್ತೋ ಏನೋ? ಎದ್ದು ಬಿಟ್ಟ."

" ಅವರೆಂದರೆ? ಇನ್ನೆಲ್ಲಿಯ ಅವರು....ಕೃಷ್ಣ....ಅಲ್ಲವೇ ?"

" ಹೌದು....ಕೃಷ್ಣ " ಎಂದು ರಮಾ ಮಾತಿಗೆ ತಲೆದೂಗುತ್ತ ಕಲ್ಯಾಣಿ ಉತ್ತರಿಸಿದಳು. ಅವನೂ ಒಬ್ಬ ವ್ಯಕ್ತಿ, ಇತರ ಸಾವಿರದಲ್ಲಿ ಒಬ್ಬ. ಅವನೇನು ಹೆಚ್ಚು. ತನಗೆ ಯಾವ ಸಂಬಂಧವೂ ಇಲ್ಲ- ಎಂದು ನಿರ್ಧಾರಕ್ಕೆ ಬಂದಳು ಕಲ್ಯಾಣಿ.

" ಅದೆಲ್ಲ ಒಳ್ಳೆಯದಕ್ಕೇ. ಎಲ್ಲೋ ಇದ್ದೆವು, ಎಲ್ಲೋ ಬಂದಿದ್ದೇವೆ. ಯಾರನ್ನು ನೆಚ್ಚಿಕೊಂಡೂ ನಾವು ಹುಟ್ಟಿಲ್ಲ, ಬದುಕುವುದೂ ಇಲ್ಲ. ಒಂದು ಹೊರೆ ತಪ್ಪಿತು ಅನ್ನು."

" ಅದೂ ನಿಜ. ಅವನನ್ನು ತಮ್ಮನಿಗಿಂತ ಹೆಚ್ಚಾಗಿ ನೋಡಿ ಕೊಂಡಿದ್ದೆ. ಅದರೂ ಅವನಿಗೆ ಹೆಚ್ಚಾಯಿತು."

" ಕತ್ತೆ ದುಡಿದ ಹಾಗೆ ದುಡಿಸಿ ತೊತ್ತಿನ ಸ್ಥಾನದಲ್ಲಿರಿಸಿದ್ದರೆ ಹೀಗಾಗ್ತ ತ್ತಿರಲಿಲ್ಲ."

"ನಾವೇ ಆ ಸ್ಥಾನ ಬೇಡವೆಂದು ಬಂದಾಗ ಇತರರನ್ನೇಕೆ ಹಾಗೆ ನೋಡೋಣ ರಮಾ. ಅವರ ಹಣೆಬರಹ."

"ಅದೂ ನಿಜ. ಹೋಗಲಿ."

ಬೀರಿ ಕಾಫಿ ತಂದಿಟ್ಟಳು. ಎಲ್ಲರೂ ತಿಂಡಿ ತಿಂದು ಕಾಫಿ ಮುಗಿಸಿದರು.

"ಕಂಪೆನಿಗೆ ಹೋಗೋಣವೇ ?"

"ಇಲ್ಲ. ನಾನು ಮಧ್ಯಾಹ್ನದ ಮೇಲೆ ಬರುತ್ತೇನೆ. ಡ್ಯಾನ್ಸ್ ಹುಡುಗಿಯರಿಗೆ ತಿಳಿಸಿಬಿಡು."

ರಮಾ ಹೊರಟುಹೋದ ಮೇಲೆ ಕಲ್ಯಾಣಿ ಅಡುಗೆಮನೆಗೆ ತೆರಳಿದಳು. ಇಬ್ಬರೂ ಸೇರಿ ಮನೆಗೆಲಸ ಪೂರೈಸಿದರು. ಬೀರಿ ತಾನೇ ಅಡುಗೆಮಾಡಲು ಒಪ್ಪಿಕೊಂಡು ಮನೆಯಲ್ಲೇ ನಿಲ್ಲುವ ಭರವಸೆ ಇತ್ತಳು.

ಹೆಣ್ಣಿಗೆ ಹೆಣ್ಣೇ ಸಹಾಯಕವಾಗಬೇಕು. ಎಂದುಕೊಂಡಳು ಕಲ್ಯಾಣಿ.

ಊಟ ತೀರಿಸಿ ಕುಳಿತಿದ್ದಾಗಲೇ ರಮಾ, ಶಾಂತಾ ಮನೆಗೆ ಬಂದರು.

"ಈ ಬಿಸಿಲಿಗೇ ಏಕೆ ಓಡಿಬಂದಿರಿ."

"ಅಷ್ಟು ಬಿಸಿಯಾದ ಸುದ್ದಿ ನಿನಗೆ ತಿಳಿಸಲು."

"ಏನು..."

"ಅದೇ ಪದ್ಮನಾಭನ ವಿಚಾರ...."

"ಅಂದರೆ..."

"ನೀನೊಂದು ಮೊದ್ದು ಅವನನ್ನು ಸೆರಗಲ್ಲಿ ಹಾಕಿಕೊಂಡು ಏನು ಏನು ಅಂತಾಳೆ. ಗುಟ್ಟು ಮನೆಯವರಿಗೆ ತಿಳಿಯಿತು."

"ತಿಳಿದ್ದೇ ಇದ್ದೆ ಅಂದ್ಕೊಂಡಿದ್ದರು."

"ಆದರೆ ನಿನ್ನ ಮನೆಯದುದು ತಿಳಿದಿರಲಿಲ್ಲವೋ ಏನೊ : ಅಂತೂ ಬೆಳಿಗ್ಗೆ ತುಂಬ ಗಲಾಟೆ."

"ಏನಾಯಿತು."

"ಆಗುವುದೇನು. ಹೆಂಡತಿ, ಮಕ್ಕಳನ್ನು ಕರೆದುಕೊಂಡು ಬಾವಿಗೆ ಬೀಳುತ್ತೇನೆ ಅಂತ ಹೊರಟಳು. ಮಾವ ಜಗಳಾಡಿ ಬೈದು ಕಪಾಳಕ್ಕೇ ಏರಿಸಿದ. ಅರುಣನಿಗೆ ಸುದ್ದಿ ಬಂತು. ಅವನಿಗೂ ಬೈಗಳು ಸಿಕ್ಕಿತಂತೆ.

ಅಂತೂ ಹತ್ತಿರದ ಮನೆಯುವರೆಲ್ಲ ಬಂದು ಸಮಾಧಾನಮಾಡಿ ಬುದ್ಧಿ ಹೇಳಿದರು."

" ಯಜಮಾನರು ಆಫೀಸಿಗೂ ಬಂದಿಲ್ಲ."

" ಊರೆಲ್ಲ ನಿನ್ನ ಸುದ್ದಿಯೇ. ಒಂಟಿಕೊಪ್ಪಲ್‌ನಲ್ಲೆಲ್ಲ ಈ ಗಲಾಟೆ ಸುದ್ದಿ ಹರಡಿತು. ಆದರೂ ಯಜಮಾನರು ಹಟ ಬಿಡಲಿಲ್ಲವಂತೆ."

" ನಿನ್ನನ್ನು ಬಿಡಲಾಗುವುದಿಲ್ಲ ಎಂದೇ ವಾದವಂತೆ. ಅವಳು ನಟಿ, ಕಂಪೆನಿ ಕೆಲಸದಲ್ಲಿ ಅತ್ತ ಹೋಗುತ್ತೇನೆ ಎಂದೇನೋ ವಾದಿಸಿದರಂತೆ."

" ಹಾಗೇನೂ ?"

" ಮತ್ತೇನು ? ಗಂಡಸು ಜತೆಗಿದ್ದಾಗಲೇ ನಮ್ಮವನು. ಹೆಂಗಸು ಮಾತ್ರ ಸದಾ ಅವನ ಬಳಿ ಬಿದ್ದಿರಬೇಕು."

" ಹ್ಞೂ....ಇನ್ನೊಂದು ಸುದ್ದಿ ಹೇಳೇ ಶಾಂತಾ...."

" ನಿನಗೆ ಮನೆಕೊಟ್ಟಿದ್ದಾರಂತೆ. ಈ ಮನೆ ನಿನ್ನ ಹೆಸರಲ್ಲೇ ಇದೆಯಂತೆ. ಈ ವಿಚಾರ ತಿಳಿದೇ ಯುದ್ಧ ಆರಂಭವಾಯಿತು. ಹೌದೇ ?"

" ನಿಜ...."

" ಪರವಾಯಿಲ್ಲ ಕಣೆ. ನೀನೇ ಅದೃಷ್ಟಶಾಲಿ. ನಮಗೂ ತಿಳಿಸದೆ ಸುಮ್ಮನಿದ್ದೆಯಲ್ಲೇ. ಇಷ್ಟು ಗುಟ್ಟು."

" ಗುಟ್ಟೇನು. ಇಂದಲ್ಲ ನಾಳೆ ತಿಳಿಯುತ್ತೆ. ನಾನೇ ಹೇಳಿಕೊಂಡೇನು ಮಾಡಲಿ. ಅದೆಲ್ಲ ಏನು ಮಹಾ ಅಂತ ಸುಮ್ಮನಾಗಿದ್ದೆ."

" ಏನು ಮಹಾ ಅಂತೆ....ಹತ್ತು ಸಾವಿರ ಬೆಲೆಯ ಮನೆ ಏನು ಮಹಾವೇ ? ಹೌದಪ್ಪ. ಐದು ಸಾವಿರ ಒಂದು ಚಿತ್ರಕ್ಕೆ ಸಂಪಾದಿಸುವವಳು ನೀನು."

" ಸಾಕು ಪರಿಹಾಸ್ಯ........ನೀನೂ ಬಂದು ಇಲ್ಲೇ ಇದ್ದುಬಿಡು ಬೇಕಾದರೆ...."

" ಬೇಡಪ್ಪ....ಯಜಮಾನರು ಸಿಟ್ಟಾದಾರು...."

" ಅಂತೂ ಯುದ್ಧ ಆರಂಭವಾಗಿದೆ ನಿನ್ನಿಂದಾಗಿ. ಏನಾಗುತ್ತೋ ತಿಳಿಯದು. ಗಲಾಟೆ ಇಲ್ಲ, ಎಲ್ಲವೂ ಶಾಂತವಾಗುತ್ತೆ ಎಂತ ಅರುಣ ಹೇಳಿದರು."

" ಆದದ್ದಾಗಲಿ....ನನಗೇನು. ಈಗಲೇ ಆದ್ದು ಒಳ್ಳೆಯದೇ ಆಯಿತು. ಆ ಮೇಲಾಗಿದ್ದರೆ...."

" ಅದೂ ನಿಜ. ಆದರೆ ನಿನಗೆ ಇನ್ನಷ್ಟು ಗಿಟ್ಟುತಿತ್ತು."

" ಸರಿ! ನೀನು ಲಾಭದಲ್ಲೇ ಇದ್ದೀಯು. ಆ ಹಣಕ್ಕೆ ಬೆಂಕಿ ಹಚ್ಚ."

" ಹಾಗೇ ಆಗಲಿ. ಈಗ ಕಾಫಿ...."

" ಅದಕ್ಕೇನು. ಬೀರಿ....ಇವರಿಗೆ ಈ ಮಧ್ಯಾಹ್ನ ಬಿಸಿಲಿನಲ್ಲೇ ಕಾಫಿ ಬೇಕಂತೆ. ಮಾಡಿಕೊಡು."

" ಯಾಕೆ ? ನಿನ್ನ ಸುಂದರ...."

" ಅವನು ಈ ಬೆಳಿಗ್ಗೆ ಹೊರಟು ಹೋದ."

" ಸರಿ ಸರಿ. ಅವನೂ ಹೋದ, ಇವನೂ ಹೋದ...."

" ಇವನೆಲ್ಲಿ ಹೋಗುತ್ತಾನೆ. ಬಂದೇಬರುತ್ತಾನೆ. ಮನೆಕೊಟ್ಟಿದ್ದಾನೆ ಬೇಕಾದ್ದೆಲ್ಲ ಕೊಟ್ಟಿದ್ದಾನೆ...."

ಪ್ರತ್ಯಕ್ಷವಾಗಿ ಗೆಳತಿಯರ ಮಾತಿಗೆ ಪ್ರತಿಯಾಗಿ ಆಡುತಿದ್ದರೂ ಕಲ್ಯಾಣಿಯ ಮನದಲ್ಲಿ ಮುಂದೇನು ಎಂಬ ಚಿಂತೆ ಬಾಧಿಸದಿರಲಿಲ್ಲ. ಆದರೂ, ಆತ ಎಲ್ಲವನ್ನೂ ತೊರೆದು ಬರಲೂ ಸಿದ್ಧ ಇದ್ದಾನೆ ಎಂದಾಕೆಗೆ ಅನಿಸದಿರಲಿಲ್ಲ. ಅವನು ಅವಳ ದಾಸನಾಗಿದ್ದಾನೆ. ನಿಮಿಷ ನಿಮಿಷಕ್ಕೂ ಅವಳ ಸೌಂದರ್ಯ ವನ್ನು ಹೊಗಳುವುದೇ ಅವನಿಗೆ ಕೆಲಸವಾಗಿದೆ. ಅವಳ ಅಂಗಾಂಗಗಳೂ ಅವನಿಗೆ ಸ್ವರ್ಗಸುಖ ತಂದಿವೆ.

ಬೀರಿ ಭವಿಷ್ಯವಾದಿ! ಅವಸರಪಡಬಾರದು, ನಿಧಾನಿಸಬೇಕೆಂದು ಅವಳೇ ಹೇಳಿದಳು. ನಾನು ಅವನವಳು ಎಂಬುದು ಖಚಿತವಾಗಿದ್ದು ಅನಂತರ ಈ ಗೊಂದಲವಾಗಿ ಆತ ಕೈಬಿಟ್ಟಿದ್ದರೆ? ಈಗ ಬಿಟ್ಟರೂ ಚಿಂತೆಯಿಲ್ಲ. ಇದೂ ಒಂದು ಎಚ್ಚರಿಕೆಯೇ ಆಯಿತು. ಇನ್ನೊಂದು ಹಗ್ಗ ದೃಷ್ಟಿಯಲ್ಲಿರಲಿ ಎಂಬ ಸಂದೇಶವಾಯಿತು.

ಊರಿನಲ್ಲಿದ್ದಾಗಲೇ ಕೃಷ್ಣ ಕೈಬಿಟ್ಟಿದ್ದರೆ– ತಾನು ಇನ್ನೊಬ್ಬನ ಕೈ ಹಿಡಿಯುವುದು ಸಾಧ್ಯವಿರಲಿಲ್ಲ. ಹಾಗೆಮಾಡಿ 'ಸೂಳೆ' ಎನ್ನಿಸಿಕೊಳ್ಳುತಿದ್ದೆ. ಮಾಸ್ತರರೂ ಅದಕ್ಕೆ ಒಪ್ಪುತ್ತಿರಲಿಲ್ಲ. ಇಲ್ಲಿ ಬಂದುದರಿಂದ ಆ ದುರಂತ ದೂರವಾಯಿತು.

ಈಗ ಇನ್ನೊಂದು ಹಗ್ಗ ಆಧಾರವಾಗಿ ದೊರೆತಿದೆ. ಆದರೂ ಇದೂ ತಪ್ಪಿದರೆ? ಮತ್ತೊಂದರ ಗಮನವಿರಲೇಬೇಕು. ಕಲಾರಂಗದಲ್ಲಿ ಅದು ತಪ್ಪಲ್ಲ. ಅನೀತಿಯಲ್ಲ. ವಾಸ್ತವಿಕ!

ಗೆಳತಿಯರೊಡನೆ ಹರಟುತ್ತ ಕಾಫಿ ಕುಡಿದಳು ಕಲ್ಯಾಣಿ. ಅವಳ ಮನಸ್ಸಿನಲ್ಲಿ ಸಾವಿರ ಯೋಚನೆಗಳು ಸಾಗುತ್ತಲೇ ಇದ್ದುವು. ಗಂಟೆ ಎರಡಾಯಿತು. ಮ್ಯಾಟನಿ ನೋಡಲು ಎಲ್ಲರೂ ನಿರ್ಧರಿಸಿ ಹೊರಟರು.

ಈ ದಿನ ಕಂಪೆನಿಗೆ ಹೋಗುವುದು ಬೇಡ ಅನಿಸಿತು ಕಲ್ಯಾಣಿಗೆ. ಅವನೇ ಬರಲಿ, ಮನೆಬಾಗಿಲಿಗೆ ಬಂದು ವಿಚಾರ ತಿಳಿಸಲಿ – ಎಂದುಕೊಂಡಳು ಆಕೆ.

ಸಿನಿಮಾ ತೀರಿಸಿ ಸುತ್ತಾಡಿ, ಎಂಟು ಗಂಟೆಗೆ ಮರಳುವಾಗ, ಬೀರಿಯೂ ತನ್ನ ಗುಡಿಸಲಿನಿಂದ ಸಾಮಾಗ್ರಿಗಳನ್ನು ಕಲ್ಯಾಣಿಯ ಮನೆಗೆ ಸಾಗಿಸಿದ್ದಳು.

## ೨೪

ಪದ್ಮನಾಭನಿಗೆ ಅವನ ಮನೆಯಲ್ಲಾದ ಮಂಗಳಾರತಿಯ ಸುದ್ದಿ ಹರಡಲು ಹೆಚ್ಚು ಹೊತ್ತು ಬೇಕಾಗಲಿಲ್ಲ. ಅಂತಹ ವಾರ್ತೆಗಳು ತನಗೆ ತಾನೇ ಹುಟ್ಟಿ ಹರಡುವ ರಾಜಧಾನಿ. ಅಂತಹ ಸುದ್ದಿ ಕೇಳಲು ಬಾಯಿ ದೆರೆದು ಕಿವಿ ನಿಮಿರಿ ಕುಳಿತವರ ಸಂತೆ. ನಿರ್ದೇಶಕ ಯಾವ ದೃಶ್ಯವೆತ್ತಬೇಕೆಂದು ಯೋಚಿಸುವ ಮೊದಲೇ "ಇಂಥ ದೃಶ್ಯ ಎತ್ತಿದರು" ಎಂದು ಕ್ಲಾಕ್ ಟವರ್ ಬಳಿ ನಿಂತವರೂ ಅಲ್ಲಿ ಆಡಿಕೊಳ್ಳುತ್ತಾರೆ. ಪದ್ಮನಾಭನ ವಿಚಾರವೂ ಹಾಗೇ ಹರಡಿತ್ತು; ಅದಕ್ಕೆ ಕೈ ಕಾಲುಗಳು ಸೇರಿಕೊಂಡಿದ್ದುವು. ಅಂತೂ ಮೂರು ದಿನ ಪೇಟೆಯ ಕಡೆಗೆ ಹೋಗಲು ಅವನು ಹಿಂಜರಿದ.

ಆದರೂ ಆ ರಾತ್ರಿಯೇ ಅವನು ಕಲ್ಯಾಣಿಯ ಮನೆಗೆ ಬಂದಿದ್ದ.

ಕಲ್ಯಾಣಿ ಅವನನ್ನು ಆದರಿಸಿ, ತನ್ನನ್ನು ತಾನೇ ಬಲಿಕೊಡಲು ಸಿದ್ಧಳಾದವಳಂತೆ ಸಹಾನುಭೂತಿ ವ್ಯಕ್ತಪಡಿಸಿ, ಅವನ ಚಿಂತೆ ನೀಗಲು ಯತ್ನಿಸಿದಳು. ಅವಳನ್ನು ಇನ್ನೂ ಹತ್ತಿರ ಸೆಳೆದು ಅವನು ಕುಳಿತ; ಅವಳ ತೊಡೆಯ ಮೇಲೊರಗಿ ತನಗಾದ ಅಪಮಾನ ಮರೆಯಲು ಯತ್ನಿಸಿದ.

ಇಂಥ ಹೆಣ್ಣಿಗಾಗಿ ಸಾವಿರ ಅಪಮಾನ ಅವಹೇಳನಗಳನ್ನೂ ಇದಿರಿಸ ಬಲ್ಲೆ ಎಂಬ ಹಟ ಅವನಲ್ಲಿ ಮೂಡಿತು.

ಬೀರಿ ಇಬ್ಬರಿಗೂ ಪಾನೀಯವಿತ್ತು, ತನ್ನ ಅನುತಾಪವನ್ನು ವ್ಯಕ್ತ ಪಡಿಸಿದಳು. ಈ ಎಲ್ಲ 'ಎಗರಾಟ' ಮೂರು ದಿನ ಎಂದು ಭವಿಷ್ಯ ಹೇಳಿದಳು. ಗಂಡಸಿಗೆ ಅಷ್ಟು ಸ್ವಾತಂತ್ರ್ಯವಿಲ್ಲವೇ ಎಂದು ನಾಂದಿ ಹಾಡಿ, ಅವನ "ಅಹಂಕಾರ"ಕ್ಕೆ ಗಾಳಿ ಬೀಸಿದಳು.

ಬಹಳ ಹೊತ್ತು ಪದ್ಮನಾಭ ಹಾಗೇ ಒರಗಿದ್ದ. ಕಲ್ಯಾಣಿಯ ಕೈ ಬೆರಳುಗಳು ಅವನ ಕೆನ್ನೆಯ ಮೇಲೆ ಓಡಿ, ತಲೆಯ ಮೇಲೆ ಸರಿದು, ತಲೆ ಕೂದಲನ್ನು ಎಣಿಸುತಿದ್ದುವು.

"ಕಲ್ಯಾಣಿ...."

"ಏನು...."

"ನೀನು ಎಂದೆಂದಿಗೂ ನನ್ನವಳೇ."

"ಅಲ್ಲವೆಂದವರಾರು?"

"ಖಂಡಿತವಾಗಿಯೂ? ನನ್ನ ಕೈ ಬಿಡಬೇಡ...."

"ಆ ಮಾತೇಕೆ ಈಗ? ಇನ್ನೂ ಸಂದೇಹವೇ?"

"ಇಲ್ಲ ಕಲ್ಯಾಣಿ. ನೀನಿದ್ದರೆ ಅದೇನೋ ಧೈರ್ಯ."

"ಹಾಗೇನು? ನಾನು ನಿಮ್ಮ ಬಳಿ ಇದ್ದಿದ್ದರೆ – ನಿಮ್ಮವರನ್ನೆಲ್ಲ ಹೊಡೆದು ಹಾಕುವಷ್ಟು ಧೈರ್ಯ ಬರುತಿತ್ತೋ ಏನೊ?" ಎಂದು ನಕ್ಕಳು ಕಲ್ಯಾಣಿ.

"ಹಾಗೂ ಆಗುತಿತ್ತು." ಮುಗುಳುನಗೆನಗುತ್ತಾ ಪದ್ಮನಾಭ ಉತ್ತರಿಸಿದ. "ನನ್ನ ಬಾಳಿನಲ್ಲಿ ನೀನೊಬ್ಬಳೇ ನನ್ನವಳು ಕಲ್ಯಾಣಿ."

"ಗಂಡಸರು ಹಾಗೇ ಹೇಳುತ್ತಿರುತ್ತಾರೆ."

"ಪರಿಹಾಸ್ಯ ಮಾಡಬೇಡ ಚಿನ್ನ. ಇಂದು ಇಡೀದಿನ ಬೆಂಕಿಯ ಮೇಲೆ ನಿಂತು ಮನಸ್ಸು ಬೆಂದಿತ್ತು. ಈಗ ಹೂವಿನ ಹಾಸಿನಲ್ಲಿ ಮಲಗಿದಷ್ಟು ನೆಮ್ಮದಿಯಾಗಿದೆ."

"ಹಾಗಿದ್ದರೆ ತಲೆ ಎತ್ತಿ. ಹೂವು ಕಮರೀತು."

"ಅದಕ್ಕೆ ನನ್ನ ಜೀವವನ್ನೇ ಕೊಟ್ಟು ಹೊಸ ಜೀವ ತಂದು ಕೊಡು ತ್ತೇನೆ....ನನ್ನ ಕೈ ಬಿಡಬೇಡ."

"ಆ ಮಾತುಗಳನ್ನು ಇನ್ನು ಆಡಬೇಡಿ. ನಾನು ನಿಮ್ಮವಳು."

"ವಿವಾಹವೇ ಆಗಬಾರದೇಕೆ. ಇನ್ನೂ ಅಡ್ಡಿಯೇ ?"

"ಅದೂ ಆಗಿಲ್ಲವೇ ಈಗ? ಶಾಸ್ತ್ರದ ಕಟ್ಟು ಬೇಕೇ? ಹತ್ತು ಮಂದಿಗೆ ಹೇಳಬೇಕೇ? ಅದು ಮುಂದೆ ಆಗಲಿ. ಜನಕ್ಕಂತೂ ತಿಳಿದೇ ಇದೆ."

"ನಿಜ. ಆದರೂ ನೀನು ಪೂರ್ಣ ನನ್ನವಳು ಎಂಬ ಖಚಿತ ಮನದಲ್ಲಿ ಮೂಡುತ್ತದೆ. ಯಾರೂ ಏನೂ ಆಡದಂತಾಗುತ್ತದೆ."

"ಈಗ ಮೂಡಿಲ್ಲವೇ"

"ಮೂಡಿದೆ."

"ಸಾಕು ಬಿಡಿ."

ಇನ್ನೊಮ್ಮೆ ಬಂಧನ – ಎಂದಾಗಲೆಲ್ಲ ಕಲ್ಯಾಣಿಯ ಮನಸ್ಸು ತಳ ಮಳಗೊಳ್ಳುತಿತ್ತು. ಹೀಗೇ ಇರೋಣ – ಬಂಧನವೇಕೆ? ಸ್ವತಂತ್ರವಾಗಿ ಸುಖವನ್ನು ಸವಿದು, ಯಾವ ಕಟ್ಟು ಕಟ್ಟಳೆಗೂ ಸಿಲುಕದೆ ಇರಬೇಕು ಎಂದವಳ ಮನಸ್ಸು ಕೂಗಿ ಹೇಳುತಿತ್ತು.

ಸರಿಯಾದ ದಾರಿ ಒಂದಿದೆ. ಇನ್ನೊಂದು ಅದಕ್ಕೆ ಇದಿರಾಗಿ ನಿಂತ ವಿರುದ್ಧ ದಾರಿ.

ಸರಿ ದಾರಿಯಲ್ಲಿ ಸರಿದವನು ದಾರಿ ತಪ್ಪಿದರೆ ಎರಡೂ ದಾರಿಗಳನ್ನೂ ತುಳಿಯದೆ ಎತ್ತೆತ್ತಲೋ ಅಲೆಯುತ್ತಾನೆ; ತಾನು ಹಿಡಿದಿದ್ದ ದಾರಿಯ ಮೇಲೆ ನಡೆಯದಿದ್ದರೂ ಅದರ ಹತ್ತಿರದಲ್ಲೇ ಸಾಗುತ್ತಾನೆ.

ತಪ್ಪು ದಾರಿ ಹಿಡಿದವನದೂ ಇದೇ ಹಾಡು. ನಾನು ಈ ದಾರಿ ಬಿಟ್ಟಿ ದ್ದೇನೆ ಎಂದಾತ ಹೇಳಬಹುದು. ಆದರೆ ಸರಿದಾರಿಯಲ್ಲಿ ನಡೆಯದಿರುವಷ್ಟು ಕಾಲ ಆತ ಹೇಗೆ ಎಲ್ಲಿ ನಡೆದರೂ ತಪ್ಪು ದಾರಿಯ ಬಳಿಯಲ್ಲೇ ಅನತಿ ದೂರದಲ್ಲಿ ಸಾಗುತ್ತಿರುತ್ತಾನೆ.

ಕೃಷ್ಣನನ್ನುಳಿದ ಕಲ್ಯಾಣಿ ತಪ್ಪುದಾರಿ ತುಳಿಯಲು ನಡೆದಳು. ಎಚ್ಚರವಾಗಿ ಹಿಂದೆಗೆದಳು. ಆದರೂ ಆ ದಾರಿಯ ಬಳಿಯಲ್ಲೇ ಸಾಗಲು

ಅವಳು ಹವಣಿಸಿದಳು. ಶ್ರೀಕಂಠನನ್ನು ತನ್ನ ತೃಪ್ತಿಗೆ ಸಾಧನವಾಗಿ ಮಾಡಲು ಬಯಸಿದಾಗ ಅವಳ ಮನೋಭಾವ ಹೀಗೇ ಇತ್ತು. ಸ್ನೇಹಿತರಂತೆ ಇರೋಣ; ಪತಿ ಪತ್ನಿಯರ ಸುಖವನ್ನು ಅನುಭವಿಸೋಣ ಎಂದಾಕೆ ಯೋಚಿಸಿದ್ದಳು.

ಅದು ಒಂದು ತಾಸು ಮಾತ್ರ. ಕಾಮ ಕಣ್ಣು ಕುರುಡು ಮಾಡಿದಾಗ.

ಪುನಹ ಬೆಳಕು ಕಂಡಳು. ಅದೆಲ್ಲ ಬೇಡ, ಆತನಿಂದ ಏನೂ ಲಾಭವಿಲ್ಲ ಅಂದುಕೊಂಡಳು. ಅವನು ಬೇಕೇ ಬೇಡವೇ ಎಂಬ ಪ್ರಶ್ನೆ ಪುನಹ ಅಡ್ಡದಾರಿ ಹಿಡಿದು ಲಾಭ ನಷ್ಟದ ವ್ಯವಹಾರವನ್ನು ಅವಳ ಮನದಲ್ಲಿ ಮೂಡಿಸಿತು.

ಪ್ರೇಮ ಕಾಮವಾಯಿತು.

ಹೃದಯದ ಬದಲು ದೇಹದ ಯೋಚನೆ ಮೂಡಿತು.

ವಿದ್ಯೆಯ ಬದಲು ಹೊನ್ನಿನ ಚಿಂತೆ ಹೊಳೆಯಿತು.

ಹೆಜ್ಜೆ ಹೆಜ್ಜೆಗೂ ಅವಳು ಸರಿದಾರಿಯಿಂದ ದೂರವಾಗುತಿದ್ದಳು. ಆದರೂ ತಾನು ಆ ದಾರಿಯ ಹತ್ತಿರದಲ್ಲೇ ಇದ್ದೇನೆ ಎಂದಾಕೆ ತಿಳಿದಿದ್ದಳು.

ಪ್ರೇಮವೆಂದುಕೊಂಡು ಪದ್ಮನಾಭನ ಜತೆಗೆ ನಲಿದಳು. ಅದೂ ಕಾಮವಾಯಿತು.

ವಿಹಾರವೆಂದರಿತು ನರ್ತಿಸಿ ಗೆಳತಿಯರೊಂದಿಗೆ ಓಡಾಡಿದಳು; ಅದು ವಿರಹಕ್ಕೆ ಕಾರಣವಾಯಿತು.

ವಿನೋದ ವಿಕೋಪಕ್ಕೆ ದಾರಿ ಮಾಡಿತು.

ಪದ್ಮನಾಭ ಬೇಕು; ಅವನ [illegible]ಕು.

ಅವನನ್ನು ಅಂಟಿಕೊಂಡು ಅವನನ್ನೇ ಆಶ್ರಯಿಸಿದರೆ ತಾನು ಇನ್ನೊಮ್ಮೆ ವಿರಹಕ್ಕೆ ಗುರಿಯಾಗಬೇಕಾದೀತು.

ಶ್ರೀಕಂಠ....ಅವನೀಗ ಬೇಡ.

ಇತರರು....ನಿಜ....ಅದನ್ನು ವಿಚಾರ ಮಾಡಬೇಕು.

ಹ್ಲೂ....ಪರೀಕ್ಷಿಸದೆ ಘಾಸಿಗೊಂಡಾಯಿತು. ಇನ್ನು ಇನ್ನು ಪರೀಕ್ಷಿಸೋಣ. ಯಾರು ಹೇಗೆ ಎಂಬುದನ್ನು ವಿಚಾರ ಮಾಡೋಣ.

ಪ್ರೇಮವನ್ನು ತೂಗಿ, ಅರೆದು, ಒರೆದು ನೋಡುವುದು ಸಾಧ್ಯವೇ? ಅದು ಅಂಗಡಿಯ ಸಾಮಾನಲ್ಲ. ಆದರೂ ಕಲ್ಯಾಣಿ ತೂಕಮಾಡಲು ಹೊರಟಳು. ಈ ನೀತಿಯಿಂದ ತಾನು ದಾರಿ ತಪ್ಪುತ್ತೇನೆ ಎಂಬುದನ್ನಾಕೆ ತಿಳಿಯಲಿಲ್ಲ.

ತಿಲ್ಲಾಣವಾಯಿತು.

ಸ್ವರಜತಿ ನಡೆಯಿತು.

ಈಗ ರಾಧೆ.

ಇನ್ನೊಮ್ಮೆ ಸಂಧ್ಯಾನೃತ್ಯದ ಪಾರ್ವತಿ.

ಮತ್ತೊಮ್ಮೆ ಮಹಾಕಾಳಿ!

ಈಗ ಹಾವಾಡಿಗರ ಮುಂದೆ ನಲಿವ ಹಾವು!

ಇಷ್ಟೆಲ್ಲ ಪಾತ್ರಗಳನ್ನಾಕೆ ಎರಡೇ ಎರಡು ಗಂಟೆಗಳಲ್ಲಿ ರಂಗಭೂಮಿಯ ಮೇಲೆ ಅಭಿನಯಿಸಿದ್ದಾಳೆ.

ಪ್ರತಿಯೊಂದು ಪಾತ್ರವನ್ನು ಅಭಿನಯಿಸುವಾಗಲೂ ತನ್ನನ್ನು ತಾನು ಮರೆತು, ಆಯಾ ಪಾತ್ರಗಳಲ್ಲಿ ಲೀನವಾಗಿ, ಅಭಿನಯಿಸಬೇಕು – ಎಂದು ಅವಳ ಮಾಸ್ತರ್ ಹೇಳಿದ್ದರು.

ಇದು ನಾಟಕ! ಬಣ್ಣಹಾಕಿ ಯಾರದೋ ಹೆಂಡತಿಯೋ ಮಗಳೋ ಆಗಿ ಕುಣಿಯುತ್ತೇವೆ. ಬಣ್ಣ ಅಳಿಸಿದ ಬಳಿಕ ನಾವು ಬೇರೆ, ನಮ್ಮ ಗಂಡ, ತಂದೆ ಬೇರೆ ಎಂದಿದ್ದಳು ಅವಳ ಗೆಳತಿ.

ವ್ಯವಹಾರವಮ್ಮ ಇದು, ವ್ಯವಹಾರ. ಅಂಗಡಿಯಲ್ಲಿ ಕಂಡು, ಕಣ್ಣರಳಿಸಿ ಬಯಸಿ ಕೊಳ್ಳುವ ವರೆಗೆ ಸೀರೆಯ ಬಗೆಗೆ ಪ್ರೀತಿ. ಅನಂತರ ಅದಕ್ಕಿಂತ ಚೆನ್ನಾಗಿದೆ ಇನ್ನೊಂದು ಅಂತ ತೋರುತ್ತೆ ನಮಗೆ. ಹಾಗೇ ಈ ಗಂಡಸರು ಹೆಣ್ಣಿನ ಕಡೆ ಹರಿಸುವ ನೋಟ. ಒಲಿದಾಗ ದೊರೆತಷ್ಟು ಕೀಳಬೇಕು. ಆ ಬಳಿಕ ಅವರು ಕೊಡಲಾರರು ಎಂದಿದ್ದಳು ಬೀರಿ.

ಈ ಉಪದೇಶಗಳೆಲ್ಲ ಅವಳನ್ನು ತುಂಬ ಬದಲಾಯಿಸಿವೆ. ಅವಳ ಮನದಲ್ಲಿ ಮೂಡಿದ್ದ ಹಳೆಯ ಸಂಸ್ಕೃತಿಯ ಕೆಸರನ್ನು ತೊಡೆದಿವೆ. ಹೊಸ ಲೋಕಕ್ಕೆ ಹೊಂದಿಸಿ ನಿಲಿಸಿವೆ.

ಪದ್ಮನಾಭನಿಗಾದ ಅವಸ್ಥೆಯನ್ನು ತಿಳಿದ ಕಲ್ಯಾಣಿ ಒಮ್ಮೆ ನಗು

ತಿದ್ದಳು; ಮತ್ತೊಮ್ಮೆ ಸಹಾನುಭೂತಿ ವ್ಯಕ್ತಪಡಿಸುತಿದ್ದಳು. ಎರಡು ದಾರಿಗಳ ಎರಡು ಭಾವನೆಗಳು ಅವಳ ಹೃದಯದಲ್ಲಿ ನರ್ತಿಸುತಿದ್ದುವು.

"ಮುಂದೇನು ಗತಿ? ಈ ಸಮಸ್ಯೆಯ ಪರಿಹಾರ"

"ಅದಾಗೇ ಆಗುತ್ತದೆ. ಇಂಥ ಎಷ್ಟೋ ಸಮಸ್ಯೆಗಳನ್ನು ಇದಿರಿಸಿದ್ದೇನೆ" ಅವನಿಗರಿಯದಂತೆ ಉಬ್ಬಿದ ಅವನ ಮನ ಈ ಮಾತಿನ ಬಾಂಬು ಸಿಡಿಸಿತು.

"ಈ ಅನುಭವ ಹೊಸದಲ್ಲವೇನು?" ಎಂದು ನಗುತ್ತ ಕಲ್ಯಾಣಿ ಪ್ರಶ್ನಿಸಿದಳು. ಅವಳ ಮನದಲ್ಲಿ ಒಮ್ಮಿಂದೊಮ್ಮೆಗೆ ಸಂದೇಹದ ಕಿಡಿ ಮೂಡಿತು.

ಹೀಗೇ ಇಂತಹದೇ ಅನುಭವ? ಅಂದರೆ? ನನ್ನಂತಹಳ ಬೆನ್ನು ಹತ್ತಿದ್ದನೇ? ಅವರೆಲ್ಲ ಏನಾದರು? ನನಗೂ ಅದೇ ಗತಿಯಾದರೆ?

"ಆಗಲೇ ಹೆಣ್ಣಿನ ಮನಸ್ಸು, ತಲೆಯಾಡಿಸಿತೇನು? ನಿನ್ನಂತಹಳ ಬೆನ್ನು ಹತ್ತಿ ಹುಟ್ಟಿದ ಸಮಸ್ಯೆಯಲ್ಲ ಕಲ್ಯಾಣಿ?"

"ಇರಬಹುದು. ಬೇರೊಬ್ಬಳು–ನನ್ನಂತಹ ನರ್ತಕಿಯಲ್ಲವೇನೊ?"

ಅವಳಲ್ಲಿ ಮೂಡಿದ ಸಂದೇಹ ತೊಡೆಯುವುದೇ ಅವನಿಗೀಗ ಸಮಸ್ಯೆಯಾಯಿತು. ಮನಬಿಚ್ಚಿ ಹೇಳಬೇಕು; ವಾದಿಸಬೇಕು.

"ಅದಕ್ಕೇ ನಾನೆಂದುದು – ಹೆಣ್ಣು ಹೆಣ್ಣೇ ಎಂದು...."

"ಹೌದು. ಅವಳು ಗಂಡಾಗಲಾರಳು...."

"ಈ ಯುಗದಲ್ಲಿ ಆಗುತ್ತಾಳೆ. ಹೆಣ್ತನ ಹೋಗುವುದಿಲ್ಲ ಅಂತ. ಅಷ್ಟೆ! ನೋಡು ಕಲ್ಯಾಣಿ....ಆ ಸಮಸ್ಯೆ ಬಂದುದು ಹೀಗೆ...."

"ಹೀಗೇ ಏನು?"

"ಹೀಗಲ್ಲ....ಹಾಗೆ....ಕಾಂಗ್ರೆಸ್ ಚಳುವಳಿಯಾಯಿತಲ್ಲ.... ೧೯೪೨ರಲ್ಲಿ...."

"ಆಗೊಬ್ಬಳು ಗಂಟುಬಿದ್ದಳೇನು? ದೇಶಸೇವಕಿ...."

"ಕೊಂಚ ಸುಮ್ಮನಿರು ಮಹಾದೇವಿ. ನನ್ನ ಮಾತು ಪೂರ್ಣ ಕೇಳು...."

"ಸರಿ–ಸರಿ. ಅಷ್ಟರಲ್ಲಿ ನನ್ನ ಕತೆಯೂ ಮುಗಿದಿರುತ್ತದೆ."

"ನನ್ನದೂ ಮುಗಿಯುತ್ತದೆ. ಈಗಲೇ ಅರ್ಧ ಮುಗಿದಿದೆ. ಅದಿರಲಿ.... ಆಗ ಚಳುವಳಿಗೆ ಸೇರಬಾರದೆಂದು ನನ್ನಾಕೆ ಹಟಹಿಡಿದಳು. ರಾದ್ಧಾಂತ ಮಾಡಿದಳು."

"ಹ್ಞೂ...." ಕಲ್ಯಾಣಿಗೆ ಈ ಮಾತು ನಂಬುವುದು ಕಷ್ಟವಾಗಿತ್ತು.

"ಚಳುವಳಿಯಲ್ಲಿ ಭಾಗವಹಿಸಿದ್ದೆ. ನಾನೇ ನಾಯಕ. ಸೆರೆತಪ್ಪಿಸಿ ಕೊಳ್ಳುವುದು ಸಾಧ್ಯವಿರಲಿಲ್ಲ. ಚಳುವಳಿಯನ್ನೇ ಬಿಟ್ಟುಬಿಡಿ ಎಂದು ಆಕೆ ಹಟಹಿಡಿದಳು. ಅದುವರೆಗೂ ಕಾಂಗ್ರೆಸ್‌ನಲ್ಲಿದ್ದು ಚಳುವಳಿ ಬಂದಾಗ ಹಿಂದೇಟು ಹೊಡೆದರೆ ಜನ ಏನಂದಾರು....?"

"ಈಗ ಕಾಂಗ್ರೆಸ್‌ಗೇ ತಿಲಾಂಜಲಿಕೊಟ್ಟಿದ್ದೀರಿ."

"ಈಗಿನ ಪ್ರಶ್ನೆ ಬೇರೆ; ಬಿಡು. ಅಂತೂ ರಾದ್ಧಾಂತವಾಗಿ ಆಕೆ ಬಾವಿಗೆ ಬೀಳಲೂ ಹೋದಳು. ಈ ಹೆಂಗಸರಿಗೆಲ್ಲ ಮಾತೆತ್ತಿದರೆ ಹರಿಯು ವುದು ಕಣ್ಣೀರು, ಕಾಣಬರುವುದು ಹಾಳು ಬಾವಿ."

"ಆ ಮೇಲೆ? ಕಾಂಗ್ರೆಸ್ ಬಿಟ್ಟುಬಿಟ್ಟಿರಾ?"

"ಹೌದು – ಬಿಟ್ಟೆ! ನನ್ನನ್ನು ಪೋಲೀಸರೇ ಒಯ್ದು ಉಪಕಾರ ಮಾಡಿದರು. ಜೇಲಿನಲ್ಲಿ ಒಂದು ವರ್ಷ ಆರಾಮುವಾಗಿದ್ದೆ. ನಾಲ್ಕು ದಿನ ಅತ್ತು, ಬಾವಿ ಸಿಕ್ಕದೆ ನನ್ನಾಕೆ ಸುಮ್ಮನಾದಳು."

"ನಾನೂ ಹೆಣ್ಣು...."

"ಅಂದರೆ ನೀನೂ ಬಾವಿ ಹುಡುಕುತ್ತೀಯೇನು? ಬೇಡ ಮಹಾ ರಾಯಿತಿ. ಇಲ್ಲೂ ಆ ಗೊಂದಲ ಆರಂಭವಾದರೆ ನನಗೆ ದೇವರೇ ಗತಿ."

ಕಲ್ಯಾಣಿಗೆ ಅವನ ಅವಸ್ಥೆಯನ್ನು ಕಂಡು ನಗು ಬರುತಿತ್ತು; ಹಾಗೇ ಅನುತಾಪವೂ ಮೂಡುತಿತ್ತು.

"ಈಗ ಬೀಳಲಿರುವ ಬಾವಿಯೇ ಸಾಕು. ಹೊಸತೇನು ಬೇಕು?"

"ಆದರೂ ನಿಧಾನಿಸುತ್ತೀಯ."

"ಹ್ಞೂ....ನೀವೇ ಅಂದಿರಲ್ಲ ಹೆಣ್ಣು ಗಂಡಾಗುತ್ತಾಳೇಂತ. ಆಗಲೇ ಮರೆತಿರೇನು? ವಿಚಾರಮಾಡಿ ಬಾವಿಗಿಳಿಯೋಣಾಂತ."

"ಹಾಗೇ ಆಳವನ್ನೂ ನೋಡಿ" ಪದ್ಮನಾಭ ನಕ್ಕ.

"ಅದನ್ನು ಕೆಲವೊಮ್ಮೆ ನೋಡಬೇಕಾಗುತ್ತದೆ. ಆದರೂ ರಾತ್ರಿ ಕಂಡ ಬಾವಿಗೆ ಹಗಲು ಬೀಳುವವರೇ ಹೆಚ್ಚು."

"ಆದರೆ ಆ ಬಾವಿಯೇ ನಿನ್ನ ಬಳಿ ಬಂದಿದೆ ಈಗ...."

"ಅದಕ್ಕೇ....ಬೀಳುವ ಯೋಚನೆಯೇ ಇಲ್ಲ...."

"ಅಂದರೆ" ಆಶ್ಚರ್ಯದಿಂದ ಪ್ರಶ್ನಿಸಿ ಪದ್ಮನಾಭ ಎದ್ದು ಕುಳಿತ.

"ಆಗಲೇ ಹೆದರಿಬಿಟ್ಟಿರಾ ? ಅದೇ ಸಂದೇಹ ಅನ್ನುವುದು. ನಿಮ್ಮವಳೇ ಆದರೂ ಇನ್ನೂ ಆ ಸಂಶಯ ತೊಲಗಿಲ್ಲವಲ್ಲ."

"ಸುಮ್ಮನೆ ಪೀಡಿಸಬೇಡ ಕಲ್ಯಾಣಿ. ಈ ನೊಂದಿರುವ ಜೀವಕ್ಕೆ ನೀನೇ ಗತಿ; ನೀನೇ ದಿಕ್ಕು. ನನ್ನವಳಾಗು...."

"ಆಗಿದ್ದೇನಲ್ಲ.... ಆಗಲೇ ಅಪ್ಪಿಕೊಂಡಿರಿ....ಏನು ಹೊರಟುಬಿಡುತ್ತೇನೆ ಎಂದೇ ?"

"ಹೇಗೆ ನಂಬಲಿ...."

"ಧೈರ್ಯವಾಗಿರಿ, ನಂಬಿ. ಕಂಟ್ರಾಕ್ಟು ಇದೆ. ಅದು ಮುಗಿಯುವುದರೊಳಗಾಗಿ ಶಾಸ್ತ್ರದ ಅಥವಾ ಪ್ರಚಾರದ ಕಟ್ಟೊ ಕೊರಳಿಗೆ ಬೀಳಬಹುದು. ಅಂತೂ "ಖಾಯಂ" ಕಲಾವಿದೆಯಾಗುವ ಹಾಗಿದ್ದೇನೆ....ಈಗ ಕೊಂಚ ಕೈ ಸಡಿಲುಮಾಡಿ, ಉಸಿರು ಬಿಗಿಹಿಡಿದಂತಾಗಿದೆ....ಅಬ್ಬ....ಮಕ್ಕಳ ಹಾಗೆ ಆಡುತ್ತೀರಲ್ಲ...."

ಪದ್ಮನಾಭ ಅವಳನ್ನು ತನ್ನ ಕೈಗೂಸಾಗಿ ಮಾಡಿಕೊಂಡು ನಲಿದ.

ಗಂಟೆ ಹತ್ತು ಬಾರಿಸಿತು.

ಮನೆಯು ನೆನಪಾಯಿತು! ಎಚ್ಚರನಾಗಿ ಹೊರಡಲು ಸಿದ್ಧನಾದ. ಕಲ್ಯಾಣಿಯನ್ನುಳಿದು ಹೊರಡುವುದು ಅವನಿಗೆ ಅಸಾಧ್ಯವೆನಿಸಿದ್ದರೂ, ಮನೆಯಲ್ಲಿ ಇನ್ನೇನು ಕಾದಿದೆಯೋ ಎಂಬ ಭೀತಿ ಅವನನ್ನು ಹೊರತಳ್ಳುತಿತ್ತು.

ಮಾತನಾಡದವನಾಗಿ ನಗುತ್ತ ಅವಳನ್ನು ನೋಡಿ ಆತ ಹೊರಟ.

ಅದುವರೆಗೂ ಕಾದಿದ್ದ ಬೀರಿ, ಅವನು ಹೊರಟುಹೋದೊಡನೆ ಬಾಗಿಲಿನ ಅಗಳಿ ಹಾಕಿದಳು.

ಪದ್ಮನಾಭನ ಮನೆಯಲ್ಲಾದ ಗಲಭೆಯ ಸುದ್ದಿ ಕೇಳಿ ಹರ್ಷಿತರಾ

ದವರು ಅನೇಕರು. ಇದುವರೆಗೂ ಅತ್ತ ಬರಲು ಅಳುಕುತಿದ್ದವರೆಲ್ಲ ಇದೇ ವಿಚಾರ ತಿಳಿಯುವ ನೆಪ ಹೂಡಿ ಕಲ್ಯಾಣಿಯ ಮನೆಗೆ ಬರಲೆಳಸಿದರು.

ಅವಳಿನ್ನೂ ಎದ್ದೇಳುವ ಮೊದಲೇ ರುದ್ರಪ್ಪ ಅವಳ ಮನೆಯ ಬಾಗಿಲಲ್ಲಿ ನಿಂತಿದ್ದ. ಬೀರಿ ಒಳಗೆ ಕರೆದು ಕುಳ್ಳಿರಿಸಿದಳು.

ಕಾಫಿ ಸಿದ್ಧವಾಗುವ ಹೊತ್ತಿಗೆ ಕಲ್ಯಾಣಿಯೂ ಎದ್ದಳು, ರುದ್ರಪ್ಪನನ್ನು ಸ್ವಾಗತಿಸಿ ಲಗುಬಗೆಯಿಂದ ಅವನೊಡನೆ ಮಾತನಾಡಲು ಸಿದ್ಧಳಾಗಿ ಬಂದಳು.

ತನ್ನ ಅನುತಾಪ ವ್ಯಕ್ತಪಡಿಸುತ್ತ, ಹೀಗೆಲ್ಲ ನಡೆಯಲು ಆಸ್ಪದವೀಯ ಬಾರದೆಂದು ಆತ ಸೂಚಿಸಿದ.

" ನನ್ನದೇನೂ ತಪ್ಪಿಲ್ಲ. ನಮ್ಮ ಮನೆಗೆ ಅವರು ಬಂದರೂ ತಪ್ಪೇನು ? ನಿಮ್ಮ ಕಂಪೆನಿಗೆ ನಾನು ಬರುತ್ತಿರಲಿಲ್ಲವೇ ? ಅಡ್ಡದಾರಿ ಹಿಡಿಯದಿದ್ದರೂ ಈ ಗಲಭೆ."

" ದಾರಿಯ ವಿಚಾರ ಬೇರೆ. ಅದು ಅವರವರಿಗೆ ಸೇರಿದ್ದು. ನಿಮ್ಮ ಬಳಿ ಕುಳಿತರೆ ಹೊತ್ತು ಹೋಗುವುದೇ ತಿಳಿಯುವುದಿಲ್ಲ."

" ಅಷ್ಟಕ್ಕೇ ಅನರ್ಥವಾದರೆ—"

" ಹಾಗಾದರೂ, ಹೆದರಿ ನಿಂತರೆ ಮಾತ್ರ ಕೆಡುಕು. ನಂಬಿಕೆದ್ರೋಹ ವಾಗಬಾರದು. ಅಲ್ಲವೇ ?"

" ಹಾಗಾಗಲಾರದು. ಆದರೂ ನಾನು ಭೀತಳಾಗುವುದಿಲ್ಲ."

ಕಾಫಿ ತಟ್ಟೆಗಳನ್ನು ಹಿಡಿದುಕೊಂಡು ಬಂದಿದ್ದ ಬೀರಿ, ಅವರಿಗೆ ಅವುಗಳನ್ನಿತ್ತು ತನ್ನ ಮಾತೂ ಸೇರಿಸಿದಳು.

" ಕಲ್ಯಾಣಿಯ ಸೌಂದರ್ಯಕ್ಕೆ ಸೋತರೆ ಸೌಂದರ್ಯವಿಲ್ಲದವರು ಕಿರಿಚಿಕೊಳ್ಳಬೇಕೇ ?"

" ಅದು ಹೆಣ್ಣಿನ ಗುಣ."

" ನಮ್ಮ ಕಂಪೆನಿಯಲ್ಲಿ ನಾವು ಯಾರೂ ಹಾಗೆ ಮತ್ಸರದ ಗಾಳಿಗೆ ಸಿಲುಕಲಿಲ್ಲ. ನೀವೇ ನೋಡಿದ್ದೀರಿ."

" ಇರಬಹುದಮ್ಮ. ಎಲ್ಲರೂ ಹಾಗೇ ಇರುತ್ತಾರೇನು ? ನೀವೀಗ

ಪದ್ಮನಾಭನ ವಿಶ್ವಾಸ ಗಳಿಸಿದರೆ ನನಗಂತೂ ತುಂಬ ಕಿಚ್ಚಾಗುತ್ತದೆ. ನನ್ನದು ಅಂಥ ಮನಸ್ಸು. ಅದಕ್ಕೇನು ಮಾಡಲಿ."

"ಕಲ್ಯಾಣಿ ಯಾರ ದಾಸಿಯೂ ಅಲ್ಲ. ಅವಳು ಸ್ವತಂತ್ರಳು. ಒಬ್ಬರಿಗೇ ಮಾರಿಕೊಳ್ಳಲಾಗುತ್ತದೆಯೇ?" ಎಂದು ಧೈರ್ಯ ನೀಡಿದಳು ಬೀರಿ.

"ಅವರ ಚಿತ್ರ ಸಿದ್ಧವಾಗುತ್ತಿದೆ, ಅಲ್ಲಿದ್ದೇನೆ; ನಿಮ್ಮದು ಇನ್ನೊಂದು ಚಿತ್ರ ಆರಂಭವಾದರೆ ಇಲ್ಲೂ ಸೇರಿಕೊಳ್ಳಬಹುದು."

"ಅದು ಖಂಡಿತ. ನಾವು ಬಿಡುತ್ತೇವೆಯೇ? ನಮ್ಮ ಕಂಪೆನಿಯಲ್ಲೇ ಬೆಳಕಿಗೆ ಬಂದವಳು; ಕೀರ್ತಿಶಾಲಿಯಾಗಿದ್ದೀ. ನಿನ್ನನ್ನು ಬಿಡುತ್ತೇವೆಯೇ? ಇನ್ನೊಂದು ಚಿತ್ರದ ಯೋಚನೆ ನಡೆಸಿದ್ದೇವೆ" ಎಂದು ದೇಶಾವರದ ನಗೆ ನಗುತ್ತಾ ಕಲ್ಯಾಣಿಯನ್ನು ಒಲಿಸಿಕೊಳ್ಳುವ ಅಭಿನಯದೊಂದಿಗೆ ರುದ್ರಪ್ಪ ಹೇಳಿದ.

ಮಾತನಾಡುತ್ತ ತನ್ನನ್ನೇ ಮರೆತು ಕುಳಿತಿದ್ದ ರುದ್ರಪ್ಪ ಸತ್ಯನಾರಾಯಣ ಬಂದಾಗ ಜಾಗ್ರತನಾದ.

ತಾನಿನ್ನು ಅತ್ತ ಸುಳಿಯಬಾರದೆಂದು ಬಗೆದಿದ್ದರೂ, ಪದ್ಮನಾಭನ ವಿಚಾರ ತಿಳಿದಾಗ ಅವನ ನಿರ್ಧಾರ ಸಡಿಲಾಯಿತು. ಕೊನೆಯ ಬಾರಿಗೆ ಒಮ್ಮೆ ನೋಡೋಣ; ಹೇಳಬೇಕಾದ್ದು ಹೇಳೋಣ ಎಂದು ಅವನು ಅತ್ತ ಬಂದ.

ರುದ್ರಪ್ಪ ಹೊರಟು ಹೋದ. ಸತ್ಯನಾರಾಯಣನನ್ನು ಮನಸ್ಸಿನಲ್ಲೇ ಅವನು ಶಪಿಸುತಿದ್ದಾನೆ ಎಂದು ತಿಳಿಯುವುದು ಕಷ್ಟವಾಗಿರಲಿಲ್ಲ.

ವಿಷಯಗಳನ್ನೆಲ್ಲ ತಿಳಿದುಕೊಂಡು ಅಲ್ಲೊಂದು ಇಲ್ಲೊಂದು ಮಾತು ಕೂಡಿಸುತ್ತ ಸತ್ಯನಾರಾಯಣ ತನ್ನ ಅಭಿಪ್ರಾಯವನ್ನು ತಿಳಿಸಿದ. ಆದರೆ, ಕಲ್ಯಾಣಿಗೆ ಅಂಥ ಎಚ್ಚರಿಕೆಯ ಮಾತುಗಳು, ಬುದ್ಧಿವಾದಗಳು ಬೇಕಾಗಿರಲಿಲ್ಲ. ಆ ಕಾಲ ಆಗಿಹೋಯಿತು ಎಂದಾಕೆ ತಿಳಿದಿದ್ದಳು. ಹೇಳಬಹುದಾದವಳು ಬೀರಿ. ಅವಳು ಜೀವನದ ಎಲ್ಲ ಕಷ್ಟ ಸುಖ ಅನುಭವಿಸಿದವಳು. ಮೇಲಾಗಿ ತನ್ನಂತೆ ಹೆಣ್ಣು. ಹೆಣ್ಣಿನ ದುಃಖ ಅವಳಿಗೇ ಅರಿವಾದೀತು. ಎಲ್ಲ ಗಂಡಸರ ಮಾತು ಸ್ವಾರ್ಥದ ಹಿನ್ನೆಲೆಯಿಂದಲೇ ಕೂಡಿದೆ. ಎಲ್ಲರೂ ಬಯಸುವುದು ತನ್ನನ್ನು; ತನ್ನ ಸೌಂದರ್ಯವನ್ನು ಎಂಬ ಭಾವನೆ ಅವಳಲ್ಲಿ

ಮೂಡಿತ್ತು. ಈ ಸೌಂದರ್ಯವಿಲ್ಲವಾಗಿದ್ದಲ್ಲಿ ಯಾರೂ ಇತ್ತ ಸುಳಿಯುತ್ತಿರಲಿಲ್ಲ ಎಂದಾಕೆಗೆ ಅನಿಸಿತ್ತು.

ಊದುವ ಶಂಖ ಊದಿ ಬಿಟ್ಟು ಆತ ಸ್ಟುಡಿಯೋ ಕಡೆ ನಡೆದ. ಮಹಾಪೂಜೆ ಯಾವಾಗ ಬೇಕಾದರೂ ಆಗಲಿ – ಅವನಿಗೇನು ?

ಗೆಳತಿಯರೂ ಮಧ್ಯಾಹ್ನದ ವೇಳೆಗೇ ಅತ್ತ ಬಂದರು. ಅವರೊಡನೆ ಕಲ್ಯಾಣಿಯ ದಿನ ಕಳೆದುಹೋಯಿತು.

ಪದ್ಮನಾಭ ಹಾಜರಿ ಒಪ್ಪಿಸಲು ಮರೆಯಲಿಲ್ಲ.

ವಾರ ಕಳೆಯಿತು. ಕಲ್ಯಾಣಿ ಎಂದಿನಂತೆ ತನ್ನ ಕಂಪೆನಿ ಕೆಲಸಗಳಲ್ಲಿ ತೊಡಗಿದಳು. ಪದ್ಮನಾಭ ನಡೆದುದೆಲ್ಲವನ್ನೂ ಮರೆತು ಎಂದಿನಂತೆ ನಡೆದುಕೊಂಡು ನಲಿದ. ಒಮ್ಮೆ ಹುಟ್ಟಿ ಹರಡಿದ ಸುದ್ದಿಯ ಬಿರುಗಾಳಿ ಶಾಂತವಾಯಿತು.

ಚಿತ್ರದ ಶೂಟಿಂಗ್ ಕೆಲಸ ಭರದಿಂದ ಸಾಗಿತು. ಹಾಗೇ ಕಲ್ಯಾಣಿ, ಪದ್ಮನಾಭ ಇವರ ವಿಲಾಸವೂ ಸಾಗಿತ್ತು. ಆದಷ್ಟು ಬೇಗ ಚಿತ್ರದ ಕೆಲಸ ಮುಗಿಸೋಣ. ಅನಂತರ ಮುಂದಿನ ಯೋಚನೆ ಎಂದುಕೊಂಡು ಅರುಣ ಆ ದಾರಿಯಲ್ಲಿ ದುಡಿಯುತಿದ್ದ. ಇಂದಿನ ಕೆಲಸ ಇಂದೇ ಮುಗಿಯಬೇಕೆನ್ನುವ ಮನೋಭಾವ ಅವನದು ವ್ಯವಹಾರ ಬುದ್ಧಿ ಅವನಿಗೆ. ಚಿತ್ರ ಮುಗಿಸಿಬಿಡೋಣ, ಆ ನಂತರ ಇನ್ನೊಂದಾಗಲಿ, ಮತ್ತೊಂದಾಗಲಿ ಎಂದಾತ ಉತ್ಸಾಹಿತನಾಗಿದ್ದ.

ಕಲ್ಯಾಣಿಯೂ ಹಿಂದಿನ ಮನೋಭಾವ ಮರೆಯುತ್ತ ಬಂದಳು. ಹಣ ಕೂಡಿಸಬೇಕು ; ತನಗೂ ಒಂದು ಕಾರು ಬೇಕು. ತಾನೂ ಮೆರೆಯಬೇಕು ಎಂಬ ಹುಚ್ಚು ಅವಳಿಗೆ ಅಂಟಿತು. ಆ ಆಶೆಗೆ ಬೇರಿ ನೀರೆರೆದು ಬೆಳೆಸಿದಳು. ಅವಳನ್ನು ಭೇಟಿಮಾಡಿಸಿ ಹಣ ಸುಲಿದಳು ; ಸ್ನೇಹ ಒದಗಿಸಿ ಲಾಭ ಪಡೆದಳು ; ಕೊನೆಗೆ ಅವಳನ್ನೂ ಒದಗಿಸಿದಳು.

ಇದೊಂದು ದಿನ ; ಇದೊಂದು ಬಾರಿ ; ಇವನೊಬ್ಬ –

ಈತ ಲಕ್ಷಾಧಿಕಾರಿ ; ನಮ್ಮವನಾದರೆ ನಾವೇ ಚಿತ್ರ ತಯಾರಿಸಬಹುದು ; ನಾವೇ ಲಕ್ಷ ಲಕ್ಷ ಗಳಿಸಬಹುದು.

ಪದ್ಮನಾಭನೇನು? ಅಂತಹ ಹತ್ತು ಮಂದಿ ಸಾಲದು – ಇವನ ಮುಂದೆ; ಇವನ ಸಂಪತ್ತಿನ ಮುಂದೆ.

ಬೀರಿಯ ಈ ಉಪದೇಶಗಳು ಫಲಿತವಾದುವು.

ಅವಳ ಸಕಲ ಗುಟ್ಟನ್ನು ಅವಳು ಅರಿತಿದ್ದಳು.

ಎಲ್ಲ ಅಶಕ್ತಿಗಳ ಅರಿವೂ ಅವಳಿಗಿತ್ತು.

ಕಲ್ಯಾಣಿ ಅವಳ ಕೈಯ ನೆಲ್ಲಿಕಾಯಿಯಾಗಬೇಕಾಯಿತು.

ಗಂಡೆಂದರೆ ಹೆದರುವ; ಗಂಡಿನ ಸಹವಾಸವನ್ನೇ ಮಾಡಿರದ ತರುಣಿಯರನ್ನು ಆಕೆ ಪಳಗಿಸಿದ್ದಾಳೆ.

ಹತ್ತು ಇಪ್ಪತ್ತು ವರ್ಷಗಳ ಕಾಲ ಒಬ್ಬನೇ ಪತಿ, ಅವನೇ ದೇವರೆಂದು ತಿಳಿದಿದ್ದ ಗರತಿಯರನ್ನು ಒಂದೇ ಒಂದು ಬಾರಿ ಎಂದು ನೂರು ಬಾರಿ ಈ ದಾರಿಗೆಳೆದಿದ್ದಾಳೆ.

ಆಸ್ಪತ್ರೆಯ ನರ್ಸುಗಳು –

ಶಾಲಾ ಹುಡುಗಿಯರು, ಮಾಸ್ತರ್‌ಗಳು –

ವ್ಯಾಪಾರಿಗಳ ಪತ್ನಿಯರು – ಪುತ್ರಿಯರು –

ವಿದ್ಯಾವಂತೆಯರು; ಧನಿಕರು; ಸಂಸಾರಿಗಳು –

ಎಲ್ಲರೂ ಬೀರಿಯ ಪುಂಗಿಗೆ ಹೆಡೆ ಎತ್ತಿ ಕುಣಿದಿದ್ದಾರೆ ಕಳೆದ ಮೂವತ್ತು ವರ್ಷಗಳಲ್ಲಿ.

ಈ ಕಲ್ಯಾಣಿಯ ನಿರ್ಧಾರ ಎಷ್ಟು ದಿನ; ಎಷ್ಟು ಸ್ಥಿರ?

ತಿಂಗಳುಗಳು ಕಳೆದುವು –

ಒಂದೇ ಒಂದು ಬಾರಿ – ಎಂದುದು ಹತ್ತು ಬಾರಿಯಾಯಿತು, ನೂರು ಬಾರಿಯಾಯಿತು.

ಒಬ್ಬನ ಬದಲು ಹತ್ತು ಮಂದಿ ಬಂದರು; ಹೊರಟು ಹೋದರು.

ಒಂದು ಗುಟುಕು ಹತ್ತಾಯಿತು; ಪಾನೀಯವಿಲ್ಲದೆ ನಿದ್ರೆಯೇ ಬಾರದಾಯಿತು ಕಲ್ಯಾಣಿಗೆ.

ತಿಂಗಳೂ ಐದಾಯಿತು –

ತಾನು ತಾಯಿಯಾಗುತಿದ್ದೇನೆ ಎಂಬ ಭೀತಿ ಅವಳಲ್ಲಿ ಮೂಡಿತು.

ಬೀರಿಯ ಕೈಚಳಕದಿಂದ ಈ ಚಿಂತೆ ಮಾಯವಾದರೂ ಹದಿನೈದು ದಿನ ಕಲ್ಯಾಣಿ ಹಾಸಿಗೆ ಹಿಡಿಯಬೇಕಾಯಿತು.

ಕಲ್ಯಾಣಿ ಹತ್ತು ಸಾವಿರ ಕೂಡಿಸಿದಳು.

ಮನಬಂದಂತೆ ಖರ್ಚು ಮಾಡಿದಳು.

ಒಮ್ಮೆ ಅವಳು ದೊರೆತರೆ ಸಾಕು. ಸಾವಿರವಾಗಲಿ, ಎರಡಾಗಲಿ ಎಂದು ಹಾರಿದವರೆಲ್ಲ ಬೀರಿಯ ಕಾವಲಿಗೆ ಹೆದರಿ ಹಿನ್ನಡೆದರು.

ಇಂದಲ್ಲ ನಾಳೆ ಈ ದಾರಿಯಿಂದ ಕೆಡುಕಿದೆ – ಎಂಬ ಭಾವ ಮೂಡಿ ; ಜುಗುಪ್ಸೆ ತಲೆದೋರಿತು ಕಲ್ಯಾಣಿಯಲ್ಲಿ. ಅವಳ ಸಂಸ್ಕೃತಿ ಅವಳನ್ನು ಕೆಳ ಕ್ಕಿಳಿಯಲು ಬಿಡಲಿಲ್ಲ.

ಕಲ್ಯಾಣಿಯನ್ನು ತನ್ನ ಸಾಲಿಗೆ ಎಳೆಯುವವನ್ನು ಬೀರಿ ನಿಲ್ಲಿಸಲಿಲ್ಲ.

ಕಲ್ಯಾಣಿಯ ಬಗೆಗೂ ಹತ್ತಾರು ಕತೆಗಳನ್ನು ಕೇಳಿ ಕೇಳಿ ಆ ಬಗೆಗೆ ಪ್ರಶ್ನಿಸಿ ಅತೃಪ್ತನಾದ ಪದ್ಮನಾಭ ಮುಳುಗಲು ಸಿದ್ಧನಾದ.

ಈಗ ಕಲ್ಯಾಣಿಯೂ ಸಿದ್ಧವಾದಳು.

ಬೀರಿಯ ಉಪದೇಶವನ್ನು ಕೇಳುತಿದ್ದಂತೆ ಪದ್ಮನಾಭನೊಡನೆ ಕಲ್ಯಾಣಿ ಜತೆಗೂಡಿ ನಿಂತಳು.

ಸ್ಟುಡಿಯೋ ಮಾಲಿಕರೂ, ಇತರ ಚಿತ್ರ ತಯಾರಕರೂ ಸಾಕ್ಷಿಯಾಗಿ ನಿಂತು, ಔತಣ ಉಂಡು ಹರಸಿದರು.

ಪದ್ಮನಾಭನ ತಾಯಿ, ಹೆಂಡತಿ, ಅತ್ತೆ ಎಲ್ಲರೂ ಕಣ್ಣೀರಿಟ್ಟರು.

ಏನೂ ಅರಿಯದ ಅವನ ಮಕ್ಕಳು ಸುಮ್ಮನಿದ್ದುವು.

ಮಾವ ರೋಷದಿಂದ ಕಿಡಿಕಿಡಿಯಾಗಿ ಘರ್ಜಿಸಿ, ಬೈದು, ಸುಮ್ಮನಾದ.

" ಭಕ್ತ ಪ್ರಹ್ಲಾದ ಚಿತ್ರ ಪೂರ್ಣವಾಗಲು ಇದು ಸಹಾಯಕ ವಾಯಿತು. ಇನ್ನು ಯಾವ ಗೊಂದಲವೂ ಇಲ್ಲದೆ ಕೆಲಸ ಸಾಗೀತು " ಎಂದಳು ರಮಾ.

" ಇನ್ನೇನಿದೆಯೋ ಯಾರು ಬಲ್ಲರು " ಎಂದು ದನಿಗೂಡಿಸಿದಳು ಶಾಂತಾ.

ಕಂಪೆನಿಯ ಇತರ ಹೆಣ್ಣುಗಳೂ ಆಗಲೇ ತುಂಬ ಪ್ರಗತಿ ಸಾಧಿಸಿದ್ದರು. ಅರುಣ ಯಾವ ಗೊಂದಲವೂ ಖರ್ಚೂ ಇಲ್ಲದೆ ತನ್ನ ಕಾರ್ಯ ಸಾಧಿಸಿದ್ದ.

ಅವನದೆಲ್ಲ ವ್ಯವಹಾರದೃಷ್ಟಿ, ಯಾಂತ್ರಿಕ ಜೀವನ. ರಂಗನಾಥ ಸರ್ವಾಧಿಕಾರಿಯಾಗಿ ದುಡಿಯುತಿದ್ದ.

ಕಂಪೆನಿಯ ಮನೆಯಲ್ಲೇ ಹೆಚ್ಚುಕಾಲ ಕಳೆಯಲು ಕಲ್ಯಾಣಿ ಮೊದಲು ಮಾಡಿದಳು.

ಈ ಪರಿಸ್ಥಿತಿಯಿಂದ ನೊಂದವರು ರುದ್ರಪ್ಪ, ನಾರಣಪ್ಪ, ಸ್ಟುಡಿಯೋದಲ್ಲಿನ ಒಂದಿಬ್ಬರು.

ಬೇಸರಗೊಂಡರೂ ಒಳ್ಳೆಯದೇ ಆಯಿತೆಂದವನು ಸತ್ಯನಾರಾಯಣ.

ವಿರೋಧಿಸಿ, ಪುನಹ ಧೈರ್ಯ ತಾಳಿ, ಎಂದಾದರೂ ಈ ಹಗ್ಗ ಕಡಿದೀತು ಎಂದು ನಂಬಿ ನಿಂತವಳು ಬೀರಿ!

ಕಲ್ಯಾಣಿಯ ಗೆಜ್ಜೆ ಹರಿದಿತ್ತು.

ಈಗ ಹೆಜ್ಜೆ ಜಾರಿತು.

ಒಂದು – ಎರಡು – ಮೂರು – ಈಗ ನಾಲ್ಕನೆಯ ಕಾರ್ಯಕ್ರಮ.

ಅವಳಿಗೀಗ ಸುಖ ನಿದ್ರೆ; ಪದ್ಮನಾಭ ಅವಳ ದಾಸಾನುದಾಸ. ನಿಮಿಷವೂ ಅವಳನ್ನು ಅಗಲಲಾರದೆ ಬಿದ್ದಿರುವ ಕಾಮಿ.

ಅಂದು ಅವರಿಬ್ಬರೂ ಅದೆಷ್ಟು ಹೊತ್ತು ವಿಹರಿಸಿದ್ದರೋ ಕಾಲಕಳೆದಿದ್ದರೋ?

ಒಂದೋ ಎರಡೋ ತಾಸಿಗೆ ಆತ ಹೊರಟು ಹೋಗಿರಬಹುದು.

ಕಲ್ಯಾಣಿ ಎಚ್ಚರವಾದಾಗ ಘಂಟೆ ಕಳೆದಿದೆ.

ತನ್ನ ಇಂದಿನ ಬಾಳಿನ ಬಗೆಗೆ ಯೋಚಿಸುತ್ತ ಅವಳು ಉಬ್ಬಿದಳು. ನೃತ್ಯದ ಕಡೆಗೆ ಅವಳು ಗಮನವನ್ನು ಹರಿಯಿಸದೆ, ಮೈಮುರಿದು ಸುಸ್ತಾಗುವವರೆಗೂ ಕುಣಿಯದೆ ಎಷ್ಟೋಕಾಲವಾಗಿ ಅವಳ ಮೈಯೂ ಉಬ್ಬಿದೆ.

ಅವಳೀಗ ಚಿತ್ರರಂಗದ ಅನಭಿಷಿಕ್ತ ರಾಣಿ.

ಅವಳಷ್ಟು ಸುಂದರಿಯರು ಇನ್ನೂ ಯಾರೂ ಈ ರಂಗವನ್ನು ಪ್ರವೇಶಿಸಿರಲಿಲ್ಲ.

ತನ್ನ ಬಗೆಗೆ ಯೋಚಿಸಿದಷ್ಟೂ ಅವಳು ಇಂದ್ರಲೋಕದಲ್ಲೇ ತಾನಿದ್ದೇನೆ ಎಂದು ಭಾವಿಸುತಿದ್ದಳು.

ಸುಂದರವಾಗಿ ಅಲಂಕರಿಸಿಕೊಳ್ಳಬೇಕು. ಎಲ್ಲರ ಗಮನವನ್ನೂ ತನ್ನೆಡೆ

ಸೆಳೆಯಬೇಕು. ಸಾವಿರ ಸಾವಿರ ಕಣ್ಣುಗಳು ತನ್ನ ಕಡೆ ಆಶಾದೃಷ್ಟಿ ಬೀರುವಂತೆ ಮಾಡಬೇಕು.

ಹಾಗೇ ಕೆಲವೊಮ್ಮೆ ಇದೇನೂ ಬೇಡ; ಎಲ್ಲಾದರೂ ಹೋಗೋಣ. ಸದಾ ಬಳಿಯಲ್ಲೇ ಇರುವವನೊಡನೆ ಬಾಳೋಣ – ಎನ್ನುತಿತ್ತು ಮನ. ಈ ಜೀವನ ಹೊಲಸು; ನಾನು ಸೂಳೆಯಾಗುತಿದ್ದೇನೆ – ಆಗಿದ್ದೇನೆ – ಗರತಿ ಎನಿಸಿದರೂ ಸೂಳೆ – ಎಂದು ಒಳಗಿನ ಒಳದನಿ ಕೂಗುತಿತ್ತು. ಆದರೆ – ತನ್ನ ಹೆಸರಿಗೆ ಬ್ಯಾಂಕಿನಲ್ಲಿರುವ ಹಣ ನೋಡಿದಾಗಲೆಲ್ಲ ಅವಳ ಈ ನಿರ್ಧಾರ ಅಳಿದು, ಜುಗುಪ್ಸೆ ಮಾಯವಾಗಿ ಧನದಾಶೆ ಹೆಚ್ಚುತಿತ್ತು. ರೌಪ್ಯ ಸೂರ್ಯನ ಮುಂದೆ ಎಲ್ಲ ನೀತಿ ನಿಯಮ ನಿಷ್ಟೆ ನಿರ್ಧಾರಗಳು ಮಂಜಿನಂತೆ ಕರಗುತಿದ್ದುವು.

ಬೆಳಗಿನ ಕಾಫಿ ಮುಗಿಸಿ ಕಲ್ಯಾಣಿ ತನ್ನ ಕೋಣೆ ಸೇರಿದಳು.

ದಿನದ ರಾಣಿಯಂತೆ ಅಲಂಕರಿಸಿಕೊಳ್ಳಲು –

ಹಾಗೇ ಮೈ ಮರೆತಳು – ನೂರು ಯೋಚನೆಗಳ ಸುಳಿಯಲ್ಲಿ ಸಿಲುಕಿ.

ಯಾರೋ ಕೂಗಿದಂತಾಯಿತು.

ಕನಸಿನಲ್ಲಿ ಹಾಸಿಗೆಯಿಂದ ಉರುಳಿದಂತೆ ಕಂಡು ಎಚ್ಚರವಾದಂತೆ – ಅವಳು ಎಚ್ಚರವಾದಳು.

ಮಗೂ, ಎಂದು ಯಾರಾದರೂ ಕೂಗಿದರೇ ?

ಹೌದು.... ಹಾಗೇ ಕೂಗಿದರು.

ಇನ್ನೊಮ್ಮೆ ಅದೇ ಕೂಗು....

ಮತ್ತೆ....

ಇಲ್ಲ.... ಅದೆಲ್ಲೋ ಅಳಿಯಿತು....

ಕಾದು ಕುಳಿತರೂ, ಕಿವಿ ನಿಮಿರಿಸಿದರೂ – ಏನೂ ಕೇಳಿಸಲಿಲ್ಲ.

## ೨೫

" ಗುಡ್ ಮಾರ್ನಿಂಗ್ "

ಉತ್ತರವಾಗಿ ಕಲ್ಯಾಣಿ ಕುಳಿತಲ್ಲಿಂದಲೇ ನುಡಿದಳು.

ಒಂಭತ್ತು ಘಂಟೆ; ಅರುಣೋದಯವಾಯಿತು.

ಹೌದು – ಅವರೇ....

ಹಿಂದೆ ಒಮ್ಮೆ ಬಂದರು. ಅಂದು ನಾನು ಅವರನ್ನು ನೋಡಲಿಲ್ಲ. ಅವರು ಬಂದಾಗ ಮನೆಯಲ್ಲಿ ಇರಲಿಲ್ಲ.

ಹೌದು. ಅವರನ್ನು – ಕೃಷ್ಣನನ್ನು – ಕಂಡು ಮಾತನಾಡಿದರು.

ಹ್ಞಾ....ನೆನಪಿದೆ....ಸೂಳೆಗೇರಿಗೆ ಗರತಿಯೊಬ್ಬಳು ಬಂದಿದ್ದಾಳೆ ಎಂದರಲ್ಲವೇ ಅವರು ?

ಅವಳು ಕಲಾವಂತೆಯಾಗಬಾರದು. ಕಲಾವಿದೆಯಾಗೇ ಇರಬೇಕು – ಎಂದು ಬಯಸಿದರು. '

ಅವರ ನುಡಿ ಸತ್ಯವಾಯಿತು ; ಬಯಕೆ ಬರಡಾಯಿತು.

ನಾನೂ ಸೂಳೆಯಾದೆ. ಗರತಿಯಾಗಿದ್ದೆ. ಮನೆಯಲ್ಲೊಬ್ಬ ಗಂಡಸು ಇದ್ದ – "ನಾಯಿಗಳಿವೆ ಎಚ್ಚರಿಕೆ" ಎಂಬ ಬೋರ್ಡು ಇದ್ದ ಹಾಗೆ!

ಆ ಬೋರ್ಡು ಇಲ್ಲವಾಯಿತು. ಕೃಷ್ಣ ನನ್ನನ್ನು ಬಿಟ್ಟು ಹೋದ. ಎತ್ತಲೋ ಹೋದ – ದೂರ ಹೋದ. ಸುಂದರನೂ ಸಹಾ.

ನಾನೂ ನಡೆದೆ. ಜಾರುವ ದಾರಿಯಲ್ಲೇ ಸಾಗಿದೆ.

ಸ್ವತಂತ್ರವಾಗಿ ಸುಖ ಅನುಭವಿಸುತ್ತೇನೆ – ಎಂದು ನೈಜ ಸ್ವಾತಂತ್ರ್ಯ ಮರೆತು ಲೈಂಗಿಕ ಸ್ವಾತಂತ್ರ್ಯ ಪಡೆದೆ. ಇದೇ ಹಾಸಿಗೆಯ ಮೇಲೆ ಹತ್ತಾರು ಮಂದಿ ಪವಡಿಸಿದರು.

ವೈವಿಧ್ಯತೆಯ ಅರಿವಾಯಿತು. ಅದೂ ಬೇಡವಾಯಿತು. ಜುಗುಪ್ಸೆ ಹುಟ್ಟಿತು. ಒಬ್ಬನೇ ಸಾಕೆಂದು ಬಯಸಿ ನಿಂತೆ. ಆದರೂ ನನ್ನನ್ನು ಹಿಂದಿನ ದಾರಿಗೆ ಸೆಳೆಯುವ ಸೂಜಿ ಕಲ್ಲುಗಳಿಂದ ದೂರವಾಗುವುದು ಅಸಾಧ್ಯವಾಗಿದೆ.

ನಾನು ದಾರಿ ತಪ್ಪಿದೆ. ಅದನ್ನರಿತವರು ನನ್ನ ಅಶಕ್ತಿಯ ಫಲ ಉಣ್ಣಲು ಸ್ವಾರ್ಥ ಸಾಧಿಸಿಕೊಳ್ಳಲು ಮುಂದೆ ಬರುತಿದ್ದಾರೆ.

ಬೀರಿಗೆ ನನ್ನೆಲ್ಲ ವಿಚಾರ ತಿಳಿದಿದೆ.

ಶಾಂತಾ, ರಮಾ, ಅರುಣ, ರಂಗನಾಥ – ಕಂಪೆನಿಯ ಎಲ್ಲರೂ ಬಲ್ಲರು. ಸ್ಟುಡಿಯೋದವರೂ ಬಲ್ಲರು. ರುದ್ರಪ್ಪನಿಗೂ ತಿಳಿದಿದೆ....ಇನ್ನು.... ಇನ್ನು....ಯಾರಿಗೇ ಎಲ್ಲ....ಅವರ ಹೆಸರು ಬೀರಿಗೇ ಗೊತ್ತು....ಕಾಫಿ

ಪ್ಲಾಂಟರ್ ಅಹಮ್ಮದ್.....ಕಂಟ್ರಾಕ್ಟರ್ ಆಂಜನಪ್ಪ.....ಆ.....ಅರಸು ಹುಡುಗ ...ಮತ್ತೊಬ್ಬ ಪ್ರೊಫೆಸರ್....ಇನ್ನೂ ಯಾರ್ಯಾರೋ....

ಇನ್ನು ಬೇಡ ಈ ದಾರಿ....ದಾರಿ ತಪ್ಪುತ್ತೀನೆ ಎಂದು ತಿಳಿಸಲು ಅಂದು ಮಾಸ್ತರ್ ಬಂದರು.

ಇಂದು, ದಾರಿ ತಪ್ಪಿದ್ದೀನೆ ಎಂದು ಎಚ್ಚರಿಕೆ ನೀಡಲು ಮಾಸ್ತರ್ ಬಂದಿದ್ದಾರೆ.

ನಿಜ! ಒಮ್ಮೆ ಜಾರಿದವನು ಮತ್ತೂ ಜಾರುತ್ತಾನೆ.

ಒಂದು ಬಾರಿ ನಮ್ಮ ಗುಟ್ಟು ಬಯಲಾದರೆ ಮತ್ತೆ ಗುಟ್ಟು ನಿಲ್ಲುವುದೇ ಇಲ್ಲ.

ನರ್ತನ ಎತ್ತಲೋ ನಡೆದು ಹೋಯಿತು.

ನಾಟ್ಯ ರಾಣಿಯಾಗಿದ್ದವಳು ನಟಿಯಾದೆ; ಗರತಿಯಾಗಿದ್ದವಳು – ಸೂಳೆಯಾದೆ....

ಯೋಚಿಸುತ್ತಿದ್ದಂತೆ ಕಲ್ಯಾಣಿಗೆ ಕಣ್ಣು ಕತ್ತಲೆ ಬಂತು. ತಾನು ಅನ್ಯಾಯ ಮಾಡಿದೆ, ದಾರಿ ತಪ್ಪಿದೆ ಎಂಬ ಅರಿವಾಯಿತು.

ಗಂಡಸರ ಬಗೆಗೆ ತುಚ್ಛಭಾವನೆ ಮೂಡಿತು.

ತನ್ನ ಬಗೆಗೆ ಜುಗುಪ್ಸೆ ಬೆಳೆಯಿತು.

ಮಾಸ್ತರ್ ಬಗೆಗೆ ಅಭಿಮಾನ ಉಕ್ಕಿತು.

ಎಂದೆಂದೂ ಅವರು ತನ್ನ ಹಿಂದೆ ಇದ್ದಾರೆ – ಅಶರೀರವಾಣಿಯಂತೆ ಎಚ್ಚರಿಕೆ ನೀಡುತ್ತಿದ್ದಾರೆ. ಕಗ್ಗತ್ತಲೆಯ ಕಾಡಿನಲ್ಲಿ ತಡವರಿಸಿದಾಗ ದಾರಿ ತೋರುತ್ತಾರೆ, ತನ್ನ ಪ್ರೇಮದ ಬೆಳಕನ್ನು ಹಿಡಿದು.

ಅರುಣ ಹೊರಗೆ ಕಾದು ಕಾದು ಬೇಸರಗೊಂಡ. ಬಂದಾಗಲೆಲ್ಲ ಹುಲ್ಲೆಯಂತೆ ಚಿಗಿದು ನಲಿದು ಬರುತ್ತಿದ್ದವಳು. ಪದ್ಮನಾಭನ ಮಡದಿಯಾಗಿದ್ದರೂ ಅವಳಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ಅವನ ಆಶೀರ್ವಾದ, ಬೆಂಬಲದಿಂದಲೇ ಅವಳೂ ಅವನ ಪಾಲಿಗೆ ಸೇರಿದ್ದಳು. ಆದರೆ ಇಂದು ಅನಿರೀಕ್ಷಿತವಾಗಿ ಅವಳ ಅಲಂಕಾರದ ಅವಧಿ ಬೆಳೆದಿದೆ. ಕರೆ ಕೇಳಿದೊಡನೆ ಆಹ್ವಾನಿಸಿ ಕುಳ್ಳಿರಿಸಿಕೊಂಡು ಅಲಂಕಾರ ಮಾಡುತ್ತಿದ್ದಳು. ಮುಖ ತೊಳೆದು ಬರುತ್ತೀನೆ ಎಂದು ಧಾವಿಸುತ್ತಿದ್ದಳು. ಬಾಯಿ ತುಂಬ ಮಾತನಾಡುತ್ತಿದ್ದಳು.

ಆ ಸಲುಗೆ, ಆ ಉತ್ಸಾಹ ಎತ್ತ ಹೋಯಿತು.

ಒಳಗೆ ನಡೆದು ಅವಳೊಡನೆ ಪರಿಹಾಸ್ಯದ ಮಾತುಗಳನ್ನಾಡಿ ಕೆಣಕೋಣವೆಂದು ಒಮ್ಮೆ ಎದ್ದು ನಿಂತವನೂ ಪುನಃ ಸೋಫಾದ ಮೇಲೆ ಕುಳಿತುಕೊಂಡ.

ಬೀರಿ ಕಾಫಿ ತಂದು ಅವನ ಮುಂದೆ ಇರಿಸಿದಳು. ಯೋಚನೆ, ಸಂದೇಹ, ಅಚ್ಚರಿಗಳಲ್ಲಿ ಮೈಮರೆತಿದ್ದ ಅರುಣ ಯಂತ್ರದಂತೆ ಆ ಕಾಫಿ ತಟ್ಟೆಯನ್ನೆತ್ತಿ ಕುಡಿದ.

ಬೀರಿ ಒಳಗಡೆ ನಡೆದು ಇನ್ನೊಂದು ತಟ್ಟೆಯನ್ನು ಕಲ್ಯಾಣಿಯ ಮುಂದಿಟ್ಟು, ಹಾಗೇ ಅವಳ ಕಡೆ ನೋಡಿದಳು.

ನೆಲದೆಡೆ ಅರ್ಥವಿಲ್ಲದ ಗುರಿಯಿಲ್ಲದ ದೃಷ್ಟಿ ನೆಟ್ಟು ಆಕೆ ಕುಳಿತಿದ್ದಳು. ಕಣ್ಣೀರು ನೆಲವನ್ನು ತೊಯಿದಿತ್ತು.

ಬೀರಿ ಮಾತನಾಡಲಿಲ್ಲ.

ಕಲ್ಯಾಣಿ ಅವಳೆಡೆ ತಿರುಗಿದಳು.

"ಮೃದಂಗದ ರಾಮುವನ್ನು ಬರಹೇಳು – ಬೀರಿ."

"ಯಾಕಮ್ಮ ಚಿಂತೆ........ಅರುಣ ಬಂದಿದ್ದಾರೆ...."

"ಹ್ಞ...."

ಬೀರಿ ಮುಂದೆ ಮಾತನಾಡದೆ ಹೊರಟು ಹೋದಳು. ಅವಳ ಒಡತಿ ಹಿಂದೆ ಎಂದೂ ಈ ರೀತಿ ಅತ್ತುದು ಅವಳಿಗೆ ನೆನಪಿಲ್ಲ. ಇಂಥ ಮೌನದ ಅರ್ಥವೂ ಅವಳಿಗಾಗಲಿಲ್ಲ. ಆದರೂ....ಆ ಯಾರೋ ಬಂದಿದ್ದವನು, ಹ್ಞಾ ....ಮಾಸ್ತರ್....ಅವನನ್ನು ಕಳುಹಿಸಿಬಿಟ್ಟುದೇ ತಪ್ಪಾಯಿತೋ ಏನೋ ಎಂದು ತನ್ನ ತಪ್ಪಿಗೆ ತಾನೇ ಹಳಿದುಕೊಂಡಳು.

ಬೀರಿ ಕೋಣೆಯೊಳಗೆ ಕೇಳಿದ ಪ್ರಶ್ನೆ? ನಿಜ! ಅವಳು ಚಿಂತಿಸುತಿದ್ದಾಳೆ....

ಕಲ್ಯಾಣಿ ಕಣ್ಣುಗಳನ್ನೊರಸಿಕೊಂಡು ನಿಧಾನವಾಗಿ ಹೊರಗಡೆ ಬಂದಳು.

ಸರ್ವ ಶಕ್ತಿಯನ್ನೂ ಕಳೆದುಕೊಂಡು ನಿಸ್ತೇಜಳಾದವಳಂತೆ ಆಕೆ ಕಾಣಿಸುತಿದ್ದಳು.

ಕೈಯಲ್ಲಿ ಕಾಫಿ ತಟ್ಟೆಯನ್ನು ಹಿಡಿದುಕೊಂಡೇ ಕುರ್ಚಿಯ ಮೇಲೆ ಕುಳಿತಳು. ಬಲಾತ್ಕಾರಿಕವಾಗಿ ಮುಗುಳುನಗೆ ಬೀರಿ, ಕಾಫಿ ಕುಡಿದಳು.

" ಏನಾಯಿತು ಕಲ್ಯಾಣಿ....ಯಾಕೆ ಅಳು...."

" ಏನೂ ಇಲ್ಲ...."

" ಅಂದರೆ? ಹಾಗನ್ನಬೇಡ. ನಡೆದುದನ್ನು ಹೇಳು. ನನ್ನೊಡನೆಯೂ ಹೇಳಬಾರದೇ?"

" ಹೇಳುತ್ತೇನೆ....ಇಂದಲ್ಲವಾದರೆ ನಾಳೆಯಾದರೂ ಹೇಳುತ್ತೇನೆ...." ಅಳು ಉಕ್ಕಿ ಬಂದು ಅವಳ ಮಾತು ನಿಂತಿತು.

ಪುನಃ ದುಃಖವನ್ನು ನುಂಗಿಕೊಂಡಳು.

ಹಾಲ್‌ನೆಡೆ ನಡೆದಳು. ಟ್ರಂಕ್‌ನ ಬಾಗಿಲು ತೆರೆದು ವರುಷದಿಂದಲೂ ಮುದುಡಿ ಕುಳಿತಿದ್ದ ಭರತನಾಟ್ಯದ ಉಡಿಗೆಯನ್ನೆತ್ತಿ ಕಣ್ಣಿಗೆ ಒತ್ತಿಕೊಂಡಳು. ಹಾಗೇ – ರವಕೆ....ಹಾರ....ಮುಂದಲೆ ಬೊಟ್ಟು....ಕಂಕಣ....ತೋಡ....ಒಂದೊಂದಾಗಿ ಎತ್ತಿಕೊಂಡು ಅದರ ಮೇಲೆ ಧೂಳಿರಬಹುದೆಂದು ಸೆರಗಿನಿಂದ ಒರಸಿದಳು....

ಉಡಿಗೆ ಧರಿಸಿದಳು....ರವಕೆ ತೊಟ್ಟಳು....ನೋಡಿಕೊಳ್ಳಲು ಅಲ್ಲಿ ಕನ್ನಡಿಯಿಲ್ಲ....ಆಭರಣಗಳನ್ನೆತ್ತಿಕೊಂಡು ತನ್ನ ಕೋಣೆಗೇ ಬಂದಳು.

ಅರುಣ ಅಚ್ಚರಿಯಿಂದ ದಂಗು ಬಡಿದವನಂತೆ ಮಿಕಮಿಕ ಅವಳನ್ನೇ ನೋಡುತ್ತಿದ್ದ.

ಕಲ್ಯಾಣಿ ಅಲಂಕರಿಸಿಕೊಳ್ಳಲಾರಂಭಿಸಿದಳು.

ಬೀರಿ ಮದ್ದಳೆಗನೊಂದಿಗೆ ಬಂದಳು. ಅವನು ಮದ್ದಳೆ ಸಹಿತವಾಗೇ ಬಂದಿದ್ದ.

ಅದನ್ನು ಹೊತ್ತು ತಂದ ಹುಡುಗನಿಗೆ ಕೂಲಿ ಕೊಟ್ಟು ಕಳುಹಿಸಿದ– ಮದ್ದಳೆಗ.

ಅರುಣನಿಗೆ ವಂದಿಸಿ ಅವನೂ ಕುಳಿತುಕೊಂಡ.

ಕಲ್ಯಾಣಿ ಕೋಣೆಯಿಂದ ಹೊರಬಂದಳು. ಅವಳ ದುಃಖ ಅದೆಷ್ಟೋ ಕಡಿಮೆಯಾಗಿ ಹೃದಯ ಹಗುರವಾಗಿತ್ತು.

" ಹೇಗೆ ಒಪ್ಪುತ್ತೆ ? ನಿಮಗೆ ಆಶ್ಚರ್ಯವಾಗಿರಬಹುದಲ್ಲವೇ ?.... ಹ್ಞೂ....ನನ್ನ ಬಾಳು ನನಗೇ ಅಚ್ಚರಿ....ಇತರರಿಗೆ ಅಚ್ಚರಿಯಲ್ಲವೇ ?"

" ಕಲ್ಯಾಣಿ....ತುಂಬ ಉದ್ವೇಗಗೊಂಡಿದ್ದೀಯ. ಯಾಕೆ ಹೀಗೆ? ಕೊಂಚ ಕುಳಿತುಕೊಳ್ಳಬಾರದೇ ?....ಬೀರಿ....ಸ್ವಲ್ಪ ಕಾಫಿ ಸಿದ್ಧಗೊಳಿಸಮ್ಮ...."

" ಉದ್ವೇಗಗೊಂಡಿದ್ದೆ, ಉದ್ವಿಗ್ನಳೂ ಆಗಿದ್ದೆ ಸಾರ್. ಅದೆಲ್ಲ ಕಳೆದು ಹೋಯಿತು. ಈಗ ಮನಸ್ಸು ಶಾಂತವಾಗಿದೆ. ಅತೃಪ್ತಗೊಂಡ ಮಹಾನದಿ, ಮಹಾಪೂರವಾಗಿ, ಎತ್ತೆತ್ತಲೋ ಹರಿದು ಮನಬಂದಂತೆ ಸಾಗುತ್ತದೆ. ಇದಿರಾದುದನ್ನೆಲ್ಲ ಕೊಚ್ಚಿಕೊಂಡು ಹರಿಯುತ್ತದೆ. ಆ ಮಳೆ ನಿಂತು, ತುಂಬಿದ ನೀರು ಹರಿದ ಮೇಲೆ, ಮತ್ತೆ ಶಾಂತವಾಗಿ ಸಮಾಧಾನದಿಂದ ಸಾಗುತ್ತದೆ. ಆಗ ಆ ನದಿ ಎಲ್ಲರಿಗೂ ಬೇಕು. ಉಬ್ಬಿದಾಗ ಅದನ್ನು ಎಲ್ಲರೂ ದೂರ ಬಿಟ್ಟು ನಡೆಯುತ್ತಾರೆ; ಜರಿಯುತ್ತಾರೆ....

" ಹಾಗೇ ನಾನು....ನೀವು....ಎಲ್ಲರೂ.

" ಶಾಂತವಾದಾಗ ಮಹಾಪೂರವಾಗುವ ಬಯಕೆ. ಹಾಗಾದಾಗ ಶಾಂತವಾಗುವ ಇಚ್ಛೆ....

" ನನ್ನ ಬಾಳಿನಲ್ಲಿ ಎರಡೂ ಆಯಿತು. ಇನ್ನು ಶಾಂತಳಾಗಿ ಬಾಳುತ್ತೇನೆ."

" ಚಿಂತೆಯನ್ನು ತುಂಬ ಹಚ್ಚಿಕೊಂಡಿದ್ದೀಯ. ಅದನ್ನು ಮರೆತು ಬಿಡು ಕಲ್ಯಾಣಿ. ಏನೋ ಯೋಚಿಸಿಕೊಂಡು ದುಃಖಿಸುತಿದ್ದಿ."

" ಎಲ್ಲವನ್ನು ಯೋಚಿಸಿದೆ ಸಾರ್. ಹಿಂದಿನ ಕಥೆಯೆಲ್ಲ ನೆನಪಾಯಿತು. ಹಾಗೇ ಈ ಚಿಂತೆ ಮೂಡಿತು."

" ಅದೆಲ್ಲ ನೆನೆದುಕೊಂಡೇನು ? ಇದೇಕೆ ಈ ಉಡಿಗೆ...."

" ನರ್ತಿಸಬೇಕೆಂದು ಮನಸ್ಸಾಯಿತು....ಈ ಉಡಿಗೆಗಳನ್ನು ಮುಟ್ಟದೆ ಎಷ್ಟೋ ಕಾಲವಾಯಿತು. ಅವುಗಳ ಮರವೆಯೇ ಆಗಿತ್ತು ನನಗೆ. ಇಂದು ಅವುಗಳ ನೆನಪಾಯಿತು....ನನ್ನ ನೆನಪಾಯಿತು....ಎಲ್ಲರ ನೆನಪೂ ಆಯಿತು...."

" ಅದಕ್ಕೇ ಚಿಂತಿಸುತಿದ್ದೀಯ. ಚಿಂತೆ ಯಾಕೆ - ಹೊಸ ಬಾಳು, ಹೊಸ ಲೋಕ, ಹೊಸ ಸಂಸಾರ...."

" ನಿಜ ಸಾರ್. ಇದುವರೆಗೂ ಮುನ್ನಡೆದೆ; ಮುಂದಕ್ಕೋಡಿದೆ. ಈಗ ಹಿಂದೆ ತಿರುಗಿ ನೋಡಿದೆ. ನನ್ನ ತಪ್ಪು ನನಗೇ ತಿಳಿದು ಬಂತು. ಹಿಂದೆ ನೋಡದೆ ಮುಂದೆ ನಡೆಯಬಾರದೆಂದು; ಅಸ್ತಿವಾರವಿಲ್ಲದೆ ಮನೆಕಟ್ಟಬಾರದೆಂದು ಈಗ ತಿಳಿದೆ.

" ಯಾಕೆ ಮೌನ? ನಿಮಗೆ ಇನ್ನೂ ಸಮಸ್ಯೆಯಾಗಿದೆ ಅಲ್ಲವೇ ?

" ನಿಜ ! ಆಗಲೇ ಬೇಕು. ಈಕೆ ಕೃಷ್ಣನ್ ನಾಯರ್ ಮಗಳು - ಕಲ್ಯಾಣಿ ! ಏನೂ ಅರಿಯದ ಹೆಣ್ಣು, ಎಲ್ಲೋ ಯಾವುದೋ ಗುಡಿಸಲಲ್ಲಿ ಯಾರೋ ದಿನಗೂಲಿಯ ಮನೆಯಲ್ಲಿ ಬಾಳಬೇಕಾಗಿದ್ದ ಕಲ್ಯಾಣಿ ಕುಟ್ಟಿ.

" ಅವಳನ್ನು ಮಾಸ್ತರ್ ಎತ್ತಿದರು, ತೊಳೆದು ಶುಚಿಗೊಳಿಸಿ, ತಿದ್ದಿ, ತೀಡಿ, ಮಿರುಗು ಕೊಟ್ಟು ನಾಟ್ಯ ಸರಸ್ವತಿಯಾಗಿ ಮಾಡಿದರು. ಹಾಗೆ ಮೆರೆದೆ; ನಾಡಿನಾದ್ಯಂತ ಕೀರ್ತಿ ಗಳಿಸಿದೆ. ನಾಟ್ಯ ಸರಸ್ವತಿ ಕಲ್ಯಾಣಿಯಾದೆ !

" ಅಲ್ಲಿಂದ ಒಂದು ಹೆಜ್ಜೆ ಜಾರಿದೆ. ಈ ಚಿತ್ರರಂಗಕ್ಕೆ ಕಾಲಿಟ್ಟೆ.

" ಆಗ ಮಾಸ್ತರ್ ಬಂದು ಎಚ್ಚರಿಸಿದರು. ಇದು ಸೂಳೆಗೇರಿ....ಗರತಿಯರಿಗೆ ಸ್ಥಳವಲ್ಲ....ಎಂದರು.

" ಆ ಮಾತನ್ನು ದೂಡಿದೆ. ನಾನು ಧನವಂತಳಾದೆ; ಕಲಾವಿದಳಾಗಿದ್ದವಳು ಕಲಾವಂತೆಯಾದೆ. ನಾಟ್ಯ ಸರಸ್ವತಿಯಾಗಿದ್ದವಳು ಕೇವಲ ಕಲ್ಯಾಣಿಯಾದೆ !

" ಈಗ ಪುನಃ ಮಾಸ್ತರ್ ಎಚ್ಚರಿಸಿದ್ದಾರೆ...."

" ಇಲ್ಲಿಗೆ ಬಂದಿದ್ದರೇ ? ಏನಂದರು ? ಎತ್ತ ಹೋದರು ?"

" ಬಂದಿದ್ದರು. ಏನೂ ಅಂದಿಲ್ಲ. ಎತ್ತ ಹೋದರೋ ಅದೂ ತಿಳಿಯದು...."

ಕಲ್ಯಾಣಿಯ ಕಣ್ಣುಗಳಿಂದ ನೀರು ಸುರಿಯುತಿತ್ತು. ಕಣ್ಣೊರಸಿಕೊಂಡೇ ಅವಳು ಮಾತನಾಡುತಿದ್ದಳು. ಬೀರಿ ಕಾಫಿ ತಂದಿಟ್ಟಳು. ಅವಳೇ ತಟ್ಟೆಯನ್ನೆತ್ತಿ ಅರುಣನಿಗೂ, ರಾಮುವಿಗೂ ಕೊಟ್ಟು ತಾನೂ ಕುಡಿದಳು.

"ರಾಮಣ್ಣ....ಇಂದು ನಾನು ನರ್ತಿಸುತ್ತೇನೆ. ನೀನು ಸಹಾಯ ನೀಡಬೇಕು. ನಾನು ಹತ್ತು ವರುಷ ಕಲಿತುದನ್ನು ಒಂದೇ ವರ್ಷದಲ್ಲಿ ಮರೆತೆ. ತನ್ನ ನೈಯ ನೆತ್ತರನ್ನು ನೀರಾಗಿ ಹರಿಸಿ, ನನ್ನ ಮಾಸ್ತರ್ ನನಗೆ ವಿದ್ಯೆ ಕಲಿಸಿದರು.

"ನನ್ನ ಪ್ರೇಮವೆಲ್ಲ ನಿಜವೆಂದು ನಂಬಿ ತನ್ನ ಕಲಾಕೇಂದ್ರವನ್ನುಳಿದು ಕೃಷ್ಣ ನನ್ನ ಜತೆಗೇ ಬಂದರು.

"ಗುರುಗಳನ್ನು ಮರೆತೆ; ತಂದೆಯನ್ನು ಮರೆತೆ. ನನ್ನವರನ್ನೂ ಮರೆತೆ.

"ನನ್ನ ಉತ್ಕರ್ಷೆ ಬಯಸಿದವರನ್ನೆಲ್ಲ ದೂರ ದೂಡಿದೆ. ಮನ ಬಯಸಿದ ಕೃಷ್ಣನಿಲ್ಲ. ಕಲೆ ಬಯಸಿದ ಶ್ರೀಕಂಠನಿಲ್ಲ. ತನು ಬಯಸಿದವರೆಲ್ಲ ನನ್ನವರೆಂದು ನಂಬಿದೆ....

"ಅರುಣ....ನಿಮಗೆ ತಿಳಿದಿದೆ....ನೀವೂ ಸಂಸಾರದಲ್ಲಿ ಬೆಳೆದಿರಿ, ಸಂಸಾರವಂದಿಗರು. ಹೆಣ್ಣಿನ ಮಗ, ಹೆಣ್ಣಿನ ಅಣ್ಣ, ಹೆಣ್ಣಿನ ಗಂಡ, ಹೆಣ್ಣಿನ ತಂದೆ. ಆದರೂ ಹೆಣ್ಣಿನ ಹೃದಯದ ಅರಿವು ನಿಮಗಾಗಲಿಲ್ಲ. ನನಗೂ ಆಗಲಿಲ್ಲ. ನಾನೂ ಪದ್ಮನಾಭನನ್ನು ನನ್ನ ಬಲೆಗೆಳೆದೆ.

"ಒಬ್ಬನನ್ನು ನಾನೇ ನನ್ನ ಸರ್ವಸ್ವವೆಂದು ಬಗೆದು ಅವನ ಹಿಂದೆ ಬಂದೆ. ಅವನು ನನ್ನಿಂದ ದೂರವಾದ; ನಾನೇ ದೂಡಿದೆ!

"ಇನ್ನೊಬ್ಬ ನಾನೇ ಸರ್ವಸ್ವವೆಂದು ಬಂದಿದ್ದಾನೆ; ತನ್ನವರೆಲ್ಲರನ್ನೂ ದೂರವಿರಿಸಿ ಬಂದಿದ್ದಾನೆ.

"ಹಿಂದಿನ ತಪ್ಪು ಇನ್ನು ನಡೆಯಬಾರದಲ್ಲವೇ? ಯಾರು ಎಷ್ಟು ಸುಖ ಕೊಡಬಲ್ಲರೆಂಬುದನ್ನೂ ತಿಳಿದಿದ್ದೇನೆ. ಎಲ್ಲರೂ ಕೊಟ್ಟುದು ಒಂದೇ ಬಗೆಯ ಸುಖ. ಎಲ್ಲರೂ ಬಯಸಿದ್ದು ತನು!

"ಇನ್ನು ಸಾಕು ಈ ದಾರಿ ಸಾರ್.

"ಕಲ್ಯಾಣಿ – ನಾಟ್ಯ ಸರಸ್ವತಿಯಾಗಲು ಬಯಸುತ್ತಾಳೆ. ನೀವು ಸಹಾಯ ಮಾಡಬೇಕು. ದಾರಿ ತಪ್ಪಿದಾಗ ವಿವೇಕ ಹೇಳಿ ದಾರಿ ತೋರಿಸಬೇಕು....

"ರಾಮಣ್ಣ....ಮದ್ದಳೆ ಸಿದ್ಧಮಾಡಿ....ಒಂದಿಷ್ಟು ಕುಣಿಯುತ್ತೇನೆ....

"ನನ್ನ ಪಾಪದ ಕೊಳೆ ತೊಳೆಯಲೆಂದು; ನನ್ನ ಗುರುವಿಗೆ ನೆಮ್ಮದಿಯಾಗಲೆಂದು; ನನ್ನ ಸ್ವಾಮಿಗಾದ ಅನ್ಯಾಯ ಅಳಿಯಲೆಂದು; ನನ್ನ ಜಂಬಲಕ್ಕೆ ನಿಂತ ಸ್ವಾಮಿಗೆ ಒಳಿತಾಗಲೆಂದು....ಕುಣಿಯುತ್ತೇನೆ...."

ರಾಮು ಮದ್ದಳೆಯನ್ನು ಚೀಲದಿಂದ ಹೊರತೆಗೆದ. ಒಳಗೆ ನಡೆದು ಹಿಟ್ಟು ಕಲಸಿ ಅದನ್ನು ಸಿದ್ಧಗೊಳಿಸಲು ತೊಡಗಿದ.

"ದುಃಖಿಸಬೇಡ ಕಲ್ಯಾಣಿ. ನನ್ನಿಂದಾದ ಸಹಾಯ ಮಾಡುತ್ತೇನೆ. ನಾನೂ ತಪ್ಪು ಮಾಡಿದೆ. ಮನ್ನಿಸಿಬಿಡು. ನನ್ನ ಮಕ್ಕಳಾಣೆಯಾಗಿ ಹೇಳುತ್ತೇನೆ – ನನ್ನ ಸಹಾಯ ಸದಾ ನಿನ್ನದಿದೆ....

"ಇಂದು ನಿನ್ನ ಬಾಳು ಎತ್ತೆತ್ತಲೋ ಹಾರಾಡಿ ಒಂದು ನೆಲೆಗೆ ಮುಟ್ಟಿದೆ. ಪದ್ಮನಾಭನೂ ನಿನ್ನನ್ನು ಚೆನ್ನಾಗಿ ನೋಡುವಂತೆ ನಾನೂ ಯತ್ನಿಸುತ್ತೇನೆ. ಅವನು ನಿನ್ನವನು; ನೀನೂ ಅವನವಳಾಗು. ನಿಮ್ಮ ಬಾಳು ಸುಗಮವಾಗಲಿ."

"ಹಾಗಾಗಲೆಂದು ಬೇಡುತ್ತೇನೆ. ನನ್ನ ಗುರುವಿನ ಹರಕೆ ನನ್ನ ಮೇಲಿದೆ. ಅದರಿಂದಲೇ ಇಷ್ಟು ಕಾಲವಾದರೂ ಬದುಕಿದ್ದೇನೆ. ಅವರ ಆಶೀರ್ವಾದವಿದೆ – ಆದರೂ ಸೂಳೆಯಾಗಲು ಹೊರಟವಳು ಗರತಿಯಾದೆ."

"ಅದನ್ನೆಲ್ಲ ನೆನಸಿಕೊಳ್ಳಬೇಡಮ್ಮ. ಹಾಗೆಲ್ಲ ಕಳೆದುದಕ್ಕೆ ಚಿಂತಿಸಬಾರದು........ಹ್ಞೂ....ಏಳು....ನರ್ತಿಸು....ಎಲ್ಲ ಚಿಂತೆ ಮರೆತುಹೋಗುತ್ತದೆ...."

"ನನ್ನ ಚಿಕ್ಕಮ್ಮ ಒಬ್ಬಳಿದ್ದಾಳೆ ಅರುಣ್....ನನ್ನ ಮಾಸ್ತರರನ್ನು ಒಲಿಸಿಕೊಂಡ ನೃತ್ಯ ದೇವತೆ....ಕಲ್ಪನಾ ಎಂದವಳ ಹೆಸರು....

"ಅವಳು ನನ್ನ ಸಾಕು ತಾಯಿ....ಆಗಾಗ ಒಂದು ಹಾಡು ಹಾಡುತಿದ್ದಳು. ಮಾಸ್ತರರ ದುಃಖ ನೀಗಲು ತಾನು ಅಶಕ್ತಳಾದಾಗಲೆಲ್ಲ ಅದನ್ನೇ ಗೊಣಗುತಿದ್ದಳು....

" ನೆನಪಿಹುದು ಮರೆತಿಲ್ಲ....ಗುರುಚರಣ ದಾಸಿ....

ನಾಟ್ಯದೇಗುಲದಲ್ಲಿ ಆರತಿಯನೆತ್ತಿದೆನು
ತನ್ನ ತನುವನು ತಾಯ ಪಾದಕೆರಗಿ....
ಹಾರಿತ್ತು ಹಕ್ಕಿ ಗೂಡನ್ನುಳಿದು ನಾಡುಳಿದು....
ಹಾರಿತ್ತು ನನ್ನ ಮನ ಕಂಡ ಕಂಡೆಡೆಗೆ....
ಗರಿ ಬೆಳೆದ ಹೆಮ್ಮೆ ಹುಮ್ಮಸವೆಲ್ಲ ಗರಿಯಿರಲು,
ಗುರಿಯಿರಲು, ಮೈಯು ಬಲಬಲವಾಗಿರೆ....
ಎಲ್ಲೆಲ್ಲಿ ತಂಗಿದರು ಮರವಿರಲಿ ಕಲ್ಲಿರಲಿ
ನನ್ನ ಹೃದಯದ ಅಳಲ ಕೇಳಲಿಲ್ಲ !

ಅದಕ್ಕೆ ನನ್ನ ಕಥೆಯನ್ನು ಸೇರಿಸುತ್ತೇನೆ; ನನ್ನ ತಾಯಿಯ ಮಗಳಾಗಿ, ಅರುಣ್—

ಇಂದಿಲ್ಲಿ ಮಾನವಗೆ ಮಾನವನೆ ಮಾರಿದೆನು
ಮನದ ಮಂಟಪದ ಗೋಡೆಯನುರುಳಿಸಿ –
ತನ್ನ ತನುವನು ಬಯಸಿ ಬಂದವರೆ ನೂರಾರು
ಮಂದಿ, ಮನ ಬಯಸಿದರು ಎಲ್ಲು ಇಲ್ಲ....
ಇಲ್ಲ....ನನ್ನಯ ಮನಕೆ ಮಂಟಪವ ರಚಿಸುವಾ
ನಂಬಿಕೆಯದೆನಗಿಲ್ಲ – ಹಿಡಿತವಿಲ್ಲ.
ಆದರೂ ದುಡಿಯುವೆನು ಬಾಳುವೆನು ಬದುಕುವೆನು
ಕೆಸರ ನಡುವಲಿ ನಿಂದ ಕಮಲವಾಗಿ—

ರಾಮು ಮದ್ದಳೆಯನ್ನು ಸಿದ್ಧಗೊಳಿಸಿ, ಅವಳ ಹಾಡನ್ನು ಅನುಸರಿಸುತಿದ್ದ.

ಕಲ್ಯಾಣಿ ಎದ್ದು ನಿಂತು ಹಾಲ್‌ನೆಡೆ ನಡೆದು ನರ್ತಿಸಲು ಆರಂಭಿಸಿದಳು.

ಒಂದಾಯಿತು....
ಎರಡಾಯಿತು....
ಮೂರಾಯಿತು....

ಇನ್ನೂ ನರ್ತಿಸುವ ಹುಮ್ಮಸ್ಸು....ತನ್ನನ್ನೇ ತಾನು ಬಲಿಗೊಡಲು ನಿಂತಂತೆ ಆಕೆ ನಿಂತಿದ್ದಳು.

" ಒಂದು ಕತೆಯಿದೆ ಅರುಣ್....ಸುಂದರವಾದ ಕತೆ....ಬ್ರಹ್ಮದೇವರಿಗೆ ೫ ಮುಖಗಳಿದ್ದುವಂತೆ ; ಪಂಚಮುಖಿ ಬ್ರಹ್ಮ ಎಂದೂ ಹೆಸರಿದೆ ಆತನಿಗೆ. ಅವನ ಒಂದು ತಲೆಯನ್ನೇ ಶಿವ ಕಿತ್ತನಂತೆ. ಆ ರುಂಡ ಶಿವನ ಕೈಗೇ ಅಂಟಿಕೊಂಡಿತು. ಎಷ್ಟು ಪ್ರಯತ್ನಿಸಿದರೂ ಬ್ರಹ್ಮಕಪಾಲ ಅವನ ಕೈ ಬಿಡಲಿಲ್ಲ. ಆಕಾಶಕ್ಕೇರಿ ನಿಂದ ಶಿವ ಪಾತಾಳಕ್ಕೆ ಇಳಿದ.

" ಈ ಪರಿಸ್ಥಿತಿಯಿಂದ ಪಾರಾಗಲು ಆತ ಭಿಕ್ಷುಕನಾದ, ಭಿಕಾರಿಯಾದ. ಎತ್ತೆತ್ತಲೋ ಅಂಡಲೆದು, ಬಟ್ಟೆಯಿಲ್ಲದೆ, ನಿಲಲು ನೆಲೆಯಿಲ್ಲದೆ ಸುತ್ತಾಡಿ ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡ.

" ಚಿತ್ರರಂಗದ ವೈಭವ, ಸುಖ, ಸಂತೋಷ, ಧನ, ವಿಲಾಸಗಳ ಕಪಾಲ ನನ್ನ ಕೈ ಹಿಡಿದುಕೊಂಡಿದೆ. ನಾನೂ ಅದಕ್ಕೆ ಪ್ರಾಯಶ್ಚಿತ್ತ ಮಾಡಿ ಕೊಳ್ಳಬೇಕಾಗಿದೆ. ಅಂದಿನ ಶಿವನ ಗತಿ ನನಗಾಗಿದೆ ಇಂದು.

" ರಾಮು....ಇದು ವರ್ಣ....ಸ್ವಾಮೀ....ನಿನ್ನನ್ನೇ ನಂಬಿದ್ದೇನೆ ; ನನ್ನನ್ನು ರಕ್ಷಿಸು....ಅಂತ....ಯದುಕುಲ ಕಾಂಬೋದಿ....ಆದಿತಾಳ....

.......................

ಪಾಪಾ ಮಗರಿಗಸಾ ರೀಮಾ ಪದ ಪಾಪಾ ದಪ ನಿದಪಮ ಪಾ ಮಗರಿಮ ||

|| ಮಪ ಮಗಾ ರಿಮಗರೀ ಗಸರಿಮ ಮಾಗರಿ ಮಗಸರಿಮಾ ಮಗ ಮಪಪಾನಿದ || ದಪಮಾ ಪದಸಾ ನಿದಪಾ ಮಗರಿಮಗರಿ ಸರಿಮ ರಿಮಪಮ ಪದ ಪದ ಸಾಸ || ರೀರಿ ಮಾ, ಮಗಗರಿ ಸಾ ನಿದಪಮ ಪರಿಸಾ ನಿದಪಮ ಪದಸೀ ದಪಮಗ ರಿಮಪದ ||

.......................

ತತ್ತಿತ್ತೋಂ ತದಿಕಿಟತೋಂ | ತಿತ್ತೋಂ ತದಿಕಿಟತೋಂ | ತ್ತ.... ತದಿಕಿಟತೋಂ....ತದಿದಿನದೋಂ....ತದಿದಿನದೋಂ....ತದಿದಿನದೋಂ-ತದೀಂ ಕಿಟಜ, ತದೀಂಕಿಟಜ, ತದೀಂಕಿಟಜ ||........

ಅರ್ಧ ಗಂಟೆಯ ಕಾಲ ನೃತ್ಯ ಸಾಗಿತ್ತು.

ಆಗಲೇ ಪದ್ಮನಾಭ, ರಮಾ, ಶಾಂತಾ, ಅಲ್ಲಿ ಸೇರಿದ್ದರು.

ಕಲ್ಯಾಣಿ ದೇವರಿಗೆ ವಂದಿಸಿ ತಿರುಗಿದಳು.

ಪದ್ಮನಾಭ ಮೂಕನಾಗಿ ಕುಳಿತಿದ್ದ. ಅವಳ ನೃತ್ಯ ಅವನನ್ನು ಮಂತ್ರ ಮುಗ್ಧನಾಗಿಸಿತ್ತು.

ಕಲ್ಯಾಣಿ ಅವನೆಡೆ ನಡೆದು ಅವನ ಕಾಲುಮುಟ್ಟಿ ನಮಸ್ಕರಿಸಿದಳು....

" ನಾಟ್ಯ ಸರಸ್ವತಿ...." ಎಂದ ಅರುಣ.

" ಕಲ್ಯಾಣಿ " ಎಂದು ಅವಳನ್ನೆತ್ತಿ ಬರಸೆಳೆದ ಪದ್ಮನಾಭ.

# ಶಾರದಾ ಸಾಹಿತ್ಯಮಾಲೆಯ ಪ್ರಕಟನೆಗಳು

| | | ಬೆಲೆ ರೂ. | ಆ. | ಪೈ. |
|---|---|---|---|---|
| ೧. | ಕಾರವಾನ್ (ದ್ವಿತೀಯ ಮುದ್ರಣ) | ೧ | ೪ | ೦ |
| ೨-೩. | ಸ್ವಾತಂತ್ರ್ಯದೆಡೆಗೆ (ದ್ವಿತೀಯ ಮುದ್ರಣ) | ೨ | ೪ | ೦ |
| ೪. | ಜೀವನಕಲೆ * | ೧ | ೦ | ೦ |
| ೫. | ಮುಗುಳುನಗೆ * | ೧ | ೪ | ೦ |
| ೬. | ಸ್ವಪ್ನಸುಂದರಿ (ದ್ವಿತೀಯ ಮುದ್ರಣ) | ೧ | ೪ | ೦ |
| ೭-೮. | ಆಲದ ಹೂ | ೧ | ೧೨ | ೦ |
| ೯. | ಹುಡುಗಾಟ | ೧ | ೪ | ೦ |
| ೧೦. | ಶವದ ಮನೆ | ೧ | ೪ | ೦ |
| ೧೧. | ಎದಿರೇಟು | ೧ | ೮ | ೦ |
| ೧೨-೧೩. | ಸರ್ವಮಂಗಳ * | ೪ | ೮ | ೦ |
| ೧೪. | ಕೇಡಿಗನ ಕಿಡಿಗಳು | ೧ | ೦ | ೦ |
| ೧೫. | ದೇವತೆಗಳು ನಕ್ಕಾಗ | ೧ | ೪ | ೦ |
| ೧೬-೧೭. | ಜ್ವಾಲಾಮುಖಿಯ ಮೇಲೆ | ೪ | ೦ | ೦ |
| ೧೮. | ನನ್ನ ರಸಿಕ ಮತ್ತು ಬಂಗಾರದ ಗೆಜ್ಜೆ | ೧ | ೮ | ೦ |
| ೧೯. | ಹಾಳು–ಮೂಳು | ೧ | ೦ | ೦ |
| ೨೦-೨೧-೨೨. | ಮೋಹದ ಬಲೆಯಲ್ಲಿ | ೫ | ೧೨ | ೦ |
| ೨೩. | ಸಾವಿನೊಂದಿಗೆ ಸರಸ | ೧ | ೪ | ೦ |
| ೨೪. | ಅನುರಾಗ | ೧ | ೪ | ೦ |
| ೨೫. | ಜೋಳದ ಬೆಳೆಯ ನಡುವೆ | ೧ | ೪ | ೦ |
| ೨೬-೨೭. | ಬಿಡುಗಡೆಯ ಬೇಡಿ | ೩ | ೪ | ೦ |
| ೨೮-೨೯. | ಜರತಾರಿ ಜಗದ್ಗುರು | ೩ | ೧೨ | ೦ |
| ೩೦. | ಕಾನ್ವೆಂಟ್ ಗರ್ಲ್ | ೧ | ೦ | ೦ |
| ೩೧. | ಖಾನಾವಳಿಯ ಸೀಲಾ | ೧ | ೦ | ೦ |
| ೩೨. | ರಂಗನಾಯಕಿ | ೨ | ೦ | ೦ |
| ೩೩. | ಮದುವೆ ಮಾಡಿ ನೋಡು | ೧ | ೦ | ೦ |
| ೩೪-೩೫. | ಕಲ್ಯಾಣಿ | ೨ | ೮ | ೦ |

* ಪ್ರತಿಗಳು ಮುಗಿದಿವೆ.

**ಕನ್ನಡ ಪತ್ರಿಕಾರಂಗದಲ್ಲಿ ದಿಟ್ಟತನದ ಹೊಸ ಹೆಜ್ಜೆ**

# ಸಾಹಿತ್ಯ ಪ್ರಗತಿ

**ಸಂಪಾದಕರು: ಆರ್. ಬಸವರಾಜ್ ಬಿ.ಎಸ್‌ಸಿ. (ಆನರ್ಸ್)**

ಕನ್ನಡ ಸಾಹಿತ್ಯದ ಮತ್ತು ಪ್ರಕಟನ ಪ್ರಪಂಚದ ಪ್ರಗತಿಗಾಗಿ
ಮೀಸಲಾದ ಹೊಸ ರೀತಿಯ ಮಾಸಪತ್ರಿಕೆ
ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು, ಲೇಖಕರು, ವಾಚನಾ
ಪುಸ್ತಕ ಭಂಡಾರಗಳು ಹಾಗೂ ಎಲ್ಲ ರೀತಿಯ ಓದುಗರಿ[illegible]
ಉಪಯುಕ್ತವಾದ ಮಾಸಿಕ

ಡೆಮ್ಮಿ ಅಷ್ಟದಳಾಕಾರದ ೩೬ ಪುಟಗಳು ಬಿಡಿ ಸಂಚಿಕೆ: ಮೂರಾಣೆ

**ವಾರ್ಷಿಕ ಚಂದಾ: ಎರಡು ರೂಪಾಯಿ ಎಂಟಾಣೆ ಮಾತ್ರ**
**(ಅಂಚೆ [illegible])**

**ಸಾಹಿತ್ಯ ಪ್ರಗತಿಯ ವೈಶಿಷ್ಟ್ಯಗಳು**

★ ಪ್ರತಿ ತಿಂಗಳೂ ಹೊರಬೀಳುವ ಕನ್ನಡ ಪುಸ್ತಕಗಳ ಸಂಪೂ[illegible] ಸುದ್ದಿ ಸಂಗ್ರಹ.

★ **ಸ್ಥಿರ ಶೀರ್ಷಿಕೆಗಳು**
ಶ್ರೀ ಬಸವರಾಜ ಕಟ್ಟೀಮನಿಯವರ 'ಮಾನಸ ಸರೋವರ'
ಶ್ರೀ 'ತ.ರಾ.ಸು.'ರವರ 'ವಿಹಂಗಮ ವಿಹಾರ'
ಶ್ರೀ 'ಜಿಬಿಜ್'ರವರ 'ವ್ಯರ್ಥಾಲಾಪ'

★ ವಿಸ್ತೃತ ಪುಸ್ತಕ ವಿಮರ್ಶೆಗಳು, ಹೆಸರಾಂತ ಕತೆಗಾರರ ಸಣ್ಣ ಕತೆಗಳು, ಸಂಗ್ರಹಿತ ಕಾದಂಬರಿ, ನಾನೆಂದೂ ಮರೆಯಲಾಗದ ವ್ಯಕ್ತಿ, ಬೆಳಕಿಗೆ ಬರುತ್ತಿರುವ ಲೇಖಕರ ಪರಿಚಯ.

★ ಪತ್ರಿಕಾಭಿಪ್ರಾಯಗಳು. ★ ವಾಚಕರ ವಿಭಾಗಗಳ 'ನೀವು ಕೇಳಿದ್ದು' ಮತ್ತು 'ನಿಮ್ಮ ಓಲೆಗಳು' ಇತ್ಯಾದಿ.

**ಇಂದೇ ಚಂದಾದಾರರಾಗಿರಿ**

ಪ್ರಕಾಶಕರು:

**ಶಾರದಾ ಪ್ರಕಟನಾಲಯ**

ಅರಳೇಪೇಟೆ, :: ಬೆಂಗಳೂರು – ೨.